# ಇಂಡಕ್ಷನ್ ತರಬೇತಿ ( ಪರಿಷ್ಕೃತ 2018 ದಿನಾಂಕ:24–12–2018)

| ಕ್ರ.ಸಂ | ವಿವರ | ವಸ್ತು ಸ್ಥಿತಿ |
|---|---|---|
| 1 | 1 ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ಹಿನ್ನೆಲೆ & ಆಶಯ – ಸಮಗ್ರ ಶಿಕ್ಷಣ ಅಭಿಯಾನ<br>• ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಉಳಿಕೆ, ಸಾರ್ವತ್ರಿಕ ಕಲಿಕೆ<br>• ಕಪ್ಪು ಹಲಗೆ ಯೋಜನೆ, D.P.E.P ಯೋಜನೆ, ಜನ ಶಾಲಾ ಕಾರ್ಯಕ್ರಮ, ಸರ್ವಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ,<br>• ಎನ್.ಸಿ.ಎಫ್–2005, ಆರ್.ಟಿ.ಇ–2009<br>• ಸಮಗ್ರ ಶಿಕ್ಷಣ ಅಭಿಯಾನ | |
| 2 | • ಮಗು ಮತ್ತು ಬಾಲ್ಯ ಗುರುಚೇತನ ಮಾಡ್ಯುಲ್ –<br>• ಶಿಕ್ಷಣದಲ್ಲಿ ಲಿಂಗ ಸಮಾನತೆ ಮತ್ತು ಸಬಲೀಕರಣ<br>• ಮಕ್ಕಳ ಹಕ್ಕುಗಳು, ಪೊಕ್ಸೋ, ಸಿಪಿಪಿ | |
| 3 | ಕಲಿಕಾ ಪ್ರಕ್ರಿಯೆ<br>• ಕನಿಷ್ಠ ಕಲಿಕಾ ಮಟ್ಟ, ನಲಿ–ಕಲಿ , ಕಲಿ–ನಲಿ, ಬಹುವರ್ಗ ಮತ್ತು ಬಹು ಹಂತ ಬೋಧನೆ<br>• ರಚನಾವಾದ (5ಇ)<br>• ಕಲಿಕಾ ಫಲಗಳು, ಸಮನ್ವಯ ಶಿಕ್ಷಣ<br>• ಮೌಲ್ಯ ಶಿಕ್ಷಣ , * ಶಿಕ್ಷಣದಲ್ಲಿ ರಂಗಕಲೆ<br>• ಬೋಧನಾ ಕಲಿಕೆ ಸಾಮಗ್ರಿಗಳು * ತಂತ್ರಜ್ಞಾನ ಬಳಕೆ<br>• ಶಾಲಾ ಶೈಕ್ಷಣಿಕ ಯೋಜನೆ – ಪರಿಹಾರ ಬೋಧನೆ(ಮಮತ)<br>• Teaching of English from 1 Standard | |
| 4 | 4 ಶಾಲೆ ಭೇಟಿ<br>ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ, ಶಾಲಾ ಆಡಳಿತ ಮತ್ತು ನಿರ್ವಹಣೆ, ಶೈಕ್ಷಣಿಕ ದಾಖಲೆಗಳ ನಿರ್ವಹಣೆ | |
| 5 | 5 ಶಿಕ್ಷಕ – ಶಾಲೆ – ಸಮುದಾಯ ಕಾಣ್ಕೆ , ದೂರದೃಷ್ಠಿ<br>• ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿ, ಶಿಕ್ಷಕರಿಗಿರುವ ಸೇವಾ ಸೌಲಭ್ಯಗಳು, ಸಿಸಿಎ<br>• ಮಾಹಿತಿ ಹಕ್ಕು ಅಧಿನಿಯಮ 2005<br>• ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMC)<br>• ಕಲಿಕಾ ಸಮುದಾಯಗಳು | |
| 6 | ಶಾಲೆಯ ಒಂದು ದಿನ<br>ಶೈಕ್ಷಣಿಕ ಚಟುವಟಿಕೆಗಳು, ಕಲಿಕಾ ಸಮಯ, ಪ್ರೋತ್ಸಾಹದಾಯಕ ಯೋಜನೆಗಳು | |
| 7 | ಮೌಲ್ಯಮಾಪನ<br>ಅರ್ಥ – ಉದ್ದೇಶಗಳು, ಸಿಸಿಇ, ಪರಿಹಾರ ಬೋಧನೆ, ಎಸ್.ಎ.ಪಿ<br>• CSAS , NAS KSQAAC | |
| 8 | ವೈಯುಕ್ತಿಕ ಅಭಿವೃದ್ಧಿ ಧನಾತ್ಮಕ ಮತ್ತು ಸೃಜನಶೀಲ ಚಿಂತನೆ<br>• ಸಮಯ ಹಾಗು ಒತ್ತಡ ನಿರ್ವಹಣೆ * ನಾಯಕತ್ವ ಹಾಗು ತಂಡ ನಿರ್ವಹಣೆ<br>• ತಂತ್ರಜ್ಞಾನ ಆಧಾರಿತ ಕಲಿಕೆ * ಕ್ರಿಯಾ ಸಂಶೋಧನೆ * ಗುರುಚೇತನ | |
| 9 | ಸವಾಲುಗಳು ಮತ್ತು ಸಾಧ್ಯತೆಗಳು –ವೈಯಕ್ತಿಕ , ಶೈಕ್ಷಣಿಕ , ಆಡಳಿತಾತ್ಮಕ<br>• ಯಶೋಗಾಥೆಗಳು | |
| 10 | ಕ್ರಿಯಾಯೋಜನೆ – ನಾನು ಮತ್ತು ನನ್ನ ಮಾದರಿ ಶಾಲೆ<br>• ಅನುಕೂಲಿಸುವಿಕೆಯಲ್ಲಿ ನಾವೀನ್ಯತೆ | |
| | | |

# ಲೇಖನಗಳು

# ಲೇಖನ–1

## ನಾನು ಯಾರು? ನಾನು ವೃತ್ತಿಗೆ ಸೇರಿದ ಕಾರಣ ಮತ್ತು ಕನಸು

"ಭಾರತ ದೇಶ" ದ ಹೆಸರು ಕೇಳಿದೊಡನೆ ನಮಗೆ ಕಣ್ಣೆದುರಿಗೆ ಬರುವುದು ನಮ್ಮ ದೇಶದ ವೈಶಿಷ್ಟ್ಯತೆ. ಯಾಕೆಂದರೆ ಇಲ್ಲಿ ವೈವಿಧ್ಯಮಯವಾದ ಭಾಷೆ, ಧರ್ಮ, ಆಚರಣೆ ಹಾಗು ನಂಬಿಕೆಗಳಿಂದ ಕೂಡಿದೆ. ಇಷ್ಟು ವಿವಿಧತೆಯನ್ನು ಹೊಂದಿದ್ದರೂ ಅದರಲ್ಲಿ ಏಕತೆಯನ್ನು ತರುವ ಪ್ರಯತ್ನ ಜಾರಿಯಲ್ಲಿದೆ. ಹಾಗಾದರೆ ಈ ದೇಶ ಮುಂದಿನ ದಿನಗಳಲ್ಲಿ ಹೇಗಿರಬೇಕು ಎಂದು ನಾವೆಲ್ಲರು (ಭಾರತದ ಜನಗಳು) ಎಂದಾದರೂ ಯೋಚನೆಮಾಡಿದ್ದೇವೆಯಾ? ಖಂಡಿತಾ ಮಾಡಿದ್ದೇವೆ. ಇದನ್ನು ನಮ್ಮ ದೇಶದ ಸಂವಿಧಾನದ ಪೂರ್ವ ಪ್ರಸ್ತಾವನೆಯಲ್ಲಿಯೇ ಕಾಣಬಹುದು. ಅದುವೇ **"ಭಾರತದ ಪ್ರಜೆಗಳಾದ ನಾವು, ಈ ಭಾರತವನ್ನು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿಸುವುದು"**. ಇದರ ಅರ್ಥ, ಭಾರತೀಯ ಪ್ರಜೆಗಳೆಲ್ಲರೂ ಈ ಮೌಲ್ಯಗಳನ್ನು ಹೊಂದಿರುವವರಾಗಿರುತ್ತಾರೆ ಮತ್ತು ಇವುಗಳನ್ನು ವೃದ್ಧಿಗೊಳಿಸುತ್ತಾರೆ ಎಂದರ್ಥ.

ಈ ಮೌಲ್ಯಗಳು ವ್ಯಕ್ತಿಗಳಲ್ಲಿ ಬರುವಂತಾಗಬೇಕಾದರೆ "ಸರಿಯಾದ ಶಿಕ್ಷಣದಿಂದ ಮಾತ್ರ ಸಾಧ್ಯ". ಶಿಕ್ಷಣ ಎಲ್ಲೆಡೆ ಇದೆ ಅಂದರೆ, ಮನೆ, ಸಮುದಾಯ, ನೆರೆಹೊರೆಯವರೆಲ್ಲರಿಂದಲೂ ಮಕ್ಕಳು ಕಲಿಯುತ್ತಾರೆ ಅದರೆ ಶಾಲೆಗಳು ಮಾತ್ರ ಈ ಶಿಕ್ಷಣವನ್ನು ನೀಡುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ ಯಾಕೆಂದರೆ ಈ ಮೇಲಿನ ಮೌಲ್ಯಗಳನ್ನು ವೃದ್ಧಿಸುವುದಕ್ಕಾಗಿಯೇ ಉದ್ದೇಶಪೂರ್ವಕವಾಗಿ ಹಲವಾರು ಚಟುವಟಿಕೆ ಮತ್ತು ಪ್ರಕ್ರಿಯೆಗಳನ್ನು ಸಿದ್ಧಪಡಿಸಲಾಗಿರುತ್ತದೆ ಮತ್ತು ಇದನ್ನು ಖಚಿತಪಡಿಸಿಕೊಳ್ಳಲು ಅನೇಕ ರೀತಿಯ ಮೌಲ್ಯಾಂಕನ ಗಳನ್ನು ಮಾಡಲಾಗುತ್ತದೆ. ಹಾಗಾಗಿ ಈ ರೀತಿಯ ಅಪೇಕ್ಷಿತ ಮಾನವರನ್ನು ಮತ್ತು ಸಮಾಜವನ್ನು ಕಟ್ಟುವಲ್ಲಿ ಶಿಕ್ಷಣ/ಶಾಲೆ ಪಾತ್ರ ಅತೀ ಮುಖ್ಯವಾದುದಾಗಿರುತ್ತದೆ.

ಅಬ್ಬಾ! ಶಾಲೆಗೆ ಇಂತಹದ್ದೊಂದು ಮಹತ್ತರವಾದ ಜವಾಬ್ದಾರಿ ಇದೆಯಾ? ಅಂದರೆ ದೇಶ ಕಟ್ಟುವ ಕೆಲಸ ಅಲ್ಲವೇ? ಓಹೋ, ಅದಕ್ಕಾಗಿಯೇ ನಮ್ಮ ಸಮಾಜದಲ್ಲಿ ಶಿಕ್ಷಕರಿಗೆ ಇಷ್ಟೊಂದ ಗೌರವ ಕೊಡಲಾಗುತ್ತಿದೆ. ಎಷ್ಟೊಂದು ಮುಖ್ಯವಾದ ಜವಾಬ್ದಾರಿ ಇದು? ಹಾಗಾದರೆ ಈ "ಶಿಕ್ಷಕ" ವೃತ್ತಿಯನ್ನು ನಮ್ಮ ಸಮಾಜ ಮತ್ತು ದೇಶ ಹೇಗೆ ನೋಡುತ್ತದೆ ಅಥವಾ ಈ ವೃತ್ತಿಯಿಂದ (ಶಿಕ್ಷಕ) ಏನನ್ನು ಬಯಸುತ್ತದೆ ಎಂದು ತಿಳಿದುಕೊಳ್ಳೋಣವೇ? ಹಾಗಾದರೆ ಈ ಕೆಳಗಿನ ಒಬ್ಬ ಶಿಕ್ಷಕನಿಂದ ಇರುವ ನಿರೀಕ್ಷೆಗಳನನು ನೋಡೋಣ:

- ಮಕ್ಕಳ ಕುರಿತು ಕಾಳಜಿ ವಹಿಸುವ, ಮಕ್ಕಳೊಂದಿಗೆ ಇರವುದನ್ನು ಸಂತೋಷಿಸುವ, ಸದಾ ಜ್ಞಾನಕ್ಕಾಗಿ ಹಂಬಲಿಸುವ, ಸಮಾಜದ ಕುರಿತು ಜವಬ್ಧಾರಿ ಹೊಂದುವ, ಉತ್ತಮ ಸಮಾಜವನ್ನು ಕಟ್ಟುವ, ಮಕ್ಕಳ ಸಮಸ್ಯೆಗಳ ಕುರಿತು ಸಂವೇದನೆ ಹೊಂದಿರುವ, ನ್ಯಾಯಕ್ಕೆ ಬದ್ದತೆ ಮತ್ತು ಸಾಮಾಜಿಕ ಪುನರ್–ನಿರ್ಮಾಣಕ್ಕಾಗಿ ಉತ್ಸಾಹ ಹೊಂದಿರುವ ಶಿಕ್ಷಕರು.
- ಶಿಕ್ಷಕರು ವಿದ್ಯಾರ್ಥಿಗಳನ್ನು ಅವರ ಕಲಿಕೆಯಲ್ಲಿ ಸಕ್ರಿಯ ಭಾಗಿದಾರನಾಗಿ ಕಾಣಬೇಕೆ ವಿನಃ ಕೇವಲ ಜ್ಞಾನ ಸ್ವೀಕರಿಸುವವರಾಗಿ ಕಾಣಬಾರದು; ಅವರಲ್ಲಿರುವ ಜ್ಞಾನ ಕಟ್ಟುವ ಸಾಮರ್ಥ್ಯವನ್ನು ಪ್ರೋತ್ಸಾಹಿಸಬೇಕು ಮತ್ತು ಕಂಠಪಾಠ ಮಾಡುವ ಕಲಿಕಾ ವಿಧಾನಗಳಿಂದ ಹೊರಬರುವಂತೆ ಖಚಿತ ಪಡಿಸಿಕೊಳ್ಳಬೇಕು. ಕಲಿಕೆಯನ್ನು ವೈಯಕ್ತಿಕ ಅನುಭವಗಳಿಂದ ಅರ್ಥ ಹುಡುಕಿಕೊಳ್ಳುವ ಹಾಗೂ ಚಿಂತನೆಯಿಂದ ಕೂಡಿದ ಕಲಿಕೆಯಿಂದ (reflective learning) ನಿರಂತರವಾಗಿ ರೂಪುಗೊಳ್ಳುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಾಗಿ ಕಾಣಬೇಕಾಗುತ್ತದೆ.
- ಜ್ಞಾನವು ವಿದ್ಯಾರ್ಥಿಗಳಿಗೆ ಬಾಹ್ಯವಾಗಿರದೆ, ಕಲಿಕಾ ಪ್ರಕ್ರಿಯೆಯಲ್ಲಿಯೆ ಸಕ್ರಿಯವಾಗಿ ಕಟ್ಟಿಕೊಳ್ಳುವಂತಹುದಾಗಿದೆ ಎಂದು ತಿಳಿದಿರಬೇಕು ಮತ್ತು ಶಿಕ್ಷಕರು ಮಾಡುವ ಚಟುವಟಿಕೆಗಳು ಸಿದ್ಧಾಂತಗಳ ಜೊತೆಗೆ ಕಾರ್ಯಕ್ಷೇತ್ರದ ಅನುಭವಗಳನ್ನು ಕೊಡುವಲ್ಲಿ ತೊಡಗಬೇಕಾಗುತ್ತದೆ. ಶೈಕ್ಷಣಿಕ ಜ್ಞಾನ ಮತ್ತು ವೃತ್ತಿಪರ ಕಲಿಕೆಗಳನ್ನು ಸಮಗ್ರವಾಗಿಯೂ ಅರ್ಥಪೂರ್ಣವಾಗಿಯೂ ಸಂಯೋಜಿಸಬೇಕಾಗುತ್ತದೆ.

- ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ, ಪಾಲ್ಗೊಳ್ಳುವಿಕೆಯ ಕಲಿಕಾ ಅನುಭವ (participatory learning experiences) ಆಟ, ಶೈಕ್ಷಣಿಕ ಯೋಜನೆ, ಚರ್ಚೆ, ಸಂವಾದ, ವೀಕ್ಷಣೆ, ಭೇಟಿ, ಶೈಕ್ಷಣಿಕ ಕಲಿಕೆಯನ್ನು ಉತ್ಪಾದನ ಕಾರ್ಯಗಳೊಂದಿಗೆ ಬೋಧನಾ ವಿನ್ಯಾಸವನ್ನು ಸಂಯೋಜಿಸಬೇಕು
- ಶಿಕ್ಷಕರು ಪಠ್ಯಕ್ರಮ, ಪಠ್ಯ ಮತ್ತು ಪಠ್ಯ ಪುಸ್ತಕಗಳನ್ನು 'ನೀಡಲಾಗಿದೆ' ಎಂದು ತಿಳಿದು ಪ್ರಶ್ನಿಸದೆ, ಒಪ್ಪಿಕೊಳ್ಳುವ ಬದಲು ವಿಮರ್ಶಾತ್ಮಕವಾಗಿ ಪರೀಕ್ಷಿಸುವ ಸಾಮರ್ಥ್ಯ ಹೊಂಡಿರುವವರಾಗಿರೇಕು
- ಶಿಕ್ಷಕ ತಾನು ಮಾಡುವ ಸುಗಮಕಾರಿಕೆಯು ಕೇವಲ ಶಿಕ್ಷಕ–ನಿರ್ದೇಶಿತ ಚಟುವಟಿಕೆಗಳಿಂದ ತುಂಬಿಕೊಳ್ಳದೆ ವಿದ್ಯಾರ್ಥಿ ಚಿಂತನೆ (reflection) ಮತ್ತು ಸ್ವತಂತ್ರ ಅಧ್ಯಯನದ ಅವಕಾಶಗಳನ್ನು ದೊರಕಿಸಿಕೊಡಬೇಕು.
- ಶಿಕ್ಷಕರು ಇವುಗಳನ್ನು ತಿಳಿದುಕೊಂಡಿರುವವರಾಗಿರಬೇಕು: ಅವುಗಳೆಂದರೆ, "ಮಕ್ಕಳ ಮನೋ–ಸಾಮಾಜಿಕ ಗುಣವಿಶೇಷಗಳು ಮತ್ತು ವಿದ್ಯಾರ್ಥಿಗಳ ಅವಶ್ಯಕತೆಗಳು, ವಿಶೇಷ ಸಾಮರ್ಥ್ಯಗಳು ಮತ್ತು ಗುಣಲಕ್ಷಣಗಳು ತಿಳಿಯುವಲ್ಲಿ ಹಾಗೂ ಅವರ ಆಯ್ದ ಮಾರ್ಗದ ಜ್ಞಾನ ಗ್ರಹಣ ಪ್ರಕ್ರಿಯೆ (preferred mode of cognition), ಪ್ರೇರಣೆ, ಮನೆ ಮತ್ತು ಸಮುದಾಯದಿಂದ ಪಡೆದ ಕಲಿಕೆಗಳನ್ನ ಮಕ್ಕಳು ತಿಳಿಯುವಂತೆ ಮಾಡುವುದಕ್ಕೆ ಸಹಾಯ ಮಾಡುವುದು".
- ಶಿಕ್ಷಕರು ಸಾಮಾಜಿಕ ಸೂಕ್ಷ್ಮತೆ ಮತ್ತು ಪ್ರಜ್ಞಾಪೂರ್ವಕತೆ (consciousness) ಮತ್ತು ಉತ್ಕಟ ಮಾನವ ಸಂವೇದನಾ ಶೀಲತೆಗಳನ್ನು (finer human sensibilities) ಬೆಳೆಸಿಕೊಂಡಿರಬೇಕು.
- ವಿಭಿನ್ನ ಜ್ಞಾನ ಪರಂಪರೆಯನ್ನು ಸೇರಿಸಿಕೊಳ್ಳಲು ಹಾಗೂ ಶಿಕ್ಷಕರು ಶಾಲಾ ಜ್ಞಾನವನ್ನು ಸಮುದಾಯದ ಜ್ಞಾನ ಮತ್ತು ಶಾಲೆಯ ಹೊರಗಿನ ಜೀವನದ ಜೊತೆ ಹೊಂದಿಸಿಕೊಳ್ಳಲು ಅನುವಾಗವಂತೆ ತನ್ನ ಪಠ್ಯಕ್ರಮವನ್ನು ವಿಶಾಲವಾಗಿಸಿಕೊಳ್ಳಬೇಕು.
- ಶಿಕ್ಷಕರಿಗೆ ತರಗತಿಯ ಹೊರಗೂ–ಒಳಗೂ ಬೋಧನ ವಿಧಾನವಾಗಿ 'ಸ್ವತಃ ಮಾಡಿ ಕಲಿಯುವ ಅನುಭವದ' (hands-on experience) ಕಲಿಕೆಯ ಸಾಮರ್ಥ್ಯವನ್ನು ಪ್ರಂಶಸಿಸುವ ಹಾಗೂ ಶಿಕ್ಷಣದಲ್ಲಿ ತಾನು ಸಮಗ್ರವಾಗಿ ಕಾರ್ಯನಿರ್ವಹಿಸುವಂತಾಗಬೇಕು
- ಮಾನವ ಹಕ್ಕುಗಳು, ವಿಮರ್ಶಾತ್ಮಕ ಬೋಧನಾ ವಿಧಾನಗಳು, ಪರಿಸರ ಮತ್ತು ಪರಿಸರ ಸಂರಕ್ಷಣೆ, ತನ್ನೊಳಗೆ ಮತ್ತು ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರದೊಂದಿಗೆ ಸಾಮರಸ್ಯದಿಂದ ಬದುಕುವುದು, ಶಾಂತಿ, ಪ್ರಜಾತಾಂತ್ರಿಕ ಜೀವನ ಶೈಲಿ, ಸಂವಿಧಾನಿಕ ಮೌಲ್ಯಗಳಾದ ಸಮಾನತೆ, ನ್ಯಾಯ, ಸ್ವಾತಂತ್ರ, ಭ್ರಾತತ್ವ ಮತ್ತು ಜಾತ್ಯಾತೀತತೆ ಮತ್ತು ಕಾಳಜಿಯ ಮೌಲ್ಯಗಳು; ಇವುಗಳ ಆಧಾರದ ಮೇಲೆ ಶಿಕ್ಷಕರು ಪೌರ ಶಿಕ್ಷಣದ ಪರಿಕಲ್ಪನೆಯನ್ನು ಪುನರ್ ರಚಿಸಿಕೊಳ್ಳಬೇಕಾಗುತ್ತದೆ

ಈ ಮೇಲೆ ತಿಳಿಸಲಾದ ಎಲ್ಲಾ ವಿಷಯಗಳು "ಶಿಕ್ಷಕರ ಶಿಕ್ಷಣಕ್ಕಾಗಿ ರಚಿಸಲಾದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2009" ರಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಅಂದರೆ ಯಾವೆಲ್ಲ ಮೌಲ್ಯ ಮತ್ತು ವಿಷಯಗಳು ಮಕ್ಕಳಲ್ಲಿ ಶಿಕ್ಷಣದ ಮೂಲಕ ಅಭಿವೃದ್ಧಿಗೊಳಿಸಬೇಕೆಂದು ಉದ್ದೇಶಸಲಾಗಿದೆಯೋ, ಆಎಲ್ಲವುಗಳು ಶಿಕ್ಷಕರಲ್ಲಿ ಇರಬೇಕಾಗುತ್ತದೆ ಎಂದು ಬಯಸುತ್ತದೆ. ಹಾಗಾದರೆ ನಮ್ಮ ಶಿಕ್ಷಕ ವೃತ್ತಿ ಎಷ್ಟು ಮುಖ್ಯ ಅಲ್ಲವೇ?

ನಾವು ಇನ್ನು ಮುಂದೆ ಈ ಪಾತ್ರವನ್ನು ನಿಭಾಯಿಸಲು ಮತ್ತು ನ್ಯಾಯ ಒದಗಿಸಲು ಈ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳೋಣವೇ?

1. ಈ ಪಾತ್ರವನ್ನು ಯಶಸ್ವಿಯಾಗಿ ನಿಭಾಯಿಸಲು ನನಲ್ಲಿ ಈಗಿರುವ ಜ್ಞಾನ, ತಿಳಿವಳಿಕೆ ಮತ್ತು ಕೌಶಲ ಸಾಕೇ?
2. ಇದನ್ನು ಪೂರೈಸಿಕೊಳ್ಳಲು ನಾನು ಏನೇನು ಮಾಡಬಹುದು? ಯಾರಾರು ನನಗೆ ಸಹಾಯ ಮಾಡಬಹುದು? ಯಾವ ಯಾವ ಅವಕಾಶಗಳು ನನಗೆ ಈಗಾಗಲೇ ಇದೆ ಮತ್ತು ಇತರೆ ಅವಕಾಶಗಳನ್ನು ನಾನೇ ಸೃಷ್ಟಿಸಿಕೊಳ್ಳಬೇಕು?

## ಲೇಖನ–2

## ಶಾಲಾ ಶಿಕ್ಷಣ ವ್ಯವಸ್ಥೆಯ ಭಾಗವಾಗಿ ನಾನು:

ನಮ್ಮ ದೇಶದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಪ್ರಪಂಚದಲ್ಲಿಯೇ ಅತೀ ದೊಡ್ಡ ವ್ಯವಸ್ಥೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಎಂದರೆ ದೇಶದ ಎಲ್ಲಾ ನಾಗರೀಕರಿಗೂ ಈ ವ್ಯವಸ್ಥೆಯಡಿಯಲ್ಲಿ ಸಮಾನವಾಗಿ ದೊರೆಯುವ ಶಿಕ್ಷಣ. ಈ ವ್ಯವಸ್ಥೆಯನ್ನು ದೇಶದ ನಾಗರೀಕರು ಪಾವತಿಸುವ ತೆರಿಗೆ ಆದಾಯದಿಂದ ನಿರ್ವಹಿಸಲಾಗುತ್ತಿದೆ. ಹೆಚ್ಚು ಜನಸಂಖ್ಯೆವುಳ್ಳ ನಮ್ಮ ದೇಶದಲ್ಲಿ ಉತ್ತಮ ಹಾಗೂ ಅಪೇಕ್ಷಿತ ಸಮಾಜದ ರಚನೆ ಮತ್ತು ಅಭಿವೃದ್ಧಿಪಡಿಸುವ ಪ್ರಯತ್ನಗಳಲ್ಲಿ ಸಾರ್ವಜನಿಕ ಶಿಕ್ಷಣವು ಪ್ರಮುಖ ಪಾತ್ರವಹಿಸುತ್ತದೆ.ನಮ್ಮ ದೇಶದ ಸಂವಿಧಾನದ ಆಶಯದಂತೆ ದೇಶದಲ್ಲಿರುವ '14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವುದು. ಅಂದರೆ ಇದನ್ನು 6 ರಿಂದ 14 ವರ್ಷಗಳ ನಡುವಿನ ಎಲ್ಲಾ ಮಕ್ಕಳಿಗೆ ಶಾಲೆಯ ಲಭ್ಯತೆ, ದಾಖಲಾತಿ ಮತ್ತು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡುವುದರ ಮೂಲಕ ಸಾರ್ವತ್ರಿಕ ಮಾನವ ಮೌಲ್ಯಗಳನ್ನು ಬೆಳೆಸುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು ಹಾಗೂ ಸಮುದಾಯವನ್ನು ರಚನಾತ್ಮಕವಾಗಿ ತೊಡಗಿಸಿಕೊಳ್ಳುವುದು.

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಗೊಳಿಸುವುದನ್ನು ನಮ್ಮ ದೇಶವು ಒಂದು ಗುರಿಯಾಗಿ ತೆಗೆದುಕೊಂಡಿದ್ದು ಈ ಗುರಿಯನ್ನು ಸಾಧಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಅಯೋಜಿಸುವುದರ ಮೂಲಕ ಹಾಗೂ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಪ್ರಯತ್ನಿಸಲಾಗುತ್ತಿದೆ. 2015-16 ರ ಸಮೀಕ್ಷೆಯ ಪ್ರಕಾರ ನಮ್ಮ ದೇಶದಲ್ಲಿ ಒಟ್ಟು 12.70 ಲಕ್ಷ ಶಾಲೆಗಳು ಇದ್ದು, 52.18 ಲಕ್ಷ ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ. ಈ ಶಾಲೆಗಳಲ್ಲಿ 1967.17 ಲಕ್ಷ (ಸುಮಾರು 20 ಕೋಟಿ) ಮಕ್ಕಳು ಕಲಿಕೆಯಲ್ಲಿ ತೊಡಗಿದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು 43,712 ಶಾಲೆಗಳಿದ್ದು, 1.66 ಲಕ್ಷ ಶಿಕ್ಷಕರು ಹಾಗೂ 38.60 ಲಕ್ಷ ಮಕ್ಕಳು ಕಲಿಕೆಯಲ್ಲಿ ಇದ್ದಾರೆ. ಇದರೊಂದಿಗೆ ಹಲವಾರು ಸೌಲಭ್ಯಗಳಾದ ಶೌಚಾಲಯ, ವಿಧ್ಯುತ್, ಆಟದ ಮೈದಾನ, ಶಾಲಾ ಕೊಠಡಿಗಳು, ಗ್ರಂಥಾಲಯ, ಶಾಲಾ ಆವರಣ ಗೋಡೆ, ಕುಡಿಯುವ ನೀರು, ಅಕ್ಷರ ಧಾಸೋಹ, ಬೈಸಿಕಲ್ ವಿತರಣೆ, ಇನ್ನು ಅನೇಕ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ಮಕ್ಕಳಿಗೆ ಶಿಕ್ಷಣ ನೀಡಲು ಸಹಾಯ ಮಾಡುತ್ತಿದೆ. ಈ ಎಲ್ಲಾ ಸೌಲಭ್ಯಗಳು ಬಹಳ ಅತ್ಯವಶ್ಯಕ. ಈ ಸೌಲಭ್ಯಗಳಿದ್ದರೂ ಕೆಲವು ಪೋಷಕರು ಸರ್ಕಾರಿ ಶಾಲೆಗಳಿಂದ ದೂರ ಸರಿಯುತ್ತಿದ್ದಾರೆ. ಆದರೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಅತೀ ಬಡತನದ ಕುಟುಂಬಗಳು ನಮ್ಮ ಸರ್ಕಾರಿ ಶಾಲೆಗಳ ಮೇಲೆ ಅತೀವ ನಂಬಿಕೆ ಮತ್ತು ಆತ್ಮವಿಶ್ವಾಸವಿಟ್ಟುತಮ್ಮ ಮಕ್ಕಳಿಗೆ ಪ್ರವೇಶ ಮತ್ತು ಶಿಕ್ಷಣ ಪಡೆಯುತ್ತಿದ್ದಾರೆ. ಸಾಮಾನ್ಯವಾಗಿ ಈ ಪೋಷಕರೂ ಸಹ ಅನಕ್ಷರಸ್ಥರು ಮತ್ತು ಅವರ ಜೀವನೋಪಾಯ ಕೆಲಸಗಳಲ್ಲಿ ನಿರಂತರವಾಗಿ ತೊಡಗಿಕೊಂಡಿರುವುದರಿಂದ ತಮ್ಮ ಮಕ್ಕಳ ಕಲಿಕೆಯ ವಿಷಯದಲ್ಲಿ ಸಹಾಯ ಮಾಡಲು ಕಷ್ಟಸಾಧ್ಯ. ಅಲ್ಲದೆ ನಮ್ಮೆಲ್ಲರಿಗೂ ತಿಳಿದಿರುವಂತೆ ಇಡೀ ದೇಶದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಎಲ್ಲಾ ವರ್ಗ, ಜಾತಿ, ಧರ್ಮದವರಿಗೂ ಹಾಗೂ ಕಟ್ಟಕಡೆಯ ವ್ಯಕ್ತಿಗೂ ಸಮಾನವಾಗಿ ಲಭ್ಯವಾಗುವಂತೆ ಮಾಡಿರುವುದು ಸರ್ಕಾರಿ ಶಾಲೆಗಳು. ಒಂದು ಊದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಖಾಸಗೀ ಬಸ್ಸುಗಳಲ್ಲಿ ಜನ ಇದ್ದರೆ, ಜನ ಇರುವ ಕಡೆ ಬಸ್ಸುಗಳನ್ನು ಓಡಿಸುತ್ತಾರೆ. ಜನ ಕಡಿಮೆ ಇದ್ದಲ್ಲಿ ಓಡಿಸುವುದಿಲ್ಲ. ಆದರೆ ನಮ್ಮ ಸರ್ಕಾರಿ ಬಸ್ಸುಗಳು ಎಷ್ಟೇ ಜನರು ಇರಲಿ ನಿಗದಿಯಾದ ಸ್ಥಳಕ್ಕೆ ಹೋಗುತ್ತವೆ. ಅಂದರೆ ಪ್ರತಿ 1 ಕಿ.ಮೀ ವ್ಯಾಪ್ತಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆ, ಪ್ರತಿ 3 ಕಿ.ಮೀ ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರತಿ 5 ಕಿ.ಮೀ ವ್ಯಾಪ್ತಿಯಲ್ಲಿ ಪ್ರೌಢ ಶಾಲೆಗಳನ್ನು ಸ್ಥಾಪಿಸಿ ಇಂತ ದೊಡ್ಡ ದೇಶದಲ್ಲಿ ಪ್ರತಿಮಗುವಿಗೂ ಶಿಕ್ಷಣ ಸೌಲಭ್ಯಗಳು ದೊರೆಯುವಂತೆ ಮಾಡಲು ಪ್ರಯತ್ನ ನಿಜವಾಗಲೂ ಶ್ಲಾಘನೀಯ. ಇಂತಹ ಬೃಹದಾಕರದ ಶಿಕ್ಷಣ ವ್ಯವಸ್ಥೆಯಡಿಯಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುವುದು ತುಂಬಾ ಸಂತೋಷದ ವಿಷಯ.

ಸಂವಿಧಾನದ ಆಶಯಗಳನ್ನು ಈಡೇರಿಸುವ ಮೂಲಕ ಒಂದು ಅಪೇಕ್ಷಿತ ಸಮಾಜವನ್ನು ನಿರ್ಮಾಣ ಮಾಡುವ ಕಾರ್ಯ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದು ಎಲ್ಲರಿಗೂ ಸ್ಪಷ್ಟವಿದೆ. ಅದು ಗುಣಾತ್ಮಕ ಶಿಕ್ಷಣವನ್ನು ನೀಡುವ ಮೂಲಕ ಮಾತ್ರ

ಸಾಧ್ಯ. ಈ ಹೇಳಿಕೆಯನ್ನು ಪುಷ್ಟೀಕರಿಸುವಂತೆ ನಮ್ಮ ಅಬ್ದುಲ್ ಕಲಾಂ ರವರು '*ಮುಂದಿನ ದಿನಗಳಲ್ಲಿ ವಿಶ್ವದಲ್ಲಿ ಜ್ಞಾನ ಕ್ರಾಂತಿಯ ಮುಂದಾಳತ್ವ ವಹಿಸುವ ಅವಕಾಶ ಭಾರತ ದೇಶಕ್ಕೆ ಇದೆ. ಇದು ಗುಣಾತ್ಮಕ ಶಿಕ್ಷಣದಿಂದ ಮಾತ್ರ ಸಾಧ್ಯ*' ಎಂದು ಹೇಳಿದ್ದಾರೆ. ಹಾಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಣ ಕ್ಷೇತ್ರದ ಬೆನ್ನೆಲುಬಾಗಿರುವ ಶಿಕ್ಷಕರಾದ ನಾವು ಗುಣಾತ್ಮಕ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಹೆಚ್ಚು ಗಮನಹರಿಸಬೇಕಾಗಿದೆ. ಮೇಲೆ ತಿಳಿಸಿದಂತೆ ಇಂತಹ ದೊಡ್ಡ ವ್ಯವಸ್ಥೆ ಹಾಗೂ ಸಂವಿಧಾನದ ಆಶಯಗಳನ್ನು ಈಡೇರಿಸುವ ಕೆಲಸದಲ್ಲಿ ನಾವು ತೊಡಗಿರುವುದು ಒಂದು ಹೆಮ್ಮೆಯ ವಿಷಯ ಮತ್ತು ಹಾಗೆಯೇ ಜವಾಬ್ದಾರಿಯುತವೂ ಹಾಗಿದೆ. ಇದನ್ನು ಈಡೇರಿಸಲು ಸಹಾಯಕ್ಕಾಗಿ ನನ್ನ ಜೊತೆಗೆ ಒಂದು ದೊಡ್ಡ ವ್ಯವಸ್ಥೆ ಇದೆ. ಇಂತಹ ವ್ಯವಸ್ಥೆಯ ಭಾಗವಾಗಿ ಶಾಲೆಯಲ್ಲಿರುವಾಗ ನನ್ನ ಕಾರ್ಯಗಳು, ನನ್ನ ಜವಾಬ್ದಾರಿಗಳು, ನನ್ನ ನಂಬಿಕೆಗಳು ಹಾಗೂ ಈ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸಲು ನನಗೆ ಯಾರು ಮುಖ್ಯವಾಗುತ್ತಾರೆ ಎಂಬ ಸ್ಪಷ್ಟ ಅರಿವು ನಮಗಿರಬೇಕಾಗುತ್ತದೆ.

ಈ ರೀತಿಯ ಜವಾಬ್ದಾರಿಯುತ ಕೆಲಸಗಳನ್ನು ಶಾಲಾ ವ್ಯವಸ್ಥೆಯಲ್ಲಿ ಯಾಂತ್ರಿಕವಾಗಿ ನಿರ್ವಹಿಸದೆ ಹೆಚ್ಚಿನ ಆಸಕ್ತಿಯಿಂದ ಹಾಗೂ ನಿರಂತರ ಕಲಿಕಾರ್ಥಿಯಾಗಿ ಕಲಿಕಾ ಪ್ರಕ್ರಿಯೆಗಳಲ್ಲಿ ತೊಡಗಿಕೊಳ್ಳುವ ಮೂಲಕ ಕಾಲ ಕಾಲಕ್ಕೆ ಅವಶ್ಯಕವಾದ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ವೃತ್ತಿಪರತೆಯನ್ನು ಹೆಚ್ಚಿಸಿಕೊಂಡು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸದಾ ಸಿದ್ಧನಾಗಿರುವುದು ಅಗತ್ಯ ಮತ್ತು ಉತ್ತಮ.

ಶಿಕ್ಷಕರ ಶಿಕ್ಷಣದ – ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2009ರ ವಿವಿಧ ಅಧ್ಯಾಯಗಳಲ್ಲಿ ಶಿಕ್ಷಕರ ಪಾತ್ರವನ್ನು ಕಲ್ಪಿಸಿಕೊಳ್ಳುತ್ತಾ, ಹೀಗೆ ಹೇಳುತ್ತಾರೆ "ನಮ್ಮ ದೇಶಕ್ಕೆ ಶಿಕ್ಷಕರು ಬೇಕು. ಅವರು ಹೇಗಿರಬೇಕೆಂದರೆ ಮಕ್ಕಳ ಜೊತೆಗೆ ಇರಲು ಇಷ್ಟಪಡಬೇಕು, ಮಕ್ಕಳನ್ನು ಅರ್ಥಮಾಡಿಕೊಳ್ಳುವಂತಿರಬೇಕು ಹಾಗೂ ವಿವಿಧ ಆಟ, ಯೋಜನಾ ಕಾರ್ಯಗಳು ಹಾಗೂ ಬೋಧನಾ ವಿಧಾನಗಳ ಮೂಲಕ ಮಕ್ಕಳ ಕಲಿಕೆಗೆ ಸಹಕಾರಿಯಾಗಬೇಕು". ನಮ್ಮ ದೇಶದ ಪ್ರತಿಯೊಬ್ಬ ಶಿಕ್ಷಕರು ಈ ರೀತಿಯಾಗಬೇಕೆಂದು, ಅದು ಬಯಸುತ್ತದೆ. ಅಲ್ಲದೆ ಶಿಕ್ಷಕನ ಸಾಮರ್ಥ್ಯ, ಪಡೆದಿರುವ ಶಿಕ್ಷಣ ಮತ್ತು ತರಬೇತಿ ಉತ್ತಮವಾಗಿರಬೇಕು. ಶಿಕ್ಷಕನ ಮೂಲಭೂತವಾದ ಗುಣಗಳ ಜೊತೆಗೆ ವೃತ್ತಿಪರವಾದ ಜ್ಞಾನ, ಮಕ್ಕಳನ್ನು ಪ್ರೀತಿಸುವ ಗುಣ, ವೈಯಕ್ತಿಕ ಗುಣಗಳು, ಬುದ್ದಿಶಕ್ತಿ, ಒಳ್ಳೆಯ ಮಾತುಗಾರಿಕೆ, ದೈಹಿಕ ಮತ್ತು ಮಾನಸಿಕ ಆರೋಗ್ಯ, ಕರುಣೆ, ಜನಸಾಮಾನ್ಯರೊಡನೆ ಹೊಂದಾಣಿಕೆ, ಹಾಸ್ಯ ಪ್ರವೃತ್ತಿ, ತಾಳ್ಮೆ, ಕರ್ತವ್ಯನಿಷ್ಟೆಗಳಿರಬೇಕು. ಬೋಧನಾ ಉದ್ದೇಶ, ವಿವಿಧ ರೀತಿಯ ಬೋಧನಾ ವಿಧಾನಗಳನ್ನು ತಿಳಿದಿರಬೇಕು ಮತ್ತು ಮನೋವಿಜ್ಞಾನದ ತಿಳುವಳಿಕೆ, ವಿವೇಚನಾ ಶಕ್ತಿಯನ್ನು ಹೊಂದಿದ್ದು ಬೋಧಿಸುವ ವಿಷಯಗಳಲ್ಲಿ ಆಳವಾದ ಜ್ಞಾನವನ್ನು ಹೊಂದಿರಬೇಕು. ಜೀವನ ಪರ್ಯಂತ ವಿದ್ಯಾರ್ಥಿಯಾಗಿರಬೇಕು. (A lamp cannot light another lamp unless it continues to burn its own flame – Ravindranath Tagore).

ನಮಗೆ ಶಾಲೆ ಮತ್ತು ಮಕ್ಕಳ ಬಗ್ಗೆ ಕೆಲವು ಧನಾತ್ಮಕ ಮತ್ತು ಋಣಾತ್ಮಕ ನಂಬಿಕೆಗಳನ್ನು ಹೊಂದಿರುತ್ತೇವೆ. ಇದರಲ್ಲಿ ಕೆಲವು ತಪ್ಪು ಗ್ರಹಿಕೆಗಳಿಂದ ಹೊರಬರಬೇಕಾಗಿರುವುದು ಅಷ್ಟೇ ಮುಖ್ಯವಾಗಿದೆ. ಏಕೆಂದರೆ ನಮ್ಮ ನಂಬಿಕೆಗಳು ನಮ್ಮ ಆಲೋಚನೆ, ಚಿಂತನೆ ಹಾಗೂ ಚಟುವಟಿಕೆಗಳ ಮೇಲೆ ಗಾಢವಾದ ಪರಿಣಾಮ ಬೀರುತ್ತವೆ. ಅಲ್ಲದೆ ಇವುಗಳು ಶಿಕ್ಷಕನ ದೃಷ್ಟಿಕೋನ ಮತ್ತು ತರಗತಿ ಕೋಣೆಯಲ್ಲಿ ಮಕ್ಕಳೊಂದಿಗಿನ ವರ್ತನೆ ಮೇಲೆ ಗಂಭೀರವಾಗಿ ಪ್ರಭಾವ ಬೀರುವುದರಿಂದ ಇವುಗಳನ್ನು ಶಿಕ್ಷಕ ಸವಾಲಾಗಿ ತೆಗೆದುಕೊಂಡು ಅವುಗಳಿಂದ ಹೊರಬರಬೇಕಾಗಿದೆ. ಕೆಲವು ನಂಬಿಕೆಗಳು ಅಂದರೆ ಮಗು ಖಾಲಿ ಹಾಳೆ, ಅನಕ್ಷರಸ್ಥ ಅಥವಾ ಕೆಲವು ವರ್ಗದ ಜಾತಿಯ ಮಕ್ಕಳು ಕಲಿಯಲು ಅಸಮರ್ಥರು ಹೀಗೆ ಹಲವು ನಂಬಿಕೆಗಳಿವೆ. ಆದರೆ ನಾವು ಹಲವಾರು ಉದಾಹರಣೆಗಳನ್ನು ನೋಡಿದ್ದೇವೆ ಅನಕ್ಷರಸ್ಥ ಅಥವಾ ಹಿಂದುಳಿದ ವರ್ಗದ ಜಾತಿಯ ಮಕ್ಕಳು ಉನ್ನತ ಹುದ್ದೆಯಲ್ಲಿರುವುದು ಹಾಗೂ ಮಾದರಿ ವ್ಯಕ್ತಿಗಳಾಗಿರುವುದು. ನಮಗೆ ಆನೆ ಮರಿಯಾಗಿದ್ದಾಗ ಅದನ್ನು ಗೂಟಕ್ಕೆ ಕಟ್ಟಿರುತ್ತಾರೆ ಅದು ಪ್ರಯತ್ನಪಟ್ಟರೂ ಅದರಿಂದ ಹೊರಬರಲಾಗುವುದಿಲ್ಲ. ಆದರೆ ಆನೆ ದೊಡ್ಡದಾದ ನಂತರವೂ ಅದರ ನಂಬಿಕೆ ಹಾಗಿ ಉಳಿಯುತ್ತದೆ. ಏಕೆಂದರೆ ಅದು ಪ್ರಯತ್ನಪಡುವುದೇ ಇಲ್ಲ. ಆದರೆ ನಾವು ಸಾಲು ಮರದ ತಿಮ್ಮಕ್ಕನ ಸಾಧನೆ ಅಥವಾ ದಸರತ್ ಮಾಂಜೆಯ ಸಾಧನೆಗಳನ್ನು ಕೇಳಿದ ಮೇಲೆ ಅವರ ನಂಬಿಕೆ, ಅವಿರತ ಶ್ರಮ, ಶ್ರದ್ಧೆ ಹೇಗೆ ಅವರನ್ನು ಸಾಧಕರನ್ನಾಗಿ ಮಾಡಿದವು ಎಂಬುದನ್ನು ಅರಿಯಬೇಕಾಗಿದೆ. ನಮಗೆ ನಮ್ಮ ಮೇಲೆ ಹಾಗೂ ನಾವು ಮಾಡುವ ಕಾರ್ಯದ ಮೇಲೆ ನಂಬಿಕೆ ಇಡಬೇಕಾಗುತ್ತದೆ. ಅದಕ್ಕೆ ಅವಶ್ಯಕವಾದ ಬದ್ಧತೆ, ಪ್ರೀತಿ, ಪರಿಶ್ರಮ ಹಾಗೂ ಮನೋಬಾವನೆಗಳನ್ನು ಬೆಳೆಸಿಕೊಳ್ಳುವುದು ಸಹ ಮುಖ್ಯವಾಗುತ್ತದೆ.

ಶಾಲೆಗೆ ಬರುವ ಎಲ್ಲಾ ಮಕ್ಕಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನಲೆಯನ್ನು ಶಿಕ್ಷಕರು ಅರ್ಥಮಾಡಿಕೊಳ್ಳುವುದು ಅತಿ ಮುಖ್ಯವಾಗಿದೆ. ಏಕೆಂದರೆ ಪ್ರತಿ ಮಗುವಿನ ಹಿನ್ನಲೆಯು ಒಂದೇ ಆಗಿರುವುದಿಲ್ಲ. ಬೇರೆ ಬೇರೆ ಹಿನ್ನಲೆಯಿಂದ ಬಂದ ಮಕ್ಕಳ ಮಾನಿಸಿಕ ಸ್ಥಿತಿಯು ಅವರ ಸರ್ವತೋಮುಖ ಬೆಳವಣಿಗೆ ಹಾಗೂ ಕಲಿಕೆಯ ಮೇಲೆ ನೇರವಾಗಿ ಪ್ರಭಾವ ಬೀರುವುದರಿಂದ ಶಿಕ್ಷಕನು ಮಕ್ಕಳ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ. ಸಾಮಾನ್ಯವಾಗಿ ಶಿಕ್ಷಕರಿಗೆ ಭೋದನೆ ಕಲಿಕಾ ಪ್ರಕ್ರಿಯೆ ಚಟುವಟಿಕೆಗಳ ನಡುವೆ ಸಮಯದ ಅಭಾವ ಎನಿಸಬಹುದು. ಆದರೆ ಶಾಲಾ ವ್ಯವಸ್ಥೆಯಲ್ಲಿ ಮಗುವಿನ ಹಿನ್ನಲೆಯನ್ನು ಅರ್ಥಮಾಡಿಕೊಳ್ಳುವುದರಿಂದ ಅಗುವ ಅನುಕೂಲಗಳೇನು ಎಂಬುದರ ಪರಿಕಲ್ಪನೆಯು ಶಿಕ್ಷಕರಿಗೆ ಇರಬೇಕಾಗುತ್ತದೆ. ಮಗುವಿನ ಹಿನ್ನಲೆಯನ್ನು ತಿಳಿದುಕೊಳ್ಳುವುದರಿಂದ ಈ ಮೇಲಿನ ಅಂಶಗಳು ಯಾವ ರೀತಿ ಮಕ್ಕಳ ವರ್ತನೆ, ಭಾವನೆಗಳು, ಕಲಿಕೆ ಹಾಗೂ ಮಗುವಿನ ಸರ್ವತೋಮುಖ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತವೆ ಎಂಬುದು ತಿಳಿಯಲು ಸುಲಭವಾಗುತ್ತದೆ.

ನಮಗೆ ತಿಳಿದಿರುವಂತೆ ಮಕ್ಕಳು ಪ್ರವೇಶ ಪಡೆಯುವ ಮುನ್ನವೇ ಅನೇಕ ಅನುಭವಗಳನ್ನು ತಮ್ಮದಾಗಿಸಿಕೊಂಡಿರುತ್ತಾರೆ. ಅವರ ಅಂತಸತ್ವಗಳನ್ನು/ಸಂಭಾವ್ಯತೆಗಳನ್ನು ಗುರುತಿಸಿ ಅವರ ಸಾಮರ್ಥ್ಯಗಳನ್ನು ಗರಿಷ್ಟ ಮಟ್ಟದಲ್ಲಿ ವೃದ್ಧಿಸುವ ಕೆಲಸ ಶಿಕ್ಷಕರಾದ ನಾವು ಮಾಡಬೇಕಾಗಿದೆ.ಇಲ್ಲಿ ಮಕ್ಕಳ ಮನೋಭಾವನೆಗಳಿಗೆ ಹೊಂದಿಕೊಂಡಂತೆ ಸಮಾಜಮುಖಿಯಾಗಿ ಪ್ರಪಂಚದಲ್ಲಿ ಬದುಕನ್ನು ಕಟ್ಟಿಕೊಳ್ಳಲು ತಯಾರುಮಾಡುವ ಕೆಲಸ ಮಾಡಬೇಕಾಗಿದೆ. ಶಿಕ್ಷಕರು ಮಕ್ಕಳಲ್ಲಿ ಭೌತಿಕ ಹಾಗೂ ಭೌದ್ಧಿಕ ಬೆಳವಣಿಗೆಗೆ ಸಹಾಯಕವಾಗಲು ಕಲಿಕಾ ಸ್ನೇಹಿ ವಾತಾವರಣ ನಿರ್ಮಿಸಬೇಕಾಗಿದೆ. ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಶೈಕ್ಷಣಿಕ ಗುರಿಗಳನ್ನು ಈಡೇರಿಸಲು ಶಾಲೆಯಲ್ಲಿ ಅಗತ್ಯ ಚಟುವಟಿಕೆಗಳನ್ನು ರೂಪಿಸುವ ಹಾಗೂ ಸಹಯೋಗ ಸಂಸ್ಕೃತಿ ಬೆಳೆಸುವುದರೊಂದಿಗೆ ಅಪೇಕ್ಷಿತ ಮೌಲ್ಯಗಳು, ಜ್ಞಾನ, ಕೌಶಲ, ವರ್ತನೆಗಳನ್ನು ಮಕ್ಕಳಲ್ಲಿ ಬೆಳೆಸಲು ಸಹಕಾರಿಯಾಗಬೇಕಾಗಿದೆ.

ಈ ಎಲ್ಲಾ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿಸಲು ಇತರೆ ಭಾಗೀದಾರರನ್ನು ಆತ್ಮವಿಶ್ವಾಸಕ್ಕೆ ತೆಗೆದುಕೊಂಡು ಕೊಡು ಕೊಳ್ಳುವಿಕೆಯ ಮೂಲಕ ಕಾರ್ಯನಿರ್ವಹಿಸುವುದು ಬಹುಮುಖ್ಯವಾಗಿದೆ. ಏಕೆಂದರೆ ಮಕ್ಕಳ ಕಲಿಕೆಗೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಸೂಕ್ತ ಕಲಿಕಾ ವಾತಾವರಣವನ್ನು ಶಾಲೆಯ ಒಳಗಡೆ ಮತ್ತು ಹೊರಗಡೆ (ಮನೆ & ಸಮುದಾಯ) ಕಲ್ಪಿಸಲು ಇತರರು ಸಹ ಜವಾಬ್ದಾರರಾಗಿರುತ್ತಾರೆ. ಶಿಕ್ಷಕರಾದ ನಾವು ಇವರೆಲ್ಲರ ಜೊತೆಗೆ ಉತ್ತಮ ಸಂಬಂಧವನ್ನು ಹೊಂದಿ ಎಲ್ಲರ ಸಹಕಾರದೊಂದಿಗೆ ಕಲಿಕಾ ವಾತಾವರಣ ಮತ್ತು ಕಲಿಕಾ ಪ್ರಕ್ರಿಯೆಗಳ ಮೂಲಕ ಮಕ್ಕಳಲ್ಲಿ ಉತ್ತಮ ಕಲಿಕಾ ಫಲಿತಾಂಶಗಳನ್ನು ಹೊರತರುವ ಉದ್ದೇಶ ಹೊಂದಿರಬೇಕು. ಹಾಗಾದಲ್ಲಿ ಮಾತ್ರ ನಮ್ಮ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಮತ್ತು ಮಕ್ಕಳಲ್ಲಿ ಪರಿಣಾಮಕಾರಿ ಕಲಿಕೆಯನ್ನು ನೋಡಲು ಸಾಧ್ಯವಾಗಬಹುದು.

ಮಕ್ಕಳನ್ನು ಜವಾಬ್ದಾರಿಯುತ ನಾಗರಿಕನನ್ನಾಗಿ ಮಾಡುವಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾದದ್ದು. ಹಾಗಾಗಿ ಶಿಕ್ಷಕರು ಶಾಲೆಯಲ್ಲಿ ನಡೆಸುವ ಚಟುವಟಿಕೆಗಳಲ್ಲಿ ಯಾಂತ್ರಿಕವಾಗಿ ನೋಡದೆ ಸಂವಿಧಾನದ ಮೌಲ್ಯಗಳನ್ನು ಬೆಳೆಸವ ಕಡೆಯೂ ಗಮನಕೊಡಬೇಕಾಗಿದೆ. ಅದು ಬೆಳಗಿನ ಪ್ರಾರ್ಥನೆಯಾಗಿರಲಿ ಅಥವಾ ಮಧ್ಯಾಹ್ನದ ಬಿಸಿಊಟವಾಗಿರಲಿ ಎಲ್ಲಾ ಚಟುವಟಿಕೆಗಳಲ್ಲಿ ಸಂವಿಧಾನದ ಆಶಯಗಳಾದ ಸಮಾನತೆ, ನ್ಯಾಯ, ಭ್ರಾತೃತ್ವ ಮುಂತಾದ ಮಾನವೀಯ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸುವ ಪ್ರಯತ್ನ ಪ್ರತಿ ಹಂತದಲ್ಲಿ ನಡೆಯಬೇಕಾಗುತ್ತದೆ. ಮಕ್ಕಳಿಗೆ ಇವುಗಳ ಅನುಭವ ಕೊಡುವ ಜವಾಬ್ದಾರಿ ಹಾಗೂ ಸಾಧ್ಯತೆ ಇರುವುದು ಶಿಕ್ಷಕರಾದ ನಮಗೆ ಮಾತ್ರ ಅಲ್ಲವೆ. ನಮ್ಮ ಶಾಲೆಗಳಲ್ಲಿ ಪ್ರತಿ ಚಟುವಟಿಕೆಯು ಮತ್ತು ಸನ್ನಿವೇಶಗಳಲ್ಲಿ ಈ ಅನುಭವಗಳು ನಡೆಯುತ್ತಿರುತ್ತವೆ. ಅವುಗಳನ್ನು ನಿರಂತರವಾಗಿ ಪೋಷಿಸುವ ಜವಾಬ್ದಾರಿ ನಮ್ಮದಾರಿರುತ್ತದೆ.

ಕೆಲವು ನಂಬಿಕೆಗಳು (Beliefs & Myths on Teaching) ಇವು ಇರಬಹುದೆ. ಇವುಗಳು ಮಕ್ಕಳ ಕಲಿಕೆ ಮತ್ತು ಬೋಧನೆಯ ಮೇಲೆ ಪ್ರಭಾವ ಬೀರಬಹುದಲ್ಲವೆ.

- ಯಾರು ಬೇಕಾದರೂ ಮತ್ತೊಬ್ಬರಿಗೆ ಕಲಿಸಲು ಮತ್ತು ಮಾರ್ಗದರ್ಶಿಸಲು ಶಕ್ಯರು
- ಅನಕ್ಷರಸ್ಥರ ಮಕ್ಕಳಿಗೆ ಕಲಿಸುವುದು ಬಹಳ ಕಷ್ಟ

- ಕೆಲವು ವರ್ಗದ/ಜಾತಿಯ ಮಕ್ಕಳು ಕಲಿಯುವುದಿಲ್ಲ
- ಖಾಸಗಿ ಶಾಲೆಯ ಮಕ್ಕಳು ಚೆನ್ನಾಗಿ ಕಲಿಯುತ್ತಾರೆ
- ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳು ಚೆನ್ನಾಗಿ ಕಲಿಯುತ್ತಾರೆ
- ಮಕ್ಕಳಿಗೆ ಕಂಠಪಾಠ ಮಾಡಿಸುವುದರಿಂದ ಚೆನ್ನಾಗಿ ಕಲಿಯುತ್ತಾರೆ
- ನಾವು ಹೇಳಿಕೊಟ್ಟರೆ ಮಾತ್ರ ಮಕ್ಕಳು ಕಲಿಯುತ್ತಾರೆ
- ಪರೀಕ್ಷೆಗಾಗಿ ಪಾಠ, ಪರೀಕ್ಷೆಗೋಸ್ಕರ ಕಲಿಸುವುದು
- ಪಾಠ ವಿಷಯವನ್ನು ಮುಗಿಸುವುದೇ ಸಾಧನೆ
- ಬೋಧನೆಗೆ/ಕಲಿಸುವಿಕೆಗೆ ತಯಾರಿ ಅಗತ್ಯವಿಲ್ಲ
- ಪಠ್ಯಪುಸ್ತಕವೇ ಅಂತಿಮ
- ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಹಂತಗಳಲ್ಲಿ ಯಾರಾದರೂ ಕಲಿಸಬಹುದು
- ವಿಷಯ ಜ್ಞಾನವನ್ನು ಚೆನ್ನಾಗಿ ಹೊಂದಿದ್ದರೆ ಸಾಕು ಚೆನ್ನಾಗಿ ಕಲಿಸಬಹುದು
- ಇತ್ಯಾದಿ

# ಲೇಖನ–3

## ಸಾರ್ವಜನಿಕ ಶಾಲೆಗಳು ಏಕೆ ಮುಖ್ಯ? ಸಾರ್ವಜನಿಕ ಶಾಲಾ ಶಿಕ್ಷಣದ ಪ್ರಮುಖ ಉದ್ದೇಶಗಳಾವುವು? ಸಾರ್ವಜನಿಕ ಶಾಲಾ ಶಿಕ್ಷಣದ ಪ್ರಮುಖ ಉದ್ದೇಶಗಳನ್ನು ಸಾಧಿಸಲಾಗಿದೆಯೇ?

ವಿವಿಧ ಹಿನ್ನಲೆಯ ಮಕ್ಕಳನ್ನು ಶಿಕ್ಷಣದ ಗುರಿಗಳಿಗೆ ಅನುಸಾರವಾಗಿ ರೂಪಿಸುವಲ್ಲಿ ಶಾಲೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಾಲೆಯಲ್ಲಿ ಮಕ್ಕಳ ವೈಯುಕ್ತಿಕ ಗುಣಗಳು ಸಾಮಾಜಿಕವಾಗಿ ಪ್ರೇರಣೆಗೊಂಡು ಶಿಕ್ಷಣದ ಅಗತ್ಯತೆಗನುಗುಣವಾಗಿ ಬದಲಾಗುತ್ತವೆ. ವೈಯುಕ್ತಿಕವಾಗಿ ತಿದ್ದಲಾಗದ ಅನೇಕ ವರ್ತನೆಗಳು ಶಾಲೆಯಿಂದ ಪ್ರಭಾವಿತಗೊಂಡು ಮಾರ್ಪಾಟುಗೊಳ್ಳುತ್ತವೆ. ಶಾಲೆಯು ಸಮೂಹ ಸಂರಚನೆಯನ್ನು ಹೊಂದಿದ್ದು ವಿದ್ಯಾರ್ಥಿಗಳನ್ನು ಹೆಚ್ಚಿನ ಮಟ್ಟದಲ್ಲಿ ಪ್ರಭಾವಿಸುತ್ತದೆ.  ಶಾಲೆಯಲ್ಲಿ ಮಕ್ಕಳು ವಿವಿಧ ಮೌಲ್ಯಗಳನ್ನು ಬೆಳೆಸಿಕೊಳ್ಳುತ್ತಾರೆ ಹಾಗೂ ಶಿಕ್ಷಣದ ಮಹತ್ವವನ್ನು ಗ್ರಹಿಸುತ್ತಾರೆ. ಶಾಲೆಗಳು ಮಕ್ಕಳ ಚಾರಿತ್ರವನ್ನು ರೂಪಿಸುವ ಕೇಂದ್ರಗಳೂ ಹೌದು. ಶಾಲೆಯು ಮಗುವಿನ ವ್ಯಕ್ತಿತ್ವವನ್ನು ರೂಪಿಸುವ ಮತ್ತು ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಲು ಅಗತ್ಯವಾದ ಶಿಕ್ಷಣ ಮತ್ತು ಕೌಶಲಗಳನ್ನು ಒದಗಿಸುತ್ತದೆ.

ಸಾರ್ವಜನಿಕ ಶಾಲೆಗಳು ಸಮಾಜದ ಎಲ್ಲಾ ವರ್ಗಗಳ ಮಕ್ಕಳು ಸಮಾನತೆಯಿಂದ ಶಿಕ್ಷಣವನ್ನು ಪಡೆಯಲು ರೂಪುಗೊಂಡವುಗಳಾಗಿವೆ. ಇವುಗಳ ನಿರ್ವಹಣೆ ಸರ್ಕಾರದ ಅಧೀನದಲ್ಲಿದ್ದು ಕಲಿಕೆಗೆ ಪೂರಕವಾದ ಮಾನವ ಮತ್ತು ಭೌತ ಸಂಪನ್ಮೂಲಗಳನ್ನು ಒದಗಿಲಾಗಿದೆ. ಯಾವುದೇ ಬೇಧವಿಲ್ಲದೆ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವುದು ಸಾರ್ವಜನಿಕ ಶಾಲೆಗಳ ಆದ್ಯ ಗುರಿಯಾಗಿರುತ್ತದೆ. ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಇವುಗಳನ್ನು ಜನವಸತಿ ಪ್ರದೇಶಗಳಲ್ಲಿ ಸ್ಥಾಪಿಸಲಾಗಿದ್ದು, ಎಲ್ಲಾ ಮಕ್ಕಳಿಗೆ ಪ್ರವೇಶವನ್ನು ಕಲ್ಪಿಸುತ್ತವೆ. ಸಾರ್ವಜನಿಕ ಶಾಲೆಗಳಲ್ಲಿ ಶಿಕ್ಷಣವನ್ನು ಉಚಿತವಾಗಿ ಇಲಾಖೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರುವ ಶಿಕ್ಷಕರು ನೀಡುತ್ತಾರೆ. ಅಲ್ಲದೆ ಸಾರ್ವತ್ರಿಕ ದಾಖಲಾತಿ, ಹಾಜರಾತಿಯನ್ನು ಕಲ್ಪಿಸುವ ಉದ್ದೇಶಿದಿಂದ ಈ ಶಾಲೆಗಳಲ್ಲಿ ಮಧ್ಯಾಹ್ನದ ಊಟ, ಉಚಿತವಾಗಿ ಪಠ್ಯಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್‌ಗಳನ್ನು ಒದಗಿಸಲಾಗುತ್ತದೆ. ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವೂ ದೊರೆಯುತ್ತದೆ.

ಸರ್ಕಾರಿ ಶಾಲೆಗಳು ಇತರೆ ಖಾಸಗಿ ಶಾಲೆಗಳಿಗಿಂತ ಭಿನ್ನವಾಗಿರುತ್ತವೆ. ಶಾಲೆಗಳು ಸಂವಿಧಾನದ ಮೂಲ ಆಶಯಗಳನ್ನು ಈಡೇರಿಸಲು ಸ್ಥಾಪಿಸಲ್ಪಟ್ಟವುಗಳಾಗಿವೆ. ಇಲ್ಲಿ ಲಾಭದ ಲೆಕ್ಕಾಚಾರವಿರುವುದಿಲ್ಲ, ಬದಲಾಗಿ ಗುಣಾತ್ಮಕವಾಗಿ ಶಿಕ್ಷಣವನ್ನು ನೀಡುವ ಮತ್ತು ಭವಿಷ್ಯದ ನಾಗರೀಕರನ್ನು ರೂಪಿಸುವ ಉದ್ದೇಶವಿರುತ್ತದೆ. ಸರ್ವರಿಗೂ ಶಿಕ್ಷಣ ಮತ್ತು ಸರ್ವರಿಗೂ ಸಮಪಾಲು ಎಂಬ ತತ್ವಗಳ ಅಡಿಯಲ್ಲಿ ಸರ್ಕಾರಿ ಶಾಲೆಗಳು ಕಾರ್ಯನಿರ್ವಹಿಸುತ್ತವೆ. ಈ ಶಾಲೆಗಳನ್ನು ಅರ್ಹ ವಯಸ್ಸಿನ ಮಕ್ಕಳು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಸ್ಥಾಪಿತಗೊಂಡಿರುತ್ತವೆ. ಸರ್ಕಾರಿ ಶಾಲೆಗಳು ತೊಡಗಿಸಿರುವ ಬಂಡವಾಳಕ್ಕೆ ಲಾಭವನ್ನು ಅಪೇಕ್ಷಿಸದೆ ಮಕ್ಕಳ ಗುಣಾತ್ಮಕ ಕಲಿವನ್ನು ಖಾತರಿಪಡಿಸುತ್ತವೆ. ಇಂತಹ ಉದ್ದೇಶಗಳನ್ನು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉಳಿಸಿ ಬೆಳೆಸುವ ಗುರುತರ ಜವಾಬ್ದಾರಿಯನ್ನು ನಾವೆಲ್ಲರೂ ವಹಿಸಿಕೊಳ್ಳಬೇಕಾಗಿದೆ.

ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಭಾರತದಲ್ಲಿ ಸ್ವಾತಂತ್ರಾ ನಂತರದ ಕಾಲದಿಂದ ಹಲವಾರು ಪ್ರಯತ್ನಗಳು ನಡೆಯುತ್ತಿವೆ. 1956ರಲ್ಲಿ ಭಾರತದ ಸಂವಿಧಾನವು ರೂಪುಗೊಂಡ ಸಮಯದಲ್ಲಿ ಮುಂದಿನ 10 ವರ್ಷಗಳಲ್ಲಿ ಎಲ್ಲಾ ಅರ್ಹ ಮಕ್ಕಳಿಗೆ ಶಿಕ್ಷಣವನ್ನು ನೀಡಲು ತೀರ್ಮಾನಿಸಲಾಗಿತ್ತು. ಆದರೆ ಅದು ಸಂಪೂರ್ಣವಾಗಿ ಸಾಕಾರಗೊಳ್ಳಲಿಲ್ಲ. ನಂತರ ನೇಮಕವಾದ ಕೊಠಾರಿ ಆಯೋಗದ ಶಿಫಾರಸ್ಸಿನಲ್ಲೂ ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ ಘೋಷಣೆಯನ್ನು ಮಾಡಲಾಗಿತ್ತು. 1984ರ ನೂತನ ಶಿಕ್ಷಣ ನೀತಿಯಲ್ಲೂ ಸಾರ್ವತ್ರೀಕರಣದ ಆಶಯವನ್ನು ವ್ಯಕ್ತಪಡಿಸಲಾಗಿತ್ತು. ನಂತರ ಜಾರಿಗೊಳಿಸಲಾದ ಡಿಪಿಇಪಿ ಯೋಜನೆ, ಸರ್ವ ಶಿಕ್ಷಣ ಅಭಿಯಾನ ಮತ್ತು ಅದರ ಪೂರಕ ಯೋಜನೆಗಳಲ್ಲಿ ಸದರಿ ಆಶಯವನ್ನು ಸಾಕಷ್ಟು ಪ್ರಮಾಣದಲ್ಲಿ ಸಾಧಿಸಲಾಗಿದೆ. ಶಿಕ್ಷಣದ ಸಾರ್ವತ್ರೀಕರಣವು ಒಂದು ಹಂತದಲ್ಲಿ ಪೂರ್ಣಗೊಳ್ಳುವ ಯೋಜನೆಯಾಗಿರುವುದಿಲ್ಲ, ಇದಕ್ಕಾಗಿ ಎಲ್ಲಾ ಭಾಗೀದಾರರೂ ಸತತ ಪ್ರಯತ್ನಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ.

ಸಾರ್ವಜನಿಕ ಶಾಲಾ ಶಿಕ್ಷಣವು ಸಾರ್ವತ್ರಿಕ ದಾಖಲಾತಿ ಮತ್ತು ಹಾಜರಾತಿಯ ಪ್ರಮುಖ ಉದ್ದೇಶವನ್ನು ಹೊಂದಿರುವುದು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದರೊಂದಿಗೆ ಗುಣಮಟ್ಟದ ಶಿಕ್ಷಣ, ಸ್ಥಿತ್ಯಂತರ ದರವನ್ನು ಕಾಯ್ದುಕೊಳ್ಳುವ ಉದ್ದೇಶವನ್ನೂ ಹೊಂದಿದೆ. ಪ್ರಾಥಮಿಕ ಹಂತದಲ್ಲಿ ಶಾಲೆಗೆ ದಾಖಲಾದ ಎಲ್ಲಾ ಮಕ್ಕಳೂ 14 ವರ್ಷ ವಯಸ್ಸಿನವರೆಗೆ ಶಿಕ್ಷಣವನ್ನು ನಿರಂತರವಾಗಿ ಪಡೆಯುವಂತಾಗಲೂ ಎಲ್ಲರೂ ಕ್ರಮವಹಿಸುವುದು ಅಗತ್ಯವಾಗಿದೆ. ಪ್ರಸ್ತುತ ಶಾಲಾ ದಾಖಲಾತಿ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಆನ್‌ಲೈನ್ ಮೂಲಕ ಮಾಡಲಾಗುತ್ತಿದೆ. ಆನ್‌ಲೈನ್ ವ್ಯವಸ್ಥೆಯಿಂದಾಗಿ ನಿಖರವಾದ ಮಾಹಿತಿ ಲಭ್ಯವಾಗುತ್ತಿದ್ದು ಯೋಜನೆಗಳನ್ನು ಸಮರ್ಪಕವಾಗಿ ರೂಪಿಸಲು ಮತ್ತು ಅನುಷ್ಠಾನಗೊಳಿಸಲು ಉಪಯುಕ್ತವಾಗಿದೆ.

# ಲೇಖನ–4

# ಅಪೇಕ್ಷಿತ ಮಾನವ ಅಪೇಕ್ಷಿತ ಸಮಾಜ

ನಾವೆಲ್ಲರೂ ಎಳವೆಯಿಂದಲೇ ಅನುಭವಗಳನ್ನು ಪಡೆಯುತ್ತಿದ್ದೇವೆ, ನಾವು ಹುಟ್ಟಿದ ಮನೆ, ನೆರೆಹೊರೆ, ಸ್ನೇಹಿತರು, ಶಿಕ್ಷಕರು ಇವರೆಲ್ಲರಿಂದ ಹಲವು ಅಂಶಗಳನ್ನು ಗ್ರಹಿಸುತ್ತಾ ಬೆಳೆದಿದ್ದೇವೆ. ನೇರವಾಗಿ ಹೇಳಿದ ವಿಷಯಗಳಂತೆಯೇ ಅಥವಾ ಅದಕ್ಕಿಂತ ಹೆಚ್ಚು ಪರೋಕ್ಷವಾಗಿ ನಾವು ಕಲಿತ್ತಿದ್ದೆ ಹೆಚ್ಚಲ್ಲವೇ? ಯೋಚಿಸಿ ನೋಡಿ. ನಾವು ಮೌಲ್ಯವೆಂದು ಭಾವಿಸುವ ಆಚರಣೆಗಳು ಹೇಗೆ ನಮ್ಮವಾದವು? ಭಯದಿಂದಲೋ ಗದರಿಕೆಯಿಂದಲೋ ಅದನ್ನು ನಾವು ಪಾಲಿಸುತ್ತಿದ್ದೇವೆಯೇ? ನಮ್ಮನ್ನು ನಾವು ಅವಲೋಕಿಸಿಕೊಳ್ಳಬೇಕಿದೆ. ವ್ಯಕಿತ್ವ ರೂಪಣೆಯಲ್ಲಿ ಕುಟುಂಬದಷ್ಟೆ ಶಾಲೆಯ ಪಾತ್ರ ಹಿಗ್ಗುತ್ತಾ ಸಾಗಿದಂತೆ ಶಾಲೆಯ ಜವಾಬ್ದಾರಿಗಳೂ ಕೂಡ ಬೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಶಾಲಾ ಚಟುವಟಿಕೆಗಳು ಏಕೆ ಸಂಘಟಿಸಲ್ಪಡಬೇಕು? ಇದರ ಮುಖ್ಯ ಆಶಯಗಳು ಏನು? ಎಂಬುದರ ಪೂರ್ಣ ಅರಿವು ಬಹಳಮುಖ್ಯ ಎಂದೆನಿಸುತ್ತದೆ.

ನಾವೆಲ್ಲರೂ ಶಾಲೆಯ ಕದತಟ್ಟಿ ಬಂದವರೆ. ಶಾಲೆಯಲ್ಲಿ ನಾವು ಕಂಡ ಕನಸುಗಳ ಪರಿಧಿ ಬಹುಷ ವಿಶಾಲವಾಗಿದ್ದಿರಬಹುದು. ಅಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಅದಕ್ಕಾಗಿ ನಮ್ಮತಯಾರಿ, ಮಿತ್ರರ ತಯಾರಿ ಇವೆಲ್ಲವೂ ಭಿನ್ನ ಅನುಭವಗಳನ್ನು ನೀಡಿದ್ದು ಸುಳ್ಳಲ್ಲ. ಮನೆಯಲ್ಲಿ ನಮ್ಮ ಜಾತಿಗೆ ಸಂಬಂಧಿಸಿದ ಅಂಶಗಳು ಸ್ಮರಣೆಗೆ ಬಂದಷ್ಟು ಶಾಲೆಗೆ ಹೊರಡುತ್ತಲೇ ವಿಸ್ಮರಣೆಯಂತೆ ಹಾರಿಹೋಗುತ್ತಿದ್ದುದು ಆಶ್ಚರ್ಯವೇ ಸರಿ. ಮಿತ್ರರನ್ನು ಮಾಡಿಕೊಳ್ಳುವಾಗ, ಸ್ನೇಹಿತ ನೀಡಿದ ಮಾವಿನಕಾಯಿಯನ್ನು ತಿನ್ನುವಾಗ ಯಾವಜಾತಿಯು ನಮಗೆ ಅಡ್ಡಬಂದುದಿಲ್ಲ. ಒಟ್ಟಿಗೆ ಶಾಲೆಯಿಂದ ಅನತಿ ದೂರದಲ್ಲಿ ಎಲ್ಲರ ಮನೆಯಿಂದ ಸಂಗ್ರಹಿಸಿದ ಅಕ್ಕಿ, ಉಪ್ಪು ಇನ್ನಿತರ ಸಾಮಗ್ರಿ ಬಳಸಿ ಚಿತ್ರಾನ್ನವನ್ನು ತಯಾರಿಸಿ ಬಾಯಿ ಚಪ್ಪರಿಸಿ ತಿಂದುದು, ಇವೆಲ್ಲ ಹೇಗೆ ಸಾಧ್ಯವಾಯಿತು, ನಮ್ಮ ನಡುವೆ ಗೋಡೆಯೇ ಏಳದಂತೆ ಅನುಭವಗಳನ್ನು ನಮಗೆ ನೀಡಿದವರಾರು? ಎಂದೆಲ್ಲಾ ಹಿಂದುರಿಗಿ ಯೋಚಿಸಿದಾಗ ಶಾಲೆಯ ಹಲವು ಚಟುವಟಿಕೆಗಳು ಕಣ್ಮುಂದೆ ಸುಳಿಯುತ್ತವೆ.

ಶಾಲೆಗೆ ಇದೆಲ್ಲಾ ಉಸಾಬರಿ ಏಕೆ? ಶಾಲೆ ಕೇವಲ ಗಣಿತ, ವಿಜ್ಞಾನ, ಇಂಗ್ಲೀಷು, ನೌಕರಿ ಹಿಡಿಯಲು ಬೇಕಾದ ಅರ್ಹತೆಯನ್ನು ಕೊಡಿಸಿದರೆಷ್ಟೇ ಸಾಲದೆ? ಅದಕ್ಕಾಗಿಯೇ ಅಲ್ಲವೇ ಇಂದು ಲಕ್ಷ ಲಕ್ಷ ರುಪಾಯಿಗಳನ್ನು ಪಾಲಕರು ಪ್ರತಿಷ್ಠಿತ ಶಾಲೆಗಳಿಗೆ ಸುರಿಯುತ್ತಿರುವುದು. ಇಂತಹ ಶಾಲೆಗಳ ಸಂಖ್ಯೆ ಸಮಾಜದಲ್ಲಿ ಹೆಚ್ಚುತ್ತಿದ್ದರೂ ಸಮಾಜ ಏಕೋ ಹಿಂಜಗ್ಗುತ್ತಿದೆ, ಇದರ ಆರೋಗ್ಯ ಸರಿಯಿಲ್ಲ ಎಂದು ಭಾಸವಾಗುವಂತೆ ಆಧುನಿಕ ಘಟನಾವಳಿಗಳು ನಡೆಯುತ್ತಿದೆ. ಸ್ವಚ್ಛತೆ, ಇತರರಬಗ್ಗೆ, ಪರಿಸರದ ಬಗ್ಗೆ ಕಾಳಜಿ ಕಡಿಮೆಯೇ ಆಗಿದೆ ಎಂದೂ ಹಿರಿಯರು ಹೇಳುವಾಗ ನಾವೆಲ್ಲರೂ ಬಯಸಿದ ಸಮಾಜವೇ ಇದು. ನಮ್ಮ ನಡವಳಿಕೆಗಳು ಇದಕ್ಕೆ ಅನುಗುಣವಾಗಿದೆಯೇ? ಎಂಬಪ್ರಶ್ನೆಗಳು ಏಳುತ್ತವೆ. ಅಲ್ಲಲ್ಲಿ ಅಲ್ಲಲ್ಲಿ ಉದಾತ್ತ ವ್ಯಕ್ತಿತ್ವದ ವ್ಯಕ್ತಿಗಳು ಕಣ್ಮುಂದೆ ಬಂದಾಗ ಇವರೆಲ್ಲಾ ಯಾವಗರಡಿಯಲ್ಲಿ ಪಳಗಿದರು. ಯಾರು ಇವರನ್ನೆಲ್ಲಾ ಹೀಗೆ ಮಾನವೀಯತೆಯ ಪರ ನಿಲ್ಲಲು ಸಜ್ಜುಗೊಳಿಸಿದರು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತಿದೆ. ಆದರೆ ಎಲ್ಲರೂ ಏಕೆ ಹೀಗಿಲ್ಲ ? ಎಲ್ಲರೂ ಇವರಂತೆ ಆಗಲು ಏನು ಮಾಡಬೇಕು ಎಂದಾಗ ಉತ್ತಮ ಅಭ್ಯಾಸಗಳನ್ನು ಮೂಡಿಸುವ ಶಾಲೆಯ ಚಿತ್ರ ಮನದಲ್ಲಿ ಮೂಡುವುದು ಸುಳ್ಳಲ್ಲ.

ಎಲ್ಲರನ್ನೂ ಹೀಗೆ ಶಾಲೆ ರೂಪಿಸಬೇಕೆಂಬುದು ಅತೀ ಅವಶ್ಯ ನಿಜ. ಶಿಕ್ಷಣದ ಎಲ್ಲಾ ಉದ್ದೇಶಗಳ ಅಂತಿಮಗುರಿಯೂ ಅದೇ ಆಗದೆ. ಅದಕ್ಕಾಗಿ ಚಟುವಟಿಕೆಗಳು ಯೋಜಿಸಲ್ಪಟ್ಟಿವೆ. ಅದರಲ್ಲಿ ಉತ್ಸಾಹ ಉಳಿಯುವಂತೆ ಮಾಡುವುದು ಬಹಳಮುಖ್ಯ ಎಂದೆನಿಸುತ್ತದೆ. ಸಮಾಜದಲ್ಲಿನ ಸದಸ್ಯರು ಯಾವಗುಣಗಳನ್ನು ಹೊಂದಬೇಕು? ಹೇಗೆ ಇತರಿರಿಗೆ ಸಹಕಾರಿಗಳಾಗಬೇಕು? ಎಂದು ನಿರ್ಧರಿಸಬೇಕು? ಹಳೆಯ ವಿಷಯಗಳಲ್ಲಿ ಮೌಲ್ಯಗಳಿದ್ದರೂ ಅದು ಎಲ್ಲರಿಗೂ ಸಮಾನ ವೇದ್ಯವಾಗಬೇಕಲ್ಲವೇ? ದೇಶದ ಜನರು ಯಾವ ಆತಂಕಗಳಿಲ್ಲದೇ ಪಾಲಿಸಬೇಕಾದ ಅಂಶಗಳು, ನಾಗರಿಕರ ಬೆಳವಣಿಗೆಗೆ ಪೂರಕ ಅಂಶಗಳು, ನಿಸರ್ಗದ ಜತೆ ಸಹಜ ಸಂಬಂಧ, ಅವಲಂಬನೆಗಳನ್ನು ಪೋಷಿಸಲು ರೂಪಿಸಿಕೊಂಡ ಮೌಲ್ಯಯುತ ದಾಖಲೆ, ಪ್ರಜಾ ಪ್ರಭುತ್ವದ ಬೆನ್ನೆಲುಬು ಸಂವಿಧಾನ ಇವೆಲ್ಲದರ ಆಧಾರದಿಂದ ನಾವು ಬಯಸುವ ಮಾನವನ ಚಿತ್ರಣಗಳನ್ನು ಪೂರ್ಣಗೊಳಿಸಿಕೊಳ್ಳ ಬಹುದಲ್ಲವೇ?

ಇಂತಹ ಸದ್ಗುಣಿ ಮಾನವನನ್ನೆ ಅಪೇಕ್ಷಿತ ಮಾನವ ಎಂದು ಹೇಳುವುದು. ಇಂತಹ ಮಾನವನ ವಿಕಾಸ ಸಹಜವಾಗಿ ಆಗಬೇಕು. ಇಲ್ಲದಿದ್ದಲ್ಲಿ ಅದು ತೋರಿಕೆಯ ಆಚರಣೆ ಮಾತ್ರವೇ ಆದೀತು ಜೋಕೆ! ಅಂತಹ ತೋರಿಕೆಯ ನಡವಳಿಕೆಗಳು ಸಮಾಜಕ್ಕೆ ಸಾಕಷ್ಟು ಹಾನಿ ಮಾಡಿರುವುದನ್ನು, ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಅದಕ್ಕಾಗಿ ಎಲ್ಲರೂ ಒಪ್ಪುವಂತೆ ವಿಕಾಸದ ಹಾದಿ ಕೈಜೋಡಿಸಲು ಸಾಧ್ಯವಾಗುವುದು ಶಾಲೆಯಿಂದ ಹೆಚ್ಚು ಸಾಧ್ಯ. ಶಾಲೆಯಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳು ಅಂತಿಮವಾಗಿ ನಮ್ಮ ದೇಶದ ಸಂವಿಧಾನದ ಆಶಯವನ್ನು ಈಡೇರಿಸುವ ಸಲುವಾಗಿಯೇ ಎಂಬುದರಲ್ಲಿ ಶಿಕ್ಷರಾದ ನಮ್ಮ ನಂಬಿಕೆ ಗಟ್ಟಿಯಾದಾಗಲೇ ಈ ಕಾರ್ಯ ಸಾಧ್ಯವಾಗುವುದು.

ಇದನ್ನು ಸಾಧ್ಯವಾಗಿಸಲು ಶಾಲೆಯ ಪಠ್ಯ ಮತ್ತು ಸಹಪಠ್ಯವನ್ನೊಳಗೊಂಡಂತೆ ಹಲವು ಚಟುವಟಿಕೆಗಳು ಸಹಾಯ ಮಾಡುತ್ತವೆ. ಎಲ್ಲಾ ಮಕ್ಕಳು ಶಾಲೆಗೆ ಆಗಮಿಸಿದ ನಂತರ ಅಧಿಕೃತವಾಗಿ ಪ್ರಾರಂಭವಾಗುವ ಚಟುವಟಿಕೆ ಪ್ರಾರ್ಥನಾ ಅವಧಿ ಯಿಂದ ಕೊನೆಗೆ ಶಾಲೆಯ ದೈನಂದಿನ ಚಟುವಟಿಕೆಗಳ ಮುಕ್ತಾಯದ ವರೆಗೂ ಎಲ್ಲವೂ ಅಪೇಕ್ಷಿತ ಮಾನವನ ನಿರ್ಮಾಣಕ್ಕಾಗಿಯೇ ಆಗಿದೆ. ತನ್ಮೂಲಕ ಅಪೇಕ್ಷಿತ ಸಮಾಜದ ನಿರ್ಮಾಣ ಕೂಡ ಕಾರ್ಯಸಾಧ್ಯ. ಈ ಹಿನ್ನೆಲೆಯಲ್ಲಿ ಶಾಲೆಯ ಎಲ್ಲಾ ಚಟುವಟಿಕೆಗಳು ಸಂವಿಧಾನದ ಆಶಯಗಳ ಬೆಂಬಲಕ್ಕಾಗಿಯೇ ಎಂಬುದನ್ನು ಪುನರುಚ್ಚರಿಸುತ್ತಾ , ಹಲವು ಚಟುವಟಿಕೆಗಳಲ್ಲಿ ಒಂದಾದ ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯ ಸ್ವರೂಪ ಮತ್ತು ಅನುಷ್ಠಾನದ ಬಗ್ಗೆ ಕಾಳಜಿವಹಿಸಬೇಕಿದೆ.

ಪ್ರತಿಯೊಂದು ಶಾಲೆಯ ಚಟುವಟಿಕೆಗಳು ಸ್ವಚ್ಛತೆಯ ನಂತರ ಪ್ರಾರಂಭವಾಗುವುದು ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯಿಂದಲೇ. ಇಲ್ಲಿಯೇ ಬೇರೆ ಬೇರೆ ಹಿನ್ನೆಲೆಯಿಂದ ಬಂದ ಮಕ್ಕಳಿಗೆ ಸಮಾನ ಗುರಿ ಮತ್ತು ಅನುಭವಗಳನ್ನು ಕಲ್ಪಿಸುವ ವೇದಿಕೆಯಾಗಿ

ಮಕ್ಕಳಿಗೆ ಸಿಗುವ ಸಾಮೂಹಿಕ ಅನುಭವ. ಶಾಲೆಯಲ್ಲಿನ ಈ ದೈನಂದಿನ ಘಟನೆ ಮಗುವಿನ ಬೆಳವಣಿಗೆ ಮತ್ತು ನಿಲುವನ್ನು ಸಾಕಷ್ಟು ಪ್ರಭಾವಿಸುತ್ತದೆ.ಇದನ್ನು ಸಾಕಷ್ಟು ಪ್ರಜ್ಞಾ ಪೂರ್ವಕವಾಗಿ ಸಂಘಟಿಸಬೇಕಾಗುತ್ತದೆ. ಇದನ್ನು ಸಂಘಟಿಸಲು ಇಲಾಖೆ ಸಾಕಷ್ಟು ಮಾರ್ಗದರ್ಶಿ ಸೂಚನೆಗಳನ್ನು, ಇದರಲ್ಲಿ ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಕುರಿತು ಸ್ಪಷ್ಟವಾಗಿ ವಿವರಿಸಿರುತ್ತದೆ. ಈ ಬಗ್ಗೆ ಪ್ರತಿವರ್ಷ ಪ್ರಕಟವಾಗುವ ಶೈಕ್ಷಣಿಕ ಮಾರ್ಗದರ್ಶಿಯನ್ನು, ಅದರಲ್ಲಿ ನೀಡಿರುವ ಶಾಲಾ ವೇಳಾ ಪಟ್ಟಿಯ ವಿನ್ಯಾಸವನ್ನು ಗಮನಿಸಿ ಸ್ಥಳೀಯ ಆವಶ್ಯಕತೆಗನುಗುಣವಾಗಿ ಶಾಲೆಯು ಪ್ರಾರ್ಥನಾ ಅವಧಿಯಲ್ಲಿ ನಡೆಸಬೇಕಾದ ಕಡ್ಡಾಯಚಟುವಟಿಕೆಗಳು (ನಾಡಗೀತೆ, ರಾಷ್ಟ್ರಗೀತೆಗಳ ಸಾಮೂಹಿಕ ಗಾಯನ) ಮತ್ತು ಶಾಲಾ ಆಯ್ಕೆಯ ಚಟುವಟಿಕೆಗಳನ್ನು ಸಂಯೋಜಿಸಿ ನಡೆಸಬಹುದು.

ಪ್ರತಿಯೊಂದು ಪ್ರಾರ್ಥನಾ ಅವಧಿಯು ವಿಶಿಷ್ಠ ಅನುಭವಕೊಡುವುದಕ್ಕಾಗಿ ವಿಶಿಷ್ಠ ಅಂಶಗಳನ್ನು ಆಧರಿಸಿರುತ್ತದೆ. ಇದು ವಿವಿಧ ರೀತಿಯ ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯ ವರ್ಗೀಕರಣಕ್ಕೆ ಕಾರಣವಾಗುತ್ತದೆ. ಅದರಂತೆ ಕೆಲವು ವರ್ಗೀಕರಣವನ್ನು ಗಮನಿಸಬಹುದು. ತರಗತಿ ಅಸೆಂಬ್ಲಿ ಇದು ತರಗತಿಯಲ್ಲಿ ನಡೆಯುತ್ತದೆ. ವಿಶಾಲ ಸ್ಥಳಾವಕಾಶದ ಅಲಭ್ಯತೆಯಿಂದ ಬಹಳಷ್ಟು ಬಾರಿ ನಡೆಯುತ್ತಿದ್ದರೂ, ಕೆಲವು ಶಾಲೆಗಳು ತರಗತಿವಾರು ನೀಡಬೇಕಾದ ಸ್ಪಷ್ಟ ಸೂಚನೆಗಳನ್ನು ನೀಡಲು ಹೆಚ್ಚು ಮಕ್ಕಳಿಗೆ ಭಾಗವಹಿಸುವ ಅವಕಾಶ ನೀಡಲು ಬಳಸುತ್ತಿವೆ. ಇಡಿ ಶಾಲಾ ಸಮೂಹವನ್ನು ತರಗತಿ ಅಸೆಂಬ್ಲಿಯ ಮೂಲಕ ಸಂಘಟಿಸುವ ಶಾಲೆಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಅದೇರೀತಿ ಪೂರ್ಣ ಶಾಲಾ ಅಸೆಂಬ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳನ್ನು ಒಳಗೊಂಡಂತೆ ನಡೆಸಲ್ಪಡುತ್ತದೆ. ಪ್ರಾಥಮಿಕ ವಿಭಾಗದ ಅಸೆಂಬ್ಲಿ, ಹಿರಿಯ ಪ್ರಾಥಮಿಕ ವಿಭಾಗದ ಅಸೆಂಬ್ಲಿ ಮತ್ತು ಸೆಕೆಂಡರಿ ವಿಭಾಗದ ಅಸೆಂಬ್ಲಿ ಹೀಗೆ ಒಂದೇ ಶಾಲೆಯಲ್ಲಿ ಹಲವು ವಿಭಾಗಗಳಿದ್ದಾಗ ನಡೆಸುವ ವಿವಿಧ ಆಯೋಜನಾ ವಿನ್ಯಾಸಗಳಾಗಿರುತ್ತದೆ. ಇದು ಪ್ರಾರ್ಥನಾ ಕಾರ್ಯಕ್ರಮದ ಉದ್ದೇಶವನ್ನು ಸಾಧಿಸುವ ಸಲುವಾಗಿಯೇ ಹೀಗೆ ವಿಭಾಗವಾರು ಮಾಡಿಕೊಂಡು ಸಂಖ್ಯೆಯನ್ನು ಮಿತಗೊಳಿಸಿ ಅರ್ಥಪೂರ್ಣವಾಗಿ ಸಂಘಟಿಸಲು ಸಹಕಾರಿಯಾಗಿದೆ. ಇದು ಆಯಾ ವಿಭಾಗದ ಆಸಕ್ತಿ, ಅಗತ್ಯಗಳಿಗನುಗುಣವಾದ ಚಟುವಟಿಕೆಗಳನ್ನು ಸಂಘಟಿಸಲು ಸಾಧ್ಯವಾಗಿಸುತ್ತದೆ. ಉದಾಹರಣೆ ರಂಜನೆ ಹಾಗೂ ಶಾಲೆಗೆ ಹೊಂದಿಕೊಳ್ಳುವ ಚಟುವಟಿಕೆಗಳನ್ನು ಪೂರ್ವಪ್ರಾಥಮಿಕ, ಕಿರಿಯ ಪ್ರಾಥಮಿಕ ವಿಭಾಗಗಳಿಗೆ ಯೋಜಿಸಿದರೆ, ಹಿರಿಯ ಪ್ರಾಥಮಿಕ ವಿಭಾಗಗಳಿಗೆ ಆ ವಯೋಮಾನದ ಅವಶ್ಯಕತೆಗಳಿಗೆ ಅನುಗುಣವಾದ ಸಲಹಾ ರೂಪದ ಚಟುವಟಿಕೆಗಳನ್ನು ಸಂಯೋಜಿಸ ಬಹುದು. ಸೆಕೆಂಡರಿವಿಭಾಗಗಳಿಗೆ ಬಹಳ ಸಂವೇದನಾಶೀಲ ಅಂಶಗಳನ್ನು ಅಸೆಂಬ್ಲಿಯ ಭಾಗವಾಗಿಸಬಹುದು.

ಅದೇರೀತಿ ಕೆಲವು ನಿಗದಿಯಾದ ದಿನಗಳಲ್ಲಿ ಶಿಕ್ಷಕರೇ ನಡೆಸುವ ಅಸೆಂಬ್ಲಿ, ವಿದ್ಯಾರ್ಥಿ ಗುಂಪುಗಳಿಂದ ಅಸೆಂಬ್ಲಿ ನಿರ್ವಹಣೆ, ಅಸೆಂಬ್ಲಿಯ ವಿಶೇಷ ಸ್ವರೂಪಗಳು ಒಂದು ಶಾಲೆಯ ಕಾಣ್ಕೆಯನ್ನು ಅವಲಂಬಿಸಿದೆ. ವಿನ್ಯಾಸದ ದೃಷ್ಟಿಯಿಂದ ಮಕ್ಕಳ ಸೌಕರ್ಯಕ್ಕಾಗಿ ಕೆಲ ಸಮಯ ಕುಳಿತ ಭಂಗಿಯಲ್ಲಿ ಸಮಯವನ್ನು ನಿಗದಿ ಪಡಿಸಿ, ಅಗತ್ಯವಿದ್ದಾಗ ಮಾತ್ರ ನಿಲ್ಲಲೇ ಬೇಕಾದ ಚಟುವಟಿಕೆಗಳನ್ನು ಸಂಯೋಜಿಸಿದ ಸ್ವರೂಪದಲ್ಲಿ ಅಸೆಂಬ್ಲಿಯನ್ನು ನಿರ್ವಹಿಸಬಹುದು.

ಹೀಗೆ ಆಯಾ ವಿಭಾಗದ ಅಗತ್ಯಕ್ಕನುಗುಣವಾಗಿ ಹದಿನೈದು ನಿಮಿಷಗಳಿಂದ 25 ನಿಮಿಷಗಳ ವರವಿಗೂ ಈ ಅವಧಿಯನ್ನು ವಿನ್ಯಾಸಗೊಳಿಸಿ ಆಚರಿಸಬಹುದು, ಇದು ಆಯಾ ಶಾಲೆಯ ಅರ್ಥಾತ್ ಅಲ್ಲಿನ ವಿದ್ಯಾರ್ಥಿಗಳ ಅಗತ್ಯತೆಗೆ ಅನುಗುಣವಾಗಿದ್ದಷ್ಟು ಆಶಯವನ್ನು ಸಾಧಿಸಬಹುದು.

ಇಷ್ಟು ಸಣ್ಣ ಅವಧಿಯ ಚಟುವಟಿಕೆ ಮಗುವಿನ ಇಡಿ ದಿನದ ಕಲಿಕೆಯನ್ನು ಪ್ರಭಾವಿಸುತ್ತದೆ. ಸಂವಿಧಾನದ ಆಶಯಗಳಲ್ಲಿ ಒಂದಾದ ಸಮಾನತೆಯನ್ನು ಸಹಜವಾಗಿ ಪಸರಿಸುತ್ತದೆ. ಶಾಲೆಯ ಸಮವಸ್ತ್ರ ಎಲ್ಲರೂ ಒಂದೇ ಎಂಬ ಭಾವವನ್ನು ಗಾಢವಾಗಿ ಮೂಡಿಸುತ್ತದೆ. ಒಟ್ಟಾಗಿ ರಾಷ್ಟ್ರಗೀತೆಯ ಗಾಯನ ನಮ್ಮೆಲ್ಲರ ಒಗ್ಗಟ್ಟು ,ನಮ್ಮ ರಾಷ್ಟ್ರ ಎಂಬ ಅಭಿಮಾನವನ್ನು ಮೂಡಿಸುತ್ತದೆ. ಇದನ್ನು ಸಂಘಟಿಸಲು ಮಕ್ಕಳು ಪರಸ್ಪರ ಸಹಕರಿಸುತ್ತಾರೆ. ಮಂಡನೆಯಾಗುವ ಅಂಶಗಳನ್ನು ಮಕ್ಕಳು ತಾಳ್ಮೆಯಿಂದ ಆಲಿಸಿ ಸಹಕರಿದರೆ, ಅವರಿಗೆ ಅವಕಾಶದೊರೆತಾಗ ಅವರು ಮಂಡಿಸುತ್ತಾರೆ. ಇಲ್ಲಿ ಕಲಿಯುವ ಮತ್ತೊಂದು ಗುಣ ಸರದಿ. ಸರದಿಯನ್ನು ಅನುಸರಿಸುವುದು, ಇತರರ ಸರದಿಯನ್ನು ಗೌರವಿಸುವುದು ಪ್ರಜಾಪ್ರಭುತ್ವ ನಡವಳಿಕೆಯ ಆಧಾರ. ಇಷೆಲ್ಲಾ ಅವಕಾಶವನ್ನು ಶಾಲೆ ಸರಿಯಾಗಿ ಬಳಸಬೇಕಲ್ಲವೆ? ಇಲ್ಲಿ ಹಲವಾರು ಮಕ್ಕಳು ನಾಯಕತ್ವವನ್ನು ಬೆಳೆಸಿಕೊಳ್ಳಲು ಅವಕಾಶ, ಪ್ರೋತ್ಸಾಹ ದೊರೆಯುತ್ತದೆ. ಪರಸ್ಪರ ಸಹಪಾಠಿ ಕಲಿವು ಪ್ರಧಾನವೆನಿಸುತ್ತದೆ.ಆದರೆ ಕಾಟಾಚಾರಕ್ಕೆ ಎಂಬಂತೆ, ಯಾವ ಸಲಹೆ ಮಾರ್ಗದರ್ಶನಗಳು ದೊರೆಯದ, ಕೇವಲ ಬಿಸಿಲಿನ ಝಳವನ್ನು ಮಾತ್ರ ಉಣಬಡಿಸುವ ಶುಷ್ಕ ಚಟುವಟಿಕೆಯಾಗದಂತೆ ವಿನ್ಯಾಸಗೊಳಿಸುವ ಹೊಣಗಾರಿಕೆ ಎಲ್ಲಾ ಶಿಕ್ಷಕರದು ಮತ್ತು ಎಸ್ ಡಿ ಎಂ ಸಿ, ಪೋಷಕರದು ಏನಂತೀರಾ?

# ಲೇಖನ–5
# ಶಿಕ್ಷಣದ ಧ್ಯೇಯೋದ್ದೇಶಗಳು

ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಲು ಇಚ್ಛಿಸುವ ಹಾಗೂ ಮಾಡುವ ಪ್ರತಿಯೊಬ್ಬರೂ ಮುಖ್ಯವಾಗಿ ತಿಳಿದುಕೊಳ್ಳಬೇಕಾದ ಅಂಶಗಳಲ್ಲಿ ಎನ್.ಸಿ.ಎಫ್ 2005 ಪ್ರಮುಖವಾದದ್ದು. ಏಕೆಂದರೆ ಇದರಲ್ಲಿ ಶಿಕ್ಷಣ ಏಕೆ? ಏನು? ಹಾಗೂ ಹೇಗೆ? ಎಂಬ ಮೂರು ಪ್ರಶ್ನೆಗಳಿಗೆ ತಾತ್ವಿಕ ನೆಲೆಯಲ್ಲಿ ಚರ್ಚಿಸಲಾಗಿದೆ. ಶಿಕ್ಷಣದ ಯೋಜನಾಕಾರರರಿಂದ ಹಿಡಿದು ಶಿಕ್ಷಕರವರೆಗೆ ಈ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದರಲ್ಲಿ ಇರುವ ಮುಖ್ಯ ಅಂಶಗಳಲ್ಲಿ ಎನ್.ಸಿ.ಎಫ್ ಅಧ್ಯಾಯ 1.7 ರಲ್ಲಿ ನೀಡಲಾದ "ಶಿಕ್ಷಣದ ಧ್ಯೇಯೋದ್ದೇಶಗಳು' ಒಂದಾಗಿದೆ. ಇದು ಶಿಕ್ಷಕರಾದ ನಾವುಗಳು ತಿಳಿದುಕೊಳ್ಳುವುದು ಮುಖ್ಯವಾದುದಾಗಿದೆ. ಈ ಧ್ಯೇಯೋದ್ದೇಶಗಳು ಕೇವಲ ಒಂದೂವರೆ ಪುಟಗಳಲ್ಲಿ ಮುದ್ರಣಮಾಡಲಾಗಿದೆ. ಆದರೆ ಇದರಲ್ಲಿ ಬಳಸಿದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಬಹಳ ಸಮಯ ಬೇಕಾಗುತ್ತದೆ. ಇಲ್ಲಿ ಪದಗಳ ಪರಿಚಯವನ್ನು ಮಾಡಿಕೊಳ್ಳುವುದು ಮುಖ್ಯವಲ್ಲ ಬದಲಾಗಿ ಪರಿಕಲ್ಪನೆಗಳನ್ನು ಮತ್ತು ಅದರ ಸರಿಯಾದ ಆಶಯವನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಒಂದೊಂದು ಪದವು ತುಂಬಾ ಅರ್ಥಪೂರ್ಣ ಪದಗಳಾಗಿದ್ದು ಅವುಗಳು ವಿವಿಧ ಕ್ಷೇತ್ರಗಳಿಂದ ಬಂದವುಗಳಾಗಿರುತ್ತವೆ ಹಾಗಾಗಿ ಅವುಗಳ ಕ್ಷೇತ್ರದ ಪರಿಕಲ್ಪನೆಯ ಆಧಾರದ ಮೇಲೆಯೇ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಒಂದು ಕಡೆ ಸಂತ ಕಬೀರ ದಾಸರು ಹೇಳುತ್ತಾರೆ 'ಅಗರ್ ತುಮ್ ದೇಖಸಕ್ತೇಹೊ ತೊ ದೂಸರೋಂಕೊ ದಿಖಾಸಕ್ತೇ ಹೋ" ಅಂದರೆ ನೀನು ನೋಡಿದರೆ ಮಾತ್ರ ಇನ್ನೋಬ್ಬರಿಗೆ ತೋರಿಸಬಲ್ಲೆ ಎಂದು ಅರ್ಥ.

ಇತ್ತೀಚೆಗೆ ಶಿಕ್ಷಣವನ್ನು ವಿವರಿಸುವಾಗ ಕೆಲವರು ಶಿಕ್ಷಣ ಹಾಗೂ ತರಬೇತಿ ಎರಡರಲ್ಲಿ ವ್ಯತ್ಯಾಸವಿಲ್ಲ ಎಂಬ ಅಂಶವನ್ನು ಹೇಳುತ್ತಿದ್ದಾರೆ. ನಿಮಗೇನನಿಸುತ್ತದೆ?

ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಎರಡು ಶಬ್ದಗಳನ್ನು ಸ್ವಲ್ಪ ಹತ್ತಿರದಿಂದ ನೋಡುವ ಅವಶ್ಯಕತೆ ಇದೆ.

**ಮೊದಲಿಗೆ 'ತರಬೇತಿ'ಯನ್ನು ಅರ್ಥಮಾಡಿಕೊಳ್ಳೋಣ:** ನಾವು 'ತರಬೇತಿ' ಎಂಬ ಶಬ್ದವನ್ನು ಯಾವುದಕ್ಕೆ ಬಳಸುತ್ತೇವೆ? ಬಹುಶ: ಯಾವುದು ನಮಗೆ "ಕೌಶಲ"ಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ನೀಡುತ್ತದೆಯೋ ಅದಕ್ಕೆ ನಾವು ತರಬೇತಿ ಎಂದು ಹೇಳಬಹುದು. ಉದಾಹರಣೆಗೆ: ಕಂಪ್ಯೂಟರ್ ತರಬೇತಿ. ಇದಕ್ಕೆ ತರಬೇತಿ ಎಂದು ಏಕೆ ಹೇಳುತ್ತೇವೆಂದರೆ, ಇಲ್ಲಿ ಸಿ.ಪಿ.ಯು ವನ್ನು ಪ್ರಾರಂಭಿಸಬೇಕಾದರೆ ಯಾವ ಹೆಸರಿನ ಗುಂಡಿಯನ್ನು ಒತ್ತಬೇಕು. ಫೈಲ್ ಸೇವ್ ಮಾಡಲು ಯಾವ ಆಯ್ಕೆಯ ಒಳಗೆ ಹೋಗಿ ಯಾವ ಗುಂಡಿಯನ್ನು ಒತ್ತಬೇಕು ಇತ್ಯಾದಿಯಾದ ಮಾಹಿತಿಯನ್ನು ಅದು ಒದಗಿಸಿಕೊಡುತ್ತದೆ. ಅದನ್ನು ವಿವರಿಸಲು ಒಬ್ಬ ತರಬೇತುದಾರನಿರುತ್ತಾನೆ. ಮಾಹಿತಿಯೆಲ್ಲವೂ ಅವನಿಂದ ಕಲಿತವರಿಗೆ ವರ್ಗಾವಣೆಯಾಗುತ್ತದೆ. ನಿರಂತರ ಅಭ್ಯಾಸಮಾಡಿದರೆ ಮತ್ತು ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಂಡರೆ ನೀವು ಕೆಲವೇ ದಿನಗಳಲ್ಲಿ ಕಂಪ್ಯೂಟರ್‌ನ್ನು ನಿರಾಯಾಸವಾಗಿ ಬಳಸಬಹುದು. ಇನ್ನೂ ಹಲವು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಅಗರಬತ್ತಿ ಮಾಡುವ ತರಬೇತಿ, ಹೊಲಿಗೆ ಯಂತ್ರ ಬಳಸುವ ತರಬೇತಿ, ಬಟ್ಟೆ ಹೊಲೆಯುವ ತರಬೇತಿ, ಫಾರ್ಮೇಟ್ ತುಂಬುವ ತರಬೇತಿ ಇತ್ಯಾದಿ.

ಪ್ರಾಣಿಗಳಿಗೂ ಸಹ ತರಬೇತಿಯನ್ನು ನೀಡಲಾಗುತ್ತದೆ. (ಪಾವ್ ಲೋವ ಕಂಡಿಷನಿಂಗ್ ಥಿಯರಿ) ಅಂದರೆ ತರಬೇತಿ ನೀಡಲು ಪ್ರಕ್ರಿಯೆಗಳ ಅಥವಾ ಪರಿಕಲ್ಪನೆಗಳ ಒಳನೋಟಗಳನ್ನು ಹೇಳುವ ಅವಶ್ಯಕತೆಇಲ್ಲ. ಹಾಗೂ ತರಬೇತಿ ಪಡೆಯುವವರಿಗೆ ತರಬೇತಿಯಲ್ಲಿ ಕಲಿಸುವ ವಿಷಯಗಳ ಕುರಿತು ತಾರ್ಕಿಕ ಚಿಂತನೆ, ವಿಶ್ಲೇಷಣೆ, ಒಳನೋಟದ ಅರ್ಥೈಸಿಕೊಳ್ಳುವಿಕೆ ಇತ್ಯಾದಿ ಅಂಶಗಳ ಅವಶ್ಯಕತೆ ಇರುವುದಿಲ್ಲ.

**ಈಗ ಶಿಕ್ಷಣವನ್ನು ಮೇಲ್ಮಟ್ಟದಲ್ಲಿ ಅರ್ಥಮಾಡಿಕೊಳ್ಳೋಣ:** ಶಿಕ್ಷಣವೆಂದರೆ "ಅರ್ಥ ಕಟ್ಟಿಕೊಳ್ಳುವ ಪ್ರಕ್ರಿಯೆ ನಡೆಯಬೇಕಾಗುತ್ತದೆ". ಇದು ಏಕೆ? ಹೇಗೆ? ಏನು? ಎಂಬ ಪ್ರಶ್ನೆಗಳಿಗೆ ಉತ್ತರದ ಸ್ಪಷ್ಟತೆ ಕೂಡಾ ಇರುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ನೋಡೋಣ.

ಉದಾಹರಣೆ: ನಮ್ಮ ಮಗು ಚಿಕ್ಕವನಾಗಿದ್ದಾಗ, ಅವನಿಗೆ ಬ್ರಷ್ ಮಾಡುವುದನ್ನು ಕಲಿಸಿದ್ದೇವೆ ಏಕೆ? ಅವನಿಗೆ ಅದು ಇಷ್ಟವಿಲ್ಲದಿದ್ದರೂ ಒತ್ತಾಯ ಮಾಡಿ ಕಲಿಸುತ್ತೇವೆ ಏಕೆ? ಅವನು ಹಲ್ಲು ಉಜ್ಜದಿದ್ದಾಗ ನಾವು ಏನು ಮಾಡುತ್ತೇವೆ?

ಏಕೆಂದರೆ, ಹಲ್ಲನ್ನು ಉಜ್ಜುವುದು ***ಆರೋಗ್ಯಕ್ಕೆ ಒಳ್ಳೆಯದು*** ಇಲ್ಲವಾದರೆ, ಬಹಳ ಬೇಗ ಬಾಯಿಯಲ್ಲಿರುವ ಹಲ್ಲುಗಳೆಲ್ಲಾ ಉದುರಿಹೋಗುತ್ತವೆ. ಮಗು ದೊಡ್ಡವನಾದ ಮೇಲೆ ನಿರಂತರವಾಗಿ ಪ್ರತಿದಿನವು ಹಲ್ಲನ್ನು ಉಜ್ಜುತ್ತಾನೆ ಏಕೆ? ಅವನು ಇಷ್ಟು ವರ್ಷ ಹಲ್ಲು ಉಜ್ಜಿ ಅಭ್ಯಾಸವಾಗಿದೆ ಅದಕ್ಕಾ? ಅಥವಾ ಹಲ್ಲು ಉಜ್ಜುವುದರ ಪ್ರಾಮುಖ್ಯತೆ ಮತ್ತು ಉಪಯೋಗ ಅವನಿಗೆ **"ಅರ್ಥವಾಗಿದೆ"** ಅದಕ್ಕಾ? ಖಂಡಿತವಾಗಿಯೂ ಹೌದು. **"ಪ್ರಾಮುಖ್ಯತೆ ಅರ್ಥವಾಗಿದೆ"** ಅದಕ್ಕಾಗಿ ಶಿಕ್ಷಣದಲ್ಲಿ ಅರ್ಥ ಮಾಡಿಸುವಿಕೆ, ಸ್ವ–ಸಾಕ್ಷಾತ್ಕಾರವಾಗುವುದು ಮುಖ್ಯವಾಗುತ್ತದೆ. ಈ ಶಿಕ್ಷಣದ ಮೂಲಕ ವ್ಯಕ್ತಿ, ಕುಟುಂಬ, ಸಮಾಜ ಮತ್ತು ಪ್ರಕೃತಿಯ ಬಗ್ಗೆ ಅರ್ಥ ಮಾಡಿಸುತ್ತೇವೆ.

ಶೈಕ್ಷಣಿಕ ಚಿಂತಕರಲ್ಲಿ ಒಬ್ಬರಾದ ಜಿಡ್ಡು ಕೃಷ್ಣಮೂರ್ತಿರವರು ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಟೀಕಿಸುತ್ತಾ, ನಾವೆಲ್ಲರೂ ಮಕ್ಕಳನ್ನು ತರಬೇತಿಗೊಳಿಸುತ್ತಿದ್ದೇವೆ, ಇದರಿಂದ ಉದ್ಯೋಗ ಪಡೆಯುವುದರಲ್ಲಿ ಮಕ್ಕಳು ಯಶಸ್ವಿಯಾಗುತ್ತಿದ್ದಾರೆ. ಆದರೆ ವಿದ್ಯಾವಂತರಾಗಲು, ಉತ್ತಮ ಜೀವನ ನಡೆಸುವಲ್ಲಿ ವಿಫಲರಾಗುತ್ತಿದ್ದಾರೆ. ಆದಕಾರಣ ಶಾಲೆಗಳಲ್ಲಿ ಅರ್ಥಮಾಡಿಸುವ ಪ್ರಕ್ರಿಯೆ ನಡೆಯಬೇಕು ಆದರೆ ಪರೀಕ್ಷೆಗಳಿಗೆ ತರಬೇತಿಗೊಳಿಸುವ ಪ್ರಕ್ರಿಯೆ ನಡೆಬಾರದು ಎಂದು ಹೇಳಿರುತ್ತಾರೆ.

ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ನಾವು ಶಿಕ್ಷಕರಿಗೆ "ಶಿಕ್ಷಣವನ್ನು ತಿಳಿದುಕೊಳ್ಳಲು ಸಹಾಯಮಾಡುತ್ತಿದ್ದೇವೆ, ಆದರೆ ತರಬೇತಿಗೊಳಿಸುತ್ತಿಲ್ಲ". ಶಿಕ್ಷಣವೆಂಬುದು ದೊಡ್ಡ ಅರ್ಥವುಳ್ಳದ್ದು, ತರಬೇತಿಯನ್ನು ಶಿಕ್ಷಣವೆಂದು ಹೇಳಲು ಸಾಧ್ಯವಿಲ್ಲ ಬದಲಾಗಿ ಅದರ ಒಂದು ಭಾಗವಾಗಿದೆ ಎಂಬುದನ್ನು ನೋಡಬಹುದಾಗಿದೆ.

**ಶಿಕ್ಷಣದ ಧ್ಯೇಯಗಳು ಏಕಕಾಲದಲ್ಲಿ ಇಂದಿನ ಅಗತ್ಯಗಳು ಮತ್ತು ಸಮಾಜದ ದೀರ್ಘಕಾಲಿಕ ಮೌಲ್ಯಗಳು ಹಾಗೂ ಆಕಾಂಕ್ಷೆಗಳು, ಸಮುದಾಯದ ಆತಂಕಗಳು ಮತ್ತು ಮಾನವನ ಉದಾರ ಆದರ್ಶಗಳನ್ನು ಬಿಂಬಿಸುತ್ತವೆ.**

ಈ ಶಬ್ದಗಳ ಅರ್ಥವೇನು? ಮತ್ತು ಶಿಕ್ಷಕನಾಗಿ ನಾನು ಮಾಡುತ್ತಿರುವ ಕಾರ್ಯಕ್ಕೂ ಹಾಗೂ ಈ ಆಶಯಗಳಿಗೂ ಏನು ಸಂಬಂಧ? ಎಂದು ಯೋಚಿಸುತ್ತಿರಬಹುದಲ್ಲವೇ. ಇದನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡೋಣ.

**ಸಮಾಜದ ಇಂದಿನ ಅಗತ್ಯತೆಗಳು:**ಸಮಾಜದ ಅಗತ್ಯತೆಗಳು ಕಾಲಕಾಲಕ್ಕೆ ಬದಲಾಗುತ್ತಲೇ ಬರುತ್ತವೆ ಅದರ ಬದಲಾವಣೆಗೆ ಹೊಂದಿಕೊಳ್ಳಲು ಸಮಾಜದ ಜನರಾದ ನಾವೆಲ್ಲರೂ ಬದಲಾವಣೆಯ ಪ್ರಕ್ರಿಯೆಗೆ ಒಳಗೊಳ್ಳಬೇಕಾಗುತ್ತದೆ. ಈ ಹಿಂದಿನ ಸಮಾಜವನ್ನು ಗಮನಿಸಿದರೆ, ಹೆಚ್ಚುಪಾಲು ಕೃಷಿ ಆಧಾರಿತ ಚಟುವಟುಕೆಗಳೇ ಇರುತ್ತಿದ್ದವು. ಬಹು ಹೆಚ್ಚು ಪಾಲಿನ ಜನರು ಕುಂಬಾರಿಕೆ, ಚಮ್ಮಾರಿಕೆ, ಹೀಗೆ ಬೇರೆ ಬೇರೆ ರೀತಿಯ ಕೆಲಸಗಳಿಂದ ಇತರರ ಅಗತ್ಯಗಳನ್ನು ಪೂರೈಸುವ ಮತ್ತು ಆ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆ ಸಂದರ್ಭದ ಶಿಕ್ಷಣದ ಬಹು ದೊಡ್ಡ ಉದ್ದೇಶವು ಮಕ್ಕಳಿಗೆ ಆ ಕೆಲಸಗಳಿಗೆ ತೊಡಗಿಸಿಕೊಳ್ಳಲು ಬೇಕಾದ ಕೌಶಲಗಳನ್ನು ಒದಗಿಸಿಕೊಡುವುದಾಗಿರುತ್ತಿತ್ತು. ಅಂದರೆ ಕೃಷಿ ಕೆಲಸ ಮಾಡಲು ಬೇಕಾಗುವ ಸಲಕರಣೆಗಳು, ಅವುಗಳನ್ನು ಬಳಸುವ ಪರಿ, ಸಂದರ್ಭ ಇವೇ ಮೊದಲಾದವುಗಳಾಗಿರುತ್ತಿದ್ದವು. ಅಲ್ಲಿ ಈಗ ನಾವು ನೋಡುವ ಶಾಲೆಗಳಿರಲಿಕ್ಕಿಲ್ಲ ಬದಲಾಗಿ ಕುಟುಂಬ, ಹಿರಿಯರು ಹಾಗೂ ಸಮಾಜವೇ ಈ ರೀತಿಯ ಶಿಕ್ಷಣವನ್ನು ಕಿರಿಯರಿಗೆ ನೀಡುತ್ತಿದ್ದವು. ಅಂದರೆ ಮಕ್ಕಳು ಕೆಲಸಗಳಲ್ಲಿ ತೊಡಗಿಸಿಕೊಳ್ಳುವದರ ಮೂಲಕ ಅನುಭವವನ್ನು ಪಡೆದುಕೊಳ್ಳುತ್ತಿದ್ದರು. ಹಾಗೂ ಸಮಾಜದ ಅಗತ್ಯತೆಗಳಿಗೆ ಅನುಗುಣವಾಗಿ ಅಂದಿನ ಶಿಕ್ಷಣ ಅದನ್ನು ಪೂರೈಸುತ್ತಿತ್ತು. ಈಗಿನ 21ನೇ ಶತಮಾನದ ಸಮಾಜವನ್ನು ನಾವು ಗಮನಿಸಿದರೆ, ಔಪಚಾರಿಕ ಶಿಕ್ಷಣದ ಜೊತೆಗೆ ಮಕ್ಕಳು ಇಂದಿನ ಅಗತ್ಯತೆಗಳಿಗೆ ಹೊಂದಿಕೊಳ್ಳಲು ಬೇಕಾದ ಜ್ಞಾನ ಹಾಗೂ ಕೌಶಲಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇಂದು ಕಂಪ್ಯೂಟರ್ ಯುಗ. ಎಲ್ಲಾ ರೀತಿಯ ಕಾರ್ಖಾನೆ ಹಾಗೂ ಕೈಗಾರಿಕೆಗಳು ಯಂತ್ರಗಳ ಮೂಲಕ ಕೆಲಸಮಾಡುತ್ತಿವೆ. ಹಾಗಾಗಿ 'ಕಂಪ್ಯೂಟರ್ ಹಾಗೂ ತಾಂತ್ರಿಕತೆಯ ಕಲಿಕೆಯು' ಒಂದು ಮುಖ್ಯವಾದ ಅಗತ್ಯತೆಯಾಗಿದೆ. ಜೊತೆಗೆ ಕೆಲಸ ಕಾರ್ಯಗಳು ಪ್ರಾಂತವನ್ನು ಬಿಟ್ಟು ಮುನ್ನಡೆದಿವೆ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬರುತ್ತಿರುವ ನವೀನ ರೀತಿಯ ಜ್ಞಾನವನ್ನು ತಿಳಿಯಲು ಹಾಗೂ ವ್ಯವಹರಿಸಲು "ಇಂಗ್ಲೀಷ್" ಭಾಷೆಯ ಕಲಿಕೆ ಮತ್ತು ಉಪಯೋಗವು ಅವಶ್ಯಕ ಹಾಗು ಅನಿವಾರ್ಯವಾಗುತ್ತಿದೆ. ತಂತ್ರಜ್ಞಾನವು ಮನುಷ್ಯನ ಜೀವನದ ಭಾಗವಾಗಿರುವುದರಿಂದ ಅದನ್ನೂ ಕಲಿಯುವ ಅಗತ್ಯತೆ ಇದೆ. ಹೀಗೆ ಸಮಾಜ ಮುಂದುವರೆದಂತೆ ಅದರ ವೇಗಕ್ಕೆ ಮಕ್ಕಳು ಹೊಂದಿಕೊಳ್ಳುವಂತಾಗಲು ಶಿಕ್ಷಣದಲ್ಲಿ ಈ ರೀತಿಯಲ್ಲಿ ಮಕ್ಕಳನ್ನು ಅಣಿಗೊಳಿಸುವ ಕಾರ್ಯಗಳು ನಡೆಯಬೇಕಾಗುತ್ತದೆ. ಹೀಗೆ ಇನ್ನೂ ಅನೇಕ ಸದ್ಯದ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಶಿಕ್ಷಣವು ಇರಬೇಕಾಗುತ್ತದೆ.

**ಸಮಾಜದ ದೀರ್ಘಕಾಲಿಕ ಮೌಲ್ಯಗಳು** (LASTINGVALUES):

ಮೌಲ್ಯಗಳು ಎಂದರೆ ಮಾನವರಾದ ನಾವು ಸುಖ, ಶಾಂತಿ ಹಾಗೂ ನೆಮ್ಮದಿಯಿಂದ ಬದುಕಲು ಬೇಕಾದ ಕೆಲವು ವಿಷಯಗಳನ್ನು ನಾವು ಮೌಲ್ಯಗಳೆಂದು ಬಹು ಕಾಲದಿಂದಲೂ ನಂಬಿಕೊಂಡು ಬಂದಿದ್ದೇವೆ. ಈ ಮೌಲ್ಯಗಳು ಮಾನವರಾದ ನಮಗೆ ತಿಳುವಳಿಕೆ ಬಂದಾಗಿನಿಂದ ಪ್ರಾರಂಭಿಸಿದ್ದು ಅದರಿಂದ ಒಳಿತು ಆಗುತ್ತಿರುವುದರಿಂದ ತಲೆತಲಾಂತರದವರೆಗೆ ಅವುಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದೇವೆ. ಉದಾಹರಣೆಗೆ: ಸತ್ಯವನ್ನು ನುಡಿಯಬೇಕು. ಇದರಿಂದ ವೈಯಕ್ತಿಕವಾಗಿ ಹಾಗೂ ಸಮಾಜಕ್ಕೆ ಒಳಿತು ಸಂಭವಿಸುತ್ತದೆ. ಇತರರಿಗೆ ಮೋಸವನ್ನು ಮಾಡಬಾರದು. ಹೀಗೆ ಸತ್ಯ, ಶಾಂತಿ ಅಹಿಂಸೆ ಸೇರಿದಂತೆ ಅನೇಕ ಮೌಲ್ಯಗಳನ್ನು ನಾವು ನಂಬಿಕೊಂಡು ನಡೆದುಕೊಂಡು ಬಂದಿದ್ದೇವೆ.

"ದೀರ್ಘಕಾಲಿಕ ಮೌಲ್ಯಗಳೆಂದರೆ" ಮೌಲ್ಯಗಳು ಯಾವ ಕಾಲಕ್ಕೂ ಮೌಲ್ಯವಾಗಿಯೇ ಇರುವುದು. ಉದಾಹರಣೆಗೆ ಇತರರಿಗೆ ಗೌರವವನ್ನು ನೀಡುವುದು ಈ ಮೌಲ್ಯವು ಇವತ್ತಿಗೂ ಮುಖ್ಯ ಹಾಗೂ ಮುಂದಿನ ನೂರು ವರ್ಷಗಳನಂತರವು ಇತರರಿಗೆ ಗೌರವ ಬೇಕಾಗುತ್ತದೆ ಮತ್ತು ಮೌಲ್ಯವಾಗಿ ಉಳಿಯುತ್ತವೆ. ಅದಕ್ಕೆ ನಾವೂ ದೀರ್ಘಕಾಲಿಕ ಮೌಲ್ಯಗಳು ಎಂದು ಕರೆಯುತ್ತೇವೆ. ಒಂದುವೇಳೆ ಯಾವುದಾದರೂ ಮೌಲ್ಯವು ತಾತ್ಕಾಲಿಕವಾಗಿ ಅವಶ್ಯಕವಿದ್ದು ಮುಂದಿನ ದಿನಗಳಿಗೆ ಅವಶ್ಯಕವಲ್ಲ ಮತ್ತು ಅನುಸರಿಸುವುದಿಲ್ಲ ಎಂದಾದರೆ ಅದು ಮೌಲ್ಯವೆನಿಸಿಕೊಳ್ಳುವುದಿಲ್ಲ.

"ಈ ದೀರ್ಘಕಾಲಿಕ ಮೌಲ್ಯಗಳಲ್ಲಿ ಸಹೋದರತೆ, ಸಮಾನತೆ, ಇತರರಿಗೆ ಗೌರವ ಕೊಡುವುದು, ಇತರರನ್ನು ಪ್ರೀತಿಸುವುದು, ಶಾಂತಿ ಹೀಗೆ ಇನ್ನು ಹಲವು ದೀರ್ಘಕಾಲಿಕ ಮೌಲ್ಯಗಳಾಗಿರುತ್ತವೆ ಮತ್ತು ಶಿಕ್ಷಣವು ಈ ಮೌಲ್ಯಗಳನ್ನು ಪೋಷಿಸಬೇಕು ಮತ್ತು ಅಭಿವೃದ್ಧಿ ಪಡಿಸಬೇಕು ಎಂದು ಶಿಕ್ಷಣದ ಉದ್ದೇಶಗಳಲ್ಲಿ ಪ್ರಸ್ತಾಪಿಸಲಾಗಿದೆ. ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಬಳಸಲಾದ ಮೌಲ್ಯಗಳನ್ನು (ಸೋದರತೆ, ಭ್ರಾತೃತ್ವ, ಸಮಾನತೆ, ಸ್ವಾತಂತ್ರ್ಯ) ಈಡೇರಿಸಲು ಶಾಲೆಗಳು ಹೆಚ್ಚು ಕೆಲಸ ಮಾಡಬೇಕು ಎಂಬುದು ಶಿಕ್ಷಣದ ಉದ್ದೇಶಗಳಲ್ಲಿನ ಆಶಯ".

**ಸಮುದಾಯದ ಮಹತ್ವಾಕಾಂಕ್ಷೆಗಳು: Aspirationsofsociety**

ಪ್ರತಿಯೊಬ್ಬ ವ್ಯಕ್ತಿಗೂ, ಕುಟುಂಬಕ್ಕೂ ನಮ್ಮದೇ ಆದ ಮಹತ್ವಾಕಾಂಕ್ಷೆಗಳಿರುತ್ತವೆ. ಉದಾಹರಣೆಗೆ, ನಮ್ಮ ಮನೆಯಲ್ಲಿ ಹುಟ್ಟಿರುವ ಅಣ್ಣ ತಮ್ಮಂದಿರೆಲ್ಲರೂ ಹೀಗೆಯೇ ಸಹೋದರ ಭಾವನೆಯಿಂದ ಕೂಡಿ ಇರಬೇಕು, ಮನೆಯವರೆಲ್ಲರೂ ಒಬ್ಬರನ್ನೊಬ್ಬರು ಗೌರವಿಸಬೇಕು, ಯಾರು ಹೆಚ್ಚು ಕಡಿಮೆ ಎಂಬ ಭಾವನೆ ಬರಬಾರದು, ಸಮಾಜದ ಬದಲಾವಣೆಗೆ ಹೊಂದಿಕೊಂಡು ಬಾಳಬೇಕು, ಹೀಗೆ ಇನ್ನೂ ಹಲವಾರು ಮಹತ್ವಾಕಾಂಕ್ಷೆಗಳು ವೈಯುಕ್ತಿಕವಾಗಿ ಹಾಗೂ ಕೌಟುಂಬಿಕವಾಗಿ ಇರಬಹುದು. ಅದೇ ರೀತಿಯಾಗಿ ಪ್ರತಿ ಸಮುದಾಯಕ್ಕೂ ಅದರದ್ದೇ ಆದ ಮಹತ್ವಾಕಾಂಕ್ಷೆಗಳಿರುತ್ತವೆ. ಈಗ ಭಾರತದ ಸಮುದಾಯದ ಮಹತ್ವಾಕಾಂಕ್ಷೆಗಳು ಈ ಕೆಳಗಿನಂತಿವೆ:

1. ಪರಸ್ಪರ ನಂಬಿಕೆ
2. ಕೂಡಿಬಾಳುವಿಕೆ
3. ಎಲ್ಲಾ ಜನರ ಸುರಕ್ಷತೆ
4. ಎಲ್ಲರನ್ನು ಗೌರವಿಸುವುದು
5. ಅಂಗವಿಕಲರ ಮತ್ತು ದುರ್ಬಲ ವರ್ಗಗಳ ಬಗ್ಗೆ ಕಾಳಜಿಯನ್ನು ವಹಿಸುವುದು
6. ಮಹಿಳೆಯರನ್ನು ಮನೋರಂಜನಾ ವಸ್ತುವನ್ನಾಗಿ ನೋಡದಿರುವುದು
7. ಇಡೀ ಸಮಾಜದ ಜನರು "ವಸುದೈವ ಕುಟುಂಬಕಂ" ಎಂಬಂತೆ ಒಂದೇ ಮನೆಯ ಸದಸ್ಯರಂತೆ ಜೀವನ ನಡೆಸುವುದು
8. ಮಾನವೀಯತೆಯಿಂದ ಕೂಡಿದ ವರ್ತನೆಯನ್ನು ಎಲ್ಲರೂ ಮೈಗೂಡಿಸಿಕೊಳ್ಳುವುದು ಇತ್ಯಾದಿ.

**ಸಮುದಾಯದ ಆತಂಕಗಳು:**

ಇಡೀ ಭಾರತವನ್ನು ಒಂದು ಸಮುದಾಯವಾಗಿ ನಾವು ತೆಗೆದುಕೊಂಡಾಗ, ಎಷ್ಟೆಲ್ಲಾ ಕ್ಷೇತ್ರಗಳಲ್ಲಿ ನಾವು ಮುಂದುವರೆಯುತ್ತಿದ್ದರೂ ಕೆಲವು ವಿಷಯಗಳು ನಮ್ಮನ್ನು ಆತಂಕಕ್ಕೆ ಎಡೆಮಾಡಿಕೊಡುತ್ತಿರುವಲ್ಲಿ 'ಆತಂಕಗಳು' ಎಂಬ ಶಬ್ದವನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ "ಅಭಿವೃದ್ಧಿಗೆ ಅಡ್ಡಿಯಾಗಿರುವ ಅಂಶಗಳು/ ಅಥವಾ ಈಗ ಇದನ್ನು

ಬಗೆಹರಿಸದಿದ್ದರೆ ಮುಂದೆ ಅದು ಸಮಾಜ ಅಥವಾ ದೇಶದ ಅಭಿವೃದ್ಧಿಗೆ ಅಡ್ಡಿಯಾಗಬಹುದು" ಎಂದುಕೊಳ್ಳಬಹುದು. ಸದ್ಯಕ್ಕೆ ಭಾರತ ದೇಶವನ್ನು ಗಮನಿಸುವಾಗ ಏನಾದರೂ ಆತಂಕಗಳಿವೆಯೇ? ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಂಡರೆ, ಕೆಲವು ಪ್ರಮುಖ ಆತಂಕಗಳು ನಮ್ಮ ಕಣ್ಣೆದುರಿಗೆ ಬರುತ್ತವೆ. ಅವುಗಳಲ್ಲಿ "ಜನಸಂಖ್ಯೆ ನಮ್ಮ ನಿಯಂತ್ರಣ ಮೀರಿ ಬೆಳೆಯುತ್ತಿರುವುದು ಒಂದಾಗಿದೆ. ಜನರು ದೇಶದ ಆಸ್ತಿ ಆದರೆ ಜನಸಂಖ್ಯೆ ಮಿತಿಮೀರಿ ಬೆಳೆದರೆ ಎಲ್ಲರಿಗೂ ಮೂಲ ಸೌಕರ್ಯಗಳನ್ನು ಒದಗಿಸುವುದು ಬಹಳ ದೊಡ್ಡ ಕೆಲಸವಾಗುತ್ತದೆ ಹಾಗೂ ಇದು ಬೇರೆ ಸಮಸ್ಯೆಗಳನ್ನೂ ಹುಟ್ಟುಹಾಕುತ್ತದೆ." ಉದಾ: ಪ್ರತಿಯೊಬ್ಬರು ಮನೆಯನ್ನು ಹೊಂದಬೇಕಾದರೆ ಕಾಡಿನ ನಾಶವಾಗಬೇಕು ಅದರಿಂದ ಪರಿಸರದಲ್ಲಿ ಅಸಮತೋಲನ ಉಂಟಾಗುತ್ತದೆ. ವಾಹನ ದಟ್ಟಣೆ, ಆಹಾರೋತ್ಪಾದನೆ, ರಕ್ಷಣೆ ಹೀಗೆ ಅನೇಕ ರೀತಿ ಸಮಸ್ಯೆಗಳು ಒಂದಕ್ಕೆ ಹೊಂದಿಕೊಂಡಂತೆ ಮತ್ತೊಂದು ಸಮಸ್ಯೆಗಳು ಹುಟ್ಟಿಕೊಳ್ಳಲಾರಂಭಿಸುತ್ತವೆ, ಹೀಗೆಯೇ ಭ್ರಷ್ಟಾಚಾರ ಎಲ್ಲೆಡೆಯೂ ಕಂಡುಬರುತ್ತಿರುವುದು, ಜಾತಿ ಆಧಾರಿತ ರಾಜಕೀಯ ಅಸ್ತಿತ್ವದಲ್ಲಿರುವುದು, ಮಹಿಳೆಯರಿಗೆ ಭದ್ರತೆ ಇಲ್ಲದಿರುವುದು, ಬಡತನ ಹಾಗೂ ಹಸಿವಿನ ನಿರ್ಮೂಲನೆ ಇನ್ನೂ ಆಗದಿರುವುದು, ಭಾರತದ ಕೆಲವು ಪ್ರತಿಶತ ಜನರು ಇನ್ನೂ ಶಿಕ್ಷಣವನ್ನು ಪಡೆಯದೇ ಇರುವುದು ಇತ್ಯಾದಿಗಳಾಗಿರುತ್ತವೆ. ಇಂದು ಜಾಗತಿಕ ಮಟ್ಟದಲ್ಲಿ ಚರ್ಚೆಯಲ್ಲಿರುವ ಬಹುದೊಡ್ಡ ಆತಂಕವೆಂದರೆ ಜಾಗತಿಕ ತಾಪಮಾನ. ಇದು ಮನುಷ್ಯರಾದ ನಮ್ಮ ವರ್ತನೆಯ ಪರಿಣಾಮವಾಗಿದೆ. ನಾವು ನಾಶಪಡಿಸುತ್ತಿರುವ ಪರಿಸರ, ಉರಿಸುತ್ತಿರುವ ಇಂಗಾಲ ಹಾಗೂ ಪರಿಸರದ ಕಾಳಜಿ ಬಗ್ಗೆ ನಿರ್ಲಕ್ಷ್ಯವೇ ಕಾರಣವಾಗಿದೆ. ಇದರ ಪರಿಣಾಮವಾಗಿ ಎಲ್ಲೆಡೆ ತಾಪಮಾನದಲ್ಲಿ ಏರುಪೇರುಗಳಾಗುತ್ತಿದ್ದು ಪರಿಸರದ ಅಸಮತೋಲನಕ್ಕೆ ಕಾರಣವಾಗಿದೆ. ಇದರ ಪರಿಣಾಮ ಕೃಷಿ, ಕುಡಿಯುವ ನೀರು, ಆಹಾರೋತ್ಪಾದನೆ ಜೀವನ ಹೀಗೆ ಎಲ್ಲದರ ಮೇಲೆ ಪರಿಣಾಮ ಬೀರುತ್ತಿದೆ. ನಾವು ಪರಿಸರ ನಾಶದ ವಿಷಯ ಮಾತನಾಡುವಾಗ ಅದರಿಂದ ಮನುಷ್ಯನಿಗೆ ಆಗುತ್ತಿರುವ ಪರಿಣಾಮದಬಗ್ಗೆಯಷ್ಟೇ ಮಾತನಾಡುತ್ತೇವೆ ಆದರೆ ಅದರಿಂದ ಪ್ರಾಣಿ/ಪಕ್ಷಿ ಹಾಗೂ ಕೀಟಗಳ ಸಂಕುಲಕ್ಕೆ ಆಗುತ್ತಿರುವ ನಷ್ಟದಬಗ್ಗೆ ನಾವು ಮಾತನಾಡುವುದೇ ಇಲ್ಲ. ಇದೂ ಕೂಡಾ ಒಂದು ಬಹುದೊಡ್ಡ ಆತಂಕ. ಎಷ್ಟೋ ಪ್ರಬೇಧಗಳು ಇಂದು ಕಾಣಸಿಗುವುದೇ ಇಲ್ಲ ಮತ್ತಷ್ಟು ಪ್ರಭೇದಗಳು ಅಳಿವಿನ ಅಂಚಿನಲ್ಲಿವೆ. ಇವೆಲ್ಲವೂ ನಮ್ಮ ವರ್ತನೆಯ ಫಲವೇ ಆಗಿದೆ.

ಇನ್ನು ಶಾಲೆಯನ್ನು ಸಮುದಾಯದ ಒಂದು ಭಾಗವಾಗಿ ತೆಗೆದುಕೊಂಡಾಗ, ಅದು ಕೂಡ ಒಂದು ಸಮುದಾಯದಲ್ಲಿ ಸ್ಥಾಪಿಸಲಾಗಿದೆ. ಇನ್ನು ಆ ಸಮುದಾಯದಲ್ಲಿ ಏನಾದರೂ ಆತಂಕಗಳಿವೆಯಾ ಎಂದು ಪ್ರಶ್ನಿಸಿಕೊಂಡಾಗ ಖಂಡಿತವಾಗಿಯೂ ನಮಗೆ ಆ ಸಮುದಾಯದ ಆತಂಕಗಳಾದ, ಅನಕ್ಷರತೆ, ಮೂಢನಂಬಿಕೆಗಳು, ಬಾಲ್ಯ ವಿವಾಹ, ಹೆಣ್ಣು ಮಕ್ಕಳನ್ನು ಬೇಗನೆ ಶಾಲೆ ಬಿಡಿಸುವುದು, ಜಾತೀಯತೆ ಇತ್ಯಾದಿ. ಇಲ್ಲಿ ಸಮುದಾಯದ ಆತಂಕಗಳನ್ನು ಶಾಲೆ/ಶಿಕ್ಷಣ ದೂರಮಾಡಬೇಕೆಂದರೆ ಹೇಗೆ ಎಂಬ ಪ್ರಶ್ನೆ ಬರಬಹುದು. ಆದರೆ ನೇರವಾಗಿ ಸಮುದಾಯದಲ್ಲಿದ್ದು ಪ್ರತಿನಿತ್ಯ ಇದೇ ಕೆಲಸ ಮಾಡುವುದೆಂದರ್ಥವಲ್ಲ ಬದಲಾಗಿ, ಆ ಸಮುದಾಯದ ಪ್ರಜೆಗಳಾಗುವವರು ಇಂದು ನಮ್ಮ ತರಗತಿಯ ಕೋಣೆಯಲ್ಲಿದ್ದಾರೆ. ಈ ಆತಂಕಗಳ ಬಗ್ಗೆ ಆ ಮಕ್ಕಳ ಜೊತೆಗೆ ನಿರಂತರವಾಗಿ ಕೆಲಸ ಮಾಡುತ್ತಾ ಹೋದಂತೆ ಅವರು ಕುಟುಂಬಗಳಲ್ಲಿ ಇದನ್ನು ಪ್ರಶ್ನೆ ಮಾಡುತ್ತಾರೆ, ನಂತರ ತಮ್ಮ ವರ್ತನೆಯಲ್ಲಿ ಅಳವಡಿಸಿಕೊಳ್ಳುತ್ತಾರೆ ಹಾಗೂ ಮುಂದೆ ಸಮುದಾಯದ ಈ ಆತಂಕಗಳನ್ನು ಕಡಿಮೆ ಮಾಡುವಲ್ಲಿ ಅವರ ಕೈ ಜೋಡಿಸುತ್ತಾರೆ. ಹೀಗೆ ಸಮಾಜವನ್ನು ತಿದ್ದುವ ಸಾಮಾಜಿಕ ಪರಿವರ್ತನೆಯನ್ನು ಮಾಡುವ ಶಕ್ತಿ ಶಿಕ್ಷಣಕ್ಕಿದೆ ಮತ್ತು ಇದನ್ನೆ ಮಾಡುವ ಸಂಕಲ್ಪ ಶಿಕ್ಷಣದ ಉದ್ದೇಶಗಳಿಗಿದೆ. ಬೇಡಿಕೆಗಳಿಗೆ ಮತ್ತು ಬಯಕೆಗಳಿಗೆ ವ್ಯತ್ಯಾಸವಿದೆ. ಅವೆರಡೂ ಒಂದೇ ಎಂದು ಕೆಲವೊಮ್ಮೆ ಭಾವಿಸಲಾಗುತ್ತದೆ.

| **ಮಹತ್ವಾಕಾಂಕ್ಷೆಗಳು** | **ಸದ್ಯದ ಕಾಳಜಿಗಳು** | **ಸದ್ಯದ ಅಗತ್ಯತೆಗಳು** |
|---|---|---|
| ನಮ್ಮ ಸಮಾಜ ಹೀಗಿರಬೇಕೆಂಬ ಮಹತ್ವಾಕಾಂಕ್ಷೆ. ಒಂದು ವೇಳೆ ಆ ಮಹತ್ವಾಕಂಕ್ಷೆಯು ಈಡೇರದಿದ್ದರೆ ಯಾರಿಗೂ ಧಕ್ಕೆಯಾಗುವುದಿಲ್ಲ.<br>ಉದಾ: ನಮ್ಮ ಸಮಾಜದಲ್ಲಿ ಪ್ರತಿಯೊಬ್ಬರನ್ನು ಯಾವುದೇ ಭೇದವಿಲ್ಲದೆ ಒಂದೇ ರೀತಿಯಲ್ಲಿ | ಇದನ್ನು ನಾವು ಅನುಸರಿಸದಿದ್ದರೆ ಸಮಾಜಕ್ಕೆ ಏನೋ ನಷ್ಟ ಸಂಭವಿಸುತ್ತದೆ.<br>ಉದಾಹರಣೆ:<br>ಎಲ್ಲರಿಗೆ ಸುರಕ್ಷತೆಯ ಭರವಸೆ, ಎಲ್ಲಾರಿಗೂ ಶಿಕ್ಷಣ, ಪರಿಸರದ ಬಗ್ಗೆ ಕಾಳಜಿ, ಬಾಲ್ಯವಿವಾಹ ನಿಲ್ಲಿಸುವಿಕೆ | ಕಂಪ್ಯೂಟರ್ ಶಿಕ್ಷಣ, ದೈಹಿಕ ಶಿಕ್ಷಣ (ನಮ್ಮ ಮಕ್ಕಳು ಹೆಚ್ಚು ಭೌತಿಕ ಆಟದಲ್ಲಿ ತೊಡಗುತ್ತಿಲ್ಲ), ಇಂಗ್ಲೀಷ್ ಕಲಿಕೆ,ಬಾಲ್ಯ ವಿವಾಹದ ದುಷ್ಪರಿಣಾಮದ ಬಗ್ಗೆ ಎಲ್ಲರಿಗೂ ಶಿಕ್ಷಣ ಇತ್ಯಾದಿ. |

| | | |
|---|---|---|
| ಕಾಣಬೇಕು. | ಇತ್ಯಾದಿ. | |

ಶಿಕ್ಷಣದ ಗುರಿಗಳನ್ನು ಮಾತನಾಡುವಾಗ ಸಮಾಜವು, ಶಾಲೆ ಹಾಗೂ ಶಿಕ್ಷಕರಿಂದ ಹಲವಾರು ನಿರೀಕ್ಷೆಗಳನ್ನು ಇಟ್ಟುಕೊಳ್ಳುತ್ತದೆ ಮತ್ತು ನಿರ್ದೇಶನಗಳನ್ನೂ ನೀಡುತ್ತದೆ. ಅದರ ಪ್ರಕಾರ ಶಿಕ್ಷಕರು ಶಿಕ್ಷಣದ ಉದ್ದೇಶಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ನಿರೀಕ್ಷಿಸುತ್ತದೆ. ಉದ್ದೇಶಗಳಬಗ್ಗೆ ಪರಿಕಲ್ಪನೆ ಸ್ಪಷ್ಟವಿದ್ದಾಗ ಶಿಕ್ಷಕರು ತಾವು ತರಗತಿಯಲ್ಲಿ ಮಾಡುವ ಪ್ರತಿಯೊಂದು ಚಟುವಟಿಕೆಯನ್ನು ಮಕ್ಕಳ ಉಜ್ವಲ ಭವಿಷ್ಯದ ನಿರ್ಮಾಣದ ಭಾಗವಾಗಿ ಅಥವಾ ಅದಕ್ಕೆ ಸಹಕರಿಸಲು ಎಂದು ನೋಡಲು ಸಹಾಯವಾಗುತ್ತದೆ ಬದಲಾಗಿ ಅದನ್ನು ಒಂದು ಯಾಂತ್ರಿಕವಾದ ಚಟುವಟಿಕೆಯನ್ನಾಗಿ ನೋಡದಿರಲೂ ಸಹಕರಿಸುತ್ತದೆ. ಯಾಂತ್ರಿಕ ಚಟುವಟಿಕೆ ಎಂದರೆ, ನಾವು ತರಗತಿಯಲ್ಲಿ ಪಾಠ ಮಾಡಿದ ನಂತರ ಮಗುವು ಪ್ರಶ್ನೆಗಳಿಗೆ ಉತ್ತರಿಸಬೇಕು ಅಥವಾ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕು ಎಂಬುದೇ ಪಾಠದ ಉದ್ದೇಶವಾಗಿರಬಾರದು ಬದಲಾಗಿ ಮಗುವು ಪಾಠವನ್ನು ಅರ್ಥಮಾಡಿಕೊಂಡು ಮತ್ತು ಅದರ ಜೀವನದಲ್ಲಿ ಅದನ್ನು ಬಳಸಲು ಸಮರ್ಥವಾಗಿಸಲು ಆಗಿರಬೇಕು. ಪಾಠಬೋಧನೆಯು ಸರಿಯಾಗಿ ಅರ್ಥವಾದರೆ ತಾನೇ ಉತ್ತರಬರೆಯುತ್ತಾನೆ. ಆದರೆ, ಉತ್ತರ ಬರೆಯುವುದಕ್ಕಾಗಿಯೇ ಪಾಠವನ್ನು ಮಾಡಿದರೆ ಅದು ಯಾಂತ್ರಿಕವಾದ ಚಟುವಟಿಕೆ ಎನಿಸಿಕೊಂಡುಬಿಡುತ್ತದೆ. ಹಾಗೆಯೇ ಸದ್ಯದ ಆತಂಕಗಳಿಂದ ಸಹ ಶೈಕ್ಷಣಿಕ ಗುರಿಗಳು ಮುಕ್ತವಾಗಿರಬಾರದು. ಹಾಗಾಗಿ ಗುರಿ ಎಂಬುದು ಮುಂದೆ ಏನಾಗಬೇಕು ಎಂದು ಹೇಳುವ ಅಂಶ ಇದನ್ನು ಪೂರ್ವನಿರೀಕ್ಷಿತ ಅಂತ್ಯವೆಂದು ಕೂಡಾ ಹೇಳುತ್ತಾರೆ ಮತ್ತು ಸಾಧಿಸಲು ಸಾಧ್ಯವಿರುವಂಥದ್ದು.

ಇದನ್ನು ಈಡೇರಿಸಲು ಶಿಕ್ಷಕರು ಮುಖ್ಯವಾದ ಪಾತ್ರವನ್ನು ವಹಿಸುವುದರಿಂದ, ಶಿಕ್ಷಕರು ಮಾಡಬಹುದಾದ ಅಥವಾ ಅವರಿಂದ ನಿರೀಕ್ಷಿಸುವ ಈ ಕೆಳಕಂಡ ಮೂರು ವಿಧಾನಗಳನ್ನು ಆಪೇಕ್ಷಿಸಲಾಗಿದೆ.

1. **ಮೊದಲನೆಯದು**: ಮಗುವು ಮುಂದೆ ಏನಾಗಬೇಕೆಂಬುದರ ದೂರದೃಷ್ಟಿ ಶಿಕ್ಷಕರಿಗೆ ಬೇಕಾಗುತ್ತದೆ. ಈ ಉದ್ದೇಶವನ್ನು ಈಡೇರಿಸಲು ಏನೆಲ್ಲಾ ಸಾಧ್ಯತೆಗಳಿವೆ ಅಥವಾ ಬಳಸಲು ಸಾಧ್ಯ ಎಂಬುದು ಯೋಚಿಸಬೇಕು ಅಥವಾ ಗೊತ್ತಿರಬೇಕು. ಇದರ ಜೊತೆಗೆ ಈ ಉದ್ದೇಶ ಈಡೇರಿಸುವ ಶಿಕ್ಷಕನ ಮಾರ್ಗದಲ್ಲಿ ಯಾವಾವ ಅಡೆತಡೆಗಳು ಬರಬಹುದು ಮತ್ತು ಅದನ್ನು ಹೇಗೆ ಪರಿಹರಿಸಬೇಕೆಂಬುದರ ಪರಿಕಲ್ಪನೆಯು ಕೂಡಾ ಮಾಡಬೇಕಾಗುತ್ತದೆ. ಇದನ್ನು ಹೇಗೆ ಮಾಡಬೇಕೆಂಬುವ ಪ್ರಶ್ನೆ ಬರಬಹುದಲ್ಲವೇ? ಹೌದು. ಇದನ್ನು ಮಾಡಲು ಮಕ್ಕಳ ಬಗೆಗಿನ ಸಂಪೂರ್ಣವಾದ ಜ್ಞಾನ ಶಿಕ್ಷಕನಿಗೆ ಬೇಕಾಗುತ್ತದೆ, ಜೊತೆಗೆ ಮಕ್ಕಳು ಯಾವ–ಯಾವ ಹಂತದಲ್ಲಿ ಏನನ್ನು ಕಲಿಯುತ್ತಾರೆ ಮತ್ತು ಹೇಗೆ ಕಲಿಯುತ್ತಾರೆ ಎಂಬುದರ ಪರಿಜ್ಞಾನ ಬೇಕಾಗುತ್ತದೆ.
2. ಎರಡನೆಯದು, ಈ ರೀತಿಯ ದೂರದೃಷ್ಟಿಯು ಶಿಕ್ಷಕರಿಗೆ ಪರಿಣಾಮಕಾರಿಯಾದ ಮಾರ್ಗ/ಹಂತಗಳನ್ನು ಸೂಚಿಸುತ್ತದೆ.
3. ಮೂರನೇಯದು, ಈ ರೀತಿಯ ಪರಿಕಲ್ಪನೆಯು ಶಿಕ್ಷಕನು ಉದ್ದೇಶವನ್ನು ಈಡೇರಿಸಲು ಸಾಧ್ಯವಿರುವ ಬದಲೀ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಮಾಡಿಕೊಡುತ್ತದೆ.

ಆದ್ದರಿಂದ ಒಬ್ಬ ಶಿಕ್ಷಕನಿಗೆ ಶಿಕ್ಷಣದ ಗುರಿಗಳ ಬಗ್ಗೆ ಸಂಪೂರ್ಣವಾದ ತಿಳುವಳಿಕೆ ಇದ್ದಲ್ಲಿ ಅವನ/ಳ ಪ್ರತಿಯೊಂದು ಕಾರ್ಯವನ್ನು ಜಾಣತನದಿಂದ ಮಾಡಲು ಸಹಾಯಮಾಡುತ್ತದೆ ಯಾಕೆಂದರೆ ತರಗತಿ ಕೋಣೆ, ಶಾಲೆ ಹಾಗೂ ಇತರೆ ಕಲಿಕಾ ಕೇಂದ್ರಗಳು ಕಲಿಕೆಯ ತಾಣಗಳಾಗಿದ್ದು ಪ್ರಮುಖ ಕಲಿಕಾ ಚಟುವಟಿಕೆಗಳು ನಡೆಯುತ್ತವೆ.

**ಶಿಕ್ಷಣದ ಉದ್ದೇಶಗಳ ಪ್ರಮುಖ ಅಂಶಗಳು ಹಾಗೂ ಶಾಲೆ, ತರಗತಿಗೆ ಅದರ ಸಂಬಂಧ:**

ಹೀಗೆ ಇನ್ನೂ ಹಲವಾರು ಪ್ರಮುಖ ವಿಷಯಗಳನ್ನು ಎನ್.ಸಿ.ಎಫ್‌ನ ಶಿಕ್ಷಣದ ಮುಖ್ಯ ಉದ್ದೇಶಗಳ ಅಡಿಯಲ್ಲಿ ಚರ್ಚಿಸಲಾಗುತ್ತಿದೆ. ಈಗ ಶಿಕ್ಷಣದ ಉದ್ದೇಶಗಳಲ್ಲಿರುವ ಪ್ರಮುಖ ಉದ್ದೇಶಗಳನ್ನು ವಿವರವಾಗಿ ಚರ್ಚಿಸೋಣ. ಹಲವಾರು ಬಾರಿ ಉದ್ದೇಶಗಳ ಅರ್ಥವನ್ನು ಮಾತ್ರ ಚರ್ಚೆಮಾಡಿ ನಂತರ ಶಿಕ್ಷಕರಿಂದ ಇರುವ ಅಪೇಕ್ಷೆ ಅಥವಾ ಕ್ರಿಯಾ ಯೋಜನೆಯನ್ನು ಮಾಡಿಸುವುದನ್ನು ನಾವು ಮರೆತುಬಿಡುತ್ತೇವೆ. ಈ ಶಿಕ್ಷಣದ ಉದ್ದೇಶಗಳನ್ನು ಚರ್ಚಿಸುವಾಗ ಎರಡು ರೀತಿಯಲ್ಲಿ ಚರ್ಚಿಸೋಣ. ಈ ಪ್ರಯತ್ನ ಮಾಡುವಾಗ ನಾವು ನೀವು ಸೇರಿ ಪ್ರತಿಯೊಂದು ಉದ್ದೇಶ, ಅದರ

ವಿಶಾಲವಾದ ಅರ್ಥ, ಅದು ಯಾಕೆ? ಮತ್ತು ಶಾಲೆಗೆ ಅದರ ಸಂಬಂಧವೇನು ಅಥವಾ ಶಿಕ್ಷಕನಾಗಿ ನಾನು ಅದನ್ನು ಹೇಗೆ ಸಾಧಿಸಬಲ್ಲೆ ಎಂಬುದರ ಕುರಿತು ವಿವರವಾಗಿ ನೋಡುವ ಪ್ರಯತ್ನ ಮಾಡೋಣ.

**ಜಗತ್ತಿನ ಬಗೆಗಿನ ಜ್ಞಾನ:**


ಶಾಲಾ ಶಿಕ್ಷಣವನ್ನು ಪೂರೈಸಿಕೊಂಡಿರುವ ಒಬ್ಬ ವ್ಯಕ್ತಿಯು ಜಗತ್ತಿನ ಬಗೆಗಿನ ಜ್ಞಾನವನ್ನು ಹೊಂದಿರುವವನಾಗಿರುತ್ತಾನೆ ಎಂಬುದು ಈ ಮೇಲಿನ ಸಾಲಿನ ಉದ್ದೇಶ. ಅಂದರೆ, "ತನ್ನ ಸುತ್ತ ಮುತ್ತಲಿನ ಪರಿಸರ, ಕುಟುಂಬ, ನೆರೆಹೊರೆ, ಗ್ರಾಮ, ತಾಲೂಕು, ಜಿಲ್ಲೆ, ದೇಶದಲ್ಲಿನ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಅರಿವಿರುತ್ತದೆ. ಸಮಾಜದಲ್ಲಿನ ವ್ಯವಸ್ಥೆಗಳು, ರಾಜಕೀಯ ಪರಿಸ್ಥಿತಿ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ವಿಚಾರಗಳ ಬಗ್ಗೆ ಚರ್ಚಿಸಿ, ವಿಮರ್ಶಾತ್ಮಕವಾಗಿ ಚರ್ಚಿಸುವ ಪರಿಣಿತಿ ಹೊಂದಿರುತ್ತಾರೆ" ಎಂದರ್ಥ. ಜೊತೆಗೆ,

- ಪರಿಸರ ವಿಜ್ಞಾನದಲ್ಲಿ ಪಕ್ಷಿ, ಪ್ರಾಣಿ, ಕೀಟ, ಸಸ್ಯ, ಭೂಗೋಳ ಜ್ಞಾನ ಮತ್ತು ಖಗೋಳ ಜ್ಞಾನ ಹೊಂದಿರುತ್ತಾರೆ.
- ಕಲೆ, ಕ್ರೀಡೆಯಲ್ಲಿ ಆಸಕ್ತಿ ಹಾಗು ವ್ಯಕ್ತಿಗತ ಹವ್ಯಾಸ ಹೊಂದಿರುತ್ತಾರೆ.
- ತನ್ನ ಮುಂದಿನ ವೃತ್ತಿಜೀವನವನ್ನು ರೂಪಿಸಿಕೊಳ್ಳುವ ದಿಸೆಯಲ್ಲಿ ಯೋಚನೆ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ.
- ಈ ಅವಧಿಯಲ್ಲಿ ವ್ಯಕ್ತಿಗೆ ದುಶ್ಚಟಗಳ ಒಳಿತು–ಕೆಡುಕುಗಳ ಬಗ್ಗೆ ಕೂಡಾ ಅರಿವಿರುತ್ತದೆ.
- ವ್ಯಕ್ತಿಯು ಪ್ರಸ್ತುತ ರಾಷ್ಟ್ರದಲ್ಲಾಗುವ ತಾಂತ್ರಿಕ ಪ್ರಗತಿಗಳಿಂದ, ಇ–ಮಾಧ್ಯಮಗಳ ಬಗ್ಗೆ ಅರಿವು ಹೊಂದಿರುತ್ತಾರೆ. ಡಿಜಿಟಲ್ ಪ್ರಪಂಚದ ಬಗ್ಗೆ ಅತ್ಯಧಿಕ ಒಲವು ಹಾಗೂ ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ.

ಈ ರೀತಿಯ ವ್ಯಕ್ತಿಯು ನಿರ್ಮಾಣವಾಗಬೇಕಾದರೆ ಅದರ ಹಿಂದೆ ಅಂದರೆ ಪ್ರಾಥಮಿಕ ಹಂತದಿಂದ ನಿರಂತರವಾಗಿ ಹಾಗೂ ಯೋಜಿತವಾಗಿ ನಾವು ಕೆಲಸ ಮಾಡಬೇಕಾಗುತ್ತದೆ. ಈ ಕಾರ್ಯವು ಕುಟುಂಬ, ಸಮುದಾಯ ಹಾಗೂ ಶಾಲೆ ಸೇರಿ ಮಾಡಬೇಕಾಗುತ್ತದೆ. ಸಂತೋಷಕರ ವಿಷಯವೇನೆಂದರೆ, ನಮ್ಮ ಪ್ರಾಥಮಿಕ ಶಾಲೆಗಳ ಪಠ್ಯ ಪುಸ್ತಕಗಳನ್ನು ನಾವು ಗಮನಿಸಿದರೆ, ಹಂತ–ಹಂತವಾಗಿ ಮಗುವಿಗೆ ಈ ಜಗತ್ತಿನ ಬಗೆಗಿನ ಜ್ಞಾನವನ್ನು ನೀಡುವ ಉದ್ದೇಶದಿಂದ ಹಲವಾರು ವಿಷಯಗಳನ್ನು ಪಾಠ, ಪದ್ಯ, ಚಟುವಟಿಕೆ ಹಾಗೂ ಯೋಜನಾ ಕಾರ್ಯದ ಮೂಲಕ ಮಗುವಿಗೆ ಪರಿಚಯಿಸಲಾಗಿದೆ. ಉದಾಹರಣೆಗೆ: ಕುಟುಂಬವನ್ನು ಪರಿಚಯಿಸುವ ಪಾಠ, ವಿವಿಧ ಹಬ್ಬಗಳನ್ನು ಪರಿಚಯಿಸುವುದು, ನೀರಿನ ಮೂಲಗಳು ಹಾಗೂ ಪ್ರಕಾರಗಳನ್ನು ವಿವರಿಸುವುದು, ಪಕ್ಷಿ, ಪ್ರಾಣಿ ಹಾಗೂ ಪ್ರಬೇಧಗಳನ್ನು ಗುರುತಿಸುವುದು ಇನ್ನೂ ಅನೇಕ ವಿಷಯಗಳು ಇದಕ್ಕೆ ಉದಾಹರಣೆಯಾಗಿದೆ. ಮುಂದುವರೆದು ತರಗತಿಗೆ ಅನುಗುಣವಾಗಿ ಅದರ ಅವತರಿಣಿಕೆಗಳನ್ನು ವಿವಿಧ ವಿಷಯಗಳಲ್ಲಿ ವಿವಿಧ ಪಾಠದ ಮೂಲಕ ಅಭಿವೃದ್ಧಿಪಡಿಸಲಾಗಿದೆ. ಆದರೆ ಈ ವಿಷಯ, ಶಿಕ್ಷಕರಾದ ನಮಗೆ ಅರ್ಥವಾಗುವುದು ತುಂಬಾ ಮುಖ್ಯ. ನಾವು ಅನುಕೂಲಿಸುತ್ತಿರುವ ಯಾವುದೇ ವಿಷಯವು ಮಗುವು ತನ್ನ ಜೀವನದಲ್ಲಿ ಬದುಕಲು ಬೇಕಾದ ಜಗತ್ತಿನ ಬಗೆಗಿನ ಜ್ಞಾನವನ್ನು ಸಂಪಾದಿಸಲು ಸಹಕಾರಿಯಾಗುತ್ತದೆ ಎಂದು ಶಿಕ್ಷಕನಿಗೆ ಸ್ಪಷ್ಟವಿದ್ದಲ್ಲಿ ಮುಂದೆ ಬರುವ ಎಲ್ಲ ವಿವಿಧ ವಿಷಯಗಳನ್ನೂ ಅವನು ಸಂಬಂಧೀಕರಿಸಿ, ಮಗುವಿನ ಅನುಭವಕ್ಕೆ ಹೆಚ್ಚು ಒತ್ತನ್ನು ನೀಡುತ್ತಾ ಮಗುವಿಗೆ ಸಹಾಯವನ್ನು ಮಾಡುತ್ತಾ ಹೋಗುತ್ತಾನೆ/ಳೆ. ಒಂದು ವೇಳೆ ಈ ಪರಿಕಲ್ಪನೆ ಶಿಕ್ಷಕನಲ್ಲಿ ಸ್ಪಷ್ಟವಿಲ್ಲದಿದ್ದಲ್ಲಿ ಕೇವಲ ಪಠ್ಯ ಮುಗಿದ ನಂತರ ಬರುವ ಪ್ರಶ್ನೆಗಳನ್ನು ಉತ್ತರಿಸಲು ಅಥವಾ ಮುಂಬರುವ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಅನುಕೂಲಿಸುವ ಕಾರ್ಯ ಮಾಡುತ್ತಾ ಹೋಗುತ್ತಾನೆ. ಒಂದು ವೇಳೆ ಈ ರೀತಿಯ ಸಂಕುಚಿತ ಅರ್ಥವನ್ನಿಟ್ಟುಕೊಂಡು ಶಿಕ್ಷಕನು ಕಾರ್ಯಮಾಡಿದ್ದೇ ಆದರೆ ಅದನ್ನು ಅವನು "ಅನುಕೂಲಿಸುವುದು" ಎಂದು ಹೇಳುವುದೂ ಕಷ್ಟ.

ಇಲ್ಲಿ ಬೆಳೆದು ದೊಡ್ಡವನಾದ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು 'ಜಗತ್ತು' ಎಂದು ಯೋಚಿಸಿದಾಗ ತನ್ನ ರಾಜ್ಯ, ದೇಶ (ಭಾರತ) ಹಾಗೂ ನೆರೆಹೊರೆಯ ರಾಷ್ಟ್ರಗಳು, ಹಾಗೂ ಪ್ರಪಂಚದ ವಿದ್ಯಮಾನಗಳನ್ನೊಳಗೊಂಡಂತೆ ಎಲ್ಲ ವಿಚಾರಗಳ ಅರಿವು ಇರಬೇಕು ಎಂಬುದು ಸತ್ಯ. ಆದರೆ ಇದನ್ನು ಅಭಿವೃದ್ಧಿಪಡಿಸುವಾಗ ನಾವು ಏನನ್ನು ಗಮನಿಸಬೇಕು? ಅದರ ಮುಂದುವರಿಕೆ ಹೇಗೆ ಎಂಬುದನ್ನುಈ ಮುಂದೆ ನೋಡೋಣ.

ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವ ಒಂದು ಮಗುವನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಇಲ್ಲಿ ಆ ಮಗುವಿಗೆ ಜಗತ್ತು ಎಂದರೆ ಯಾವುದು? ಅವನು ಮೊದಲು ಯಾವುದರ ಬಗ್ಗೆ ಜ್ಞಾನವನ್ನು ಹೊಂದಬೇಕು? ಎಂಬುದು ಸಾಮಾನ್ಯ ಪ್ರಶ್ನೆಯಲ್ಲವೇ? ಹೌದು. ಇಲ್ಲಿ ಮೊದಲು ಆ ಮಗು ತಾನು ಯಾರು? ಯಾರ ಮಗ? ಯಾವ ಕುಟುಂಬಕ್ಕೆ ಸೇರಿದವ ಎಂದು ತಿಳಿಯುವುದು ಮುಖ್ಯ. ನಂತರದಲ್ಲಿ ಅವನು ಇರುವ ಕುಟುಂಬದ ಬಗ್ಗೆ ಅವನಿಗೆ ಇರುವ ಅರಿವು ಬರಬೇಕಾಗುತ್ತದೆ. ಇದರಲ್ಲಿ ಕುಟುಂಬ ಯಾವುದು? ಕುಟುಂಬವನ್ನು ಗ್ರಾಮದಲ್ಲಿ ಯಾವ ಹೆಸರಿನಿಂದ ಕರೆಯುತ್ತಾರೆ? ಕುಟುಂಬದ ವೃತ್ತಿ ಯಾವುದು, ಎಷ್ಟು ಜನ ಕುಟುಂಬದಲ್ಲಿದ್ದಾರೆ, ಕುಟುಂಬದ ವಿಶೇಷತೆಗಳೇನು, ಅವನು/ಳು ಎಷ್ಟನೆಯವನು/ಳು, ಕುಟುಂಬದ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಪರಿಸ್ಥಿತಿ ಏನು, ಹಾಗು ಆ ಮಗು ಜೀವಿಸುತ್ತಿರುವ ಕುಟುಂಬದ ಬಗ್ಗೆ ಸಂಪೂರ್ಣವಾದ ತಿಳಿವಳಿಕೆ ಮಗುವಿಗೆ ಬೇಕಾಗುತ್ತದೆ. ನಂತರ ಕುಟುಂಬವಿರುವುದು ಎಲ್ಲಿ? ಒಂದು ಗ್ರಾಮದಲ್ಲಿ. ಹಾಗಾದರೆ ಆ ಗ್ರಾಮದ ಸಂಪೂರ್ಣ ಚಿತ್ರಣ ಪಡೆಯಬೇಕು ಇದರಲ್ಲಿ ಗ್ರಾಮದ ಹೆಸರು, ಎಷ್ಟು ಜನಸಂಖ್ಯೆ, ಯಾವ–ಯಾವ ಜಾತಿ ಹಾಗೂ ಧರ್ಮದ ಜನರು ವಾಸವಾಗಿದ್ದಾರೆ, ಗ್ರಾಮದ ಪ್ರಮುಖ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಲಾಗುತ್ತದೆ, ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಯಾರು ಪ್ರಮುಖ ಪಾತ್ರ ವಹಿಸುತ್ತಾರೆ, ಅಧಿಕಾರ ಎಂದರೇನು, ಗ್ರಾಮದ ಆಧಿಕಾರ ಯಾರಕೈಯಲ್ಲಿದೆ, ಗ್ರಾಮದ ಲಿಂಗಾನುಪಾತ ಹೇಗಿದೆ, ಗ್ರಾಮದ ಪ್ರಮುಖ ಹಬ್ಬಗಳು ಯಾವುವು, ಧಾರ್ಮಿಕ ನಂಬಿಕೆ ಹಾಗೂ ವಿಧಿ–ವಿಧಾನಗಳು ಯಾವುವು, ಮಣ್ಣು ಯಾವವಿಧ, ಯಾವ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ, ನೀರಿನ ಮೂಲಗಳೇನು, ವಾತಾವರಣ ಯಾವ ತರಹದ್ದು, ರಾಜಕೀಯ ಪರಿಸ್ಥಿತಿ ಹೇಗಿದೆ ಎಂಬ ಇತ್ಯಾದಿ ಗ್ರಾಮವನ್ನು ಅರ್ಥಮಾಡಿಕೊಳ್ಳುವ ಸಂಪೂರ್ಣ ಜ್ಞಾನ ಮಗುವಿಗೆ ಇರುತ್ತದೆ. ನಂತರದ ಹಂತದಲ್ಲಿ ಗ್ರಾಮ ಯಾವ ತಾಲೂಕಿನಲ್ಲಿ ಬರುತ್ತದೆ, ತಾಲೂಕು ಯಾವ ಜಿಲ್ಲೆಯಲ್ಲಿ ಬರುತ್ತದೆ, ಜಿಲ್ಲೆ ಯಾವ ರಾಜ್ಯದಲ್ಲಿ ಬರುತ್ತದೆ, ರಾಜ್ಯ ಯಾವ ದೇಶದಲ್ಲಿ, ದೇಶ ಯಾವ ಖಂಡದಲ್ಲಿ ಹಾಗು ಪ್ರಪಂಚದ ಯಾವ ಭಾಗದಲ್ಲಿ. ಹೀಗೆ ಹಂತ–ಹಂತವಾಗಿ ಮಗುವಿಗೆ ಈ ಪ್ರಪಂಚದಲ್ಲಿ ಬದುಕಲು ಬೇಕಾದ ಪ್ರಾಪಂಚಿಕ ಜ್ಞಾನವನ್ನು ಶಿಕ್ಷಣ ನೀಡುವಂತಾಗಬೇಕು ಎಂಬುದು ಶಿಕ್ಷಣದ ಗುರಿಗಳಲ್ಲೊಂದಾಗಿದೆ. ಇದನ್ನು ಪಡೆಯಲು ಶಾಲೆಯಲ್ಲಿ ಕಲಿಯುವ ಎಲ್ಲಾ ವಿಷಯಗಳು ಮುಖ್ಯ ಜೊತೆಗೆ ಕುಟುಂಬ, ಸಮಾಜ ಹಾಗೂ ಸಮುದಾಯಗಳು ಜೊತೆಸೇರಿ ಈ ಉದ್ದೇಶವನ್ನು ಈಡೇರಿಸುತ್ತವೆ. ಕಾರಣ ಶಾಲೆಯು ಮಗುವಿನ ಅನುಭವಗಳನ್ನು ಆಧಾರವಾಗಿಟ್ಟುಕೊಂಡು ಈ ಉದ್ದೇಶವನ್ನು ಈಡೇರಿಸಬೇಕಾಗುತ್ತದೆ.




ಪಠ್ಯವನ್ನು ಹೊರತುಪಡಿಸಿ ಶಾಲೆಯಲ್ಲಿ ಈ ಉದ್ದೇಶವನ್ನು ಈಡೇರಿಸಲು ಇನ್ನೂ ಬೇರೆ ಯಾವುದಾದರೂ ಚಟುವಟಿಕೆಗಳಿವೆಯಾ?

ಹೌದು. ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯು ಒಂದು ಅಥವಾ ಹೆಚ್ಚಿನ ಉದ್ದೇಶಗಳನ್ನು ಇಟ್ಟುಕೊಂಡಿರುವುದಾಗಿರುತ್ತದೆ. ಆ ಉದ್ದೇಶ ಈಡೇರಬೇಕಾದರೆ ಶಿಕ್ಷಕರಿಗೆ ಚಟುವಟಿಕೆಯ ಆಶಯಗಳು ಸ್ಪಷ್ಟವಾಗಿ ಅರ್ಥವಾಗಬೇಕಾಗುತ್ತದೆ. ಇಲ್ಲದಿದ್ದರೆ ಅದು ಒಂದು ಯಾಂತ್ರಿಕವಾಗಿ, ಮಾಡುವುದಕ್ಕಾಗಿ ಮಾಡುವ ಚಟುವಟಿಕೆಯಾಗುತ್ತದೆ. ಪ್ರಾಪಂಚಿಕ ಜ್ಞಾನವನ್ನು ಪಡೆಯಲು ಬೆಳಗಿನ ವಾರ್ತಾಪತ್ರಿಕೆ ಓದುವ ಚಟುವಟಿಕೆ ಉತ್ತಮವಾದ ಉದಾಹರಣೆಯಾಗಬಹುದು. ಇಲ್ಲಿ ಮಕ್ಕಳೆಲ್ಲರೂ ಪ್ರಾರ್ಥನಾ ಸಮಯದಲ್ಲಿ ಒಟ್ಟಿಗೆ ಸೇರಿ ಗ್ರಾಮ, ಜಿಲ್ಲೆ, ರಾಜ್ಯ, ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದ ವಿಚಾರಗಳನ್ನು ಓದಲು ಹಾಗೂ ತಿಳಿಯಲು ಸಹಾಯಮಾಡುತ್ತದೆ. ಇದು ಮಕ್ಕಳಿಗೆ ತಮ್ಮ ಸುತ್ತಮುತ್ತಲ ಪ್ರಪಂಚದಲ್ಲಿ ಪ್ರಚಲಿತದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಮಾಡುತ್ತದೆ. ಆದರೆ ಅದರ ಆಶಯವನ್ನು ಈಡೇರಿಸಲು ಈಗ ನಾವು ಮೀಸಲಿಡುತ್ತಿರುವ ಸಮಯ ಸಾಕೇ? ಎಂದು ಯೋಚಿಸಿದಾಗ ಸಾಕಾಗದು ಎಂಬ ಸತ್ಯ ನಮಗೆ ತಿಳಿಯುತ್ತಿದೆ. ಏಕೆಂದರೆ ಪ್ರಾರ್ಥನೆ ಮುಗಿದ ನಂತರ ಕೇವಲ 15 ನಿಮಿಷಗಳನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಲಾಗುತ್ತದೆ ಮತ್ತು ವಾರ್ತಾ ಪತ್ರಿಕೆಯ ಮುಖ್ಯಾಂಶಗಳನ್ನು ಮಾತ್ರ ಓದುತ್ತಿರುವುದರಿಂದ ಆ

ಚಟುವಟಿಕೆಯ ಆಶಯಗಳು ಈಡೇರುತ್ತಿವೆಯಾ? ಎಂದು ಸಹ ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ಹಾಗಾದರೆ ಏನು ಮಾಡಬಹುದು? ಇತ್ತೀಚೆಗೆ ಶಿಕ್ಷಕರ ಗುಂಪೊಂದು ಉತ್ತರ ಖಂಡ ರಾಜ್ಯಕ್ಕೆ ಶೈಕ್ಷಣಿಕೆ ಪ್ರವಾಸವನ್ನು ಕೈಗೊಂಡಿತ್ತು. ಅಲ್ಲಿ ಈ ಚಟುವಟಿಕೆಯನ್ನು ವಿಶೇಷವಾಗಿ ಮಾಡಿದ ಅನುಭವವನ್ನು ಶಿಕ್ಷಕರೊಬ್ಬರು ಹಂಚಿಕೊಂಡರು. ಅದೇನೆಂದರೆ, ಬೆಳಗಿನ ವಾರ್ತಾ ಪತ್ರಿಕೆಯನ್ನು ಓದುವುದರ ಬದಲು ಮಕ್ಕಳು ನಿನ್ನೆ ತಮ್ಮ ಗ್ರಾಮದಲ್ಲಿ ತಾವು ವೀಕ್ಷಿಸಿದ, ಕೇಳಿದ ಸುದ್ದಿ ಸಮಾಚಾರಗಳನ್ನು ಹೇಳುತ್ತಾ ಹೋಗಬೇಕು. ಯಾಕೆಂದರೆ ಮಕ್ಕಳಿಗೆ ಆ ಗ್ರಾಮವೇ ಪ್ರಪಂಚವಾಗಿರುವುದರಿಂದ ಅಲ್ಲಿಯ ವಿಷಯಗಳನ್ನೇ ಪ್ರಧಾನವಾಗಿ ತೆಗೆದುಕೊಳ್ಳುವುದಾಗಿತ್ತು. ಪ್ರತಿಯೊಂದು ಮಗು ಯಾರೋ ಮಗುವಿಗೆ ಜನ್ಮನೀಡಿದ ಘಟನೆ, ಮದುವೆಯಾದ ಘಟನೆ ಹೀಗೆ ಹಲವಾರು ಘಟನೆಗಳನ್ನು ಒಬ್ಬೊಬ್ಬರಾಗಿ ಹೇಳುತ್ತಿರುವಾಗ ಒಂದು ಮಗು ಹೀಗೆ ಹೇಳಿತು: "ನಿನ್ನೆ ಶಾಲೆ ಮುಗಿದ ನಂತರ ಧೋ ಎಂದು ಜೋರಾಗಿ ಮಳೆ ಬರುತ್ತಿತ್ತು. ರಸ್ತೆಯ ಮೇಲೆಲ್ಲಾ ನೀರು ತುಂಬಿ ಹರಿಯುತ್ತಿದ್ದು ಚರಂಡಿಯ ಒಂದುಕಡೆ ಪ್ಲಾಸ್ಟಿಕ್ ಚೀಲವೊಂದು ಅಡ್ಡ ಕೂತ ಪರಿಣಾಮವಾಗಿ ನೀರು ಹೋಗುತ್ತಿರಲಿಲ್ಲ" ಎಂದಿತು ಆಗ ಶಿಕ್ಷಕರು ನೀನು ಸುಮ್ಮನೇ ನಿಂತು ನೋಡುತ್ತಿದ್ದೆ ಏನು? ಎಂದು ಪ್ರಶ್ನಿಸಿದಾಗ ಮಗು "ಇಲ್ಲ ಸಾರ್ ನಾನು ತೆಗೆಯಬೇಕು ಎಂದುಕೊಂಡೆ ಆದರೆ ಅಷ್ಟರಲ್ಲಿ ಯಾರೋ ದೊಡ್ಡವರೊಬ್ಬರು ಬಂದು ಅದನ್ನು ತೆಗೆದರು ಆಗ ನೀರು ಸರಾಗವಾಗಿ ಮುಂದೆ ಹೋಯಿತು" ಎಂದು ಹಂಚಿಕೊಂಡಿತು. ನೋಡಿ ಇಲ್ಲಿ ಸಂವಾದಕ್ಕೆ ಅವಕಾಶವಿದೆ ಹಾಗು ಮಕ್ಕಳ ನಿಜ ಜೀವನದ ಸುತ್ತ ಇರುವ ಪ್ರಾಪಂಚಿಕ ಜ್ಞಾನವನ್ನು ಮಕ್ಕಳೇ ಕಟ್ಟಿಕೊಳ್ಳಲು ಬೇಕಾದ ಎಲ್ಲ ಅವಕಾಶಗಳು ಈ ಚಟುವಟಿಕೆಯಲ್ಲಿವೆ. ಅಂದರೆ ಶಾಲೆಯಲ್ಲಿ ನಾವು ಮಾಡುವ ಪ್ರತಿಯೊಂದು ಚಟುವಟಿಕೆ ಎಷ್ಟು ಮುಖ್ಯ ಅಲ್ಲವೇ? ಇನ್ನು ಇದೇ ಪ್ರಾಪಂಚಿಕ ಜ್ಞಾನವನ್ನು ಕಟ್ಟಿಕೊಳ್ಳಲು ತರಗತಿಯ ಪ್ರತಿಯೊಂದು ಪಠ್ಯದ ಪ್ರತಿಯೊಂದು ಪಾಠವೂ ಅಷ್ಟೇ ಮಹತ್ವದ ಪಾತ್ರವಹಿಸುತ್ತದೆ. ಶಿಕ್ಷಕರು ಇದನ್ನು ಅನುಕೂಲಿಸಲು ಬೇಕಾದ ಎಲ್ಲ ಮಾರ್ಗಗಳನ್ನು ಪ್ರಯತ್ನಿಸಬೇಕು. ರಸಪ್ರಶ್ನೆ ಕಾರ್ಯಕ್ರಮ, ಶೈಕ್ಷಣಿಕ ಪ್ರವಾಸ, ಶೈಕ್ಷಣಿಕ ಹೊರಸಂಚಾರ, ಪ್ರಾಜೆಕ್ಟಗಳಿಂದ ಕೂಡಿದ ಯೋಜನೆಗಳೆಲ್ಲವೂ ಈ ಉದ್ದೇಶವನ್ನು ಈಡೇರಿಸಬಲ್ಲವು.

**ಪ್ರಜಾ ಪ್ರಭುತ್ವ ಹಾಗೂ ಪ್ರಜಾ ತಾಂತ್ರಿಕ ಮೌಲ್ಯಗಳಿಗೆ ಬದ್ಧತೆ:**

ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರ. ಅಂದರೆ, ಈ ದೇಶದಲ್ಲಿ ವಾಸಿಸುವ ಎಲ್ಲಾ ಜನರು ಈ ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾಗಿ, ಪ್ರಜಾಪ್ರಭುತ್ವದ ಆಶಯಗಳನ್ನು ವ್ಯಕ್ತಿಗತವಾಗಿ, ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಅಳವಡಿಸುತ್ತಾ ಉತ್ತಮ ಸಮಾಜದ ನಿರ್ಮಾಣಕ್ಕೆ ಕೈಜೋಡಿಸಬೇಕೆಂಬುದೆ ಸಮಾಜದ ಆಶಯ. ಅದಕ್ಕಾಗಿ ದೇಶದ ಎಲ್ಲಾ ಪ್ರಜೆಗಳು ಆ ಆಶಯಗಳಿಗೆ ಬದ್ಧರಾಗಿದ್ದು, ಅವರ ವ್ಯಕ್ತಿತ್ವದಲ್ಲಿ ಈ ಆಶಯಗಳು ನೆಲೆಗೊಂಡಿರಬೇಕು ಎಂಬುದು ಶಿಕ್ಷಣದ ಆಶಯ ಮತ್ತು ಇದನ್ನು ಪ್ರಾಥಮಿಕ ಹಂತದಿಂದಲೇ ಶಿಕ್ಷಣದ ಮೂಲಕ ನಿರ್ಮಾಣಮಾಡುವುದು ಎಂಬುದು ನಮ್ಮೆಲ್ಲರ ಸಂಕಲ್ಪ. ಹಾಗಾಗಿ, ಶಿಕ್ಷಣದ ಗುರಿಗಳಲ್ಲಿನ ಇನ್ನೊಂದು ಉದ್ದೇಶವೇ 'ಈ ಪ್ರಜಾ ಪ್ರಭುತ್ವಕ್ಕೆ ವ್ಯಕ್ತಿಯನ್ನು ಬದ್ಧನಾಗುವಂತೆ ನಿರ್ಮಾಣಮಾಡುವುದು". ಈ ಉದ್ದೇಶವನ್ನು ತನ್ನಲ್ಲಿ ಮೈಗೂಡಿಸಿಕೊಂಡಿರುವ ವ್ಯಕ್ತಿಯು ಈ ಕೆಳಗಿನ ಅಂಶಗಳನ್ನು ಮೈಗೂಡಿಸಿಕೊಂಡಿರುತ್ತಾನೆ ಎಂದರೆ ತಪ್ಪಾಗಲಾರದು:

- ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಜಾತ್ಯಾತೀತತೆ, ಘನತೆ, ಮುಂತಾದ ಪ್ರಜಾಪ್ರಭುತ್ವ ಮೌಲ್ಯಗಳಿಗೆ ವ್ಯಕ್ತಿಯ ಬದ್ಧತೆಯು ಹಲವಾರು ವಿಧಗಳಲ್ಲಿ ಪ್ರಕಟಗೊಳ್ಳುತ್ತದೆ. ಅವುಗಳೆಂದರೆ ಸುಳ್ಳಿನಿಂದ ಸತ್ಯವನ್ನು ಬೇರ್ಪಡಿಸುವ, ಪೂರ್ವಾಗ್ರಹ ಪೀಡಿತ ವಿಚಾರಗಳನ್ನು ತಿರಸ್ಕರಿಸುವ ಮನಸ್ಥಿತಿ, ಬಹುಸಂಸ್ಕೃತಿ ಸಮಾಜದ ಬಗ್ಗೆ ಗೌರವ, ಇತರ ಧಾರ್ಮಿಕ ಗುಂಪಿನ ಬಗ್ಗೆ ಸಹನೆ, ಲಿಂಗತ್ವದ ಬಗ್ಗೆ ಅರಿವು ಹೊಂದಿರುತ್ತಾರೆ;
- ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರಬುದ್ಧತೆ ಹೊಂದಿರುತ್ತಾರೆ; ದೇಶದ ಸಂವಿಧಾನದ ಆಶಯಗಳನ್ನು ಅರ್ಥೈಸಿಕೊಂಡು, ತಾನೂ ಒಬ್ಬ ಜವಾಬ್ದಾರಿಯುತ ಪ್ರಜೆ ಎನ್ನುವ ಪ್ರಜ್ಞೆ ಮೂಡಿರುತ್ತದೆ.

ಈ ಉದ್ದೇಶವನ್ನು ನಾವು ಅರ್ಥಮಾಡಿಕೊಳ್ಳುವುದಕ್ಕೆ ಮುನ್ನ ಪ್ರಜಾಪ್ರಭುತ್ವದ ಆಶಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಲ್ಲಿ ಪ್ರಜಾಪ್ರಭುತ್ವ ಎಂದರೆ ಪ್ರಜೆಗಳೇ ಪ್ರಭುಗಳು, ನಾವು ಚುನಾವಣೆಯ ಮೂಲಕ ಒಬ್ಬ ವ್ಯಕ್ತಿಯನ್ನು ಆಯ್ಕೆಮಾಡುತ್ತೇವೆ. ಅವರು ನಮ್ಮ ಪರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಅಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ ಹಾಗೂ ಪ್ರಜೆಗಳಿಗೋಸ್ಕರ ಇರುವ ವ್ಯವಸ್ಥೆ ಈ ಪ್ರಜಾಪ್ರಭುತ್ವ. ಇದೊಂದು ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೆಲವು ಹಕ್ಕು ಮತ್ತು ಕರ್ತವ್ಯಗಳನ್ನು ನಮಗೆ ಈ ದೇಶ ನೀಡುತ್ತದೆ. ಅದರ ಮೂಲಕ ನಾವು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತೇವೆ.

ಇತ್ತೀಚಿನ ದಿನಗಳಲ್ಲಿ ಈ ವಿಷಯವನ್ನು ತೆಗೆದುಕೊಂಡು ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಅದರಲ್ಲಿ ಭಾರತದ ಜನರು ಒಂದು ತಪ್ಪು/ಅನ್ಯಾಯವನ್ನು ಪ್ರಶ್ನಿಸುವುದು, ಜವಾಬ್ದಾರಿಯುತವಾಗಿ ತನ್ನೊಡನೆ ಹಾಗೂ ನೆರೆ ಹೊರೆಯವರೊಡನೆ ನಡೆದುಕೊಳ್ಳುವುದು, ವಿವಿಧ ಸಂದರ್ಭಗಳಲ್ಲಿ ತನ್ನ ಇರುವಿಕೆಯನ್ನು ಗಮನಿಸಿ, ದೇಶಕ್ಕೆ ನಿರೀಕ್ಷೆ ಇರುವ ಒಬ್ಬ ಪ್ರಜೆಯಾಗಿ ನಡೆದುಕೊಳ್ಳಲು ಇರುವ ವಿಷಯಗಳಲ್ಲಿ ಸಾಕಷ್ಟು ಅಂತರವನ್ನು ನಾವು ಕಾಣುತ್ತೇವೆ. ಇದು ಏಕೆ ಹೀಗಾಗಿದೆ? ಶಾಲಾ ಶಿಕ್ಷಣ ಮುಗಿಸಿಕೊಂಡು ಬಂದ ಒಬ್ಬ ವ್ಯಕ್ತಿ ಈ ಮೌಲ್ಯದ ಕುರಿತು ಅಭ್ಯಾಸ ಮಾಡಿದರೂ ಅದರ ವೈಯುಕ್ತಿಕ ಅನುಷ್ಠಾನ/ಸ್ವ-ಅನುಷ್ಠಾನ ಯಾಕೆ ಆಗುತ್ತಿಲ್ಲ? ಎಂದು ಯೋಚಿಸಿದಾಗ ಶಿಕ್ಷಣವೇ ಬೇರೆ, ಬದುಕುತ್ತಿರುವ ರೀತಿಯೇ ಬೇರೆಯಾಗಿ ಕಾಣುತ್ತಿದೆ. ಅಂದರೆ ಶಿಕ್ಷಣಕ್ಕೂ ಹಾಗೂ ಜೀವನಕ್ಕೂ ಸಂಬಂಧಗಳ ಕೊಂಡಿ ಗಟ್ಟಿಯಾಗಿ ಬೆಸೆದುಕೊಂಡಿಲ್ಲ. ಇದೇ ಕಾರಣಕ್ಕಾಗಿ ಆಗಿರಬಹುದಾ? ಯೋಚಿಸೋಣ:

ಇತ್ತೀಚೆಗೆ ಬೆಂಗಳೂರಿನಲ್ಲಿ ರಸ್ತೆ ಅಪಘಾತವೊಂದು ನಡೆಯಿತು. ಆ ಅಪಘಾತದಲ್ಲಿ ವ್ಯಕ್ತಿಯೋರ್ವನ ದೇಹ ಇಬ್ಭಾಗವಾಗಿ ರಸ್ತೆಯ ಮೇಲೆ ಬಿದ್ದಿದ್ದ. ಸಹಾಯಕ್ಕಾಗಿ ಕೈಚಾಚುತ್ತಿದ್ದ. ಅದೇ ರಸ್ತೆಯಮೇಲೆ ಓಡಾಡುತ್ತಿದ್ದ ಬಹುಸಂಖ್ಯಾತ ವಿದ್ಯಾವಂತರು/ಸಿರಿವಂತರು/ಸಾಮಾನ್ಯ ಜನರು ಯಾರು ಅವನ ಸಹಾಯಕ್ಕೆ ಬರಲಿಲ್ಲ. ಅವನು ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆಯುವ ಹೊತ್ತಿಗೆ ಅವನ ಪ್ರಾಣ ಇರಲಿಲ್ಲ ಆದರೆ ಅವನು ಆ ಸಂದರ್ಭದಲ್ಲೂ ತನ್ನ ಅಂಗಾಂಗಗಳನ್ನು ದಾನ ಮಾಡುವ ಘೋಷಣೆಯನ್ನು ಮಾಡಿದ. ಇದೇ ಮುಂದೆ 'ಹರೀಶ್ ಸಹಾಯ ಯೋಜನೆಯಾಗಿ ಮಾರ್ಪಟ್ಟಿತು'. ಇಲ್ಲಿ ಯಾವ ವಿಷಯದ ಕೊರತೆ ಇದೆ. ಎಂದು ಕೇಳಿದರೆ ಸಂದರ್ಭಕ್ಕೆ ವ್ಯಕ್ತಿಯ ಇರುವಿಕೆಯನ್ನು ಗಮನಿಸಿ ಜವಾಬ್ದಾರಿಯಿಂದ ನಡೆದುಕೊಳ್ಳುವ ವಿಷಯದ ಕೊರತೆ ಇದೆ. ಈ ಮುಂದಿನ ಪತ್ರಿಕಾ ವರದಿ ಈ ವಿಷಯವನ್ನು ವಿವರವಾಗಿ ಹೇಳುತ್ತದೆ:

ಈ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅವುಗಳನ್ನು ಈ ಕೆಳಗಿನಂತೆ ನೋಡೋಣ:

ಮಾನವೀಯತೆ ಮರೆತ ಜನ, ಸಾವಿನಲ್ಲೂ ಸಾರ್ಥಕತೆ ಮೆರೆದ ಯುವಕ 16-02-2016 10:06PM IST




ಬೆಂಗಳೂರು: ಊಹೆಗೂ ಮೀರಿದ ಬಯಾನಕ ಅಪಘಾತದಲ್ಲಿ ದೇಹವೇ ಎರಡು ತುಂಡಾದರೂ, ರಸ್ತೆ ಮದ್ಯೆಯೇ ಗಂಟೆಗಟ್ಟಲೇ ಯುವಕನೊಬ್ಬ ನೆರವಿಗಾಗಿ ಅಂಗಲಾಚಿದ ಮನಕಲಕುವ ಘಟನೆ ನೆಲಮಂಗಲ ಸಮೀಪ ನಡೆದಿದೆ. 26 ವರ್ಷದ ಹರೀಶ್ ಮೃತಪಟ್ಟವರು. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕರಿಗೌಡನಹಳ್ಳಿ ಗ್ರಾಮದವರಾದ ಹರೀಶ್, ಬೆಂಗಳೂರಿನಲ್ಲಿ ಎಟಿಎಂ ಗಳಿಗೆ ಹಣ ತುಂಬುವ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಊರಿಗೆ ಮತದಾನ ಮಾಡಲು ಹೋಗಿದ್ದ ಹರೀಶ್ ಇಂದು ಬೆಳಿಗ್ಗೆ ಪಲ್ಸರ್ ಬೈಕ್ ನಲ್ಲಿ ಬೆಂಗಳೂರಿಗೆ ಹೊರಟಿದ್ದರು. ನೆಲಮಂಗಲ ಸಮೀಪ ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಬೀಕರ ಅಪಘಾತವೇ ನಡೆದಿದೆ. ಹರೀಶ್ ಬೈಕ್ ಗೆ ಹಿಂಬದಿಯಿಂದ ಲಾರಿ ಗುದ್ದಿದೆ.

ರಸ್ತೆಯಲ್ಲಿ ಹರೀಶ್ ಕೆಳಗೆ ಬಿದ್ದಿದ್ದು, ಅವರ ಮೇಲೆ 10 ಚಕ್ರದ ಲಾರಿ ಹರಿದಿದೆ. ಇದರಿಂದಾಗಿ ಹರೀಶ್ ದೇಹ ಸೊಂಟದಿಂದ ಮೇಲೆ ಮತ್ತು ಕೆಳಗೆ ಎರಡು ಭಾಗವಾಗಿದೆ. ದೇಹ ತುಂಡಾದ ಹರೀಶ್ ನೆರವಿಗೆ ಅಂಗಲಾಚಿದ್ದಾರೆ. ತಮ್ಮ ದೇಹ ತುಂಡಾಗಿದೆ. ನಾನು ಉಳಿಯುವ ಸಾಧ್ಯತೆಯಂತೂ ಇಲ್ಲ. ನನ್ನ ಅಂಗಾಂಗಗಳನ್ನಾದರೂ ತೆಗೆದುಕೊಳ್ಳಲು ಆಸ್ಪತ್ರೆಗೆ ಸೇರಿಸಿ ಎಂದೆಲ್ಲಾ ಹೇಳಿದ್ದಾರೆ. ಹರೀಶ್ ಹೀಗೆ ಸುಮಾರು ಮುಕ್ಕಾಲು ಗಂಟೆ ದಾರಿಯಲ್ಲೇ ಅರ್ಧ ದೇಹದೊಂದಿಗೆ ಬಿದ್ದು ಒದ್ದಾಡುತ್ತಿದ್ದರೂ ಯಾರೂ ಹತ್ತಿರಕ್ಕೆ ಹೋಗಿಲ್ಲ.

ವಾಹನಗಳೆಲ್ಲಾ ಅವರ ಪಕ್ಕದಲ್ಲೇ ಸಂಚರಿಸಿವೆ. ಜನ ಕೂಡ ದೇಹವೇ ಎರಡು ತುಂಡಾಗಿದ್ದ ಆ ಬೀಕರ ದೃಶ್ಯ ಕಂಡು ಬಯಗೊಂಡಿದ್ದಾರೆ. ಕೊನೆಗೆ ಯಾರೋ ಅಂಬುಲೆನ್ಸ್ ಗೆ ಫೋನ್ ಮಾಡಿದ್ದು, ಹರೀಶ್ ನನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಅಲ್ಲಿ ವೈದ್ಯರಿಗೆ ಹರೀಶ್, ನನ್ನ ಅಂಗಾಂಗಳನ್ನು ಯಾರಿಗಾದರೂ ಕೊಡಿ ಎಂದು ಹೇಳಿ ಸಾವಿನಲ್ಲಿಯೂ ಸಾರ್ಥಕತೆ ಮೆರೆದಿದ್ದಾರೆ. ಹೀಗೆ ದೇಹ ತುಂಡಾದರೂ ಸುಮಾರು ಒಂದು ಗಂಟೆ ಕಾಲ ಬದುಕಿದ್ದು, ವಿಸ್ಮಯಕಾರಿ ಘಟನೆಯೇ ಸರಿ.

**ಪ್ರಜಾಪ್ರಭುತ್ವವಾದಿ:** ಜನತೆಯಿಂದ, ಜನತೆಗಾಗಿ, ಜನತೆಗೋಸ್ಕರ ಎಂಬ ಪದಗಳು ಸಮಂಜಸವೂ ಸಹಜವೂ ಆಗಿವೆ. ಅಂದರೆ, ಆಳುವವರು ಆಳಲ್ಪಡುವವರು ಇಬ್ಬರೂ ಜನತೆ ಎಂದು, ಅಥವಾ ಸರ್ಕಾರವು ಜನತೆಯದ್ದೇ ಎಂದು, ಅಥವಾ ಸರ್ಕಾರ ರಚನೆಯ ಪರಮಾಧಿಕಾರಿಗಳೇ ಜನತೆ ಎಂದು ಭಾವಿಸಲಾಗಿದೆ. ಇದು ಬಹು ವ್ಯಾಪಕ ಸ್ವರೂಪ ಉಳ್ಳದ್ದಾಗಿದ್ದು, ರಾಜಕೀಯ ಅಧಿಕಾರವನ್ನು ಸರ್ಕಾರದ ಸ್ವರೂಪವನ್ನು ಚಿತ್ರಿಸುವಂತಹ ಅಥವಾ ಸೂಚಿಸುವಂತಹ ವ್ಯವಸ್ಥೆ ಅಥವಾ ವಿಷಯವಾಗಿದೆ. ಅಷ್ಟೇ ಅಲ್ಲದೆ ರಾಜ್ಯದ ವ್ಯವಹಾರಗಳನ್ನು ನಿರ್ವಹಿಸಿ, ನಿಯಂತ್ರಿಸುವಂತಹ ಒಂದು ಸಾಧನ ಅಂದರೆ ಪ್ರಾತಿನಿಧಿಕವೂ ಜವಾಬ್ದಾರಿಯುತವೂ ಆದ ವ್ಯವಸ್ಥೆಯನ್ನು ಇದು ತಿಳಿಸುತ್ತದೆ. ಇಲ್ಲಿಯ ಆಡಳಿತ ವ್ಯವಸ್ಥೆಯು ವಯಸ್ಕ ಮತದಾನ ಅಂದರೆ 18 ವರ್ಷ ತುಂಬಿದ ಎಲ್ಲರೂ ತಮ್ಮ ಮತವನ್ನು ಚಲಾಯಿಸುವುದರ ಮೂಲಕ ಅಂದರೆ ಪ್ರಜೆಗಳು ಪ್ರತಿನಿಧಿಗಳನ್ನು ಚುನಾಯಿಸಿ ಅವರ ಮೂಲಕ ಸರ್ಕಾರದ ಎಲ್ಲಾ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಭಾರತವು ಪ್ರಜಾಸತ್ತಾತ್ಮಕ ರಾಜ್ಯ. ಪ್ರಜೆಗಳೇ ಅಧಿಕಾರದ ಮೂಲ ಮತ್ತು ಸರ್ಕಾರವು ಪ್ರಜೆಗಳಿಗೆ ಜವಾಬ್ದಾರವಾಗಿದೆ. ವಯಸ್ಕ ಮತದಾನ, ರಾಜಕೀಯ ಪಕ್ಷಗಳು, ನಿಯತಕಾಲಿಕ ಚುನಾವಣೆಗಳು, ಮೂಲಭೂತ ಹಕ್ಕುಗಳು, ಸಂಸತ್ತು, ಜೊತೆಗೆ ಬಲಿಷ್ಠ ಸ್ವತಂತ್ರ ನ್ಯಾಯಾಂಗದ ವ್ಯವಸ್ಥೆಯನ್ನು ಇದು ಸೂಚಿಸುತ್ತದೆ.

**ನ್ಯಾಯ:** ನ್ಯಾಯ ಎಂದರೆ ಸಮಾಜದ ಸಾಮಾನ್ಯ ಒಳಿತಿನೊಂದಿಗೆ ವ್ಯಕ್ತಿಗತ ನಡವಳಿಕೆಯ ಹಿತವಾದ ಸಮ್ಮಿಲನ ಅಥವಾ ಸಾರ್ವಜನಿಕರ ಹಿತವನ್ನು ಸಾಧಿಸುವುದು; ಅಂದರೆ, ಪ್ರತಿಯೊಬ್ಬ ಸ್ವತಂತ್ರ ಭಾರತೀಯನಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ದೊರಕಿಸಿಕೊಡುವುದು. ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗಾಗಿ ಹಾಗೂ ವಿವಿಧ ವರ್ಗ, ಪಂಗಡ, ಜಾತಿ, ಮತಗಳಲ್ಲಿರುವ ವಿವಿಧತೆಯನ್ನು ಹೋಗಲಾಡಿಸಿ ಏಕತೆಯನ್ನು ಹಾಗೂ ಸಮಾನ ಭಾವನೆಯನ್ನು ಉಂಟು ಮಾಡಬೇಕೆನ್ನುವುದು ಇದರ ಮೂಲಭೂತ ವಿಚಾರ. ಅದರಲ್ಲಿಯೂ ಬಡತನವನ್ನು ನಿರ್ಮೂಲಗೊಳಿಸಿ ಆರ್ಥಿಕ ಅಸಮಾನತೆಯನ್ನು ಅಸಂತೃಪ್ತಿಯನ್ನು ದೂರೀಕರಿಸಿ ಪ್ರಗತಿಯನ್ನು ಸಾಧಿಸುವುದೇ.

ಪ್ರತಿಯೊಬ್ಬ ಪೌರನಿಗೂ ಅಭಿಪ್ರಾಯವನ್ನು ವ್ಯಕ್ತಪಡಿಸುವ, ಆತ್ಮಸಾಕ್ಷಿ, ಅಂತರಂಗದ, ಆತ್ಮವಿಶ್ವಾಸದ ನಂಬಿಕೆ, ಪೂಜಿಸುವ ಸ್ವಾತಂತ್ರ್ಯವನ್ನು ಕಲ್ಪಿಸುವುದು. ರಾಷ್ಟ್ರದ, ಸಮಾಜದ, ಜನತೆಯ ಹಿತಾಸಕ್ತಿಗೆ ಹಾಗೂ ಶಾಂತಿಯುತವಾಗಿ ಸಭೆ ಸೇರುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯವನ್ನು ಭಾರತದ ಪ್ರಜೆಗಳು ಹೊಂದಿರುತ್ತಾರೆ. ಇಷ್ಟೇ ಅಲ್ಲದೆ ಧಾರ್ಮಿಕ ಸ್ವಾತಂತ್ರ್ಯವು ಕೂಡ ಇದ್ದು ಯಾವುದೇ ಮತಧರ್ಮವು ರಾಜ್ಯದ ಧರ್ಮವಾಗಿಲ್ಲ. ಅಂದರೆ ಎಲ್ಲಾ ಮತೀಯರು ತಮ್ಮದೇ ಆದ ನಂಬಿಕೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಸ್ವಾತಂತ್ರ್ಯ ಹಾಗೂ ತಮಗಿಷ್ಟ ಬಂದ ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಹೋಗುವ ಸ್ವಾತಂತ್ರ್ಯವನ್ನು ಸಹ ಹೊಂದಿದ್ದಾರೆ.

ಇನ್ನು ನಮ್ಮ ಶಾಲಾ ಪ್ರಕ್ರಿಯೆಯ ಭಾಗವಾಗಿ ಈಗಾಗಲೇ ಹಲವಾರು ಪ್ರಕ್ರಿಯೆಗಳು, ಚಟುವಟಿಕೆಗಳು ಈ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮಕ್ಕಳು ಅರ್ಥಮಾಡಿಕೊಳ್ಳಲು ವಿನ್ಯಾಸಗೊಳಿಸಿ ಅದನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳಲ್ಲಿ ಕೆಲವುಗಳನ್ನು ನೋಡುವುದಾದರೆ:

- ಮಂತ್ರಿಮಂಡಲದ ರಚನೆ: ಇಲ್ಲಿ ಮಕ್ಕಳು ಚುನಾವಣೆಯ ಪ್ರಕ್ರಿಯೆಯನ್ನು ಮತ ಚಲಾವಣೆಯ ಮೂಲಕ ಮಾಡುವುದಲ್ಲದೇ ಮಂತ್ರಿಗಳು ಹೇಗೆ ತಮಗೆ ನೀಡಿದ ಜವಾಬ್ದಾರಿಗಳನ್ನು ನಿಭಾಯಿಸುತ್ತಾರೆ ಎಂಬುದರ ಅನುಭವವನ್ನು ಪಡೆಯಲು ಸಾಧ್ಯವಿದೆ. ಮಂತ್ರಿಮಂಡಲಕ್ಕೆ ನಿಜವಾದ ಸ್ವಾತಂತ್ರ್ಯ ನೀಡಿದ್ದೇ ಆದರೆ ಮಕ್ಕಳು ಪ್ರಜಾಪ್ರಭುತ್ವದ ಆಶಯವನ್ನು ಶಾಲೆಯಲ್ಲಿ ಪ್ರಾತ್ಯಕ್ಷಿಕತೆ ಮಾಡುತ್ತಾರೆ ಎಂಬುದು ಈಗಾಗಲೇ ಎಷ್ಟೋ ಶಾಲೆಗಳ ಅನುಭವದ ಮೂಲಕ ನಮಗೆ ತಿಳಿದುಬರುತ್ತದೆ.
- ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಪ್ರತಿ ತರಗತಿಗಳಲ್ಲೂ ಪ್ರತಿ ಪಾಠದ ಕೊನೆಗೆ ವಿಧ್ಯಾರ್ಥಿಗಳು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡಲಾಗುತ್ತದೆ. ಅದು ಪಾಠಕ್ಕೆ ಸಂಬಂಧಿಸಿದ್ದಾಗಿರಬಹುದು ಅಥವಾ ಅವರಿಗೆ ಅರ್ಥವಾಗದ ವಿಷಯಕ್ಕೆ ಸಂಬಂಧಿಸಿದ್ದಾಗಿರಬಹುದು, ಇತ್ಯಾದಿ.

ಈ ರೀತಿಯಾದ ಸ್ವಾತಂತ್ರ್ಯವನ್ನು ಪಡೆದಿರುವ ಜನತೆ ಇವುಗಳನ್ನು ದುರುಪಯೋಗಪಡಿಸಿಕೊಂಡು ರಾಷ್ಟ್ರದ ಐಕ್ಯತೆಗೆ, ಸಮಗ್ರತೆಗೆ ಭಂಗ ಉಂಟುಮಾಡುವುದಾಗಲಿ ಅಥವಾ ರಾಷ್ಟ್ರವನ್ನು ದಮನ ಮಾಡುವ ಕಾರ್ಯದಲ್ಲಿಯಾಗಲಿ ತೊಡಗಬಾರದು. ಭಾರತವು ವಿವಿಧ ವರ್ಗಗಳ, ಜಾತಿಗಳ, ಮತಗಳ, ಧರ್ಮಗಳ, ಭಾಷೆಗಳ, ಸಂಸ್ಕೃತಿಗಳ ಸಾಗರದಂತಿದೆ. ಈ ವೈವಿಧ್ಯತೆಗಳು ರಾಷ್ಟ್ರದ ಸಮಗ್ರತೆಗೆ ಮತ್ತು ಐಕ್ಯತೆಗೆ ಸವಾಲನ್ನು ಒಡ್ಡುವ ಸ್ಥಿತಿಯಲ್ಲಿವೆ. ಆದ ಕಾರಣ ಇವುಗಳನ್ನು ಅನುಷ್ಠಾನಗೊಳಿಸಿ ರಾಷ್ಟ್ರದ ಸಮಗ್ರತೆಯನ್ನು ಐಕ್ಯತೆಯನ್ನು ಸಾಧಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗುತ್ತಿದೆ.

**ಸಮಾನತೆ:** ಸ್ಥಾನಮಾನದ ಸಮಾನತೆಯನ್ನು ಸ್ವತಂತ್ರ ವ್ಯಕ್ತಿಗಳ ಸ್ಥಾನಮಾನವನ್ನು ಮತ್ತು ಸಮಾನವಾದ ಅವಕಾಶಗಳನ್ನು ಸೂಚಿಸುತ್ತದೆ. ಸಮಾನತೆ ಎಂದರೆ ಪ್ರತಿಯೊಬ್ಬ ವ್ಯಕ್ತಿಗೂ ಆತನ ಆಂತರಿಕ ಅಥವಾ ಹೊಂದಿರುವ ಶಕ್ತಿಗಳನ್ನು ಬೆಳೆಸಿಕೊಳ್ಳುವ ದೃಷ್ಟಿಯಿಂದ ಸಮಾನವಾದ ಅವಕಾಶ ದೊರೆಯುವುದು. ಇದು ಮುಂದುವರಿಯುತ್ತಾ ಕಾನೂನು ಸಾರ್ವಜನಿಕ ಇಚ್ಛೆಯ ಅಭಿವ್ಯಕ್ತಿ, ಅದು ರಕ್ಷಿಸಿದರೂ ಶಿಕ್ಷಿಸಿದರೂ ಎಲ್ಲರಿಗೂ ಒಂದೇ ಸಮಾನವಾಗಿರಬೇಕು. ಸಮಸ್ತ ಜನಕೋಟಿಯು ಅದರ ದೃಷ್ಟಿಯಲ್ಲಿ ಸಮಾನರಾದ್ದರಿಂದ ಸಮಸ್ತ ಸಾರ್ವಜನಿಕ ಪದವಿಗಳು ಮತ್ತು ಸ್ಥಾನಗಳು, ವ್ಯಕ್ತಿಗಳಿಗೆ, ಅವರವರ ಶಕ್ತಿಗೆ ಅನುಸಾರವಾಗಿ, ಅವರ ಗುಣಗಳು ಮತ್ತು ಪ್ರತಿಭೆಗಳಿಗೆ ತಾರತಮ್ಯವಿಲ್ಲದೆ ಅರ್ಹರಾಗಿರುತ್ತಾರೆ. ಈ ಪ್ರಸ್ತಾವನೆಯು ಅಂತಸ್ತು ಮತ್ತು ಅವಕಾಶಗಳ ವಿಚಾರದಲ್ಲಿ ಸಮಾನತೆಯ ಗುರಿಯನ್ನು ಅಥವಾ ಉದ್ದೇಶವನ್ನು ಹೊಂದಿದೆ. ಮೂಲಭೂತ ಹಕ್ಕುಗಳು ಸಮಾನತೆಯನ್ನು ನೀಡಿವೆ ಹಾಗೂ ಅಂತಸ್ತಿನ ವಿಚಾರದ ಬಗೆಗೆ ಸಹ ಯಾವುದೇ ರೀತಿಯ ಪಕ್ಷಪಾತಕ್ಕೂ ಅವಕಾಶ ಮಾಡಿಕೊಟ್ಟಿಲ್ಲ.

**ಸೋದರತ್ವ ಅಥವಾ ಭ್ರಾತೃತ್ವ:** ಒಂದು ದೇಶದ ಐಕ್ಯತೆಯನ್ನು, ಸಮಗ್ರತೆಯನ್ನು ಕಾಪಾಡಿಕೊಂಡು ಹೋಗುವ, ವ್ಯಕ್ತಿಯ ಘನತೆಯನ್ನು, ಗೌರವವನ್ನು ಬೆಳೆಸಿ, ಉಳಿಸಿಕೊಂಡು ಹೋಗುವಂತಹ ಸಾಧನವೇ ಇದಾಗಿದೆ. ವಿವಿಧ ವರ್ಗಗಳಿಂದ, ಭಾವನೆಗಳಿಂದ, ಬಹು ತತ್ವತೆಯಿಂದ ಕೂಡಿರುವ ಜನತೆ ನೆಮ್ಮದಿಯಿಂದ ಬಾಳಬೇಕಾದರೆ ಸೋದರತ್ವದ ಮನೋಭಾವನೆಯು ಅತ್ಯಗತ್ಯ. ಇದೊಂದು ವಿಶ್ವವ್ಯಾಪಿ ವ್ಯವಸ್ಥಿತ ತತ್ವ ನಿರೂಪಣೆಯಾಗಿದೆ. ಇದರ ಬಗ್ಗೆ ವಿಶ್ವಸಂಸ್ಥೆ ತನ್ನ ಮಾನವ ಹಕ್ಕುಗಳ ಘೋಷಣೆಯಲ್ಲಿ ಈ ರೀತಿ ಹೇಳಿದೆ. ಸಮಸ್ತ ಮಾನವ ಜೀವಿಗಳು ಸ್ವತಂತ್ರವಾಗಿ, ಗೌರವ ಮತ್ತು ಹಕ್ಕುಗಳಲ್ಲಿ ಸರಿ ಸಮಾನರಾಗಿ ಹುಟ್ಟುತ್ತಾರೆ. ಅವರಿಗೆ ವಿವೇಕ ಮತ್ತು ಆತ್ಮಪ್ರಜ್ಞೆಗಳಿರುತ್ತವೆ. ಅವರು ಒಬ್ಬರು ಇನ್ನೊಬ್ಬರ ಬಗೆಗೆ ಸಹೋದರ ಭಾವನೆಯಿಂದ ವರ್ತಿಸಬೇಕು. ಸಂವಿಧಾನದ ಪ್ರಸ್ತಾವನೆಯಲ್ಲಿ ಬಳಸಿರುವ ಈ ಪದ ಬಹಳವಾಗಿ ಒತ್ತಿ ಹೇಳಿರುವ ವಿಚಾರವೆಂದರೆ, ಅನೇಕ ವಿನಾಶಕಾರಿ ಸಮಾಜ ಶಕ್ತಿಗಳು, ಮತ ಮತ್ತು ಜಾತೀಯ, ವರ್ಗ ಮತ್ತು ಪಂಗಡ, ಸ್ಥಳೀಯ ಭಾಷಾ ಮತ್ತು ಸಾಂಸ್ಕೃತಿಕ, ಶಕ್ತಿಗಳು ಇಡೀ ರಾಷ್ಟ್ರವನ್ನೇ ವ್ಯಾಪಿಸಿ ಸೋದರತ್ವದ ಭಾವನೆಗೆ, ಬಾಳುವೆಗೆ ಅಡ್ಡಿಯನ್ನುಂಟು ಮಾಡುತ್ತಿವೆ. ಆದ್ದರಿಂದ ಇವುಗಳೆಲ್ಲವನ್ನು ದೂರಿಕರಿಸಿ ಸತ್ವಪೂರ್ಣ, ಸಮರ್ಥಶಾಲಿ ರಾಷ್ಟ್ರದ ಐಕ್ಯತೆಗೆ ಇದರ ಮೂಲಕ ಅವಕಾಶವಾಗಬೇಕು. ನಾವೆಲ್ಲರೂ ಒಂದೇ ತಾಯಿಯ ಮಕ್ಕಳು, ಒಂದೇ ನಾಡಿನ ಮಕ್ಕಳು ಎಂಬ ಭಾವನೆಯನ್ನು ಮೂಡಿಸುವಂತಹ ಒಂದು ಸಾಧನ ಇದಾಗಿದೆ. ಇದರ ಮೂಲಕ ಭಾರತೀಯರಲ್ಲಿ ಐಕ್ಯಮತ್ಯದ ಭಾವನೆಯನ್ನು ಮೂಡಿಸಿ, ರೂಢಿಸಿ, ಬಲಗೊಳಿಸುವ ಗುರಿಯನ್ನು ಹೊಂದಿದೆ. ವ್ಯಕ್ತಿಯ ಘನತೆಗೆ ಕುಂದು ತರುವಂತಹ ಜಾತಿ, ಮತ, ಧರ್ಮ, ಭಾಷೆ, ಕರಿಯ–ಬಿಳಿಯ, ಬಡವ–ಬಲ್ಲಿದ, ಕೀಳರಿಮೆ, ಬಡತನ, ನಿರುದ್ಯೋಗ ಇನ್ನು ಮುಂತಾದ ಭೇದ ಭಾವಗಳನ್ನು ಹತ್ತಿಕ್ಕಿ ನಾವೆಲ್ಲಾ ಒಂದೇ ಎಂಬ ಮನೋಭಾವನೆಯನ್ನು ರೂಡಿಸುವಂತಹ ವಿವರ ಪೂರ್ಣ, ಅರ್ಥಪೂರ್ಣ ಪ್ರಸ್ತಾವನೆಯ ವಿಚಾರ ಇದಾಗಿದೆ.

ಈ ಮೇಲಿನವುಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ನಮಗೆ ಬೇಕಾದ ಶಿಕ್ಷಣವನ್ನು ನೀಡಿದ್ದಾರೆ ಆದರೆ ಕೆಲವು ಮೂಲ ಆಶಯಗಳು ಮಗುವಿನ ವ್ಯಕ್ತಿತ್ವದಲ್ಲಿ ಬರಬೇಕಾಗುತ್ತದೆ.

ಈ ಮೌಲ್ಯಗಳು ವಿದ್ಯಾವಂತ ವ್ಯಕ್ತಿಯಲ್ಲಿ ಬರಬೇಕಾದರೆ ಪ್ರಾಥಮಿಕ ಹಂತದಿಂದಲೇ ಮೌಲ್ಯಗಳನ್ನು ಕಲಿಯಬೇಕಾಗುತ್ತದೆ. ಈ ಮೌಲ್ಯಗಳು ದೇಶಕ್ಕೆ ಎಷ್ಟು ಮುಖ್ಯವೋ ಪ್ರತೀ ಮನೆಗೂ ಅಷ್ಟೇ ಮುಖ್ಯ. ಈ ಮೇಲೆ ಮಾತನಾಡಿದ ಎಲ್ಲಾ ಅಂಶಗಳನ್ನು ನಾವು ಮೌಲ್ಯಗಳೆಂದು ಕರೆಯುತ್ತೇವೆ. ಮೌಲ್ಯಗಳನ್ನು ಕೇವಲ ಬೋಧನೆಯ ಮೂಲಕ ತರುವುದು ಕಷ್ಟ. ಮೌಲ್ಯಗಳನ್ನು ಆಚರಣೆಯಿಂದ ಕಲಿಯಬೇಕಾಗುತ್ತದೆ. ಉದಾ: ಸತ್ಯವನ್ನು ನಾವು ಕಲಿಯಬೇಕಾದರೆ ಕೇವಲ ಸತ್ಯದ ಬಗೆಗಿನ ಸಾಹಿತ್ಯವನ್ನು ಓದಿದರೆ ನಮಗೆ ಅದರ ಮೌಲ್ಯಗಳು ಬರುವುದಿಲ್ಲ, ಬದಲಾಗಿ ಸತ್ಯವನ್ನು ಮಾತನಾಡುವವರ ಜೊತೆಗೆ ಇರುತ್ತಾ ನಾವು ಅದರ ಪ್ರಾಮುಖ್ಯತೆಯನ್ನು ಅರಿಯ ಬೇಕಾಗುತ್ತದೆ ಮತ್ತು ಸತ್ಯವನ್ನು ನುಡಿಯುವಾಗ ಎದುರಾಗಬಹುದಾದ ಸವಾಲುಗಳನ್ನು ಅರ್ಥೈಸಿಕೊಂಡು ಅದು ಅಭ್ಯಾಸಮಾಡುವಾಗ ಅಡ್ಡಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ.

ಈಗ ಈ ಬದ್ಧತೆಯನ್ನು ಶಾಲೆಯಲ್ಲಿ ನಮ್ಮ ಮಕ್ಕಳಿಗೆ ಅವರ ವ್ಯಕ್ತಿತ್ವದ ಭಾಗವಾಗಿಸಲು ಬೇಕಾದ ವಿಫುಲ ಅವಕಾಶಗಳು ಈಗಾಗಲೇ ಇದ್ದು ಅವುಗಳನ್ನು ಕಾರ್ಯೋನ್ಮುಖಗೊಳಿಸಬೇಕಾಗುತ್ತದೆ. ಉದಾಹರಣೆಗೆ: ಪ್ರತಿ ತರಗತಿಯು ಪ್ರಜಾಪ್ರಭುತ್ವದ ಮೌಲ್ಯಗಳಿಂದ ಕೂಡಿರಬೇಕಾಗುತ್ತದೆ. ಅಂದರೆ ತರಗತಿಯ ಸಮಯದಲ್ಲಿ ಅರ್ಥವಾಗದೇ ಇರುವ ಪ್ರಶ್ನೆಗಳನ್ನು ಕೇಳಲು ಮಕ್ಕಳಿಗೆ ಸ್ವಾತಂತ್ರ್ಯ ಮತ್ತು ಅವಕಾಶಗಳನ್ನು ಒದಗಿಸಿಕೊಡಬೇಕಾಗುತ್ತದೆ. ಕಲಿಕೆಯಾಗಲು ಮಕ್ಕಳಿಗೆ ಆಸಕ್ತಿದಾಯಕ ವಿಷಯಗಳನ್ನು ಕಲಿಯಲು ಸಮಾನ ಅವಕಾಶ ಹಾಗೂ ಆಯ್ಕೆಯಲ್ಲಿನ ಸ್ವಾತಂತ್ರ್ಯವನ್ನು ನೀಡಬೇಕಾಗುತ್ತದೆ. ಶಿಕ್ಷಕರು ಒಂದು ಅವಧಿಯಲ್ಲಿ ಒಂದು ಪರಿಕಲ್ಪನೆಯನ್ನು ಚರ್ಚಿಸುವಾಗ ಖಂಡಿತವಾಗಿ ಕೆಲವು ಮಕ್ಕಳಿಗೆ ಅರ್ಥವಾಗುತ್ತದೆ ಮತ್ತು ಉಳಿದ ಮಕ್ಕಳಿಗೆ ಅವರ ಕಲಿಕಾ ವಿಧಾನ ಬೇರೆಯಾಗಿರುವುದರಿಂದ ಅರ್ಥವಾಗಿರುವುದಿಲ್ಲ. ಆಗ ಸಾಮಾಜಿಕ ನ್ಯಾಯದಡಿಯಲ್ಲಿ ಪರಿಹಾರ ಬೋಧನೆ ಮಾಡಿ ಆ ಮಕ್ಕಳಿಗೂ ಅರ್ಥಮಾಡಿಸುವ ಪ್ರಕ್ರಿಯೆಯನ್ನು ಮಾಡಬೇಕಾಗುತ್ತದೆ. ನ್ಯಾಯದ ಇನ್ನೊಂದು ಆಯಾಮವಾಗಿ ಶಿಕ್ಷಕರು ಪ್ರತೀ ತರಗತಿಗೂ ತಮ್ಮನ್ನು ತಾವು ತಯಾರಿ ಮಾಡಿಕೊಂಡು ಪಾಠ ಟಿಪ್ಪಣಿಯನ್ನು ಬರೆದುಕೊಂಡು ಬರಬೇಕಾಗುತ್ತದೆ. ಇಲ್ಲದಿದ್ದರೆ ಅದು ನ್ಯಾಯದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇಲ್ಲಿ ಈ ಪ್ರಜಾ ಪ್ರಭುತ್ವದ ಮೌಲ್ಯಗಳನ್ನು ಮಕ್ಕಳ ವ್ಯಕ್ತಿತ್ವದಲ್ಲಿ ಮೈಗೂಡಿಸುವ ಪ್ರಕ್ರಿಯೆಯಲ್ಲಿ ಅವರು ನೋಡಿ, ಕೇಳಿ, ಅನುಭವಿಸಿ ಕಲಿಯಲು ಬೇಕಾದ ಎಲ್ಲ ರೀತಿಯ ಪ್ರಯತ್ನಗಳನ್ನು ನಾವು ಮಾಡಬೇಕಾಗುತ್ತದೆ, ಇದಕ್ಕೆ ಶಿಕ್ಷಕರಾದ ನಾವು ಈ

ಮೌಲ್ಯಗಳನ್ನು ನನ್ನಲ್ಲಿ ಅಳವಡಿಸಿಕೊಂಡಿರುವುದು ಮತ್ತು ಅದಕ್ಕೆ ನಾವು ಬದ್ಧರಾಗಿರುವುದು ತುಂಬಾ ಮುಖ್ಯವಾದುದಾಗಿದೆ.

**ಆಲೋಚನೆ ಮತ್ತು ಕ್ರಿಯೆಯಲ್ಲಿ ಸ್ವಾತಂತ್ರ್ಯ:**

ಮನುಷ್ಯ ಇತರೆ ಪ್ರಾಣಿಗಳಿಗೆ ಹೋಲಿಸಿದಾಗ ಸಂಭಾವ್ಯತೆಗಳಲ್ಲಿ ಅನನ್ಯನಾಗಿದ್ದಾನೆ. ಈ ಅನನ್ಯ ಸಂಭಾವ್ಯತೆಗಳಲ್ಲಿ ಯೋಚಿಸುವ, ಯೋಚಿಸಿದ್ದನ್ನು ಕಾರ್ಯಗತಗೊಳಿಸುವುದು ಕೂಡಾ ಒಂದಾಗಿದೆ. ಈ ರೀತಿಯಲ್ಲಿ ಅಂದರೆ ಸರಿಯಾದುದನ್ನು ಆಲೋಚಿಸುವ ಮತ್ತು ಆಲೋಚಿಸಿದ್ದನ್ನು ಕ್ರಿಯೆಯಲ್ಲಿ ತರುವ ಸ್ವಾತಂತ್ರವನ್ನು ವ್ಯಕ್ತಿಗೆ ನೀಡಿದ್ದೇ ಆದರೆ ಹೊಸತನ್ನು ಹುಡುಕಬಲ್ಲ ಎಂಬುದು ಹಲವಾರು ಅನ್ವೇಷಣೆಗಳಿಂದ ಈಗಾಗಲೇ ಕಂಡುಕೊಂಡಿದ್ದಾನೆ. ಈ ರೀತಿಯ ಸ್ವಾತಂತ್ರದಿಂದ ವ್ಯಕ್ತಿಯು :

- ತನ್ನದೇ ಆದ ಭಾವನೆ ಮತ್ತು ಭವಿಷ್ಯ ನಿರ್ಧಾರ ಮಾಡುವ ಆಲೋಚನೆಯನ್ನು ಹೊಂದಿರುವರು. ಇದರಿಂದ ತಮ್ಮ ಮುಂದಿನ ಭವಿಷ್ಯಕ್ಕೆ ಬೇಕಾದ ಉನ್ನತ ಶಿಕ್ಷಣ ಅಥವಾ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯ ಹೊಂದಿರುವರು.
- ತಮ್ಮಲ್ಲಿ ಬರುವ ಅಲೋಚನೆಯನ್ನು ಸಹಪಾಠಿ, ಶಿಕ್ಷಕರು ಮತ್ತು ಪೋಷಕರೊಡನೆ ಹಂಚಿಕೊಂಡು ಅದನ್ನು ಕಾರ್ಯರೂಪಕ್ಕೆ ತರುವರು.
- ಯಾವುದೇ ಸಂದರ್ಭದಲ್ಲಿ ತಮ್ಮ ಅಲೋಚನೆಗಳಿಗೆ ವಿರೋಧ ವ್ಯಕ್ತವಾದಾಗ ಧೈರ್ಯದಿಂದ ತಮ್ಮ ನಿಲುವನ್ನು ಸ್ಪಷವಾಗಿ ವ್ಯಕ್ತಪಡಿಸುವ ಹಾಗೂ ಮುಕ್ತವಾಗಿ ಚರ್ಚಿಸುವ ಸಾಮರ್ಥ್ಯ ಹೊಂದಿದ್ದು, ಈ ನಿಟ್ಟಿನಲ್ಲಿ ಹಿರಿಯರ ಮನ ಒಲಿಸುವ ಸಾಮರ್ಥ್ಯವನ್ನು ಮೈಗೂಡಿಸಿಕೊಳ್ಳುವರು.
- ಕುಟುಂಬ, ಗ್ರಾಮ, ರಾಜ್ಯ ಹಾಗೂ ರಾಷ್ಟ್ರದ ಪ್ರಗತಿ ಮತ್ತು ಕೊರತೆಗಳ ಕುರಿತು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಲೋಚಿಸುತ್ತಾರೆ.

ಈ ವ್ಯಕ್ತಿತ್ವವನ್ನು ಬೆಳೆಸಲು ಶಾಲೆಯಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಮಾಡಲಾಗುತ್ತದೆ. ಅದರಲ್ಲಿ ಸೃಜನಾತ್ಮಕ ಬರವಣಿಗೆಗಳು ಕೂಡಾ ಒಂದಾಗಿದೆ. ಹೀಗೆ ಒಂದು ಶಾಲೆಯಲ್ಲಿ ಸ್ವಯಂಸೇವಾ ಸಂಸ್ಥೆಯ ಮುಖ್ಯಸ್ಥರನ್ನು ಶಾಲಾ ವಾರ್ಷಿಕೋತ್ಸವದ ಸಮಾರಂಭಕ್ಕೆಂದು ಕರೆಯಲಾಗಿತ್ತು. ಅಲ್ಲಿ ಮಕ್ಕಳು ಆ ವರ್ಷದಲ್ಲಿ ಬರೆದ ಎಲ್ಲಾ ಬರವಣಿಗೆಗಳನ್ನು ಬೈಂಡಿಂಗ್ ಮಾಡಿಸಿ ಹಾಕಲಾಗಿತ್ತು. ಅದರ ಒಂದು ಪ್ರತಿಯನ್ನು ಬಂದಂಥ ಅತಿಥಿಗಳಿಗೆ ನೀಡಲಾಯಿತು. ಸಂಸ್ಥೆಯ ಮುಖ್ಯಸ್ಥರು ಇಡೀ ಪುಸ್ತಕವನ್ನು ಓದಲು ಸಾಧ್ಯವಾಗುವುದಿಲ್ಲ ಆದರೆ ಕೆಲವು ಬರವಣಿಗೆಗಳನ್ನು ನೋಡೋಣ ಎಂದು ಒಂದು ಮಗು ಬರೆದ ಬರವಣಿಗೆಯನ್ನು ಸಂಪೂರ್ಣವಾಗಿ ಓದಿದರು. ಅದು ಸುಂದರವೂ, ಹಾಗೂ ಅದ್ಬುತವೂ ಆಗಿತ್ತು. ಯಾಕೆಂದರೆ ಬರವಣಿಗೆ 'ಸಂಕ್ರಾಂತಿ' ಹಬ್ಬದ ಮೇಲೆ ಬರೆಯಲಾಗಿತ್ತು. ಆ ಬರೆವಣಿಗೆ ಹೀಗಿತ್ತು.

"ಸಂಕ್ರಾಂತಿ ಹಬ್ಬವೆಂದರೆ ನನಗೆ ತುಂಬಾ ಇಷ್ಟ ಯಾಕೆಂದರೆ ಅಂದು ಮನೆಯಲ್ಲಿ ಎಲ್ಲಾ ರೀತಿಯ ಸಿಹಿ ತಿಂಡಿಗಳನ್ನು ಮಾಡುತ್ತಾರೆ, ನನಗೆ ಹೊಸ ಬಟ್ಟೆಗಳನ್ನು ಕೊಡಿಸುತ್ತಾರೆ ಮತ್ತು ಎಲ್ಲರೂ ಸಡಗರದಿಂದ ಹಬ್ಬವನ್ನು ಗ್ರಾಮದ ದೇವತೆ ಪೂಜೆ ಮಾಡುವುದರ ಮೂಲಕ ಮಾಡುತ್ತಾರೆ. ಅಂದು ನಮ್ಮ ಎತ್ತುಗಳಿಗೂ ಬಣ್ಣಹಚ್ಚಿ ಶೃಂಗಾರ ಮಾಡುತ್ತಾರೆ. ಎತ್ತುಗಳೆಂದರೆ ನನಗೆ ತುಂಬಾ ಇಷ್ಟ ಯಾಕೆಂದರೆ ಅವು ನಮ್ಮ ಹೊಲದಲ್ಲಿ ಕಷ್ಟಪಟ್ಟು ದುಡಿಯುತ್ತವೆ. ಇತ್ತೀಚಿನ ವರ್ಷಗಳಲ್ಲಿ ಎತ್ತುಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎತ್ತುಗಳ ಬದಲಾಗಿ ಟ್ರಾಕ್ಟರ್‌ಗಳನ್ನು ಬಳಸಲಾಗುತ್ತಿದೆ. ಎತ್ತುಗಳಿರುವುದೇ ನಮ್ಮ ಊರಿಗೆ ಚೆಂದ'

ಈ ಮೇಲಿನ ಮಗುವಿನ ಬರವಣಿಗೆಯಲ್ಲಿ ಬಹಳಷ್ಟು ವಿಷಯಗಳನ್ನು ಗುರುತಿಸಬಹುದು.

ಹಬ್ಬವನ್ನು ವಿವರಿಸುವ ರೀತಿ, ಹಬ್ಬದ ಬಗ್ಗೆ ಬರೆಯುತ್ತಾ ಎತ್ತುಗಳ ಬಗ್ಗೆ ಬರೆಯುತ್ತಾನೆ, ಇತ್ತೀಚೆಗೆ ಎತ್ತುಗಳ ಸಂಖ್ಯೆ ಕಡಿಮೆಯಾಗುತ್ತಿರುವುದರ ಬಗ್ಗೆ ಕಳಕಳಿ ಮತ್ತು ಬದುಕು ಯಾಂತ್ರಿಕವಾಗುತ್ತಿರುವುದು. ಇಲ್ಲಿ ಬರವಣಿಗೆ ತುಂಬಾ ಚಿಕ್ಕದಾಗಿರಬಹುದು ಆದರೆ ಒಂದು ಸೃಜನಾತ್ಮಕ ಬರವಣಿಗೆ ಈ ಕಳಕಳಿಯನ್ನು ಎತ್ತಿ ತೋರಿಸುತ್ತದೆ ಎಂದಾದರೆ ಇದಕ್ಕೆ ಎಷ್ಟು ಮಹತ್ವವಿದೆ ಎಂಬುದು ನಾವು ಅರಿಯಬೇಕು. ಇಲ್ಲಿ ಯೋಚನೆ ಹಾಗೂ ಕೃತಿಗೆ ಸ್ವಾತಂತ್ರ್ಯ ಕೊಟ್ಟರೆ ವಿನೂತನವಾದ ವಿಷಯಗಳು, ಆಲೋಚನೆಗಳು ಹಾಗು ಕಳಕಳಿಗಳು ಬೆಳಕಿಗೆ ಬರುತ್ತವೆ. ಇದು ಒಂದು ಉದಾಹರಣೆ

ಮಾತ್ರ. ಹೀಗೆ ನಮ್ಮ ಶಾಲೆಗೆಳಲ್ಲಿ ಸೃಜನಾತ್ಮಕವಾಗಿ ಯೋಚಿಸಲು ಹಾಗೂ ಕಾರ್ಯಗಳನ್ನು ಮಾಡಲು ಸಾಕಷ್ಟು ಅವಕಾಶಗಳಿವೆ ಅವುಗಳನ್ನು ನಾವು ಗುರುತಿಸಬೇಕು ಹಾಗೂ ಪೂರೈಸಬೇಕು.

**ಆರ್ಥಿಕ ಪ್ರಕ್ರಿಯೆ ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಭಾಗವಹಿಸುವ ಸಾಮರ್ಥ್ಯ:**

ಭಾರತ ದೇಶದ ಪ್ರತಿಯೊಂದು ಪ್ರಜೆಗಳಿಂದ ಇರುವ ನಿರೀಕ್ಷೆ ಎಂದರೆ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯಲ್ಲಿ ಎಲ್ಲರೂ ಭಾಗವಹಿಸಬೇಕೆಂಬುದಾಗಿದೆ. ಇಲ್ಲಿ ಆರ್ಥಿಕ ಪ್ರಕ್ರಿಯೆ ಎಂದರೆ ತಮ್ಮ ಮಟ್ಟದಲ್ಲಿ ಒಂದಲ್ಲ ಒಂದು ರೀತಿಯ ಕೆಲಸದಲ್ಲಿ ಎಲ್ಲರೂ ತೊಡಗಿಕೊಳ್ಳಬೇಕೆಂಬುದಾಗಿದೆ. ಕೃಷಿ, ವ್ಯಾಪಾರ, ಉದ್ಯೋಗ, ಸೇವೆ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ತೊಡಗಿರಬಹುದು ಆದರೆ ನಿರುತ್ಪಾದಕತೆಯಿಂದ ಮಾತ್ರ ಇರಬಾರದು. ಇನ್ನು ಯುವಕರೇ ದೇಶದ ಶಕ್ತಿ. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಯುವಕರು ಹೆಚ್ಚಿನ ಪ್ರಮಾಣದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯಲ್ಲಿ ಭಾಗವಹಿಸಬೇಕು. ಇಲ್ಲಿ ನಿರೀಕ್ಷೆ ಏನಿದೆ ಎಂದರೆ:

- ತನ್ನಲ್ಲಿ ಆರ್ಥಿಕ ಪ್ರಕ್ರಿಯೆ ಹಾಗೂ ಸಾಮಾಜಿಕ ಬದಲಾವಣೆಗಳಲ್ಲಿ ಭಾಗವಹಿಸುವ ಸಾಮರ್ಥ್ಯ ಇದೆ ಎಂಬುದನ್ನು ಅರಿತಿರುತ್ತಾರೆ.
- ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ತನ್ನ ಅಗತ್ಯತೆಯನ್ನು ಪೋಷಕರ ಮುಂದಿಡಲು ಸಾಮರ್ಥ್ಯ ಹೊಂದಿರುತ್ತಾರೆ ಹಾಗೂ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಾರೆ.
- ತನ್ನ ಸುತ್ತಮುತ್ತಲಿನ ಅರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಸಾಮರ್ಥ್ಯ ಹೊಂದಿರುತ್ತಾರೆ. ಜೊತೆಗೆ ಆರ್ಥಿಕ ವ್ಯವಸ್ಥೆಗಳ ಅಸಮಾನತೆಗಳ ಬಗ್ಗೆ ತುಲನೆ ಮಾಡುವ ಸಾಮರ್ಥ್ಯ ಹೊಂದಿರುತ್ತಾರೆ.
- ತನ್ನಲ್ಲಿರುವ ಕೌಶಲ್ಯ, ಪ್ರತಿಭೆ ಮತ್ತು ಅನುಭವವನ್ನು ಬೇರೆ ಕ್ಷೇತ್ರದಲ್ಲಿ ಬಳಸಬಹುದೇ? ವಿದ್ಯಾಭ್ಯಾಸವನ್ನು ಮುಂದುವರೆಸಬಹುದೇ? ದುಡಿಯಲೇ? ಎಂಬ ಯೋಚನೆ ಮಾಡಲು ಸಮರ್ಥರಿರುತ್ತಾರೆ.
- ತನ್ನದೇ ವಯಸ್ಸಿನವರೊಂದಿಗೆ/ಸಹವರ್ತಿಗಳೊಂದಿಗೆ ಹೆಚ್ಚು ಸಮಯವನ್ನು ಸಾಮಾಜಿಕ, ಆರ್ಥಿಕ ವಿಷಯಗಳ ಬಗ್ಗೆ ಚರ್ಚಿಸುವ ಸಾಮರ್ಥ್ಯ ಹೊಂದಿರುತ್ತಾರೆ.
- ಸಮಾಜದಲ್ಲಿ ಏನು ನಡೆಯುತ್ತಿದೆ, ಯಾವ ಪ್ರಬಲ ಶಕ್ತಿಗಳು ತಮ್ಮ ಸುತ್ತಮುತ್ತಲು ಇವೆ ಎಂಬುದನ್ನು ಗಮನಿಸುತ್ತಿರುತ್ತಾರೆ.
- ಸಮಾಜದಲ್ಲಿ ವಿವಿಧ ಆಸಕ್ತಿ, ಹಿತಾಸಕ್ತಿ ಇರುವ ವ್ಯಕ್ತಿ, ಸಂಘಟನೆ ಇರುವುದರ ಅರಿವು ಹೊಂದಿರುತ್ತಾರೆ.
- ತಮ್ಮ ಸುತ್ತಮುತ್ತಲ ಸ್ಥಳೀಯ ಸಂಪನ್ಮೂಲಗಳಾದ –ಅರಣ್ಯ, ನೀರು, ಸಾಮೂಹಿಕ ಭೂಮಿ ಇತರೇ ಅಂಶಗಳ ಬಗ್ಗೆ ಅರಿವು ಹೊಂದಿರುತ್ತಾರೆ.
- ರಾಜಕೀಯ ವ್ಯವಸ್ಥೆ, ಸರ್ಕಾರದ ವಿವಿಧ ಸ್ತರಗಳ ಆಡಳಿತದ ಬಗ್ಗೆ – ಗ್ರಾಮ ಸಭೆ, ಪಂಚಾಯತ್ ಇತರೆ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ.

ಶಿಕ್ಷಣ ಪಡೆಯಲಿ ಅಥವಾ ಪಡೆಯದೇ ಇರಲಿ ಯಾವುದೊ ಒಂದು ರೀತಿಯ ಉದ್ಯೋಗದಲ್ಲಿ ತೊಡಗುವ ಸಾಮರ್ಥ್ಯ ಎಲ್ಲರಲ್ಲಿಯೂ ಸಾಮಾನ್ಯವಾಗಿ ಇರುತ್ತದೆ ಅದೇ ಶಿಕ್ಷಣ ಪಡೆದರೆ ಆ ಉದ್ಯೋಗವನ್ನು ಇನ್ನೂ ಅರ್ಥಪೂರ್ಣವಾಗಿ ಮಾಡಬಹುದಾಗಿದೆ. ಸಾಮಾಜಿಕ ಬದಲಾವಣೆ ಎಂದರೆ ಸಮಾಜದ ಪಿಡುಗುಗಳನ್ನು ದೂರಮಾಡುವ ನಿಟ್ಟಿನಲ್ಲಿ ಕೈಗೊಳ್ಳುವ ಕ್ರಮಗಳು, ಸಮಾಜವನ್ನು ಮುನ್ನಡೆಸುವ ನಿಟ್ಟಿನಲ್ಲಿ ಮಾಡಬಹುದಾದ ಎಲ್ಲ ಕೆಲಸಗಳು ಈ ಸಾಮಾಜಿಕ ಬದಲಾವಣೆಯಲ್ಲಿ ಬರುವ ಕಾರ್ಯಗಳಾಗಿವೆ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸಾಕಷ್ಟು ಜನರು ಶಿಕ್ಷಣವನ್ನು ಪಡೆದರೂ ತಮಗೆ ಬೇಕಾದ ಉದ್ಯೋಗ ದೊರೆಯುತಿಲ್ಲವೆಂಬ ಕಾರಣಕ್ಕೆ ನಿರುದ್ಯೋಗಿಗಳಾಗಿ ಉಳಿಯುತ್ತಿದ್ದಾರೆ. ಅದಕ್ಕೆ ಬದಲಿ ಉದ್ಯೋಗದಲ್ಲಿ ತೊಡಗಿಕೊಳ್ಳುವ ಮನಸ್ಸಿಲ್ಲ ಮತ್ತು ಅದಕ್ಕೆ ಬೇಕಾದ ಕೌಶಲಗಳ ಕೊರತೆಯೂ ಇದೆ. ಕಾರಣ ಈ ಶಿಕ್ಷಣವು ಎಂತಹ ವ್ಯಕ್ತಿಗಳನ್ನು ಸೃಷ್ಟಿಮಾಡಬೇಕೆಂದರೆ, ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು.

ಶಾಲಾ ಪ್ರಕ್ರಿಯೆಗಳಲ್ಲಿ ಆರ್ಟ್ಸ್, ಕ್ರಾಫ್ಟ್, ಸಂಗೀತ ಹಾಗೂ ಮೂಲ ಶಿಕ್ಷಣದ ಮೂಲಕ ಮಕ್ಕಳನ್ನು ದೇಶದ ಸಂಪತ್ತಾಗಿ ಬೆಳೆಸಬೇಕು ಮತ್ತು ಎಲ್ಲರೂ ಉತ್ಪಾದಕತೆಯಲ್ಲಿ ತೊಡಗಬೇಕು ಇದು ಅವರ ಒಂದು ಎಕರೆ ಜಮೀನಿನಲ್ಲಿ ಸಾಗುವಳಿ ಮಾಡಿದರೂ ಸಾಕಾಗುತ್ತದೆ ಎಂಬ ಅರ್ಥದಲ್ಲಿ ಬರುತ್ತದೆ. (ಈಗಿನ ಪ್ರಸಕ್ತ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವನಿರುದ್ಯೋಗಿಗಳ ಅಂಕೆ–ಸಂಖ್ಯೆಯನ್ನು ಒಂದು ಬಾರಿ ನೋಡಿ).

**ಇತರರ ಭಾವನೆ ಹಾಗೂ ಕ್ಷೇಮದ ಬಗ್ಗೆ ಸಂವೇದನೆ:**

ಸಂವೇದನೆ ಎಂಬುದು ಒಂದು ಭಾವನೆಯ ಅಂಶವಾಗಿದೆ. ಮನುಷ್ಯನ ಅನನ್ಯತೆಯ ಸಂಭಾವ್ಯತೆಗಳಲ್ಲಿ ಈ ಅಂಶವೂ ಒಂದಾಗಿದೆ. ಈ ಸಂವೇದನೆ ಇತರರ ಭಾವನೆ ಹಾಗೂ ಕ್ಷೇಮದ ಉದ್ದೇಶವನ್ನು ಇಟ್ಟುಕೊಂಡು ನೋಡಬೇಕಾಗುತ್ತದೆ. ಇದು ಒಂದು ಕುಟುಂಬಕ್ಕೂ ಅವಶ್ಯಕ ಹಾಗು ಒಂದು ಸಮಾಜ ಸುಖಿಯಾಗಿ ಇರಲು ಬೇಕಾದ ಅಂಶವೂ ಆಗಿದೆ. ಈ ಸಂವೇದನೆ ಇಲ್ಲದೇ ಹೋದಲ್ಲಿ ಸ್ವಾರ್ಥದಿಂದಕೂಡಿದ ವ್ಯಕ್ತಿ ಹಾಗು ಸಮಾಜವು ನಿರ್ಮಾಣವಾಗುತ್ತದೆ ಮತ್ತು ಅದು ಉತ್ತಮ ಸಮಾಜದ ಪರಿಕಲ್ಪನೆಗೆ ಅಡ್ಡಿಯಾಗುತ್ತದೆ.

ಇಲ್ಲಿ ವ್ಯಕ್ತಿ, ಸಮುದಾಯ ಹಾಗೂ ಇತರೆ ಸಮುದಾಯಗಳ ನಡುವೆ ಸಂವೇದನೆ ಬೇಕಾಗುತ್ತದೆ. ಸಂವೇದನೆಯುಳ್ಳ ವ್ಯಕ್ತಿಯಾರಾದರೆ ಈ ಕೆಳಕಂಡ ನಿರೀಕ್ಷೆಗಳು ಅವನಿಂದ ಇರುತ್ತವೆ.

- ವ್ಯಕ್ತಿಯು ತಮ್ಮ ಸುತ್ತಮುತ್ತಲಿನ ಪರಿಸರ, ಸಮಾಜದಲ್ಲಿನ ಮೌಲ್ಯಗಳನ್ನು ಅರಿತು ನಡೆಯುವರು;
- ಸಮಾಜದಲ್ಲಿನ ವ್ಯವಸ್ಥೆ, ಸಂಸ್ಕೃತಿ ಮತ್ತು ಧಾರ್ಮಿಕ ವಿಚಾರಗಳಲ್ಲಿ ಎಂದಿಗೂ ಇತರರ ಭಾವನೆಗಳಿಗೆ ಧಕ್ಕೆ ಬಾರದಂತೆ ನಡೆದುಕೊಳ್ಳುವರು.
- ಸಮಾಜದಲ್ಲಿನ ಒಂದು ಅಂಗವಾಗಿ ಬೆಳೆಯುತ್ತಾ ತಮ್ಮ ಸಹಪಾಠಿಗಳ ಭಾವನೆಗಳಿಗೆ ಸ್ಪಂದಿಸುವರು.
- ವ್ಯಕ್ತಿಯು ಸ್ವಾರ್ಥತೆಯನ್ನು ಬಿಟ್ಟು ಎಲ್ಲರ ಕ್ಷೇಮ ಮತ್ತು ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸುವರು.
- ಇತರರ ಭಾವನೆಗಳಿಗೆ ಕೆಡುಕು ಉಂಟಾದ ಸಂದರ್ಭದಲ್ಲಿ, ತಾನು, ತನ್ನ ಇರುವಿಕೆಯನ್ನು ಅರ್ಥ ಮಾಡಿಕೊಂಡು, ಪರಿಸ್ಥಿತಿಯ ಗುಣಾತ್ಮಕ ಬದಲಾವಣೆಗೆ ಪೂರಕವಾಗಿ ಸ್ಪಂದಿಸುವ ಸಾಮರ್ಥ್ಯ ಹೊಂದಿರುವರು.
- ನೊಂದವರು, ವಿಶೇಷ ಗಮನ ಅಗತ್ಯತೆ ಉಳ್ಳವರು ಮತ್ತು ಮಹಿಳೆಯರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ.

ಇತರರು ಎಂದರೆ ನಮ್ಮನ್ನು ಬಿಟ್ಟು ಉಳಿದವರು. ಅವರು ಮನೆಯವರಾಗಿರಬಹುದು ಅಥವಾ ನರೆಹೊರೆಯವರಾಗಿರಬಹುದು, ಲಿಂಗ, ಜಾತಿ, ಧರ್ಮ ಹಾಗೂ ಮತಗಳನ್ನು ಮೀರಿದ ಸಂವೇದನೆ ಇದಾಗಿರುತ್ತದೆ. ಇದು ಭಾವನೆಗೆ ಸಂಬಂಧಿಸಿರುವುದರಿಂದ ಒಂದೇ ಚೌಕಟ್ಟಿನಲ್ಲಿ ಇದನ್ನು ತರಲು ಸಾಧ್ಯವಿಲ್ಲ. ನಾವು ದಿನಂಪ್ರತಿ ಸಾಕಷ್ಟು ಜನರ ಜೊತೆಗೆ ಸಂವಹನ ಮತ್ತು ವ್ಯವಹಾರ ಮಾಡುತ್ತೇವೆ. ಆ ಮೂಲಕ ಎಷ್ಟೊ ಸಂದೇಶಗಳನ್ನು ಮತ್ತು ವಿಚಾರಗಳನ್ನು ವ್ಯಕ್ತಪಡಿಸುತೇವೆ. ಆದರೆ ಗೊತ್ತಿದ್ದೋ ಗೊತ್ತಿಲ್ಲದೆಯೊ ಬಹಳಜನರ ಭಾವನೆಗಳಿಗೆ ಈ ಸಂವಹನದ ಮೂಲಕ ನೋವನ್ನುಂಟು ಮಾಡುತ್ತೇವೆ. ಮಹಿಳೆಯರು ಎಂಬ ಕಾರಣಕ್ಕೆ, ಮಕ್ಕಳು ಎಂಬ ಕಾರಣಕ್ಕೆ, ವಿಕಲಚೇತನರು, ನಿಶಕ್ತರು ಎಂಬ ಕಾರಣಕ್ಕೆ ಹಲವಾರು ಕಾರಣಗಳ ಮೇಲೆ ಮಾತು ಹಾಗೂ ಕೃತಿಗಳ ಮೂಲಕ ನೋವುಂಟು ಮಾಡುತ್ತೇವೆ. ಈ ಸೂಕ್ಷ್ಮತೆ ಶಿಕ್ಷಣದ ಮೂಲಕ ನಮ್ಮಲ್ಲಿ ಬರಬೇಕಾಗುತ್ತದೆ. ಮಹಿಳೆಯರನ್ನು ಹಾಗೂ ವಿಕಲಚೇತನರನ್ನು ಮನರಂಜನಾ ವಸ್ತುವನ್ನಾಗಿ ನೋಡದಿರಲು ಈ ಉದ್ದೇಶ ನಿರೀಕ್ಷಿಸುತ್ತದೆ.

ಇಲ್ಲಿ ಇತರರು ಎಂದಾಕ್ಷಣ ಮನುಷ್ಯ ಮತ್ತು ಮನುಷ್ಯರ ನಡುವೆ ಎಂದು ನಾವು ಯೋಚಿಸುತ್ತೇವೆ ಆದರೆ ಪರಿಸರ ಹಾಗೂ ಪ್ರಾಣಿ,ಪಕ್ಷಿಗಳನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಎಲ್ಲವುಗಳ ಬಗ್ಗೆಯೂ ನಮಗೆ ಸಂವೇದನೆ ಬೇಕಾಗುತ್ತದೆ. ಇಂದು ಮನುಷ್ಯನ ವರ್ತನೆಯ ಪರಿಣಾಮದಿಂದಾಗಿ ಮಾರುತಗಳಲ್ಲಿ ಬಗಲಾವಣೆಯಾಗಿದೆ. ಹಿಂದೆಂದೂ ಕಂಡರಿಯದಷ್ಟು ಬಿಸಿಯನ್ನು ಭೂಮಿ ಕಾಣುತ್ತಿದೆ, ಹಿಮಾಲಯ ಪರ್ವತದಲ್ಲಿ ಹಿಮ ಕಟ್ಟುವಿಕೆಯ ಪ್ರಮಾಣ ಕಡಿಮೆಯಾಗುತ್ತಿದೆ, ಲಕ್ಷಗಟ್ಟಲೆ ಹೆಕ್ಟರ್ ಅರಣ್ಯ ನಾಶವಾಗುತ್ತಿದೆ, ಕಾಲ ಕಾಲಕ್ಕೆ ಮಳೆ ಬರುತ್ತಿಲ್ಲ, ಪ್ರಾಣಿ, ಪಕ್ಷಿ ಸಂಕುಲ ನಾಶವಾಗುತ್ತಿವೆ, ಎಷ್ಟೋ ಪ್ರಭೇದಗಳು ನಾಶವಾಗಿವೆ ಮತ್ತು ಅಳಿವಿನ ಅಂಚಿನಲ್ಲಿವೆ. ಸಮುದ್ರದ ಆಳಕ್ಕೆ ಹೋಗಿ

ಮೀನುಗಾರಿಕೆ ಮಾಡುತ್ತಿರುವುದರಿಂದ ಮೀನುಗಳ ಸಂಖ್ಯೆ ಕಡಿಮೆಯಾಗುತ್ತವೆ. ಅತಿಯಾದ ಗಣಿಗಾರಿಕೆ ಹಾಗೂ ಭೂಮಿಯಲ್ಲಿನ ನೀರನ್ನು ತೆಗೆಯುತ್ತಿರುವುದರಿಂದ ಭೂಕಂಪನದಂತಹ ಅನಾಹುತಗಳು ಸಂಭವಿಸುತ್ತಿವೆ.

ಅಂದರೆ ಒಂದುಕಡೆ ಒಬ್ಬ ವ್ಯಕ್ತಿಯು ರಸ್ತೆಯ ಮೇಲೆ ಅಪಘಾತ ಸಂಭವಿಸಿದಾಗ ಅವನಿಗೆ ಸಹಾಯ ಮಾಡದಷ್ಟು ಪ್ರಮಾಣದಲ್ಲಿ ಸಂವೇದನೆಯನ್ನು ಕಳೆದುಕೊಳ್ಳುತ್ತಿದ್ದೇವೆ ಇನ್ನೊಂದು ಕಡೆ ಪರಿಸರ ನಾಶಮಾಡುತ್ತಾ ನಮ್ಮ ಅಸ್ತಿತ್ವಕ್ಕೆ ನಾವೇ ಕಂಟಕ ತಂದುಕೊಳ್ಳುತ್ತಿದ್ದೇವೆ ಮತ್ತು ಮುಂದಿನ ಪೀಳಿಗೆಗೆ ಸಂಕಷ್ಟವನ್ನು ತಂದೊಡ್ಡುತ್ತಿದ್ದೇವೆ.

ಈ ಶಿಕ್ಷಣದ ಉದ್ದೇಶದ ಪ್ರಕಾರ ಮಕ್ಕಳಲ್ಲಿ ಈ ಸಂವೇದನೆಯನ್ನು ಹುಟ್ಟುಹಾಕುವುದರ ಮೂಲಕ ಉತ್ತಮ ಪ್ರಜೆಗಳನ್ನು ನಿರ್ಮಾಣಮಾಡುವುದಾಗಿದೆ. ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಒಳ್ಳೆಯದಕ್ಕೂ ಹಾಗೂ ಕೆಟ್ಟದ್ದಕ್ಕೂ ಬಳಸಬಹುದು. ಇದನ್ನು ನಿರ್ಧಾರಮಾಡುವವರು ನಾವೇ ಆಗಿರುತ್ತೇವೆ. ಶಿಕ್ಷಣ ಒಳ್ಳೆಯದನ್ನು ಅಯ್ಕೆಮಾಡಿಕೊಳ್ಳಲು ಸಹಾಯಮಾಡುತ್ತದೆ. ನಾವು ಶಾಲೆಗಳಲ್ಲಿ ಓದಿರುವ ಗೋವಿನ ಹಾಡು, ನದಿಯ ಅಳಲು ಇತ್ಯಾದಿ ಪಾಠ ಹಾಗೂ ಪದ್ಯಗಳು ಭಾಷಾ ಕೌಶಲಗಳ ಜೊತೆಗೆ ಈ ಸಂವೇದನೆಯನ್ನು ಹುಟ್ಟುಹಾಕಲು ಸಹಕರಿಸುತ್ತವೆ.

**ಸಾಮಾಜಿಕ ಒಳಿತಿಗಾಗಿ ಸೃಜನಶಿಲತೆ ಮತ್ತು ನಾವಿನ್ಯತೆ:**

ಸೃಜನಶೀಲತೆ ಹಾಗೂ ನಾವಿನ್ಯತೆ ಇವು ಮಾನವನಲ್ಲಿರುವ ಅನನ್ಯಗುಣಗಳಲ್ಲಿ ಇವುಗಳೂ ಸೇರಿವೆ ಕಾರಣದಿಂದಾಗಿ ಗುಹೆಗಳಲ್ಲಿ ವಾಸಮಾಡುತ್ತಿದ್ದ ಮನುಷ್ಯ ಇಂದು ಕಂಪ್ಯೂಟರ್ ಯುಗವನ್ನು ಪ್ರವೇಶಿಸಿ ಎಷ್ಟೋ ನವೀನತೆಯನ್ನು ಸಾಧಿಸಿದ್ದಾನೆ (ಪ್ರಗತಿ ಸಾಧಿಸಿದ್ದಾನೆ). ಕೃಷಿ, ಕಾಮಗಾರಿ, ಉದ್ಯಮ, ದಿನನಿತ್ಯದ ಜೀವನ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ನವೀನತೆಯಿಂದ ಕೂಡಿದ ಯೋಚನೆಗಳನ್ನು ಮಾಡುತ್ತಾ ಹೊಸದನ್ನು ಸೃಷ್ಟಿಸುತ್ತಾ ದೈಹಿಕ ಶ್ರಮವನ್ನು ಕಡಿಮೆ ಮಾಡಿ ಯಾಂತ್ರಿಕತೆಯನ್ನು ಹೆಚ್ಚು ಬಳಸುವಂತಾಗಿದ್ದಾನೆ. ವಿಜ್ಞಾನ ಕ್ಷೇತ್ರದಲ್ಲಿ ದೊಡ್ಡ ಪರ್ವತಗಳನ್ನು ಭೇದಿಸಿ ಮನುಷ್ಯನಿಗೆ ಅನುಕೂಲವಾಗುವ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡಿದ್ದಾನೆ ಅಷ್ಟೇಯಾಕೆ ಚಂದ್ರನಲ್ಲಿಯೂ ಹೋಗಿ ಬಂದಿದ್ದಾನೆ.

ಇಲ್ಲಿ ಸೃಜನಶಿಲತೆ ಹಾಗು ನಾವಿನ್ಯತೆಯನ್ನು ಬಳಸಿಕೊಂಡು ಏನೇ ಅಭಿವೃದ್ಧಿಯಾದರೂ ಅದು ಯಾವುದಕ್ಕೆ ಸಮಾಜದ ಒಳಿತಿಗಾಗಿ ಇರಬೇಕೇ ಹೊರತು ಕೆಡಕಿಗಾಗಿ ಅಲ್ಲ. ಉದಾ: ವಿಜ್ಞಾನ ಹಾಗೂ ತಂತ್ರಜ್ಞಾನದ ಸಹಾಯದಿಂದ ಒಂದು ಬಾಂಬ್ ನ್ನು ತಯಾರಿಸಿದ್ದೇವೆಂದರೆ ಅದರಿಂದ ದೊಡ್ಡ ಬಂಡೆ ಒಡೆದು ಒಳ್ಳೆಯ ಭವನವನ್ನೇ ಕಟ್ಟಬಹುದು ಅಥವಾ ಅದನ್ನು ಒಂದು ಗುಂಪಿನ ಮೇಲೆ ಸಿಡಿಸಿ ಬಹಳ ಜನರ ಸಾವಿಗೆ ಕಾರಣವೂ ಆಗಬಹುದು. ಇಲ್ಲಿ ಏನು ಮಾಡಬೇಕು ಹಾಗೂ ಮಾಡಬಾರದೆಂಬುದನ್ನು ಯಾವುದು ನಿರ್ಧರಿಸುತ್ತದೆ? ಶಿಕ್ಷಣವೇ ನಿರ್ಧರಿಸುತ್ತದೆ. ಈ ವ್ಯಕ್ತಿಯ ಈ ಸಂಭಾವ್ಯತೆಗಳನ್ನು ಒಳ್ಳೆಯ ಕಾರ್ಯಕ್ಕಾಗಿ ಬಳಸುವಂತಾಗುವುದು ಉತ್ತಮ ಶಿಕ್ಷಣದಿಂದ ಮಾತ್ರ ಸಾಧ್ಯ ಮತ್ತು ಈ ಅಂಶ ಶಿಕ್ಷಣದ ಗುರಿಗಳಲ್ಲಿ ಒಂದಾಗಿದೆ. ಇದನ್ನು ಸಾಧಿಸಿದ ವ್ಯಕ್ತಿಯು ಈ ಕೆಳಕಂಡಂತೆ ವ್ಯವಹರಿಸುತ್ತಾನೆ:

- ವ್ಯಕ್ತಿಯ ಉತ್ತಮ ಬೆಳವಣಿಗೆಗೆ ಶಿಕ್ಷಣವು ತಳಹದಿಯಾಗಿದೆ ಎಂಬುದನ್ನು ಮನಗಂಡಿರುತ್ತಾರೆ. ಸ್ಪಷ್ಟವಾಗಿ ಓದುವ ಹಾಗು ಬರೆಯುವ ಸಾಮರ್ಥ್ಯ ಹೊಂದಿರುವುದು ಮತ್ತು ತಾನು ವಾಸಿಸುತ್ತಿರುವ ಪರಿಸರದಲ್ಲಿ ನಡೆಯುವ ದೈನಂದಿನ ಆಗುಹೋಗುಗಳನ್ನು ತಿಳಿದುಕೊಳ್ಳುತ್ತಾರೆ.
- ತಿಳಿದುಕೊಂಡದ್ದನ್ನು ನಿರಂತರವಾಗಿ ವಿಮರ್ಶಿಸುತ್ತಾ ಹೋಗುವುದರ ಜೊತೆಗೆ ಆ ಪ್ರಕ್ರಿಯೆಗಳಲ್ಲಿ ಅಥವಾ ಮೌಲ್ಯಗಳಲ್ಲಿ ಕಂಡುಬರುವ ಲೋಪದೋಷಗಳನ್ನು ತನ್ನದೇ ಆದ ಸೃಜನಶೀಲ ಶೈಲಿಯಲ್ಲಿ, ಸಾಮಾಜಿಕ ಮನ್ನಣೆಯಾಗುವಂತೆ ವ್ಯಕ್ತಪಡಿಸುತ್ತಾ ಬದಲಾವಣೆ ತರುತ್ತಾರೆ.
- ವಾಸ್ತವದಲ್ಲಿ ಇಲ್ಲದೇ ಇರುವ, ಪ್ರಕ್ರಿಯೆ ಅಥವಾ ಮೌಲ್ಯಗಳ ಬಗ್ಗೆ ಯೋಚಿಸುತ್ತಾ, ಆವಿಷ್ಕರಿಸುತ್ತಾ ಸಮಾಜದ ಅಭಿವೃದ್ಧಿಗೆ ಅವಶ್ಯಕವಾಗಿರುವ ಕಲಿಕೆಯನ್ನು ಅಳವಡಿಸುತ್ತಾ ಹೋಗುತ್ತಾರೆ.
- ಹೊಸಹೊಸ ಚಿಂತನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ವೇದಿಕೆಯನ್ನು ನಿರ್ಮಿಸಿಕೊಳ್ಳುವರು.
- ವ್ಯಕ್ತಿಯು ಬೇರೆಯವರಲ್ಲಿರುವ ಸೃಜನಶೀಲತೆ ಮತ್ತು ನಾವೀನ್ಯತೆಯನ್ನು ಗುರುತಿಸಿ, ಗೌರವಿಸುವುದರ ಜೊತೆಗೆ ಸೂಕ್ತವಾದುದನ್ನು ಬೆಂಬಲಿಸುವುದು. ಅದರ ಮೂಲಕ ಸಾಮೂಹಿಕವಾಗಿ ಸಮಾಜದ ಒಳಿತಿಗಾಗಿ ಶ್ರಮಿಸುತ್ತಾರೆ.

**ಸೌಂದರ್ಯ ಪ್ರಜ್ಞೆಯನ್ನು ಮೂಡಿಸುವುದು:**

ಸೌಂದರ್ಯವನ್ನು ಆರಾಧಿಸುವುದು, ಮೆಚ್ಚುವುದು ಮತ್ತು ಅದನ್ನು ಪ್ರೇರೇಪಿಸುವುದು ಮನುಷ್ಯನ ಸಾಮಾನ್ಯ ಗುಣಗಳಲ್ಲಿ ಒಂದಾಗಿದೆ. ಇಲ್ಲಿ ಕೇವಲ ಬಾಹ್ಯ ಸೌಂದರ್ಯಕ್ಕೆ ಮಾತ್ರ ಬೆಲೆಕೊಡದೆ ಆಂತರಿಕ ಸೌಂದರ್ಯವನ್ನು ಮೆಚ್ಚುವ ಮತ್ತು ಪ್ರಶಂಸಿಸುವ ಮನೋಭಾವನೆಯನ್ನು ಮಕ್ಕಳಲ್ಲಿ ಹುಟ್ಟುಹಾಕಬೇಕಾಗಿದೆ. ಇದು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

- ತನ್ನ ಮನೆ ಹಾಗೂ ಸುತ್ತಮುತ್ತಲಿನ ಪರಿಸರವು ಸುಂದರವಾಗಿರಬೇಕು ಎನ್ನುವ ಪ್ರಜ್ಞೆ ಹೊಂದಿರುತ್ತಾರೆ.
- ವ್ಯಕ್ತಿಯು ತನ್ನ ಸುತ್ತಮುತ್ತಲಿನ ನೈಸರ್ಗಿಕ ಸಂಪತ್ತುಗಳಾದ ಅರಣ್ಯ, ಭೂಮಿ, ನದಿಗಳು, ಪ್ರಾಣಿಗಳು, ಪಕ್ಷಿಗಳು, ಕೀಟಗಳು, ಇವುಗಳನ್ನು ಗಮನಿಸುವ, ಅವುಗಳ ಸೌಂದರ್ಯಕ್ಕೆ ಸ್ಪಂದಿಸುವ ಪ್ರಜ್ಞೆ ಹೊಂದಿರುತ್ತಾರೆ.
- ವ್ಯಕ್ತಿಯು ಶಾರೀರಿಕ ಸೌಂದರ್ಯಕ್ಕೆ ಮಾತ್ರ ಬೆಲೆ ಕೊಡದೆ ಬೌದ್ಧಿಕ ಸೌಂದರ್ಯ, ಸ್ವಭಾವಗಳ ಸೌಂದರ್ಯ ಗುರುತಿಸುವ ಪ್ರಜ್ಞೆ ಹೊಂದಿರುತ್ತಾರೆ.
- ವಿಶೇಷ ಗಮನ ಅಗತ್ಯವುಳ್ಳವರು ಹಾಗೂ ಮಹಿಳೆಯರನ್ನು ಮನರಂಜನೆಯ ವಸ್ತುವಾಗಿ ನೋಡದೇ ಅವರಲ್ಲಿರುವ ಸಾಮರ್ಥ್ಯದ ಸೌಂದರ್ಯವನ್ನು ಗುರುತಿಸುವ ಪ್ರಜ್ಞೆ ಹೊಂದಿರುತ್ತಾರೆ.

**ಕಲಿಯುವುದನ್ನು ಕಲಿಯುವ– ಕಲಿತದ್ದನ್ನು ಕೈಬಿಡುವ ಹಾಗು ಮರುಕಲಿಯುವ ಸಾಮರ್ಥ್ಯವನ್ನು ಹುಟ್ಟುಹಾಕುವುದು:**

**ಕಲಿಯುವುದನ್ನು ಕಲಿಯುವ:** ಎಂದರೆ ಓದುವುದನ್ನು ಕಲಿಯುವ, ಬರೆಯುವುದನ್ನು ಕಲಿಯುವ ಎಂಬರ್ಥದಲ್ಲಿ ಬರುತ್ತದೆ. ಓದುವುದನ್ನು ಕಲಿಯುವ ಎಂದರೆ ಬರಿ ಓದುವುದಲ್ಲ ಬದಲಾಗಿ ಓದಿದ್ದನ್ನು ಅರ್ಥಮಾಡಿಕೊಳ್ಳುವ ಮತ್ತು ಅರ್ಥಮಾಡಿಕೊಂಡಿದ್ದನ್ನು ವ್ಯಕ್ತಪಡಿಸುವ ಸಾಮರ್ಥ್ಯ ಎಂದರ್ಥ.

ಉದಾಹರಣೆಗೆ: ಭಾಷೆಯನ್ನು ಕಲಿಸುವಾಗ ಗಾಂಧೀಜಿಯವರ ಕುರಿತ ಪಾಠವನ್ನು ಚರ್ಚೆಮಾಡಬೇಕಾಗಿದೆ ಎಂದು ಭಾವಿಸಿಕೊಳ್ಳೋಣ. ಇಲ್ಲಿ ಗಾಂಧೀ ಪಾಠದ ಮೂಲಕ ವಿದ್ಯಾರ್ಥಿಗಳಲ್ಲಿ ಭಾಷಾ ಕೌಶಲಗಳಾದ 'ನಿರರ್ಗಳತೆಯನ್ನು ಹೆಚ್ಚಿಸುವ, ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವ, ಶಬ್ದ ಭಂಡಾರವನ್ನು ಹೆಚ್ಚಿಸುವ ಹಾಗೂ ಸಂಭಾಷಣೆಯನ್ನು ಸೇರಿದಂತೆ ಇತರೆ ಕೌಶಲಗಳನ್ನು ವೃದ್ಧಿಸುವುದು ಆ ಪಾಠದ ಉದ್ದೇಶವಾಗಿರುತ್ತದೆ.' ಶಿಕ್ಷಕರು ಗಾಂಧೀ ಪಾಠ ಮುಗಿದ ನಂತರ ಬರುವ ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ನೀಡುವ ಉದ್ದೇಶಗಳಜೊತೆಗೆ ಈ ಕೌಶಲಗಳ ಅಭಿವೃದ್ಧಿಯಾಗುವಂತೆ ಮಾಡುವುದು ಈ ಪಾಠದ ಉದ್ದೇಶವಾಗಿರುತ್ತದೆ. ಈಗ ಗಾಂಧೀಜಿರವರ ಒಂದು ಪಾಠ ಈ ಎಲ್ಲಾ ಉದ್ದೇಶಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ. ಆಗ ಶಿಕ್ಷಕರು ಶಾಲೆಯ ಗ್ರಂಥಾಲಯವನ್ನು ಬಳಸಿಕೊಳ್ಳಬೇಕಾಗುತ್ತದೆ. ಗಾಂಧೀಜಿ ಒಬ್ಬ ವ್ಯಕ್ತಿಯಾಗಿರುವುದರಿಂದ ವ್ಯಕ್ತಿ ಚರಿತ್ರೆಗೆ ಸಂಬಂಧಿಸಿದ ಎಲ್ಲ ಉಳಿದ ಪುಸ್ತಕಗಳನ್ನು ತೆಗೆದುಕೊಂಡು ಬರಬೇಕಾಗುತ್ತದೆ. ಅದು ಸ್ವಾಮಿ ವಿವೇಕಾನಂದರಿಗೆ ಸಂಬಂಧಪಟ್ಟಿರಬಹುದು, ಅಬ್ದುಲ್ ಕಲಾಂ ಅಜಾದ್‌ಗೆ ಹಾಗೂ ಇತರ ವ್ಯಕ್ತಿಗಳಿಗೆ ಸಂಬಂಧಿಸಿದುದ್ದಾಗಿರಬಹುದು. ಈಗ ಪಾಠವನ್ನು ಓದುವುದು ಹೇಗೆ ಎಂಬುದನ್ನು ಶಿಕ್ಷಕರು ಈಗಾಗಲೇ ಹೇಳಿಕೊಟ್ಟಿರುವುದರಿಂದ ಉಳಿದ ಪುಸ್ತಕಗಳನ್ನು ಒಬ್ಬೊಬ್ಬ ವಿಧ್ಯಾರ್ಥಿಗೆ ನೀಡಿ ಅದನ್ನು ಓದಿ ಅರ್ಥೈಸುವಂತೆ ತಿಳಿಸುವುದು. ಆಗ ಮಕ್ಕಳು ಓದುವುದನ್ನೇ ಕಲಿಯುತ್ತಾರೆ. ಮುಂದೆ ವ್ಯಕ್ತಿಚರಿತ್ರೆಗೆ ಸಂಬಂಧಿಸಿದ ಯಾವುದೇ ಪಠ್ಯಗಳು ಬಂದಲ್ಲಿ ಮಕ್ಕಳು ತಾವೇ ಪಠ್ಯವನ್ನು ಓದುವ ಹಾಗೂ ಅರ್ಥೈಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಇದೇ ಪ್ರವೃತ್ತಿ ಮುಂದುವರೆದಾಗ ಶಿಕ್ಷಕರು ಕೇವಲ ಮಕ್ಕಳು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವ ಕಾರ್ಯವನ್ನು ಮಾಡುತ್ತಾ ಅನುಕೂಲಿಸುವ ಕಾರ್ಯವನ್ನು ಮಾಡಬಹುದಾಗಿದೆ. ಇಲ್ಲಿ ಮಕ್ಕಳಿಗೆ ಓದುವುದನ್ನೇ ಕಲಿಸುವುದನ್ನು 'ಕಲಿಯುವುದನ್ನು ಕಲಿಯುವುದು" ಎಂದು ಅರ್ಥೈಸಲಾಗುತ್ತದೆ.

**ಕಲಿತದ್ದನ್ನು ಕೈಬಿಡುವ:** ಜಗತ್ತು ನಿರಂತರವಾಗಿ ಅನ್ವೇಷಣೆಗೊಳ್ಳುತ್ತಾ ಇರುತ್ತದೆ. ಹೊಸ ಹೊಸ ಸತ್ಯಗಳು ದೊರಕಿದಾಗ ಈಗಾಗಲೇ ನಾವು ಸತ್ಯವೆಂದು ನಂಬಿಕೊಂಡಿರುವ ವಿಷಯವನ್ನು ನಮ್ಮಲ್ಲಿಯೇ ಇಟ್ಟುಕೊಂಡು ಹೊಸದಾಗಿ ಬಂದ ವಿಷಯವನ್ನು ಅರ್ಥಮಾಡಿಕೊಂಡು ಅದನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಪ್ರತಿಯೊಬ್ಬರ ಜೀವನದಲ್ಲಿ ಈ ಘಟ್ಟವು ಬಹಳ ಮುಖ್ಯವಾದದ್ದು.

ಈ ಹಿಂದೆ ಮಕ್ಕಳ ಕಲಿಕೆಯ ವಿಷಯದಲ್ಲಿ ವರ್ತನಾವಾದವನ್ನು ನಾವು ಅನುಸರಿಸುತ್ತಿದ್ದೆವು. ಅದರ ಪ್ರಕಾರ ಸಕಾರಾತ್ಮಕವಾದ ಪ್ರೇರಣೆ ಅಂದರೆ ಮಕ್ಕಳನ್ನು ಪ್ರಶಂಶಿಸುವುದು, ಅವಾರ್ಡ್‌ಗಳನ್ನು ನೀಡುವುದು, ಇತ್ಯಾದಿಗಳನ್ನು ಮಾಡುತ್ತಿದ್ದೆವು. ಅದೇ ನಕರಾತ್ಮಕ ಪ್ರೇರಣೆಗಳಿಗೆ ಸಂಬಂಧಿಸಿದಂತೆ ಹಲವಾರು ಕ್ರಿಯೆಗಳನ್ನೂ ಮಾಡಲಾಗುತ್ತಿತ್ತು. ಆದರೆ ಈಗ ಸಂರಚನಾವಾದದ ಪ್ರಕಾರ ಮಕ್ಕಳುಶಾಲೆಗೆ ಬರುವಾಗಲೇ ಅನುಭವಗಳನ್ನು ತೆಗೆದುಕೊಂಡು ಬರುತ್ತಾರೆ ಶಾಲೆಯಲ್ಲಿ ಅನುಭವದ ಆಧಾರದ ಮೇಲೆ ಮಕ್ಕಳು ಜ್ಞಾನವನ್ನು ಕಟ್ಟಿಕೊಳ್ಳಲು ಅನುಕೂಲಿಸಬೇಕಾಗಿದೆ ಎಂಬುದು ಈಗ ಪ್ರಚಲಿತದಲ್ಲಿರುವ ಪ್ರಕ್ರಿಯೆ. ಈಗ ಮೊದಲು ವರ್ತನಾವಾದವು ಆ ಕಾಲಘಟ್ಟಕ್ಕೆ ಸತ್ಯವೆನಿಸಿದ್ದರಿಂದ ಅದನ್ನು ಅನುಸರಿಸುವುದು ಸರಿಯೇ ಆಗಿತ್ತು ಆದರೆ ಈಗ ಸಂರಚನಾವಾದ ಬಂದಿರುವುದರಿಂದ ಈ ಸತ್ಯವನ್ನು ಒಪ್ಪಿಕೊಂಡು ಅದಕ್ಕೆ ಬೇಕಾದ ಬದಲಾವಣೆಯನ್ನು ನಮ್ಮ ಮನಸ್ಥಿತಿ ಹಾಗೂ ಪದ್ಧತಿಗಳಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಇದನ್ನೇ ಕಲಿತದ್ದನ್ನು ಕೈಬಿಡುವ ಎಂದು ಕರೆಯಬಹುದು. ಕೈಬಿಡುವ ಎಂಬ ಶಬ್ದವನ್ನು ಹಾಗೆಯೇ ತೆಗೆದುಕೊಳ್ಳಬಾರದು ಇದರರ್ಥವನ್ನು ಮಾತ್ರ ಗ್ರಹಿಸಬೇಕು. ಮರುಕಲಿಯುವ ಎಂದರೆ ಹೊಸದಾಗಿ ಬಂದಿರುವ ಸತ್ಯವನ್ನು ಪುನರಪಿ ಕಲಿಯುವ ಅಥವಾ ಅಳವಡಿಸಿಕೊಳ್ಳುವ ಎಂದು ಅರ್ಥವಾಗುತ್ತದೆ

# ಲೇಖನ-6

## ಸಂವಿಧಾನಿಕ ಮೌಲ್ಯಗಳ ಹಿನ್ನಲೆಯಲ್ಲಿ ಶಾಲಾ ಸಹಭೋಜನ

ಭಾರತ ದೇಶವು ಪ್ರಜಾಪ್ರಭುತ್ವ ದೇಶ.ಈ ದೇಶದ ಪ್ರಗತಿ ಹಾಗೂ ಕಲ್ಯಾಣ ರಾಜ್ಯವಾಗಬೇಕಾದರೆ ಸುಶಿಕ್ಷಿತ,ಆರೋಗ್ಯವಂತ ಸಮಾಜವನ್ನು ನಿರ್ಮಿಸುವುದು ಸರ್ಕಾರದ ಆದ್ಯಕರ್ತವ್ಯ.ಅದು ಸಂವಿಧಾನದ ಪ್ರಸ್ತಾವನೆಯಲ್ಲೇ ಅದು ನಮಗೆ ಗೋಚರವಾಗುತ್ತದೆ.ಸಾಮಾಜಿಕ ನ್ಯಾಯ,ಸಮಾನತೆ,ಭ್ರಾತೃತ್ವ ಇವುಗಳನ್ನು ಸಾಧಿಸಲು ಸಂವಿಧಾನದಲ್ಲಿ ಅನೇಕ ವಿಧಿಗಳನ್ನು ರೂಪಿಸಲಾಗಿದೆ. ಕಾಯ್ದೆಗಳನ್ನು ಮತ್ತು ಯೋಜನೆಗಳನ್ನು ಜಾರಿಗೆ ತಂದಿದೆ.ಅದೇ ರೀತಿ ಶಾಲಾ ಸಹಭೋಜನ ಅಥವಾ ಮದ್ಯಾಹ್ನದ ಬಿಸಿಯೂಟ ಯೋಜನೆಯೂ ಕೊಡ ಮಹತ್ವದ್ದಾಗಿದೆ.

ಶಾಲಾ ಸಹಭೋಜನವನ್ನು ಸಾಂವಿಧಾನಿಕ ಮೌಲ್ಯಗಳ ಹಿನ್ನಲೆಯಲ್ಲಿ ಗಮನಿಸುವುದಾದರೆ ಸಮಾನತೆಯ ಹಕ್ಕು [14ನೇ ವಿಧಿಯಿಂದ 18ನೇ ವಿಧಿ] ಹಾಗೂ 21[ಎ]ವಿಧಿಯ ಪ್ರಕಾರ 6ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣ ಮೂಲಭೂತ ಹಕ್ಕು ಈ ಮೂಲಭೂತ ಹಕ್ಕನ್ನು ಪಡೆಯಬೇಕಾದರೆ ಶಾಲಾ ಸಹಬೋಜನ ಒಂದು ಮಹತ್ವಪೂರ್ಣವಾದ ಯೋಜನೆ. ಈ ಸಹಭೋಜನವು ಮಕ್ಕಳಲ್ಲಿ ಸಮಾನತೆ,ಬ್ರಾತೃತ್ವ,ಸಹೋದರತೆ,ಸಹಕಾರ ಮನೋಭಾವನೆಗಳನ್ನು ಬೆಳಸುವಲ್ಲಿ ಸಹಕಾರಿಯಾಗಿದೆ.

- ಮಧ್ಯಾಹ್ನದ ಬಿಸಿಯೂಟ ಯೋಜನೆ ಕಾರ್ಯಕ್ರಮವು 2002-03 ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಈಶಾನ್ಯ ವಲಯದ 7ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ 1 ರಿಂದ 5ನೇ ತರಗತಿ ವಿಧ್ಯಾರ್ಥಿಗಳಿಗೆ ಬಿಸಿಯೂಟ ಪ್ರಾರಂಬಿಸಲಾಯಿತು.
- 2003-04 ರಿಂದ ಉಳಿದ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.
- 01-10-2004 ರಿಂದ ರಾಜ್ಯದ ಸರ್ಕಾರಿ,ಅನುದಾನಿತ 6ಮತ್ತು 7ನೇ ತರಗತಿಗೆ ವಿಸ್ತರಣೆ.
- 01-08-2013ರಿಂದ 1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಆನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ವಾರದಲ್ಲಿ 3 ದಿನ ಕೆನೆಭರಿತ ಹಾಲಿನ ಪುಡಿ ವಿತರಿಸಲಾಗುತ್ತಿದೆ.

**ಮಧ್ಯಾಹ್ನದ ಉಪಹಾರ ಯೋಜನಯಿಂದೆ ಕಲಿಕೆ ಮತ್ತು ಆರೋಗ್ಯ ಮತ್ತು ವಿವಿಧ ರಾಷ್ಟ್ರಗಳಲ್ಲಿ ಈ ಯೋಜನೆ.**

ಮಕ್ಕಳು ತಾವು ವಾಸಿಸುವಲ್ಲಿನ ಪರಿಸರದಲ್ಲಿಯಲ್ಲಿ ವಯಸ್ಕರರಿಗಿಂತ ಹೆಚ್ಚಾಗಿ ಬೇಗ ಪರಿಣಾಮಕ್ಕೆ ಒಳಗಾಗುತ್ತಾರೆ. ಈ ಹಿನ್ನಲೆಯಲ್ಲಿ ಮಗುವಿನ ಮನೆಯ ಆರ್ಥಿಕ ,ಸಾಮಾಜಿಕ ಪರಿಸ್ಥಿತಿಗಳು ಹಿಂದುಳಿದಾಗ ಮಗುವಿನ ಆರೋಗ್ಯದಲ್ಲಿ ಹಿನ್ನಡೆ ಮತ್ತು ಅಪೌಷ್ಠಿಕತೆಯ ಕೊರತೆಯುಂಟಾಗುತ್ತದೆ. ಇದರಿಂದ ಮಗುವು ಕಲಿಕೆಯಲ್ಲಿ ಹಿಂದುಳಿದು ನಮ್ಮ ದೇಶದ ಬೆಳವಣಿಗೆಯಲ್ಲಿ ಮಗುವಿನ ಕೊಡುಗೆ ಇಲ್ಲಾದಂತಾಗುತ್ತದೆ.ಆದ್ದರಿಂದ ಮಗುವಿನ ಕಲಿಕೆ ಮತ್ತು ಆರೋಗ್ಯ ವೃದ್ಧಿಸಲು ಮಧ್ಯಾಹ್ನನದ ಬಿಸಿಯೂಟ ಯೋಜನೆ ಅತಿ ಮುಖ್ಯ ಕೊಡುಗೆಯನ್ನು ನೀಡುತ್ತಿದೆ.

**ವಿವಿಧ ದೇಶಗಳಲ್ಲಿ ಈ ಯೋಜನೆ**

ಅಕ್ಷರ ದಾಸೋಹವನ್ನು ನೀಡುವಲ್ಲಿ ಭಾರತವು 12ನೇ ಸ್ಥಾನವನ್ನು ಪಡೆದಿದ್ದು ಭಾರತವು ಪ್ರಪಂಚದಲ್ಲಿಯೇ ಅತೀ ಹೆಚ್ಚು ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ನೀಡುವ ದೇಶವಾಗಿದೆ.ಬ್ರೆಜಿಲ್,ಫ್ರಾನ್ಸ,ಇಟಲಿ,ಪಿನ್ ಲ್ಯಾಂಡ್ ಸೌತ್ ಕೊರಿಯ ಅಮೇರಿಕ ಗ್ರೀಸ್,ಮುಂತಾದ ದೇಶಗಳು ಆಹಾರವನ್ನು ಅಲ್ಲಿಯ ಮಕ್ಕಳಿಗೆ ನೀಡುತ್ತೀವೆ.

**ಮಧ್ಯಾಹ್ನದ ಉಪಹಾರ ಯೋಜನೆ ಏಕೆ?**

- ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಿಸಲು.
- ವಿಧ್ಯಾರ್ಥಿಗಳನ್ನು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆಯನ್ನು ತೂರೆಯದಂತೆ ತಡೆಯುವುದು.
- ಪೌಷ್ಠಿಕಾಂಶ ಹೆಚ್ಚಿಸುವುದರ ಮೂಲಕ ಶಾಲಾ ಮಕ್ಕಳ ಆರೋಗ್ಯ ಅಭಿವೃದ್ಧಿಗೊಳಿಸುವುದು.
- ಸಾಮಾಜಿಕ ಸಮಾನತೆ ಅಭಿವೃದ್ಧಿ ಪಡಿಸುವುದು.
- ಮಕ್ಕಳಲ್ಲಿ ಭಾವೈಕ್ಯತೆಯನ್ನು ಮೂಡಿಸುವುದು.
- ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಮೂಡಿಸುವುದು.

- ಹಸಿವನ್ನು ನಿರ್ಮೂಲನಗೊಳಿಸಲು.
- ಎಲ್ಲಾ ವರ್ಗ,ಧರ್ಮದ ವಿದ್ಯಾರ್ಥಿಗಳು ಒಂದಡೆ ಕುಳಿತು ಆಹಾರ ಸೇವನೆ ಮಾಡುವ ಮೂಲಕ ನಾವೆಲ್ಲಾ ಒಂದೇ ಎಂಬ ಭಾವನೆ ಮೂಡಲು ಸಹಕಾರಿ.

**ಮಧ್ಯಾಹ್ನದ ಬಿಸಿಯೂಟದಲ್ಲಿ ಮಕ್ಕಳ ಸುರಕ್ಷತೆ/ಅಡುಗೆ ತಯಾರಿಸುವವರ ಸುರಕ್ಷತೆಗಾಗಿ ಕೈಗೊಂಡ ಕ್ರಮಗಳು.**

- ಅಡುಗೆ ತಯಾರಿಸುವವರು ಏಪ್ರಾನ್‌ಧರಿಸುವುದು.
- ಅಗ್ನಿನಂದಕಗಳ ಅಳವಡಿಕೆ ಮತ್ತು ಉಪಯೋಗಿಸುವ ಬಗ್ಗೆ ತರಬೇತಿ.
- ಮಕ್ಕಳನ್ನು ಅಡುಗೆ ಮನೆ ಒಳಗೆ ಹಾಗೂ ಸುತ್ತ ಪ್ರವೇಶ ನೀಷೇದಿಸಿದೆ.
- ಮಕ್ಕಳಿಂದ ಅಡುಗೆ ಕಾರ್ಯಕ್ಕೆ ಸಹಾಯ ಪಡೆಯುವುದು ಮತ್ತು ಆಹಾರ ಬಡಿಸುವ ಹಾಗೂ ಸ್ವಚ್ಚತಾ ಕಾರ್ಯಗಳಿಗೆ ಬಳಸಿಕೊಳ್ಳುವಂತಿಲ್ಲ.
- ಎಲ್ಲಾ ಮಕ್ಕಳಿಗೆ ಸರತಿ ಸಾಲಿನಲ್ಲಿ ಆಹಾರ ಪಡೆಯಲು ಅವಕಾಶ ನೀಡಿದೆ.ಮತ್ತು ಎಲ್ಲಾ ಮಕ್ಕಳನ್ನು ಕೂರಿಸಿ ಊಟ ಬಡಿಸುವ ಪದ್ಧತಿ ಇದೆ.
- ಬಾಗಿಲಿನಲ್ಲಿ ಒದ್ದೆಯಾದ ಗೋಣಿಚೀಲ ಹಾಗೂ ಒಂದು ಬಕೆಟ್ ನೀರು ಇಡಲು ಕ್ರಮವಹಿಸಿದೆ.

**ಅಕ್ಷರದಾಸೋಹ ಯೋಜನೆಯ ಅನುಷ್ಠಾನದ ವಿವರ**

| ವಿವರ | 1ರಿಂದ5 | 6ರಿಂದ8 | 9ರಿಂದ10 |
|---|---|---|---|
| ಅಕ್ಕಿ | 100ಗ್ರಾಂ | 150ಗ್ರಾಂ | 150ಗ್ರಾಂ |
| ಬೇಳೆ | 20ಗ್ರಾಂ | 30ಗ್ರಾಂ | 30ಗ್ರಾಂ |
| ಎಣ್ಣೆ | 5ಗ್ರಾಂ | 7.5ಗ್ರಾಂ | 7,5ಗ್ರಾಂ |
| ಉಪ್ಪು | 2ಗ್ರಾಂ | 4ಗ್ರಾಂ | 4ಗ್ರಾಂ |

ಇತ್ತೀಚಿಗೆ ಗೋಧಿ ನೀಡುವುದು ಸಹ ಉಪಯೋಗವಾಗಿದೆ. ವಾರದಲ್ಲಿ ಒಂದು ದಿನ ಗೋಧಿ ಉಪ್ಪಿಟ್ಟು/ಚಪಾತಿ ಮಾಡಲು ಅನುಕೂಲಕರವಾಗಿದೆ.

**ಅಡುಗೆ ಸಿಬ್ಬಂದಿ ನೇಮಕ**

| ಮಕ್ಕಳ ಸಂಖ್ಯೆ | ಅಡುಗೆಯರ ಸಂಖ್ಯೆ |
|---|---|
| 1ರಿಂದ 25 | 01ಜನ |
| 1ರಿಂದ75 | 02ಜನ |
| 1ರಿಂದ 150 | 03ಜನ |
| 1ರಿಂದ 200 | 04ಜನ |

**ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ:12 ಫೆಬ್ರವರಿ 2018**

**ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದಂದು ಮಾತ್ರೆಯನ್ನು ವಿದ್ಯಾರ್ಥಿಗಳಿಗೆ ನೀಡುವುದರೊಂದಿಗೆ ಶಾಲಾ ಶಿಕ್ಷಕರು ತರಗತಿಯ ದಾಖಲೆ ಪುಸ್ತಕದಲ್ಲಿ ಜಂತುಹುಳು ನಾಶಕ ಮಾತ್ರೆ ನೀಡಿರುವುದನ್ನು ದಾಖಲೆ ನಿರ್ವಹಿಸುವುದು.**

**ಚಟುವಟಿಕೆ: ಆರೋಗ್ಯದ ಜಾಗೃತಿ ಮೂಡಿಸಲು ನಾಟಕ,ಚಿತ್ರಪ್ರದರ್ಶನ, ಬಿಸಿಯೂಟ ಯೋಜನೆಯ ವಿಡಿಯೋ,ಹಾಡು**

**ಚಟುವಟಿಕೆ:**

1]ನಿಮ್ಮ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಯಶಸ್ವಿ ಅನುಷ್ಠಾನಕ್ಕೆ ನಿಮ್ಮ ಯೋಜನೆ ಏನು?

2]ನೀವು ಶಾಲೆಯ ಶಿಕ್ಷಕರಾಗಿ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಏನು ಕಾರ್ಯತಂತ್ರವನ್ನು ರೂಪಿಸುವಿರಿ?

ನಿಮ್ಮಲ್ಲಿ ಎಷ್ಟು ಜನ ಸಾಮಾಜಿಕ ಸುಧಾರಣೆ ಬಯಸುತ್ತೀರಿ?

ಎಷ್ಟು ಜನ ಆರ್ಥಿಕ ಸುಧಾರಣೆ ಬಯಸುತ್ತೀರಿ?

ಎಷ್ಟು ಜನ ವಿದ್ಯಾರ್ಥಿಗಳಲ್ಲಿ ಕಲಿಕಾ ಸುಧಾರಣೆ ಬಯಸುತ್ತೀರಿ?

ಎಷ್ಟು ಜನ ಭೌದ್ಧಿಕ ಸುಧಾರಣೆ ಬಯಸುತ್ತೀರಿ?

ಹೇಗೆ?

**ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಒಪ್ಪಂದದಲ್ಲಿ ಘೋಷಿಸಲ್ಪಟ್ಟಿರುವಂತೆ ಪ್ರತಿಯೊಬ್ಬ ಹಸಿದ ಮಗುವಿಗೂ ಆಹಾರವನ್ನು ಒದಗಿಸಬೇಕಾಗಿದೆ. ಮಧ್ಯಾಹ್ನ ಉಪಹಾರ ಯೋಜನೆಯು ಒಂದು ಪ್ರತಿಷ್ಠಿತ ಯೋಜನೆಯಾಗಿದ್ದು, ಮಕ್ಕಳು ಆರೋಗ್ಯಪೂರ್ಣವಾಗಿ ಶಕ್ತಿವಂತರು ಹಾಗೂ ದೃಢಕಾಯರಾಗಿ ಬೆಳೆಯಲು ಒಂದು ಸದವಕಾಶ ಕಲ್ಪಿಸುವ ಬದ್ಧತೆಯಿಂದ ಕೂಡಿದ್ದು, ಸಹಕಾರಿಯಾಗಿದೆ. ಸದರಿ ಕಾರ್ಯಕ್ರಮದ ಪ್ರಮುಖ ಉದ್ದೇಶವು ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಸಿವು ನೀಗಿಸಿ ತನ್ಮೂಲಕ ಅವರ ಕಲಿಕಾ ಸಾಮರ್ಥ್ಯಗಳನ್ನೂ ಮತ್ತು ಸಾಧನೆಗಳನ್ನು ಹೆಚ್ಚಿಸುವುದಾಗಿದೆ.**

**ಮಧ್ಯಾಹ್ನಉಪಹಾರ ಯೋಜನೆಯು ನಡೆದು ಬಂದ ದಾರಿ :**

2002–03**ರವರೆಗೆ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ತಲಾ** 3 **ಕೆ.ಜಿ. ಅಕ್ಕಿಯನ್ನು ಪ್ರತೀ ತಿಂಗಳು ನೀಡಲಾಗಿತ್ತಿದೆ. ಕರ್ನಾಟಕ ರಾಜ್ಯದ ಮಧ್ಯಾಹ್ನದ ಉಪಹಾರ ಯೋಜನೆ ಕಾರ್ಯಕ್ರಮ** 2002–03**ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅತ್ಯಂತ ಹಿಂದುಳಿದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ** 1 **ರಿಂದ** 5 **ನೇ ತರಗತಿಗಳ ವಿದ್ಯಾರ್ಥಿಗಳಿಗೆ ಬಿಸಿಯೂಟ ಪ್ರಾರಂಭಿಸಲಾಯಿತು.**

- 2003–04 **ನೇ ಸಾಲಿನಿಂದ ಉಳಿದ** 20 **ಜಿಲ್ಲೆಗಳಿಗೂ ವಿಸ್ತರಿಸಲಾಯಿತು.**
- **ದಿನಾಂಕ** 01–09–2004 **ರಿಂದ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ವಿಸ್ತರಿಸಲಾಯಿತು.**
- **ದಿನಾಂಕ** 01–10–2004 **ರಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ** 6 **ಮತ್ತು** 7 **ನೇ ತರಗತಿ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.**
- 2007–08**ನೇ ಸಾಲಿನಿಂದ ಯೋಜನೆಯನ್ನು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೂ ವಿಸ್ತರಿಸಲಾಯಿತು. ಇದರಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ** 1 **ರಿಂದ** 10**ನೇ ತರಗತಿಯ ವಿದ್ಯಾರ್ಥಿಗಳೆಲ್ಲರಿಗೂ ಮಧ್ಯಾಹ್ನ**

ಉಪಹಾರವನ್ನು ಒದಗಿಸಲಾಯಿತು. 1 ರಿಂದ 8ನೇ ತರಗತಿಯವರೆಗೆ ಕೇಂದ್ರ ಸರ್ಕಾರದಿಂದ ಹಾಗೂ 9 ಮತ್ತು 10 ನೇ ತರಗತಿಗಳಿಗೆ ರಾಜ್ಯ ಸರ್ಕಾರದ ನೆರವಿನಿಂದ ಮಧ್ಯಾಹ್ನ ಬಿಸಿಯೂಟವನ್ನು ಒದಗಿಸಲಾಯಿತು.

- ದಿನಾಂಕ:01–08–2013ರಿಂಧ 1–10ನೇ ತರಗತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ವಾರದಲ್ಲಿ ಮೂರು ದಿನ ಪ್ರತೀ ವಿದ್ಯಾರ್ಥಿಗೂ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ 150 ಎಂ.ಎಲ್. ಹಾಲನ್ನು ನೀಡಲಾಗುತ್ತಿದೆ.

ಉದ್ದೇಶಗಳು :

- ಶಾಲಾ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಹೆಚ್ಚಿಸುವುದು.
- ಶೈಕ್ಷಣಿಕ ವರ್ಷದಲ್ಲಿ ಮಧ್ಯೆ ಮಧ್ಯೆ ಶಾಲೆಯನ್ನು ತೊರೆಯದಂತೆ ತಡೆಯುವುದು.
- ಪೌಷ್ಠಿಕಾಂಶ ಹೆಚ್ಚಿಸುವುದರ ಮೂಲಕ ಶಾಲಾ ಮಕ್ಕಳ ಆರೋಗ್ಯವನ್ನು ಅಭಿವೃದ್ಧಿಗೊಳಿಸುವುದು.
- ಶಾಲಾ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಸಾಮಾಜಿಕ ಸಮಾನತೆಯನ್ನು ಅಭಿವೃದ್ಧಿ ಪಡಿಸಿ ತನ್ಮೂಲಕ ರಾಷ್ಟ್ರೀಯ ಭಾವೈಕ್ಯತೆಯನ್ನು ಮಕ್ಕಳಲ್ಲಿ ಮೂಡಿಸುವುದು.
- ಬರಪೀಡಿತ ಪ್ರದೇಶಗಳಿಗೆ ಬೇಸಿಗೆ ರಜೆ ಅವಧಿಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯನ್ನು ನೀಡಲಾಗುತ್ತಿದೆ.

2016–17ನೇ ಸಾಲಿನಲ್ಲಿ ಮಧ್ಯಾಹ್ನ ಉಪಹಾರ ಯೋಜನೆಗೆ ಒಳಪಟ್ಟ ಶಾಲೆಗಳ ಸಂಖ್ಯೆ

| ಶಾಲೆ | ಸರ್ಕಾರಿ | ಅನುದಾನಿತ | ಒಟ್ಟು |
|---|---|---|---|
| | 48465 | 6842 | 55307 |

2016–17ನೇ ಸಾಲಿನ ಫಲಾನುಭವಿ ವಿದ್ಯಾರ್ಥಿಗಳ ಸಂಖ್ಯೆ

| ತರಗತಿ | ದಾಖಲಾತಿ | ಸರಾಸರಿ ಫಲಾನುಭವಿಗಳು | ಫಲಾನುಭವಿಗಳ % |
|---|---|---|---|
| 1 ರಿಂದ 5 | 30.94 | 28.08 | 90.76 |
| 6 ರಿಂದ 8 | 18.45 | 16.70 | 90.51 |
| 9 ರಿಂದ 10 | 11.85 | 10.30 | 86.92 |
| ಒಟ್ಟು | 61.24 | 55.08 | 89.94 |

ಶಾಲಾ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರ ಧಾನ್ಯ ವಿವರ (ಪ್ರತಿ ವಿದ್ಯಾರ್ಥಿಗೆ/ಪ್ರತಿ ದಿನಕ್ಕೆ)

| ವಿವರ | ವಿವರ ಪ್ರಮಾಣ ಗ್ರಾಂ ಗಳಲ್ಲಿ | ತರಗತಿ | | |
|---|---|---|---|---|
| | | 1 ರಿಂದ 5 | 6 ರಿಂದ 8 | 9 ರಿಂದ 10 |
| 1 | ಅಕ್ಕಿ | 100 | 150 | 150 |
| 2 | ಬೇಳೆ | 20 | 30 | 30 |
| 3 | ತರಕಾರಿ | 50 | 75 | 75 |
| 4 | ಎಣ್ಣೆ | 5 | 7.5 | 7.5 |
| 5 | ಉಪ್ಪು | 2 | 4 | 4 |
| 6 | ಸಾಂಬಾರ ಪದಾರ್ಥ | | | |

ಥಾರ್ನ್‌ಡೈಕ್‌ನ ಕಲಿಕಾ ನಿಯಮಗಳು:

1. ಸಿದ್ಧತಾ ನಿಯಮ: ಏಕಾಗ್ರತೆ ಮತ್ತು ಆಸಕ್ತಿ, ಉತ್ಸಾಹ ಇರಬೇಕು. ಪ್ರತಿಯೋರ್ವರು ಸಾಮಾನ್ಯವಾಗಿ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಸಿದ್ಧರಿದ್ದಾಗ ಚೆನ್ನಾಗಿ ಕಲಿಯುತ್ತಾರೆ. ಕಲಿಯಲು ಅಗತ್ಯವನ್ನು ಮನಗಾಣಿಸುವುದು, ದೈಹಿಕ-ಮಾನಸಿಕ-ಭಾವನಾತ್ಮಕ ಸವಾಲುಗಳನ್ನು ಹಿಮ್ಮೆಟ್ಟಿಸಿ ಕಲಿಕೆಗೆ ಸಿದ್ಧಗೊಳಿಸುವುದು ಅನುಕೂಲಿಸುವವರ ಜವಾಬ್ದಾರಿ. ಕಲಿಕೆ ಸಕ್ರಿಯಾತ್ಮಕ ಪ್ರಕ್ರಿಯೆಯಾಗಿರುವುದರಿಂದ ಅವರಿಗೆ ಅಗತ್ಯವಿದ್ದಷ್ಟು ವಿಶ್ರಾಂತಿ, ಆರೋಗ್ಯ ಮತ್ತು ದೈಹಿಕ ಕ್ಷಮತೆ ಬೇಕಾಗುತ್ತದೆ. ಮಗುವನ್ನು ಕಲಿಕೆಗೆ ಅನುಕೂಲಿಸುವ ಮೊದಲು ಅದರ ಪ್ರಾಥಮಿಕ ಅಗತ್ಯಗಳನ್ನು ಪೂರೈಸಬೇಕಾಗುತ್ತದೆ. ಅವರೇನಾದರೂ ದೈಹಿಕವಾಗಿಯೋ, ಮಾನಸಿಕವಾಗಿಯೋ, ಭಾಗನಾತ್ಮಕವಾಗಿಯೋ ಕೊರತೆಗಳನ್ನು ಹೊಂದಿದ್ದಲ್ಲಿ ಕಲಿಯುವ ಮಟ್ಟ ಕಡಿಮೆಯಾಗುವ ಸಾಧ್ಯತೆ ಇದೆ. ಸುಸ್ತಾಗಿರುವ, ಅನರೋಗ್ಯದಿಂದ ಕೂಡಿರುವ ವಿದ್ಯಾರ್ಥಿಯ ಕಡಿಮೆ ಕಲಿಯಬಹುದು.

2. ಅಭ್ಯಾಸ ನಿಯಮ: ಪದೇ ಪದೇ ಪುನರಾವರ್ತಿತವಾದದ್ದು ಹೆಚ್ಚು ಜ್ಞಾಪಕದಲ್ಲಿರುತ್ತದೆ. ಅದಕ್ಕೆ ಅಭ್ಯಾಸವನ್ನು ಆಧರಿಸಿದೆ. ಅಭ್ಯಾಸ ಅರ್ಥಪೂರ್ಣವಾಗಿರಬೇಕು.

3. ಪರಿಣಾಮ ನಿಯಮ: ಪರಿಣಾಮವು ವಿದ್ಯಾರ್ಥಿ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವುದನ್ನು ಆಧರಿಸಿದೆ. ಸಂತೋಷವಾಗದಿದ್ದಲ್ಲಿ ಕಲಿಕೆ ದುರ್ಬಲವಾಗಬಹುದು.

ಈ ನಿಯಮಗಳನ್ನು ಅಕ್ಷರದಾಸೋಹ ಕಾರ್ಯಕ್ರಮ, ಮಗು ಹಸಿವಿನಿಂದ ಕೂಡಿದ್ದಲ್ಲಿ, ಕಾಯಿಲೆಯಿಂದ ಬಳಲುತ್ತಿದ್ದಲ್ಲಿ, ದೈಹಿಕವಾಗಿ, ಮಾನಸಿಕ, ಭಾವನಾತ್ಮಕವಾಗಿ ಸಿದ್ಧನಿಲ್ಲದಿದ್ದಲ್ಲಿ ಕಲಿಕೆಯ ಮೇಲಾಗುವ ಪ್ರಭಾವ, ಪರಿಣಾಮಗಳನ್ನು ಚರ್ಚಿಸಿ ಅಂದಾಜಿಸಬಹುದು.

ಮೂಲಭೂತ ಹಕ್ಕು: ವಿಧಿ 21: ಬದುಕುವ ಹಕ್ಕು

ವಿಧಿ 23 ಶೋಷಣೆಯ ವಿರುದ್ದದ ಹಕ್ಕು

ಗುಲಾಮಗಿರಿ ವಿರುದ್ಧ, ಬಿಕ್ಷಾಟನೆ ವಿರುದ್ದದ ಹಕ್ಕು.

1989 ಮಕ್ಕಳ ಹಕ್ಕುಗಳ ಒಡಂಬಡಿಕೆ.. 1992 ಭಾರತ ಸಹಿ ಹಾಕಿದೆ. ಬದುಕುವ ಹಕ್ಕು

**ಬದುಕುವ, ರಕ್ಷಣೆಯ ಹಕ್ಕು, ಅಭಿವೃದ್ಧಿ ಹೊಂದುವ, ಭಾಗವಹಿಸುವ ಹಕ್ಕು ಮಕ್ಕಳ ಹಕ್ಕುಗಳು**

## ಆರೋಗ್ಯ ಮತ್ತು ಶೈಕ್ಷಣಿಕ ಸಾಧನೆ

ಆರೋಗ್ಯವಂತ ಮಕ್ಕಳು–ಯಶಸ್ವಿ ವಿದ್ಯಾರ್ಥಿಗಳು–ಸಬಲ ಸಮುದಾಯಗಳು

1.ಶೈಕ್ಷಣಿಕ ಪ್ರಗತಿ: ಗ್ರೇಡ್, ಎಫ್.ಎ. & ಎಸ್.ಎ.

2.ಶೈಕ್ಷಣಿಕ ವರ್ತನೆಗಳು: ಹಾಜರಾತಿ, ದೀರ್ಘ ಗೈರುಹಾಜರಿ, ವರ್ತನೆಗೆ ಸಂಬಂಧಿಸಿದ ಸಮಸ್ಯೆಗಳು.

3.ಜ್ಞಾನವಲಯ ಮತ್ತು ಮನೋಧೋರಣೆಗೆ ಸಂಬಂಧಿಸಿದವು: ಏಕಾಗ್ರತೆ, ಸ್ಮೃತಿ, ಆ ಕ್ಷಣದ ಭಾವನೆಗಳು.

1. ಸ್ವೀಕರಿಸುವ ಆಹಾರ, ಆರೋಗ್ಯ ಮತ್ತು ಚಟುವಟಿಕೆಗಳು ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ದಾಖಲೆಗಳು ಹೇಳಿವೆ.

2. ಇವು ರಾಜ್ಯ, ಜಿಲ್ಲೆ, ಶಾಲೆಗೆ ಸೂಕ್ಷ್ಮ ಸಂದೇಶಗಳನ್ನು ನೀಡುತ್ತವೆ.

3. ನಿರ್ದಿಷ್ಟ, ಅವಕಾಶವುಳ್ಳ, ಪರಿಣಾಮಕಾರಿಯಾದ ಕ್ರಮಗಳನ್ನು ಶಾಲೆಯಲ್ಲಿ ಆಹಾರ ಸೇವನೆಗೆ, ಚಟುವಟಿಕೆಗಳಿಗೆ ಅನುಸರಿಸಬೇಕಾದ ಅಗತ್ಯತೆಯಿದೆ.

ದೈಹಿಕವಾಗಿ ಆರೋಗ್ಯ & ದೃಢತೆ ಹೊಂದಿರುವ ಮಕ್ಕಳ ಕಲಿಕ ಸಾಧನೆ ಹೆಚ್ಚಿರುತ್ತದೆ.

ರಾಷ್ಟ್ರೀಯ ಜಂತುಹುಳು ದಿನಾಚರಣೆ: **12/12/2018**

**ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಕಡಿಮೆಗೊಳಿಸಲು ಹಾಗೂ ಜಂತುಹುಳುಗಳ ಬಾಧೆಯಿಂದ ಮಕ್ಕಳನ್ನು ರಕ್ಷಿಸಲು ಫೆಬ್ರವರಿ ಮತ್ತು ಆಗಸ್ಟ್ ತಿಂಗಳಲ್ಲಿ ಮಕ್ಕಳಿಗೆ ಆಲ್ ಬೆಂಡಾಜೋಲ್ ಎಂಬ ಜಂತುಹುಳು ನಿವಾರಣಾ ಮಾತ್ರೆ ನೀಡುವ ಮೂಲಕ ರಾಷ್ಟ್ರೀಯ ಜಂತು ಹುಳು ನಿರ್ಮೂಲನಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.**

**ಜಂತು ಹುಳು ನಿರ್ಮೂಲನೆಯಿಂದಾಗಿ ಮಕ್ಕಳು ಸೇವನೆ ಮಾಡುವ ಪೌಷ್ಠಿಕ ಆಹಾರ ಮಕ್ಕಳ ದೇಹಕ್ಕೆ ಸರಿಯಾದ ರೀತಿಯಲ್ಲಿ ಲಭ್ಯವಾಗುತ್ತದೆ. ಜಂತುಹುಳು ನಿರ್ಮೂಲನೆಗೆ ಮಾತ್ರೆ ಸೇವಿಸುವುದು ಮಾತ್ರವಲ್ಲದೆ, ಶೌಚಾಲಯಕ್ಕೆ ಹೋಗಿ ಬಂದ ನಂತರ ಹಾಗೂ ಊಟಕ್ಕೆ ಮುನ್ನ ಕೈಗಳನ್ನು ಚೆನ್ನಾಗಿ ತೊಳೆಯುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.** 1ರಿಂದ 19 ವರ್ಷದೊಳಗಿನ ಎಲ್ಲಾ ಅಂಗನವಾಡಿ,ಶಾಲಾ ಮಕ್ಕಳಿಗೆ ಜಂತುಹುಳು ನಿವಾರಣಾ ಔಷಧಿ (ಆಲ್ಬೆಂಡಝೋಲ್ )ನೀಡುವ ಕಾರ್ಯಕ್ರಮ. ಜಂತುಹುಳುಗಳು ಮನುಷ್ಯನ ಕರುಳಿನಲ್ಲಿ ಜೀವಿಸುತ್ತಿರುವ ಉಪಜೀವಿಗಳಾಗಿದ್ದು, ಕರುಳಿನಲ್ಲಿರುವ ಪೋಷಕಾಂಶ, ಪ್ರೋಟೆನ್, ಹಾಗೂ ರೋಗನಿರೋಧಕ ಶಕ್ತಿಯನ್ನು ಹೀರಿ ದುರ್ಬಲಗೊಳಿಸುತ್ತದೆ.ಇದರಿಂದಾಗಿ ಆರೋಗ್ಯ ಬೆಳವಣಿಗೆಯಲ್ಲಿ ಕುಂಠಿತವಾಗುತ್ತದೆ. ಆದ್ದರಿಂದ 1 ವರ್ಷದಿಂದ19 ವರ್ಷದೊಳಗಿನ ಎಲ್ಲಾ ಮಕ್ಕಳು ಈ ಔಷಧಿಯನ್ನು ಸೇವಿಸಿ ಆರೋಗ್ಯಯುತರಾಗಿರಬಹುದಾಗಿದೆ ಎಂದರು. ಭವಿಷ್ಯದ ಭಾರತಕ್ಕಾಗಿ ಇದು ಅವಶ್ಯಕವಾಗಿದ್ದು, ಕಳೆದ ೨ವರ್ಷಗಳಲ್ಲಿ ಜಂತುಹುಳುಗಳಿಂದ ಬರುವ ರೋಗಗಳ ಸಂಖ್ಯೆ ಇಳಿಮುಖವಾಗಿದೆ.

# ಎ ಅನ್ನಾಂಗ

## ಎ ಅನ್ನಾಂಗ ದ (ವಿಟಮಿನ್ A) ಕೊರತೆಯಿಂದಾಗುವ ಅಂಧತ್ವ

ಎ ಅನ್ನಾಂಗ (ವಿಟಮಿನ್ A) ವು ಒಳ್ಳೆಯ ದೃಷ್ಟಿ ಶಕ್ತಿಗೆ ಅಗತ್ಯ. ಮಕ್ಕಳಲ್ಲಿ ವಿಟಮಿನ್ A ಕೊರತೆಯಿಂದಾಗಿ ಕುರುಡತನ ಬರಬಹುದು. ಈ ಕೊರತೆಯು ತೀವ್ರವಾಗಿದ್ದರೆ ಅದು ಶಾಶ್ವತ ಅಂಧತ್ವಕ್ಕೆ ಕಾರಣವಾಗಬಹುದು. ನಮ್ಮ ದೇಶದಲ್ಲಿ ಪ್ರತಿವರ್ಷ 30,000 ಮಕ್ಕಳು ವಿಟಮಿನ್ A ಕೊರತೆಯಿಂದ ದೃಷ್ಟಿ ಕಳೆದು ಕೊಳ್ಳುತ್ತಾರೆ. ವಿಟಮಿನ್ A ಕೊರತೆಯ ಲಕ್ಷಣಗಳು ಸಾಮಾನ್ಯವಾಗಿ 1 ರಿಂದ 5 ವರ್ಷದ ಮಕ್ಕಳಲ್ಲಿ ಕಾಣುವಂತಿದೆ.

## ವಿಟಮಿನ್ A ಕೊರತೆಯ ಲಕ್ಷಣಗಳು.

ಮಕ್ಕಳು ವಿಟಮಿನ್ A ಕೊರತೆಯಿಂದ ದೃಷ್ಟಿ ಕಳೆದುಕೊಳ್ಳುವುದು ಹಠಾತ್ತನೆ ಆಗುವುದಿಲ್ಲ. ಎ ಅನ್ನಾಂಗದ (ವಿಟಮಿನ್) ಕೊರತೆಯನ್ನು ಚಿಕ್ಕವಯಸ್ಸಿನಲ್ಲೆ ಮುಂಚಿತವಾಗಿ ಗುರುತಿಸಿದರೆ ವಿಟಮಿನ್ A ಸಮೃದ್ಧವಾದ ಪೌಷ್ಟಿಕ ಆಹಾರದ ಮೂಲಕ ಅದನ್ನು ಸರಿ ಪಡಿಸಬಹುದು.

### ತೀವ್ರ ಕೊರತೆಯ ಲಕ್ಷಣಗಳು

ಇರುಳು ಕುರುಡುತನ ಮೊದಲ ಚಿಹ್ನೆ. ಇರುಳು ಕುರುಡುತನ ಇರುವ ಮಕ್ಕಳಿಗೆ ಕಡಿಮೆ ಬೆಳಕಿನಲ್ಲಿ / ಕತ್ತಲಲ್ಲಿ ಸರಿಯಾಗಿ ನೋಡಲಾಗುವುದಿಲ್ಲ. ಕಣ್ಣಿನ ಬಿಳಿಯ ಭಾಗವು ತನ್ನ ಹೊಳಪಿನ ಗುಣವನ್ನು ಕಳೆದು ಕೊಳ್ಳುತ್ತದೆ.

# ಮರಾಸ್ಮಸ್

ಬೆಳೆಯುವ ಮಕ್ಕಳಿಗೆ ಸಾಕಷ್ಟು ಪೌಷ್ಟಿಕ ಆಹಾರ ಬೇಕು. ಅವರ ದೇಹದಲ್ಲಿ ಪ್ರೋಟೀನ್ ಮತ್ತು ಕ್ಯಾಲರಿಗಳ ಕೊರತೆ ಯಾದರೆ ( ಅಪೌಷ್ಟಿಕತೆ) ಮರಸ್ಮಾಸ & ಕ್ವಾಷ್ಯೋಕರ್ ರೋಗಗಳು ಬರುವವು.

## ಮರಾಸ್ಮಸ್:

ಈ ರೋಗವು ಕಾಲುಗಳ ಬಾವಿನಿಂದ ಪ್ರಾರಂಭವಾಗುವುದು. ನಂತರ ಕೈಗಳು ಮತ್ತು ದೇಹ ಊದಿ ಕೊಳ್ಳುವವು. ಒರಟಾದ ಚರ್ಮ, ವಿರಳ ಕೂದಲು, ಕಂದು ಬಣ್ಣಕ್ಕೆ ತಿರುಗಿದ ಕೂದಲು ಇದರ ಪ್ರಮುಖ ಲಕ್ಷಣಗಳು. ಇದರಿಂದ ಪೀಡತರಾದ ಮಕ್ಕಳು ಬಿಳಿಚಿಕೊಂಡು ಜಡವಾಗಿರುವರು.

## ಕ್ವಾಷ್ಯೋಕರ್ ಲಕ್ಷಣಗಳು :

ಈ ರೋಗ ಪೀಡಿತರು ತುಂಬ ತೆಳ್ಳಗೆ , ದುರ್ಬಲವಾಗಿರುವರು. ಮೊದಲ ಹಂತದಲ್ಲಿ ಅತಿಸಾರ ಆಗಬಹದು. ಚರ್ಮವು ಒಣಗಿರುವುದು.

## ಲೇಖನ–7
## ಶಿಕ್ಷಣಕ್ಕಾಗಿ ಜೀವನವಲ್ಲ...... ಜೀವನಕ್ಕಾಗಿ ಶಿಕ್ಷಣ

ಒಂದುವೇಳೆ ನಾನು ನಿಮಗೆ ಒಂದೆರಡು ಪದಗಳನ್ನು ಕೊಟ್ಟು ಕಥೆಯೊಂದನ್ನು ಬರೆಯುವಂತೆ ಹೇಳಿದೆ ಎಂದಿಟ್ಟುಕೊಳ್ಳಿ. ಆಗೇನಾಗಬಹುದು..? ನೀವೆಷ್ಟು ಮಂದಿ ಇರುವಿರೋ ಅಷ್ಟು ಕಥೆಗಳು ಹೊರಹೊಮ್ಮುತ್ತವೆ. ಅವೆಲ್ಲವನ್ನು ಓದಿದರೆ ಒಂದೇ ರೀತಿ ಇರುತ್ತವೆಯೇ? ಖಂಡಿತ ಇಲ್ಲ. ಪ್ರತಿಯೊಂದು ಕಥೆಯೂ ವಿಭಿನ್ನವಾಗಿರುತ್ತದೆ. ಇದಕ್ಕೆ ಕಾರಣವೇನೆಂದು ಕಂಡುಹಿಡಿಯಲು ಹೊರಟರೆ ಮಾನವನ ಅಗಾಧ ಸಾಮರ್ಥ್ಯದ ಅರಿವು ನಮಗಾಗುತ್ತದೆ. ಈ ಜಗತ್ತಿನ ಮಾನವ ಸೃಷ್ಟಿಯೂ ಸಹ ಇನ್ನಿತರ ಸೃಷ್ಟಿಗಳಂತೆ ವಿಭಿನ್ನವಾದುದು. ನೋಡಲು ಒಂದೇ ರೀತಿ ಇದ್ದವರಲ್ಲಿಯೂ ಕೂಡ ವಿಭಿನ್ನ ರೀತಿಯ ಸಾಮರ್ಥ್ಯಗಳಿವೆ. ನಮ್ಮ ಶಾಲೆಗಳಿಗೆ ದಾಖಲಾಗುವ ಮಕ್ಕಳು ವಿಭಿನ್ನ ಹಿನ್ನೆಲೆಗಳಿಂದ ಬಂದವರಾಗಿದ್ದು ವಿಭಿನ್ನ ರೀತಿಯ ಸಾಮರ್ಥ್ಯಗಳನ್ನು ಹೊಂದಿರುವುದು ವಾಸ್ತವ. ಪ್ರತಿ ಮಗುವೂ ಒಂದೊಂದು ಪ್ರಕಾರಕ್ಕೆ ಸೇರಿದ ಹೂವಿನ ತರಹ. ಒಂದು ಮಗುವಿನ ಆಲೋಚನಾ ಶೈಲಿಯು ಮತ್ತೊಂದು ಮಗುವಿಗಿಂತಲೂ ತೀರಾ ಭಿನ್ನವಾಗಿದೆ. ಭಿನ್ನ ಭಿನ್ನ ರೀತಿಯ ಕಲ್ಪನೆ, ಭಾವನೆ ಹಾಗೂ ವರ್ತನೆಗಳನ್ನು ಹೊಂದಿರುವ ಮಕ್ಕಳು ಒಂದು ತರಗತಿ ಕೋಣೆಯಲ್ಲಿ ಕುಳಿತಾಗ ಸಹಜವಾಗಿಯೇ ಸವಾಲುಗಳು ಎದುರಾಗುತ್ತವೆ.

ಏಕರೂಪದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಅಷ್ಟೊ ತರಹದ ಮಕ್ಕಳ ವಿಭಿನ್ನತೆಗಳನ್ನು ಮನಗಂಡು ಅವರವರ ಸಾಮರ್ಥ್ಯಕ್ಕೆ ಅನುಗುಣವಾದ ಕಲಿಕೆಯ ವಾತಾವರಣವನ್ನು ಕಲ್ಪಿಸುವುದು ಸಾಧ್ಯವೇ? ಪ್ರಸಕ್ತ ವ್ಯವಸ್ಥೆಯನ್ನು ಅವಲೋಕಿಸಿದಾಗ ಪಠ್ಯಪುಸ್ತಕವನ್ನಾಧರಿಸಿದಂತಹ ತರಗತಿಗಳು ಎಷ್ಟರಮಟ್ಟಿಗೆ ಮಕ್ಕಳಲ್ಲಿ ವೈವಿಧ್ಯಮಯ ಸಾಮರ್ಥ್ಯಗಳನ್ನು ಮೂಡಿಸುತ್ತವೆ? ಎಷ್ಟರಮಟ್ಟಿಗೆ ಮಕ್ಕಳ ಕಲಿಕೆಯ ಅಗತ್ಯಗಳನ್ನು ಮನಗಂಡು ತರಗತಿಗಳನ್ನು ಸಂಯೋಜಿಸುತ್ತವೆ? ಎಂಬುದು ಆಲೋಚಿಸಬೇಕಾದ ಅಂಶ. ಈ ಹಿನ್ನೆಲೆಯಲ್ಲಿ ಪಠ್ಯಕ್ರಮ (CURRICULUM), ಪಠ್ಯವಸ್ತು (SYLLABUS) ಹಾಗೂ ಪಠ್ಯಪುಸ್ತಕ (TEXT BOOK)ಗಳು ರಚನೆಯಾಗುವ ಕ್ರಮದ ಅರಿವು ನಮಗಿರಬೇಕಾದ್ದು ಅವಶ್ಯಕ. ಈಗ ನಮ್ಮ ದೇಶದ ಪಠ್ಯಕ್ರಮ ಚೌಕಟ್ಟು ಹೇಗೆ ರೂಪುಗೊಳ್ಳುತ್ತದೆ ಎಂಬುದರ ಕುರಿತು ಒಂದು ನೋಟ ಹಾಯಿಸೋಣ. ಆಯಾ ದೇಶಗಳು ತಮಗೆ ಯಾವ ರೀತಿಯ ಶಿಕ್ಷಣ ವ್ಯವಸ್ಥೆ ಇರಬೇಕೆಂದು ಮೊದಲು ನಿರ್ಧರಿಸಿಕೊಳ್ಳುತ್ತವೆ. ಇದಕ್ಕನುಗುಣವಾದ ಶಿಕ್ಷಣದ ಗುರಿಗಳು ನಿಗದಿಯಾಗಿ ಅವುಗಳನ್ನು ಸಾಧಿಸುವ ನಿಟ್ಟಿನಲ್ಲಿ ಪಠ್ಯಕ್ರಮ ಇಂಥಹುದೇ ಇರಬೇಕೆಂದು ವಿವಿಧ ಶಿಕ್ಷಣ ತಜ್ಞರ ಸಮಿತಿಗಳ/ಆಯೋಗಗಳ ಶಿಫಾರಸ್ಸಿನ ಆಧಾರದ ಮೇಲೆ ಒಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NATIONAL CURRICULUM FRAMEWORK)ಪ್ರತಿಪಾದಿಸಲ್ಪಡುತ್ತದೆ. ಈ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಆಧರಿಸಿ ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ಪಠ್ಯವಸ್ತು (SYLLABUS) ಸಿದ್ಧಗೊಳ್ಳುತ್ತದೆ. ಈ ಪಠ್ಯಕ್ರಮ ಹಾಗೂ ಪಠ್ಯವಸ್ತುವಿನ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪಠ್ಯಪುಸ್ತಕಗಳು ರಚನೆಯಾಗುತ್ತವೆ. ಇದೇ ಚೌಕಟ್ಟನ್ನು ಆಧರಿಸಿ ನಮ್ಮ ದೇಶದ ರಾಜ್ಯಗಳು ತಮ್ಮ ಸ್ಥಳೀಯ ಪರಿಸ್ಥಿತಿಗಳನ್ನು ಅನುಲಕ್ಷಿಸಿ ರಾಜ್ಯ ಪಠ್ಯಕ್ರಮ ಚೌಕಟ್ಟನ್ನು (STATE CURRICULUM FRAMEWORK) ನಿರ್ಧರಿಸಿಕೊಳ್ಳುತ್ತವೆ. ಹೀಗೆ ದೇಶದ ಇಡೀ ಶಿಕ್ಷಣ ವ್ಯವಸ್ಥೆ ಕಾರ್ಯನಿರ್ವಹಿಸುತ್ತದೆ.

ನಮ್ಮ ಶಾಲೆಗಳು ಈ ರೀತಿಯ ಸಂಯೋಜಿತ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಈ ಪಠ್ಯಪುಸ್ತಕ, ಪಠ್ಯವಸ್ತು ಹಾಗೂ ಪಠ್ಯಕ್ರಮವು ನಮ್ಮ ತರಗತಿಯಲ್ಲಿನ ವಿಭಿನ್ನ ಸಾಮರ್ಥ್ಯದ ಮಕ್ಕಳ ಕಲಿಕಾ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಇರಬೇಕಾದ್ದು ಅಪೇಕ್ಷಣೀಯ. ವಾಸ್ತವದಲ್ಲಿ ನಮ್ಮ ಮಕ್ಕಳು ಪಠ್ಯಪುಸ್ತಕವನ್ನು ಮೀರಿ ಬೆಳೆಯಬೇಕು. ಪಠ್ಯಕ್ರಮದ ಆಶಯಗಳು ಈಡೇರಬೇಕಾದರೆ ಶಿಕ್ಷಕರು ಪ್ರತಿಯೊಂದು ಮಗುವಿನ ಹಿನ್ನೆಲೆ, ಸ್ಥಿತಿಗತಿಗಳನ್ನು ಅರಿತಿರಬೇಕಾಗುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಶಯಗಳ ಹಿನ್ನೆಲೆಯಲ್ಲಿ ಬಂದಿರುವ ಎಲ್ಲ ವಿಷಯಗಳ ಪೊಸಿಶನ್ ಪೇಪರ್‌ಗಳನ್ನು ಓದಿ ಅರ್ಥೈಸಿಕೊಂಡಿರುವ ಶಿಕ್ಷಕರು ಮಾತ್ರವೇ ತಮ್ಮ ತರಗತಿ ಕೋಣೆಗಳನ್ನು ಮಗುಸ್ನೇಹಿಯಾಗುವಂತೆ ರೂಪಿಸಿಕೊಂಡು ಪಠ್ಯಕ್ರಮದ ಆಶಯಗಳನ್ನು ಈಡೇರಿಸಬಲ್ಲರು ಹಾಗೂ ಮಕ್ಕಳು ಪಠ್ಯಪುಸ್ತಕದಿಂದಾಚೆ ತಮ್ಮ ಜ್ಞಾನವನ್ನು ಕಟ್ಟಿಕೊಳ್ಳುವಲ್ಲಿ ಸಮರ್ಥರಾಗುವಂತೆ ಮಾಡಬಲ್ಲರು.

ಪಠ್ಯಪುಸ್ತಕವೇ ಅಂತಿಮ ನಿರ್ಧಾರವಲ್ಲ. ಅದರಾಚೆಗೂ ಜ್ಞಾನವಲಯದ ವಿಸ್ತಾರವಿದೆ. ಇದನ್ನರಿತು ಜ್ಞಾನದ ಅನ್ವೇಷಣೆ ನಡೆಯಬೇಕು. ಮಕ್ಕಳ ಕಲಿಕೆಯ ಅಗತ್ಯಗಳಿಗನುಗುಣವಾದ ವಾತಾವರಣವನ್ನು ತರಗತಿ ಕೊಠಡಿಯಲ್ಲಿ ಸೃಷ್ಟಿಸಿದಾಗ ಮಾತ್ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಶಯಗಳು ಈಡೇರಲು ಸಾಧ್ಯ. ತರಗತಿಯಿಂದ ತರಗತಿಗೆ ಹೋದ ಹಾಗೆಲ್ಲ ಮಗುವಿಗೆ ಸಿಗುವ ಅವಕಾಶಗಳು ಅವನ/ಅವಳ ಜೀವನವನ್ನು ರೂಪಿಸುವಲ್ಲಿ ನೆರವಾಗಬೇಕೇ ಹೊರತು ಈಗಾಗಲೇ ಅವನ/ಅವಳಲ್ಲಿರುವ ಸೃಜನಶೀಲ ಸಾಮರ್ಥ್ಯವನ್ನು ಮೊಟಕುಗೊಳಿಸುವಂತಿರಬಾರದು. ಒಂದು ಉಲ್ಲೇಖದ ಪ್ರಕಾರ ಮೊದಲನೇ ತರಗತಿಗೆ ದಾಖಲಾಗುವ ಶೇ.98 ರಷ್ಟು ಮಕ್ಕಳಲ್ಲಿನ ವಿಭಿನ್ನತೆಗಳು, ಸೃಜನಶೀಲತೆ, ಕಲ್ಪನೆ, ಭಾವನೆಗಳು, ಆಲೋಚನೆಗಳು ತರಗತಿಯಿಂದ ತರಗತಿಗೆ ಸಾಗಿದ ಹಾಗೆ ಕಡಿತಗೊಳ್ಳುತ್ತಲೇ ಹೋಗಿ 10, 12 ಅಥವಾ 15 ವರ್ಷಗಳ ಶಾಲಾ ಶಿಕ್ಷಣವನ್ನು ಪೂರೈಸುವ ವೇಳೆಗೆ ಕೇವಲ ಶೇ.2 ರಷ್ಟು ಉಳಿದುಬಿಡುತ್ತದೆ. ಏಕೆಂದರೆ ನಾವು ಶಾಲೆಗಳಲ್ಲಿ ಕಲಿಸುವ ವಿಷಯಗಳು ಅಂಕಗಳನ್ನು ಆಧರಿಸಿರುತ್ತವೆಯೇ ಹೊರತು ಅವರಲ್ಲಿನ ಸೃಜನಶೀಲತೆಯನ್ನಲ್ಲ. ಹೀಗಾದರೆ ಉಳಿದ ಶೇ.2 ರಷ್ಟು ಸೃಜನಶೀಲತೆಯನ್ನು ಬಳಸಿಕೊಂಡು ಇನ್ನುಳಿದ ತನ್ನ ಇಡೀ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುತ್ತದೆ. ಕೇವಲ ಅಂಕಗಳಿಕೆಯತ್ತ ಮಕ್ಕಳನ್ನು ತೊಡಗಿಸುವ ನಾವುಗಳು ಅವರು ಜೀವನ ನಡೆಸಲು ನೆರವಾಗಬಲ್ಲ ಸಾಮರ್ಥ್ಯಗಳ ಗಳಿಕೆಯತ್ತ ಅವರನ್ನು ಪ್ರೇರೇಪಿಸಲು ಆಗುತ್ತದೆಯಲ್ಲವೇ? ವೈವಿಧ್ಯಮಯ ಗುಣಗಳಿಂದ ಕೂಡಿ ಶಾಲೆಗೆ ಬಂದ ಮಗುವಿಗೆ ನಾವು 'ನೀನು ಕನ್ನಡದಲ್ಲಿ ಇದನ್ನು ಕಲಿ, ಗಣಿತದಲ್ಲಿ ಇಷ್ಟು ಲೆಕ್ಕ ಮಾಡು, ಪರಿಸರ ಅಧ್ಯಯನದಲ್ಲಿ ಇಷ್ಟು ಓದು, ಬೇಕೋ ಬೇಡವೋ ಇಂಗ್ಲಿಷ್, ಹಿಂದಿಗಳನ್ನು ಕಲಿ..' ಎಂದೆಲ್ಲಾ ಒತ್ತಡ ಹೇರಿ ಅವನ/ಅವಳ ಸಹಜ ಕಲಿಕೆಯ ಸಾಮರ್ಥ್ಯವು ಕುಗ್ಗುವ ರೀತಿಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಸಂಯೋಜಿಸುವುದು ನಿಜಕ್ಕೂ ಆತಂಕಕಾರಿ.

ಈ ವಿಷಯಗಳು ನಮ್ಮ ಬದುಕಿಗೆ ಅನಿವಾರ್ಯವಾದವು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಕೇವಲ ಅಂಕಗಳಿಕೆಯೊಂದೇ ಪರಮಧ್ಯೇಯವೆಂಬಂತೆ ಮಕ್ಕಳ ಮಾನಸಿಕ ಸಿದ್ಧತೆಯನ್ನು ಕಡೆಗಣಿಸಿ ಈ ವಿಷಯಗಳನ್ನು ತುರುಕುವ ಮೂಲಕ ಅವರಲ್ಲಿನ ಸಹಜ ಕಲಿಕಾ ಸಾಮರ್ಥ್ಯವನ್ನು ಹತ್ತಿಕ್ಕುವುದು ಎಷ್ಟರಮಟ್ಟಿಗೆ ಸರಿ ಎಂದು ನಮಗೆ ನಾವೇ ಅವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಈ ವಿಷಯಗಳು ನಮ್ಮ ನಿತ್ಯಜೀವನಕ್ಕೆ ಅನ್ವಯವಾದಾಗಲೇ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ನಿಜವಾದ ಆಶಯಗಳು ಈಡೇರಲು ಸಾಧ್ಯ. ಈ ದಿಸೆಯಲ್ಲಿ ನಮ್ಮ ತರಗತಿ ಕೋಣೆಗಳನ್ನು ಸಜ್ಜುಗೊಳಿಸಬೇಕಾಗಿದೆ. ಯಾವ ಶಿಕ್ಷಕರು ಪಠ್ಯಕ್ರಮ ಚೌಕಟ್ಟು ಹಾಗೂ ಅದರ ಪೊಸಿಶನ್ ಪೇಪರ್‌ಗಳನ್ನು ಆಮೂಲಾಗ್ರವಾಗಿ ಓದಿ ಅರ್ಥೈಸಿಕೊಂಡಿರುತ್ತಾರೋ ಅವರು ಸಹಜವಾಗಿಯೇ ಶೈಕ್ಷಣಿಕ ಆಶಯಗಳನ್ನು ರಕ್ತಗತ ಮಾಡಿಕೊಂಡಿರುತ್ತಾರೆ ಎನ್ನುವುದು ಸಾರ್ವಕಾಲಿಕ ಸತ್ಯ. NCERTಯ WEBPAGE ಗೆ ಹೋದರೆ ಎಲ್ಲ ವಿಷಯಗಳ ಪೊಸಿಶನ್ ಪೇಪರ್‌ಗಳು ದೊರೆಯುತ್ತವೆ. ಇವು ಇಂಗ್ಲಿಷ್‌ನಲ್ಲಿ ಇರುವುದರಿಂದ ಕೆಲವು ಶಿಕ್ಷಕರಿಗೆ ಓದಲಾಗಿಲ್ಲದಿರಬಹುದು. ಇದರಿಂದ ಇವುಗಳ ಕನ್ನಡ ಅನುವಾದ ಇಂದಿನ ತುರ್ತು ಅಗತ್ಯವಾಗಿದೆ. ಕಲಿಕೆಯ ಇಡೀ ವಾತಾವರಣ ಮಗುಸ್ನೇಹಿಯಾಗಿರುವಂತೆ ಮಾಡುವ ಮೂಲಕ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಬಿಂಬಿತವಾಗಿರುವ ಶೈಕ್ಷಣಿಕ ಆಶಯಗಳನ್ನು ಈಡೇರಿಸುವ ಕಾರ್ಯ ಮುಂದುವರೆಯಬೇಕಿದೆ.

# ಲೇಖನ–8

## ಪಾಠಯೋಜನೆ

| |
|---|
| ಸವಿತ ಮೇಡಂ, ಸಂಜೆ ಕುಳಿತವರು ರಾತ್ರಿ ಹನ್ನೊಂದಾದರೂ ಮೇಲೇ ಎದ್ದಿಲ್ಲ. ಮುದ್ದಿನ ಮಗು ಹತ್ತಿರ ಬಂದರೂ ಮುದ್ದಿಸಿ, ಗದರಿಸಿ ಕಳುಹಿಸಿ, ಬರವಣಿಗೆಯಲ್ಲಿ ನಿರತರಾಗಿದ್ದಾರೆ. ಪಕ್ಕದ ಊರಿಗೆ ಹೋಗಿದ್ದ ರಮೇಶ ಮನೆಗೆ ಬಂದಾಗ ಹೆಂಡತಿ ಹೀಗೆ ಬರೆಯುತ್ತಿದ್ದುದು ನೋಡಿದಾಗ ಅಚ್ಚರಿ ಎನಿಸಲಿಲ್ಲ. |
| 'ನಾಳೆ ಯಾರು ಬರುತ್ತಿದ್ದಾರೆ?' |
| 'ಯಾರೋ ಬರ್ತಾರಂತೆ.. ಬೆಂಗಳೂರಿನಿಂದ'... ಎಂದು ಉಸುರಿ ಬರೆಯುವುದರಲ್ಲಿ ಮಗ್ನರಾದರು. |

**ಸವಿತ ಮೇಡಂ ಬರವಣಿಗೆಯ ಹಿನ್ನೆಲೆ ಮುನ್ನೆಲೆಗಳನ್ನು ಚಿಂತಿಸಿ.**

ಒಂದು ಮನೆ/ಕಟ್ಟಡ ಕಟ್ಟುವಾಗ ಯಾವರೀತಿಯಲ್ಲಿ ಯೋಜನೆ ಮಾಡಿಸುತ್ತೇವೆ ಎಂದು ತಮಗೆ ತಿಳಿದಿದೆ. ಮನೆ ಬಾಗಿಲು ಎಲ್ಲಿ ಬರಬೇಕು ಎಂಬುದರಿಂದ ಹಿಡಿದು ಶೌಚಾಲಯದವರೆಗೆ ಯಾವುದು ಎಲ್ಲಿ, ಎಷ್ಟು ಹಾಗೂ ಹೇಗಿರಬೇಕು ಎಂಬುದನ್ನು ಪೂರ್ಣ ನಿರ್ಣಯಿಸಿಯೇ ಮನೆ/ಕಟ್ಟಡ ಕಟ್ಟಲು ಹೊರಡುತ್ತೇವೆ. ಪೂರ್ವ ಯೋಜನೆ ಮಾಡಿ ಕಟ್ಟುವ ಮನೆಗೂ, ಯೋಜನೆಯೇ ಮಾಡದೇ ಆಯಾ ದಿನ/ವಾರ ಯೋಚಿಸಿ ಕಟ್ಟಿದ ಮನೆ/ಕಟ್ಟಡಕ್ಕೂ ವ್ಯತ್ಯಾಸಗಳನ್ನು ಪಟ್ಟಿಮಾಡಬಹುದು. ಯಾವುದೇ ಪ್ರಕ್ರಿಯೆಗೆ ಪೂರ್ವಸಿದ್ಧತೆ ಅತ್ಯಗತ್ಯ. ಉದ್ದೇಶವನ್ನು ಯೋಚಿಸಿದ ನಂತರ ಆ ಉದ್ದೇಶಗಳನ್ನು ಈಡೇರಿಸಲು ಅಗತ್ಯ ಯೋಜನೆಯನ್ನು ಮಾಡಿಕೊಳ್ಳಬೇಕು. ಯೋಜನೆ ನಮ್ಮ ಶ್ರಮ, ಸಮಯವನ್ನು ಉಳಿಸಿ ಕಲಿಕೆಯನ್ನು ಸಂತಸದಾಯಕವಾಗಿಸುವುದು. ತರಗತಿಯಲ್ಲಿ ವಿವಿಧ ಅಗತ್ಯತೆಗಳುಳ್ಳ ವಿದ್ಯಾರ್ಥಿಗಳಿರುತ್ತಾರೆ. ಸಮನ್ವಯ ಶಿಕ್ಷಣದ ಅಗತ್ಯತೆ ಇರುವವರು, ಕಲಿಕೆಯಲ್ಲಿ ಹಿಂದುಳಿದಿರುವವರು, ಸಾಧಾರಣ ಕಲಿಕೆಯ ವಿದ್ಯಾರ್ಥಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಮುಂತಾಗಿರಬಲ್ಲರು. ಅವರೆಲ್ಲರಿಗೂ ಕಲಿಕೆಗೆ ಸೂಕ್ತ ಅವಕಾಶ ಒದಗಿಸಿಕೊಡುವುದು ಶಿಕ್ಷಕರ ಆದ್ಯ ಕರ್ತವ್ಯ. **ಈ ಮಹತ್ವದ ಕಾರ್ಯ ಯಾವುದೇ ಪೂರ್ವಸಿದ್ಧತೆಯಿಲ್ಲದೇ ಶಿಕ್ಷಕರು ತರಗತಿ ಒಳಗೆ ಕಾಲಿಡುವಂತಹ ಸಂದರ್ಭಗಳಿಂದ ಎಷ್ಟರಮಟ್ಟಿಗೆ ಸಾಧ್ಯ?.. ಯೋಚಿಸಿ**. ಒಂದು ದಿನದ ಪೂರ್ವಸಿದ್ಧತೆಯು ಹಲವು ತಿಂಗಳ ಸಿದ್ಧತೆ ರಹಿತ ತರಗತಿ ಅವಕಾಶಗಳ ನಿರ್ವಹಣೆಗಿಂತ ಹೆಚ್ಚು ಫಲ ನೀಡಬಲ್ಲದು.

**ಏಕೆ ಯೋಜಿಸಬೇಕು**? ಈಗಾಗಲೇ ಆಗಿಹೋಗಿರುವ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಸರಿದಾರಿಯಲ್ಲಿ ಸುವೇಗದಲ್ಲಿ ಮುನ್ನಡೆಯಬೇಕಿದೆ. ಇದಕ್ಕೆ ಅಧಿಕೃತ ನಕ್ಷೆ– ಪಾಠಯೋಜನೆ. ವಿದ್ಯಾರ್ಥಿ ಕಲಿಕೆಯ ಹೊಣೆಗಾರಿಕೆ, ಉತ್ತರದಾಯಿತ್ವವನ್ನು ಪಾಠಯೋಜನೆಯಲ್ಲಿ ಕಾಣಬಹುದು. ವಿದ್ಯಾರ್ಥಿಗಳ ಸಾಮರ್ಥ್ಯಾಧಾರಿತ ಕಲಿಕಾ ಪ್ರಕ್ರಿಯೆಗೆ, ಜವಾಬ್ದಾರರೆಲ್ಲರಿಗೂ, ಕಲಿಕೆಯನ್ನು ವಿಸ್ತರಿಸಲು, ಏರುಮುಖ ಪ್ರಗತಿಗಾಗಿ, ಕಲಿಕೆ ಹಾಗೂ ಕಲಿಕೆಗಾಗಿನ ಪ್ರಯತ್ನಗಳನ್ನು ಗೋಚರವಾಗಿಸಲು, ನಿರ್ಧಾರ ಕೈಗೊಳ್ಳಲು ಅತ್ಯಗತ್ಯ. ಈ ದಿಸೆಯಲ್ಲಿ ಕಲಿಕಾ ಪ್ರಕ್ರಿಯೆಯ ಪ್ರಮುಖ ದಾಖಲೆ ಪಾಠಯೋಜನೆ. ಯೋಜಿಸಿ ಸಿದ್ಧಪಡಿಸಿದ ಪಾಠಯೋಜನೆ ತರಗತಿಯಲ್ಲಿ ಶಿಕ್ಷಕರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ನೀವು ಸೂಕ್ತ ಪೂರ್ವಸಿದ್ಧತೆಯೊಂದಿಗೆ ತರಗತಿಗೆ ತೆರಳಿದಾಗ ನಿಮ್ಮ ಮನಸ್ಥಿತಿ ಹಾಗೂ ಆತ್ಮವಿಶ್ವಾಸಕ್ಕೂ, ಏನನ್ನು ಯೋಜಿಸದೇ ತರಗತಿಗೆ ತೆರಳಿದಾಗಿನ ನಿಮ್ಮ ಮನಸ್ಥಿತಿಗೂ, ಆತ್ಮವಿಶ್ವಾಸದ ಮಟ್ಟಕ್ಕೂ ಇರುವ ವ್ಯತ್ಯಾಸಗಳನ್ನು ಅವಲೋಕಿಸಿ.

ನಿಮ್ಮ ಶಾಲಾದಿನಗಳನ್ನು, ಸಂದರ್ಭಗಳನ್ನು ನೆನಪಿಸಿಕೊಳ್ಳಿ. ಯಾವ ಶಿಕ್ಷಕರು ತರಗತಿಗೆ ಆಗಮಿಸಲು ಎಂದು ಕಾಯುತ್ತಿದ್ದಿರಿ. ಏಕೆ?ಆ ಶಿಕ್ಷಕರ ತರಗತಿ ನಿರ್ವಹಣೆಯಲ್ಲಿದ್ದ ಯಾವ ವಿಶಿಷ್ಟ ಗುಣಗಳನ್ನು ನಿಮ್ಮ ಪಾಠಯೋಜನೆಯಲ್ಲಿ ತಂದಿದ್ದೀರಿ?

**ಮಕ್ಕಳ ಭವಿಷ್ಯವನ್ನು ವಿವಿಧ ವ್ಯವಸ್ಥೆಗಳಲ್ಲಿ ಹೇಗೆ ನೋಡಲಾಯಿತು**? **ಯೋಚಿಸಬಹುದೇ**?

| ವ್ಯವಸ್ಥೆ | ಗುರಿ | ಶಿಕ್ಷಕರ ಕಣ್ಣಲ್ಲಿ ಮಗುವಿನ ಭವಿಷ್ಯ | ಅದಕ್ಕೆ ಪೂರಕವಾದ ಕಲಿಕಾಯೋಜನೆ ಹೀಗಿರಬಹುದು.. |
|---|---|---|---|
| ಗುರು ಶಿಷ್ಯ ಪರಂಪರೆ | | | |
| ಬ್ರಿಟಿಷ್ ಆಡಳಿತ ಕಾಲ | | | |
| ಪೂರ್ವ ಸ್ವಾತಂತ್ರ್ಯ ಕಾಲ | | | |
| ಪ್ರಸ್ತುತ | | | |

ಬ್ರಿಟಿಷ್ ವ್ಯವಸ್ಥೆಯಲ್ಲಿ ಮುಖ್ಯವಾಗಿ ಮಕ್ಕಳನ್ನು ದುಡಿಮೆಗಾಗಿ, ಎಂಬಂತೆ ಕಾಣಲಾಯಿತು. ಆ ದಿಸೆಯಲ್ಲಿ ಆಸೆ ತೋರಿಸಲಾಯಿತು. ಮಾನವರನ್ನು ಯಂತ್ರಗಳನ್ನಾಗಿಸುವ ಶಿಕ್ಷಣ.. ಆಗಿನ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಹೇಗೆ ನೋಡಿರಬಹುದು... ಕಲಿತು ಮುಂದೆ ಅವರ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ, ಆಸ್ಥಾನ/ಕಛೇರಿಗಳಲ್ಲಿ ಭಾಷಾಂತರಕಾರರಾಗಿ.. ಅವರನ್ನು ಅರಿತು ನಿರ್ವಹಿಸುವ ಸೇವಕರಾಗಿ.. ಅಂದಿನ ಪಾಠಯೋಜನೆ ಅದಕ್ಕೆ ಪೂರಕವಾಗಿದ್ದರೆ ಸಾಕಿತ್ತು. ಹಣಕ್ಕಾಗಿ ತಲೆಯಿತ್ತಿರುವ ಶಾಲೆಗಳಲ್ಲಿ ಹೇಗೆ ನೋಡಲಾಗುತ್ತದೆ.. ವ್ಯವಸ್ಥೆಯ ಅಗತ್ಯತೆಗಾಗಿ ಶಿಕ್ಷಣವೋ.. ಮಾನವೀಯತೆಯತ್ತ ಶಿಕ್ಷಣವೋ.. ಈಗ ಶಿಕ್ಷಕರು ಹೆಚ್ಚುವರಿ ವರಿ ಕಡಿಮೆ ಮಾಡಿಕೊಳ್ಳಲು, ಖಾಸಗೀ ಶಾಲೆಗೆ ಸಡ್ಡು

ಹೊಡೆಯಲು ಅವಕಾಶ ಕಲ್ಪಿಸಿಕೊಳ್ಳುವುದೇ? ಮಗು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಅವಕಾಶ ಕಲ್ಪಿಸಿಕೊಳ್ಳುವುದೇ? ನೀವು ಮಗುವನ್ನು ಹೇಗೆ ನೋಡುವಿರಿ.. ಎಂಬುದನ್ನು ನಿಮ್ಮ ಪಾಠಯೋಜನೆಯು ಪ್ರತಿನಿಧಿಸಬೇಕು. ತಮ್ಮ ಪಾಠಯೋಜನೆಯಲ್ಲಿ ಇವುಗಳಿಗೆ ಅವಕಾಶ ಹೇಗೆ ಕಲ್ಪಿಸುವಿರಿ.




**ಶಿಕ್ಷಕನ ಕೊನೆಯ ಕಾರ್ಯ ಬೋಧನೆ– ನೀವು ಒಪ್ಪುತ್ತೀರಾ?...ಏಕೆ?**
**ಈ ಚಿಂತನೆಯನ್ನು ನಿಮ್ಮ ಯೋಜನೆಯಲ್ಲಿ ಹೇಗೆ ಕಾಣಬಹುದು?**

ಮೇಲ್ವಿಚಾರಣಾಧಿಕಾರಿಗಳು ಕೇಳುತ್ತಾರೆ ಎಂದೋ, ಮುಖ್ಯಶಿಕ್ಷಕರು ಕೇಳುತ್ತಾರೆಎಂದೋ,ಇತರರ ನಿರೀಕ್ಷಿಸುತ್ತಾರೆ ಎಂದು ಕಾಟಾಚಾರಕ್ಕೆ 4 ಸಾಲು ಗೀಚಿದ ಪಾಠಯೋಜನೆಗೂ ವ್ಯವಸ್ಥಿತವಾಗಿ ಯೋಜಿಸಿದ ಪಾಠಯೋಜನೆಯಿಂದಾಗುವ ಅನುಕೂಲಗಳಿಗೂ ಅನಾನುಕೂಲಗಳನ್ನು, ಅವುಗಳಿಗಿರುವ ವ್ಯತ್ಯಾಸಗಳನ್ನು ತಾವು ಮಾರುದ್ದ ಪಟ್ಟಿಮಾಡಬಲ್ಲಿರಿ. ಈ ದಿನಕ್ಕಾಗಿ ಯೋಜಿಸುತ್ತಿರುವ ಪಾಠಯೋಜನೆ ಸಿದ್ಧಪಡಿಸುತ್ತಿರುವುದು ಯಾರಿಗಾಗಿ? ಎಂಬ ಪ್ರಶ್ನೆ ಸ್ವಗತದಲ್ಲಿ ಮೂಡಲಿ. ಅದು ನಮ್ಮ ಕಾರ್ಯವನ್ನು ಸುಲಭ ಹಾಗೂ ಸುಂದರ ಮಾಡಿಕೊಡುತ್ತಿರುವ ಕೈದೀವಿಗೆಯೂ ಆಗಬಲ್ಲದು.

**ಉತ್ತಮ ಪಾಠಯೋಜನೆ ಸಿದ್ಧಪಡಿಸುವುದು ಶಿಕ್ಷಕರ ಸಾಮರ್ಥ್ಯವೇ ಸರಿ... ನೀವು ಒಪ್ಪುತ್ತೀರಾ?**

ಪಾಠಯೋಜನೆಯು ನಿಗಧಿತ ಹಂತಗಳನ್ನು ಒಳಗೊಂಡಿದ್ದರೂ ಅವು ಒಂದಕ್ಕೊಂದು ಪೂರಕವಾಗಿದ್ದು ಶಿಶು ಕೇಂದ್ರೀಕೃತವಾಗಿರಲಿ. ನಿರ್ಧಿಷ್ಟ ಚಟುವಟಿಕೆ ನಮೂದಿಸುವಾಗ ಶಿಕ್ಷಕರ ಪಾತ್ರವನ್ನು ಹಾಗೂ ವಿದ್ಯಾರ್ಥಿಗಳ ಪಾತ್ರವನ್ನು ಸ್ಪಷ್ಟವಾಗಿ ನೀಡಿರಲಿ.ಸಮಗ್ರವಾಗಿರಲಿ.

ನಿಮ್ಮ ಅನುಪಸ್ಥಿತಿಯಲ್ಲಿಯೂ ಬೇರೆಯವರು ನೀವು ಸಿದ್ಧಪಡಿಸಿದ ಪಾಠಯೋಜನೆಯನ್ನು ಬಳಸಿ ತರಗತಿಯಲ್ಲಿ ಅತ್ಯುತ್ತಮವಾಗಿ ಕಲಿಕೆಯಾಗುವಂತಿದ್ದರೆ ನಿಮ್ಮ ಪಾಠಯೋಜನೆಯ ಮೌಲ್ಯ ಮತ್ತಷ್ಟು ಹೆಚ್ಚುತ್ತದೆ.

**ಮಧು ಹೊಸದಾಗಿ ಸೇವೆಗೆ ಸೇರಿದ ಶಿಕ್ಷಕರು. ಅವರ ಮುಂದಿನ ತರಗತಿ ನಿರ್ವಹಣೆಗೆ ಪಾಠಯೋಜನೆ ತಯಾರಿಸುವ ವೇಳೆ ಯಾವ ಯಾವ ಅಂಶಗಳನ್ನು ಗಮನಿಸಬೇಕು? ನೀವು ಅವರಿಗೆ ಹೇಗೆ ಸಹಾಯ ಮಾಡುವಿರಿ?**

ಸಂವಿಧಾನದ ಆಶಯಗಳು ಶಿಕ್ಷಣದ ಗುರಿಗಳ ರೂಪದಲ್ಲಿ ಉದ್ದೇಶಗಳ ಮೂಲಕ ಪಾಠಯೋಜನೆಯಲ್ಲಿ ಪ್ರತಿಬಿಂಬಿಸಬೇಕು. ಪಾಠಯೋಜನೆ ತಯಾರಿಸುವ ಶಿಕ್ಷಕರಿಗೆ ಪಠ್ಯದ ಪೂರ್ಣ ತಿಳುವಳಿಕೆಯ ಜೊತೆಗೆ ಪಠ್ಯಕ್ರಮ, ಶಿಕ್ಷಣದ ಗುರಿಗಳು, ನಮ್ಮ ಸಂವಿಧಾನದ ಆಶಯಗಳ ಅರಿವು ಅತ್ಯಗತ್ಯ. ಏಕೆ? ಚರ್ಚಿಸಿ?

ತರಗತಿಯ ಸ್ವರೂಪ, ಒಂದೇ ತರಗತಿ/ಬಹುವರ್ಗ, ಮಕ್ಕಳ ವಯಸ್ಸು, ಕೊಠಡಿ/ಸೂಕ್ತ ಸ್ಥಳ ಆಯ್ಕೆ, ವಿದ್ಯಾರ್ಥಿಗಳ ಆಸನ ವ್ಯವಸ್ಥೆ, ಮಕ್ಕಳ ಪೂರ್ವಸಿದ್ಧತೆ, ನಿರೀಕ್ಷಿತ ಕಲಿಕಾ ಫಲ, ವಿಷಯವಸ್ತು, ಸೂಕ್ತ ಕಲಿಕಾ ವಿಧಾನ, ಸಂಪನ್ಮೂಲ ಸಾಮಗ್ರಿಗಳ ಲಭ್ಯತೆ ಹಾಗೂ ಬಳಕೆ, ಮೌಲ್ಯಮಾಪನ ವಿಧಾನ, ಸಮಯ ಹಂಚಿಕೆ, ಮಕ್ಕಳ ಅವಧಾನ, ಹಿಂದಿನ ತರಗತಿಯಿಂದ/ಹಿಂದಿನ ವರ್ಷ ಪಾಠಯೋಜಿಸಿ ನಡೆಸಿದ ಇದೇ ತರಗತಿಯಿಂದ ಕಲಿತ ಧನಾತ್ಮಕ ಅಂಶಗಳು ಅಥವಾ ಕಂಡುಕೊಂಡ ವ್ಯತ್ಯಾಸಗಳನ್ನು ಪಾಠಯೋಜನೆ ತಯಾರಿಸುವಾಗ ನೆನಪಿನಲ್ಲಿಟ್ಟುಕೊಂಡು ಯೋಜಿಸಬೇಕು.

ಕಲಿಕೋಪಕರಣಗಳನ್ನು ಯೋಜಿಸುವಾಗ ಚಿತ್ರಗಳು, ಮಾದರಿಗಳು, ಆಡಿಯೋ/ವಿಡಿಯೋ/ಆಡಿಯೋ ವಿಡಿಯೋ ಇರುವವು, ನೈಜ ವಸ್ತುಗಳು, ನೈಜ ಸಂದರ್ಭಗಳು, ಚಟುವಟಿಕೆಗಳು, ಗೀತೆಗಳು, ಆಟಗಳು, ಇತ್ಯಾದಿಗಳನ್ನು ಸೃಜನಾತ್ಮಕವಾಗಿ ಒಳಗೊಳ್ಳುವಂತೆ ಪಾಠಯೋಜನೆಯಲ್ಲಿ ಸೇರಿಸುವುದರಿಂದ ಕಲಿಕೆಯನ್ನು ಸಂಪದ್ಭರಿತವಾಗಿಸುತ್ತದೆ.

ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಬಗ್ಗೆಯೂ ಸೂಕ್ತ ಪೂರ್ವಸಿದ್ಧತೆ ಇರಲಿ. ಅವಧಿ/ಘಟಕ/ಅಧ್ಯಾಯದ ವಿವಿಧ ಹಂತಗಳಲ್ಲಿ ಕೈಗೊಳ್ಳುವ ರೂಪಣಾತ್ಮಕ, ಸಮಗ್ರ ಮೌಲ್ಯಮಾಪನಗಳು, ಅವುಗಳಿಗೆ ಸೂಕ್ತ ಸಾಧನ ತಂತ್ರಗಳು, ಅವುಗಳ ಬಳಕೆ ಪಾಠಯೋಜನೆಯಲ್ಲಿ ಯೋಜಿತವಾಗಿರುವುದು ಕಲಿಕೆಯ ಅವಿಭಾಜ್ಯವೇ ಆಗಿದೆ.

ಮಕ್ಕಳ ಹಿನ್ನೆಲೆಯನ್ನು ಅರ್ಥೈಸಿಕೊಂಡಿರುವುದು ಯೋಜನೆಯ ದೃಷ್ಟಿಯಿಂದ ಅಗತ್ಯ. ಮಗುವಿನ ಹಿನ್ನೆಲೆ ಗೊತ್ತಿದ್ದಾಗ ಮಾತ್ರ ಆ ತರಗತಿಯ ಯೋಜನೆ ಅರ್ಥಪೂರ್ಣವಾದೀತು. **ಪಾಠಯೋಜನೆ ಶಿಕ್ಷಕರ ಪಾಂಡಿತ್ಯವನ್ನು ತೋರಿಸುವ ನಕ್ಷೆ: ಮಗುವಿನ ಕಲಿಕೆಗೆ ಹಿಡಿದ ಕನ್ನಡಿ. ಇವುಗಳಲ್ಲಿ ನಿಮಗೆ ಯಾವುದು ಸೂಕ್ತವೆನಿಸೀತು?**

**ಪೂರ್ವಸಿದ್ಧತೆ ನಡೆಸುವ ಶಿಕ್ಷಕರಿಗೆ ಮಕ್ಕಳು ಯಾವೆಲ್ಲ ರೀತಿಗಳಿಂದ ಕಲಿಯುತ್ತಾರೆ?** ಎಂಬುದು ತಿಳಿದಿರಬೇಕಲ್ಲದೇ ಯಾವ ಯಾವ ಕಲಿಕಾ ವಿಧಾನಗಳಿವೆ ಎನ್ನುವುದೂ ತಿಳಿದಿರಬೇಕು. ಸೂಕ್ತ ಯೋಜನೆ ಕೈಗೊಳ್ಳುವುದು ರೂಢಿಯಾದಾಗ ಹೊಸ ಕಲಿಕಾ ವಿಧಾನವು ನಮ್ಮಿಂದಲೇ ಆವಿಷ್ಕಾರಗೊಳ್ಳುವ ಸಾಧ್ಯತೆಯೂ ದಟ್ಟವಾಗಿರುತ್ತದೆ.

**ರಚನಾವಾದವನ್ನು ಅನುಸರಿಸಿ ಪಾಠಯೋಜನೆ ಸಿದ್ಧಪಡಿಸುವುದು ಹೇಗೆಂದು ಶಿಕ್ಷಕರು ಪ್ರಶ್ನಿಸುತ್ತಿರುತ್ತಾರೆ. ರಚನಾವಾದ ಅನುಸರಿಸಿ ಸಿದ್ಧಪಡಿಸುವ ಪಾಠಯೋಜನೆಗೆಂದೇ ಪ್ರತ್ಯೇಕ ಪಾಠಯೋಜನಾ ಹಂತಗಳ ಅಗತ್ಯವಿದೆ ಎಂದು ನಿಮಗನಿಸುತ್ತದೆಯೇ?.. ಏಕೆ?**

ಮಗು ತನ್ನ ಜ್ಞಾನವನ್ನು ತಾನೇ ಕಟ್ಟಿಕೊಳ್ಳುವಂತಿರಲಿ, ತನ್ನ ಕಲಿಕೆಯನ್ನು ತಾನೇ ಸ್ವಮೌಲ್ಯಮಾಪನ ಮಾಡಿಕೊಳ್ಳುವಂತಿರಲಿ. ನಾವಿನ್ಯಯುತ ಚಟುವಟಿಕೆಗಳನ್ನು ಮೊದಲೇ ಯೋಜಿಸಿದ್ದಲ್ಲಿ ತರಗತಿ ನಿರ್ವಹಣೆ ಸುಲಭವೂ ಆಕರ್ಷಣೀಯವೂ, ಕಲಿಕಾರ್ಥಿಗೆ ಶ್ರಮ ನಿವಾರಕವೂ ಆಗಬಲ್ಲದು.

**ಸಮಸ್ಯಾಪರಿಹಾರ, ಪ್ರಾಯೋಗಿಕ, ಸಂಶೋಧನೆಗಳಿಗೆ ಯಾವ ಯಾವ ವಿಷಯಗಳಿಗೆ/ಪರಿಕಲ್ಪನೆಗಳಿಗೆ ಪಾಠಯೋಜನೆಯಲ್ಲಿ ಅವಕಾಶ ಕಲ್ಪಿಸುವುದು ಕಲಿಕೆಯ ವೇಗ ಹೆಚ್ಚಿಸಿ ಕುತೂಹಲಕಾರಿಯಾಗಿಸುತ್ತದೆ?**

**ಪಾಠಯೋಜನೆ ಕೆಳಗಿನ ಅಂಶಗಳನ್ನು ಹೊಂದಿರುವುದು ಅವಶ್ಯಕ.**

**1.ಕಲಿಕಾದಾರರನ್ನು ತೊಡಗಿಸಿಕೊಳ್ಳುವುದು:** ಪ್ರಶ್ನಿಸುವುದರ ಮೂಲಕ, ಚಿಕ್ಕಗುಂಪುಗಳನ್ನು ರಚಿಸಿ ಚಟುವಟಿಕೆಗಳನ್ನು ನಡೆಸುವುದರ ಮೂಲಕ, ಒಬ್ಬರಿಗೊಬ್ಬರು ಒಪ್ಪಿ ನಡೆಸುವ ಸಮಾಲೋಚನೆ ಮೂಲಕ,

**2.ಪರಿಶೋಧಿಸುವುದು:** ಪ್ರಶ್ನಿಸುವುದರ ಮೂಲಕ, ಚಿಕ್ಕಗುಂಪುಗಳನ್ನು ರಚಿಸಿ ಚಟುವಟಿಕೆಗಳನ್ನು ನಡೆಸುವುದರ ಮೂಲಕ, ಒಬ್ಬರಿಗೊಬ್ಬರು ಒಪ್ಪಿ ನಡೆಸುವ ಸಮಾಲೋಚನೆ ಮೂಲಕ,

**3.ವಿವರಿಸುವುದು:** ಸ್ಪಷ್ಟತೆಯನ್ನು ಪಡೆಯುವುದು, ಸ್ಪಷ್ಟೀಕರಿಸುವುದು, ವಿವರಿಸಲು ಸಹಕರಿಸುವುದು. ಅವರದೇ ಆದ ರೀತಿಯಲ್ಲಿ ಅಭಿವ್ಯಕ್ತಿಸುವುದು.

**4.ವಿಸ್ತರಿಸುವುದು:** ಕಲಿತಿದ್ದನ್ನು/ಕಂಡುಕೊಂಡಿದ್ದನ್ನು ಹಲವು ಸಂದರ್ಭಗಳಿಗೆ ಅನ್ವಯಿಸುವುದು, ಕಲಿಕೆಯನ್ನು ಹಲವು ಸಂದರ್ಭಗಳಿಗೆ ವಿಸ್ತರಿಸಿಕೊಳ್ಳುವುದು.

**5.ಮೌಲ್ಯಮಾಪನ ಮಾಡುವುದು.** ರೂಪಣ/ಸಂಕಲನಾತ್ಮಕ ಮೌಲ್ಯಮಾಪನಗಳಿಗೆ ಅವಕಾಶ, ವಿಶ್ಲೇಷಣೆ, ಹೋಲಿಕೆ, ಸ್ವಮೌಲ್ಯಮಾಪನಗಳಿಗೆ ಯೋಜನೆಯಲ್ಲಿ ಅವಕಾಶಕೊಡುವುದು ಹೇಗೆ?

**ಪಠ್ಯಪುಸ್ತಕ ಮೀರಿದ ಕಲಿಕೆಗೆ ಅವಕಾಶ ನೀಡುವಂತೆ ರೂಪಿಸುವ ಪಾಠಯೋಜನೆ ಹೇಗಿರುತ್ತದೆ?**

ಮಗುವನ್ನು ಅರಿತು ಪಾಠಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದರೂ ಕೂಡ ಆ ದಿನದ ಮಕ್ಕಳ ಮನಸ್ಥಿತಿಗೆ, ಸಂದರ್ಭಗಳಿಗೆ ಅನುಗುಣವಾಗಿ ಆಯಾ ಹಂತಕ್ಕೆ/ಸಂದರ್ಭಕ್ಕೆ ಬದಲಾಯಿಸಿಕೊಳ್ಳುವ ಅರಿವು, ಸಮಯಪ್ರಜ್ಞೆ ಶಿಕ್ಷಕರಿಗಿರಲಿ. ಪಾಠಯೋಜನೆಯಲ್ಲಿ ಸೂಕ್ತ ಪ್ರಶ್ನೆಗಳನ್ನು, ಚಟುವಟಿಕೆಗಳನ್ನು ಯೋಜಿಸಿಕೊಂಡಿದ್ದರೂ ಸಹ ತರಗತಿಯಲ್ಲಿ ಅವುಗಳಿಗೆ ನಿರೀಕ್ಷಿತ ಪ್ರತಿಕ್ರಿಯೆ ಬಾರದಿದ್ದಲ್ಲಿ ಕಲಿಕಾ ಪ್ರಕ್ರಿಯೆ ಮುಂದುವರೆಸಲು ಬದಲಿ ಪ್ರಶ್ನೆಗಳನ್ನೂ, ಚಟುವಟಿಕೆಗಳನ್ನು ಯೋಜಿಸಿಕೊಂಡಿರುವುದು ಸೂಕ್ತ.

**ಮುಖ್ಯಶಿಕ್ಷಕರಿಗೆ, ಮೇಲ್ವಿಚಾರಣಾಧಿಕಾರಿಗಳೊಂದಿಗೆ ಪಾಠಯೋಜನೆ ಹಂಚಿಕೊಳ್ಳಬೇಕು. ಏಕೆ? ನೀವು ತಯಾರಿಸಿದ ಪಾಠಯೋಜನೆಯನ್ನು ಎಂದಾದರೂ ಗ್ರೂಪ್‌ಗಳಲ್ಲಿ ಹಂಚಿಕೊಂಡಿದ್ದೀರಾ? ಏಕೆ?..**

ಸಿದ್ಧಪಡಿಸಿದ ಪಾಠಯೋಜನೆಯನ್ನು ತೋರಿಸುವುದು ಯಾರಿಗೆ?.. ಚರ್ಚಿಸುವುದು ಯಾರ ಬಳಿ? ಮುಖ್ಯಶಿಕ್ಷಕರು, ಮೇಲ್ವಿಚಾರಣಾಧಿಕಾರಿಗಳು ಈಗಾಗಲೇ ಹಲವು ವರ್ಷಗಳ ಕಾಲ ತರಗತಿ ಕಲಿಕಾ ಪ್ರಕ್ರಿಯೆಗಳಲ್ಲಿ ನಿರತರಾಗಿದ್ದು ಸಾಕಷ್ಟು ಅನುಭವಗಳನ್ನು ಹೊಂದಿರುತ್ತಾರೆ. ಸಿದ್ಧಪಡಿಸಿರುವ ಪಾಠಯೋಜನೆಯಲ್ಲಿ ಮೇಲ್ನೋಟಕ್ಕೆ ಯಾವುದಾದರೂ ವ್ಯತ್ಯಾಸಗಳು, ಗೊಂದಲಗಳಿದ್ದಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳಲು, ವಿಭಿನ್ನ ದೃಷ್ಟಿಕೋನದಿಂದ ಗಮನಿಸಬಹುದಾಗಿದ್ದು ಸೂಕ್ತ ಹಿಮ್ಮಾಹಿತಿ ನಮ್ಮ ಯೋಜನೆಯನ್ನು ಉತ್ತಮಪಡಿಸುತ್ತದೆ. ಶಾಲೆಯಲ್ಲಿಯೇ ಹಂಚಿಕೊಳ್ಳುವುದರಿಂದ ಮುಂದುವರೆದು ಮೊದಲೇ ವಾಟ್ಸ್‌ಆಪ್ ನಂತಹವುಗಳಲ್ಲಿ ತೋರಿಸಿ ಹಿಮ್ಮಾಹಿತಿ ಪಡೆಯಬಹುದು.ಇತ್ತೀಚೆಗೆ ವಾಟ್ಸ್‌ಆಪ್ ಗ್ರೂಪ್‌ಗಳಲ್ಲಿ ಇರದ ಶಿಕ್ಷಕರು ಬಹು ವಿರಳ. ಮುಖ್ಯಶಿಕ್ಷಕರೊಂದಿಗೆ, ಮೇಲ್ವಿಚಾರಣಾಧಿಕಾರಿಗಳೊಂದಿಗೆ, ಸಹೋದ್ಯೋಗಿಗಳೊಂದಿಗೆ, ತಜ್ಞರೊಂದಿಗೆ, ಸ್ನೇಹಿತರೊಂದಿಗೆ, ಗ್ರೂಪ್‌ಗಳಲ್ಲಿ ಮುಂದಿನ ದಿನಗಳ ಪಾಠಯೋಜನೆಗಳನ್ನು ಹರಿಯಬಿಟ್ಟು ಚರ್ಚೆಗೆ , ತಿದ್ದುಪಡಿಗಳಿಗೆ ಆಹ್ವಾನಿಸಿದಲ್ಲಿ, ಬಂದಂತಹ ಸಲಹೆಗಳನ್ನು ಬಳಸಿಕೊಂಡು ನಮ್ಮ ತರಗತಿ ಪರಿಸ್ಥಿತಿಗಳಿಗೆ ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡಲ್ಲಿ ನಮ್ಮ ಪಾಠಯೋಜನೆ ಇನ್ನಷ್ಟು ಗಟ್ಟಿ ನೆಲೆಯಲ್ಲಿ ನಿಲ್ಲಬಲ್ಲದು. ಇನ್ನೊಬ್ಬರಿಗೆ ಪ್ರೇರಣೆಯೂ ಆಗಬಲ್ಲದು.

ಇತ್ತೀಚೆಗೆ ಮಲ್ಟಿಮೀಡಿಯಾ ಬಳಕೆ ತರಗತಿಗಳಲ್ಲಿ ಮಾತೆತ್ತಿದರೆ ಪಿ.ಪಿ.ಟಿ. ಹಾಕಿ ಬಿಟ್ಟು ಬಿಡುವುದು, ವಿಡಿಯೋ ಗಳನ್ನು ನೋಡಿಕೊಳ್ಳಲು ಹೇಳುವುದು ಸಾಮಾನ್ಯವಾಗುತ್ತಿದೆ. ಹಾಗಾದಾಗ ಮಲ್ಟಿಮೀಡಿಯಾ ಬಳಕೆ ತರಗತಿ ಯಶಸ್ವಿಯಾಗುತ್ತದೆ ಎಂದು ನಂಬಬಹುದೇ? ಹಾಗಿದ್ದರೆ ಪಿ.ಪಿ.ಟಿ./ವಿಡಿಯೋ/ಮಲ್ಟಿಮೀಡಿಯಾ ಬಳಸುವಲ್ಲಿ ಅನುಸರಿಸಬೇಕಾದ ಕ್ರಮಗಳೇನು? ಪಾಠಯೋಜನೆಯಲ್ಲಿ ಅವುಗಳನ್ನು ಒಳಗೊಳ್ಳುವುದು ಹೇಗೆ? ಎಂದು ಚರ್ಚಿಸಿ.

ಪಾಠಯೋಜನೆಯ ಅಂಶಗಳು ಮಹತ್ವವೇ? ಪಾಠಯೋಜನೆಯ ನಮೂನೆಗಳು, ಹಂತಗಳು, ಕಾಲಮ್‌ಗಳು, ಬಾಕ್ಸ್‌ಗಳು ಮುಖ್ಯವೇ? ಚಿಂತಿಸಿ. ಸಾಕಷ್ಟು ಶಿಕ್ಷಕರು ಪಾಠಯೋಜನೆ ನಮೂನೆಯ ಬಗ್ಗೆ ಸಾಕಷ್ಟು ತಲೆಕೆಡಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ತೆಂಗಿನ ಕಾಯಿಯ ಆಕಾರ ಮತ್ತು ಅದರ ತಿರುಳು ಇವುಗಳಲ್ಲಿ ಯಾವುದು ಮುಖ್ಯ.

# ಲೇಖನ–9
## ನನ್ನ ತರಗತಿ ನಿರ್ವಹಣೆ ಹೇಗೆ?

1. ಒಂದು ಉತ್ತಮ ತರಗತಿಯ ಲಕ್ಷಣಗಳೇನು? ಅವುಗಳನ್ನು ನಾವು ಹೇಗೆ ಗುರ್ತಿಸಬಹುದು?
2. ಮಕ್ಕಳೊಂದಿಗಿನ ನನ್ನ ಸಂಬಂಧಗಳ ಸ್ವರೂಪವೇನು?
3. ಮಕ್ಕಳ ದೃಷ್ಟಿಯಲ್ಲಿ ನಾನು ಯಾರು?
4. ಮಕ್ಕಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವುದು ಹೇಗೆ?
5. ಶಿಸ್ತು ಎಂದರೇನು? ಅದು ಅವಶ್ಯಕವೇ?
6. ಕಲಿವಿನಲ್ಲಿ ಬಹುಮಾನ ಮತ್ತು ಶಿಕ್ಷೆಯ ಸಾಧಕ ಬಾಧಕಗಳೇನು?

ತರಗತಿ ನಿರ್ವಹಣೆ ಶಿಕ್ಷಕರಿಗೆ ಒಂದು ಗುರುತರವಾದ ಕಾರ್ಯ ಹಾಗೂ ಸವಾಲು. ತರಗತಿಯಲ್ಲಿನ ಮಕ್ಕಳು ವಿವಿಧ ಸಾಮಾಜಿಕ ಸ್ತರಗಳಿಂದ ಬಂದವರಾಗಿದ್ದು ಅವರನ್ನು ಶಿಕ್ಷಣದ ಉದ್ದೇಶಗಳೆಡೆಗೆ ಹೇಗೆ ಮುನ್ನಡೆಸುವುದು ಎಂಬುದನ್ನು ಅರಿಯುವುದು ಬಹಳ ಮುಖ್ಯವಾಗಿದೆ. ವಿದ್ಯಾರ್ಥಿಗಳನ್ನು ಕಲಿವಿಗೆ ಪ್ರೇರಣೆಗೊಳಿಸುವುದು ಮತ್ತು ಪರಿಣಾಮಕಾರಿ ಕಲಿವಿನ ಅನುಭವಗಳನ್ನು ಒದಗಿಸಿ ತರಗತಿ ನಿರ್ವಹಣೆಯನ್ನು ಮಾಡುವುದು ಒಂದು ಗುರುತರ ಕಾರ್ಯವಾಗಿದೆ.

ಒಂದು ಉತ್ತಮ ತರಗತಿಯು ಕಲಿವಿಗೆ ಮತ್ತು ಕಲಿಕಾ ಸಂಬಂಧಿತ ಚಟುವಟಿಕೆಗಳಿಗೆ ಪೂರಕವಾದ ವಾತಾವರಣವನ್ನು ನಿರ್ಮಿಸುತ್ತದೆ. ಇಲ್ಲಿ ವಿದ್ಯಾರ್ಥಿ–ಶಿಕ್ಷಕರ ಅಂತರ ಕ್ರಿಯೆಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಇಲ್ಲಿ ವಿದ್ಯಾರ್ಥಿಗಳು ಸ್ವತಂತ್ರವಾಗಿ ಮತ್ತು ಸಹಪಾಠಿಗಳೊಂದಿಗೆ ಕಲಿಯಲು ಹಾಗೂ ತಮ್ಮ ಕಲಿವಿನ ಅನುಭವಗಳನ್ನು ಹಂಚಿಕೊಳ್ಳಲು ಧನಾತ್ಮಕವಾದ ವಾತಾವರಣ ಇರುತ್ತದೆ.

**ಉತ್ತಮ ತರಗತಿಯ ನಿರ್ವಹಣೆಗೆ ಪೂರಕವಾಗಿ ಮುಂದಿನ ಅಂಶಗಳನ್ನು ಮನಸಿನಲ್ಲಿಟ್ಟುಕೊಳ್ಳಬೇಕು:**

01. **ವಿದ್ಯಾರ್ಥಿಗಳಲ್ಲಿನ ವೈವಿಧ್ಯತೆ:** ಇದು ವ್ಯಕ್ತಿತ್ವ, ಲಿಂಗ, ಕಲಿವಿನ ಸಾಮರ್ಥ್ಯ, ಧರ್ಮ, ಅಭಿಕ್ಷಮತೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.
02. **ತರಗತಿ ಆರಂಭದ ಕ್ಷಣಗಳು:** ವಿದ್ಯಾರ್ಥಿಗಳು ಶಿಕ್ಷಕರ ಪ್ರಕ್ರಿಯೆಗಳಿಗೆ ಹೊಂದಿಕೊಳ್ಳುವುದಿಲ್ಲ, ಕೆಲವೊಮ್ಮೆ ಕಲಿವಿನ ವಿಷಯಕ್ಕೆ ಸಂಬಂಧಿಸಿದಂತೆ ಪ್ರೇರಣೆಗೊಳ್ಳುವುದಿಲ್ಲ, ಶಿಸ್ತಿನಿಂದ ವರ್ತಿಸುವುದಿಲ್ಲ ಇತ್ಯಾದಿ.
03. **ಶಿಸ್ತು:** ತರಗತಿ ಪ್ರಕ್ರಿಯೆಗಳನ್ನು ಸುಗಮವಾಗಿಸಲು ರೂಪಿಸಿಕೊಂಡ ಕೆಲವು ನಿಯಮಗಳು. ವಿದ್ಯಾರ್ಥಿಗಳು ಇವುಗಳನ್ನು ಪಾಲಿಸುವುದಿಲ್ಲ, ತರಗತಿ ಪ್ರಕ್ರಿಯೆಗಳಿಗೆ ಅಡ್ಡಿಯಾಗುತ್ತದೆ.

**ಉತ್ತಮ ತರಗತಿ ನಿರ್ವಹಣೆಗೆ ಪೂರಕವಾದ ಅಂಶಗಳು:**

- **ಪ್ರೇರಣೆ:** ಕೆಲವು ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಕಲಿವಿನ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಕೆಲ ವಿದ್ಯಾರ್ಥಿಗಳನ್ನು ಬಾಹ್ಯವಾಗಿ ಕಲಿವಿನೆಡೆಗೆ ಪ್ರೇರಣೆಗೊಳಿಸಬೇಕಾಗುತ್ತದೆ. ತರಗತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳನ್ನು ಕಲಿವಿನಡೆಗೆ ಪ್ರೇರೇಪಿಸುವುದು ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.
- **ಲಿಂಗ:** ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ಕಲಿವಿನ ಸಿದ್ಧತೆಗಳು ಮತ್ತು ಭಾಗವಹಿಸುವಿಕೆ ಭಿನ್ನವಾಗಿರುತ್ತದೆ. ಎಲ್ಲಾ ವಿದ್ಯಾರ್ಥಿಗಳನ್ನು ಕಲಿವಿಗೆ ಒಳಪಡಿಸುವುದು ಶಿಕ್ಷಕರ ಕರ್ತವ್ಯಾಗಿರುತ್ತದೆ.
- **ಭಾಗವಹಿಸುವಿಕೆ:** ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಕಲಿಕಾ ಪ್ರಕ್ರಿಯೆಗಳಲ್ಲಿ ಒಂದೇ ರೀತಿಯಲ್ಲಿ ಭಾಗವಹಿಸುವುದಿಲ್ಲ, ಕಲಿವಿನ ಸಾಮರ್ಥ್ಯ ಮತ್ತು ಪಾಲ್ಗೊಳ್ಳುವಿಕೆ ಭಿನ್ನವಾಗಿರುತ್ತದೆ. ಎಲ್ಲಾ ವಿದ್ಯಾರ್ಥಿಗಳು ಕಲಿವಿನಲ್ಲಿ ಭಾಗವಹಿಸುವುದನ್ನು ಶಿಕ್ಷಕರು ಖಾತರಿಪಡಿಸಿಕೊಳ್ಳಬೇಕು.

**ತರಗತಿ ನಿರ್ವಹಣೆಯನ್ನು ಉತ್ತಮಪಡಿಸುವುದು ಹೇಗೆ?**

- ಪ್ರತಿ ವಿದ್ಯಾರ್ಥಿಯನ್ನು ಶಿಕ್ಷಕರು ವೈಯುಕ್ತಿವಾಗಿ ಹೆಸರಿನಿಂದ ಗುರ್ತಿಸಿ ಮಾತನಾಡಿಸಬೇಕು. ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿರಬೇಕು.
- ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೀತಿಸುತ್ತಾರೆಯೇ ವಿನಃ ಅವರ ಅನಪೇಕ್ಷಿತ ವರ್ತನೆಗಳನ್ನಲ್ಲ ಎಂಬುದನ್ನು ಸೂಕ್ತವಾಗಿ ಮನಗಾಣಿಸಬೇಕು.
- ಶಿಕ್ಷಕರ ನಿರೀಕ್ಷೆಗಳಿಗೆ ಅನುಗುಣವಾಗಿ ಭಾಗವಹಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರಸಂಶಿಸಬೇಕು.

- ಶಿಕ್ಷಕರು ತಮ್ಮ ಉದ್ದೇಶಗಳೇನು? ವಿದ್ಯಾರ್ಥಿಗಳಿಗೆ ಹೇಗೆ ಕಲಿವಿನಲ್ಲಿ ಸಹಾಯ ಮಾಡುತ್ತಾರೆ? ವಿದ್ಯಾರ್ಥಿಗಳಿಂದ ಶಿಕ್ಷಕರ ನಿರೀಕ್ಷೆಗಳೇನು ಎಂಬುದನ್ನು ಮನವರಿಕೆ ಮಾಡಿಕೊಡಬೇಕು.
- ತರಗತಿ ನಿರ್ವಹಣೆ, ಪಾಠ ಬೋಧನೆ ಇವುಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಯೋಜನೆಯನ್ನು ತಯಾರಿಸಿಕೊಂಡು ಅದರಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು.
- ವಿದ್ಯಾರ್ಥಿಗಳಿಂದ ತಮ್ಮ ತರಗತಿ ಪ್ರಕ್ರಿಯೆಗಳ ಬಗ್ಗೆ ಹಿಮ್ಮಾಹಿತಿಯನ್ನು ಪಡೆದು ಅವುಗಳಿಂದ ವೃತ್ತಿಪರ ಬೆಳವಣಿಗೆಯನ್ನು ಹೊಂದಬೇಕು.

**ತರಗತಿಯಲ್ಲಿ ಶಿಸ್ತು:**

ಶಿಸ್ತು ಎಂದರೆ ವಿದ್ಯಾರ್ಥಿಗಳು ಶಾಲೆಯು ರೂಪಿಸಿದ ನಿಯಮಗಳನ್ನು ಯಥಾವತ್ತಾಗಿ ಪಾಲಿಸುವುದು, ಸ್ವಾತಂತ್ರವನ್ನು ಬಯಸದೆ ನಿಯಮಗಳನ್ನಷ್ಟೇ ಪಾಲಿಸುವುದಲ್ಲ, ಬದಲಾಗಿ ತಾವೇ ರೂಪಿಸಿಕೊಂಡ ಆದರ್ಶಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವುದು ಎಂದರ್ಥ. ಶಿಕ್ಷೆಯು ಧನಾತ್ಮಕ ಪರಿಣಾಮಗಳಿಗಿಂತ ಹೆಚ್ಚಾಗಿ ಋಣಾತ್ಮಕ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂಬುದನ್ನು ಸಾಕಷ್ಟು ಮನೋವೈಜ್ಞಾನಿಕ ಅಧ್ಯಯನಗಳು ತೋರಿಸಿವೆ. ಹಾಗಾಗಿ ಶಿಸ್ತನ್ನು ಪೂರ್ವಭಾವಿಯಾಗಿ ನಿಗದಿಪಡಿಸಿಕೊಂಡಿರುವ ಆದರ್ಶಗಳಿಗೆ ಅನುಗುಣವಾಗಿ ನಡೆದುಕೊಳ್ಳುವುದು ಎಂಬುದಾಗಿ ಭಾವಿಸಬೇಕು. ಅದಕ್ಕೆ ಎಲ್ಲರೂ ಬದ್ಧರಾಗಿರುವಂತೆ ನೋಡಿಕೊಳ್ಳಬೇಕು.

**ಬಹುಮಾನ ಮತ್ತು ಶಿಕ್ಷೆ:**

ಬಹುಮಾನಗಳು ಧನಾತ್ಮಕ ಪುನರ್ಬಲನಗಳು ಮತ್ತು ಶಿಕ್ಷೆಯು ಋಣಾತ್ಮಕ ಪುನರ್ಬಲನಗಳು ಎಂಬುದನ್ನು ಸಾಕಷ್ಟು ಅಧ್ಯಯನಗಳು ನಿರೂಪಿಸಿವೆ. ಬಹುಮಾನಗಳು ಕಲಿವಿನ್ನು ಧನಾತ್ಮಕವಾಗಿ ಪ್ರೇರೇಪಿಸುತ್ತವೆ. ವಿದ್ಯಾರ್ಥಿಗಳ ಉತ್ತಮ ಪ್ರಕ್ರಿಯೆಗಳನ್ನು ಪ್ರಸಂಶಿಸುವುದು ಕಲಿವಿನಲ್ಲಿ ಮತ್ತು ತರಗತಿ ನಿರ್ವಹಣೆಯಲ್ಲಿ ಹೆಚ್ಚಿನ ಪ್ರಭಾವವನ್ನು ಹೊಂದಿರುತ್ತದೆ. ಶಿಕ್ಷೆಯು ಋಣಾತ್ಮಕ ಪರಿಣಾಮಗಳನ್ನು ಉಂಟುಮಾಡುವುದಷ್ಟೇ ಅಲ್ಲ ಸಾಮಾಜಿಕವಾಗಿಯೂ ಶಿಕ್ಷಕರ ಮೇಲೆ ಒತ್ತಡವನ್ನು ಉಂಟುಮಾಡುತ್ತದೆ.

# ಲೇಖನ–10
# ಶಾಲಾ ಅಭ್ಯಾಸಗಳಲ್ಲಿ ಮೌಲ್ಯಮಾಪನ

ಒಂದು ಶಾಲಾವರಣ, ಅಲ್ಲಲ್ಲಿ ಮಕ್ಕಳು ಆಡುತ್ತಿದ್ದಾರೆ. ಒಬ್ಬ ಶಿಕ್ಷಕರು ಮೈದಾನದಿಂದ ತಮ್ಮ ಕೊಠಡಿಗೆ ತೆರಳುತ್ತಾ ಆಡುತ್ತಿರುವ ಮಕ್ಕಳನ್ನು ನೋಡಿ ಹೀಗೆಂದರು, "ಆಡಿ! ಆಡಿ! ನಾಳೆ ಟೆಸ್ಟ್ ಇದೆ ನೋಡೋಣ". ಆಡುತ್ತಿದ್ದ ಮಕ್ಕಳು ಹಾಗೆ ಸ್ತಬ್ದರಾದರು,ಗುಜು ಗುಜು ಪ್ರಾರಂಭವಾಯಿತು, ಕೆಲವು ಮಕ್ಕಳು ತಮ್ಮ ತರಗತಿ ಕೊಠಡಿಯೊಳಗೆ ಹೋಗಿ ಪುಸ್ತಕ ತೆರೆದು ಕುಳಿತರು. ಇದನ್ನು ನೋಡಿದ ನನ್ನ ಮನಸ್ಸು ಮಕ್ಕಳನ್ನು ಆವರಿಸಿದ ಭೀತಿಯ ಕುರಿತೇ ಆಗಿತ್ತು. ಇದು ಇಷ್ಟೊಂದು ಭಯವನ್ನು ಉಂಟುಮಾಡುತ್ತದೆಯೇ? ಎಂಬ ಅಚ್ಚರಿಯನ್ನು ಕೂಡ ಉಂಟುಮಾಡಿತ್ತು. ಆ ಗೊಂದಲ ಅಚ್ಚರಿ  ದೂರಾದ ಪ್ರಸಂಗ ಹೀಗಿದೆ. ಒಮ್ಮೆ ಶಾಲೆಗಳಲ್ಲಿ ನಿಯಮಿತವಾಗಿ ನಡೆಸುವ ಪರೀಕ್ಷೆಗಳು ಅಗತ್ಯವೇ ಎನ್ನುವ ಚರ್ಚೆ ಎಲ್ಲೆಡೆ ನಡೆದಿತ್ತು. ಇದಕ್ಕೆ ಪರವಾದ ಮತ್ತು ವಿರುದ್ಧವಾದ ಅಭಿಪ್ರಾಯಗಳು ಕೇಳಿಬರುತ್ತಿದ್ದವು. ಎರಡು ಸ್ವರೂಪದ ವಾದಗಳು ಸಾಕಷ್ಟು ಆಧಾರಯುತ ಅನ್ನುವಂತೆಯೇ ಇತ್ತು. ಇದರ ಕುರಿತು ಶಾಲೆಗೆ ಹೋಗುತ್ತಿರುವ ಮಕ್ಕಳ ಅಭಿಪ್ರಾಯವೇನು ಎಂಬುದು ಬಹಳ ಮುಖ್ಯ ಎಂದು ನನಗೆ ಯಾವಾಗಲೂ ಅನ್ನಿಸುತ್ತಿತ್ತು. ಒಮ್ಮೆ ಇದನ್ನು ಪರಿಹರಿಸಿಕೊಳ್ಳಲು ಅಗತ್ಯ ಸಂದರ್ಭವೂ ನನಗೆ ಒದಗಿ ಬಂದಿತ್ತು. ಅನ್ಯ ಕಾರ್ಯ ನಿಮತ್ತ ಒಂದು ಶಾಲೆಗೆ ಹೋಗಿದ್ದಾಗ ಅಲ್ಲಿ ವಿದ್ಯಾರ್ಥಿನಿಯರ ಗುಂಪೊಂದು ನಿಂತು ಹರಟೆಯಲ್ಲಿ ತಲ್ಲೀನವಾಗಿತ್ತು. ನಿಧಾನವಾಗಿ ನಾನು ಅವರ ಬಳಿ ತೆರಳಿದೆ, ಶಾಲೆಯ ಬಗ್ಗೆ ನಿಮ್ಮನ್ನು ಒಂದೆರಡು ವಿಷಯ ಕೇಳಬಹುದೇ ಎಂದೇ. ಕೇಳಿ ಸರ್! ಅಂದಳು ಒಬ್ಬ ವಿದ್ಯಾರ್ಥಿನಿ. ಈಗ ಇನ್ಮೇಲೆ ಪರೀಕ್ಷೆಗಳೇ ಇರಬಾರ್ದು ಅನ್ನುವ ಚರ್ಚೆ ನಡೆಯುತ್ತಿದೆ ಇದರ ಬಗ್ಗೆ ನೀವೇನಂತೀರಾ ಎಂದು ಕೇಳಿದೆ. ಆ ವಿದ್ಯಾರ್ಥಿನಿಯರು ಮುಖ ಮುಖ ನೋಡಿಕೊಂಡರು, ಅಪನಂಬಿಕೆಯ ದೃಷ್ಟಿಯಿಂದ ನನ್ನನ್ನು ನೋಡಿದರು ಹಾಸ್ಯ ಮಾಡುತ್ತಿದ್ದಾರಾ ಎಂದು. ನಾನು ಈ ರೀತಿ ಚರ್ಚೆ ಆಗುತ್ತಿರುವುದು ನಿಜ, ಮುಂದಿನ ವರ್ಷದಿಂದ ಇದು ಜಾರಿಗೆ ಬಂದರೂ ಬರಬಹುದು ಎಂದೇ. ತಕ್ಷಣ ಆಗುಂಪಿನಲ್ಲಿ ನಿಧಾನಕ್ಕೆ ನಿರಾಳತೆಯ ಭಾವ ಮೂಡಿದುದು ಗಮನಾರ್ಹವಾಗಿತ್ತು. ಒಬ್ಬಳು ತಕ್ಷಣ ಅಂಕಲ್ ಅಂದಳು ನಾನು ಅವರ ಗುಂಪಿಗೆ ಸರ್ ಅನ್ನುವ ದೂರದಿಂದ ಅಂಕಲ್ ಅನ್ನುವಷ್ಟು ಹತ್ತಿರವಾಗಿದ್ದೆ. ಅವಳು ಹೇಳಿದಳು ಅಂಕಲ್ ನೀವು ಹೇಳುವುದೇ ನಿಜವಾದರೆ ಅಯಾಮ್ ಹ್ಯಾಪಿ ಎಂದಳು. ನಾನು ಹೌದೆಂದೆ. ಹಾಗೆ ಹೇಳಿದವಳೆ ಮತ್ತೆ ನನ್ನನ್ನು ನೋಡಿ "ಅಂಕಲ್, ನೀವು ಇನ್ನೊಂದ್ಹೆಜ್ಜೆ ಮುಂದೆ ಹೋಗಿ ಇನ್ಮೇಲೆ ಶಾಲೇನೆ ಇರಲ್ಲ ಅಂದ್ರೆ ಅಯಾಮ್ ಸೋೀೀ ಹ್ಯಾಪಿ" ಎಂದಳು, ಇದು ನನಗೆ ಗಿರ್ ಎಂದ ಅನುಭವವನ್ನು ನೀಡಿತು. ಆಗ ನನ್ನ ಗಮನ ಶಾಲಾಚಟುವಟಿಕೆಗಳ ಕಡೆಗೆ ಹೊರಟಿತು.

ಅಂದರೆ ನಮ್ಮ ಶಾಲೆಗಳು, ಅಲ್ಲಿನ ತರಗತಿ ಚಟುವಟಿಕೆಗಳು, ಮೌಲ್ಯಮಾಪನ ಕ್ರಮಗಳು ಇಷ್ಟರಮಟ್ಟಿಗೆ, ಶಾಲೆಯೇ ಬೇಡವೆನ್ನುವಷ್ಟರ ಮಟ್ಟಿಗೆ ಮಕ್ಕಳನ್ನು ನಿರಾಸೆಗೊಳಿಸುತ್ತಿದೆಯೇ? ಎಂಬ ಪ್ರಶ್ನೆ ಮನದಲ್ಲಿ ಹಾದು ಹೋಯಿತು. ಅಂದಿನಿಂದ ಈ ಅಂಶಗಳನ್ನು ಸ್ವಲ್ಪ ವಿಶೇಷವಾಗಿ ಗಮನಿಸಬೇಕೆಂಬುದನ್ನು ಮನಸ್ಸಿನಲ್ಲಿಯೇ ಗಟ್ಟಿಮಾಡಿಕೊಂಡೆ.ಅಲ್ಲಿಂದ ನಮ್ಮ ಶಾಲಾ ಅಭ್ಯಾಸಗಳಲ್ಲಿ ಮೌಲ್ಯ ಮಾಪನವನ್ನು ನೋಡುತ್ತಿರುವ ರೀತಿ, ಅವುಗಳಿಗೂ ಮತ್ತು ಮಕ್ಕಳ ಕಲಿಕೆಗೂ ಇರುವ ಸಂಬಂಧ, ಮಕ್ಕಳ ವೈವಿಧ್ಯತೆ ಮತ್ತು ಮೌಲ್ಯಮಾಪನದ ಏಕತಾನತೆ, ಇಂತಹ ಅಂಶಗಳನ್ನು ಗ್ರಹಿಸುತ್ತಲೇ ಹೋದೆ. ಸಾಕಷ್ಟು ಅಂಶಗಳು ಮನವರಿಕೆಯಾಗುತ್ತಾ ಹೋಯಿತು.

ಶಾಲಾ ಅಭ್ಯಾಸಗಳಲ್ಲಿ ಎಲ್ಲಕ್ಕಿಂತ ಅಗ್ರಸ್ಥಾನ ಪಡೆದಿರುವುದು ಮೌಲ್ಯಮಾಪನ. ಏಕೆಂದರೆ ಮಕ್ಕಳನ್ನು ನಿಗ್ರಹಿಸಲು ಕೆಲವು ಶಿಕ್ಷಕರು ಬಳಸುವ, ಬಳಸುತ್ತಿರುವ ಅಸ್ತ್ರವೆಂದೇ ನನ್ನ ಭಾವನೆ. ಇದೊಂದಕ್ಕೆ ಮಕ್ಕಳು ಹೆಚ್ಚು ಭಯ ಪಡುವುದು. ಯಾವುದೇ ಶಿಕ್ಷಕರು ಪಾಠಮಾಡುತ್ತೇನೆ ಬನ್ನಿ ಎಂದು ಹೇಳಿದ್ದಕ್ಕಿಂತ, ಇಂದು ಟೆಸ್ಟ್, ಎಕ್ಸಾಮ್ ಎಂದಾಗ ಭಯಬೀಳುವ ಮಕ್ಕಳ ಸಂಖ್ಯೆಯೇ ಹೆಚ್ಚು. ಈ ಚಟುವಟಿಕೆಗಳನ್ನು ನಿರ್ವಹಿಸಲು ಶಿಕ್ಷಕರಿಗಿರುವ ಆಧಾರ ಎಂದರೇ ಅವರು ಡಿ.ಎಡ್/ಬಿ ಎಡ್ ತರಗತಿಗಳಲ್ಲಿ ಪಡೆದ ಮೌಲ್ಯಮಾಪನದ ಪರಿಕಲ್ಪನೆಗಳ ಪರಿಚಯ. ಇಲಾಖೆ ಆಗಾಗ್ಗೆ ನೀಡುವ, ಹೊರಡಿಸುವ ಆದೇಶಗಳು. ಬಹುತೇಕ ಸಂದರ್ಭಗಳಲ್ಲಿ ಮೌಲ್ಯ ಮಾಪನದ ಸ್ವರೂಪ, ಕ್ರಮ ಆಯ್ಕೆ ಮಾಡುವ ಸಂದರ್ಭಗಳಲ್ಲಿ ಶಿಕ್ಷಕರಿಗೆ ಲಭ್ಯವಿರುವ ಸ್ವಾಯತ್ತತೆಯ ಬಳಕೆಯಾಗದೆ ಇನ್ಯಾರದು ನಿರೀಕ್ಷೇ ಈಡೇರಿಸುತ್ತಿದ್ದೇವೆ, ಏನು ಮಾಡುವುದು ಎಂಬ ಭಾವದಲ್ಲಿಯೇ ನಡೆಯುತ್ತಿರುವುದು ಮಕ್ಕಳ ಒತ್ತಡವನ್ನು ಜಾಸ್ತಿಮಾಡುತ್ತಿದೆ ಎಂದು ನನಗೆ ಅನ್ನಿಸಿದೆ. ಮೌಲ್ಯ ಮಾಪನದ ಉದ್ದೇಶಗಳೇನು? ಏಕೆ ನಾವು ಮೌಲ್ಯಮಾಪನ ಮಾಡಬೇಕು ಎಂಬ ಪ್ರಶ್ನೆಗಳಿಗೆ ಶಿಕ್ಷಕರಾಗಿ ನಮ್ಮನ್ನು ನಾವು ತೆರದುಕೊಳ್ಳದಿದ್ದರೆ ಬಹುಷ ನಾವು ಉತ್ತಮ ಶಿಕ್ಷಕರಾಗಿ ರೂಪುಗೊಳ್ಳುವುದು ಕಷ್ಟಸಾಧ್ಯವೆಂದೆನಿಸುತ್ತದೆ.

"ಮಾಪನವನ್ನು ಆಧರಿಸಿ ಮೌಲ್ಯವನ್ನು ನಿರ್ಧರಿಸುವ ಪ್ರಕ್ರಿಯೆಯೇ ಮೌಲ್ಯಮಾಪನ" ಇದಕ್ಕೆ ಶೈಕ್ಷಣಿಕ ಆಯಾಮವನ್ನು ಒದಗಿಸಿ, ಶೈಕ್ಷಣಿಕ ಮಾಪನ ಮತ್ತು ಶೈಕ್ಷಣಿಕ ಮೌಲ್ಯವನ್ನು ಸಂಯೋಜಿಸಿದಾಗ ಶೈಕ್ಷಣಿಕ ಮೌಲ್ಯಮಾಪನ ಪೂರ್ಣತೆಯನ್ನು ಪಡೆಯುತ್ತದೆ. ಇಲ್ಲಿ ಮೌಲ್ಯಮಾಪನವನ್ನು ಮಗು ಎಷ್ಟು ಕಲಿತಿದೆ  ಅಂದರೆ ಕಲಿತಿದ್ದಾರೆಯೋ ಇಲ್ಲವೋ ಎಂದು ತಿಳಿಯುವುದಕ್ಕೆ ಮಾಡುವುದೇ **ಕಲಿಕೆಯ ಮೌಲ್ಯ ಮಾಪನ**. ಈ ಸ್ವರೂಪದ ಮೌಲ್ಯಮಾಪನಕ್ಕಾಗಿ ಕಿರುಪರೀಕ್ಷೆಗಳು, ಘಟಕ ಪರೀಕ್ಷೆಗಳು, ಅರ್ಧವಾರ್ಷಿಕ, ವಾರ್ಷಿಕ ಪರೀಕ್ಷೆಗಳನ್ನು ಉದಾಹರಿಸಬಹುದು. ಇಲ್ಲಿ ಬಳಸಲ್ಪಡುವ ಅಂಶಗಳು(ಐಟೆಮ್) ಮಗುವಿನಲ್ಲಿ ಕಲಿಕೆ ಆಗಿದೆಯೇ?ಇಲ್ಲವೆ ಎಂಬುದನ್ನು ನಿರ್ಧರಿಸುವ ಸ್ವರೂಪದಲ್ಲಿಯೇ ಇರುತ್ತದೆ. ಉದಾ ಹರಣೆಗೆ ಕೂಡಿರಿ 18+21 ಎಂದು ನೀಡುವ ಒಂದು ಗಣಿತದ ಸಮಸ್ಯೆಗೆ ಮಗು ಸರಿಯಾದ ಕ್ರಮವನ್ನು ಬಳಸಿ ಸರಿಯುತ್ತರವನ್ನು ನೀಡಿದರೆ ಅವನಿಗೆ ಅಂಕವನ್ನು ನೀಡುವುದರ ಮುಖಾಂತರ ಅವರಿಗೆ ಕಲಿಕೆ ಆಗಿದೆ ಎಂದು ಭಾವಿಸುತ್ತೇವೆ. ಒಂದುವೇಳೆ ಆ ಮಗುವಿನ ಉತ್ತರ ಭಾಗಶಃ, ಅಥವಾ ಪೂರ್ಣ ಸರಿ ಇಲ್ಲದಿದ್ದರೆ ಆ ಮಗುವಿಗೆ ಅಂಕವನ್ನು ಪೂರ್ಣ ಪ್ರಮಾಣದಲ್ಲಿ ನೀಡುವುದಿಲ್ಲ. ಅದರೆ ಆ ಮಗು ಇನ್ನೂ ಕಲಿತಿಲ್ಲ ಎಂಬುದು ಇದರಿಂದ ತಿಳಿಯುತ್ತದೆಯೇ ಹೊರತು ಏಕೆ ಕಲಿತಿಲ್ಲ ಎಂಬುದನ್ನು ಸ್ಪಷ್ಟವಾಗಿ ಅರಿಯಲಾಗುವಿದಿಲ್ಲ.

ಅದಕ್ಕಾಗಿ ನಾವು ಮೌಲ್ಯಮಾಪನ ಪ್ರಕ್ರಿಯೆಯನ್ನು ಮಗುವಿನ ಕಲಿಕೆಯನ್ನು ಬಲಪಡಿಸಲು, ಆ ಮಗುವಿನ ಅಗತ್ಯವನ್ನು ಆಧರಿಸಿ ಕಲಿಕೆಗೆ ಸಹಾಯ ಮಾಡಲು ಬಳಸಬೇಕು. ಅಂತಹ ಮೌಲ್ಯಮಾಪನವೇ **ಕಲಿಕೆಗಾಗಿ ಮೌಲ್ಯಮಾಪನ**.ಇದು ಮಗುವನ್ನು ಶಿಕ್ಷಕರು ಅರ್ಥೈಸಿ, ಮಗುವಿನ ಇಂದಿನ ಕಲಿಕಾ ಸ್ಥಿತಿ, ಕಲಿಕೆಯ ಸವಾಲುಗಳು, ಕಲಿಕೆಯನ್ನು ಸರಿಯಾಗಿ ಪೂರ್ಣಗೊಳಿಸಲು ಒದಗಿಸಬಹುದಾದ ಚಟುವಟಿಕೆಗಳನ್ನು ಇಲ್ಲಿ ನಿರ್ಧರಿಸಲು ಸಹಕರಿಸುತ್ತದೆ.ಇದರಲ್ಲಿ ಉತ್ತೀರ್ಣ, ಅನುತ್ತೀರ್ಣ ಎಂಬ ನೆಲೆಯಿಲ್ಲ. ಶೇ 90 ರಷ್ಟು ಅಂಕಗಳನ್ನು ಕಲಿಕೆಯ ಮೌಲ್ಯಮಾಪನದಲ್ಲಿ ಪಡೆಯುವ ವಿದ್ಯಾರ್ಥಿಯ ಕೊರತೆಗಳನ್ನು ಅಗತ್ಯಗಳನ್ನು ಅರ್ಥೈಸಲು **ಕಲಿಕೆಗಾಗಿ ಮೌಲ್ಯಮಾಪನವೇ** ಸಹಕಾರಿಯಾಗುವುದು ಎಂಬುವುದನ್ನು ಶಿಕ್ಷಕರು ಗಟ್ಟಿಯಾಗಿ ನಂಬದ ಹೊರತು ಶಾಲೆಯಲ್ಲಿನ ಮೌಲ್ಯಮಾಪನದ ಅಭ್ಯಾಸಗಳು ಬದಲಾಗುವುದಿಲ್ಲ. ( ಈ ಬಗ್ಗೆ ಹೆಚ್ಚಿನ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಮಾಹಿತಿಗಾಗಿ, ಇಲಾಖೆ ಹೊರತಂದಿರುವ ನಿರಂತರ, ಸಾಧನಾ, ಸಾಧನಾ–ಪುಷ್ಠಿ ಮುಂತಾದ ಸಾಹಿತ್ಯವನ್ನು ಪರಾಮರ್ಶಿಸಬಹುದು) ನಮ್ಮ ಶಾಲೆಯಲ್ಲಿ ನನ್ನ ತರಗತಿಯ ಮಕ್ಕಳ ಅಗತ್ಯವನ್ನು ಗುರುತಿಸಲು ಅನುವಾಗುವಂತೆ ಮೌಲ್ಯಮಾಪನ ರೂಪಾಂತರ ಹೊಂದಬೇಕೆಂದೆ, ನಿರಂತರ ವ್ಯಾಪಕ ಮೌಲ್ಯಮಾಪನ (ಸಿ.ಸಿ.ಇ) ಕ್ರಮಗಳನ್ನು ಶಾಲೆಗಳಲ್ಲಿ ಅನುಸರಿಸಲಾಗುತ್ತಿದೆ. ಮಕ್ಕಳ ಕಲಿಕಾಂಶ/ ಸಾಮರ್ಥ್ಯದ ಕಲಿಕೆ ಆಗಿದೆ ಅಥವಾ ಇಲ್ಲ ಎಂದು ನಿರ್ಧರಿಸಲು **ಸಂಕಲನಾತ್ಮಕ ಮೌಲ್ಯ ಮಾಪನ(ಎಸ್.ಎ)**ಕ್ರಮಗಳನ್ನು, ಮಗುವಿನ ಕಲಿಕಾ ಪಥವನ್ನು ಅನುಸರಿಸಿ ಅಗತ್ಯ ಮಾರ್ಗದರ್ಶನ ದೊರೆಯುವಂತೆ ಮಾಡಲು **ರೂಪಣಾತ್ಮಕ ಮೌಲ್ಯ ಮಾಪನ(ಎಸ್.ಎ)**ಕ್ರಮಗಳನ್ನು ಅನುಸರಿಲು ಶಿಕ್ಷಕರು ಸಿದ್ಧರಾಗುತ್ತಿದ್ದಾರೆ. ಈ ಎರಡರ ವ್ಯತ್ಯಾಸದ ಪೂರ್ಣ ಅರಿವು ಶಿಕ್ಷಕರಿಗೆ ಅತ್ಯಗತ್ಯವೆಂದೇ ನನ್ನ ಭಾವನೆ.

ಈ ಸಿದ್ಧತೆ ಮತ್ತು ಶಿಕ್ಷಕರ ಬದ್ಧತೆಯೇ ಮಕ್ಕಳು ಸದಾಕಾಲ ಮೌಲ್ಯಮಾಪನದ ಪ್ರಕ್ರಿಯೆಯನ್ನು ಸಹಜವೆಂಬಂತೆ ಸ್ವೀಕರಿಸಲು ಅನುವಾಗಿಸುವುದು. ಇದನ್ನು ನಮ್ಮ ಶಾಲೆ, ನಮ್ಮ ತರಗತಿ, ಆ ತರಗತಿಯ ಪ್ರತಿಯೊಂದು ಮಗುವಿನ ಅಗತ್ಯವನ್ನು ಸ್ಪಷ್ಟವಾಗಿ ಅರಿತು ಉಪಯುಕ್ತ ಅನುಭವಗಳನ್ನು ಆಯೋಜಿಸಿ ಕಲಿಕೆಗೆ ಸಹಕರಿಸಿದಾಗಲೇ ಮೌಲ್ಯಮಾಪನ ಅರ್ಥಪೂರ್ಣವಾಗುವುದು. ಈ ಎಲ್ಲಾ ನಿರ್ಧಾರಗಳನ್ನು ಶಿಕ್ಷಕರಾದ ನಾವು ತೆಗದುಕೊಳ್ಳಬೇಕಾದುದೇ ಹೊರತು ಬೇರೆ ಸನ್ನಿವೇಶದಲ್ಲಿರುವ ಶಿಕ್ಷಕರು ತಯಾರಿಸಿದ/ ಶಿಕ್ಷಕರಲ್ಲದವರು ತಯಾರಿಸಿದ ಸಾಧನಗಳನ್ನು ಯಥಾವತ್ತಾಗಿ ಬಳಸುವುದರಿಂದ ಅಲ್ಲವೆಂಬುದನ್ನು ಮನಗಾಣಬೇಕು. ಇದು ಕೇವಲ ಉಸ್ತುವಾರಿ ಅಧಿಕಾರಿಗಳನ್ನು ತೃಪ್ತಿ ಪಡಿಸಲು, ಅವರಿಗೆ ತೋರಿಸಲು ಅಲ್ಲ, ಮಕ್ಕಳ ಕಲಿಕೆಗಾಗಿ ಎಂಬುದೇ ಧ್ಯೇಯವಾಗಬೇಕು. ಇಂತಹದ್ದೆನ್ನೆಲ್ಲಾ ಮಾಡಿರುವ, ಮಾಡುತ್ತಿರುವ ಶಿಕ್ಷಕರಿದ್ದಾರೆ, ಶಾಲೆಗಳಿವೆ ಅವರೆಲ್ಲಾ ಧನ್ಯರು, ಅಂತಹ ಶಾಲೆಯನ್ನಾಗಿ ನಮ್ಮ ಶಾಲೆಯನ್ನು ರೂಪಿಸೋಣ, ಅಂತಹ ಶಿಕ್ಷಕರಾಗಿ ನಮ್ಮನ್ನು ನಾವು ಗುರುತಿಸಿಕೊಳ್ಳೋಣ.

# ಲೇಖನ-11
## ಬೋಧನೆ-ಕಲಿಕೆಯ ವ್ಯಾಪ್ತಿ ಹಾಗೂ ಶಾಲಾ ಮಟ್ಟದ ಚಟುವಟಿಕೆಗಳು

ಸಮಾಜದಲ್ಲಿನ ಜ್ಞಾನವು ತಲತಲಾಂತರದಿಂದ ಮುಂದಿನ ಪೀಳಿಗೆಗೆ ಆಯಾ ಕಾಲಕ್ಕನುಗುಣವಾಗಿ ಪ್ರಸಾರವಾಗುತ್ತಿತ್ತು. ಮುಖ್ಯವಾಗಿ ವ್ಯವಸಾಯ ಮತ್ತಿತರ ಗ್ರಾಮೀಣ ಗೃಹ ಕಸಬುಗಳು ಮಕ್ಕಳಿಗೆ ಅನುಭವಾಧಾರಿತ ಜ್ಞಾನವನ್ನು ಒದಗಿಸಿ, ಅವರು ಜೀವನವನ್ನು ಸಕಾರಾತ್ಮಕವಾಗಿ ನೋಡುವ-ಎದುರಿಸುವ ಧೈರ್ಯವನ್ನು ಒದಗಿಸುತ್ತಿತ್ತು. ಕ್ರಮೇಣ ಜ್ಞಾನವನ್ನು ಒಂದೆಡೆ ಸೇರಿಸಿ ಬೋಧನೆಯ ಮುಖಾಂತರ ಅದನ್ನು ಮಕ್ಕಳಿಗೆ ಪಸರಿಸುವ ಪ್ರಕ್ರಿಯೆ ಪ್ರಾರಂಭವಾದ ಮೇಲೆ – ಆ ಗ್ರಹಿಸುವಿಕೆಯ ಪ್ರಕ್ರಿಯೆ ಯಥಾರ್ಥ ಅನುಭವಗಳಿಂದ ಪ್ರತ್ಯೇಕಗೊಳ್ಳಪಟ್ಟಿತು. ಪಠ್ಯವಸ್ತು ಹಾಗೂ ಪಠ್ಯ ಪುಸ್ತಕ ಹಾಗೂ ಪಠ್ಯವಸ್ತುಗಳ ತಯಾರಿ, ಅವುಗಳ ವರ್ಷವಿಡೀ ಅನುಷ್ಠಾನಗೊಳ್ಳುವಿಕೆಗಳ ಮೇಲೆ ಹೆಚ್ಚು ಒತ್ತು ಬೀಳಲಾರಂಭಿಸಿತು. ಅಂಕಗಳನ್ನು ಪರೀಕ್ಷೆಗಳಲ್ಲಿ ಪಡೆಯುವುದೊಂದೇ ಶಿಕ್ಷಣ ವ್ಯವಸ್ಥೆಯ ಮೂಲ ಗುರಿಯಾಗಿರುವಂತೆ ತೋರುತ್ತದೆ.

ಶಿಕ್ಷಣವು ಮಕ್ಕಳನ್ನು ಸೂಕ್ಷ್ಮತೆ ಮತ್ತು ಸಂವೇದನಾಶೀಲ ಮಾನವನಾಗಿ ರೂಪಿಸ ಬೇಕಾದರೆ,

- ಮಗುವು ಶಾಲೆಗೆ ಬರುವ ಮುನ್ನ ಆಗಿರುವ ಕಲಿಕೆ, ಮಗುವಿನ ಅಗತ್ಯಕ್ಕನುಸಾರವಾಗಿ ಕಲಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಕಲಿಕೆ ಮತ್ತು ಬೋಧನೆಯು, ಅಂಕಗಳನ್ನು ಪಡೆಯುವ ಗುರಿಯನ್ನು ಮೀರಿರಬೇಕು.
- ಬಾಹ್ಯ ಪ್ರಪಂಚದ ಪ್ರಕ್ರಿಯೆಗಳು, ವ್ಯಾವಹಾರಿಕ-ಅನುಭವಾಧಾರಿತ ಕಲಿಕೆಗಳು ಸೇರ್ಪಡೆಯಾಗಬೇಕು.

**ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆ:**
ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಶಾಲೆಗಳು ದಿನವಿಡೀ ಮಕ್ಕಳಲ್ಲಿ ಜ್ಞಾನದ ವಿಷಯಗಳನ್ನು ಪಸರಿಸುತ್ತಾ ನಾಗರೀಕರನ್ನು ಜೀವನಕ್ಕೆ ಸಿದ್ಧಮಾಡುವ ಕಾರ್ಯಕ್ಷೇತ್ರ. ಬೋಧನೆ ಮತ್ತು ಕಲಿಕೆಗಳದ್ದು ಅವಿನಾಭಾವ ಸಂಬಂಧ. ತರಗತಿಯಲ್ಲಿ ಶಿಕ್ಷಕನು ತನ್ನ ಅನುಭವವನ್ನು, ವಿಷಯದ ಆಂತರ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾರೆ, ವರ್ಗಾಯಿಸುತ್ತಾರೆ. ಪಠ್ಯಪುಸ್ತಕದಲ್ಲಿನ ಪಠ್ಯಕ್ರಮಕ್ಕೆ ಇದು ಸೀಮಿತವಾಗಿರುತ್ತದೆ. ಶಾಲಾ ತರಗತಿಯಲ್ಲಿನ ಕಲಿಕೆ ಶೈಕ್ಷಣಿಕ ಪ್ರಕ್ರಿಯೆಯ ಒಂದು ನಿರ್ದಿಷ್ಟ ಭಾಗ. ತರಗತಿಯಲ್ಲಿ ಕಲಿತಿದ್ದ ಅಂಶಗಳನ್ನು ವಾಸ್ತವಿಕವಾಗಿ ಗಮನಿಸಲು, ನಿಜ ಜೀವನಕ್ಕೆ – ವ್ಯಾವಹಾರಕ್ಕೆ ಸಂಬಂಧಿಸಿದ ಅಂಶಗಳನ್ನು ತಿಳಿಯಬೇಕಾದರೆ ಶಾಲೆಯಿಂದಾಚೆಗಿನ ಪರಿಸರವೇ ಕಲಿಕೆಯನ್ನು ಒದಗಿಸುತ್ತದೆ, ಇದನ್ನು ಶಿಕ್ಷಕನು ಅರಿತು ಈ ಕಲಿಕೆಯ ಮಾಧ್ಯಮವನ್ನು ತೊಡಗಿಸಿಕೊಳ್ಳಬೇಕು. ಬಹುತೇಕ ಸಂದರ್ಭಗಳಲ್ಲಿ ಇದನ್ನು ಪಠ್ಯೇತರ ಚಟುವಟಿಕೆಯೆಂದು ಹೇಳುತ್ತಿರುತ್ತೇವೆ. ಇದು ಪಠ್ಯದಷ್ಟೇ ಮುಖ್ಯ, ಇದುವೂ ಶೈಕ್ಷಣಿಕವೇ ಹೌದು. ಪರಸ್ಪರ ತರಗತಿ-ಶಾಲೆ-ನೆರೆಹೊರೆ-ಗ್ರಾಮ-ಪ್ರಾಂತ್ಯಗಳ ಇರುವಿಕೆಯ ಸಂಬಂಧಗಳ ನಡುವೆ ವಿದ್ಯಾರ್ಥಿಯ ಕಲಿಕೆಯು ಮತ್ತು ಜ್ಞಾನಾರ್ಜನೆಯು ಆಗುತ್ತಿರುತ್ತದೆ. ಇದನ್ನು ಶಿಕ್ಷಕರು ಬಹಳ ಹತ್ತಿರದಿಂದ ಗಮನಿಸುತ್ತಿರ ಬೇಕು, ಕಲಿಕೆಯ ಕೊಂಡಿಗಳನ್ನು ಜೋಡಿಸುತ್ತಿರಬೇಕು.

**ತರಗತಿ ಕೊಠಡಿಗೆ ಬೋಧನೆ ಹಾಗೂ ಕಲಿಕೆ ಸೀಮಿತವಾಗಿರಬೇಕೆ?**
ಹಾಗಾಗಿ ಶಾಲಾ ಶಿಕ್ಷಣದ ಪ್ರಸ್ತುತ ಪ್ರಕ್ರಿಯೆ ತರಗತಿ ಬೋಧನೆಯ ಜೊತೆಗೆ ವಿಭಿನ್ನ ನಾವಿನ್ಯಯುತ ಚಟುವಟಿಕೆಗಳನ್ನು ಯೋಜಿಸುತ್ತಾ, ಹಮ್ಮಿಕೊಳ್ಳುತ್ತಾ ಮಕ್ಕಳನ್ನು ಬಾಹ್ಯ ಪ್ರಪಂಚದ ಪ್ರಕ್ರಿಯೆಗಳಿಗೆ-ವ್ಯಾವಹಾರಿಕ-ಅನುಭವಾಧಾರಿತ ಕಲಿಕೆಗಳನ್ನು ಕಲಿಯುವ ವಾತಾವರಣವನ್ನು ಸೃಷ್ಟಿಸಬೇಕಾಗುತ್ತದೆ. ಇದನ್ನು ಹಲವಾರು ಹಂತಗಳಲ್ಲಿ ಮಾಡುವ ಸಾಧ್ಯತೆಗಳನ್ನು ಈಗಾಗಲೇ ಕಾಣುತ್ತೇವೆ.

**ಮಾಡುವುದರ ಸಾಧ್ಯತೆಗಳು:**

- ಮೊದಲನೆಯದಾಗಿ, ಶಿಕ್ಷಕರು ತಮ್ಮ ವಿಷಯಾಧಾರಿತ ಪಾಠಗಳನ್ನು ಮಾಡುವಾಗ,


- ತರಗತಿಯಾಚೆ–ಶಾಲಾ ವಠಾರದೊಳಗೆ;
- ಶಾಲಾ ವಠಾರದಾಚೆ–ನೆರೆಹೊರೆಯೊಳಗೆ;
- ನೆರೆಯೊರೆಯಿಂದಾಚೆ–ಗ್ರಾಮದ ವ್ಯಾಪ್ತಿಯೊಳಗೆ;

ಹೀಗೆ ವಿವಿಧ ಸ್ಥಳಗಳನ್ನು (ಆಟದ ಮೈದಾನ, ಅಶ್ವತ್ಥಕಟ್ಟೆ, ಗೋಮಾಳ, ಗುಡ್ಡ–ಬೆಟ್ಟ, ಗುಂಡುತೋಪು, ಕೆರೆದಂಡೆ, ತೋಟ, ಐತಿಹಾಸಕ ಸ್ಮಾರಕಗಳು, ಶಾಸನಗಳು ಇತ್ಯಾದಿ) ಗುರುತಿಸಿ ಅವುಗಳನ್ನು ತರಗತಿಗಳನ್ನಾಗಿ ಬಳಸುಕೊಳ್ಳುವುದು. ಪ್ರಾಯೋಗಿಕವಾಗಿ ಮಕ್ಕಳಿಗೆ ವಿಷಯಗಳು ಅರ್ಥೈಸಿಕೊಳ್ಳಲು ಇದು ಅನುಕೂಲವಾಗುತ್ತದೆ. ಈರೀತಿ ಮಾಡುವುದು ಸಂಪೂರ್ಣ ಶಿಕ್ಷಕನ ಸೃಜನಾತ್ಮಕ ಆಸಕ್ತಿಯನ್ನವಲಂಬಿಸಿರುತ್ತದೆ. ಕೆಳಕಂಡ ಸಂದರ್ಭಗಳನ್ನು ಶಿಕ್ಷಕರು ಕಲಿಕೆಗೆ ಜೋಡಿಸಬಹುದು.

- ಶಾಲಾ ಪ್ರಾರಂಭದಲ್ಲಿ, ಶಾಲಾ ಮುಕ್ತಾಯವಾಗುವಾಗ ಸಭೆನಡೆಸುವುದರಲ್ಲಿ ಹಲವಾರು ಅಂಶಗಳನ್ನು ಸೇರ್ಪಡಿಸಬಹುದು.
- ಹಲವಾರು ಹಬ್ಬಗಳನ್ನು ವ್ಯವಸಾಯಾಧಾರಿತ ಪ್ರಕ್ರಿಯೆಗಳನ್ನವಲಂಬಿಸಿ ಆಚರಿಸುತ್ತೇವೆ. ಈ ಹಬ್ಬಗಳ ಹಿನ್ನಲೆ, ಜನಜೀವನಕ್ಕಿರುವ ಸಂಬಂಧ, ಪದ್ಧತಿಗಳನ್ನು ವಿವರಿಸಬಹುದು.
- ರಾಜ್ಯ–ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯಲ್ಲಿನ ಮುಖ್ಯವಾದ ಮಜಲುಗಳು (ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವ, ರಾಜ್ಯೋತ್ಸವ).
- ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಿ ಭಾರತಒಕ್ಕೂಟ, ಸಂವಿಧಾನ ಮತ್ತಿತರ ಮಹತ್ತರ ಪ್ರಕ್ರಿಯೆಗಳಿಗೆ ತೊಡಗಿಸಿಕೊಂಡಿರುವ ಮಹಾನ್ ವ್ಯಕ್ತಿಗಳ ಪರಿಚಯ ಮಾಡುವುದು.
- ಅಂತರ ರಾಷ್ಟ್ರೀಯ ದಿನಾಚರಣೆಗಳು.
- ಮೇಲೆ ತಿಳಿಸಿದ ಅಂಶಗಳನ್ನು ವರ್ಷವಿಡೀ ತರಗತಿ ಬೋಧನೆಯಲ್ಲಿ ಸೇರಿಸಬಹುದು. ಇದರಿಂದ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ಹೆಚ್ಚಾಗುತ್ತದೆ.

ಒಂದಿಷ್ಟು ಸಂದರ್ಭಗಳಲ್ಲಿ ತಾನೇ ನಿಂತು ಮಾಡಬಹುದು ಅಥವಾ ಇಡೀ ಶಾಲಾ ಶಿಕ್ಷಕ ವೃಂದದವರನ್ನೂ ಸೇರಿಸಿ ನಡೆಸ ಬಹುದು.




- ದೀರ್ಘಾವಧಿಯಲ್ಲಿ ಎರಡನೆಯ ಮಾದರಿಯನ್ನು ನಾವು ಸಿದ್ಧಪಡಿಸಬಹುದು. ಇದರಲ್ಲಿ ವಿಷಯವಾರು ಸಂಘಗಳನ್ನು ಶಾಲೆಯಲ್ಲಿ ಸಂಘಟಿಸುವುದರ ಮುಖಾಂತರ (ಸಂಘದ ಉದ್ದೇಶ್ಯಗಳು, ಮಕ್ಕಳ ಸದಸ್ಯತ್ವ, ಪ್ರತಿ ತಿಂಗಳೂ ಮಾಡಬಹುದಾದ ಚಟುವಟಿಕೆ ಪಟ್ಟಿ, ಮಕ್ಕಳ ಜವಾಬ್ದಾರಿ, ಒಂದು ಶಿಕ್ಷಕನ ಮೇಲುಸ್ತುವಾರಿ ಇತ್ಯಾದಿಗಳನ್ನೊಳಗೊಂಡು) ಚಾಲನೆಕೊಡಬಹುದು. ಇದರಿಂದ ಮಕ್ಕಳಿಗೆ ತಂಡವಾಗಿ ಕೆಲಸ ಮಾಡುವುದು, ಗುಂಪಿನಲ್ಲಿ ಯೋಚಿಸುವುದು, ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಚಟುವಟಿಕೆಗಳನ್ನು ನಡೆಸುತ್ತಾ, ಕಲಿಯುತ್ತಾ,

ನಿರ್ವಹಣೆಯ ಅಂಶಗಳನ್ನು ಕಲಿಯಲು ಅವಕಾಶವಾಗುತ್ತದೆ. ವಿಕೇಂದ್ರೀಕೃತ ಜನತಾಂತ್ರಿಕ ಮೌಲ್ಯಗಳನ್ನು ಈ ಪ್ರಕ್ರಿಯೆ ಪ್ರತಿಪಾದಿಸುತ್ತದೆ.

ರಾಜ್ಯ ಸರಕಾರವೂ ಈ ಕೆಳಕಂಡ ಕಾರ್ಯಕ್ರಮಗಳನ್ನು ಶಾಲೆಗಳು ನಡೆಸುವಂತೆ ಅಪೇಕ್ಷಿಸುತ್ತದೆ, ಇವುಗಳಲ್ಲಿ ವಿಷಯಾಧಾರಿತ ಸಂಘಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು.

- ✓ ಕಲಿಕಾ ಮೇಳ: ಕಲಿಕಾ ಮೇಳಗಳು ಚಟುವಟಿಕೆಗಳಾಧಾರಿತ, ಈ ಮೂಲಕ ಮಕ್ಕಳಿಗೆ ಸುಲಭವಾಗಿ ವಿಷಯಗಳನ್ನು ಅರ್ಥೈಸುವ ಕಾರ್ಯಕ್ರಮ. ಇದರಲ್ಲಿ ಮಕ್ಕಳು, ಶಿಕ್ಷಕರು ಸೇರಿ ಚಟುವಟಿಕೆಗಳನ್ನು ರಚಿಸಿ ಪ್ರದರ್ಶಿಸುವುದು.
- ✓ ಮೆಟ್ರಿಕ್ ಮೇಳ (http://www.dsert.kar.nic.in/syllabus/MetricMelaFinal301216.pdf):
  ಮೆಟ್ರಿಕ್ ಮೇಳವು ಅಳತೆ ಮತ್ತು ತೂಕಗಳಿಗೆ ಸಂಬಂಧಿಸಿದ ಹಬ್ಬವಾಗಿದೆ. ಹಾಗೂ ಗಣಿತದ ಹಲವಾರು ರಂಜನೀಯ ಸೌಂದರ್ಯವನ್ನು ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಸಮುದಾಯದ ಸದಸ್ಯರೊಂದಿಗೆ ವಿನಿಮಯ ಮಾಡಿಕೊಳ್ಳಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.
- ✓ ಪ್ರತಿಭಾ ಕಾರಂಜಿ (http://schooleducation.kar.nic.in/pryedn/pkaranji.html):
  ಈ ಕಾರ್ಯಕ್ರಮವು ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಕ್ಲಸ್ಟರ್, ಬ್ಲಾಕ್, ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಏರ್ಪಡಿಸುತ್ತಾ ಮಕ್ಕಳಲ್ಲಿರುವ ಪ್ರತಿಭೆಯನ್ನು ಹಾಗೂ ವಿಕಸನವನ್ನು ಅನಾವರಣಗೊಳಿಸುತ್ತದೆ. ಜೊತೆಗೆ ಶಿಕ್ಷಕರ ಹಾಗೂ ಪೋಷಕರಿಗೂ ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿ ತಮ್ಮ ದೇಣಿಗೆಯನ್ನು ಸರಿಪ್ರಮಾಣದಲ್ಲಿ ಕೂರಿಸುವಂತೆ ಉತ್ತೇಜಿಸುತ್ತದೆ.

ಮೇಲೆರಡು ಮಾದರಿಗಳು ಕನಿಷ್ಟ ಮತ್ತು ಮೂಲಭೂತವಾಗಿ ಶಾಲಾ ಪ್ರಕ್ರಿಯೆಯಲ್ಲಿ ಇರಬೇಕಾದ ಅಂಶಗಳು. ಇವುಗಳಾಧಾರದ ಮೇಲೆ ಈ ಕೆಳಕಂಡ ಸಾಧ್ಯತೆಗಳನ್ನು ಕಂಡುಕೊಳ್ಳಬಹುದು.

- ಮೂರನೆಯದಾಗಿ, ವಿಷಯಾಧಾರಿತ ಸಾಮಗ್ರಿಗಳು, ಪಠ್ಯವಸ್ತುಗಳನ್ನು ತಯಾರಿಸುವ ಅನೇಕ ರಾಜ್ಯ–ರಾಷ್ಟ್ರವ್ಯಾಪಿ ಸರಕಾರಿ/ಅರೆಸರಕಾರಿ/ಸರ್ಕಾರೇತರ ಸಂಸ್ಥೆಗಳು ಹಲವಾರು ಕಾರ್ಯಕ್ರಮಗಳನ್ನು (ಶಿಕ್ಷಕರಿಗೆ ತರಬೇತಿಗಳು, ಮಕ್ಕಳಿಗೆ ಚಟುವಟಿಕೆಗಳು..) ನಡೆಸುತ್ತಿವೆ. ಈ ಸಂಸ್ಥೆಗಳನ್ನು ಗುರುತಿಸಿ, ಸಂಪರ್ಕ ಮಾಡಿ, ಅವುಗಳ ಸಹಯೋಗದೊಂದಿಗೆ ಶಾಲೆಯಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಬಾಹ್ಯ ವಿಷಯ ಸಂಪನ್ಮೂಲಗಳ ಒಳಹರಿಯುವಿಕೆಯು ಸಾಧ್ಯವಾಗುತ್ತದೆ. ನಿಗದಿತ ಒಂದು ಕಾರ್ಯಕ್ರಮ ಅಥವಾ ಬೇಸಿಗೆ/ಛಳಿಗಾಲದ ಅಥವಾ ವರ್ಷವಿಡೀ ಯೋಜನೆಗಳನ್ನು ಹಾಕಿಕೊಳ್ಳಬಹುದು.

- ನಾಲ್ಕನೆಯದಾಗಿ, ಅಂತರ ಕ್ಲಸ್ಟರ್ ಶಾಲೆಗಳೊಂದಿಗೆ ವರ್ಷಾಧಾರಿತ ಸಹಯೋಗಿ ಕಾರ್ಯಕ್ರಮಗಳನ್ನು ರಚಿಸಿಕೊಳ್ಳಬಹುದು. ಈ ಮಾದರಿಯಲ್ಲಿ ಶಿಕ್ಷಕರು–ಮಕ್ಕಳು–ಮುಖ್ಯಸ್ಥರು ಮತ್ತಿತರ ಜನರ ಅಂತರ ಶಾಲಾ ತಿಳುವಳಿಕೆ, ಸೂಕ್ಷ್ಮತೆಗಳು, ಪರಿಚಯಗಳು, ವಿಷಯ ಜ್ಞಾನಗಳು ಸಮೃದ್ಧಿಯಾಗುವ ಸಾಧ್ಯತೆಗಳನ್ನು ಸಾಕಾರಗೋಳಿಸಬಹುದು. ಸಹಕಾರಿ ಮನೋಭಾವನೆ, ಭಾತೃತ್ವದ ಪರಿಕಲ್ಪನೆಗಳನ್ನು ಈ ಪ್ರಕ್ರಿಯೆ ಪ್ರತಿಪಾದಿಸುತ್ತದೆ.

ಶಿಕ್ಷಕರ ಪಾತ್ರ:
ಶಿಕ್ಷಕರು ಶಿಕ್ಷಣ ಪ್ರಕ್ರಿಯೆಯಲ್ಲಿ ಸುಗಮಕಾರರಾಗಿರುತ್ತಾರೆ. ಮತ್ತು ಸತತವಾಗಿ ಮಕ್ಕಳ ಕಲಿಕೆಯ ಹಾದಿಯನ್ನು ಗಮನಿಸುತ್ತಾ, ಅಗತ್ಯ ಮಧ್ಯಸ್ಥಿಕೆಗಳನ್ನು ತರುತ್ತಾ, ಕ್ರಿಯಾತ್ಮಕ ಚಟುವಟಿಕೆಗಳನ್ನು ರಚಿಸುತ್ತಾ, ತಾನು ಹೊಸ ವಿಷಯಗಳನ್ನು ಕಲಿತುಕೊಳ್ಳುತ್ತಾ, ಸಹಶಿಕ್ಷಕರನ್ನು ತನ್ನೊಂದಿಗೆ ಕರೆದುಕೊಂಡುಹೋಗುವ – ಒಂದು ಸಮಗ್ರ ಆಯಾಮಗಳ ಪರಿಕಲ್ಪನೆ ಹಾಗೂ ದೃಷ್ಟಿಕೋನಗಳನ್ನು ಪಳಗಿಸಿಕೊಂಡಿರಬೇಕಾಗುತ್ತದೆ. ಅಂದರೇ,

- ಇರುವ ವ್ಯವಸ್ಥೆಯಲ್ಲಿ ಬರೀ ಪ್ರಮಾಣಿತ ಚಟುವಟಿಕೆಗಳನ್ನು ಮಾಡಿದರೇ ಮಾತ್ರ ಸಾಲದು. ಸಂದರ್ಭಾನುಸಾರ ಹೆಚ್ಚುವರಿ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ (ಬ್ರಿಡ್ಜ್ ಪಾಠಗಳು, ಕಲಿಕಾ ಮೇಳ, ವಾರ್ಷಿಕೋತ್ಸವ, ಕ್ರೀಡಾ ದಿನಾಚರಣೆ ಇತ್ಯಾದಿ).

- ಮತ್ತೊಂದು ಮುಖ್ಯವಾದ ವಿಷಯವೇನೆಂದರೇ, ಶಾಲೆಯು ಕಲಿಕೆಯ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಸರಕಾರವು ಅಥವಾ ಇಲಾಖೆಯು ಆಗಾಗ ಸೇರಿಸುತ್ತಿರುತ್ತದೆ. ಶಿಕ್ಷಣದ ಮೂಲ ಉದ್ದೇಶ್ಯಗಳನ್ನು ಮುಟ್ಟಲು ಇವುಗಳು ಸಹಕಾರಿಯಾಗುತ್ತದೆ (ಉದಾ: ಆರ್.ಟಿ.ಇ, ಎಮ್.ಡಿ.ಎಮ್ ಇತ್ಯಾದಿ). ಇವುಗಳು ಶಾಲಾ ಶಿಕ್ಷಣ ಭಾಗವಾಗಿಯೇ ನೋಡಬೇಕೇ ಹೊರತು, ಹೆಚ್ಚುವರಿ ಅಲ್ಲ ಎಂದು ತಿಳಿಯಬೇಕು.

ಶಿಕ್ಷಕವೃಂದದವರಿಗೂ ಹಾಗೂ ಶಾಲಾ ಮುಖ್ಯೋಪಾಧ್ಯಾಯರಿಗೂ ವರ್ಷವಿಡೀ ಬೋಧನೆ ಹಾಗೂ ಶಾಲಾ ನಿರ್ವಹಣೆ ಬಗ್ಗೆ ಸಾಕಾಗುವಷ್ಟು ಕೈತುಂಬ ಕೆಲಸಗಳಿರುತ್ತವೆ. ಅದನ್ನೆಲ್ಲಾ ದಾಟಿ ಶಾಲೆಯ ಮುಖ್ಯ ಗುರಿಯಾಗಿರುವ ಮಕ್ಕಳಿಗೆ ನಾವಿನ್ಯಯುತ ಶಿಕ್ಷಣನೀಡುವ ಅಂಶಗಳನ್ನು ಪ್ರಯೋಗಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯೋನ್ಮುಖರಾಗಬೇಕು.

# ಅಧ್ಯಾಯಗಳು

# ಅಧ್ಯಾಯ–1

# ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ

## ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಹಿನ್ನೆಲೆ

ಮಾನವ ತನ್ನ ಆಲೋಚನಾಶಕ್ತಿ ಹಾಗೂ ಬುದ್ದಿವಂತಿಕೆಯಿಂದ ಪ್ರಾಣಿಗಳಿಗಿಂತ ಭಿನ್ನನೆಂದು ಮೆರೆದಿದ್ದಾನೆ. ಈ ಭಿನ್ನತೆಗೆ ಮೂಲ ಮಾನವನ ಬೌದ್ಧಿಕ ವಿಕಾಸದ ಮೂಲ ನೆಲೆಯೇ ಶಿಕ್ಷಣ.ಶಿಕ್ಷಣ ಮಾನವನಿಗೆ ಗಾಳಿ, ನೀರು, ಆಹಾರ ಮತ್ತು ಬಟ್ಟೆಯಷ್ಟೆ ಅಗತ್ಯ ಹಾಗೂ ಸಹಜ ಬೇಡಿಕೆಯಾಗಿದೆ.


ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕೆಂಬ ಕೂಗು ಮಾನವನ ಇತಿಹಾಸದಷ್ಟೇ ಹಳೆಯದಾಗಿದೆ. ಶಿಕ್ಷಣ ಮಾನವನ ವಿಕಾಸದ ಮೆಟ್ಟಿಲುಗಳಾಗಿ ಜೊತೆ ಜೊತೆಯಾಗಿ ಬೆಳೆದು ಬಂದ ಜೀವನದ ಒಂದು ಅಗತ್ಯತೆ.ಶಿಕ್ಷಣ ಮಾನವನ ಬದುಕಿನಲ್ಲಿ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದ್ದು, ಶಿಕ್ಷಣ ಮಾನವನ ಜನ್ಮ ಸಿದ್ಧ ಹಕ್ಕಾಗಿದೆ.

## ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಚಾರಿತ್ರಿಕ ಹಿನ್ನೆಲೆ

ಸಮಾಜದ ವಿವಿಧ ಹಂತಗಳಲ್ಲಿ ಶಿಕ್ಷಣದಸಾರ್ವತ್ರೀಕರಣ ಬೆಳೆದು ಬಂದ ರೀತಿಯನ್ನು ಸ್ವಲ್ಪ ಮಟ್ಟಿಗೆ ಅರ್ಥ ಮಾಡಿಕೊಳ್ಳೋಣ.ಇದನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಮೊದಲನೆಯ ಭಾಗ ಪ್ರಾಚೀನ ಭಾರತದಲ್ಲಿ ಪ್ರಾಥಮಿಕ ಶಿಕ್ಷಣಕ್ಕಿದ್ದ ಅವಕಾಶ ಮತ್ತು ಇತಿಮಿತಿಗಳ ಬಗ್ಗೆ ಚರ್ಚಿಸುತ್ತದೆ.ಎರಡನೆ ಭಾಗವು ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯ ಅನೇಕ ಪ್ರಮುಖ ಘಟ್ಟಗಳನ್ನು ಒಳಗೊಂಡಿದ್ದು ಸಂಕ್ಷಿಪ್ತ ಚಿತ್ರಣವನ್ನು ನೀಡುತ್ತದೆ.

## ಅಂದು – ಇಂದು

ಪ್ರಾಚೀನ ಸಮಾಜವನ್ನು ಇಂದಿನ ಸಮಾಜಕ್ಕೆ ಹೋಲಿಸಿ ನೋಡಿದಾಗ ಅಂತಹ ಮೂಲಭೂತ ವ್ಯತ್ಯಾಸವನ್ನೇನು ಕಾಣಲಾಗದು. ಇಂದಿಗೂ ಬಹಳಷ್ಟು ಮಕ್ಕಳು ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ.ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರುವುದಲ್ಲದೆ ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.




## ಶೈಕ್ಷಣಿಕ ಯೋಜನೆಗಳು

ಸ್ವಾತಂತ್ರ್ಯ ನಂತರದ ಪ್ರಮುಖ ಸಮಸ್ಯೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕಣವೂ ಒಂದು.ಈ ಉದ್ದೇಶ ಈಡೇರಿಕೆಗಾಗಿ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೆ ತಂದು ಅನುಷ್ಠಾನಗೊಳಿಸುತ್ತಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾದ ನಂತರ ಶಿಕ್ಷಣದ ಸಾರ್ವತ್ರೀಕಣಕ್ಕೆ ಹೆಚ್ಚು ಒತ್ತು ನೀಡಲಾಯಿತು.ಈ ನಿಟ್ಟಿನಲ್ಲಿ ಮುಂದಿನ ಶೈಕ್ಷಣಿಕ ಯೋಜನೆಗಳು ಪ್ರಮುಖವಾದವುಗಳಾಗಿವೆ:

- **ಕಪ್ಪು ಹಲಗೆ ಯೋಜನೆ (OBB) –1987**
- **D.P.E.P** ಯೋಜನೆ (1994–95)
- ಜನ ಶಾಲಾ ಕಾರ್ಯಕ್ರಮ
- ಸರ್ವಶಿಕ್ಷಣ ಅಭಿಯಾನ
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
- ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ
- ಸಮಗ್ರ ಶಿಕ್ಷಣ ಅಭಿಯಾನ

## ಕಪ್ಪು ಹಲಗೆ ಯೋಜನೆ (ಕಾರ್ಯಚರಣೆ)

1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಪ್ರಾಥಮಿಕ ಶಿಕ್ಷಣದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸುಧಾರಣೆಗಾಗಿ 1987–88ರಲ್ಲಿ ಕೇಂದ್ರ ಸರ್ಕಾರದ ಅನುದಾನದೊಂದಿಗೆ ಜಾರಿಗೆ ಬಂದ ಕಾರ್ಯಕ್ರಮಗಳಲ್ಲಿ ಕಪ್ಪು ಹಲಗೆ ಕಾರ್ಯಚರಣೆಯೂ ಒಂದು.

**ಉದ್ದೇಶಗಳು**

* ಎಲ್ಲಾ ಹವಾಮಾನಕ್ಕೂ ಒಗ್ಗುವ ಸಾಕಷ್ಟು ದೊಡ್ಡದಾದ ಎರಡು ಕೊಠಡಿಗಳನ್ನು ಒಳಗೊಂಡಿರುವ ಶಾಲಾ ಕಟ್ಟಡಗಳ ನಿರ್ಮಾಣ.
* ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಕಲ್ಪಿಸುವುದು.
* ಏಕೋಪಾಧ್ಯಾಯ ಶಾಲೆಗಳಿಗೆ, ಮತ್ತೊಂದು ಶಿಕ್ಷಕರನ್ನು ನೇಮಿಸುವುದು. (ಇವರಲ್ಲಿ ಓರ್ವರು ಮಹಿಳೆಯಾಗಿರಬೇಕು)
* ಬೋಧನಾ ಕಲಿಕೋಪಕರಣಗಳನ್ನು ಒದಗಿಸುವುದು.

**ಸಾಧನೆಗಳು**

* ಸುಮಾರು 14,350 ಏಕೋಪಾಧ್ಯಾಯ ಶಾಲೆಗಳಿಗೆ ಎರಡನೆ ಶಿಕ್ಷಕರ ನೇಮಕ.
* 100 ಕ್ಕಿಂತ ಹೆಚ್ಚಿನ ಮಕ್ಕಳ ಸಂಖ್ಯೆ ಇರುವ 3855 ಶಾಲೆಗಳಿಗೆ ಮೂರನೇ ಶಿಕ್ಷಕರ ನೇಮಕ.
* ಹಿರಿಯ ಪ್ರಾಥಮಿಕ ಶಾಲೆಗಳಿಗೆ 18,916 ಶಿಕ್ಷಕರ ನೇಮಕ.
* 2000ದ ವೇಳೆಗೆ ರೂ.9,22,302 ಲಕ್ಷ ರೂ.ಗಳನ್ನು ಕಲಿಕಾ ಬೋಧನಾಪಕರಣಗಳಿಗಾಗಿ ಒದಗಿಸಲಾಯಿತು.
* 25,535 ಶಾಲಾ ಕೊಠಡಿಗಳ ನಿರ್ಮಾಣ.

**ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ 1994–95**

6–14 ವಯೋಮಾನದ ಪ್ರತಿ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬುದು ಸಂವಿಧಾನದ ನಿರ್ದೇಶಾತ್ಮಕ ತತ್ವಗಳಲ್ಲಿ ಒಂದಾಗಿದ್ದು, ಇದರಂತೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕಣಕ್ಕೆ ಅನೇಕ ಪ್ರಯತ್ನಗಳು ನಡೆದವು. ಅವುಗಳಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯೂ ಒಂದು.




**ಯೋಜನೆಯ ಉದ್ದೇಶಗಳು**

ಯೋಜನೆಯ ಪ್ರಮುಖ ಉದ್ದೇಶಗಳನ್ನು 4E ಗಳಾಗಿ ನಿರೂಪಿಸಲಾಗಿತ್ತು. ಅವುಗಳೆಂದರೆ,

1. ENTITY(ಅಸ್ತಿತ್ವ)– 1 ರಿಂದ 4ನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೂ ಔಪಚಾರಿಕ ಅಥವಾ ಅನೌಪಚಾರಿಕ ಶಿಕ್ಷಣಕ್ಕೆ ಅವಕಾಶ ಒದಗಿಸುವುದು.
2. Efficiency(ದಕ್ಷತೆ)– ಪ್ರಾಥಮಿಕ ಹಂತದ ಮಕ್ಕಳು ಶಾಲೆ ತೊರೆಯುವ ದರವನ್ನು ಪ್ರತಿಶತ 10ಕ್ಕಿಂತ ಕಡಿಮೆ ಮಾಡುವುದು.
3. Equity(ಸಮಾನತೆ)– ಹೆಣ್ಣು ಮಕ್ಕಳ, ಪರಿಶಿಷ್ಟ ಜಾತಿ ವರ್ಗಗಳ ಮಕ್ಕಳ ಹಾಜರಾತಿ, ಶಾಲೆ ತೊರೆಯುವ ಮತ್ತು ಕಲಿಕೆಯ ಸಾಧನೆಯ ಮಟ್ಟಗಳು ಸಾಮಾನ್ಯ ವರ್ಗದ ಮಕ್ಕಳ ಜತೆ ಹೊಂದಿರುವ ಅಂತರವನ್ನು ಪ್ರತಿಶತ 5ಕ್ಕಿಂತ ಕಡಿಮೆ ಮಾಡುವುದು.
4. Effectiveness(ಪರಿಣಾಮಕಾರಿತ್ವ)– ಮಾಪನ ಮಾಡಿದ ಆರಂಭದ ಮಟ್ಟಕ್ಕಿಂತ ಕಲಿಕೆಯಲ್ಲಿನ ಸರಾಸರಿ ಸಾಧನೆಯ ಮಟ್ಟವನ್ನು ಪ್ರತಿಶತ 15ರಷ್ಟು ಹೆಚ್ಚಿಸುವುದು.

**ಯೋಜನೆಯ ವೈಶಿಷ್ಟ್ಯಗಳು**

* ಅಂಕಿ ಅಂಶ ಪುಸ್ತಕಗಳ ಆಧಾರದ ಮೇಲೆ ಅವಲಂಬಿತವಾಗದೇ ನೈಜವಾಗಿ ಸಮುದಾಯದ ಭಾಗವಹಿಸಿವಿಕೆಯಿಂದ ಜಿಲ್ಲಾ ಯೋಜನೆಗಳನ್ನು ರೂಪಿಸಿರುವುದು.
* ಯೋಜನೆಯು ಹೆಣ್ಣು ಮಕ್ಕಳ ಪರ, ಪರಿಶಿಷ್ಟ ಜಾತಿ ವರ್ಗಗಳ ಪರ ಹಾಗೂ ಶಿಕ್ಷಕರ ಪರವಾದ ಕಾರ್ಯಕ್ರಮಗಳನ್ನು ರೂಪಿಸಿತ್ತು.
* ಹಣಕ್ಕೆ ತಕ್ಕ ಯೋಜನೆ ಸಿದ್ಧಪಡಿಸುವುದನ್ನು ತೊರೆದು ಅಗತ್ಯ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅನುಗುಣವಾಗಿ ಹಣವನ್ನು ನಿಗಧಿ ಮಾಡುವ ಯೋಜನೆಯಾಗಿತ್ತು.
* ಯೋಜನೆಯ ಒಟ್ಟು ವೆಚ್ಚದ ಪ್ರತಿಶತ 70 ರಷ್ಟು ಅಂಶವನ್ನು ಶೈಕ್ಷಣಿಕ ಉದ್ದೇಶಗಳಿಗೆ ನಿಗಧಿ ಮಾಡಲಾಗಿತ್ತು.

**ಯೋಜಿತ ಕಾರ್ಯಚಟುವಟಿಕೆಗಳು**

* ಶಾಲಾ ಸೌಲಭ್ಯಗಳಿಲ್ಲದ ಗ್ರಾಮ ಹಾಗೂ ವಸತಿ ಪ್ರದೇಶದಲ್ಲಿ ಹೊಸದಾಗಿ ಶಾಲೆಗಳನ್ನು ತೆರೆದು ಶಿಕ್ಷಕರನ್ನು ನೇಮಕ ಹಾಗೂ ಶಾಲಾಕಟ್ಟಡಗಳ ನಿರ್ಮಾಣ.
* ಹಾಲಿ ಇರುವ ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಹಾಗೂ ದೊಡ್ಡ ಪ್ರಮಾಣದ ದುರಸ್ತಿ ಕಾರ್ಯ.
* ಸಾಧ್ಯವಾದ ಎಲ್ಲಾ ಕಡೆ ಕುಡಿಯುವ ನೀರು, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಆದ್ಯತೆ ಮೇರೆಗೆ ಒದಗಿಸುವುದು.
* ಹೊಸ ಶಾಲೆಗಳಿಗೆ ಹಾಗೂ ಹಾಲಿ ಇರುವ ಶಾಲೆಗಳಿಗೆ ಬೋಧನಾ ಕಲಿಕೆಯ ಉಪಕರಣಗಳನ್ನು ಒದಗಿಸುವುದು.
* ಮಕ್ಕಳಿಗೆ ಪೂರಕ ವಾಚನ ಪುಸ್ತಕಗಳು, ಅಭ್ಯಾಸ ಪುಸ್ತಕಗಳು ಮತ್ತು ಶಿಕ್ಷಕರ ಕೈಪಿಡಿಗಳ ರಚನೆ, ಮುದ್ರಣ ಹಾಗೂ ಸರಬರಾಜು.
* ಗ್ರಾಮ ಶಿಕ್ಷಣ ಸಮಿತಿ, ಸ್ಥಳೀಯ ಶಿಕ್ಷಣ ಸಮಿತಿ ಹಾಗೂ ಮಾತೆ ಶಿಕ್ಷಕಿ ಸಂಘಗಳ ಸ್ಥಾಪನೆ ಹಾಗೂ ತರಬೇತಿ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯನ್ನು ಬಲಪಡಿಸುವುದು.
* ಬ್ಲಾಕ್ ಹಾಗೂ ಕ್ಲಸ್ಟರ್ ಸಂಪನ್ಮೂಲಗಳ ಕೇಂದ್ರಗಳ ಸ್ಥಾಪನೆ ಮೂಲಕ ಶಿಕ್ಷಕರಿಗೆ ನಿರಂತರ ಸೇವಾ ತರಬೇತಿ ವ್ಯವಸ್ಥೆ.
* ಜಿಲ್ಲಾಮಟ್ಟ ಹಾಗೂ ರಾಜ್ಯಮಟ್ಟದಲ್ಲಿ ಶೈಕ್ಷಣಿಕ ಮಾಹಿತಿ ಗಣಕೀಕರಣ ವ್ಯವಸ್ಥೆ ಮಾಡುವುದು.
* ಶೈಕ್ಷಣಿಕ ಆಡಳಿತಗಾರರು ಹಾಗೂ ಮೇಲ್ವಿಚಾರಕ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡುವುದು.

**ಸಾಧನೆಗಳು**

* ದಾಖಲಾತಿ ದರದಲ್ಲಿ ಶೇ. 3.19 ರಷ್ಟು ಹೆಚ್ಚಳ
* ಲಿಂಗಬೇಧ ಮತ್ತು ಸಾಮಾಜಿಕ ಅಸಮಾನತೆ ಶೇ. 5ರಷ್ಟು ಕಡಿಮೆಯಾಯಿತು.
* ಮೌಲ್ಯಮಾಪನ ಸಮೀಕ್ಷೆಗಳ ಆಧಾರದಿಂದ ಮಕ್ಕಳ ಕಲಿಕೆಯಲ್ಲಿ ಒಟ್ಟಾರೆ ಶೈಕ್ಷಣಿಕ ಪ್ರಗತಿ ಸಾಧಿಸಲಾಗಿದೆ ಎಂಬ ಅಂಶ ಕಂಡುಬಂದಿದೆ.

ಯಶಸ್ವಿ ನಡೆಗಿನ ಪಯಣದ ಹಾದಿ ಪೂರ್ಣಗೊಂಡಿಲ್ಲ ಸಾಧಿಸಬೇಕಾದ್ದು ಇನ್ನೂ ಇದೆ ಎನ್ನುವ ನಿಟ್ಟಿನಲ್ಲಿ ಈ ಯೋಜನೆ ಅಂತ್ಯಗೊಂಡದ್ದೂ ಸಹ ಇದರ ತಿರುಳನ್ನು ಆಧಾರವಾಗಿಟ್ಟುಕೊಂಡು **"ಸರ್ವಶಿಕ್ಷಣ ಅಭಿಯಾನ"** ವು ಡಿ.ಪಿ.ಇ.ಪಿ.ಯ ವಾರಸುದಾರ ಕಾರ್ಯಕ್ರಮವಾಗಿ ರಾಜ್ಯದಲ್ಲಿ ಅನುಷ್ಠಾನಗೊಂಡಿತ್ತು.

**ಜನ ಶಾಲಾ ಕಾರ್ಯಕ್ರಮ**

ಕರ್ನಾಟಕ ಪ್ರಾಥಮಿಕ ಸಮುದಾಯ ಶಾಲಾ ಯೋಜನಾ ಸಮಿತಿಯು ಈ ಯೋಜನೆಯನ್ನು ಭಾರತ ಸರ್ಕಾರ ಹಾಗೂ ವಿಶ್ವಸಂಸ್ಥೆಯ ಜಂಟಿ ಸಹಯೋಗ ಕಾರ್ಯಕ್ರಮದಡಿಯಲ್ಲಿ ನಿರ್ವಹಿಸುತ್ತದೆ.ಇದನ್ನು ರಾಜ್ಯದ ಆಯ್ದ ಹತ್ತು ತಾಲ್ಲೂಕುಗಳಲ್ಲಿ 1998–99ನೇ ಸಾಲಿನಿಂದ ಅನುಷ್ಠಾನಗೊಳಿಸಿದೆ.ಇದರ ಸಂಪೂರ್ಣ ವೆಚ್ಚವನ್ನು ವಿಶ್ವಸಂಸ್ಥೆ ಭರಿಸಿದೆ.

**ಯೋಜನೆಯ ಮುಖ್ಯ ಉದ್ದೇಶಗಳು**

* ದಕ್ಷ ಶಾಲಾ ಆಡಳಿತಕ್ಕಾಗಿ ಸಮುದಾಯವು ನಿರಂತರವಾಗಿ ಭಾಗವಹಿಸುವಂತೆ ಮಾಡುವುದು.
* ಬಹುವರ್ಗ ಬೋಧನಾ ಸನ್ನಿವೇಶದಲ್ಲಿ ಲಿಂಗ–ಸಂವೇದನೆ, ಶಿಶುಕೇಂದ್ರೀಕೃತ ಬೋಧನೆ, ವಿದ್ಯಾರ್ಥಿಗಳ ಪರಸ್ಪರ ಪ್ರತಿಕ್ರಿಯೆ ಸಂದರ್ಭದಲ್ಲಿ ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುವುದು.
* ಎಲ್ಲಾ ಇಲಾಖೆಗಳ ವಿವಿಧ ಕಾರ್ಯಕ್ರಮಗಳನ್ನು ಹೊಂದಿಸಿಕೊಂಡು ಶಾಲಾ ಮಕ್ಕಳ ಅದರಲ್ಲೂ ಹೆಣ್ಣು ಮಕ್ಕಳ ಮತ್ತು ಕಲಿಕೆಯನ್ನು ಹೆಚ್ಚಿಸಲು ಪೂರಕವಾದ ಸಾಮಾಜಿಕ ಸ್ಥಿತಿಗಳನ್ನು ಉತ್ತಮಪಡಿಸುವುದು.

**ಯೋಜನೆಯ ನೇರ ಕಾರ್ಯಕ್ರಮಗಳು**

1. ಶಾಲೆಗಳಲ್ಲಿ ಹಾಜರಾತಿಯನ್ನು ಉತ್ತಮಪಡಿಸಿ ಅವರ ಕಲಿಕೆಯನ್ನು ಹೆಚ್ಚಿಸಲು ಸಮುದಾಯವನ್ನು ಪ್ರೇರಣಾತ್ಮಕವಾಗಿ ನಡೆಸಲು ಹೆಚ್ಚು ಅರಿವು ಹೊಂದುವಂತೆ ಮಾಡಲು ಮುಂದಿನಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ:
    * ಕಲಾಜಾಥ
    * ಸೂಕ್ಷ್ಮ ಯೋಜನೆ
    * ದಾಖಲಾತಿ ಆಂದೋಲನ
    * ಚಿಣ್ಣರ ಮೇಳ
    * ಗ್ರಾಮ ಶಿಕ್ಷಣ ಸಮಿತಿಗಳ ಸದಸ್ಯರಿಗೆ ತರಬೇತಿ
2. ತರಗತಿಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳು.

**ಸಾಧನೆಗಳು**

* ಶಿಕ್ಷಕರಿಗೆ ನಲಿ–ಕಲಿ ತರಬೇತಿ ನೀಡಲಾಗಿದೆ.
* ಶಿಕ್ಷಕರಿಗೆ ಚೈತನ್ಯ ತರಬೇತಿ ನೀಡಲಾಗಿದೆ.
* ಬಿ.ಆರ್.ಸಿ ಹಾಗೂ ಸಿ.ಆರ್.ಸಿಗಳ ಸ್ಥಾಪನೆ.
* ರಾಜ್ಯದ ಒಟ್ಟು 245 ಕ್ಲಸ್ಟರ್‌ಳಿಂದ 473 ಶಿಕ್ಷಕರಿಗೆ 7 ವಾರಗಳ ಸಮನ್ವಯ ಶಿಕ್ಷಣ ತರಬೇತಿ ನೀಡಲಾಗಿದೆ.
* 6–14 ವಯೋಮಿತಿಯ 9468 ವಿಶೇಷ ಅಗತ್ಯವುಳ್ಳ (ನ್ಯೂನತೆಯುಳ್ಳ) ಮಕ್ಕಳನ್ನು ಗುರ್ತಿಸಿ. 2358 ಮಕ್ಕಳಿಗೆ ಶ್ರವಣೋಪಕರಣಗಳು, ವೀಲ್ ಚೇರ್, ಟ್ರೈಸೈಕಲ್, ಊರುಗೋಲು, ವಾಕರ್ ಹಾಗೂ ಕ್ಯಾಲಿಫರ್‌ಗಳನ್ನು ನೀಡಲಾಗಿದೆ.
* ಶಾಲಾ ಆರೋಗ್ಯ ಮತ್ತು ನೈರ್ಮಲ್ಯೀಕರಣ ಯೋಜನೆಯಡಿಯಲ್ಲಿ ಶಿರಾ, ಮಧುಗಿರಿ, ಹಿರಿಯೂರು ಮತ್ತು ಚಳ್ಳಕೆರೆಗಳಲ್ಲಿ ಒಟ್ಟು 1738 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಣದ ಸರ್ವತೋಮುಖ ಪ್ರಗತಿಗಾಗಿ ಜನ ಶಾಲಾ ಕಾರ್ಯಕ್ರಮವು ಮಹತ್ತರ ಕಾರ್ಯಚಟುವಟಿಕೆಗಳ ಅನುಷ್ಠಾನದೊಂದಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ.

## ಸರ್ವಶಿಕ್ಷಣ ಅಭಿಯಾನ

**ಪರಿಕಲ್ಪನೆ:**ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಎಲ್ಲಾ ಅಭಿವೃದ್ಧಿ ಯೋಜನೆಗಳನ್ನು ಸಾಕಾರಗೊಳಿಸುವುದಕ್ಕಾಗಿ ಸೃಷ್ಟಿಯಾದ ಒಂದು ಚೌಕಟ್ಟೆ ಸರ್ವ ಶಿಕ್ಷಣ ಅಭಿಯಾನ. ಪ್ರಾದೇಶಿಕ ಸಮಾನತೆ ಹಾಗೂ ಗುಣಮಟ್ಟದ ಕಾಳಜಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ನಿಯೋಜಿಸಲಾದ ಎಲ್ಲಾ ಕಾರ್ಯಕ್ರಮಗಳ ಸಮಗ್ರ. ಅನುಷ್ಠಾನದ ಒಂದು ನಿರ್ದಿಷ್ಟ ಕಾಲಮಿತಿಯ ಕಾರ್ಯ ಯೋಜನೆ ಇದಾಗಿದೆ.2001–02 ರಲ್ಲಿ ಪ್ರಾರಂಭವಾದ ಈ ವಿಶಿಷ್ಟ ಶಾಲಾ ಶಿಕ್ಷಣದ ಕಾರ್ಯಕ್ರಮ ವರ್ಷದಿಂದ ವರ್ಷಕ್ಕೆ ಬಲಿಷ್ಠವಾಗುತ್ತಿದೆ.

**ಗುರಿಗಳು:**ಕರ್ನಾಟಕ ರಾಜ್ಯದಲ್ಲಿ ಸರ್ವ ಶಿಕ್ಷಣ ಅಭಿಯಾನ ಈ ಕೆಳಗಿನ ನಿರ್ದಿಷ್ಟ ಗುರಿಗಳನ್ನು ಹೊಂದಿದೆ. 2007ನೇ ಇಸವಿಯೊಳಗೆ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ 1 ರಿಂದ 8ನೇ ತರಗತಿವರೆಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ.

* 2010ನೇ ಇಸವಿಯೊಳಗೆ ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯ ಸಾರ್ವತ್ರೀಕರಣ ಹಾಗೂ ಎಲ್ಲಾ ಮಕ್ಕಳೂ 8ನೇ ತರಗತಿಯನ್ನು ಪೂರ್ಣಗೊಳಿಸುವಿಕೆ. ವಯೋಮಾನಕ್ಕನುಗುಣವಾಗಿ ನಿರ್ದಿಷ್ಟ ತರಗತಿಗಳಲ್ಲಿ ಮಕ್ಕಳ ದಾಖಲಾತಿ ಹಾಗೂ ಪೂರ್ಣ ಪ್ರಮಾಣದ ಉಳಿಕೆ.
* ಅರ್ಥಪೂರ್ಣ ಜೀವನದ ಮೇಲೆ ಒತ್ತುಕೊಟ್ಟು, ತೃಪ್ತಿಕರ ಗುಣಮಟ್ಟದ ಶಿಕ್ಷಣದ ಪೂರೈಕೆ.
* ಶಿಕ್ಷಣಾವಕಾಶಗಳು, ಸಹಭಾಗಿತ್ವ ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸುವಲ್ಲಿ ಸಾಮಾಜಿಕ ಗುಂಪುಗಳು, ಲಿಂಗ ಹಾಗೂ ಪ್ರದೇಶಗಳ ಮಧ್ಯೆ ಇರುವ ಕಂದಕಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದು.
* ಶಾಲಾ ನಿರ್ವಹಣೆಯಲ್ಲಿ ಗ್ರಾಮಮಟ್ಟದವರೆಗೂ ಸಮುದಾಯಗಳು ಹಾಗೂ ವಿಶೇಷವಾಗಿ ಸರ್ಕಾರಿ ಸ್ಥಳೀಯ ಸಂಸ್ಥೆಯನ್ನು ಸಂಪೂರ್ಣ ಸಹಭಾಗಿಗಳನ್ನಾಗಿ ಮಾಡಿಕೊಂಡು ಸ್ವಯಂ–ನಿರ್ವಹಿತ ಶಾಲೆಗಳ ಗುರಿಯತ್ತ ಸಾಗುವುದು.

## ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಪ್ರಮುಖ ಹತ್ತು ಮಧ್ಯವರ್ತನೆಗಳು

ಸರ್ವಶಿಕ್ಷಣ ಅಭಿಯಾನದ ಕಾರ್ಯಕ್ರಮಗಳು 10 ಮಧ್ಯವರ್ತನೆಗಳು ಮತ್ತು ಹಲವಾರು ಕಾರ್ಯತಂತ್ರಗಳ ಅಡಿಯಲ್ಲಿ ಜರುಗಿವೆ. ಅವುಗಳನ್ನು ಮುಂದೆ ವಿವರಿಸಿದೆ:

1. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವುದು.
2. ಪ್ರಾಥಮಿಕ ಶಾಲೆಗಳು
3. ಹಿರಿಯ ಪ್ರಾಥಮಿಕ ಶಾಲೆಗಳು
4. ಅಧ್ಯಾಪಕ
5. ಬ್ಲಾಕ್ ಸಂಪನ್ಮೂಲ ಕೇಂದ್ರ
6. ಸಮೂಹ ಸಂಪನ್ಮೂಲ ಕೇಂದ್ರ
7. ಸಮನ್ವಯ ಶಿಕ್ಷಣ ಮತ್ತು ಇತರೆ ಕಾರ್ಯ ಚಟುವಟಿಕೆಗಳು
8. ನಿರ್ವಹಣಾ ವೆಚ್ಚಗಳು
9. ಸಿವಿಲ್ ಕಾಮಗಾರಿಗಳು
10. ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್.ಪಿ.ಇ.ಜಿ.ಇ.ಎಲ್.)

## 01. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವುದು

ಈ ಮಧ್ಯವರ್ತನೆಯು 10 ಕಾರ್ಯತಂತ್ರಗಳನ್ನು ಒಳಗೊಂಡಿದೆ. ಈ ಎಲ್ಲಾ ಕಾರ್ಯತಂತ್ರಗಳು ಶಾಲೆಯಿಂದ ಹೊರಗೆ ಉಳಿಯುವ ಮಕ್ಕಳಿಗೆ ಸಂಬಂಧಿಸಿವೆ. (ಪರಿಹಾರ ಬೋಧನೆ ಹೊರತುಪಡಿಸಿ)

* ವಸತಿ ರಹಿತ 12 ತಿಂಗಳ ಸೇತುಬಂಧ
* ವಸತಿಯುತ 12 ತಿಂಗಳ ಸೇತುಬಂಧ
* ವಸತಿಯುತ 06 ತಿಂಗಳ ಸೇತುಬಂಧ
* ವಸತಿಯುತ ಋತುಮಾನ 04 ಸೇತುಬಂಧ
* ವಸತಿ ರಹಿತ 02 ತಿಂಗಳ ಸೇತುಬಂಧ (ಚಿಣ್ಣರ ಅಂಗಳ)
* ವಸತಿಯುತ 02 ತಿಂಗಳ ಸೇತುಬಂಧ (ಚಿಣ್ಣರ ಅಂಗಳ)
* ಕುಟೀರ ಶಾಲೆ (ಗುಡಾರ ಶಾಲೆ)
* ಗೃಹಾಧಾರಿಕ ಶಿಕ್ಷಣ –ಅಘಋಓ
* ಪರಿಹಾರ ಬೋಧನೆ
* ಸಾರಿಗೆ ವ್ಯವಸ್ಥೆ

**02. ಪ್ರಾಥಮಿಕ ಶಾಲೆಗಳು**

ಈ ಮದ್ಯವರ್ತನೆಯಲ್ಲಿ 5 ಕಾರ್ಯ ತಂತ್ರಗಳಿವೆ:

* ಹೊಸ ಶಾಲೆಗಳು
* ಇ.ಜಿ.ಎಸ್. ಕೇಂದ್ರಗಳನ್ನು ಶಾಲೆಗಳಾಗಿ ಉನ್ನತೀಕರಿಸುವುದು
* ಸರ್ಕಾರಿ ಶಾಲೆಗಳಿಗೆ ಶಾಲಾ ಅನುದಾನ
* ಅನುದಾನಿತ ಶಾಲೆಗಳಿಗೆ ಶಾಲಾ ಅನುದಾನ
* ಕಲಿಕೆ ಬೋಧನಾ ಸಾಮಗ್ರಿ

**03. ಹಿರಿಯ ಪ್ರಾಥಮಿಕ ಶಾಲೆಗಳು**

ಈ ಮಧ್ಯವರ್ತನೆಯು 6 ಕಾರ್ಯತಂತ್ರಗಳನ್ನು ಒಳಗೊಂಡಿತ್ತು:

- ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿ ಪರಿವರ್ತನೆ
* 8ನೇ ಇಯತ್ತೆಯನ್ನು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ತೆರೆಯುವುದು
* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅನುದಾನ
* ಕಲಿಕೆ – ಬೋಧನೋಪಕರಣಗಳನ್ನು ಪಡೆಯದ ಶಾಲೆಗಳಿಗೆ ನೀಡುವುದು
* ಪರಿವರ್ತಿತ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಲಿಕೆ – ಬೋಧನೋಪಕರಣ ನೀಡಿದೆ.

**04. ಅಧ್ಯಾಪಕ**

ಈ ಮಧ್ಯವರ್ತನೆಯನ್ನು ಅಧ್ಯಾಪಕರ ವೃತ್ತಿ ಸಬಲೀಕರಣಕ್ಕಾಗಿ ರೂಪಿಸಲಾಗಿದೆ. ಇದು 10 ಕಾರ್ಯತಂತ್ರಗಳನ್ನು ಒಳಗೊಂಡಿದೆ:

* ಹೊಸ ಪ್ರಾಥಮಿಕ ಶಾಲೆಗಳಿಗೆ ಇಬ್ಬರು ಅಧ್ಯಾಪಕರ ನೇಮಕ/ವೇತನ
* ಹೊಸ ಹಿರಿಯ ಶಾಲೆಗಳಿಗೆ ಇಬ್ಬರು ಅಧ್ಯಾಪಕರ ನೇಮಕ/ವೇತನ
* ಹೆಚ್ಚುವರಿ ಅಧ್ಯಾಪಕರ ನೇಮಕ/ವೇತನ
* 8ನೇ ತರಗತಿಗೆ ತರಬೇತಿ ಪಡೆದ ಪದವೀಧರ ಶಿಕ್ಷಕರ ನೇಮಕ
* ಹಿಂದಿನ ಸಾಲುಗಳಲ್ಲಿ (ಸ.ಶಿ.ಅ. ಯೋಜನೆ) ನೇಮಕವಾದ ಶಿಕ್ಷಕರ ನೇಮಕ
* ಸರ್ಕಾರಿ ಶಾಲಾ ಶಿಕ್ಷಕರಿಗೆ ಅನುದಾನ
* ಸೇವಾ ನಿರತ ಶಿಕ್ಷಕರಿಗೆ ತರಬೇತಿ
* ಹೊಸದಾಗಿ ನೇಮಕವಾದ ಶಿಕ್ಷಕರಿಗೆ ಬುನಾದಿ ತರಬೇತಿ

**05. ಬ್ಲಾಕ್ ಸಂಪನ್ಮೂಲ ಕೇಂದ್ರಗಳು (Block Resource Centres - BRC)**

ಬ್ಲಾಕ್ ಸಂಪನ್ಮೂಲ ಕೇಂದ್ರದ ಬಲವರ್ಧನೆಯಿಂದ ಗುಚ್ಛ ಸಂಪನ್ಮೂಲ ಕೇಂದ್ರಗಳು ಮತ್ತು ಶಾಲೆಗಳ ಚಟುವಟಿಕೆಗಳಿಗೆ ಇಂಬು ಕೊಡಬೇಕೆಂಬುದು ಇವುಗಳ ಆಶಯ. ಬಿ.ಆರ್.ಸಿ.ಯಲ್ಲಿ 6 ಮಂದಿ ಸಿಬ್ಬಂದಿ ಇರುವರು.ಒಬ್ಬರು ಪ್ರೌಢಶಾಲೆಯ ಮುಖ್ಯಸ್ಥರ ಶ್ರೇಣಿಯವರು, 02 ಮಂದಿ ಪ್ರೌಢಶಾಲೆ ಅಧ್ಯಾಪಕರು (1 ವಿಜ್ಞಾನ ಮತ್ತು 1 ಕಲೆ) ಮತ್ತು 03 ಮಂದಿ ಪ್ರಾಥಮಿಕ ಶಾಲೆ ಅಧ್ಯಾಪಕರು ಇರುತ್ತಾರೆ.
ಇದು 5 ಕಾರ್ಯ ತಂತ್ರಗಳನ್ನು ಒಳಗೊಂಡಿದೆ:

* ಪೀಠೋಪಕರಣ ಮತ್ತು ಸಾಧನ ಸಲಕರಣೆ
* ಸಾದಿಲ್ವಾರು
* ತರಬೇತಿ, ಕಲಿಕೆ–ಬೋಧನೆ ಸಾಮಗ್ರಿ
* ಪ್ರವಾಸ ಭತ್ಯೆ
* ವೇತನ

## 06. ಸಮೂಹ ಸಂಪನ್ಮೂಲ ಕೇಂದ್ರಗಳು (Cluster Resource centres -CRC)

ಬ್ಲಾಕ್‌ನಲ್ಲಿರುವ ಶಾಲೆ ಮತ್ತು ಶಿಕ್ಷಕರ ಸಂಖ್ಯೆಯನ್ನು ಆಧರಿಸಿ ಸಿ.ಎ.ಇ.ಒ ಮತ್ತು ಸಿ.ಆರ್.ಸಿಗಳನ್ನು ನೀಡಲಾಗಿದೆ CAEO ರವರು ಕ್ಲಸ್ಟರ್‌ನ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.CAEO ಮತ್ತು ಸಿ.ಆರ್.ಸಿಗಳ ಬಲವರ್ಧನೆಗೆ ಈ ಮಧ್ಯವರ್ತನೆಯಿದ್ದು, ಇದು 05 ಕಾರ್ಯ ತಂತ್ರಗಳನ್ನು ಒಳಗೊಂಡಿದೆ.ಸಿ.ಆರ್.ಸಿ ಕೇಂದ್ರದಲ್ಲಿ ಒಬ್ಬ ಪ್ರಾಥಮಿಕ ಶಾಲೆಯ ಶಿಕ್ಷಕರು ಸಿ.ಆರ್.ಪಿ.ಯಾಗಿ ಕಾರ್ಯ ನಿರ್ವಹಿಸುತ್ತಾರೆ ಬಿ.ಆರ್.ಸಿ ಕೇಂದ್ರದಲ್ಲಿ ನಡೆಯುವ ಚಟುವಟಿಕೆಗಳಲ್ಲಿನ ಅನೇಕ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ.

* ಪೀಠೋಪಕರಣ ಮತ್ತು ಸಾಧನ ಸಲಕರಣೆ
* ಸಾದಿಲ್ವಾರು
* ಕಲಿಕೆ–ಬೊಧನೆ ಸಾಮಗ್ರಿ
* ಪ್ರವಾಸ ಭತ್ಯೆ
* ವೇತನ

## 07. ಸಮನ್ವಯ ಶಿಕ್ಷಣ ಮತ್ತು ಇತರೆ ಕಾರ್ಯ ಚಟುವಟಿಕೆಗಳು (Others)

ಪ್ರಸ್ತುತ ಈ ಮಧ್ಯವರ್ತನೆಯಲ್ಲಿ 15 ಕಾರ್ಯತಂತ್ರಗಳಿವೆ:

* ವಿಶೇಷ ಅಗತ್ಯವಿರುವ ಮಕ್ಕಳ ಶಿಕ್ಷಣ
* ಕಟ್ಟಡ ನಿರ್ವಹಣೆ ಮತ್ತು ದುರಸ್ಥಿ
* ಎಸ್.ಡಿ.ಎಂ.ಸಿ ಸದಸ್ಯರ ತರಬೇತಿ
* ಗ್ರಾಮ ಪಂಚಾಯಿತಿ ಸದಸ್ಯರ ತರಬೇತಿ
* ತಾಲ್ಲೂಕು ಪಂಚಾಯಿತಿ ಸದಸ್ಯರ ತರಬೇತಿ
* ಜಿಲ್ಲಾ ಪಂಚಾಯಿತಿ ಸದಸ್ಯರ ತರಬೇತಿ
* ಸಂಶೋಧನೆ, ಮೌಲ್ಯಮಾಪನ ನಿರ್ವಹಣೆ ಮತ್ತು **REMS**ಮೇಲುಸ್ತುವಾರಿ.
* ಆವಿಷ್ಕೃತ ಚಟುವಟಿಕೆಗಳು – ಕಂಪ್ಯೂಟರ್ ಶಿಕ್ಷಣ
* ಆವಿಷ್ಕೃತ ಚಟುವಟಿಕೆಗಳು – ಪ.ಜಾತಿ/ ಪ. ಪಂಗಡ ಮಕ್ಕಳಿಗೆ ವಿಶೇಷ ಚಟುವಟಿಕೆ
* ಆವಿಷ್ಕೃತ ಚಟುವಟಿಕೆಗಳು – ಹೆಣ್ಣು ಮಕ್ಕಳಿಗಾಗಿ ವಿಶೇಷ ಚಟುವಟಿಕೆ
* ಆವಿಷ್ಕೃತ ಚಟುವಟಿಕೆಗಳು – ಎಜುಸ್ಯಾಟ್ ಹಾಗೂ ರೇಡಿಯೋ ಕಾರ್ಯಕ್ರಮ
* ವರ್ಕ್ ಎಜುಕೇಶನ್
* ವಿಜ್ಞಾನ ಪ್ರಯೋಗಾಲಯ
* ವಿಜ್ಞಾನ ವಸ್ತುಸಂಗ್ರಹಾಲಯ

## 08. ನಿರ್ವಹಣಾ ವೆಚ್ಚಗಳು (ManagementCost)

ಕಛೇರಿಯ ನಿರ್ವಹಣೆ ಮತ್ತು ಕೆಲವು ಕಾರ್ಯತಂತ್ರಗಳಲ್ಲಿ ಕಡಿಮೆ ಬೀಳುವ ಅನುದಾನಕ್ಕೆ ಈ ಬಾಬ್ತಿನಲ್ಲಿ ಹಣ ಉಳಿತಾಯವಾಗಿದ್ದರೆ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಗಳ ನಿರ್ವಹಣಾ ವೆಚ್ಚವನ್ನು ಸ್ಥೂಲವಾಗಿ ಮುಂದಿನ ಕಾರ್ಯತಂತ್ರಗಳ ಅಡಿಯಲ್ಲಿ ಖರ್ಚು ಮಾಡಲಾಗುತ್ತದೆ:

* ಪೀಠೋಪಕರಣ ಮತ್ತು ಸಾಧನ ಸಲಕರಣೆ
* ಸಾದಿಲ್ವಾರು
* ಸಭೆ / ಪ್ರವಾಸ
* ವಾಹನ ಬಾಡಿಗೆ
* ಎಸ್.ಡಿ.ಎಂ.ಸಿ ಗಳಿಗೆ ಪ್ರೋತ್ಸಾಹಧನ
* ಸಮುದಾಯ ಬಲವರ್ಧನೆ
* **Neighbourhood Mobilisation**
* ಗೃಹಾಧಾರಿತ ಶಿಕ್ಷಣ ಒಳಗೊಂಡಿದೆ.
* ನಲಿ–ಕಲಿ ಬೋಧನ ಕ್ರಮದ ಆಳವಡಿಕೆ

## 09. ಸಿವಿಲ್ ಕಾಮಗಾರಿಗಳು

ಈ ಮಧ್ಯವರ್ತನೆಯಲ್ಲಿ 9 ಕಾರ್ಯತಂತ್ರಗಳಿವೆ:

* ಬಿ.ಆರ್.ಸಿ ಕಟ್ಟಡ
* ಸಿ.ಆರ್.ಸಿ ಕಟ್ಟಡ
* ಶಾಲಾ ಕಟ್ಟಡ
* ಹೆಚ್ಚುವರಿ ತರಗತಿ ಕೊಠಡಿ
* ಕಾಂಪೌಂಡ್ ಗೋಡೆ
* ಶೌಚಾಲಯ
* ಕುಡಿಯುವ ನೀರು
* ವಿದ್ಯುತ್
* ವಿಶೇಷ ಶೌಚಾಲಯ for CWSN

**ಟಿಪ್ಪಣಿ:** ಬಿ. ಆರ್. ಸಿ ಮತ್ತು ಸಿ. ಆರ್. ಸಿ ಕಟ್ಟಡವನ್ನು ಜಿಲ್ಲಾ ಪಂಚಾಯತ ಅನುಷ್ಠಾನಗೊಳಿಸುತ್ತದೆ. ಇತರೆಎಲ್ಲಾ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯು ಸಂಬಂಧಿಸಿದ ಶಾಲೆಯಎಸ್.ಡಿ.ಎಂ.ಸಿ ಯದ್ದಾಗಿದೆ.

## 10. ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (NPEGEL)

ಸರ್ವ ಶಿಕ್ಷಣ ಅಭಿಯಾನದಡಿ ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚುವರಿ ಸೌಲಭ್ಯಗಳನ್ನು ನೀಡುವ ಸಲುವಾಗಿ "ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ" (NPEGEL)ಎಂಬ ಕಾರ್ಯಕ್ರಮ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ.ರಾಜ್ಯದ 18 ಜಿಲ್ಲೆಗಳ 61 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳು ಹಾಗೂ 4 ನಗರಗಳ ಕೊಳಚೆ ಪ್ರದೇಶಗಳಲ್ಲಿನ 862 ಕ್ಲಸ್ಟರ್‌ಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಆಯ್ಕೆಯಾದ ಬ್ಲಾಕ್‌ನ ಪ್ರತಿ ಕ್ಲಸ್ಟರ್‌ನಲ್ಲಿ ಒಂದು ಮಾದರಿ ಕ್ಲಸ್ಟರ್ ಶಾಲೆಯನ್ನು ಆಯ್ಕೆ ಮಾಡಲಾಗುತ್ತದೆ. ಈ ಮಾದರಿ ಕ್ಲಸ್ಟರ್ ಶಾಲೆಯ ಸಂಬಂಧಿಸಿದ ಕ್ಲಸ್ಟರ್‌ನ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದಡಿಯಲ್ಲಿ ಶಾಲೆಯಲ್ಲಿನ ಹಾಗೂ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸೌಲಭ್ಯವನ್ನು ಕಲ್ಪಿಸಾಲಾಗುವುದು. ಹೆಣ್ಣು ಮಕ್ಕಳಿಗೆ ಅಗತ್ಯವಾದ ವಿವಿಧ ಚಟುಚಟಿಕೆಗಳನ್ನು ನಡೆಸಲು ಕೊಠಡಿ, ನೀರು, ವಿದ್ಯುತ್, ಶೌಚಾಲಯ, ಕಲಿಕೋಪಕರಣ, ಕ್ರೀಡಾ ಸಾಮಗ್ರಿ, ಗ್ರಂಥಾಲಯ ಪುಸ್ತಕಗಳನ್ನು ಹಾಗೂ ಪ್ರತಿ ವರ್ಷ ಕ್ಲಸ್ಟರ್ ಶಾಲೆಗೆ ನಿಗದಿತ ಹಣದಲ್ಲಿ ಶಿಕ್ಷಕರ ತರಬೇತಿ, ಶಿಶುಪಾಲನಾ ಕೇಂದ್ರ ಪರಿಹಾರ ಬೋಧನೆ, ಶಿಕ್ಷಕರಿಗೆ ಪ್ರಶಸ್ತಿ ಹಾಗೂ ವೃತ್ತಿ ಶಿಕ್ಷಣಕ್ಕೆ ಅನುದಾನವನ್ನು ನೀಡಲಾಗುತ್ತದೆ.

## 11. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ವಿದ್ಯಾಶಾಲೆ) KGBV

ಪ್ರಾಥಮಿಕ ಹಂತದಲ್ಲಿ ಬಾಲಕಿಯರಿಗಾಗಿ ವಿಶೇಷವಾಗಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತ ಮಕ್ಕಳಿಗಾಗಿ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿನ ವಸತಿ ಸಹಿತ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಸನಿವಾಸ ಶಾಲೆಗಳನ್ನು ತೆರೆಯಲಾಗಿದೆ. 17 ಜಿಲ್ಲೆಗಳ 61 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 2005–06ನೇ ಸಾಲಿನಲ್ಲಿ ಈ ಸನಿವಾಸ ಶಾಲೆಗಳಲ್ಲಿ

ಪ್ರಾರಂಭಿಸಲಾಗಿದ್ದು ಮಹಿಳಾ ಸಮಾಖ್ಯಾ ಸಂಸ್ಥೆಯು 29 ಶಾಲೆಗಳನ್ನು ನಿರ್ವಹಿಸುತ್ತಿದೆ. ಪ್ರತಿ ಕೆ.ಜಿ.ಬಿ.ವಿ ಶಾಲೆಗೆ 10 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ 100 ಹೆಣ್ಣುಮಕ್ಕಳನ್ನು ದಾಖಲು ಮಾಡಲಾಗುತ್ತದೆ.ಈ ಶಾಲೆಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಮಕ್ಕಳಿಗೆ ಆದ್ಯತೆಯನ್ನು ನೀಡಲಾಗಿದೆ.ಈ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಎಲ್ಲಾ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು ಎಲ್ಲಾ ಹೆಣ್ಣು ಮಕ್ಕಳು ಶಿಕ್ಷಕಣವನ್ನು ಪಡೆಯಬೇಕೆಂಬುದೇ ಈ ಕಾರ್ಯಕ್ರಮದ ಮೂಲ ಉದ್ದೇಶ.

## ಸರ್ವ ಶಿಕ್ಷಣ ಅಭಿಯಾನದ ಪುನರ್‌ರೂಪಿತ ಗುರಿಗಳು

6 ರಿಂದ 14 ವಯೋಮಿತಿಯ ಎಲ್ಲಾ ಮಕ್ಕಳು ಗುಣಾತ್ಮಕ ಮೂಲಭೂತ ಶಿಕ್ಷಣ ಹಕ್ಕನ್ನು ಪಡೆಯುವಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಕಂಕಣಬದ್ಧವಾಗಿದೆ.ಈ ನಿಟ್ಟಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಬದಲಾವಣೆಗೆ ಪೂರಕವಾಗಿ ಸ್ಪಂದಿಸಿ ರೂಪಗೊಂಡ ಸರ್ವ ಶಿಕ್ಷಣ ಅಭಿಯಾನ ಪುನರ್‌ರೂಪಿತ ಗುರಿಗಳು:

* ಎಲ್ಲಾ ಮಕ್ಕಳು 2005ರ ಒಳಗೆ ಶಾಲೆಯಲ್ಲಿ ಕಲಿಕಾ ಯೋಜನಾ ಕೇಂದ್ರಗಳಲ್ಲಿ ಪರ್ಯಾಯ ಶಿಕ್ಷಣ ಕೇಂದ್ರಗಳಲ್ಲಿ ಅಥವಾ ಬಾ ಮರಳಿ ಶಾಲೆಯ ಶಿಬಿರಗಳ ಮೂಲಕ ದಾಖಲಾಗಿರಬೇಕು.
* 2007ರ ಒಳಗಾಗಿ ಪ್ರಸ್ತುತ ಅಸ್ತಿತ್ವದಲ್ಲಿರುವ ಎಲ್ಲಾ ಲಿಂಗ ಹಾಗೂ ಸಾಮಾಜಿಕ ವರ್ಗಗಳಲ್ಲಿ ಅಂತರವನ್ನು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಹಾಗೂ 2010ರ ಒಳಗಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ ಕಡಿಮೆ ಮಾಡುವುದು.
* 2010ರ ಒಳಗಾಗಿ ಸಾರ್ವತ್ರಿಕ ಉಳಿಯುವಿಕೆ.
* ಜೀವನ ಉಪಯುಕ್ತ ಶಿಕ್ಷಣಕ್ಕೆ ಒತ್ತು ನೀಡುವಂತಹ ತೃಪ್ತಿಕರ ಗುಣಮಟ್ಟದ ಮೂಲ ಶಿಕ್ಷಣವನ್ನು ಒದಗಿಸುವಲ್ಲಿ ಗಮನಹರಿಸುವುದು.
* ಪ್ರತೀ ಜಿಲ್ಲೆ ಹಾಗೂ ರಾಜ್ಯಗಳು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಪರಮೋಚ್ಚ ಗುರಿಗಳನ್ನು ತಮ್ಮದೇ ಆದ ನಿರ್ದಿಷ್ಟ ಸನ್ನಿವೇಶಗಳಿಗೆ 2010 ಮೀರದಂತೆ ಕಾಲಮಿತಿಯನ್ನು ನಿಗದಿ ಪಡಿಸಿಕೊಳ್ಳುವುದು.
* ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳ ಕಲಿಕೆಗೆ ಸಾಧನೆಯ ಮಟ್ಟವು ಅಪೇಕ್ಷಿತ ಮಟ್ಟದಲ್ಲಿ ವೃದ್ಧಿಯಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು.

**(ಸೂಚನೆ: ಹೆಚ್ಚಿನ ಮಾಹಿತಿಗಾಗಿ ಸರ್ವ ಶಿಕ್ಷಣ ಅಭಿಯಾನ ಒಂದು ಪಕ್ಷಿನೋಟ ಪುಸ್ತಕ ಓದಿರಿ)**

## ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣಕ್ಕಾಗಿ ಆಯೋಜಿಸಿರುವ ಕಾರ್ಯಕ್ರಮಗಳು

6 ರಿಂದ 14 ವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿ ನಿಯಮಿತವಾಗಿ ಹಾಜರಾಗಿ, ಅಪೇಕ್ಷಿತ ಮಟ್ಟದ ಕಲಿಕೆಯನ್ನುಂಟು ಮಾಡುವುದೇ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ.ಸಾರ್ವತ್ರೀಕರಣದ ಗುರಿಗಳಾದ ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಲಾತಿ ಮತ್ತು ಸಾರ್ವತ್ರಿಕ ಕಲಿಕೆ ಸಾಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಹೊಂಡಿವೆ.

## ಸಾರ್ವತ್ರಿಕ ಅವಕಾಶಗಳು

06 ರಿಂದ 14 ವರ್ಷದ ಪ್ರತಿಯೊಬ್ಬರು ಶಿಕ್ಷಣದ ಅವಕಾಶಗಳನ್ನು ಒದಗಿಸುವುದೇ ಸಾರ್ವತ್ರಿಕ ಅವಕಾಶಗಳು.

**ಅವುಗಳೆಂದರೆ:**

* ಪ್ರತಿಶತ 96ಕ್ಕಿಂತ ಹೆಚ್ಚಿನ ಹಳ್ಳಿ/ಜನವಸತಿ ಪ್ರದೇಶಗಳಲ್ಲಿ ತೆರೆಯಲಾಗಿದೆ.
* ಔಪಚಾರಿಕ ಶಾಲೆಗಳಿಗೆ ದಾಖಲಾಗದ ಮಕ್ಕಳಿಗೆ ಅವಕಾಶ ಕಲ್ಪಿಸುವ ಸಲುವಾಗಿ ಪರ್ಯಾಯ ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿದೆ.
* ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಮಕ್ಕಳ ಸಂಖ್ಯೆಯನ್ನಾದರಿತ ಅಗತ್ಯತೆಗನುಗುಣವಾಗಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ.
* ಜನವಸತಿ ಪ್ರದೇಶಗಳಲ್ಲಿ 1 ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆ ಇಲ್ಲದಿದ್ದಲ್ಲಿ ಹಾಗೂ 10ಕ್ಕಿಂತ ಹೆಚ್ಚು ಶಾಲ ವಯಸ್ಸಿನ ಮಕ್ಕಳಿರುವ ಜನವಸತಿ ಪ್ರದೇಶಗಳಲ್ಲಿ ಹೊಸ ಶಾಲೆಗಳನ್ನು ತೆರೆಯಲಾಗಿದೆ.
* ಹತ್ತಿರದ ಹಿರಿಯ ಪ್ರಾಥಮಿಕ ಶಾಲೆ 3 ಕಿ.ಮೀ ಗಿಂತ ಅಧಿಕವಾಗಿದ್ದು ಅಂತಹ ಜನವಸತಿ ಪ್ರದೇಶದ ಕಿರಿಯ ಪ್ರಾಥಮಿಕ ಶಾಲೆಯ 5ನೇ ಇಯತ್ತೆಯಲ್ಲಿ ತೇರ್ಗಡೆಯಾದ ಮಕ್ಕಳ ಸಂಖ್ಯೆ 15 ಮೀರಿದರೆ ಅಂತಹ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಪರಿವರ್ತಿಸಲಾಗುತ್ತದೆ.
* ಎಲ್ಲ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ, ವಿದ್ಯುತ್,ಶಾಲಾಕಾಂಪೌಡ್, ಆಟದ ಮೈದಾನ ಮತ್ತು ಇತರೆ ಸೌಲಭ್ಯಗಳಿಗೆ ವಿವಿಧ ಯೋಜನೆಯಡಿಯಲ್ಲಿ ಅನುದಾನ ನೀಡಲಾಗುತ್ತಿದೆ.
* ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

* ಶಾಲಾ ಕಟ್ಟಡದ ಸಮರ್ಪಕ ನಿರ್ವಹಣೆಗೆ ಸುಣ್ಣಬಣ್ಣ, ಕೈತೋಟ ನಿರ್ವಹಣೆ ಮುಂತಾದ ಕೆಲಸಗಳಿಗೆ ಪ್ರತಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
* ವಿಶೇಷ ಅಗತ್ಯತೆಯುಳ್ಳ ಮಕ್ಕಳ ಅನುಕೂಲಕ್ಕಾಗಿ ವಿಶೇಷ ಕೊಠಡಿ ವ್ಯವಸ್ಥೆ ಮತ್ತು ರ್‍ಯಾಂಪ್ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ.

**ಸಾರ್ವತ್ರಿಕ ದಾಖಲಾತಿ**

'ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸುವುದೇ ಸಾರ್ವತ್ರಿಕ ದಾಖಲಾತಿ.'

**ಸಾರ್ವತ್ರಿಕ ದಾಖಲಾತಿಗಳಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು**

**ಮಕ್ಕಳ ಗಣತಿ:** 1961ರ "ಕಡ್ಡಾಯ ಪ್ರಾಥಮಿಕ ಶಿಕ್ಷಣ" ಕಾಯ್ದೆನ್ವಯ 1963 ರಿಂದಲೂ ಪ್ರತಿ ವರ್ಷ ಮಕ್ಕಳ ಗಣತಿಯನ್ನು ಮಾಡಲಾಗುತ್ತಿದೆ. ನವಜಾತಿ ಶಿಶುವಿನಿಂದ 14 ವರ್ಷ ವಯಸ್ಸಿನವರೆಗಿನ ಮಕ್ಕಳನ್ನು ಗಣತಿ ಮಾಡಲಾಗುವುದು.ಈ ಸಮೀಕ್ಷೆಯಲ್ಲಿ ಶಾಲಾ ವಯೋಮಾನದ, ಶಾಲೆ ಬಿಟ್ಟ, ಶಾಲೆಯಲ್ಲಿರುವ ಅಂಗವಿಕಲ, ವಲಸೆ, ಕೊಳಚೆ ಪ್ರದೇಶಗಳ ಮಕ್ಕಳ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸಲಾಗುವುದು.

**ದಾಖಲಾತಿ ಆಂದೋಲನ:** ಮಕ್ಕಳ ಗಣತಿಯ ಪ್ರಕಾರ ಜೂನ್ ತಿಂಗಳಲ್ಲಿ ಶಾಲೆಗೆ ದಾಖಲು ಮಾಡಿಕೊಳ್ಳಲು ದಾಖಲಾತಿ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

**ವಿಶೇಷ ದಾಖಲಾತಿ:** ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಹಮ್ಮಿಕೊಂಡಿರುವ ಅನೇಕ ಕಾರ್ಯ ತಂತ್ರಗಳು ನೆರವಾಗುತ್ತಿವೆ. ಈ ಕಾರ್ಯತಂತ್ರಗಳನ್ನು ಹೊರತುಪಡಿಸಿ, ಇನ್ನೂ ಅನೇಕ ಕಾರಣಗಳಿಂದ ಮಗು ಶಾಲೆಯಿಂದ ಹೊರಗುಳಿಯುವ ಸಂಭವಗಳು ಇದ್ದು ಇಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವೇ ವಿಶೇಷ ದಾಖಲಾತಿ ಆಂದೋಲನ.

**ಸಂಚಾರಿ ಶಾಲೆ:** ಸಂಚಾರಿ ಶಾಲೆಯು ಒಂದು ನೂತನ ಮಾದರಿ ಯೋಜನೆಯಾಗಿದೆ. ಈ ಕಾರ್ಯಕ್ರಮವು 1999 ರಿಂದ ಜಾರಿಗೆ ಬಂದಿದೆ. ಶಾಲಾ ಅರ್ಹ ವಯಸ್ಸಿನ ಮಕ್ಕಳ ಹತ್ತಿರ ಹೋಗಬಾರದೇಕೆ? ಎಂಬ ಪ್ರಶ್ನೆಗೆ ಉತ್ತರವಾಗಿ ಮತ್ತು ಮಕ್ಕಳಿರುವ ಸ್ಥಳದಲ್ಲಿ ಶಾಲೆ ತೆರೆಯಲು ಅಸಾಧ್ಯವಾದಾಗ ಅಂತಹ ಮಕ್ಕಳಿಗೆ ಶಿಕ್ಷಣ ನೀಡಲು ಶಾಲೆಗೆ ಕರೆದೊಯ್ಯುವ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ ಹಾಗೂ ಸಂಚಾರಿ ಶಾಲೆಯ ಬಸ್ಸಿನಲ್ಲಿಯೇ ತರಗತಿ ನಡೆಸಲು ಅನುಕೂಲವಾಗುವಂತೆ, ಬಸ್ಸಿನಲ್ಲಿಯೇ ವ್ಯವಸ್ಥೆಯನ್ನು ಕಲ್ಪಿಸುವುದಾಗಿದೆ.

**ಟೆಂಟ್ ಶಾಲೆ:** ಜೀವನೋಪಾಯಕ್ಕಾಗಿ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ವಲಸೆ ಹೋಗುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳನ್ನೂ ಕರೆದೊಯ್ಯುತ್ತಾರೆ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವಲಸೆ ಸಂದರ್ಭಗಳಲ್ಲಿ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವವರ ಸಂಖ್ಯೆ ಮತ್ತು ದೀರ್ಘ ಗೈರುಹಾಜರಿ ಹೆಚ್ಚಾಗುತ್ತದೆ. ಈ ಸಮಸ್ಯೆಯನ್ನು ನಿಯಂತ್ರಿಸಲು 'ಎಲ್ಲಿ ವಲಸೆಯೋ ಅಲ್ಲಿ ಶಾಲೆ' ಎಂಬ ತತ್ವದ ಆಧಾರದ ಮೇಲೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ.

**ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆ.ಜಿ.ಬಿ.ವಿ):** ಶಿಕ್ಷಣದ ಅವಕಾಶವಂಚಿತ ಗುಂಪುಗಳ ಅರ್ಹ ವಯಸ್ಸಿನ ಬಾಲಕಿಯರಿಗಾಗಿ ವಸತಿ ಶಾಲೆಯ ಅವಕಾಶ ಮತ್ತು ಗುಣಾತ್ಮಕ ಶಿಕ್ಷಣದ ಸೌಲಭ್ಯಗಳನ್ನು ಖಾತ್ರಿ ಪಡಿಸಲು ಈ ಯೋಜನೆಯನ್ನು ತರಲಾಗಿದೆ.

**ಚಿಣ್ಣರ ಅಂಗಳ:** ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟ ಮಕ್ಕಳಿಗೆ 60 ದಿನಗಳ 'ಸೇತುಬಂಧ' ಕಾರ್ಯಕ್ರಮ ಹಮ್ಮಿಕೊಂಡು ಮೌಲ್ಯಮಾಪನ ಮಾಡಿ ನಂತರ ಅವರ ಕಲಿಕಾ ಮಟ್ಟಕ್ಕೆ ತಕ್ಕಂತೆ ವಿವಿಧ ವರ್ಗಗಳಿಗೆ ದಾಖಲಾತಿ ಮುಖ್ಯವಾಹಿನಿಗೆ ತರುವುದು. ಇದು ವಸತಿ ಸಹಿತ ಮತ್ತು ವಸತಿರಹಿತ ಎರಡು ರೂಪದಲ್ಲಿರುತ್ತದೆ.

**ಸಾರ್ವತ್ರಿಕ ಉಳಿಕೆ**

ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಶಾಲೆಯಲ್ಲಿಯೇ ಉಳಿಯುವಂತೆ ಮಾಡುವುದು ಮಹತ್ವದ ಅಂಶವಾಗಿದೆ.ಆದರೆ, ಹಲವಾರು ಮಕ್ಕಳು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಕಾರಣಗಳಿಂದಾಗಿ ಮಧ್ಯದಲ್ಲಿ ಶಾಲೆಯನ್ನು ಬಿಡುವುದು ಕಂಡುಬಂದಿರುತ್ತದೆ. ಇಂತಹ ಮಕ್ಕಳನ್ನು ಶಾಲೆಯಲ್ಲಿ ಉಳಿಸಿ ಗುಣಾತ್ಮಕ ಶಿಕ್ಷಣ ಒದಗಿಸುವ ದೃಷ್ಠಿಯಿಂದ ಸರ್ಕಾರದ ಅನೇಕ ಯೋಜನೆ, ಕಾರ್ಯಕ್ರಮಗಳ ಮೂಲಕ ಮಕ್ಕಳಿಗಾಗಿ ವಿವಿಧ ಸವಲತ್ತುಗಳನ್ನು ನೀಡುತ್ತಿದೆ.ತ್ತ

**ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ**

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಹತ್ತನೇ (1–10) ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೂ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರ ನೀಡಲಾಗುತ್ತಿದೆ.

**ಅಕ್ಷರ ದಾಸೋಹ**

ಒಂದರಿಂದ ಹತ್ತನೇ (1–10) ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೂ ಪ್ರತಿದಿನ ಮಧ್ಯಾಹ್ನ ಬಿಸಿಊಟ/ ಅಕ್ಷರ ದಾಸೋಹದ ವ್ಯವಸ್ಥೆ ಮಾಡಲಾಗಿದೆ.

**ಶುಲ್ಕ ವಿನಾಯಿತಿ**

ಒಂದರಿಂದ ಹತ್ತನೇ (1–10) ತರಗತಿಯಲ್ಲಿ ವ್ಯಾಸಂಗ ಮಾಡುವ ಪ.ಜಾತಿ / ಪ.ವರ್ಗದ ಗಂಡು ಮಕ್ಕಳಿಗೆ ಹಾಗೂ ಎಲ್ಲಾ ಹೆಣ್ಣುಮಕ್ಕಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.

**ಉಚಿತ ಬ್ಯಾಗ್ ಮತ್ತು ನೋಟ್ ಪುಸ್ತಕ**

5 ಮತ್ತು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ / ಪ. ವರ್ಗದ ಎಲ್ಲಾ ಮಕ್ಕಳಿಗೆ ಉಚಿತ ಬ್ಯಾಗ್ ಮತ್ತು 5, 6 ಮತ್ತು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ / ಪ.ವರ್ಗದ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ನೀಡಲಾಗುತ್ತಿದೆ.

**ವಿದ್ಯಾರ್ಥಿ ವೇತನ**

* ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೌಲಭ್ಯ.
* ಹಿಂದುಳಿದ, ಅಲ್ಪ ಸಂಖ್ಯಾತ / ಪ.ಜಾತಿ / ಪ.ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ.
* ಅಂಗವಿಕಲ ಮಕ್ಕಳಿಗೆ ವಿದ್ಯಾರ್ಥಿವೇತನ.
* ಗ್ರಾಮೀಣ ಹೆಣ್ಣು ಮಕ್ಕಳ ಹಾಜರಾತಿ ವಿದ್ಯಾರ್ಥಿವೇತನ. ಇದನ್ನು 5 ರಿಂದ 10ನೇ ತರಗತಿಯ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ.

**ಉಚಿತ ವಿದ್ಯಾರ್ಥಿನಿಲಯ**

ಪ.ಜಾತಿ / ಪ.ವರ್ಗದ ಮತ್ತು ಇತರೆ ಹಿಂದುಳಿದ ವರ್ಗದ ಮಕ್ಕಳಿಗೆ ಉಚಿತ ವಸತಿ ನಿಲಯಗಳ ಸೌಲಭ್ಯ ಹಾಗೂ ವಿಶೇಷ ಬೋಧನಾ ವ್ಯವಸ್ಥೆ ಮಾಡಲಾಗಿದೆ.

**ವೈದ್ಯಕೀಯ ತಪಾಸಣೆ ಮತ್ತು ಸುವರ್ಣ ಆರೋಗ್ಯ ತಪಾಸಣೆ**

ಪ್ರತಿ ವರ್ಷವೂ ಮಕ್ಕಳ ವೈದ್ಯಕೀಯ ತಪಾಸಣೆ ಮಾಡುವುದು ಜೊತೆಗೆ ಒಂದು ತಿಂಗಳು ಸುವರ್ಣ ಆರೋಗ್ಯ ತಪಾಸನೆ ಮಾಡಲಾಗುತ್ತಿದೆ.

**ಉಚಿತ ಸೈಕಲ್ ವಿತರಣೆ**

ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಬಿ.ಪಿ.ಎಲ್. ಅಂತ್ಯೋದಯ, ಅಕ್ಷಯ, ಭಾಗ್ಯೋದಯ ಕಾರ್ಡ್ ಹೊಂದಿರುವ 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ ಮಾಡಲಾಗುವುದು.

**ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ**

ಪ್ರತಿಭಾ ಕಾರಂಜಿ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ವಿವಿಧ ಸ್ಪರ್ಧೆಗಳ ಮೂಲಕ ಹೊರತರಲಾಗುವುದು. (ಶಾಲಾಮಟ್ಟದಿಂದ ರಾಜ್ಯ ಮಟ್ಟದವರೆಗೆ)

**ಚಿಣ್ಣರ ಕರ್ನಾಟಕ ದರ್ಶನ**

ಪ್ರತಿ ವರ್ಷವೂ ಬ್ಲಾಕ್ ಹಂತದಲ್ಲಿ ಮಕ್ಕಳಿಗೆ "ಚಿಣ್ಣರ ಕರ್ನಾಟಕ ದರ್ಶನದ" ಅವಕಾಶ ಕಲ್ಪಿಸಲಾಗಿದೆ. 7ನೇ ತರಗತಿ ಪ.ಜಾತಿ / ಪ.ವರ್ಗದ ಮಕ್ಕಳಿಗೆ ಹಾಗೂ ಪ್ರತಿಭಾ ಕಾರಂಜಿ, ಕ್ರೀಡೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದವರಿಗೆ ಅವಕಾಶ ನೀಡಲಾಗುತ್ತಿದೆ.

**ವಿಶೇಷ ವಸತಿ ಶಾಲೆಗಳ ವ್ಯವಸ್ಥೆ**

ಪ್ರತಿಭಾವಂತ ಮಕ್ಕಳಿಗೆ ನವೋದಯ ವಸತಿ ಶಾಲೆ, ಮುರಾರ್ಜಿವಸತಿ ಶಾಲೆ ಹಾಗೂ ಕುವೆಂಪು ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

**ವಿದ್ಯಾರ್ಥಿ ಸುರಕ್ಷಾ ವಿಮೆ**

ಅಪಘಾತದಿಂದ ಶಾಲಾ ವಿದ್ಯಾರ್ಥಿಗಳಿಗೆ ಆಗಬಹುದಾದ ಅನಾಹುತಗಳನ್ನು ಗಮನದಲ್ಲಿಟ್ಟುಕೊಂಡು ಅದರ ಪರಿಹಾರಕ್ಕಾಗಿ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ವಿದ್ಯಾರ್ಥಿ ಸುರಕ್ಷಾ ವಿಮೆ ಯೋಜನೆಯನ್ನು ರೂಪಿಸಲಾಗಿದೆ.ಈ ಯೋಜನೆಯನ್ನು 2001–02 ರಿಂದ ಜಾರಿಗೆ ತರಲಾಗಿದೆ.

**ಸಾರ್ವತ್ರಿಕ ಕಲಿಕೆ**

ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಮುಖ್ಯವಾಹಿನಿಯಲ್ಲಿ ಉಳಿದು ಅಪೇಕ್ಷಿತ ಮಟ್ಟದ ಕಲಿಕೆಯಾಗುವಂತೆ ಮಾಡುವುದು.ಅಪೇಕ್ಷಿತ ಕಲಿಕೆಯಾಗುವಂತೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.ಇತ್ತೀಚೆಗೆ ಕಲಕೆಯನ್ನು ಆಂದೋಲನದ ರೂಪದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

**ಅವುಗಳೆಂದರೆ**

**ಶಿಕ್ಷಕರ ನೇಮಕ:** ಪಾರದರ್ಶಕ ನೀತಿ ಅನುಸರಿಸಿ ಉತ್ತಮ ಸಾಮರ್ಥ್ಯ ಹೊಂದಿದ ಶಿಕ್ಷಕರ ನೇಮಕ ಮಾಡಲಾಗುತ್ತದೆ.

**ಶಿಕ್ಷಕರ ಸಬಲೀಕರಣ:** ಶಿಕ್ಷಕರಿಗೆ ಸೇವಾನಿರತ ತರಬೇತಿಗಳನ್ನು ಹಮ್ಮಿಕೊಂಡು ಅಪೇಕ್ಷಿತ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ.

**ಸಾಮರ್ಥ್ಯಾಧಾರಿತ ಪಠ್ಯಪುಸ್ತುಕ:** ಮಕ್ಕಳ ಗಳಿಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ಗಮನದಲ್ಲಿರಿಸಿಕೊಂಡು ಪಠ್ಯಪುಸ್ತುಕ ಸಿದ್ಧಪಡಿಸಲಾಗಿದೆ.

**ಬೋಧನಾ ವಿಧಾನಗಳು:**ನವೀನ ಬೋಧನಾ ವಿಧಾನಗಳಾದ 'ನಲಿ–ಕಲಿ', ಚೈತನ್ಯ ಮಾದರಿಯ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

**ಶಿಕ್ಷಣದಲ್ಲಿ ತಂತ್ರಜ್ಞಾನ:** ತರಗತಿಯಲ್ಲಿ ಕಲಿಕೆಯನ್ನು ಸರಳ, ಸಂತಸ, ಸುಲಭವಾಗಿಸಲು ಬೋಧನೆಯಲ್ಲಿ ತಂತ್ರಜ್ಞಾನ ಅಳವಡಿಸಲಾಗಿದೆ.

**ಪರಿಹಾರ ಬೋಧನೆ:** ಕಲಿಕೆಯಲ್ಲಿ ಹಿಂದುಳಿದ ಮಗುವನ್ನು ಗುರುತಿಸಿ ಪರಿಹಾರ ಬೋಧನೆ ನೀಡಿ ಪ್ರಭುತ್ವ ಮಟ್ಟದ ಕಲಿಕೆಯನ್ನುಂಟು ಮಾಡಲಾಗುತ್ತಿದೆ.

**ಸಹಪಠ್ಯ ಚಟುವಟಿಕೆ:** ಮಗುವಿನ ಸರ್ವತೋಮುಖ ಕಲಿಕೆಯ ಉದ್ದೇಶವಿಟ್ಟುಕೊಂಡು ಸಹ ಪಠ್ಯ ಚಟುವಟಿಕೆ ಅದ್ಯತೆನೀಡಲಾಗುತ್ತಿದೆ.

**ಶಾಲಾ ಹಂತದ ತರಬೇತಿ:** ಮಕ್ಕಳ ಕಲಿಕಾ ಸಮಸ್ಯೆಗಳು ಮತ್ತು ಕ್ಲಿಷ್ಟ ಪರಿಕಲ್ಪನೆಗಳನ್ನು ಶಾಲಾ ಹಂತದಲ್ಲಿಯೇ ಮುಖಾಮುಖಿ ಚರ್ಚಿಸಿ ಪರಿಹಾರ ನೀಡಲಾಗುತ್ತಿದೆ.


**ಶಿಕ್ಷಕರಿಗೆ ಅನುದಾನ:** ಶಿಕ್ಷಕರು ಸ್ವತಃ ಕಡಿಮೆ ವೆಚ್ಚದ ಕಲಿಕಾ ಸಾಮಗ್ರಿಗಳನ್ನು ತಯಾರಿಸಿಕೊಂಡು ಪರಿಣಾಮಕಾರಿಯಾಗಿ ಕಲಿಸಲು ಪ್ರೋತ್ಸಾಹಿಸುವ ದೃಷ್ಠಿಯಿಂದ ಪ್ರತಿ ಶಿಕ್ಷಕರಿಗೆ ವಾರ್ಷಿಕ 500 ರೂಪಾಯಿಗಳ ಅನುದಾನ ನೀಡಲಾಗುತ್ತಿದೆ.

**ಸಮುದಾಯದತ್ತ ಶಾಲೆ:** ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪೋಷಕರು ಶಿಕ್ಷಕರನ್ನು ಭೇಟಿಮಾಡಿ ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ತಿಳಿದುಕೊಳ್ಳಲು ಕಾರ್ಯತಂತ್ರಗಳನ್ನು ರೂಪಿಸಲಾಗಿದೆ. ಶಿಕ್ಷಣ ಸಾರ್ವತ್ರೀಕರಣದ ಆಯಾಮಗಳಾದ ಸಾರ್ವತ್ರಿಕ ದಾಖಲಾತಿ / ಸಾರ್ವತ್ರಿಕ ಉಳಿಕೆ ಹಾಗೂ ಸಾರ್ವತ್ರಿಕ ಕಲಿಕೆಗಳನ್ನು ಉಂಟುಮಾಡಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸರಿಯಷ್ಟೆ ಸಾರ್ವತ್ರಿಕ ದಾಖಲಾತಿಗಾಗಿ ಎಂದು ಒಂದು ಕಾರ್ಯಕ್ರಮ ಹಮ್ಮಿಕೊಂಡಾಗ (ಉದಾ: ಬಾ ಮರಳಿ ಶಾಲೆಗೆ) ಈ ಕಾರ್ಯಕ್ರಮವು ದಾಖಲಾತಿಗಾಗಿಯಾದರೂ, ಸಾರ್ವತ್ರೀಕರಣದ ಇತರೆ ಆಯಾಮಗಳನ್ನು ಒಳಗೊಂಡಿರುತ್ತದೆ. ಹಾಗಾಗಿ ಯಾವುದೇ ಒಂದು ಕಾಯಕ್ರಮ ಸಾರ್ವತ್ರೀಕರಣದ ಎಲ್ಲಾ ಆಯಾಮಗಳನ್ನು ಈಡೇರಿಸುವ ಸಾಮರ್ಥ್ಯ ಹೊಂದಿರುತ್ತದೆ.

**ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ವಿಚಾರವಾಗಿ ಹೆಚ್ಚಿನ ಮಾಹಿತಿಗೆ ಈ ವೆಬ್ ಲಿಂಕ್ ಅನುಸರಿಸಿ:**

1. **http://mooc.nios.ac.in/mooc/pluginfile.php?file=/12483/course/summary/Course-501%20Block-2%20Kannada.pdf**


## ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ




ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಪ್ರೌಢಶಾಲಾ ಶಿಕ್ಷಣ ಸಾರ್ವತ್ರೀಕರಣ ಹಿನ್ನೆಲೆಯಲ್ಲಿ 14 ರಿಂದ 18 ವರ್ಷದ ವಯೋಮಿತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಪ್ರೌಢಶಾಲಾ ಶಿಕ್ಷಣ ಲಭ್ಯವಾಗುವಂತೆ ಅವಶ್ಯಕ ಸೌಲಭ್ಯವನ್ನು ಕಲ್ಪಿಸುವ ಕಾಣ್ಕೆ ಹೊಂದಿರುವ ಕಾರ್ಯಕ್ರಮವಾಗಿದೆ.ಯಾವುದೇ ಜಾತಿ, ಧರ್ಮ, ಲಿಂಗ, ಸಾಮಾಜಿಕ, ಆರ್ಥಿಕ, ತಾರತಮ್ಯವನ್ನು ಮಾಡದೇ ಎಲ್ಲರಿಗೂ ಪ್ರೌಢಶಿಕ್ಷಣವನ್ನು ತಲುಪಿಸುವ ಮಹತ್ವಾಕಾಂಕ್ಷೆಯನ್ನು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹೊಂದಿದೆ.

### ಗುರಿ/ಉದ್ದೇಶಗಳು

- 2020ರೊಳಗೆ ಪ್ರೌಢಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವುದು
- ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಹಾಜರಾತಿ, ಗುಣಮಟ್ಟದ ಶಿಕ್ಷಣ ಖಾತ್ರಿಗೊಳಿಸುವುದು.
- ಪ್ರೌಢಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ಕ್ರಿಯಾಯೋಜನೆ ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.
- ಎಲ್ಲಾ ಪ್ರೌಢಶಾಲೆಗಳಲ್ಲೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.
- ನಿರ್ದಿಷ್ಟಪಡಿಸಿದ ಪಠ್ಯಕ್ರಮ, ಕಲಿಸುವ ಮಾಧ್ಯಮ ಮತ್ತು ತರಬೇತಿಗೆ ಅವಕಾಶ ಮಾಡಿಕೊಡುವುದು.




ಸಮಗ್ರ ಶಿಕ್ಷಣ ಅಭಿಯಾನ

*The **Goal SDG-4.1** states that "By 2030, ensure that all boys and girls complete free, equitable and quality primary and secondary education leading to relevant and effective learning outcomes".*

*Further the **SDG 4.5** states that "By 2030, eliminate gender disparities in education and ensure equal access to all levels of Education and vocational training for the vulnerable, including persons with*

**The major objectives of the Scheme** are

- Provision of quality education and enhancing learning outcomes of students;
- Bridging Social and Gender Gaps in School Education; Ensuring equity and inclusion at all levels of school education;
- Ensuring minimum standards in schooling provisions;
- Promoting Vocationalisation of education; Support States in implementation of Right of Children to Free and Compulsory Education (RTE) Act, 2009; and
- Strengthening and up-gradation of SCERTs/State Institutes of Education and DIET as a nodal agency for teacher training.

**The main outcomes of the Scheme** are envisaged as Universal Access, Equity and Quality, promoting Vocationalisation of Education and strengthening of Teacher Education Institutions (TEIs).

The Scheme will be implemented as a Centrally Sponsored Scheme by the Department through a single State Implementation Society (SIS) at the State level. At the National level, there would be a Governing Council headed by Minister of Human Resource Development and a Project Approval Board (PAB) headed by Secretary, Department of School Education and Literacy. The Governing Council will be empowered to modify financial and programmatic norms and approve the detailed guidelines for implementation within

the overall Framework of the scheme. Such modifications will include innovations and interventions that would improve the quality of school education. The Department will be assisted by a Technical Support Group (TSG) at Educational Consultants of India Limited (EdCIL) to provide technical support in functional areas pertaining to access, equity andquality education by merging the TSGs of the Schemes of SSA, RMSA and TE. States would be expected to bring a single Plan for the entire school education sector.

The focus of interventions will be the teacher and use of technology to deliver quality education.
**The major interventions, across all levels of school education, proposed under the scheme are:**
(i) Universal Access including Infrastructure Development and Retention;
(ii) Gender and Equity;
(iii) Inclusive Education;
(iv) Quality;
(v) Financial support for Teacher Salary;
(vi) Digital initiatives;
(vii) RTE Entitlements including uniforms, textbooks etc.;
(viii) Pre-nursery Education;
(ix) Vocational Education;
(x) Sports and Physical Education;
(xi) Strengthening of Teacher Education and Training;
(xii) Monitoring;
(xiii) Programme Management; and
(xiii) National Component.

It is proposed that preference in the interventions would be given to Educationally Backward Blocks (EBBs), LWEs, Special Focus Districts (SFDs), Border areas and the 115 Aspirational districts. The programmatic and financial norms under the Scheme are detailed at **Annexure-A.**

The Scheme will help improve the transition rates across the various levels of school education and aid in promoting universal access to children to complete school education. The integration of Teacher Education would facilitate effective convergence and linkages between different support structures in school education through interventions such as a unified training calendar, innovations in pedagogy, mentoring and monitoring, etc. This single Scheme will enable the SCERT to become the nodal agency for conduct and monitoring of all in-service training programmes to make it need-focused and dynamic. It would also enable reaping the benefits of technology and widening the access of good quality education across all States and UTs and across all sections of the Society.


1. **http://mhrd.gov.in/union-minister-human-resource-development-shri-prakash-javadekar-will-launch-%E2%80%98samagra-shiksha%E2%80%99**
2. **http://mhrd.gov.in/overview-ee**
3. **http://mhrd.gov.in/overview-se**

# ಅಧ್ಯಾಯ–1
# ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005

1986ರ ರಾಷ್ಟ್ರೀಯ ಶಿಕ್ಷಣದಲ್ಲಿ ಸೂಚಿಸಿದಂತೆ ಐದು ವರ್ಷಗಳಿಗೊಮ್ಮೆ ಪಠ್ಯಕ್ರಮದಲ್ಲಿ ಬದಲಾವಣೆ ತರುವ ಕೆಲಸ ನಿಯಮಿತವಾಗಿ ನಡೆಯುತ್ತಿದೆ.ಮಕ್ಕಳ ಮೇಲೆ ಪುಸ್ತಕಗಳ (ವಿಷಯ) ಹೊರೆ ಹೆಚ್ಚಾಗುತ್ತಿರುವುದನ್ನು ಮನಗಂಡು ಸರ್ಕಾರ 2004ರಲ್ಲಿ ವಿನೂತನವಾದ ಮಕ್ಕಳ ಕಲಿಕೆಗೆ ಪೂರಕವಾಗಿ ಪಠ್ಯಕ್ರಮ ರಚಿಸಲು ಎನ್.ಸಿ.ಇ.ಆರ್.ಟಿ.ಯನ್ನು ಕೇಳಿತು.ಪ್ರೊ.ಯಶಪಾಲ್‌ರವರ ಅಧ್ಯಕ್ಷತೆಯಲ್ಲಿ ಒಂದು ರಾಷ್ಟ್ರೀಯ ಚಾಲನಾ ಸಮಿತಿ ಮತ್ತು 21 ರಾಷ್ಟ್ರೀಯ ಕೇಂದ್ರ ಗುಂಪುಗಳ (National CoreGroup) ರಚನೆಯಾಯಿತು.21 ರಾಷ್ಟ್ರೀಯ ಕೇಂದ್ರ ಗುಂಪುಗಳು ನೀಡಿದ ಸಲಹೆ ಮೇರೆಗೆ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005 ರಚನೆಯಾಯಿತು.

ಇಂದು ರಾಷ್ಟ್ರಾದ್ಯಂತ 2005 ರ ಪಠ್ಯಕ್ರಮ ಹೆಚ್ಚು ಪ್ರಾಮುಖ್ಯತೆ ಪಡೆದಿದೆ.ಏಕೆಂದರೆ ಬೋಧನೆ–ಕಲಿಕೆ ಹಾಗೂ ಒಟ್ಟಾರೆ ಶಿಕ್ಷಣದ ಚಿಂತನೆಗಳಲ್ಲಿ ಆಮೂಲಾಗ್ರ ಬದಲಾವಣೆ ಬಯಸುತ್ತಿದೆ.ರಾಷ್ಟ್ರೀಯ ಪಠ್ಯಕ್ರಮ 2005ರ ಆಶಯದಂತೆ ರಾಜ್ಯ ಪಠ್ಯಕ್ರಮದಲ್ಲಿ ಬದಲಾವಣೆ ತರಲು ಈಗಾಗಲೇ ಅನೇಕ ರಾಜ್ಯಗಳು ಪ್ರಯತ್ನ ಪ್ರಾರಂಭಿಸಿವೆ. ಅದರಂತೆ ಕರ್ನಾಟಕ ರಾಜ್ಯದಲ್ಲೂ ಕೂಡ 1 ರಿಂದ 10ನೇ ತರಗತಿಯವರೆಗೆ ಹೊಸ ಪಠ್ಯಕ್ರಮ ರಚನೆಯಾಗಿದ್ದು, ವಿವಿಧ ಹಂತಗಳಲ್ಲಿ ಪರಿಶೀಲನಾ ಕೆಲಸ ಪ್ರಗತಿಯಲ್ಲಿದೆ.ಮುಂದಿನ ಒಂದೆರಡು ವರ್ಷಗಳಲ್ಲಿ ಹೊಸ ಪಠ್ಯಕ್ರಮಾಧಾರಿತ ಪಠ್ಯ ಪುಸ್ತಕಗಳು ಚಾಲ್ತಿಗೆ ಬರಲಿವೆ.

**ಮಾರ್ಗದರ್ಶಿ ತತ್ವಗಳು:**ಮಕ್ಕಳ ಮೇಲೆ ಕಲಿಕೆ ಒಂದು ಹೊರೆಯಾಗದಂತೆ ಮತ್ತು ಒತ್ತಡವನ್ನುಂಟು ಮಾಡದಂತೆ ಪಠ್ಯಕ್ರಮದ ವಿಕಾಸಕ್ಕೆ ಮಾರ್ಗದರ್ಶಿ ತತ್ವಗಳನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು ಪ್ರಸ್ತುತ ಪಡಿಸುತ್ತಿದೆ.

- ಶಾಲೆಯ ಹೊರವಾತಾವರಣಕ್ಕೆ ತರಗತಿಯ ಜ್ಞಾನವನ್ನು ಜೋಡಿಸುವುದು.
- ಕಂಠಪಾಠ ಪದ್ಧತಿಯಿಂದ ಕಲಿಕೆಯು ದೂರ ಸರಿಯುತ್ತಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.
- ಪಠ್ಯಪುಸ್ತಕಗಳನ್ನು ಮೀರಿ ಕಲಿಕೆ ಶ್ರೀಮಂತಗೊಳ್ಳುವಂತೆ ಪಠ್ಯಕ್ರಮದಲ್ಲಿ ಅವಕಾಶ ಕಲ್ಪಿಸುವುದು.
- ಪರೀಕ್ಷೆಗಳನ್ನು ಹೆಚ್ಚು ಸುಸಂಗತಗೊಳಿಸುವುದು ಮತ್ತು ಅದನ್ನು ತರಗತಿ ಕೋಣೆಯ ಬದುಕಿನೊಂದಿಗೆ ಒಗ್ಗೂಡಿಸುವುದು.
- ರಾಷ್ಟ್ರೀಯ ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಅನನ್ಯತೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವವರ ಬಗ್ಗೆ ಕಳಕಳಿಯಿಂದ ವರ್ತಿಸುವುದು ಅಗತ್ಯ.

ರಾಷ್ಟ್ರೀಯ ಪಠ್ಯಕ್ರಮ 2005ರಲ್ಲಿ ಶಿಶು ಕೇಂದ್ರಿತ ಶಿಕ್ಷಣ ಹಾಗೂ ಜ್ಞಾನ ಮತ್ತು ಅರಿವಿನ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ:

### ಶಿಶು ಕೇಂದ್ರಿತ ಶಿಕ್ಷಣ

- ಮಕ್ಕಳ ಅನುಭವವನ್ನು ಆಧರಿಸಿ ಕಲಿಕಾ ವಾತಾವರಣ.
- ಚಟುವಟಿಕೆ ಆಧಾರಿತ ಕಲಿಕೆ.
- ಮಗುವಿನ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶ.
  (ಶಾಲೆಯಲ್ಲಿ ಹಾಗೂ ಶಾಲಾ ವಾತಾವರಣದ ಹೊರಗೆ)
- ಮಗುವಿಗೆ ಭದ್ರತಾ ಮನೋಭಾವ ಬೆಳೆಸುವುದು (ದೈಹಿಕ, ಭಾವನಾತ್ಮಕ)

### ಜ್ಞಾನ ಮತ್ತು ಅರಿವು

- ಭಾಷಾ ಬೆಳವಣಿಗೆಗೆ ಹೆಚ್ಚಿನ ಅವಕಾಶ ಒದಗಿಸುವುದು.
- ಜ್ಞಾನವನ್ನು ಭಾಷೆಯ ಮೂಲಕ ಪಡೆದ ಅನುಭವಗಳನ್ನು ರಚನೆಗಳೆಂದು ತಿಳಿಸುವುದು.
- ಮಕ್ಕಳ ಮೂಲ ಸಾಮರ್ಥ್ಯಗಳ ಬೆಳವಣಿಗೆಗೆ (ಅರಿವು ಮೌಲ್ಯಗಳು ಮತ್ತು ಕೌಶಲ) ಆದ್ಯತೆ ನೀಡುವುದು.
- ಅರಿವಿನ ವಿವಿಧ ರೂಪಗಳನ್ನು ಮಗುವಿಗೆ ದೊರಕುವಂತೆ ಬೋಧನಾ ಚಟುವಟಿಕೆ ರೂಪಿಸುವುದು.
- **ಜ್ಞಾನದ ಪುನರ್ ಸೃಷ್ಟಿ:** ವಿಷಯಗಳ ಮೂಲಕ ಸಂಗತಿಗಳನ್ನು ಪತ್ತೆ ಹಚ್ಚುವುದು. ಈ ಸಂಗತಿಗಳಿಂದ ಆಳಕ್ಕೆ ಹೋಗಿ ಅವುಗಳಿಗೆ ಅರ್ಥ ಕೊಡುವ ಮತ್ತು ಮಹತ್ವದ ಅಂತರ್ ಸಂಬಂಧಗಳನ್ನು ಗುರುತಿಸುತ್ತದೆ.

### ಸ್ಥಳೀಯ ಜ್ಞಾನ ಮತ್ತು ಸಮುದಾಯ

- ಸ್ಥಳೀಯ ಪರಿಸರ ಮತ್ತು ಮಗುವಿನ ಸ್ವ ಅನುಭವಗಳಿಗೆ ಆದ್ಯತೆ.
- ಮಗುವಿನ ಸನ್ನಿವೇಶದಲ್ಲಿ ಕಲಿಕೆಯನ್ನು ಅಳವಡಿಸುವುದು.

- ಮಗುವಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ಆದ್ಯತೆ ನೀಡುವುದು.
- ಮಗುವನ್ನು ಮನೆಯಲ್ಲಿ ಹಾಗೂ ಶಾಲೆಯಲ್ಲಿ ಮಾತನಾಡುವಂತೆ ಪ್ರೇರೇಪಿಸಬೇಕು. ಆಯಾ ಸಮುದಾಯದ ಸ್ಥಳೀಯ ಹಾಡು, ಕಥೆ, ಒಗಟುಗಳು ಕಲೆ ಇತ್ಯಾದಿಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು.
- ಸ್ಥಳೀಯ ಜ್ಞಾನ ದೇಶೀಯ ಸಂಪ್ರದಾಯ ಮತ್ತು ವಿಧಾನಗಳೊಡನೆ ವ್ಯವಹರಿಸುವುದು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ, ಶಾಲಾ ಜ್ಞಾನಕ್ಕೆ ಹೊಂದಿಸುವುದು.

ರಾಷ್ಟ್ರೀಯ ಪಠ್ಯಕ್ರಮ 2005 ರಲ್ಲಿ ಪ್ರತಿ ವಿಷಯದಲ್ಲಿ ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ ಹೀಗೆ ನಿರೀಕ್ಷಿಸಲಾಗಿದೆ:

**'ಭಾಷೆ'**

- ಭಾಷೆಯಲ್ಲಿ ಮುಖ್ಯವಾಗಿ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು, ಇವುಗಳ ಅಭಿವೃದ್ಧಿ ಮಾಡುವುದು ಮಗುವಿನ ಪರಿಸರದಲ್ಲಿನ ಆಡು ಭಾಷೆಯಿಂದ ಬೆಳವಣಿಗೆ.
- ಮಕ್ಕಳ ಮಾತೃ ಭಾಷೆಯೇ ಬೋಧನಾ ಮಾಧ್ಯಮವಾಗಿರಬೇಕು.
- ಪೂರ್ವ ಜ್ಞಾನದಿಂದ ಕಲಿತಿರುವ ಪದಗಳನ್ನು ಬಳಸುತ್ತಾರೆ. ಈ ಸಾಮರ್ಥ್ಯವನ್ನು ಉತ್ತಮ ಪಡಿಸಬೇಕು.
- ಕೋರ್ ವಿಷಯಗಳು ಭಾಷೆಯನ್ನು ಕಲಿಸಬಹುದು.
- ತ್ರಿಭಾಷಾ ಸೂತ್ರವನ್ನು ಕಲಿಸಲು ಪ್ರಯತ್ನಿಸಬಹುದು.

**'ಗಣಿತ'**

- ಯಾಂತ್ರಿಕ ವಿಧಾನಕ್ಕಿಂತ ತಾರ್ಕಿಕವಾಗಿ ಚಿಂತಿಸುವ ಮತ್ತು ಅನ್ವಯಿಸುವ ಸಾಮರ್ಥ್ಯ ಬೆಳೆಸುವುದು.
- ಸಮಸ್ಯೆಗಳನ್ನು ಸ್ಥಳೀಯ ಸಂಪನ್ಮೂಲಗಳಲ್ಲಿ ಗುರುತಿಸುವ ಸಾಮರ್ಥ್ಯವನ್ನು ಹೆಚ್ಚಿಸಬೇಕು.
  **ಉದಾ:**ಕೊಠಡಿಯಲ್ಲಿ ಕಪ್ಪು ಹಲಗೆ, ಧ್ವಜಸ್ಥಂಭ, ಪುಸ್ತಕಗಳಿಂದ ವಿವಿಧ ಬಗೆಯ ಕೋನಗಳನ್ನು ಆಯತ ಘನ, ಸ್ತಂಭ ಗುರುತಿಸುವುದು.
- ನಿತ್ಯ ಜೀವನದಲ್ಲಿ ಕಂಡುಬರುವ ವಸ್ತುಗಳಲ್ಲಿ ಆಕೃತಿಗಳನ್ನು ಕಲ್ಪಿಸಿ. **ಉದಾ:** ಮನೆಯಲ್ಲಿ ಬಳಸುವ ವಸ್ತುಗಳು.

**'ವಿಜ್ಞಾನ'**

- ವಿಜ್ಞಾನವು ಅವರ ಕುತೂಹಲ ಮತ್ತು ಸೃಜನಶೀಲತೆಯನ್ನು ಬೆಳೆಸಬೇಕು.
- ವಿಜ್ಞಾನವು ಚಲನಶೀಲವಾಗಿದ್ದು, ಯಾವಾಗಲೂ ತನ್ನ ಜ್ಞಾನ ಪರಿಧಿಯನ್ನು ವಿಸ್ತರಿಸಿಕೊಳ್ಳುವುದು ಮತ್ತು ಹೊಸ ಹೊಸ ಅನುಭವಗಳನ್ನು ಒಳಗೊಂಡಿದೆ.
- ವೈಜ್ಞಾನಿಕ ಪರಿಕಲ್ಪನೆಗಳನ್ನು ಪ್ರಯೋಗಗಳ ಮೂಲಕ ರೂಪಿಸಬಹುದು.

**'ಸಮಾಜ ವಿಜ್ಞಾನ'**

- ಪರಿಕಲ್ಪನೆಗಳು, ಸ್ಥಳೀಯ ಸಾಮಾಜಿಕತೆಯನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿರಬೇಕು.
- ರಾಷ್ಟ್ರೀಯ ಕಾಳಜಿಯನ್ನು ಉತ್ತೇಜಿಸುವ ದೃಷ್ಟಿಕೋನವನ್ನು ಹೊಂದಿರಬೇಕು.
- ಸ್ಥಳೀಯ ಆಡಳಿತ ಹಾಗೂ ಸಂಘ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ತಿಳಿಯುವುದು.
- ಸಾಮಾಜಿಕ ಮೌಲ್ಯಗಳ ಬಗ್ಗೆ ಪರಸ್ಪರ ನಂಬಿಕೆ, ಗೌರವ ಸಹಕಾರ ಮುಂತಾದ ಮೌಲ್ಯಗಳನ್ನು ಅರಿಯಬೇಕು.
- ವಾಸ್ತವತೆಗಳನ್ನು ವಿಮರ್ಶಾತ್ಮಕತೆಯಿಂದ ವಿಶ್ಲೇಷಣೆ ಮಾಡುವುದು.

**ಕಲೆ**

ಕಲೆಗಳು ಜಾತ್ಯಾತೀತತೆಯ ಚೌಕಟ್ಟು ಮತ್ತು ಸಂಸ್ಕೃತಿಯ ವೈವಿಧ್ಯತೆಯ ಜೀವಂತ ಉದಾಹರಣೆಗಳಾಗಿವೆ. ಅವುಗಳಲ್ಲಿ ಜನಪದ, ಶಾಸ್ತ್ರೀಯ ಸಂಗೀತ, ನೃತ್ಯ, ಗೊಂಬೆಯಾಟ, ಕುಶಲ ಕರ್ಮಿಗಳ ಕೆಲಸ, ರಂಗಭೂಮಿ, ಪಾರಂಪರಿಕ ಕರಕುಶಲಕಲೆ, ಚಿತ್ರಕಲೆ ಇವುಗಳನ್ನು ಶಾಲಾ ಶಿಕ್ಷಣದಲ್ಲಿ ಒಂದು ವಿಷಯವಾಗಿ ಅಳವಡಿಸುವುದು.

**ಆರೋಗ್ಯ ಮತ್ತು ದೈಹಿಕ ಶಿಕ್ಷಣ:**

- ಮಗುವಿನ ದೈಹಿಕ, ಸಾಮಾಜಿಕ, ಭಾವನಾತ್ಮಕ, ಮಾನಸಿಕ ಬೆಳವಣಿಗೆ ಅವಶ್ಯಕವಾಗಿದೆ.

- ಕಲಿಕೆಯೊಂದೇ ಸಾಲದು, ಕಲಿಕೆಯೊಂದಿಗೆ ಸರ್ವಾಂಗೀಣ ಬೆಳವಣಿಗೆಗಾಗಿ ಆರೋಗ್ಯ ಮತ್ತು ದೈಹಿಕ ಶಿಕ್ಷಣ ಹಾಗೂ ಯೋಗ ಶಿಕ್ಷಣ ಅಗ್ಯವಾಗಿದೆ.
- ತಜ್ಞ ವೈದ್ಯರಿಂದ ಆರೋಗ್ಯ ಶಿಕ್ಷಣದ ಬಗ್ಗೆ ಮಾಹಿತಿ ನೀಡುವುದು.
- ದಿನಾಚರಣೆಗಳ ಮೂಲಕ ಹೆಚ್.ಐ.ವಿ.–ಏಡ್ಸ್, ಪರಿಸರ, ರಕ್ತದಾನ, ಪಲ್ಸ್ ಪೋಲಿಯೋ ಮಾಹಿತಿ ನೀಡುವುದು.

ಪಠ್ಯಕ್ರಮವು ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸುವುದರ ಮೂಲಕ ಗಮನ ಸೆಳೆಯುತ್ತದೆ.ವ್ಯವಸ್ಥೆಯಲ್ಲಿನ ಮಜಲುಗಳ ಬಗ್ಗೆ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭಾವವನ್ನು ಬೀರುತ್ತದೆ.

**2005ರ ರಾಷ್ಟ್ರೀಯ ಪಠ್ಯಕ್ರಮದಲ್ಲಿ ಬದಲಾವಣೆ ಬಯಸುವ ಕ್ಷೇತ್ರಗಳನ್ನು ಹೀಗೆ ಗುರ್ತಿಸಬಹುದು.**

| ಇದರಿಂದ | ಇದಕ್ಕೆ |
|---|---|
| * **ಶಿಕ್ಷಕ ಕೇಂದ್ರಿತ** | * ವಿದ್ಯಾರ್ಥಿ ಕೇಂದ್ರಿತ |
| * **ಶಿಕ್ಷರಿಗೆ ನಿರ್ದೇಶನ ಮತ್ತು ತೀರ್ಮಾನಗಳು** | * ವಿದ್ಯಾರ್ಥಿಗಳಿಗೆ ಸ್ವಾಯತ್ತತೆ |
| * **ಕಲಿಕೆಯನ್ನು ಪ್ರೋತ್ಸಾಹಿಸುವ ಮನೋಭಾವ** | * ಕಲಿಕೆಯಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ |
| * **ಶಿಕ್ಷಕರಿಗೆ ಮಾರ್ಗದರ್ಶನ ಮತ್ತು ಪರಿಶೀಲನೆ** | * ಸುಗಮಕಾರರು |
| * **ಕಲಿಕೆಯಲ್ಲಿ ನಿಷ್ಕ್ರೀಯ ಮನೋಭಾವದ ನೆಲೆಯಲ್ಲಿ ಕಲಿಕೆ** | * ವಿಸ್ತೃತ ಸಾಮಾಜಿಕ |
| * **ಶಾಸ್ತ್ರಕ್ಕೆ ಮಹತ್ವ** | * ಶಿಕ್ಷಣಕ್ಕೆ ಮಹತ್ವ |

**ಎನ್.ಸಿ.ಎಫ್ ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗೆ ಈ ಕೆಳಕಂಡ ವೆಬ್ ಲಿಂಕ್ ಕ್ಲಿಕ್ಕಿಸಿ:**

1. http://www.ncert.nic.in/new_ncert/ncert/rightside/links/focus_group.html
2. http://mooc.nios.ac.in/mooc/pluginfile.php?file=/12488/course/summary/Block-3%20%282%29.pdf



# ಅಧ್ಯಾಯ–2
# ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ–2009

6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಕಾಯಿದೆ.ಭಾರತ ಗಣರಾಜ್ಯದ **60** ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯಿದೆಯಾಗಿ ಈ ಮುಂದಿನಂತೆ ರಚಿಸಲಾಗಿದೆ.

## ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009

**(2009ರ ಅಧಿನಿಯಮ ಸಂಖ್ಯೆ 35)** [**26ನೇ ಆಗಸ್ಟ್, 2009**]

ಆರರಿಂದ ಹದಿನಾಲ್ಕು ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಇದು, ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

# ಅಧ್ಯಾಯ–I

## ಪ್ರಾರಂಭಿಕ

### 1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–

(1) ಈ ಅಧಿನಿಯಮವನ್ನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 ಎಂದು ಕರೆಯತಕ್ಕದ್ದು.
(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು. (3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು–

(ಎ)"ಸಮುಚಿತ ಸರ್ಕಾರ" ಎಂದರೆ,

(i)ಕೇಂದ್ರ ಸರ್ಕಾರದಿಂದ ಅಥವಾ ವಿಧಾನ ಮಂಡಲವಿಲ್ಲದ ಸಂಘ ರಾಜ್ಯ ಕ್ಷೇತ್ರದ ಆಡಳಿತಗಾರರಿಂದ ಸ್ಥಾಪಿತವಾದ, ಅದರ ಮಾಲೀಕತ್ವದಲ್ಲಿ ಅಥವಾ ಅದರ ನಿಯಂತ್ರಣದಲ್ಲಿ ಇರುವ ಒಂದು ಶಾಲೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ;

(ii)(i)ನೇ ಉಪ–ಖಂಡದಲ್ಲಿ ಉಲ್ಲೇಖಿಸಿದ ಶಾಲೆಯ ಹೊರತು,

(ಎ) ಒಂದು ರಾಜ್ಯದೊಳಗೆ ಸ್ಥಾಪಿಸಲಾದ ಶಾಲೆಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ,

(ಬಿ) ವಿಧಾನಮಂಡಲವನ್ನು ಹೊಂದಿರುವ ಒಂದು ಸಂಘ ರಾಜ್ಯ ಕ್ಷೇತ್ರದ ಪ್ರದೇಶದೊಳಗೆ ಸ್ಥಾಪಿಸಲಾದ ಶಾಲೆಗೆ ಸಂಬಂಧಿಸಿದಂತೆ ಆ ಸಂಘ ರಾಜ್ಯಕ್ಷೇತ್ರದ ಸರ್ಕಾರ;

(ಬಿ) **"ಕ್ಯಾಪಿಟೇಶನ್ ಶುಲ್ಕ"** ಎಂದರೆ, ಶಾಲೆಯು ಅಧಿಸೂಚಿಸಿದ ಶುಲ್ಕವಲ್ಲದ ಯಾವುದೇ ರೀತಿಯ ದೇಣಿಗೆ ಅಥವಾ ಕಾಣಿಕೆ ಅಥವಾ ಹಣಪಾವತಿ;

(ಸಿ) **"ಮಗು"** ಎಂದರೆ, ಆರರಿಂದ ಹದಿನಾಲ್ಕು ವರ್ಷದೊಳಗಿನ ಗಂಡು ಅಥವಾ ಹೆಣ್ಣು ಮಗು;

(ಡಿ) **"ಅನುಕೂಲಸ್ಥರಲ್ಲದ ಗುಂಪಿಗೆ ಸೇರಿದ ಮಗು"** ಎಂದರೆ, ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗ ಅಥವಾ ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದಂಥ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಿಕ, ಲಿಂಗ ಅಥವಾ ಅಂಥ ಇತರ ವಿಷಯದ ಸಂಬಂಧದಲ್ಲಿ ಅನಾನುಕೂಲ ಪರಿಸ್ಥಿತಿಗೆ ಒಳಗಾದಂಥ ಇತರ ಗುಂಪಿಗೆ ಸೇರಿದ ಮಗು;

(ಇ) **"ದುರ್ಬಲ ವರ್ಗಕ್ಕೆ ಸೇರಿದ ಮಗು"** ಎಂದರೆ, ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದಂತೆ ಯಾರ ವಾರ್ಷಿಕ ಆದಾಯವು ಕನಿಷ್ಠ ಮಿತಿಗಿಂತ ಕಡಿಮೆಯಿರುವುದೋ ಅಂಥ ತಂದೆ ತಾಯಿ ಅಥವಾ ಪೋಷಕರಿಗೆ ಸೇರಿದ ಮಗು;

(ಎಫ್)**"ಪ್ರಾಥಮಿಕ ಶಿಕ್ಷಣ"** ಎಂದರೆ, ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ನೀಡಲಾಗುವ ಶಿಕ್ಷಣ;

(ಜಿ) ಒಂದು ಮಗುವಿಗೆ ಸಂಬಂಧಿಸಿದಂತೆ, **"ಪೋಷಕ"** ಎಂದರೆ, ಆ ಮಗುವಿನ ಯೋಗಕ್ಷೇಮ ನೋಡಿಕೊಳ್ಳುವ ಮತ್ತು ಆ ಮಗು ಯಾರ ಅಭಿರಕ್ಷೆಯಲ್ಲಿರುವುದೋ ಆ ವ್ಯಕ್ತಿ ಹಾಗೂ ಅದರಲ್ಲಿ ಸಹಜ ಪೋಷಕ ಅಥವಾ ನ್ಯಾಯಾಲಯವು ಅಥವಾ ಒಂದು ಶಾಸನವು ನೇಮಿಸಿದ ಅಥವಾ ಘೋಷಿಸಿದ ವ್ಯಕ್ತಿ;

(ಎಚ್) **"ಸ್ಥಳೀಯ ಪ್ರಾಧಿಕಾರ"** ಎಂದರೆ, ಅವುಗಳನ್ನು ಯಾವುದೇ ಹೆಸರಿನಿಂದ ಕರೆಯಲಿ ಒಂದು ಪೌರಸಭಾ ನಿಗಮ ಅಥವಾ ಮುನಸಿಪಲ್ ಕೌನ್ಸಿಲ್ ಅಥವಾ ಜಿಲ್ಲಾ ಪರಿಷತ್ತು ಅಥವಾ ನಗರ ಪಂಚಾಯಿತಿ ಅಥವಾ ಒಂದು ಪಂಚಾಯಿತಿ ಮತ್ತು ಇದು ಆ ಶಾಲೆಯ ಮೇಲೆ ಆಡಳಿತಾತ್ಮಕ ನಿಯಂತ್ರಣ ಹೊಂದಿರುವ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕಾರ ಹೊಂದಿದ ಯಾವುದೇ ನಗರ, ಪಟ್ಟಣ ಅಥವಾ ಗ್ರಾಮದಲ್ಲಿ ಸ್ಥಳೀಯ ಪ್ರಾಧಿಕಾರದಂತೆ ಕರ್ತವ್ಯ ನಿರ್ವಹಿಸುವಂಥ ಇತರ ಪ್ರಾಧಿಕಾರ ಅಥವಾ ನಿಕಾಯವನ್ನು ಅದು ಒಳಗೊಳ್ಳುತ್ತದೆ;

(ಐ) **"ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ"** ಎಂದರೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಧಿನಿಯಮ, 2005 (2004ರ 6)ರ 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ;

(ಜೆ) **"ಅಧಿಸೂಚನೆ"** ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಕೆ) "ತಂದೆ ಅಥವಾ ತಾಯಿ" ಎಂದರೆ, ಮಗುವಿನ ಹೆತ್ತ ತಂದೆ ಅಥವಾ ತಾಯಿ, ಅಥವಾ ಮಲ ತಂದೆ ಅಥವಾ ಮಲತಾಯಿ ಅಥವಾ ದತ್ತು ತಂದೆ ಅಥವಾ ದತ್ತು ತಾಯಿ;

(ಎಲ್) **"ನಿಯಮಿಸಲಾದುದು"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) **"ಅನುಸೂಚಿ"** ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಿದ ಅನುಸೂಚಿ;

(ಎನ್) **"ಶಾಲೆ"** ಎಂದರೆ, ಪ್ರಾಥಮಿಕ ಶಿಕ್ಷಣ ನೀಡುವ, ಯಾವುದೇ ಮಾನ್ಯತೆ ಪಡೆದ ಶಾಲೆಯಾಗಿದ್ದು, ಇದರಲ್ಲಿ–

(i) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲಾದ ಅದರ ಮಾಲೀಕತ್ವದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಶಾಲೆ;

(ii)ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವ ಶಾಲೆಯು ತನ್ನ ಇಡೀ ಅಥವಾ ಭಾಗಶಃ ಖರ್ಚು–ವೆಚ್ಚಗಳನ್ನು ಭರಿಸಲು ಹಣಕಾಸು ನೆರವು ಅಥವಾ ಅನುದಾನಗಳನ್ನು ಪಡೆಯುವದೋ ಆ ಅನುದಾನಿತ ಶಾಲೆ; ಮತ್ತು

(iii)ನಿರ್ದಿಷ್ಟ ಪ್ರವರ್ಗಕ್ಕೆ ಸೇರಿದ ಶಾಲೆ; ಮತ್ತು

(iv)ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವ ಶಾಲೆಯು ತನ್ನ ಖರ್ಚು ವೆಚ್ಚಗಳನ್ನು ಭರಿಸಲು ಯಾವುದೇ ತೆರನಾದ ಹಣಕಾಸು ನೆರವು ಅಥವಾ ಅನುದಾನಗಳನ್ನು ಪಡೆಯುವುದಿಲ್ಲವೊ ಅಂಥ ಒಂದು ಅನುದಾನರಹಿತ ಶಾಲೆ–ಒಳಗೊಳ್ಳುತ್ತದೆ.

(ಓ)**"ಶೋಧನಾ ಕಾರ್ಯ ವಿಧಾನ"** ಎಂದರೆ, ಒಂದು ಮಗುವಿಗೆ ಪ್ರವೇಶಾವಕಾಶ ಕಲ್ಪಿಸುವಲ್ಲಿ, ಯಾದೃಚ್ಛಿಕವಾಗಿ ಪ್ರವೇಶ ನೀಡುವ ಕ್ರಮವಲ್ಲದ, ಒಂದು ಮಗುವಿಗಿಂತ ಇನ್ನೊಂದು ಮಗುವಿಗೆ ಆದ್ಯತೆ ಮೇಲೆ ಪ್ರವೇಶ ನೀಡಬೇಕೆಂದು ನಿರ್ಧರಿಸುವುದಕ್ಕಾಗಿ ಪಾಲಿಸುವ ಆಯ್ಕೆ ವಿಧಾನ.

(ಪಿ) **"ನಿರ್ದಿಷ್ಟಪಡಿಸಿದ ಪ್ರವರ್ಗ"** ಎಂದರೆ ಶಾಲೆಗೆ ಸಂಬಂಧಿಸಿದಂತೆ, ಸಮುಚಿತ ಸರ್ಕಾರದಿಂದ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಲಾದ, ವಿಶಿಷ್ಟ ಸ್ವರೂಪ ಹೊಂದಿರುವಂಥ ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ ಅಥವಾ ಅಂಥ ಯಾವುದೇ ಇತರ ಶಾಲೆ;

(ಕ್ಯೂ) **"ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ"** ಎಂದರೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005 (2004ರ 6)ರ 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ.

## ಅಧ್ಯಾಯ –II

## ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಹಕ್ಕು

**3.ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಗುವಿನ ಹಕ್ಕು.–** (1) ಆರರಿಂದ ಹದಿನಾಲ್ಕು ವರ್ಷದೊಳಗಿನ ಪ್ರತಿಯೊಂದು ಮಗುವು ತನ್ನ ಹತ್ತಿರದ ಶಾಲೆಯಲ್ಲಿ ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿ ಮಾಡುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕು ಹೊಂದಿರತಕ್ಕದ್ದು.

(2) (1)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ ಒಂದು ಮಗುವನ್ನು, ಅದು ಪ್ರಾಥಮಿಕ ಶಿಕ್ಷಣ ಪಡೆಯಲು ಮತ್ತು ಪೂರ್ಣಗೊಳಿಸಲು ಅಡ್ಡಿಯುಂಟು ಮಾಡಬಹುದಾದ ಯಾವುದೇ ಬಗೆಯ ಶುಲ್ಕ ಅಥವಾ ಖರ್ಚುಗಳನ್ನು ಅಥವಾ ವೆಚ್ಚಗಳನ್ನು ಸಂದಾಯ ಮಾಡುವುದಕ್ಕೆ ಗುರಿಪಡಿಸತಕ್ಕದ್ದಲ್ಲ.

ಪರಂತು, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ಸಂರಕ್ಷಣೆ ಮತ್ತು ಸಂಪೂರ್ಣ ಪಾಲ್ಗೊಳ್ಳುವಿಕೆ) ಅಧಿನಿಯಮ, 1996 (1996ರ 1)ರ 2ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಅಂಗವಿಕಲತೆ ಹೊಂದಿರುವ ಮಗುವೊಂದು ಸದರಿ ಅಧಿನಿಯಮದ ಗಿನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

**4.ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಿರದ ಅಥವಾ ಅದನ್ನು ಪೂರ್ಣಗೊಳಿಸಿರದ ಮಕ್ಕಳಿಗಾಗಿ ವಿಶೇಷ ಉಪಬಂಧಗಳು–** ಆರು ವರ್ಷಕ್ಕೂ ಮೇಲ್ಪಟ್ಟ ಮಗುವೊಂದನ್ನು ಯಾವುದೇ ಶಾಲೆಗೆ ಸೇರಿಸದೆ ಇದ್ದಾಗ ಅಥವಾ ಸೇರಿಸಿದ್ದರೂ ಅವನು ಅಥವಾ ಅವಳು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದೆ ಇದ್ದಾಗ, ಅವನ ಅಥವಾ ಅವಳ ಮಯಸ್ಸಿಗನುಗುಣವಾಗಿ ಸೂಕ್ತವಾದ ತರಗತಿಗೆ ಅವನನ್ನು ಅಥವಾ ಅವಳನ್ನು ಸೇರಿಸಿಕೊಳ್ಳತಕ್ಕದ್ದು.

ಪರಂತು, ಅವನ ಅಥವಾ ಅವಳ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ನೇರವಾಗಿ ಸೇರಿಸಿಕೊಳ್ಳಲಾದ ಮಗು ತನ್ನ ಇತರೆ ಸಹಪಾಠಿಗಳ ಜೊತೆಗೆ ಅವರ ಸಮನಾಗಿ ಆ ತರಗತಿಯ ಪಾಠಗಳನ್ನು ಕಲಿಯುವಂತೆ ಮಾಡಲು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಸಮಯದೊಳಗಾಗಿ ವಿಶೇಷ ತರಬೇತಿ ಪಡೆಯುವ ಹಕ್ಕು ಹೊಂದಿರತಕ್ಕದ್ದು;

ಮತ್ತು ಪರಂತು, ಪ್ರಾಥಮಿಕ ಶಿಕ್ಷಣಕ್ಕಾಗಿ ಹಾಗೆ ಸೇರಿಸಿಕೊಳ್ಳಲಾದ ಮಗುವು ಹಾಗೆ ಹದಿನಾಲ್ಕು ವರ್ಷ ಪೂರೈಸಿದಾಗ್ಯೂ, ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಶಿಕ್ಷಣ ಪಡೆಯಲು ಹಕ್ಕುದಾರನಾಗಿರತಕ್ಕದ್ದು.

**5.ಇತರ ಶಾಲೆಗೆ ವರ್ಗಾಯಿಸುವ ಹಕ್ಕು.–** (1) ಶಾಲೆಯೊಂದರಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಅವಕಾಶವಿಲ್ಲದಿರುವಾಗ, ಮಗುವೊಂದು 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv)ನೇ ಉಪ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಶಾಲೆಯನ್ನು ಹೊರತುಪಡಿಸಿ, ತಾನು ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಯಾವುದೇ ಇತರ ಶಾಲೆಗೆ ವರ್ಗಾವಣೆ ಕೋರುವ ಹಕ್ಕು ಹೊಂದಿರುತ್ತದೆ.

(2) ಯಾವುದೇ ಕಾರಣಕ್ಕಾಗಿ, ರಾಜ್ಯದೊಳಗಡೆಯಾಗಲಿ ಅಥವಾ ಹೊರಗಡೆಯಾಗಲಿ, ಮಗು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಹೋಗಬೇಕಾದ ಅಗತ್ಯ ಬಿದ್ದರೆ, ಅಂಥ ಮಗುವು 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv) ನೇ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಶಾಲೆಯನ್ನು ಹೊರತುಪಡಿಸಿ, ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಯಾವುದೇ ಇತರ ಶಾಲೆಗೆ ವರ್ಗಾವಣೆ ಕೋರುವ ಹಕ್ಕನ್ನು ಹೊಂದಿರತಕ್ಕದ್ದು.

(3) ಅಂಥ ಇತರ ಶಾಲೆಯಲ್ಲಿ ಪ್ರವೇಶ ಪಡೆಯುವುದಕ್ಕಾಗಿ, ಅಂಥ ಮಗು ಈ ಹಿಂದೆ ಸೇರಿಕೊಂಡಿದ್ದ ಶಾಲೆಯ ಮುಖ್ಯ ಶಿಕ್ಷಕರು ಅಥವಾ ಶಾಲೆಯ ಪ್ರಭಾರಿ ಶಿಕ್ಷಕರು ಕೂಡಲೇ ವರ್ಗಾವಣೆ ಪ್ರಮಾಣ ಪತ್ರ ನೀಡತಕ್ಕದ್ದು.

ಪರಂತು, ವರ್ಗಾವಣೆ ಪ್ರಮಾಣ ಪತ್ರದ ಸಲ್ಲಿಕೆಯಲ್ಲಿ ವಿಳಂಬವಾಯಿತೆಂದು ಅಂಥ ಇತರ ಶಾಲೆಯಲ್ಲಿ ಸೇರಿಸಿಕೊಳ್ಳಲು ವಿಳಂಬ ಮಾಡುವುದಕ್ಕಾಗಲಿ ಅಥವಾ ಪ್ರವೇಶ ನಿರಾಕರಿಸುವುದಕ್ಕಾಗಲಿ ಕಾರಣವಾಗತಕ್ಕದ್ದಲ್ಲ.

ಮತ್ತೂ ಪರಂತು, ಮುಖ್ಯ ಶಿಕ್ಷಕರು ಅಥವಾ ಶಾಲೆಯ ಪ್ರಭಾರಿ ಶಿಕ್ಷಕರು ವರ್ಗಾವಣೆ ಪ್ರಮಾಣಪತ್ರ ನೀಡಲು ವಿಳಂಬ ಮಾಡಿದರೆ, ಅವರು ತಮಗೆ ಅನ್ವಯವಾಗುವ ಸೇವಾ ನಿಯಮಾವಳಿಯ ಅಡಿಯಲ್ಲಿ ಶಿಸ್ತುಕ್ರಮಕ್ಕೆ ಗುರಿಯಾಗತಕ್ಕದ್ದು.

## ಅಧ್ಯಾಯ – III

## ಸಮುಚಿತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಮತ್ತು ತಂದೆ ತಾಯಿಯರ ಕರ್ತವ್ಯಗಳು

**6. ಶಾಲೆಯ ಸ್ಥಾಪನೆಯಲ್ಲಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರದ ಕರ್ತವ್ಯ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು, ನಿರ್ದಿಷ್ಟಪಡಿಸಬಹುದಾದ ಪ್ರದೇಶಗಳ ಪರಿಮಿತಿಯೊಳಗೆ ಅಥವಾ ಹತ್ತಿರದಲ್ಲಿ, ಹಾಗೆ ಶಾಲೆಯನ್ನು ಸ್ಥಾಪಿಸಿರದಿರುವಲ್ಲಿ, ಈ ಅಧಿನಿಯಮವು ಪ್ರಾರಂಭವಾದಾಗಿನಿಂದ ಮೂರು ವರ್ಷದ ಅವಧಿಯೊಳಗಾಗಿ ಶಾಲೆಯೊಂದನ್ನು ಸ್ಥಾಪಿಸತಕ್ಕದ್ದು.

**7. ಹಣಕಾಸು ಮತ್ತು ಇತರ ಜವಾಬ್ದಾರಿಗಳ ಹಂಚಿಕೆ:**

(1) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಧಿಗಳನ್ನು ಒದಗಿಸುವುದಕ್ಕೆ ಸಮಾನ ಜವಾಬ್ದಾರಿ ಹೊಂದಿರತಕ್ಕದ್ದು.

(2) ಕೇಂದ್ರ ಸರ್ಕಾರ ಈ ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ಬಂಡವಾಳ ಮತ್ತು ಆವರ್ತಕ ವೆಚ್ಚದ ಅಂದಾಜುಗಳನ್ನು ತಯಾರಿಸತಕ್ಕದ್ದು.

(3) ಕೇಂದ್ರ ಸರ್ಕಾರ ಕಾಲಕಾಲಕ್ಕೆ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ನಿರ್ಧರಿಸಬಹುದಾದಂಥ, (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ವೆಚ್ಚದ ಶೇಕಡಾವಾರನ್ನು ರಾಜಸ್ವಗಳ ಅನುದಾನ ರೂಪದಲ್ಲಿ ರಾಜ್ಯ ಸರ್ಕಾರಗಳಿಗೆ ಒದಗಿಸತಕ್ಕದ್ದು.

(4) ಕೇಂದ್ರ ಸರ್ಕಾರವು, ಯಾವುದೇ ರಾಜ್ಯ ಸರ್ಕಾರಕ್ಕೆ ಒದಗಿಸಬೇಕಾದ ಹೆಚ್ಚುವರಿ ಸಂಪನ್ಮೂಲಗಳ ಅಗತ್ಯತೆಗಳನ್ನು ಪರಿಶೀಲಿಸಲು280ನೇ ಅನುಚ್ಛೇದದ (3)ನೇ ಖಂಡದ (ಡಿ) ಉಪ ಖಂಡದ ಅಡಿಯಲ್ಲಿ ಹಣಕಾಸು ಆಯೋಗಕ್ಕೆ ಕೋರಿಕೆ ಸಲ್ಲಿಸುವ ಸಂಬಂಧದಲ್ಲಿ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಬಹುದು ಮತ್ತು ಸದರಿ ರಾಜ್ಯ ಸರ್ಕಾರವು ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತನ್ನ ಪಾಲಿನ ನಿಧಿಯನ್ನು ಒದಗಿಸಬಹುದು.

(5)ಉಪ ಪ್ರಕರಣ (4)ರಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು (3)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಒದಗಿಸಿದ ಮೊತ್ತವನ್ನು ಮತ್ತು ತನ್ನ ಇತರ ಸಂಪನ್ಮೂಲಗಳನ್ನು ಪರಿಗಣನೆಗೆ ತೆಗೆದುಕೊಂಡು ನಿಧಿಗಳನ್ನು ಒದಗಿಸುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(6)ಕೇಂದ್ರ ಸರ್ಕಾರವು,–

(ಎ) 29ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಶೈಕ್ಷಣಿಕ ಪ್ರಾಧಿಕಾರದ ನೆರವಿನೊಂದಿಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಅಭಿವೃದ್ಧಿಪಡಿಸತಕ್ಕದ್ದು.

(ಬಿ) ಶಿಕ್ಷಕರ ತರಬೇತಿಗಾಗಿ ಮಾನಕ ಗುಣಮಟ್ಟಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಮತ್ತು ಜಾರಿಗೊಳಿಸತಕ್ಕದ್ದು.

(ಸಿ) ನವೀನ ಆವಿಷ್ಕಾರಗಳು, ಸಂಶೋಧನೆಗಳು, ಯೋಜನೆ ಮತ್ತು ಸಾಮರ್ಥ್ಯ ವರ್ಧನೆಗಳನ್ನು ಉತ್ತೇಜಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ತಾಂತ್ರಿಕ ನೆರವು ಮತ್ತು ಸಂಪನ್ಮೂಲಗಳನ್ನು ಒದಗಿಸತಕ್ಕದ್ದು.

**8. ಸಮುಚಿತ ಸರ್ಕಾರಗಳ ಕರ್ತವ್ಯಗಳು:** ಸಮುಚಿತ ಸರ್ಕಾರವು–

(ಎ) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸತಕ್ಕದ್ದು:

ಪರಂತು, ಸಂದರ್ಭಾನುಸಾರ, ಮಗುವಿನ ತಂದೆ, ತಾಯಿ ಅಥವಾ ಪೋಷಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯಪ್ರಾಧಿಕಾರವು ಸ್ಥಾಪಿಸಿದ, ಒಡೆತನ ಹೊಂದಿದ, ನಿಯಂತ್ರಣ ಹೊಂದಿದ್ದ ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಯಿಂದ

ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂತಹ ಶಾಲೆಯಲ್ಲದ ಒಂದು ಶಾಲೆಯಲ್ಲಿ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಅಂಥ ಮಗು ಅಥವಾ ಅದರ ತಂದೆ, ತಾಯಿ ಅಥವಾ ಪೋಷಕರು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ವೆಚ್ಚದ ಮರು ಪಾವತಿಗಾಗಿ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

**ವಿವರಣೆ** "ಕಡ್ಡಾಯ ಶಿಕ್ಷಣ" ಎಂದರೆ,

(i) ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವಿಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು;

(ii)ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಸೇರಿಕೊಂಡು, ತಪ್ಪದೆ ಹಾಜರಾಗಿ ಶಿಕ್ಷಣ ಪೂರೈಸುವಂತೆ ನೋಡಿಕೊಳ್ಳುವುದು –ಸಮುಚಿತ ಸರ್ಕಾರದ ಹೊಣೆಗಾರಿಕೆ ಎಂದು ಅರ್ಥ.

(ಬಿ)6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಕ್ಕಪಕ್ಕದಲ್ಲೇ ಶಾಲೆಯು ದೊರಕುವಂತೆ ನೋಡಿಕೊಳ್ಳತಕ್ಕದ್ದು;

(ಸಿ)ದುರ್ಬಲ ವರ್ಗಕ್ಕೆ ಸೇರಿರುವ ಮಗುವಿನ ಬಗ್ಗೆ ಮತ್ತು ಅನುಕೂಲಸ್ಥರಲ್ಲದ ಗುಂಪಿಗೆ ಸೇರಿರುವ ಮಗುವಿನ ವಿರುದ್ಧ ಯಾವುದೇ ಕಾರಣದಿಂದ ತಾರತಮ್ಯ ಮಾಡದಂತೆ ಮತ್ತು ಪ್ರಾಥಮಿಕ ಶಿಕ್ಷಣ ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಪಡಿಸದಂತೆ ನೋಡಿಕೊಳ್ಳತಕ್ಕದ್ದು;

(ಡಿ)ಶಾಲೆಯ ಕಟ್ಟಡ, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಸಾಮಗ್ರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸತಕ್ಕದ್ದು;

(ಇ)4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಎಫ್) ಪ್ರತಿಯೊಂದು ಮಗುವೂ, ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆದು, ಹಾಜರಾಗಿ ಅದನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು.

(ಜಿ)ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾನಕ ಗುಣಮಟ್ಟಗಳಿಗೆ ಮತ್ತು ಪ್ರಮಾಣಕಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳತಕ್ಕದ್ದು.

(ಎಚ್) ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮವನ್ನು ಮತ್ತು ವ್ಯಾಸಂಗ ಕ್ರಮಗಳನ್ನು ಸಕಾಲದಲ್ಲಿ ನಿಯಮಿಸುವಂತೆ ನೋಡಿಕೊಳ್ಳತಕ್ಕದ್ದು.

(ಐ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು.

**9. ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು:**ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ–

(ಎ) ಪ್ರತಿಯೊಂದು ಮಗುವಿಗೆ ಉಚಿತ ಮತ್ತು ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು:

ಪರಂತು, ಸಂದರ್ಭಾನುಸಾರ ಮಗುವಿನ ತಂದೆ ತಾಯಿ ಅಥವಾ ಪೋಷಕರು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ, ಒಡೆತನ ಹೊಂದಿದ, ನಿಯಂತ್ರಣ ಹೊಂದಿದ್ದ ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಯಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂಥ ಶಾಲೆಯಲ್ಲದ ಒಂದು ಶಾಲೆಯಲ್ಲಿ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಆ ಮಗು ಅಥವಾ ಅದರ ತಂದೆ ತಾಯಿ ಅಥವಾ ಪೋಷಕರು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ತಗುಲಿದ ವೆಚ್ಚದ ಮರು ಪಾವತಿಗಾಗಿ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ;

(ಬಿ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಕ್ಕಪಕ್ಕದಲ್ಲೇ ಶಾಲೆಯು ದೊರಕುವಂತೆ ನೋಡಿಕೊಳ್ಳತಕ್ಕದ್ದು;

(ಸಿ) ದುರ್ಬಲ ವರ್ಗಕ್ಕೆ ಸೇರಿರುವ ಮಗುವಿನ ಬಗ್ಗೆ ಮತ್ತು ಅನುಕೂಲಸ್ಥರಲ್ಲದ ಗುಂಪಿಗೆ ಸೇರಿರುವ ಮಗುವಿನ ವಿರುದ್ಧ ಯಾವುದೇ ಕಾರಣದಿಂದ ತಾರತಮ್ಯ ಮಾಡದಂತೆ ಮತ್ತು ಪ್ರಾಥಮಿಕ ಶಿಕ್ಷಣ ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಪಡಿಸದಂತೆ ನೋಡಿಕೊಳ್ಳತಕ್ಕದ್ದು;

(ಡಿ) ನಿಯಮಿಸಬಹುದಾದಂತಹ ರೀತಿಯಲ್ಲಿ ತನ್ನ ವ್ಯಾಪ್ತಿ ಪ್ರದೇಶದಲ್ಲಿ ವಾಸಿಸುತ್ತಿರುವ ಹದಿನಾಲ್ಕು ವರ್ಷಗಳ ವಯಸ್ಸಿನವರೆಗಿನ ಮಕ್ಕಳ ದಾಖಲೆಯನ್ನು ನಿರ್ವಹಿಸತಕ್ಕದ್ದು;

(ಇ) ತನ್ನ ವ್ಯಾಪ್ತಿ ಪ್ರದೇಶದಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಮಗುವೂ, ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆದು, ಹಾಜರಾಗಿ ಅದನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು;

(ಎಫ್) ಶಾಲೆಯ ಕಟ್ಟಡ, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಸಾಮಗ್ರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸತಕ್ಕದ್ದು;

(ಜಿ) 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಎಚ್) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾನಕ ಗುಣಮಟ್ಟಗಳಿಗೆ ಮತ್ತು ಪ್ರಮಾಣಕಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳತಕ್ಕದ್ದು;

(ಐ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಜೆ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಕೆ) ಅಲೆಮಾರಿ ಕುಟುಂಬಗಳ ಮಕ್ಕಳಿಗೆ ಪ್ರವೇಶ ದೊರಕುವಂತೆ ನೋಡಿಕೊಳ್ಳತಕ್ಕದ್ದು;

(ಎಲ್) ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಬರುವ ಶಾಲೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡತಕ್ಕದ್ದು;

(ಎಂ)ವಾರ್ಷಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರ್ಣಯಿಸತಕ್ಕದ್ದು.

**10. ತಂದೆ ತಾಯಿಯರ ಮತ್ತು ಪೋಷಕರ ಕರ್ತವ್ಯ.–** ಪ್ರತಿಯೊಬ್ಬ ತಂದೆ, ತಾಯಿ ಅಥವಾ ಪೋಷಕರು ತನ್ನ ಮಗು ಅಥವಾ ತನ್ನ ಆಶ್ರಯದಲ್ಲಿರುವ ಮಗುವನ್ನು ಹತ್ತಿರದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸುವುದು ಅಥವಾ ಸೇರಿಸುವಂತೆ ಮಾಡುವುದು ಆತನ ಅಥವಾ ಅವಳ ಕರ್ತವ್ಯವಾಗಿರತಕ್ಕದ್ದು.

**11. ಸಮುಚಿತ ಸರ್ಕಾರ ಶಾಲಾ ಪೂರ್ವ ಶಿಕ್ಷಣ ಒದಗಿಸುವುದು–** ಮೂರು ವರ್ಷಗಳಿಗೂ ಮೇಲ್ಪಟ್ಟ ವಯಸ್ಸಿನ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ಸಿದ್ಧಗೊಳಿಸುವ ದೃಷ್ಟಿಯಿಂದ ಮತ್ತು ಮಕ್ಕಳು ಆರು ವರ್ಷಗಳ ವಯಸ್ಸನ್ನು ಪೂರೈಸುವವರೆಗೆ ಅವರಿಗೆ ಎಳೆ ವಯಸ್ಸಿನ ಆರೈಕೆ ದೊರಕಿಸಿ ಅವರಿಗೆ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಸಮುಚಿತ ಸರ್ಕಾರವು ಅಂಥ ಮಕ್ಕಳಿಗಾಗಿ ಉಚಿತ ಶಾಲಾ ಪೂರ್ವ ಶಿಕ್ಷಣ ಒದಗಿಸುವುದಕ್ಕಾಗಿ ಅಗತ್ಯ ವ್ಯವಸ್ಥೆ ಮಾಡಬಹುದು.

## ಅಧ್ಯಾಯ – IV

## ಶಾಲೆಗಳ ಮತ್ತು ಶಿಕ್ಷಕರ ಜವಾಬ್ದಾರಿಗಳು

**12.ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಶಾಲೆಗಳ ಜವಾಬ್ದಾರಿಯ ವ್ಯಾಪ್ತಿ –** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಶಾಲೆಯು –

(ಎ) 2ನೇ ಪ್ರಕರಣದ (ಎನ್) ಖಂಡದ (i)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ ತನ್ನಲ್ಲಿ ಪ್ರವೇಶ ಪಡೆದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;

(ಬಿ) (2) ನೇ ಉಪ ಪ್ರಕರಣದ (ಎನ್)ಖಂಡದ ಉಪ–ಖಂಡ (ii)ರಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು, ಪಡೆಯಲಾದ ಅದರ ವಾರ್ಷಿಕ ಆವರ್ತಕ ನೆರವು ಅಥವಾ ಅನುದಾನಗಳು ತನ್ನ ವಾರ್ಷಿಕ ಆವರ್ತಕ ವೆಚ್ಚಗಳ ಶೇಕಡಾವಾರು ಎಷ್ಟು ಭಾಗ ಆಗುತ್ತದೆಯೋ ಅಷ್ಟೇ ಶೇಕಡಾವಾರು ಮಕ್ಕಳಿಗೆ ತನ್ನಲ್ಲಿ ಪ್ರವೇಶ ಪಡೆದ ಮಕ್ಕಳ ಕನಿಷ್ಠ ಶೇಕಡಾ ಇಪ್ಪತ್ತೈದಕ್ಕೆ ಒಳಪಟ್ಟು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು.

(ಸಿ) (2)ನೇ ಪ್ರಕರಣದ (ಎನ್) ಖಂಡದ ಉಪ–ಖಂಡ (iii) ಮತ್ತು (iv)ರಲ್ಲಿ ನಿರ್ದಿಷ್ಟಪಡಿಸಿದ ಶಾಲೆಯುIನೇ ತರಗತಿಯಲ್ಲಿ, ತರಗತಿಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ಕನಿಷ್ಠ ಶೇಕಡಾ ಇಪ್ಪತ್ತೈದರಷ್ಟು ಸಂಖ್ಯೆಯಲ್ಲಿ ನೆರೆಹೊರೆಯ ದುರ್ಬಲ ವರ್ಗಕ್ಕೆ ಮತ್ತು ಅನುಕೂಲಸ್ಥರಲ್ಲದ ಗುಂಪಿಗೆ ಸೇರಿರುವ ಮಕ್ಕಳಿಗೆ ಪ್ರವೇಶ ನೀಡತಕ್ಕದ್ದು ಮತ್ತು ಅವರ ಶಿಕ್ಷಣ ಮುಗಿಯುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು.

ಮತ್ತೂ ಪರಂತು, 2ನೇ ಪ್ರಕರಣದ (ಎನ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು ಶಾಲಾ ಪೂರ್ವ ಶಿಕ್ಷಣ ನೀಡುತ್ತಿರುವಲ್ಲಿ,(ಎ) ಯಿಂದ (ಸಿ) ಖಂಡಗಳವರೆಗಿನ ಉಪಬಂಧಗಳು ಅಂಥ ಶಾಲಾ ಪೂರ್ವ ಶಿಕ್ಷಣಕ್ಕೆ ಮಗುವನ್ನು ಸೇರಿಸಿಕೊಳ್ಳುವುದಕ್ಕೆ ಅನ್ವಯಿಸತಕ್ಕದ್ದು.

(2) (1)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುತ್ತಿರುವ 2ನೇ ಪ್ರಕರಣದ (ಎನ್) ಖಂಡದ (೧ತ) ನೇ ಉಪ–ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಗೆ ಅದು ಹಾಗೆ ಮಾಡಲು ವಹಿಸಿದ ಖರ್ಚಿನಲ್ಲಿ, ರಾಜ್ಯವು, ಪ್ರತಿಯೊಂದು ಮಗುವಿನ ಸಂಬಂಧದಲ್ಲಿ ವಹಿಸುತ್ತಿರುವ ಖರ್ಚಿನಷ್ಟರಮಟ್ಟಿಗೆ ಅಥವಾ, ಮಗುವಿನಿಂದ ಶುಲ್ಕವಾಗಿ ಪಡೆದ ವಾಸ್ತವಿಕ ಮೊತ್ತ, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ತುಂಬಿಕೊಡತಕ್ಕದ್ದು:

ಪರಂತು, ಹಾಗೆ ತುಂಬಿಕೊಟ್ಟ ಹಣವು 2ನೇ ಪ್ರಕರಣದ (ಎನ್) ಖಂಡದ (೧) ನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು ಪ್ರತಿಯೊಂದು ಮಗುವಿಗೆ ವಹಿಸಿದ ಖರ್ಚನ್ನು ಮೀರತಕ್ಕದ್ದಲ್ಲ.

ಮತ್ತೂ ಪರಂತು, ಅಂಥ ಶಾಲೆಯು, ಉಚಿತವಾಗಿಯಾಗಲಿ ಅಥವಾ ರಿಯಾಯಿತಿ ದರದಲ್ಲಾಗಲಿ, ಯಾವುದೇ ಭೂಮಿ, ಕಟ್ಟಡ, ಸಾಧನ ಸಾಮಗ್ರಿ ಅಥವಾ ಇನ್ನಿತರ ಸೌಲಭ್ಯಗಳನ್ನು ಸ್ವೀಕರಿಸಿರುವ ಕಾರಣದಿಂದಾಗಿ ನಿರ್ದಿಷ್ಟ ಸಂಖ್ಯೆಯ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸಲು ಅದು ಈಗಾಗಲೇ ಬದ್ಧವಾಗಿರುವಲ್ಲಿ, ಅಂಥ ಶಾಲೆಯು ಹಾಗೆ ತಾನು ಬದ್ಧವಾಗಿರುವಷ್ಟರಮಟ್ಟಿಗೆ ಹಾಗೆ ಹಣದ ಭರ್ತಿಯನ್ನು ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

(3) ಪ್ರತಿಯೊಂದು ಶಾಲೆಯು, ಸಂದರ್ಭಾನುಸಾರ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

**13. ಪ್ರವೇಶಕ್ಕಾಗಿ ಯಾವುದೇ ಕ್ಯಾಪಿಟೇಷನ್ ಶುಲ್ಕ ಮತ್ತು ಪರೀಶೋಧನಾ ಕಾರ್ಯ ಇರತಕ್ಕದ್ದಲ್ಲ–** (1) ಯಾವುದೇ ಶಾಲೆ ಅಥವಾಯಾರೇ ವ್ಯಕ್ತಿಯು, ಒಂದು ಮಗುವಿಗೆ ಪ್ರವೇಶ ನೀಡುವಾಗ, ಯಾವುದೇ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡತಕ್ಕದ್ದಲ್ಲ ಮತ್ತು ಮಗುವನ್ನು ಅಥವಾ ಅವನ ಅಥವಾ ಅವಳ ತಂದೆ–ತಾಯಿ ಅಥವಾ ಪೋಷಕರನ್ನು ಪರಿಶೋಧನೆಗೆ ಒಳಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಶಾಲೆ ಅಥವಾ ಯಾರೇ ವ್ಯಕ್ತಿಯು–

(ಎ) ಕ್ಯಾಪಿಟೇಷನ್ ಶುಲ್ಕವನ್ನು ಸ್ವೀಕರಿಸಿದರೆ, ವಿಧಿಸಿದ ಕ್ಯಾಪಿಟೇಷನ್ ಶುಲ್ಕದ ಹತ್ತುಪಟ್ಟಿನವರೆಗೆ ವಿಸ್ತರಿಸಬಹುದಾಗಿರುವಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(ಬಿ) ಮಗುವನ್ನು ಪರಿಶೋಧನೆಗೆ ಒಳಪಡಿಸಿದರೆ, ಮೊದಲ ಉಲ್ಲಂಘನೆಗಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಮತ್ತುತರುವಾಯದ ಪ್ರತಿಯೊಂದು ಉಲ್ಲಂಘನೆಗಾಗಿ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**14. ಪ್ರವೇಶಕ್ಕಾಗಿ ವಯಸ್ಸಿನ ರುಜುವಾತು –** (1) ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಿಕೊಳ್ಳುವ ಉದ್ದೇಶಗಳಿಗಾಗಿ, ಮಗುವಿನ ವಯಸ್ಸನ್ನು, ಜನನ, ಮರಣ ಮತ್ತು ವಿವಾಹಗಳ ನೋಂದಣಿ ಅಧಿನಿಯಮ, 1886 (1886ರ 6)ರ ಉಪಬಂಧಗಳಿಗನುಸಾರವಾಗಿ ನೀಡಿದ ಜನನ ಪ್ರಮಾಣಪತ್ರದ ಆಧಾರದ ಮೇಲೆ ಅಥವಾ ನಿಯಮಿಸಲಾದ ಅಂಥ ಇನ್ನಿತರ ದಸ್ತಾವೇಜಿನ ಆಧಾರದ ಮೇಲೆ ನಿರ್ಧರಿಸತಕ್ಕದ್ದು.

(2) ವಯಸ್ಸಿನ ರುಜುವಾತು ಇಲ್ಲದಿರುವುದಕ್ಕಾಗಿ ಯಾವ ಮಗುವಿಗೂ ಶಾಲೆಗೆ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ.

**15. ಪ್ರವೇಶವನ್ನು ನಿರಾಕರಿಸುವಂತಿಲ್ಲ –** ಮಗುವನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅಥವಾ ನಿಯಮಿಸಲಾದಂಥ ವಿಸ್ತರಿಸಿದಅವಧಿಯ ಒಳಗೆ ಶಾಲೆಗೆ ಸೇರಿಸಿಕೊಳ್ಳತಕ್ಕದ್ದು:

ಪರಂತು, ಯಾವುದೇ ಮಗುವನ್ನು, ವಿಸ್ತರಿತ ಅವಧಿಯ ತರುವಾಯ ಸೇರಿಸಲು ಅಪೇಕ್ಷಿಸಿದರೆ, ಅದಕ್ಕೆ ಪ್ರವೇಶವನ್ನನಿರಾಕರಿಸತಕ್ಕದ್ದಲ್ಲ:

ಮತ್ತೂ ಪರಂತು, ವಿಸ್ತರಿತ ಅವಧಿಯ ನಂತರ ಪ್ರವೇಶ ಪಡೆದ ಯಾವುದೇ ಮಗುವು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ತನ್ನ ವ್ಯಾಸಂಗವನ್ನು ಪೂರ್ಣಗೊಳಿಸತಕ್ಕದ್ದು.

**16. ತಡೆಹಿಡಿಯುವಿಕೆ ಮತ್ತು ಹೊರಹಾಕುವಿಕೆಯ ನಿಷೇಧ.–**ಶಾಲೆಗೆ ಪ್ರವೇಶ ಪಡೆದ ಯಾವುದೇ ಮಗುವನ್ನು ಯಾವುದೇ ತರಗತಿಯಲ್ಲೇ ತಡೆಹಿಡಿಯತಕ್ಕದ್ದಲ್ಲ ಅಥವಾ ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಶಾಲೆಯಿಂದ ಹೊರಹಾಕತಕ್ಕದ್ದಲ್ಲ.

**17. ಮಗುವಿಗೆ ದೈಹಿಕ ದಂಡನೆ ಮತ್ತು ಮಾನಸಿಕ ಕಿರುಕುಳ ನೀಡುವುದಕ್ಕೆ ನಿಷೇಧ.–** (1) ಯಾವ ಮಗುವನ್ನೂ ದೈಹಿಕ ದಂಡನೆಗೆ ಅಥವಾ ಮಾನಸಿಕ ಕಿರುಕುಳಕ್ಕೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವವನು, ಅಂಥ ವ್ಯಕ್ತಿಗೆ ಅನ್ವಯವಾಗುವ ಸೇವಾ ನಿಯಮಗಳ ಮೇರೆಗೆ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

**18. ಮಾನ್ಯತಾ ಪ್ರಮಾಣಪತ್ರವನ್ನು ಪಡೆಯದೆ ಶಾಲೆಯನ್ನು ಸ್ಥಾಪಿಸತಕ್ಕದ್ದಲ್ಲ.–** (1) ಈ ಅಧಿನಿಯಮದ ಪ್ರಾರಂಭದ ತರುವಾಯ, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ, ಮಾಲೀಕತ್ವ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಶಾಲೆಯ ಹೊರತು ನಿಯಮಿಸಲಾದಂಥ ನಮೂನೆ ಮತ್ತು ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಮೂಲಕ ಅಂಥ ಪ್ರಾಧಿಕಾರದಿಂದ ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಯಾವ ಶಾಲೆಯನ್ನೂ ಸ್ಥಾಪಿಸತಕ್ಕದ್ದಲ್ಲ ಅಥವಾ ಅದು ಕಾರ್ಯ ನಿರ್ವಹಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ ನಿಯಮಿಸಿದ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಅವಧಿಯ ಒಳಗಾಗಿ, ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮಾನ್ಯತಾ ಪ್ರಮಾಣಪತ್ರವನ್ನು ನೀಡತಕ್ಕದ್ದು.

ಪರಂತು, 19ನೇ ಪ್ರಕರಣದಡಿ ನಿರ್ದಿಷ್ಟಪಡಿಸಿದ ಪ್ರಮಾಣಕಗಳನ್ನು ಮತ್ತು ಮಾನಕ ಗುಣಮಟ್ಟಗಳನ್ನು ಪೂರೈಸಿದ ಹೊರತು ಒಂದು ಶಾಲೆಗೆ ಅಂಥ ಯಾವ ಮಾನ್ಯತೆಯನ್ನು ನೀಡತಕ್ಕದ್ದಲ್ಲ.

(3) ಮಾನ್ಯತೆಯ ಷರತ್ತುಗಳನ್ನು ಉಲ್ಲಂಘಿಸಿದಾಗ ನಿಯಮಿಸಲಾದ ಪ್ರಾಧಿಕಾರವು ಲಿಖಿತ ಆದೇಶದ ಮೂಲಕ ಮಾನ್ಯತೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

ಪರಂತು, ಅಂಥ ಆದೇಶದಲ್ಲಿ ಮಾನ್ಯತೆ ಕಳೆದುಕೊಳ್ಳುವ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಹತ್ತಿರದ ಯಾವ ಶಾಲೆಯಲ್ಲಿ ಪ್ರವೇಶ ಪಡೆಯತಕ್ಕದ್ದು ಎಂಬ ಬಗ್ಗೆ ನಿರ್ದೇಶನವನ್ನು ನೀಡಿರತಕ್ಕದ್ದು.

ಮತ್ತೂ ಪರಂತು, ಅಂಥ ಶಾಲೆಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಅಹವಾಲನ್ನು ಹೇಳಿಕೊಳ್ಳುವ ಅವಕಾಶ ನೀಡದೆ ಹಾಗೆ ಮಾನ್ಯತೆಯನ್ನು ಹಿಂತೆಗೆದುಕೊಳ್ಳತಕ್ಕದ್ದಲ್ಲ.

(4)(3)ನೇ ಪ್ರಕರಣದ ಅಡಿಯಲ್ಲಿ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾದ ದಿನಾಂಕದಿಂದಲೇ ಜಾರಿಗೆ ಬರುವಂತೆ, ಅಂಥ ಯಾವ ಶಾಲೆಯೂ ಕಾರ್ಯನಿರ್ವಹಣೆಯನ್ನು ಮುಂದುವರಿಸತಕ್ಕದ್ದಲ್ಲ.

(5)ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಶಾಲೆಯನ್ನು ಸ್ಥಾಪಿಸುವ ಅಥವಾ ನಡೆಸುವ ಅಥವಾ ಮಾನ್ಯತೆಯನ್ನು ಹಿಂತೆಗೆದುಕೊಂಡ ನಂತರವೂ ಶಾಲೆ ನಡೆಸುವುದನ್ನು ಮುಂದುವರಿಸುವ ಯಾರೇ ವ್ಯಕ್ತಿಯು, ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಮತ್ತು ಉಲ್ಲಂಘನೆಯನ್ನು ಮುಂದುವರಿಸಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆಯ ಮುಂದುವರಿದ ಅವಧಿಯ ಪ್ರತಿಯೊಂದು ದಿನಕ್ಕಾಗಿ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**19. ಶಾಲೆಯ ಸ್ಥಾಪನೆಗಾಗಿ ಇರುವ ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳು –**ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳನ್ನು ಪೂರೈಸಿದ ಹೊರತು, ಯಾವ ಶಾಲೆಯನ್ನೂ 18ನೇ ಪ್ರಕರಣದಡಿ ಸ್ಥಾಪಿಸತಕ್ಕದ್ದಲ್ಲ ಅಥವಾ ಅದಕ್ಕೆ ಮಾನ್ಯತೆ ನೀಡತಕ್ಕದ್ದಲ್ಲ.

(2) ಈ ಅಧಿನಿಯಮವು, ಜಾರಿಗೆ ಬರುವುದಕ್ಕೆ ಮೊದಲು ಸ್ಥಾಪನೆಯಾದ ಶಾಲೆಯಾಗಿದ್ದು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸೂತ್ರಗಳು ಮತ್ತು ಮಾನದಂಡಗಳನ್ನು ಪಾಲಿಸದಿರುವಲ್ಲಿ, ಅದು, ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಮೂರು ವರ್ಷಗಳ ಅವಧಿಯ ಒಳಗೆ ತನ್ನ ಸ್ವಂತ ಖರ್ಚಿನಲ್ಲಿ ಅಂಥ ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳನ್ನು ಪಾಲಿಸಲು ಕ್ರಮ ಕೈಗೊಳ್ಳತಕ್ಕದ್ದು.

(3) ಶಾಲೆಯು, (2)ನೇ ಉಪ ಪ್ರಕರಣದಡಿ ನಿರ್ದಿಷ್ಟಪಡಿಸಿದ ಅವಧಿಯ ಒಳಗಾಗಿ ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳನ್ನು ಪಾಲಿಸಲು ವಿಫಲವಾದಲ್ಲಿ, 18ನೇ ಪ್ರಕರಣದ (1)ನೇ ಉಪ ಪ್ರಕರಣದಡಿ ನಿಯಮಿಸಲಾದ ಪ್ರಾಧಿಕಾರವು, (3)ನೇ ಉಪ–ಪ್ರಕರಣದಡಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅಂಥ ಶಾಲೆಗೆ ನೀಡಿದ್ದ ಮಾನ್ಯತೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

(4) (3)ನೇ ಉಪ–ಪ್ರಕರಣದಡಿ ಮಾನ್ಯತೆಯನ್ನು ಹಿಂತೆಗೆದುಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ, ಆ ಶಾಲೆಯು ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸತಕ್ಕದ್ದು.

(5)ಮಾನ್ಯತೆಯನ್ನು ಹಿಂತೆಗೆದುಕೊಂಡ ನಂತರವೂ, ಶಾಲೆ ನಡೆಸುವುದನ್ನು ಮುಂದುವರಿಸುವ ಯಾರೇ ವ್ಯಕ್ತಿಯು, ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಗೆ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆಯು ಮುಂದುವರಿದ ಅವಧಿಯಲ್ಲಿನ ಪ್ರತಿಯೊಂದು ದಿನಕ್ಕಾಗಿ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**20. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ –** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವುವೇ ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳನ್ನು ಅನುಸೂಚಿಗೆ ಸೇರಿಸುವ ಅಥವಾ ಅದರಿಂದ ತೆಗೆದುಹಾಕುವ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

**21. ಶಾಲೆಯ ವ್ಯವಸ್ಥಾಪನಾ ಸಮಿತಿ –** (1) 2ನೇ ಪ್ರಕರಣದ (ಎನ್) ಖಂಡದ (iv)ನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯಲ್ಲದ ಒಂದು ಶಾಲೆಯು, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಅಂಥ ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ–ತಾಯಿ ಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾ ವ್ಯವಸ್ಥಾಪನಾ ಸಮಿತಿಯೊಂದನ್ನು ರಚಿಸತಕ್ಕದ್ದು.

ಪರಂತು, ಅಂಥ ಸಮಿತಿಯ ಸದಸ್ಯರಲ್ಲಿ ಕನಿಷ್ಠ ಮುಕ್ಕಾಲು ಮಂದಿ ಸದಸ್ಯರು ತಂದೆ–ತಾಯಿ ಅಥವಾ ಪೋಷಕರಾಗಿರತಕ್ಕದ್ದು.

ಮತ್ತು ಪರಂತು, ಅನುಕೂಲಸ್ಥರಲ್ಲದ ಗುಂಪು ಹಾಗೂ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ಪೋಷಕರು ಅಥವಾ ಪಾಲಕರಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯ ನೀಡತಕ್ಕದ್ದು:

ಮತ್ತೂ ಪರಂತು, ಅಂಥ ಸಮಿತಿಯ ಸದಸ್ಯರ ಶೇಕಡಾ ಐವತ್ತರಷ್ಟು ಸದಸ್ಯರು ಮಹಿಳೆಯರಾಗಿರತಕ್ಕದ್ದು.

(2)ಶಾಲಾ ವ್ಯವಸ್ಥಾಪನಾ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಶಾಲೆಯ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು;

(ಬಿ) ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು ಮತ್ತು ಶಿಫಾರಸು ಮಾಡುವುದು;

(ಸಿ) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

**22. ಶಾಲಾ ಅಭಿವೃದ್ಧಿ ಯೋಜನೆ –** (1) 21ನೇ ಪ್ರಕರಣದ (1) ನೇ ಉಪ–ಪ್ರಕರಣದಡಿ ರಚಿತವಾದ ಪ್ರತಿಯೊಂದು ಶಾಲಾ ವ್ಯವಸ್ಥಾಪನಾ ಸಮಿತಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(2)(1)ನೇ ಉಪ ಪ್ರಕರಣದಡಿ ಹಾಗೆ ಸಿದ್ಧಪಡಿಸಲಾದ ಶಾಲಾ ಅಭಿವೃದ್ಧಿ ಯೋಜನೆಯು, ಸಂದರ್ಭಾನುಸಾರ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ರಚಿಸಿದ ಯೋಜನೆಗಳು ಮತ್ತು ನೀಡಿದ ಅನುದಾನಗಳಿಗೆ ಅನುಗುಣವಾಗಿರತಕ್ಕದ್ದು.

**23. ಶಿಕ್ಷಕರ ನೇಮಕಾತಿಗೆ ವಿದ್ಯಾರ್ಹತೆಗಳು ಮತ್ತು ಅವರ ಸೇವಾ ನಿಬಂಧನೆ ಹಾಗೂ ಷರತ್ತುಗಳು –** (1) ಕೇಂದ್ರ ಸರ್ಕಾರದಿಂದ ಅಧಿಕೃತಗೊಂಡ ಶೈಕ್ಷಣಿಕ ಪ್ರಾಧಿಕಾರವು ಅಧಿಸೂಚನೆಯ ಮೂಲಕ ನಿಗದಿಪಡಿಸಿರುವಂಥ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರುವ ಯಾರೇ ವ್ಯಕ್ತಿಯು ಶಿಕ್ಷಕನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದು.

(2) ಒಂದು ರಾಜ್ಯದಲ್ಲಿ, ಶಿಕ್ಷಕರ ಶಿಕ್ಷಣದ ವ್ಯಾಸಂಗ ಕ್ರಮಗಳನ್ನು ಅಥವಾ ತರಬೇತಿಯನ್ನು ನೀಡುವ ಸಂಸ್ಥೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿಲ್ಲದಿರುವಾಗ, ಅಥವಾ (1)ನೇ ಉಪ–ಪ್ರಕರಣದ ಅಡಿಯಲ್ಲಿ ನಿಗದಿಪಡಿಸಲಾದಂತೆ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರುವ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿರುವಾಗ, ಕೇಂದ್ರ ಸರ್ಕಾರವು, ತಾನು ಅವಶ್ಯಕವೆಂದು ಭಾವಿಸಿದಂತೆ, ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಐದು ವರ್ಷಗಳನ್ನು ಮೀರದ ಅವಧಿಗಾಗಿ, ಶಿಕ್ಷಕರ ನೇಮಕಾತಿಗೆ ಅಗತ್ಯಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಸಡಿಲಗೊಳಿಸಬಹುದು.

ಪರಂತು, ಶಿಕ್ಷಕನು, ಈ ಅಧಿನಿಯಮದ ಪ್ರಾರಂಭದಲ್ಲಿ (1)ನೇ ಉಪ–ಪ್ರಕರಣದ ಅಡಿಯಲ್ಲಿ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿಲ್ಲದೇ ಇದ್ದಾಗ, ಐದು ವರ್ಷಗಳ ಅವಧಿಯೊಳಗೆ ಅಂಥ ಕನಿಷ್ಠ ವಿದ್ಯಾರ್ಹತೆಗಳನ್ನು ಪಡೆದುಕೊಳ್ಳತಕ್ಕದ್ದು.

(3)ಶಿಕ್ಷಕರಿಗೆ ಸಂದಾಯವಾಗಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**24. ಶಿಕ್ಷಕರ ಕರ್ತವ್ಯಗಳು ಮತ್ತು ಕುಂದುಕೊರತೆಗಳ ನಿವಾರಣೆ–** (1) 23ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಶಿಕ್ಷಕನು, ಈ ಕೆಳಕಂಡ ಕರ್ತವ್ಯಗಳನ್ನು ಎಂದರೆ,–

(ಎ) ಶಾಲೆಯಲ್ಲಿ ಸೇವೆ ಸಲ್ಲಿಸುವಾಗ ಕ್ರಮಬದ್ಧತೆ ಮತ್ತು ಸಮಯ ಪಾಲನೆ;

(ಬಿ) 29ನೇ ಪ್ರಕರಣದ (2)ನೇ ಉಪ–ಪ್ರಕರಣದ ಉಪಬಂಧಗಳಿಗನುಸಾರವಾಗಿ ಪಠ್ಯ ವಿಷಯವನ್ನು ಬೋಧಿಸುವುದು ಮತ್ತು ಪಠ್ಯ ವಿಷಯದ ಬೋಧನೆಯನ್ನು ಪೂರ್ಣಗೊಳಿಸುವುದು;

(ಸಿ) ಗೊತ್ತುಪಡಿಸಿದ ವೇಳೆಯೊಳಗೆ ಸಮಗ್ರ ಪಠ್ಯ ವಿಷಯದ ಬೋಧನೆಯನ್ನು ಪೂರ್ಣಗೊಳಿಸುವ;

(ಡಿ) ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ನಿರ್ಧರಿಸಿ ಅದಕ್ಕನುನುಸಾರವಾಗಿ, ಹೆಚ್ಚುವರಿ ಬೋಧನೆಯೇನಾದರೂ ಅಗತ್ಯವಿದ್ದರೆ ಅದನ್ನೂ ಸೇರಿಸುವುದು.

(ಇ)ತಂದೆ–ತಾಯಿಗಳೊಂದಿಗೆ ಮತ್ತು ಪಾಲಕರೊಂದಿಗೆ ನಿಯತವಾಗಿ ಸಭೆಗಳನ್ನು ನಡೆಸುವ ಮತ್ತು ಮಕ್ಕಳು ಕ್ರಮಬದ್ಧವಾಗಿ ಶಾಲೆಗೆ ಬರುತ್ತಿರುವ ಬಗ್ಗೆ, ಅದರ ಕಲಿಕಾ ಸಾಮರ್ಥ್ಯದ ಬಗ್ಗೆ, ಕಲಿಕೆಯಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಮತ್ತು ಯಾವುದೇ ಇತರ ಸಂಬಂಧಪಟ್ಟ ಮಾಹಿತಿಯ ಬಗ್ಗೆ ಅವರಿಗೆ ತಿಳಿಯಪಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದಂಥ ಇತರ ಕರ್ತವ್ಯಗಳನ್ನು, – ನಿರ್ವಹಿಸತಕ್ಕದ್ದು.

(2) (1) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕರ್ತವ್ಯ ಲೋಪ ಎಸಗುವ ಶಿಕ್ಷಕನು, ಆತನಿಗೆ ಅಥವಾ ಆಕೆಗೆ ಅನ್ವಯಿಸುವ ಸೇವಾ ನಿಯಮಗಳ ಅಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

ಪರಂತು, ಅಂಥ ಶಿಸ್ತು ಕ್ರಮ ಕೈಗೊಳ್ಳುವ ಮುಂಚೆ, ಅಂಥ ಶಿಕ್ಷಕನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡತಕ್ಕದ್ದು.

(3)ಶಿಕ್ಷಕನಿಗೆ ಕುಂದುಕೊರತೆಗಳೇನಾದರೂ ಇದ್ದರೆ ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಹರಿಸತಕ್ಕದ್ದು.

**25. ವಿದ್ಯಾರ್ಥಿ–ಶಿಕ್ಷಕರ ಪ್ರಮಾಣಾನುಪಾತ –** ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳುಗಳೊಳಗೆ, ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ, ವಿದ್ಯಾರ್ಥಿ–ಶಿಕ್ಷಕರ ಸಂಖ್ಯೆಯ ಪ್ರಮಾಣಾನುಪಾತವನ್ನು ಪ್ರತಿಯೊಂದು ಶಾಲೆಯಲ್ಲೂ ನಿರ್ವಹಿಸಿರುವಂತೆ ನೋಡಿಕೊಳ್ಳತಕ್ಕದ್ದು.

(2)(1) ನೇ ಉಪ–ಪ್ರಕರಣದ ಅಡಿಯಲ್ಲಿ ವಿದ್ಯಾರ್ಥಿ–ಶಿಕ್ಷಕರ ಪ್ರಮಾಣಾನುಪಾತವನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಒಂದು ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕನನ್ನು, ಯಾವುದೇ ಇತರ ಶಾಲೆಯಲ್ಲಿ ಅಥವಾ ಕಚೇರಿಯಲ್ಲಿ ಸೇವೆ ಸಲ್ಲಿಸುವಂತೆ ಮಾಡತಕ್ಕದ್ದಲ್ಲ ಅಥವಾ 27ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥವುಗಳನ್ನು ಹೊರತುಪಡಿಸಿ, ಇತರ ಯಾವುದೇ ಶಿಕ್ಷಣೇತರ ಉದ್ದೇಶಕ್ಕಾಗಿ ಅವನನ್ನು ನಿಯೋಜಿಸತಕ್ಕದ್ದಲ್ಲ.

**26. ಶಿಕ್ಷಕರನ್ನು ಭರ್ತಿ ಮಾಡುವುದು –**ನೇಮಕಾತಿ ಪ್ರಾಧಿಕಾರವು, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಸ್ಥಾಪಿತವಾದ, ಒಡೆತನ ಹೊಂದಿದ, ನಿಯಂತ್ರಣ ಹೊಂದಿದ ಅಥವಾ ಗಣನೀಯವಾಗಿ ಹಣಕಾಸು ನೆರವನ್ನು ಪಡೆದ ಶಾಲೆಯ ಸಂಬಂಧದಲ್ಲಿ ತನ್ನ ನಿಯಂತ್ರಣದಲ್ಲಿರುವ ಶಾಲೆಯಲ್ಲಿ ಶಿಕ್ಷಕ ಹುದ್ದೆಗಳು, ಮಂಜೂರಾದ ಒಟ್ಟು ಶಿಕ್ಷಕರ ಸಂಖ್ಯೆಯ ಶೇಕಡಾ 10ಕ್ಕೆ ಮೀರಿ ಖಾಲಿ ಇರದಂತೆ ನೋಡಿಕೊಳ್ಳತಕ್ಕದ್ದು.

**27. ಶಿಕ್ಷಣೇತರ ಉದ್ದೇಶಗಳಿಗಾಗಿ ಶಿಕ್ಷಕರ ನಿಯೋಜನೆಯನ್ನು ನಿಷೇಧಿಸುವುದು–** ಯಾವ ಶಿಕ್ಷಕನನ್ನೂ, ದಶವಾರ್ಷಿಕ ಜನಗಣತಿ, ವಿಪತ್ತು ಪರಿಹಾರ ಕಾರ್ಯಗಳು ಅಥವಾ ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರ ಅಥವಾ ರಾಜ್ಯ ವಿಧಾನ ಮಂಡಲ ಅಥವಾ ಸಂಸತ್ತು ಚುನಾವಣೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೊರತುಪಡಿಸಿ, ಯಾವುದೇ ಶಿಕ್ಷಣೇತರ ಉದ್ದೇಶಗಳಿಗಾಗಿ ನಿಯೋಜನೆ ಮಾಡತಕ್ಕದ್ದಲ್ಲ.

**28. ಶಿಕ್ಷಕರು ಖಾಸಗಿ ಪಾಠ ಮಾಡುವುದನ್ನು ನಿಷೇಧಿಸುವುದು –** ಯಾವ ಶಿಕ್ಷಕನೂ, ಮನೆ ಪಾಠದಲ್ಲಿ ಅಥವಾ ಖಾಸಗಿ ಬೋಧನಾ ಚಟುವಟಿಕೆ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ.

## ಅಧ್ಯಾಯ – V

## ಪ್ರಾಥಮಿಕ ಶಿಕ್ಷಣದ ಪಠ್ಯ ವಿಷಯ ಮತ್ತು ಅದರ ಪೂರ್ಣಗೊಳಿಸುವಿಕೆ

**29. ಪಠ್ಯ ವಿಷಯ ಮತ್ತು ಪರೀಕ್ಷಾ ಪ್ರಕ್ರಿಯೆ –** ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯ ವಿಷಯವನ್ನು ಮತ್ತು ಪರೀಕ್ಷಾ ಪ್ರಕ್ರಿಯೆಯನ್ನು, ಸಮುಚಿತ ಸರ್ಕಾರವು, ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಿದ ಒಂದು ಶೈಕ್ಷಣಿಕ ಪ್ರಾಧಿಕಾರವು ನಿಗದಿಪಡಿಸತಕ್ಕದ್ದು.

(2)ಶೈಕ್ಷಣಿಕ ಪ್ರಾಧಿಕಾರವು, (1)ನೇ ಉಪ–ಪ್ರಕರಣದ ಅಡಿಯಲ್ಲಿ ಪಠ್ಯ ವಿಷಯದ ಮತ್ತು ಪರೀಕ್ಷಾ ಪ್ರಕ್ರಿಯೆಗಳನ್ನು ನಿಗದಿಪಡಿಸುವಾಗ, ಈ ಮುಂದಿನವುಗಳನ್ನು ಪರಿಗಣಿಸತಕ್ಕದ್ದು ಎಂದರೆ,–

(ಎ) ಸಂವಿಧಾನದಲ್ಲಿ ಪವಿತ್ರ ಸ್ಥಾನ ನೀಡಿರುವ ಮೌಲ್ಯಗಳ ಅನುಸರಣೆ;

(ಬಿ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ;

(ಸಿ) ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ;

(ಡಿ) ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ;

(ಇ) ಶಿಶು ಸ್ನೇಹಿ ಮತ್ತು ಶಿಶು ಕೇಂದ್ರೀಕೃತ ವಾತಾವರಣದಲ್ಲಿ ಚಟುವಟಿಕೆಗಳು, ಅನ್ವೇಷಣೆ ಮತ್ತು ಸಾಹಸ ಶೋಧನೆ ಮೂಲಕ ಮಕ್ಕಳು ಕಲಿಯುವುದು;

(ಎಫ್)ಶಿಕ್ಷಣ ಮಾಧ್ಯಮವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು;

(ಜಿ) ಮಗುವಿನ ಭಯ, ಆಘಾತ ಹಾಗೂ ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೆರವಾಗುವುದು;

(ಎಚ್)ಜ್ಞಾನದ ಗ್ರಹಿಕೆ ಮತ್ತು ಅದನ್ನು ಅನ್ವಯಿಸುವ ಆತನ ಅಥವಾ ಆಕೆಯ ಸಾಮರ್ಥ್ಯದ ಬಗ್ಗೆ ಮಕ್ಕಳ ಸಮಗ್ರ ಹಾಗೂ ನಿರಂತರ ಮೌಲ್ಯ ನಿರ್ಧರಣೆ.

**30. ಪರೀಕ್ಷೆ ಮತ್ತು ಶಿಕ್ಷಣ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ –** (1) ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಯಾವ ಮಗುವನ್ನೂ ಮಂಡಲಿಗಳ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕೆಂದು ಅಗತ್ಯಪಡಿಸತಕ್ಕದ್ದಲ್ಲ.

(2)ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ಪ್ರತಿಯೊಂದು ಮಗುವಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

# ಅಧ್ಯಾಯ – VI

## ಮಕ್ಕಳ ಹಕ್ಕುಗಳ ಸಂರಕ್ಷಣೆ

**31. ಮಕ್ಕಳ ಶಿಕ್ಷಣ ಹಕ್ಕಿನ ಮೇಲ್ವಿಚಾರಣೆ–** (1) ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ ಸಂದರ್ಭಾನುಸಾರ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ ಅಥವಾ 17ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು, ಆ ಅಧಿನಿಯಮದ ಅಡಿಯಲ್ಲಿ ಅವುಗಳಿಗೆ ವಹಿಸಿಕೊಟ್ಟ ಪ್ರಕಾರ್ಯಗಳ ಜೊತೆಯಲ್ಲಿ, ಈ ಮುಂದಿನ ಪ್ರಕಾರ್ಯಗಳನ್ನು ನಡೆಸತಕ್ಕದ್ದು ಎಂದರೆ,–

(ಎ)ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಉಪಬಂಧ ಕಲ್ಪಿಸಿದ ಹಕ್ಕುಗಳಿಗೆ ಒದಗಿಸಿದ ರಕ್ಷಣೆಗಳನ್ನು ಪರೀಕ್ಷಿಸುವ ಮತ್ತು ಪುನರವಲೋಕಿಸುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮಗಳನ್ನು ಶಿಫಾರಸು ಮಾಡುವುದು;

(ಬಿ)ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕಿಗೆ ಸಂಬಂಧಿಸಿದ ದೂರುಗಳನ್ನು ವಿಚಾರಣೆ ಮಾಡುವುದು; ಮತ್ತು

(ಸಿ)ಸದರಿ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗಗಳ ಅಧಿನಿಯಮದ 15ನೇ ಮತ್ತು 24ನೇ ಪ್ರಕರಣಗಳ ಅಡಿಯಲ್ಲಿ ಉಪಬಂಧ ಕಲ್ಪಿಸಲಾಗಿರುವಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು,

(2)ಸದರಿ ಆಯೋಗಗಳು, ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗಗಳ ಅಧಿನಿಯಮದ (1)ನೇ ಉಪ–ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕಿಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ವಿಚಾರಣೆ ಮಾಡುವಾಗ, 14ನೇ ಮತ್ತು 24ನೇ ಪ್ರಕರಣಗಳ ಅಡಿಯಲ್ಲಿ ಅನುಕ್ರಮವಾಗಿ ಅವುಗಳಿಗೆ ವಹಿಸಿಕೊಟ್ಟಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು.

(3)ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು ರಾಜ್ಯದಲ್ಲಿ ಸ್ಥಾಪನೆಯಾಗಿರದಿದ್ದಲ್ಲಿ, ಸಮುಚಿತ ಸರ್ಕಾರವು, (1)ನೇ ಉಪ ಪ್ರಕರಣದ (ಎ) ಯಿಂದ (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳು ಹಾಗೂ ಷರತ್ತುಗಳಿಗೊಳಪಟ್ಟು ಅಂಥ ಪ್ರಾಧಿಕಾರವನ್ನು ರಚಿಸತಕ್ಕದ್ದು.

**32. ಕುಂದುಕೊರತೆಗಳ ನಿವಾರಣೆ –** (1)31ನೇ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿ ಮಕ್ಕಳ ಹಕ್ಕಿಗೆ ಸಂಬಂಧಿಸಿದ ಯಾವುದೇ ಕುಂದುಕೊರತೆ ಹೊಂದಿರುವ, ಯಾರೇ ವ್ಯಕ್ತಿಯು, ಅಧಿಕಾರ ವ್ಯಾಪ್ತಿ ಹೊಂದಿರುವ ಸ್ಥಳೀಯ ಪ್ರಾಧಿಕಾರಕ್ಕೆ ಲಿಖಿತ ದೂರನ್ನು ಸಲ್ಲಿಸಬಹುದು.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ ದೂರನ್ನು ಸ್ವೀಕರಿಸಿದ ತರುವಾಯ, ಸ್ಥಳೀಯ ಪ್ರಾಧಿಕಾರವು, ಸಂಬಂಧಪಟ್ಟ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ನಂತರ ಮೂರು ತಿಂಗಳುಗಳೊಳಗೆ ಆ ವಿಷಯವನ್ನು ತೀರ್ಮಾನಿಸತಕ್ಕದ್ದು.

(3) ಸ್ಥಳೀಯ ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸಂದರ್ಭಾನುಸಾರ, ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗಕ್ಕೆ ಅಥವಾ 31ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದಾಗಿದೆ.

(4) (3)ನೇ ಉಪ–ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲನ್ನು, ಸಂದರ್ಭಾನುಸಾರ, ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ ಅಥವಾ 31ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಲಾದ ಪ್ರಾಧಿಕಾರವು, 31ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಉಪಬಂಧಿಸಲಾದಂತೆ ತೀರ್ಮಾನಿಸತಕ್ಕದ್ದು.

**33. ರಾಷ್ಟ್ರೀಯ ಸಲಹಾ ಪರಿಷತ್ತಿನ ರಚನೆ–** (1) ಕೇಂದ್ರ ಸರ್ಕಾರವು, ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ತಜ್ಞರಾದ ಮತ್ತು ಪ್ರಾಯೋಗಿಕ ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ನೇಮಿಸಿದ ಕೇಂದ್ರ ಸರ್ಕಾರವು ಅಗತ್ಯವೆಂದು ಭಾವಿಸಬಹುದಾದ ಆದರೆ ಹದಿನೈದು ವ್ಯಕ್ತಿಗಳನ್ನು ಮೀರದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡ ಒಂದು ರಾಷ್ಟ್ರೀಯ ಸಲಹಾ ಪರಿಷತ್ತನ್ನು ಅಧಿಸೂಚನೆಯ ಮೂಲಕರಚಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು ರಾಷ್ಟ್ರೀಯ ಸಲಹಾ ಪರಿಷತ್ತಿನ ಪ್ರಕಾರ್ಯವಾಗಿರತಕ್ಕದ್ದು.

(3) ರಾಷ್ಟ್ರೀಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**34. ರಾಜ್ಯ ಸಲಹಾ ಪರಿಷತ್ತಿನ ರಚನೆ –** (1) ರಾಜ್ಯ ಸರ್ಕಾರವು, ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ತಜ್ಞರಾದ ಮತ್ತು ಪ್ರಾಯೋಗಿಕ ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ನೇಮಿಸಿದ, ರಾಜ್ಯ ಸರ್ಕಾರವು ಅಗತ್ಯವೆಂದು ಭಾವಿಸಬಹುದಾದ ಆದರೆ ಹದಿನೈದು ವ್ಯಕ್ತಿಗಳನ್ನು ಮೀರದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡ ಒಂದು ರಾಜ್ಯ ಸಲಹಾ ಪರಿಷತ್ತನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ರಾಜ್ಯ ಸಲಹಾ ಪರಿಷತ್ತಿನ ಪ್ರಕಾರ್ಯವಾಗಿರತಕ್ಕದ್ದು.

(3)ರಾಜ್ಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ – VII
### ಸಂಕೀರ್ಣ

**35. ನಿರ್ದೇಶನಗಳನ್ನು ನೀಡುವ ಅಧಿಕಾರ – (1)** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಗದರ್ಶಕ ಸೂತ್ರಗಳನ್ನು ನೀಡಬಹುದಾಗಿದೆ.

(2) ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಶಾಲೆಯ ವ್ಯವಸ್ಥಾಪನಾ ಸಮಿತಿಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಗದರ್ಶಕ ಸೂತ್ರಗಳನ್ನು ಹೊರಡಿಸಬಹುದು ಮತ್ತು ನಿರ್ದೇಶನಗಳನ್ನು ನೀಡಬಹುದು.

(3) ಸ್ಥಳೀಯ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂತಹ ಶಾಲೆಯ ವ್ಯವಸ್ಥಾಪನಾ ಸಮಿತಿಗೆ ಮಾರ್ಗದರ್ಶಕ ಸೂತ್ರಗಳನ್ನು ಹೊರಡಿಸಬಹುದು ಮತ್ತು ನಿರ್ದೇಶನಗಳನ್ನು ನೀಡಬಹುದು.

**36. ಪ್ರಾಸಿಕ್ಯೂಷನ್‌ಗಾಗಿ ಪೂರ್ವ ಮಂಜೂರಾತಿ –** 13ನೇ ಪ್ರಕರಣದ (2)ನೇ ಉಪ–ಪ್ರಕರಣ, 18ನೇ ಪ್ರಕರಣದ (5)ನೇ ಉಪ–ಪ್ರಕರಣ ಮತ್ತು 19ನೇ ಪ್ರಕರಣದ (5)ನೇ ಉಪ–ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಸಮುಚಿತ ಸರ್ಕಾರವು, ಅಧಿಸೂಚನೆ ಮೂಲಕ ಈ ಸಂಬಂಧದಲ್ಲಿ ಅಧಿಕೃತ ಅಧಿಕಾರಿಯ ಪೂರ್ವ ಮಂಜೂರಾತಿ ಪಡೆದ ಹೊರತು, ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ.

**37. ಸದ್ಭಾವನೆಯಿಂದ ತೆಗೆದುಕೊಳ್ಳಲಾದ ಕ್ರಮದ ಸಂರಕ್ಷಣೆ –** ಈ ಅಧಿನಿಯಮದ ಅಥವಾ ಇದರ ಅನುಸರಣೆಯಲ್ಲಿ ರೂಪಿಸಲಾದ ಯಾವುದೇ ನಿಯಮಗಳು ಅಥವಾ ಆದೇಶಾನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ, ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ, ಸ್ಥಳೀಯ ಪ್ರಾಧಿಕಾರ, ಶಾಲೆಯ ವ್ಯವಸ್ಥಾಪನಾ ಸಮಿತಿ ಅಥವಾ ಯಾರೇ ವ್ಯಕ್ತಿಯ ವಿರುದ್ಧ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**38. ಸಮುಚಿತ ಸರ್ಕಾರದ ನಿಯಮಗಳ ರಚನಾಧಿಕಾರ –** (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ.–

(ಎ) 4ನೇ ಪ್ರಕರಣದ ಮೊದಲನೆ ಪರಂತುಕದ ಮೇರೆಗೆ ವಿಶೇಷ ತರಬೇತಿ ನೀಡುವ ರೀತಿ ಮತ್ತು ಅದರ ಕಾಲಮಿತಿ;

(ಬಿ) 6ನೇ ಪ್ರಕರಣದ ಮೇರೆಗೆ ಆಸುಪಾಸಿನಲ್ಲಿ ಶಾಲೆಯ ಸ್ಥಾಪನೆಗಾಗಿ ಇರಬೇಕಾದ ಪ್ರದೇಶ ವ್ಯಾಪ್ತಿ ಅಥವಾ ಪರಿಮಿತಿಗಳು;

(ಸಿ) 9ನೇ ಪ್ರಕರಣದ (ಡಿ) ಖಂಡದ ಮೇರೆಗೆ ಹದಿನಾಲ್ಕು ವರ್ಷ ವಯೋಮಾನದೊಳಗಿನ ಮಕ್ಕಳ ದಾಖಲೆಗಳ ನಿರ್ವಹಣಾ ರೀತಿ;

(ಡಿ) 12ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ವೆಚ್ಚವನ್ನು ತುಂಬಿಕೊಡುವ ರೀತಿ ಮತ್ತು ಅದರ ವ್ಯಾಪ್ತಿ;

(ಇ) 14ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಕ್ಕಳ ವಯೋಮಾನ ನಿರ್ಧರಣೆಗಾಗಿ ಇತರ ಯಾವುದೇ ದಸ್ತಾವೇಜು;

(ಎಫ್) 15ನೇ ಪ್ರಕರಣದ ಮೇರೆಗೆ ಶಾಲೆಗೆ ದಾಖಲಾಗಲು ಸಮಯ ವಿಸ್ತರಿಸಿದ ಅವಧಿ ಮತ್ತು ಹಾಗೆ ವಿಸ್ತರಿತ ಅವಧಿಯ ತರುವಾಯ ದಾಖಲಾಗಿದ್ದರೆ ವ್ಯಾಸಂಗವನ್ನು ಪೂರ್ಣಗೊಳಿಸುವ ರೀತಿ;

(ಜಿ) 18ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತಾ ಪ್ರಮಾಣ ಪತ್ರಕ್ಕಾಗಿ ಯಾವ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬೇಕು, ಅದಕ್ಕಾಗಿ ಇರುವ ನಮೂನೆ ಮತ್ತು ರೀತಿ;

(ಎಚ್) 18ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತಾ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಇರುವ ನಮೂನೆ, ಅವಧಿ, ರೀತಿ ಮತ್ತು ಷರತ್ತುಗಳು;

(ಐ) 18ನೇ ಪ್ರಕರಣದ (3)ನೇ ಉಪ–ಪ್ರಕರಣದ ಎರಡನೇ ಪರಂತುಕದ ಮೇರೆಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕಲ್ಪಿಸುವ ರೀತಿ;

(ಜೆ) 21ನೇ ಪ್ರಕರಣದ (2)ನೇ ಉಪ–ಪ್ರಕರಣದ (ಡಿ) ಖಂಡದ ಮೇರೆಗೆ ಶಾಲಾ ವ್ಯವಸ್ಥಾಪನಾ ಸಮಿತಿಯು ನಿರ್ವಹಿಸತಕ್ಕ ಇತರ ಪ್ರಕಾರ್ಯಗಳು.

(ಕೆ) 22ನೇ ಪ್ರಕರಣದ (1) ನೇ ಉಪ–ಪ್ರಕರಣದ ಮೇರೆಗೆ ಶಾಲಾಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವ ರೀತಿ;

(ಎಲ್)23ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಶಿಕ್ಷಕರಿಗೆ ಸಂದಾಯ ಮಾಡಬಹುದಾದ ವೇತನ ಮತ್ತು ಭತ್ಯೆಗಳು ಮತ್ತು ಅವರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು;

(ಎಂ)24ನೇ ಪ್ರಕರಣದ (1)ನೇ ಉಪ–ಪ್ರಕರಣದ (1)ನೇ ಖಂಡದ ಮೇರೆಗೆ ಶಿಕ್ಷಕರು ನಿರ್ವಹಿಸಬೇಕಾದ ಕರ್ತವ್ಯಗಳು;

(ಎನ್)24ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಶಿಕ್ಷಕರ ಕುಂದುಕೊರತೆಗಳನ್ನು ನಿವಾರಿಸುವ ರೀತಿ;
(ಒ) 30ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರುವುದಕ್ಕೆ ನೀಡುವ ಪ್ರಮಾಣಪತ್ರದ ನಮೂನೆ ಮತ್ತು ರೀತಿ;
(ಪಿ) 31ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗಿನ ಪ್ರಾಧಿಕಾರವನ್ನು ರಚಿಸುವ ರೀತಿ ಹಾಗೂ ಅದರ ನಿಬಂಧನೆಗಳು ಮತ್ತು ಷರತ್ತುಗಳು;
(ಕ್ಯೂ)33ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ರಾಷ್ಟ್ರೀಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;
(ಆರ್)34ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ರಾಜ್ಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;
(3)ಕೇಂದ್ರ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 20 ಮತ್ತು 23ನೇ ಪ್ರಕರಣಗಳ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮ ಅಥವಾ ಅಧಿಸೂಚನೆಯು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ಧತಿಯು ಹಿಂದೆ ಮಾಡಿದ ಯಾವುದೇ ನಿಯಮದ ಅಥವಾ ಅಧಿಸೂಚನೆಯ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.
(4)ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರ ರಚಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲಗಳ ಮುಂದೆ ಮಂಡಿಸತಕ್ಕದ್ದು.

**ಅನುಸೂಚಿ**

**(19 ಮತ್ತು 25ನೇ ಪ್ರಕರಣಗಳನ್ನು ನೋಡಿ)**

**ಶಾಲೆಗಾಗಿ ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳು**

| ಕ್ರ.ಸಂ. | ಬಾಬು | ಪ್ರಮಾಣಕಗಳು ಮತ್ತು ಮಾನಕಗುಣಮಟ್ಟಗಳು | |
|---|---|---|---|
| 1. | ಶಿಕ್ಷಕರ ಸಂಖ್ಯೆ:<br>(ಎ) 1ನೇ ತರಗತಿಯಿಂದ 5ನೇ ತರಗತಿಯವರೆಗೆ | ದಾಖಲಾದ ಮಕ್ಕಳು | ಶಿಕ್ಷಕರ ಸಂಖ್ಯೆ |
| | | 60ರವರೆಗೆ<br>61 ರಿಂದ 90 ರ ನಡುವೆ<br>91 ರಿಂದ 120 ರ ನಡುವೆ<br>121 ರಿಂದ 200 ರ ನಡುವೆ<br>150 ಮಕ್ಕಳಿಗೂ ಮೇಲ್ಪಟ್ಟು<br>200 ಮಕ್ಕಳಿಗೂ ಮೇಲ್ಪಟ್ಟು | 2<br>2<br>4<br>5<br>5 ಮತ್ತು ಒಬ್ಬರು ಮುಖ್ಯೋಪಾಧ್ಯಾಯರು<br>ವಿಧ್ಯಾರ್ಥಿ–ಶಿಕ್ಷಕರ ಪ್ರಮಾಣಾನುಪಾತ (ಮುಖ್ಯೋಪಾಧ್ಯಾಯರನ್ನು ಹೊರತುಪಡಿಸಿ) 40 ನ್ನು ಮೀರತಕ್ಕದ್ದಲ್ಲ. |
| ಬಿ) | 6ನೇ ತರಗತಿಯಿಂದ 8ನೇ ತರಗತಿಯವರೆಗೆ | 1) ಪ್ರತಿಯೊಂದು ತರಗತಿಗೆ ಕಡೇ ಪಕ್ಷ ಒಬ್ಬರು ಶಿಕ್ಷಕರು. ಅದರಿಂದ ಈ ಕೆಳಕಂಡ ಪ್ರತಿಯೊಂದು ವಿಭಾಗದಲ್ಲಿ ಕಡೇ ಪಕ್ಷ ಒಬ್ಬರು ಶಿಕ್ಷಕರಿರತಕ್ಕದ್ದು. | |
| | | (i) ವಿಜ್ಞಾನ ಮತ್ತು ಗಣಿತ | |
| | | (ii) ಸಮಾಜ ಶಾಸ್ತ್ರ | |
| | | (iii) ಭಾಷೆಗಳು | |
| | | (2) ಪ್ರತಿ 35 ಮಕ್ಕಳಿಗೆ ಕಡೇ ಪಕ್ಷ ಒಬ್ಬರು ಶಿಕ್ಷಕರು. | |
| | | (3) ಮಕ್ಕಳ ದಾಖಲಾತಿ ಸಂಖ್ಯೆಯು 100 ಕ್ಕೂ ಮೇಲ್ಪಟ್ಟಿದ್ದರೆ; | |
| | | (i) ಒಬ್ಬರು ಪೂರ್ಣಕಾಲಿಕ ಮುಖ್ಯೋಪಾಧ್ಯಾಯರು; | |

| | | |
|---|---|---|
| | | (ii) ಈ ಕೆಳಕಂಡ ವಿಭಾಗಗಳಿಗೆ ಅರೆಕಾಲಿಕ ಶಿಕ್ಷಕರು. |
| | | (ಎ) ಕಲಾ ಶಿಕ್ಷಣ; |
| | | (ಬಿ) ಆರೋಗ್ಯ ಮತ್ತು ದೈಹಿಕ ಶಿಕ್ಷಣ; |
| | | (ಸಿ) ಶ್ರಮ ಶಿಕ್ಷಣ; |
| 2. | ಕಟ್ಟಡ | ಸರ್ವಹವಾಮಾನ ಕಟ್ಟಡವು ಈ ಮುಂದಿನವುಗಳನ್ನು ಒಳಗೊಂಡಿರುತ್ತದೆ. |
| | | (i)ಪ್ರತಿಯೊಬ್ಬ ಶಿಕ್ಷಕರಿಗೆ ಕಡೇ ಪಕ್ಷ ಒಂದು ತರಗತಿ ಕೊಠಡಿ ಹಾಗೂ ಕಚೇರಿ ಮತ್ತು ಉಗ್ರಾಣ ಮತ್ತು ಮುಖ್ಯೋಪಾಧ್ಯಾಯರ ಕೊಠಡಿ |
| | | (ii) ತಡೆರಹಿತ ಪ್ರವೇಶ ಮಾರ್ಗ; |
| | | (iii) ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು; |
| | | (iv)ಎಲ್ಲ ಮಕ್ಕಳಿಗೂ ಸುರಕ್ಷಿತ ಮತ್ತು ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನ ಸೌಕರ್ಯ; |
| | | (v)ಮಧ್ಯಾಹ್ನದ ಊಟ ತಯಾರಿಸುವುದಕ್ಕಾಗಿ ಶಾಲೆಯಲ್ಲಿ ಒಂದು ಅಡುಗೆ ಮನೆ; |
| | | (vi)ಆಟದ ಮೈದಾನ; |
| | | (vii)ಸುತ್ತಲೂ ಗೋಡೆ ಅಥವಾ ಮುಳ್ಳುತಂತಿ ಬೇಲಿಯಿಂದ ಶಾಲಾ ಕಟ್ಟಡವನ್ನು ರಕ್ಷಿಸುವ ವ್ಯವಸ್ಥೆಗಳು. |
| 3. | ಒಂದು ಶೈಕ್ಷಣಿಕ ವರ್ಷದಲ್ಲಿ ಕಾರ್ಯ ನಿರ್ವಹಿಸುವ ದಿನಗಳು/ಶಿಕ್ಷಣ ನೀಡುವ ಗಂಟೆಗಳ ಕನಿಷ್ಠ ಸಂಖ್ಯೆ | (i)1ನೇತರಗತಿಯಿಂದ 5ನೇ ತರಗತಿಯವರೆಗೆ 200 ಕಾರ್ಯನಿರ್ವಹಣಾ ದಿನಗಳು;<br>(ii)6ನೇ ತರಗತಿಯಿಂದ 8ನೇ ತರಗತಿಯವರೆಗೆ 220 ಕಾರ್ಯ ನಿರ್ವಹಣಾ ದಿನಗಳು<br>(iii)1ನೇ ತರಗತಿಯಿಂದ 5ನೇ ತರಗತಿಯವರೆಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ 800 ಬೋಧನಾ ಗಂಟೆಗಳು<br>(iv)6ನೇ ತರಗತಿಯಿಂದ 8ನೇ ತರಗತಿಯವರೆಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ 1000 ಬೋಧನಾ ಗಂಟೆಗಳು. |
| 4. | ಶಿಕ್ಷಕರಿಗಾಗಿ ಪ್ರತಿವಾರ ಕನಿಷ್ಠ ಕಾರ್ಯ ನಿರ್ವಹಣಾ ಗಂಟೆಗಳ ಸಂಖ್ಯೆ | ಸಿದ್ಧತೆಯನ್ನೊಳಗೊಂಡಂತೆ 45 ಬೋಧನಾ ಗಂಟೆಗಳು. |
| 5. | ಬೋಧನಾ–ಕಲಿಕೆ ಉಪಕರಣ | ಪ್ರತಿಯೊಂದು ತರಗತಿಗೂ ಅಗತ್ಯವಿರುವಷ್ಟನ್ನು ಒದಗಿಸತಕ್ಕದ್ದು. |
| 6. | ಗ್ರಂಥಾಲಯ | ಪ್ರತಿಯೊಂದು ಶಾಲೆಯಲ್ಲಿ ವೃತ್ತ ಪತ್ರಿಕೆ, ನಿಯತಕಾಲಿಕೆಗಳು ಮತ್ತು ಕಥೆ ಪುಸ್ತಕಗಳನ್ನೊಳಗೊಂಡಂತೆ ಎಲ್ಲ ವಿಷಯಗಳನ್ನು ಕುರಿತಾದ ಪುಸ್ತಕಗಳನ್ನು ಒದಗಿಸಿರುವ ಒಂದು ಗ್ರಂಥಾಲಯವಿರಬೇಕು. |
| 7. | ಆಟದ ಸಾಮಗ್ರಿ, ಆಟ ಮತ್ತು ಕ್ರೀಡೋಪಕರಣಗಳು. | ಪ್ರತಿಯೊಂದು ತರಗತಿಗೂ ಅಗತ್ಯವಿರುವಷ್ಟನ್ನು ಒದಗಿಸತಕ್ಕದ್ದು. |

# ಅಧ್ಯಾಯ–3
# ಚಟುವಟಿಕಾಧಾರಿತ ಕಲಿಕಾ ವಿಧಾನ–ನಲಿಕಲಿ

ಪ್ರತಿಯೊಂದು ಮಗುವೂ ಅನನ್ಯ. ಪ್ರತಿ ಮಗುವಿನ ಕಲಿಕೆಯೂ ವ್ಯಕ್ತಿಗತ. ವ್ಯಕ್ತಿಗತ ಕಲಿಕೆಯಲ್ಲಿ ಕಲಿಕೆಯ ರೀತಿ, ಕಲಿಕೆಯ ಶೈಲಿ, ಕಲಿಕಾ ವೇಗ ಮಗುವಿನಿಂದ ಮಗುವಿಗೆ ಭಿನ್ನವಾಗಿರುತ್ತದೆ. ಈ ಅಂಶಗಳನ್ನು ಪರಿಗಣಿಸಿ ಕಲಿಕೆಯನ್ನು ವೈಯಕ್ತಿಕಗೊಳಿಸುವುದರ ಜೊತೆಗೆ ಕಲಿಕೆ ಆಪ್ತವಾಗಲು ಅದನ್ನು ಸಂತಸದಾಯಕಗೊಳಿಸುವ ನಿಮಿತ್ತ ಆಯ್ದುಕೊಂಡ ವಿಧಾನವೇ ನಲಿಕಲಿ.

ಬಹುವರ್ಗ ಹಾಗೂ ಬಹುಹಂತದ ಕಲಿಕೆ ಎಂಬ ಸಾರ್ವತ್ರಿಕ ಸಮಸ್ಯೆಗೆ ಪರಿಹಾರವಾಗಿ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವರಿಂದಲೇ ಸಿದ್ಧಗೊಂಡ ವಿಧಾನ ನಲಿಕಲಿಯಾಗಿದ್ದು, ಇದು ಶಿಕ್ಷಕ ಹಾಗೂ ಶಿಶು ಸ್ನೇಹಿ ಚಟುವಟಿಕೆ ಆಧಾರಿತ ವಿಧಾನವಾಗಿದೆ.

ದೇಶದಲ್ಲಿಯೇ ಮೊದಲ ಬಾರಿಗೆ ಪ್ರಾಥಮಿಕ ಹಂತದಲ್ಲಿ ಮಕ್ಕಳ ಸ್ವ ವೇಗದ ಕಲಿಕೆಗೆ, ಸ್ವಕಲಿಕೆಗೆ ಈ ಪದ್ಧತಿಯಲ್ಲಿ ಅವಕಾಶ ಮಾಡಿಕೊಟ್ಟಿರುವುದು ನಮ್ಮರಾಜ್ಯದ ಹೆಗ್ಗಳಿಕೆ. ಹೀಗಾಗಿ ಕರ್ನಾಟಕದಂತೆ ಭಾರತದ ಹಲವು ರಾಜ್ಯಗಳು ಈ ಪದ್ಧತಿಯನ್ನು ಅಳವಡಿಸಿಕೊಂಡಿವೆ.

ಮೊದಲು ಈ ಪದ್ಧತಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ ಜನ್ಮ ತಾಳಿ, ನಂತರ ಡಿ.ಪಿ.ಇ.ಪಿ. ಜಿಲ್ಲೆಗಳ ಆಯ್ದ ಕೆಲವು ತಾಲ್ಲೂಕು, ಕ್ಲಸ್ಟರ್‌ಗಳಲ್ಲಿ ಅಳವಡಿಸಲ್ಪಟ್ಟಿತು. 1999–2000ನೇ ಸಾಲಿನಲ್ಲಿ ಜನಶಾಲಾ ಕಾರ್ಯಕ್ರಮದಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಆಯ್ದ 10 ತಾಲ್ಲೂಕುಗಳಿಗೆ ವಿಸ್ತರಿಸಲ್ಪಟ್ಟಿತು. 2008–2009ನೇ ಸಾಲಿನಲ್ಲಿ ರಾಜ್ಯದ 30ಕ್ಕಿಂತ ಕಡಿಮೆ ಮಕ್ಕಳ ಸಂಖ್ಯೆಯನ್ನು ಹೊಂದಿರುವ 13,691 ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ತರಲ್ಪಟ್ಟಿತು. 2009–10 ನೇ ಸಾಲಿನಿಂದ ರಾಜ್ಯದ ಎಲ್ಲಾ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ 1 ಮತ್ತು 2ನೇ ತರಗತಿಗಳಿಗೆ ವಿಸ್ತರಿಸಲ್ಪಟ್ಟಿತು. 2010—11ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ 1 ರಿಂದ 3ನೇ ತರಗತಿಯವರೆಗೆ ವಿಸ್ತರಿಸಲ್ಪಟ್ಟಿದೆ.

## ನಲಿಕಲಿ ಕಲಿಕಾ ವಿಧಾನದ ಪ್ರಮುಖ ಅಂಶಗಳು

- ಶಿಶು ಕೇಂದ್ರಿತ ಶಿಕ್ಷಣಕ್ಕೆ ಪ್ರಥಮಾದ್ಯತೆ ನೀಡಲಾಗಿದೆ.
- ಬಹುವರ್ಗ ಮತ್ತು ಬಹುಹಂತದ ಕಲಿಕಾ ಪ್ರಕ್ರಿಯೆಗೆ ಮುಕ್ತ ಅವಕಾಶ.
- ಅರ್ಥಪೂರ್ಣ ಹಾಗೂ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಕಲಿಕೆ.
- ಚಟುವಟಿಕೆಯ ಕ್ರಮಬದ್ಧ ನಿರ್ವಹಣೆಯ (ಒಂದು ಮೆಟ್ಟಿಲಿನ ನಂತರ ಮತ್ತೊಂದು ಮೆಟ್ಟಿಲು) ಮೂಲಕ ಕಲಿಕೆಯನ್ನು ಸ್ಥಿರಗೊಳಿಸಲು ಅವಕಾಶ.
- ಮಗು ತನ್ನದೇ ಆದ ವೇಗದಲ್ಲಿ ಕಲಿಯಲು ಮುಕ್ತ ಅವಕಾಶ.
- ಗೊತ್ತುಪಡಿಸಿದ ಕಲಿಕಾಂಶದ ಕಲಿಕೆಯ ನಂತರವೇ ಮುಂದಿನ ಕಲಿಕಾಂಶದ ಕಲಿಕೆ.
- ಒಂದು ಶೈಕ್ಷಣಿಕ ವರ್ಷಕ್ಕೆ ಗೊತ್ತುಪಡಿಸಿದ ಕಲಿಕೆಯನ್ನು ಪೂರ್ಣಗೊಳಿಸಿದ ನಂತರವೇ ಮುಂದಿನ ವರ್ಷದ ಕಲಿಕೆಗೆ ತೊಡಗಲು ಅವಕಾಶ.
- ಕಲಿಕಾರ್ಥಿಯು ಸುಗಮಕಾರರ ಮಾರ್ಗದರ್ಶನದಲ್ಲಿ ಕಲಿಕೆಯನ್ನು ಆರಂಭಿಸಿದ ನಂತರ ಗೆಳೆಯರ ಸಹಾಯದಲ್ಲಿ ಪುನರ್ಬಲನಗೊಂಡು ಅಂತಿಮವಾಗಿ ಸ್ವತಂತ್ರ ಕಲಿಕಾರರಾಗಲು ಅವಕಾಶ.
- ಸೃಜನಾತ್ಮಕವಾಗಿ ಚಿಂತನೆಯನ್ನು ಅಭಿವ್ಯಕ್ತಗೊಳಿಸಲು ಅವಕಾಶ.
- ಪ್ರತಿ ಕಲಿಕಾರ್ಥಿಗೂ ಸುಗಮಕಾರ ಅಥವಾ ಸಹ ಕಲಿಕಾರ್ಥಿಗಳಿಂದ ನಿರಂತರ ಸಹಕಾರ ಮತ್ತು ಮಾರ್ಗದರ್ಶನ.
- ನಲಿಕಲಿ ಪದ್ಧತಿಯು ರಚನಾವಾದದ ತತ್ವವನ್ನಾಧರಿಸಿ, ಗೆಳೆಯರ ಸಹಾಯದಿಂದ ಕಲಿಯುವ ಮೂಲಕ ಸಹಭಾಗಿತ್ವದ ಕಲಿಕೆಗೆ ಅವಕಾಶ.
- ಪ್ರಗತಿ ನೋಟದ ಮೂಲಕ ಕಲಿಕಾರ್ಥಿಯು ತನ್ನ ಕಲಿಕೆಯ ಗುರಿಯನ್ನು ತಿಳಿಯುವ ಜೊತೆಗೆ ಕಲಿಕೆಯಲ್ಲಿ ತನ್ನ ಸ್ಥಾನವನ್ನು ತಿಳಿಯಲು ಸ್ವಾವಲೋಕನ ವ್ಯವಸ್ಥೆ.
- ಕಲಿಕಾ ಗುಂಪುಗಳು ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಆಧರಿಸಿ ರಚನೆಯಾಗುವ ಬದಲಿಗೆ ಅವರು ಭಾಗವಹಿಸುವ ಚಟುವಟಿಕೆಯನ್ನು ಆಧರಿಸಿ ರಚನೆಯಾಗುವುದರಿಂದ ಯಾವುದೇ ಅಸಮಾನತೆಗೆ ಅವಕಾಶವಿಲ್ಲ.
- ಕಲಿಕಾರ್ಥಿಯು ಸ್ವವೇಗದಲ್ಲಿ ಕಲಿಯುತ್ತಾ ಹೋಗುವುದರಿಂದ ಇದು ಕಲಿಕೆಯ ಆಧಾರಿತವಾಗಿದೆಯೇ ಹೊರತು ಸುಗಮಕಾರರ ಬೋಧನೆ ಆಧಾರವಾಗಿರುವುದಿಲ್ಲ.

- ಬಹುಪಾಲು ಕಲಿಕಾ ಸಾಮಗ್ರಿಗಳು ಬದಲಾಯಿಸಬಹುದಾದ ಕಾರ್ಡು/ವಸ್ತುಗಳ ರೂಪದಲ್ಲಿರುವುದರಿಂದ ಚಟುವಟಿಕೆಗಳಲ್ಲಿ ನಿರಂತರವಾಗಿ ಪರಿವರ್ತನೆ ತರಲು ಸಾಧ್ಯ.
- ಮೌಲ್ಯಮಾಪನ ಚಟುವಟಿಕೆಗಳು ವಿದ್ಯಾರ್ಥಿಯ ಗಮನಕ್ಕೆ ಬಾರದೇ ನಿರಂತರವಾಗಿ ಆಟಗಳ ಮೂಲಕ ನಡೆಯುವುದರಿಂದ ಕಲಿಕಾರ್ಥಿಗೆ ಮೌಲ್ಯಮಾಪನ ಎಂಬುದು ಸಂತಸದ ಅನುಭವವಾಗಿರುತ್ತದೆ.
- ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಅವಕಾಶ. ಭೌತಿಕ ಹಾಗೂ ಬೌದ್ಧಿಕ ಪೂರ್ವ ಸಿದ್ಧತೆಗಳನ್ನು ಒಳಗೊಂಡಿದೆ.
- ಕಲಿಕಾಂಶಗಳು ಮತ್ತು ಪರಿಕಲ್ಪನೆಗಳು ಕಲಿಕಾ ಗೋಪುರದ 6 ಹಂತಗಳ ಮುಖಾಂತರ ಸಾಗುತ್ತದೆ. (ಪೂರ್ವ ಸಿದ್ಧತಾ ಹಂತ, ಕಲಿಕಾ ಪೂರಕ ಹಂತ, ಕಲಿಕಾ ಹಂತ, ಅಭ್ಯಾಸ ಹಂತ, ಬಳಕೆ ಹಂತ ಮತ್ತು ಮೌಲ್ಯಮಾಪನ ಹಂತ)
- ಗೈರುಹಾಜರಿ ಮತ್ತು ದೀರ್ಘ ಗೈರುಹಾಜರಿ ಕಲಿಕಾರ್ಥಿಗಳು ತರಗತಿಗೆ ಪುನಃ ಶಾಲೆಗೆ ಹಾಜರಾದಾಗ ತಮ್ಮ ಕಲಿಕೆ ನಿಂತಲ್ಲಿಂದಲೇ ಪ್ರಾರಂಭಿಸಲು ಅವಕಾಶವಿದೆ.
- ಪ್ರತಿ ಸಾಮರ್ಥ್ಯ/ ಪರಿಕಲ್ಪನೆಗಳ ಕಲಿಕೆಗೆ ಪ್ರತ್ಯೇಕ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿ ನೀಡಿರುವುದರಿಂದ ಶಿಕ್ಷಕರ ಹೊರೆ ಕಡಿಮೆ ಆಗಿದೆ.
- ಕಲಿಕೆಯ ಪುನರ್ಬಲನಕ್ಕಾಗಿ ಪ್ರತಿ ಕಲಿಕಾರ್ಥಿಗೆ ಪ್ರತಿ ವಿಷಯದ ಅಭ್ಯಾಸ ಪುಸ್ತಕವನ್ನು ನೀಡಲಾಗಿದೆ.
- ಕಲಿಕಾ ಸಾಮಗ್ರಿಯನ್ನು ತಾನೇ ಬಳಸಲು, ನಿರ್ವಹಿಸಲು ಅವಕಾಶವಿದೆ.
- ಕಲಿಕಾರ್ಥಿಗಳ ಸೃಜನಾತ್ಮಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲು ಕ್ರಾಫ್ಟ್, ಆಟಗಳು, ಹಾಡು, ಕಥೆ ಮುಂತಾದ ಚಟುವಟಿಕೆಗಳನ್ನು ಅಳವಡಿಸಲಾಗಿದೆ.
- ಸಾಂಪ್ರದಾಯಿಕ ಪದ್ಧತಿಯಿಂದ ಹೊರತಾದ ತರಗತಿ ವಾತಾವರಣ ನಿರ್ಮಿಸಲಾಗಿದೆ.
- ಕಲಿತ ಕಲಿಕಾಂಶವನ್ನು ಬರವಣಿಗೆಯ ಮೂಲಕ ವ್ಯಕ್ತಪಡಿಸಲು ವಾಲ್‌ಸ್ಲೇಟ್ ವ್ಯವಸ್ಥೆ ಮಾಡಲಾಗಿದೆ.

**ಚಟುವಟಿಕೆ ಆಧಾರಿತ ಕಲಿಕಾ ವಿಧಾನವು ಭಾರತದಲ್ಲಿ 1944ರ ಸುಮಾರಿಗೆ 2ನೇ ವಿಶ್ವಯುದ್ಧದ ಸಂದರ್ಭದಲ್ಲಿ ಬ್ರಿಟಿಷ್ ಪ್ರಜೆ ಡೆವಿಡ್ ಹಾರ್ಸ್‌ಬರ್ಗ್‌ರವರಿಂದ ಪರಿಚಯಿಸಲ್ಪಟ್ಟಿತು. ಇವರು ಸೃಜನಾತ್ಮಕ ಚಿಂತಕರಾಗಿದ್ದು ರಿಷಿವ್ಯಾಲಿಯಲ್ಲಿ ಕಲಿಕೆ ಆರಂಭಿಸಿದರು. ರಾಯಲ್ ಏರ್‌ವೇಸ್‌ನಲ್ಲಿ ಕರ್ತವ್ಯಕ್ಕೆ ಸೇರ್ಪಡೆಗೊಂಡು ಚೆನ್ನೈ ಮತ್ತು ಬೆಂಗಳೂರಿನಲ್ಲಿ ಹಲವು ವರ್ಷ ಕಾರ್ಯ ನಿರ್ವಹಿಸಿದರು. ಸ್ವಯಂ ನಿವೃತ್ತಿ ಹೊಂದಿ ಕೋಲಾರ ಜಿಲ್ಲೆಯ ನೀಲ್‌ಭಾಗ್ ಎಂಬಲ್ಲಿ ಶಾಲೆ ಆರಂಭಿಸಿದರು. ಇಲ್ಲಿ ಸೃಜನಾತ್ಮಕ ಮತ್ತು ಕ್ರಿಯಾಶೀಲ ಕಲಿಕಾ ಸಾಮಗ್ರಿಗಳೊಂದಿಗೆ ಯೋಜನಾಬದ್ಧ ಶಿಕ್ಷಣ ನೀಡುವಲ್ಲಿ ಯಶಸ್ವಿಯಾದರು. ಸಂಗೀತ, ಮರಗೆಲಸ, ನೇಯ್ಗೆ, ಕಲ್ಲಿನ ಕೆತ್ತನೆ, ತೋಟಗಾರಿಕೆಯೊಂದಿಗೆ ಇಂಗ್ಲೀಷ್, ಗಣಿತ, ಸಂಸ್ಕೃತ ಮತ್ತು ತೆಲುಗು ಚಟುವಟಿಕೆ ಆಧಾರಿತ ಕಲಿಕೆಗೆ ಅವಕಾಶವಿತ್ತು. ಹೀಗೆ ಹಾರ್ಸ್‌ಬರ್ಗ್ ಚಟುವಟಿಕೆ ಆಧಾರಿತ ಕಲಿಕೆ (ನಲಿಕಲಿ)ಗೆ ಒಂದು ಮೈಲುಗಲ್ಲು ನೆಟ್ಟರು.**

## ನಲಿಕಲಿಯಲ್ಲಿ ಬಳಕೆಯಾಗಿರುವ ವಿಶೇಷ ಪದಗಳು

ನಲಿಕಲಿಯಲ್ಲಿ ಕೆಲವು ವಿಶೇಷ ಸಾಧನೋಪಕರಣಗಳಿದ್ದು ಅವುಗಳನ್ನು ಗುರುತಿಸಲು ತನ್ನದೇ ಆದ ಪದಪುಂಜಗಳನ್ನು ಹೊಂದಿದ್ದು ಅವುಗಳನ್ನು ಇಲ್ಲಿ ನೀಡಿದೆ:

**ಬಹುವರ್ಗದ ಕಲಿಕೆ:** ಒಬ್ಬ ಸುಗಮಕಾರರು ಒಂದು ವಿಷಯವನ್ನಾಧರಿಸಿ, ಒಂದೇ ಕೊಠಡಿಯಲ್ಲಿ, ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ತರಗತಿಯ ಕಲಿಕಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು.

**ಬಹುಹಂತ:** ಒಂದೇ ತರಗತಿಯ ಬೇರೆಬೇರೆ ಕಲಿಕಾ ವೇಗವನ್ನು ಹೊಂದಿರುವ ಕಲಿಕಾರ್ಥಿಗಳು ಅವರವರ ಕಲಿಕಾ ವೇಗಗಳಿಗನುಗುಣವಾಗಿ ಕಲಿಯುವುದು.

**ಕಲಿಕಾಂಶಗಳು:** ಗೊತ್ತು ಪಡಿಸಿದ ತರಗತಿಯ, ಗೊತ್ತುಪಡಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಅವಧಿಯಲ್ಲಿ ಕಲಿಕಾರ್ಥಿಯು ಗಳಿಸಲೇಬೇಕೆಂದು ನಿರ್ಧರಿಸುವ ಅಂಶಗಳು/ಸಾಮರ್ಥ್ಯಗಳು.

**ಕಲಿಕಾ ಗೋಪುರ:** ಕಲಿಕೆಯ ತತ್ವ ಆಧಾರಿತ ಹಂತಗಳಾದ ಪೂರ್ವಸಿದ್ದತೆ, ಕಲಿಕಾ ಪೂರಕ, ಕಲಿಕಾಂಶ, ಅಭ್ಯಾಸ, ಬಳಕೆ ಮತ್ತು ಮೌಲ್ಯಮಾಪನ ಹಂತಗಳನ್ನು ಗೋಪುರ ರೂಪದಲ್ಲಿ ಜೋಡಿಸಿರುವುದು.

**ಚಟುವಟಿಕೆ:** ಕಲಿಕೆಯ ಉದ್ದೇಶ ಸಾಧನೆಗಾಗಿ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವ ಎಲ್ಲವೂ. ಉದಾ: ಹಾಡು, ಕಥೆ, ಸರಳ ಸಂಭಾಷಣೆ, ಆಟ ಆಡೋಣ, ಆಡಿ ಕಲಿಯೋಣ ಇತ್ಯಾದಿ.ಚಟುವಟಿಕೆಗಳನ್ನು ಅವುಗಳ ನಿರ್ವಹಣೆಯ ಆಧಾರದಲ್ಲಿ 3 ರೀತಿಯಲ್ಲಿ ವಿಂಗಡಿಸಲಾಗಿದೆ.

**ಸಾಮೂಹಿಕ ಚಟುವಟಿಕೆ:** ಆ ಹಂತಕ್ಕೆ ಬಂದ ಕಲಿಕಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ತರಗತಿಯ ಎಲ್ಲಾ ಕಲಿಕಾರ್ಥಿಗಳನ್ನು ಒಳಗೊಂಡು ನಿರ್ವಹಿಸುವ ಚಟುವಟಿಕೆ.

**ಗುಂಪು ಚಟುವಟಿಕೆ:** ಕಲಿಕಾರ್ಥಿಯು ತನ್ನ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಗೊತ್ತು ಪಡಿಸಿದ ಚಟುವಟಿಕೆಯನ್ನು ಗೊತ್ತುಪಡಿಸಿದ ಮಾರ್ಗದರ್ಶನದ ಮೂಲಕ ನಿರ್ಧರಿತ ಗುಂಪಿನಲ್ಲಿ ಕುಳಿತು ನಿರ್ವಹಿಸುವ ಚಟುವಟಿಕೆ.

**ವೈಯಕ್ತಿಕ ಚಟುವಟಿಕೆ:** ಕಲಿಕಾರ್ಥಿ ಯಾರೊಬ್ಬರ ಸಹಾಯವಿಲ್ಲದೇ ಸ್ವತಃ ನಿರ್ವಹಿಸುವ ಚಟುವಟಿಕೆ.

**ಕಲಿಕಾ ಏಣಿ:** ತರಗತಿವಾರು, ವಿಷಯವಾರು, ನಿಗಧಿ ಪಡಿಸಿರುವ ಚಟುವಟಿಕೆಗಳ ಕ್ರಮಬದ್ಧ ಜೋಡಣೆ.

**ಮೈಲಿಗಲ್ಲು:** ಒಂದು ನಿರ್ದಿಷ್ಟ ಸಾಮರ್ಥ್ಯ/ ಕಲಿಕಾಂಶದ ಕಲಿಕೆಗಾಗಿ ಅಳವಡಿಸಿಕೊಂಡಿರುವ 5 ಅಥವಾ 6 ಹಂತಗಳನ್ನಾಧರಿಸಿದ ಚಟುವಟಿಕೆಗಳ ಗುಂಪು.

**ಮೆಟ್ಟಿಲು:** ಕಲಿಕಾ ಏಣಿಯಲ್ಲಿ ಚಟುವಟಿಕೆಗಳ ಕ್ರಮಬದ್ಧ ಜೋಡಣೆಗೆ ನೀಡಿರುವ ಕ್ರಮಸಂಖ್ಯೆ.

**ಲೋಗೊ:** ಚಟುವಟಿಕೆಗಳನ್ನು ಗುರ್ತಿಸಲು ನೀಡಿರುವ ಚಿತ್ರ ಸಂಕೇತ. ಭಾಷೆಗೆ ಬಹುತೇಕ ಪ್ರಾಣಿಗಳ ಸಂಕೇತ (ಲೋಗೋ), ಗಣಿತಕ್ಕೆ ಬಹುತೇಕ ಪಕ್ಷಿಗಳ ಸಂಕೇತ(ಲೋಗೋ), ಪರಿಸರ ಅಧ್ಯಯನಕ್ಕೆ ಬಹುತೇಕ ಕೀಟ ಸಂಕೇತಗಳ (ಲೋಗೋ) ಬಳಸಲಾಗಿದೆ.

**ಪ್ರಗತಿನೋಟ:** ಕಲಿಕಾರ್ಥಿಗಳು ತಮ್ಮ ಪ್ರಗತಿಯನ್ನು ತಾವೇ ಸ್ವತಃ ವ್ಯವಸ್ಥಿತವಾಗಿ ದಾಖಲಿಸಲು ಸಿದ್ಧಪಡಿಸಿರುವ ಕ್ಯಾಲೆಂಡರ್ ಮಾದರಿಯ ಚಾರ್ಟ್.

**ಕಾರ್ಡು:** ಗೊತ್ತು ಪಡಿಸಿದ ಚಟುವಟಿಕೆಗಳಿಗೆ ಸಂಬಂಧಿಸಿದ ವಿವರಣೆಗಳನ್ನೊಳಗೊಂಡ ಕಾರ್ಡ್ ರೂಪದ ಹಾಳೆ.


**ಅಭ್ಯಾಸ ಪುಸ್ತಕ:** ಕಲಿಕಾಂಶದ ಅಭ್ಯಾಸ ಮತ್ತು ಪುನರ್ಬಲನಕ್ಕಾಗಿ ವಿವಿಧ ಚಟುವಟಿಕೆಗಳನ್ನೊಳಗೊಂಡಿದ್ದು, ಕಲಿಕಾರ್ಥಿಯು ಓದಲು ಬರೆಯಲು ಅವಕಾಶವಿರುವ ಪುಸ್ತಕ.

**ಕಲಿಕಾ ಚಪ್ಪರ:** ನಲಿಕಲಿ ತರಗತಿಯಲ್ಲಿ ವಿದ್ಯಾರ್ಥಿಯು ವಿದ್ಯಾರ್ಥಿ ಸ್ವತಃ ತಯಾರಿಸಿದ ಹಾಗೂ ಬರೆದ ಚಿತ್ರಗಳನ್ನು ಮತ್ತು ಸೃಜನಶೀಲ ಬರವಣಿಗೆಗಳನ್ನು ತೂಗು ಹಾಕುವ ಹಂದರವಾಗಿದೆ.

**ವಾಲ್‌ಸ್ಲೇಟ್:** ಕಲಿಕಾರ್ಥಿಯ ಬರವಣಿಗೆಗಾಗಿ ಗೋಡೆಯಲ್ಲಿ ಕಾಯ್ದಿರಿಸುವ ಪ್ರತ್ಯೇಕ ಸ್ಥಳ. ಇದು ಕಲಿಕಾರ್ಥಿಯ ಕಲಿಕೆಯ ಅಭ್ಯಾಸ, ಪುನರ್ಬಲನ ಹಾಗೂ ಪುನರ್ಮನನಕ್ಕಾಗಿ ನಿಗದಿಪಡಿಸಿರುವ ಸ್ಥಳ. ಇದರ ಜೊತೆಗೆ ಕಲಿಕಾರ್ಥಿಗಳಿಗೆ ಸ್ಥಳವನ್ನು ನಿಗದಿ ಪಡಿಸಲು ಇದನ್ನು ಬಳಸಿಕೊಳ್ಳಬೇಕು.

**ಕಲಿಕಾ ಗೋಪುರ.**

ಯಾವುದೇ ಒಂದು ಕಲಿಕೆ ಪ್ರಾರಂಭಿಸುವ ಮೊದಲು ಕಲಿಕಾರ್ಥಿಯನ್ನು ಕಲಿಕಾ ವಾತಾವರಣಕ್ಕೆ ಸಿದ್ಧಗೊಳಿಸಬೇಕು. ಸಿದ್ಧಗೊಳಿಸಿದ ನಂತರ ಕಲಿಯಬೇಕಾದ ಕಲಿಕಾಂಶ/ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಕಲಿಕಾರ್ಥಿಯ ಪೂರ್ವಜ್ಞಾನವನ್ನು ಪರಿಶೀಲಿಸಬೇಕು. ಆನಂತರ ಕಲಿಕೆಗಾಗಿ ಸನ್ನಿವೇಶವನ್ನು ಸೃಷ್ಟಿಮಾಡಬೇಕು. ಕಲಿಕೆಯಾದ ನಂತರ ಅದರ ಅಭ್ಯಾಸಕ್ಕೆ ಅವಕಾಶ ಕಲ್ಪಿಸಬೇಕು. ಅಭ್ಯಾಸದ ನಂತರ ಕಲಿತದ್ದನ್ನು ಅನ್ವಯ ಮಾಡಿಕೊಳ್ಳಲು ಅನುವು ಮಾಡಿಕೊಡಬೇಕು. ಕೊನೆಗೆ ಇವೆಲ್ಲವನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ಕಲಿಕೆಯ ಪ್ರಭುತ್ವ ಮಟ್ಟವನ್ನು ಅರಿತುಕೊಳ್ಳಬೇಕು. ಆಗ ಒಂದು ಕಲಿಕಾ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಲಿಕಾ ತತ್ವಕ್ಕೆ ಪೂರಕವಾಗಿ ವಿವಿಧ ಹಂತಗಳನ್ನು ಗುರುತಿಸಲಾಗಿದೆ. ಇವುಗಳು ಗೋಪುರದ ರೂಪದಲ್ಲಿ ಶ್ರೇಣೀಕೃತವಾಗಿ ಜೋಡಿಸಲ್ಪಟ್ಟಿರುವುದರಿಂದ ಕಲಿಕಾ ಗೋಪುರ ಎಂದು ಹೆಸರಿಸಿದೆ.




**ಕಲಿಕಾ ಗೋಪುರದ 6 ಹಂತಗಳು**

1.**ಪೂರ್ವಸಿದ್ಧತಾ ಹಂತ:**ತರಗತಿಯ ವಾತಾವರಣಕ್ಕೆ ಕಲಿಕಾರ್ಥಿಯನ್ನು ಅಣಿಗೊಳಿಸುವುದು ಹಾಗೂ ಗೊತ್ತುಪಡಿಸಿದ ಕಲಿಕಾಂಶದ ಕಲಿಕೆಗಾಗಿ ಕಲಿಕಾರ್ಥಿಯ ಗಮನ ಕೇಂದ್ರಿಕರಿಸುವುದು.

2.**ಕಲಿಕಾ ಪೂರಕ ಹಂತ:** ಗೊತ್ತುಪಡಿಸಿದ ಕಲಿಕಾಂಶಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿದು ಕಲಿಕೆಗೆ ಅಣಿಗೊಳಿಸುವುದು.

3.**ಕಲಿಕಾ ಹಂತ:** ಗೊತ್ತುಪಡಿಸಿದ ಕಲಿಕಾಂಶವನ್ನು ನಿರ್ದಿಷ್ಟ ಚಟುವಟಿಕೆಗಳ ಮೂಲಕ ಪರಿಣಾಮಕಾರಿಯಾಗಿ ಅರ್ಥೈಸಿ ಕಲಿಕಾ ಸನ್ನಿವೇಶವನ್ನು ಸೃಷ್ಟಿಸುವುದು.

**4. ಅಭ್ಯಾಸ ಹಂತ**: ಗೊತ್ತುಪಡಿಸಿದ ಕಲಿಕಾಂಶವನ್ನು ಅರ್ಥೈಸಿದ ನಂತರ ಕಲಿತ ಕಲಿಕಾಂಶವನ್ನು ಅಭ್ಯಾಸ ಮಾಡುವ ಮೂಲಕ ಪುನರ್ಬಲನ ಮಾಡುವುದು.

**5. ಬಳಕೆಯ ಹಂತ:**ಪುನರ್ಬಲನ ಮಾಡಿದ ಕಲಿಕಾಂಶವನ್ನು ಅಗತ್ಯ ಸನ್ನಿವೇಶದಲ್ಲಿ ಅನ್ವಯ ಮಾಡುವುದು.

**6.ಮೌಲ್ಯಮಾಪನ ಹಂತ:**ಗೊತ್ತುಪಡಿಸಿದ ಕಲಿಕಾಂಶದ ಕಲಿಕೆಯನ್ನು ದೃಢೀಕರಿಸಿ ಖಾತ್ರಿಪಡಿಸಿಕೊಳ್ಳುವುದು.

## ನಲಿಕಲಿ ಕಲಿಕಾ ಸಾಮಗ್ರಿಗಳು

ನಲಿಕಲಿ ತರಗತಿ ನಿರ್ವಹಣೆಯಲ್ಲಿ ಕಲಿಕಾ ಸಾಮಗ್ರಿಗಳ ಪಾತ್ರ ಬಹಳ ಮುಖ್ಯವಾಗಿದೆ. ಇಲ್ಲಿ ಬಳಸುವ ಕಲಿಕಾ ಸಾಮಗ್ರಿಗಳು ಈ ಕೆಳಗಿನಂತಿವೆ:

| | | |
|---|---|---|
| • ಕಾರ್ಡ್‌ಗಳು | • ಪಪೆಟ್‌ಗಳು | • ರಬ್ಬರ್ ಅಕ್ಷರಗಳು |
| • ವಾಚಕಗಳು | • ಪ್ರಗತಿ ನೋಟಗಳು | • ಜಿಲ್ಲಾ ಪರಿಚಯ ಪುಸ್ತಕ |
| • ಅಭ್ಯಾಸ ಪುಸ್ತಕಗಳು. | • ಆಟದ ಬೋರ್ಡ್‌ಗಳು | • ಹವಾಮಾನ ನಕ್ಷೆ. |
| • ಕಲಿಕಾ ತಟ್ಟೆಗಳು | • ರಬ್ಬರ್ ಅಂಕಿಗಳು | |

### ಕಾರ್ಡ್‌ಗಳು:

ಇದು ಎ4 ಸೈಜಿನ ಅಳತೆಯ ಒಂದು ಹಾಳೆ. ಕಾರ್ಡಿನ ಮೇಲ್ಭಾಗದಲ್ಲಿ ಆಯತಾಕಾರದ ಒಂದು ಬಾಕ್ಸ್ ಇದ್ದು ಇದರ ಎಡಭಾಗದಲ್ಲಿ ಮೈಲುಗಲ್ಲು ಮತ್ತು ಚಟುವಟಿಕೆಯ ಲೋಗೋ ಇದೆ. ಇದರಿಂದ ಆ ಕಾರ್ಡ್ ಯಾವ ಮೈಲಿಗಲ್ಲಿನ ಯಾವ ಚಟುವಟಿಕೆ ಎಂದು ಗುರುತಿಸಲು ಸಾಧ್ಯವಾಗಿದೆ. ಹಾಗೂ ಬಲಭಾಗದಲ್ಲಿ ಮೆಟ್ಟಿಲು ಸಂಖ್ಯೆ ನೀಡಿದ್ದು, ಈ ಕಾರ್ಡಿನ ಮೆಟ್ಟಿಲು ಸಂಖ್ಯೆಯನ್ನು ಇದರಿಂದ ತಿಳಿಯಲು ಸಾಧ್ಯ. ಕಾರ್ಡಿನ ಮೇಲ್ಭಾಗದಲ್ಲಿ ಶಿಕ್ಷಕ/ವಿದ್ಯಾರ್ಥಿ ನಿರ್ವಹಿಸಬೇಕಾದ ಚಟುವಟಿಕೆಯ ಶೀರ್ಷಿಕೆ ನೀಡಿದ್ದು ಕೆಳಭಾಗದಲ್ಲಿ ಚಟುವಟಿಕೆಯ ವಿವರ ಕೊಡಲಾಗಿದೆ.

### ಕಾರ್ಡಿನಲ್ಲಿ ಎರಡು ವಿಧ

| | |
|---|---|
| 1. **ಶಿಕ್ಷಕರ ಕಾರ್ಡ್:** ಕಥೆ, ಸರಳ ಸಂಭಾಷಣೆ ಮತ್ತು ಕಲಿಕಾಂಶಕ್ಕೆ ಸಂಬಂಧಿಸಿದ ಕಾರ್ಡ್‌ಗಳು ಶಿಕ್ಷಕರ ಕಾರ್ಡ್‌ಗಳಾಗಿದ್ದು ಕಾರ್ಡ್‌ನಲ್ಲಿ ನೀಡಿರುವ ಸೂಚನೆಯಂತೆ ಶಿಕ್ಷಕರ ಸಂಪೂರ್ಣ ಸಹಕಾರದಲ್ಲಿ ನಿರ್ವಹಿಸುವ ಚಟುವಟಿಕೆಯ ಕಾರ್ಡುಗಳಾಗಿವೆ. |  |
| 2. **ವಿದ್ಯಾರ್ಥಿಗಳ ಕಾರ್ಡ್:** ವಿವಿಧ ಗುಂಪುಗಳಲ್ಲಿ ನಿರ್ವಹಿಸುವ ಕಾರ್ಡ್‌ಗಳು ವಿದ್ಯಾರ್ಥಿಗಳ ಕಾರ್ಡ್‌ಗಳಾಗಿದ್ದು ಶಿಕ್ಷಕ/ ಗೆಳೆಯನ ಮಾರ್ಗದರ್ಶನದಂತೆ ಹಾಗೂ ಸ್ವತಃ ವಿದ್ಯಾರ್ಥಿಯೇ ಈ ಕಾರ್ಡಿನಲ್ಲಿರುವ ಚಟುವಟಿಕೆಗಳನ್ನು ನಿರ್ವಹಿಸುತ್ತಾರೆ. |  |

| | |
|---|---|
| **ವಾಚಕಗಳು:** ವಿದ್ಯಾರ್ಥಿಗಳು ಕಲಿತ ಕಲಿಕೆಯ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಹಂತದಲ್ಲಿ ಓದು, ಬರಹ ಹಾಗೂ ಸೃಜನಶೀಲತೆಯನ್ನು ಹೆಚ್ಚಿಸಲು ಈ ಪುಸ್ತಕಗಳನ್ನು ನೀಡಲಾಗಿದೆ. 1ನೇ ತರಗತಿಯಲ್ಲಿ 40, 2ನೇ ತರಗತಿಯಲ್ಲಿ 35, ಹಾಗೂ 3ನೇ ತರಗತಿಯಲ್ಲಿ 30 ವಾಚಕಗಳಿವೆ. |  |

**ಕಲಿಕಾ ತಟ್ಟೆಗಳು:**

ಕಲಿಕಾ ತತ್ವದ 6 ಹಂತಗಳಿಗೆ ಅನುಗುಣವಾಗಿ ಪ್ರತಿ ವಿಷಯದಲ್ಲಿ 6 ಕಲಿಕಾ ತಟ್ಟೆಗಳನ್ನು ರಚಿಸಲಾಗಿದ್ದು, ಮಗುವಿನ ಕಲಿಕೆಗೆ ಹಾಗೂ ಯಾರ ಜವಾಬ್ದಾರಿಯಲ್ಲಿ, ಎಷ್ಟು ಪ್ರಮಾಣದ ಮಾರ್ಗದರ್ಶನದಲ್ಲಿ ನಿರ್ವಹಣೆ ಆಗಬೇಕೆಂಬ ದೃಷ್ಟಿಕೋನದಿಂದ ಕಲಿಕಾ ತಟ್ಟೆ ರಚನೆಯಾಗಿವೆ. ಕಲಿಕಾ ತಟ್ಟೆಗಳಲ್ಲಿ ಮಗುವಿನ ಕಲಿಕೆ ಶಿಕ್ಷಕರ ಸಹಾಯದಲ್ಲಿ ಪ್ರಾರಂಭವಾಗಿ ಗೆಳೆಯನ ಸಹಾಯದಲ್ಲಿ ಮುಂದುವರೆದು ಸ್ವ ಕಲಿಕೆಯಲ್ಲಿ ಮುಕ್ತಾಯವಾಗುತ್ತದೆ. ಮಗುವಿನ ಕಲಿಕೆ ಸುಗಮವಾಗಿ ಸಾಗಲು ಕಲಿಕಾ ತಟ್ಟೆಗಳು ಅನೂಕೂಲವಾಗಿವೆ. ಚಟುವಟಿಕೆಯ ಸ್ವರೂಪ ಹಾಗೂ ಲಕ್ಷಣಗಳ ಆಧಾರದ ಮೇಲೆ ಗುಂಪು ತಟ್ಟೆಗಳ ರಚನೆ ಆಗಿದೆ. ಪ್ರತಿ ತಟ್ಟೆಯಲ್ಲಿಯೂ ಗುಂಪಿನ ಸಂಖ್ಯೆ ಆ ಗುಂಪಿನ ಚಟುವಟಿಕೆ ನಿರ್ವಹಣೆಯ ಜವಾಬ್ದಾರಿ ಹಾಗೂ ಆ ಗುಂಪಿನಲ್ಲಿ ನಡೆಯುವ ಚಟುವಟಿಕೆಯ ಚಿತ್ರ ಸಂಕೇತ ಇರುತ್ತದೆ.



**ಪ್ರಗತಿ ನೋಟ:**

ಕಲಿಕೆಯ ವೇಗಕ್ಕೆ ಅನುಗುಣವಾಗಿ ಮಗುವನ್ನು ಚಟುವಟಿಕೆಯಲ್ಲಿ ತೊಡಗಿಸಬೇಕಾಗುತ್ತದೆ. ಆದ್ದರಿಂದ ಮಗುವಿನ ಪ್ರಗತಿಯನ್ನು ಚಟುವಟಿಕೆಯ ಕೊನೆಯಲ್ಲಿ ಗುರ್ತಿಸಬೇಕಾಗಿದೆ. ಅಂತೆಯೇ ಶೈಕ್ಷಣಿಕ ವರ್ಷದ ಕೊನೆಯಲ್ಲಿ ವಿದ್ಯಾರ್ಥಿಯ ಸಾಧನೆಯನ್ನು ಘೋಷಿಸಲು ದಾಖಲೆಯ ಅಗತ್ಯವಿದೆ. ಇದಕ್ಕಾಗಿ ಚಿತ್ರ ಸಹಿತ ಕಲಿಕಾ ಚಟುವಟಿಕೆಗಳನ್ನು ಮೆಟ್ಟಿಲುವಾರು, ಮೈಲುಗಲ್ಲುವಾರು ಪ್ರಗತಿ ನೋಟದಲ್ಲಿ ಕ್ರಮಾನುಗತವಾಗಿ ಜೋಡಿಸಲಾಗಿದೆ. ಮಗುವಿನ ಕಲಿಕೆಯನ್ನು ಚಟುವಟಿಕೆವಾರು ಗುರುತಿಸಲು ಪ್ರಗತಿ ನೋಟ ಅನುಕೂಲಕರವಾಗಿದೆ.

- ✓ ಪ್ರತಿ ವಿದ್ಯಾರ್ಥಿಯ ಪ್ರಗತಿ ನೋಟದಲ್ಲಿ ತನ್ನ ಕಲಿಕಾ ಮಟ್ಟವನ್ನು ತಿಳಿದು ತಾನು ನಿರ್ವಹಿಸಬೇಕಾದ ಚಟುವಟಿಕೆಯ ಲೋಗೊವನ್ನು ಮೈಲುಗಲ್ಲು ಸಹಿತ ಗುರುತಿಸಿಕೊಂಡು ಅದರ ಆಧಾರದಲ್ಲಿ ಸ್ವತಂತ್ರವಾಗಿ ಕಲಿಕಾ ಸಾಮಗ್ರಿಗಳನ್ನು ತೆಗೆದುಕೊಂಡು ಗುಂಪಿನಲ್ಲಿ ಕೂರುತ್ತಾರೆ.
- ✓ ವಿದ್ಯಾರ್ಥಿಯು ಗೊತ್ತು ಪಡಿಸಿದ ಚಟುವಟಿಕೆಯನ್ನು ಅಪೇಕ್ಷಿತ ರೀತಿಯಲ್ಲಿ ಪೂರ್ಣಗೊಳಿಸಿದ ಮೇಲೆ ಕಲಿಕೆಯಾಗಿರುವುದನ್ನು ಖಾತ್ರಿ ಪಡಿಸಿಕೊಂಡು ನಂತರ ಪ್ರಗತಿ ನೋಟದಲ್ಲಿ ಸದರಿ ವಿದ್ಯಾರ್ಥಿಯ ಹೆಸರಿನ ಮುಂದೆ ಚಟುವಟಿಕೆಗೆ ಸಂಬಂಧಿಸಿದ ಮೆಟ್ಟಿಲು ಕಾಲಂನಲ್ಲಿ ಸರಿ ಗುರುತು ಹಾಕಿ ಕಲಿಕಾ ಮಟ್ಟವನ್ನು ದಾಖಲಿಸಲಾಗುವುದು.




**ಪಪೆಟ್‌ಗಳು:**

ವಿದ್ಯಾರ್ಥಿಯ ಮಾನಸಿಕ ಮಟ್ಟಕ್ಕೆ ಅನುಗುಣವಾಗಿ ಕಥಾ ವಸ್ತು ಅಥವಾ ಸಂದರ್ಭವನ್ನು ನಾಟಕೀಯ ಶೈಲಿಯಲ್ಲಿ ಸಂಭಾಷಣಾ ರೂಪದಲ್ಲಿ ಅಳವಡಿಸಲಾಗಿದ್ದು ವಿದ್ಯಾರ್ಥಿಯ ಸಂವಹನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಚಟುವಟಿಕೆ ಏಕಕಾಲದಲ್ಲಿ ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗೆ ಮನರಂಜನೆಯನ್ನು ನೀಡುವ ಜೊತೆಗೆ ವಿದ್ಯಾರ್ಥಿಗಳನ್ನು ಶಾಲೆಗೆ ಆಕರ್ಷಿಸಲು ಸಹಕಾರಿಯಾಗಿದೆ. ಹಿರಿಯ ತರಗತಿಯ ವಿದ್ಯಾರ್ಥಿಗಳನ್ನು ಈ ಚಟುವಟಿಕೆ ಮಾಡುವಾಗ ಬಳಸಿಕೊಳ್ಳಬಹುದಾದ ಈ ಚಟುವಟಿಕೆಯಿಂದ ಮಕ್ಕಳಲ್ಲಿ ಸಂವಂಹನ ಕೌಶಲ ಉತ್ತಮಪಡಿಸಲು ಹಾಗೂ ಸೃಜನ ಶೀಲತೆ ಹೆಚ್ಚಿಸಲು ಸಾಧ್ಯ.



**ಆಟದ ಬೋರ್ಡ್‌ಗಳು:**

ಆಟದಿಂದ ಪಾಠ ಎಂಬಂತೆ ನಲಿಕಲಿ ತರಗತಿಯಲ್ಲಿ ಅನೇಕ ಆಟಗಳ ಮೂಲಕ ಮಕ್ಕಳು ಕಲಿಕೆಯನ್ನು ಅನ್ವಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ 1 ರಿಂದ 3ನೇ ತರಗತಿಯಲ್ಲಿ ಬಳಕೆ ಮತ್ತು ಮೌಲ್ಯಮಾಪನ ಹಂತಗಳಲ್ಲಿ ಆಟಗಳನ್ನು ನೀಡಲಾಗಿದೆ. 3ನೇ ತರಗತಿಗೆ ಈ ಆಟಗಳ ಬೋರ್ಡ್‌ಗಳನ್ನು ಶಿಕ್ಷಕರೇ ತಯಾರಿಸಿಕೊಂಡಿರುತ್ತಾರೆ. ಈ ಬೋರ್ಡ್‌ಗಳನ್ನು ಬಳಸಿ ವಿದ್ಯಾರ್ಥಿಗಳು ತಮ್ಮ ಚಟುವಟಿಕೆಗೆ ಅನುಗುಣವಾಗಿ ಆಟಗಳನ್ನು ಆಡುವರು.



| | |
|---|---|
| **ಹವಾಮಾನ ನಕ್ಷೆ:**<br>ಇದು ಪರಿಸರ ಅಧ್ಯಯನದ ಚಟುವಟಿಕೆಯಾಗಿದ್ದು, ದೈನಂದಿನ ಹವಾಮಾನವನ್ನು ತಿಳಿಯಲು 6 ಚಿತ್ರಗಳನ್ನು ಒಳಗೊಂಡಿರುವ ಪ್ರತಿದಿನ ಗುರುತು ಹಾಕಲು ಬಳಸುವ ಕ್ಯಾಲೆಂಡರ್ ಮಾದರಿಯ ಚಾರ್ಟ್. ಇದು ಸ್ಥಳೀಯ ವಾತಾವರಣದ ಅರಿವು ಮೂಡಿಸಲು ಹಾಗೂ ಹವಾಮಾನದಲ್ಲಿ ಉಂಟಾಗುವ ಬದಲಾವಣೆಗಳನ್ನು ಗುರುತಿಸಲು ಸಹಕಾರಿಯಾಗಿದೆ |  |
| **ಜಿಲ್ಲಾ ಪರಿಚಯ ಪುಸ್ತಕ:**<br>ಇದು 3ನೇ ತರಗತಿಯಲ್ಲಿ ಬಳಸಿರುವ ವಿಶೇಷ ಚಟುವಟಿಕೆಯಾಗಿದೆ. ಕಲಿಕಾರ್ಥಿಗೆ ತನ್ನ ಜಿಲ್ಲೆಯ ಜೊತೆಗೆ ತನ್ನ ನೆರೆಯ 4 ಜಿಲ್ಲೆಗಳ ಪರಿಚಯ ಮಾಡಿಸುವ ಸಲುವಾಗಿ ಈ ಪುಸ್ತಕಗಳನ್ನು ನೀಡಲಾಗಿದ್ದು, ಅದರಲ್ಲಿ ಆ ಜಿಲ್ಲೆಗಳ ಭೌಗೋಳಿಕ ಅಂಶಗಳು, ಆಹಾರ, ಬೆಳೆ, ಕಾರ್ಖಾನೆಗಳು ಹಾಗೂ ಐತಿಹಾಸಿಕ ಸ್ಥಳಗಳ ಮಾಹಿತಿಗಳನ್ನೊಳಗೊಂಡಿದೆ. |  |

## ನಲಿಕಲಿ ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-2005

ನಲಿಕಲಿಯು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಆಶಯಗಳನ್ನು ಇದು ಜಾರಿಗೆ ಬರುವ ಮೊದಲೇ ಅಳವಡಿಸಿಕೊಂಡು ಅನುಷ್ಠಾನಗೊಳಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಇದರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಆಧರಿಸಿ ಚಟುವಟಿಕೆ ರೂಪಿಸಲಾಗಿದೆ. ಸಂವಿಧಾನದ ಆಶಯಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಾದೇಶಿಕ ಭಿನ್ನತೆ ನಿವಾರಣೆ, ಭ್ರಾತೃತ್ವ, ಸಮಾನತೆಗೆ ಶಾಲಾ ವಾತಾವರಣದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಗು ತನ್ನಜ್ಞಾನವನ್ನು ಸಂರಚಿಸಿಕೊಂಡು ಗುಣಮಟ್ಟದ ಕಲಿಕೆಗೆ ನಲಿಕಲಿ ಸಹಕಾರಿಯಾಗಿದೆ. ಮಗುವಿನ ಸುದೀರ್ಘ ಶೈಕ್ಷಣಿಕ ಪ್ರಯಾಣಕ್ಕೆ ಚಟುವಟಿಕೆ ಆಧಾರಿತವಾಗಿ ನಲಿಯುತ್ತಾ ಕಲಿಯಲು ಭದ್ರ ಬುನಾದಿಯ ಅವಕಾಶ ನೀಡಿದೆ. ಹಾಗೆಯೇ ಎನ್.ಸಿ.ಎಫ್-2005ರ ಆಶಯಗಳನ್ನು ಹೀಗೆ ಈಡೇರಿಸಿದೆ.

### 1. ಜ್ಞಾನ ಸಂರಚನೆಗೆ ಅವಕಾಶ

ಮಗು ತನ್ನ ಪರಿಸರದಲ್ಲಿ ಅನೌಪಚಾರಿಕವಾಗಿ ಜ್ಞಾನ ಸಂಪಾದಿಸಿರುತ್ತಾನೆ. ಇದನ್ನು ಶಾಲಾ ಕಲಿಕಾ ಪ್ರಕ್ರಿಯೆಯಲ್ಲಿ ಪಕ್ವಗೊಳಿಸುವ ಪ್ರಯತ್ನ ನಡೆಯುತ್ತದೆ. ಜ್ಞಾನ ಕಟ್ಟಿಕೊಳ್ಳುವ ಕ್ರಿಯೆ ಅನುಕೂಲಿಸುವುದರಿಂದ ಆರಂಭಗೊಂಡು ಗೆಳೆಯರ ಸಹಾಯದಲ್ಲಿ ಪಕ್ವಗೊಂಡು ಸ್ವಕಲಿಕೆಯಲ್ಲಿ ಖಾತ್ರಿಗೊಳ್ಳುತ್ತದೆ. ಪ್ರಭುತ್ವಮಟ್ಟದ ಕಲಿಕೆಯ ದೃಢೀಕರಣವನ್ನು ದಾಖಲಿಸಲು ಅವಕಾಶವಿದೆ. ಹೀಗೆ ಕಲಿಕಾರ್ಥಿಗೆ ವಿವಿಧ ಮಜಲುಗಳಲ್ಲಿ ಜ್ಞಾನ ಸಂರಚನೆಗೆ ಸಹಕಾರಿಯಾಗಿದೆ. ಅನೇಕ ಚಟುವಟಿಕೆಗಳನ್ನು ಮಗು ತಾನೇ ನಿರ್ವಹಿಸುವುದರಿಂದ ಜ್ಞಾನ ಕಟ್ಟಿಕೊಳ್ಳಲು ಪ್ರೇರಣೆಯಾಗಿದೆ.

### 2. ಕಲಿಯುವುದನ್ನು ಕಲಿಯಲು ಅವಕಾಶ

ಬದಲಾದ ಶೈಕ್ಷಣಿಕ ಸನ್ನಿವೇಶದಲ್ಲಿ ಕಲಿಕೆಗೆ ಅತ್ಯಂತ ಮಹತ್ವ ಸ್ಥಾನವಿದೆ. ಕಲಿಯುವುದು ಒಂದು ಕಲೆಯಾಗಿದೆ. ಹಲವು ಆಯಾಮಗಳ ಮೂಲಕ ಕಲಿಯುವ ಕ್ರಮ ಹೊಂದಿರುವ ಕಲಿಕಾರ್ಥಿಗಳಿಗೆ ಅನುಕೂಲವಾಗುವಂತೆ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ತನ್ನ ಕಲಿಕಾ ಪ್ರಗತಿಯನ್ನು ಗಮನಿಸಿ ಮುಂದಿನ ಚಟುವಟಿಕೆ ಆಯ್ದುಕೊಂಡು ಗುಂಪನ್ನು ಆಯ್ಕೆಮಾಡಿಕೊಂಡು ಸೂಚನೆಯನುಸಾರ ಕಲಿಕೆಯಲ್ಲಿ ತೊಡಗುವುದನ್ನು ಅಪೇಕ್ಷಿಸಲಾಗುತ್ತದೆ. ಹೀಗೆ ತಾನೇ ಕಲಿಯುವುದನ್ನು ಕಲಿಯಲು ಅವಕಾಶ ಕಲ್ಪಿಸಲಾಗಿದೆ.

### 3. ಭಯ ಮುಕ್ತ ಕಲಿಕಾ ವಾತಾವರಣ

"ಸಂತಸದಾಯಕ ಕಲಿಕೆ" ನಲಿಕಲಿಯ ಮೂಲ ತತ್ವಗಳಲ್ಲಿ ಒಂದಾಗಿದೆ. ವಿದ್ಯಾರ್ಥಿಯು ಮುಕ್ತ ವಾತಾವರಣದಲ್ಲಿ ತನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಹಾಡು, ಆಟ, ಕ್ರಾಫ್ಟ್, ಯೋಜನೆಗಳಿಂದ ತನ್ನನ್ನು ಸಂಪೂರ್ಣ ತೊಡಗಿಸಿಕೊಳ್ಳಲು ಪ್ರೇರೇಪಿಸಲಾಗುತ್ತದೆ. ಇದು ಅನುಕೂಲಿಸುವವರು ಮತ್ತು ಗೆಳೆಯರ ನಡುವೆ ಉತ್ತಮ ಬಾಂಧವ್ಯವನ್ನು ಬೆಳೆಸುತ್ತದೆ. ಇದರಿಂದ ಭಯ ಮುಕ್ತ ಕಲಿಕಾ ವಾತಾವರಣ ನಿರ್ಮಾಣವಾಗುತ್ತದೆ.

### 4. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿರುವುದು

ವಿಭಿನ್ನ ಚಟುವಟಿಕೆಗಳಿಂದ ಕಲಿಕಾಂಶವನ್ನು ಅರ್ಥೈಸಿಕೊಂಡ ನಂತರ ಸ್ವಮೌಲ್ಯಮಾಪನಕ್ಕೆ ವಿದ್ಯಾರ್ಥಿಯನ್ನು ಇಲ್ಲಿ ತೊಡಗಿಸಲಾಗುವುದು. ಆಟಗಳು ಮತ್ತು ವಿವಿಧ ಚಟುವಟಿಕೆಗಳನ್ನು ನೀಡುವುದರ ಮೂಲಕ ಕಲಿಕಾರ್ಥಿಯ ಮೌಲ್ಯಮಾಪನ ಮಾಡಲಾಗುತ್ತದೆ. ಇದು ಪರೀಕ್ಷೆ ಅಥವಾ ಮೌಲ್ಯಮಾಪನ ಎಂಬುದು ನೇರವಾಗಿ ತಿಳಿಯದೇ ಪರೋಕ್ಷವಾಗಿ ಸಾಗುತ್ತದೆ. ಕಲಿಕಾರ್ಥಿ ಇದನ್ನು ಪರೀಕ್ಷೆಯೆಂದು ಭಾವಿಸದೇ ಭಯವಿಲ್ಲದೇ ಸಂತೋಷವಾಗಿ ಪಾಲ್ಗೊಳ್ಳುವರು.

## 5.ಸ್ವ ವೇಗದ ಕಲಿಕೆಗೆ ಅವಕಾಶ

ಕಲಿಕಾ ವೇಗ ಕಲಿಕಾರ್ಥಿಯಿಂದ ಕಲಿಕಾರ್ಥಿಗೆ ಭಿನ್ನವಾಗಿರುತ್ತದೆ. ಕಲಿಕಾರ್ಥಿ ತನ್ನದೇ ವೇಗದಲ್ಲಿ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ನಿಯಮಿತವಾಗಿ ಶಾಲೆಗೆ ಹಾಜರಾಗದ ಮಗು ತಾನು ನಿರ್ವಹಿಸಿರುವ ಕಲಿಕೆಯಿಂದ ಮುಂದುವರಿಸಲು ಅವಕಾಶವಿದೆ. ವೇಗವಾಗಿ ಕಲಿಯುವ ಮಗು, ಸಾಧಾರಣ ಕಲಿಕಾ ವೇಗ ಹೊಂದಿರುವ ಮಗು, ನಿಧಾನ ಕಲಿಕೆಯ ಮಗು ಇವರೆಲ್ಲರನ್ನು ಗಮನದಲ್ಲಿರಿಸಿಕೊಂಡು ಕಲಿಕೆ ಸಾಗುತ್ತದೆ. ನಿಯಮಾನುಸಾರ ತೇರ್ಗಡೆ ಹೊಂದಿದ್ದರೂ ಸಹ ಮುಂದಿನ ತರಗತಿಯ ಕಲಿಕೆಯ ಆರಂಭಕ್ಕೆ ಮುನ್ನ ಹಿಂದಿನ ತರಗತಿಯ ಕಲಿಕಾ ಕೊರತೆಯನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಿದೆ. ಇದರಿಂದ ಕಲಿಕೆಯ ಹೊರೆ ಕಡಿಮೆಯಾಗುತ್ತದೆ.

## 6. ಕಂಠಪಾಠ ವಿಧಾನದಿಂದ ಕಲಿಕಾ ಪ್ರಕ್ರಿಯೆಯನ್ನು ಮುಕ್ತಗೊಳಿಸಿದೆ

ನಲಿಕಲಿ ವಿಧಾನದಲ್ಲಿ ನಿಗದಿಪಡಿಸಿಕೊಳ್ಳಲಾಗಿರುವ ಸಾಮರ್ಥ್ಯ ಮತ್ತು ಪರಿಕಲ್ಪನೆಗಳನ್ನು ಕಲಿಕೆಯು ಚಟುವಟಿಕಾಧಾರಿತವಾಗಿ ನಡೆಯುವಂತೆ ರೂಪಿಸಲಾಗಿದೆ. ವಿವಿಧ ಹಂತಗಳಲ್ಲಿ ಕಲಿಕಾಂಶವನ್ನು ವಿಭಾಗಿಸಿ, ಸರಳೀಕರಿಸಿ, ಸುಗಮ ಕಲಿಕೆಗೆ ಅನುವು ಮಾಡಿಕೊಡಲಾಗಿದೆ. ಕಲಿತದ್ದನ್ನು ಮುಂದಿನ ಹಂತದಲ್ಲಿ ಅಭ್ಯಸಿಸಿ, ಅನ್ವಯಿಸಿ, ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತದೆ. ಎಲ್ಲೂ ಒತ್ತಾಯದ ಮತ್ತು ಬಾಯಿ ಪಾಠದ ಕಲಿಕೆಗೆ ಅವಕಾಶ ನೀಡಲಾಗಿರುವುದಿಲ್ಲ.

## 7. ಗುಂಪು ಕಲಿಕೆ, ಸಹವರ್ತಿ ಕಲಿಕೆ, ಸ್ವ ಕಲಿಕೆಗೆ ಅವಕಾಶ

ಹಲವಾರು ಚಟುವಟಿಕೆಗಳನ್ನು ಕಲಿಕಾರ್ಥಿ ಗುಂಪಿನಲ್ಲಿ ನಿರ್ವಹಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಕಲಿಕಾರ್ಥಿಗೆ ಚರ್ಚಿಸುವ, ಸ್ವೀಕರಿಸುವ, ಅಭಿಪ್ರಾಯ ವ್ಯಕ್ತಪಡಿಸುವ, ನಾಯಕತ್ವ ವಹಿಸುವ, ಚಟುವಟಿಕೆ ನಿರ್ದೇಶಿಸುವ, ಇತರರ ಅಭಿಪ್ರಾಯಗಳಿಗೆ ಮನ್ನಣೆ ನೀಡುವ ಅವಕಾಶವಿರುತ್ತದೆ. ಹೀಗೆ ಗುಂಪಿನಲ್ಲಿ ತನ್ನ ವರ್ತನೆಗಳ ಮೂಲಕ ತನ್ನತನವನ್ನು ಪ್ರದರ್ಶಿಸಿ ಕಲಿಕೆಯಲ್ಲಿ ತೊಡಗಬೇಕಾಗುತ್ತದೆ. ಈಗಾಲೇ ಚಟುವಟಿಕೆಯನ್ನು ಯಶಸ್ವಿಯಾಗಿ ಪೂರೈಸಿರುವ ಗೆಳೆಯರಿಂದ ಕಲಿಯುವ, ತಾನು ಕಲಿತದ್ದನ್ನು ತನಗಿಂತ ಕಲಿಕೆಯಲ್ಲಿ ಹಿಂದಿರುವವರಿಗೆ ಕಲಿಸುವುದರಿಂದ ಕಲಿಕೆಯು ಪುನರ್ಬಲನಗೊಳ್ಳುತ್ತದೆ. ಹಿರಿಯ ತರಗತಿಯ ಕಲಿಕಾರ್ಥಿಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವ ಸಂದರ್ಭವಿರುತ್ತದೆ. ಮೌಲ್ಯಮಾಪನ ಚಟುವಟಿಕೆಗಳು ಸ್ವತಂತ್ರ ನಿರ್ವಹಣೆಯನ್ನು ಬಯಸುತ್ತವೆ. ಇದನ್ನು ನಿರ್ವಹಿಸುತ್ತಾ ಸ್ವತಂತ್ರವಾಗಿ ಆಲೋಚಿಸುವ, ನಿರ್ಧರಿಸುವ, ತೀರ್ಮಾನ ವ್ಯಕ್ತಪಡಿಸುವ ಹಂತಕ್ಕೆ ತಲುಪುತ್ತಾರೆ.

## 8. ಶಿಕ್ಷಕರಿಗೆ ಮುಕ್ತ ಸ್ವಾತಂತ್ರ್ಯ

ಕಲಿಕೆಯನ್ನು ಅನುಕೂಲಿಸುವ ಸಂದರ್ಭದಲ್ಲಿ ಗೊತ್ತುಪಡಿಸಿದ ಚಟುವಟಿಕೆಯನ್ನು ನಿರ್ವಹಿಸಿ ಇದಕ್ಕೆ ಪೂರಕವಾದ ತನಗೆ ತಿಳಿದಿರುವ ಹೊಸ ಚಟುವಟಿಕೆ ರೂಪಿಸುವ ಸ್ವಾತಂತ್ರ್ಯವಿದೆ. ಇಲಾಖೆ ಪೂರೈಸಿರುವ ಸಾಮಗ್ರಿಗಳೊಂದಿಗೆ ತಾನೇ ತಯಾರಿಸಿದ ಮತ್ತು ಸ್ಥಳೀಯವಾಗಿ ಲಭ್ಯವಿರುವ ಕಲಿಕಾ ಸಾಮಗ್ರಿಗಳನ್ನು ಬಳಸಲು ಮುಕ್ತ ಅವಕಾಶವಿದೆ. ಸ್ಥಳೀಯ ಭಾಷೆ ಹಾಗೂ ಪರಿಸರಕ್ಕೆ ಹೊಂದುವ ರೀತಿಯಲ್ಲಿ ಕಲಿಕೆಯನ್ನು ಸರಳೀಕರಿಸಿ ಅನುಕೂಲಿಸುವಂತೆ ನಿರ್ದೇಶನ ನೀಡಿದೆ. ಸ್ಥಳೀಯ ಹಾಡು, ಕಥೆ, ಕ್ರಾಫ್ಟ್, ಆಟ ಮುಂತಾದವುಗಳಿಂದ ಕಲಿಕಾ ಪ್ರಕ್ರಿಯೆಯನ್ನು ಶ್ರೀಮಂತಗೊಳಿಸಲು ಶಿಕ್ಷಕರಿಗೆ ಮುಕ್ತ ಸ್ವಾತಂತ್ರ್ಯವಿದೆ.

## 9. ಕಲಿಕಾರ್ಥಿಯ ಆತ್ಮ ಗೌರವ ಇಮ್ಮಡಿ

ಕಲಿಕಾರ್ಥಿಯು ತಾನು ಈ ಸಂದರ್ಭದಲ್ಲಿ ತಾನು ಕಲಿಯಬೇಕಾಗಿರುವ ಪರಿಕಲ್ಪನೆ ಬಗ್ಗೆ ತಿಳಿದು ತನ್ನ ಸ್ಥಾನವನ್ನು ಗೊತ್ತುಪಡಿಸಿಕೊಂಡು ಶಿಕ್ಷಕರ ಹಾಗೂ ಸಹವರ್ತಿಗಳ ನೆರವಿನಿಂದ ಕಲಿಕೆಯಲ್ಲಿ ತೊಡಗುತ್ತಾರೆ. ಈಗಾಗಲೇ ತನಗೆ ತಿಳಿದಿರುವ ಜ್ಞಾನದೊಂದಿಗೆ ಹೋಲಿಸಿಕೊಳ್ಳುತ್ತಾ ಮುಂದುವರೆಯುತ್ತಾನೆ. ತಾನು ಕಲಿಯಬಲ್ಲೇನೆಂಬ ವಿಶ್ವಾಸ ಮನದಲ್ಲಿ ಅಚ್ಚೊತ್ತುತ್ತದೆ. ತಾನು ಸಾಗಿ ಬಂದಿದ್ದನ್ನು ಸ್ವವಿಮರ್ಶೆಗೆ ಒಳಪಡಿಸುತ್ತಾ ದೃಢೀಕರಣದೊಂದಿಗೆ ಹೊಸದರೆಡೆಗೆ ಸಾಗುತ್ತಾನೆ. ಇದರಿಂದ ತನ್ನ ಆತ್ಮಗೌರವ ಇಮ್ಮಡಿಯಾಗುತ್ತದೆ.

## 10. ಅಭಿವ್ಯಕ್ತಿಗೆ ಮುಕ್ತ ಮಾಧ್ಯಮ/ ಸ್ವಾತಂತ್ರ್ಯ

ಕಲಿಕಾ ಪ್ರಕ್ರಿಯೆಯ ಸಂದರ್ಭದಲ್ಲಿ ಹಲವಾರು ಚಟುವಟಿಕೆಗಳನ್ನು ನಿರ್ವಹಿಸುತ್ತಾ ವೈಯಕ್ತಿಕವಾಗಿ, ಗುಂಪಿನಲ್ಲಿ ಹಾಗೂ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾರೆ. ಚಟುವಟಿಕೆ ಬಯಸುವಂತೆ ಮೌಖಿಕವಾಗಿ ಹಾಗೂ ಲಿಖಿತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ತಾನು ಪಡೆದ ಜ್ಞಾನವನ್ನು ತನ್ನದೇ ಆದ ರೀತಿಯಲ್ಲಿ ವ್ಯಕ್ತಪಡಿಸಲು ಮುಕ್ತ ಸ್ವಾತಂತ್ರ್ಯ ನೀಡಲಾಗಿದೆ.

## 11. ಯೋಚನೆಯಲ್ಲಿ ಸ್ವಾತಂತ್ರ್ಯ

ಮಗು ಸಾಮಾಜೀಕರಣದ ಹಾದಿಯಲ್ಲಿ ಸಾಗುವಾಗ ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ತನ್ನ ಭಾವನೆ ಅಥವಾ ಯೋಚನೆಗಳನ್ನು ತರ್ಕಿಸಲು ಮತ್ತು ಮಂಡಿಸಲು ಅವಕಾಶ ಪಡೆದಿರುತ್ತಾನೆ. ನಲಿಕಲಿ ಕಲಿಕಾ ಪ್ರಕ್ರಿಯೆಯಲ್ಲಿ ಚಟುವಟಿಕೆಗಳು ಅತ್ಯಂತ ಪ್ರಧಾನ ಪಾತ್ರ ವಹಿಸುತ್ತವೆ. ಹಲವಾರು ಚಟುವಟಿಕೆಗಳು ಮಗುವಿನ ಸ್ವಂತ ಯೋಚನೆಗಳನ್ನು ಹೊರಹಾಕಲು ಪ್ರೇರೇಪಿಸುತ್ತದೆ. ಮಗು ತನ್ನ ಪೂರ್ವಜ್ಞಾನ, ಮನೆ, ಕುಟುಂಬ, ಪರಿಸರ, ಭೌಗೋಳಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಯೋಚಿಸಿ, ತರ್ಕಿಸಿ ತೀರ್ಮಾನಕ್ಕೆ ಬರಲು ಪೂರಕವಾದ ಅವಕಾಶಗಳನ್ನು ಒದಗಿಸಲಾಗಿದೆ.

## ಶಿಕ್ಷಣ ಹಕ್ಕು ಕಾಯ್ದೆ ಮತ್ತು ನಲಿಕಲಿ

| ಕ್ರ.ಸಂ | ಶಿಕ್ಷಣ ಹಕ್ಕು ಕಾಯ್ದೆ | ನಲಿಕಲಿ |
|---|---|---|
| 1 | ಕಲಿಕಾ ಪರಿಸರವು ಮುಖ್ಯವಾಗಿ ಕಲಿಕೆಯನ್ನು ಉತ್ತೇಜಿಸುವಂತಿರಬೇಕು. | ತರಗತಿ ಕೋಣೆಯನ್ನು ಆಕರ್ಷಣೀಯವಾಗಿ ಮತ್ತು ಕಲಿಕೆಗೆ ಅನುಕೂಲವಾಗುವಂತೆ ಸಿದ್ದಪಡಿಸಲಾಗುತ್ತದೆ. ಕಲಿಕಾ ಸಾಮಗ್ರಿಗಳು ಹೇರಳವಾಗಿದ್ದು ಮಗುವಿನ ಕೈಗೆಟುಕುವಂತಿದ್ದು ಕಲಿಕೆಗೆ ಪ್ರೇರಣೆಯಾಗುತ್ತದೆ. |
| 2 | ಶಾಲೆಯ ತರಗತಿಯಲ್ಲಿ ಮಗುವಿಗೆ ಮುಕ್ತ ವಾತಾವರಣ ಕಲ್ಪಿಸುವುದು. | ಮಗು ಸಂತಸದಿಂದ ಆಡುತ್ತಾ ನಲಿಯುತ್ತಾ ಮುಕ್ತ ವಾತಾವರಣದಲ್ಲಿ ಚಟುವಟಿಕೆಗಳನ್ನು ಮಾಡುತ್ತಾ ಕಲಿಯುತ್ತದೆ. |
| 3 | ಶಿಕ್ಷಣ ಶಿಕ್ಷೆಯಿಂದ ಹೊರತಾಗಿರಬೇಕು. | ಚಟುವಟಿಕೆಗಳು ಸಂತಸದಾಯಕವಾಗಿದ್ದು ಕಲಿಕಾ ಸಂದರ್ಭದಲ್ಲಿ ಅಶಿಸ್ತಿನ ವಾತಾವರಣ ಸೃಷ್ಟಿಯಾಗುವುದಿಲ್ಲ. ಆದ್ದರಿಂದ ಶಿಕ್ಷೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. |
| 4 | ಮಕ್ಕಳ ಕಲಿಕಾ ಸಮಯದ ಸದ್ಬಳಕೆ. | ಬಹು ವಿಧದ ಚಟುವಟಿಕೆಗಳ ಮೂಲಕ ಕಲಿಕೆ ಸಾಗುವುದರಿಂದ ಕಲಿಕಾ ಸಮಯ ಅಪವ್ಯಯವಾಗುವುದಿಲ್ಲ. |
| 5 | ಪಠ್ಯಪುಸ್ತಕಗಳೊಂದಿಗೆ ಪೂರಕ ಓದಿನ ಸಾಮಗ್ರಿಗಳು, ಕಲಿಕಾ– ಬೋಧನೋಪ ಕರಣಗಳು, ಶಿಕ್ಷಕರ ಕೈಪಿಡಿಗಳು, ಅಭ್ಯಾಸ ಪುಸ್ತಕ ಮುಂತಾದ ಸಾಧನಗಳ ಮೂಲಕ ಮಗುವಿನ ಕಲಿಕೆಗೆ ಅನುವು ಮಾಡಿಕೊಡುವುದು. | ಜಿಲ್ಲಾ ಪರಿಚಯ ಪುಸ್ತಕಗಳು, ವಾಚಕಗಳು, ಕಾರ್ಡ್‌ಗಳು, ಅಭ್ಯಾಸ ಪುಸ್ತಕ ಮತ್ತು ಕಲಿಕೋಪಕರಣಗಳ ಕಿಟ್‌ಗಳು ಮುಂತಾದ ಕಲಿಕಾ ಸಾಮಗ್ರಿಗಳ ಸಹಕಾರದಿಂದ ಸಾಮರ್ಥ್ಯ ಬೆಳೆಸಲು ಸಾಧ್ಯ ಹಾಗೂ ಚಟುವಟಿಕೆ ನಿರ್ವಹಣೆಗೆ ಬೇಕಾದ ಸಂಪೂರ್ಣ ಮಾಹಿತಿ **ಬೆಳ್ಳಿಚುಕ್ಕಿ, ಸಂಭ್ರಮ, ಬೆಳ್ಳಿಮೋಡ** ಇತ್ಯಾದಿ ಸಂಪನ್ಮೂಲ ಸಾಹಿತ್ಯವನ್ನು ಶಿಕ್ಷಕರಿಗೆ ಒದಗಿಸಲಾಗಿದೆ. |

## ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಮತ್ತು ನಲಿಕಲಿ

| ಕ್ರ.ಸಂ | ನಿರಂತರ ವ್ಯಾಪಕ ಮೌಲ್ಯ ಮಾಪನ | ನಲಿಕಲಿ ಪದ್ದತಿ |
|---|---|---|
| 1 | ಕಲಿಕಾರ್ಥಿಯ ಸಾಧನೆಯನ್ನು ಸಮಗ್ರವಾಗಿ ಅವಲೋಕನಕ್ಕೆ ಒಳಪಡಿಸುವುದು. | ನಲಿಕಲಿಯ ಪ್ರತಿಚಟುವಟಿಕೆಗಳು ಕಲಿಕಾರ್ಥಿಯ ಸಮಗ್ರ ಅವಲೋಕನಕ್ಕೆ ಅವಕಾಶ ಕಲ್ಪಿಸಿದೆ. |
| 2 | ಪ್ರತಿ ಸಾಮರ್ಥ್ಯದಲ್ಲಿಯೂ ಕಲಿಕಾರ್ಥಿಯ ಸಾಧನೆಯನ್ನು ದಾಖಲಿಸಿಕೊಳ್ಳುವುದು. | ಪ್ರತಿ ಚಟುವಟಿಕೆಯ ನಂತರ ದೃಢೀಕರಣದೊಂದಿಗೆ ಪ್ರಗತಿ ನೋಟದಲ್ಲಿ (ಸರಿ ಗುರುತು) ದಾಖಲಿಸುತ್ತಾರೆ. |
| 3 | ನಿರೀಕ್ಷಿತ/ಗಳಿಸಿದ ಕಲಿಕೆಯನ್ನು ವಿಶ್ಲೇಷಿಸುವುದು. | ಅಭ್ಯಾಸ ಪುಸ್ತಕದಲ್ಲಿ ಸುಗಮಕಾರ ಮಗುವಿನ ನಿರೀಕ್ಷಿತ / ಗಳಿಸಿದ ಕಲಿಕೆಯನ್ನು ವಿಶ್ಲೇಷಿಸಿ, ದೃಢಪಡಿಸಿ ದಿನಾಂಕ ಮತ್ತು ಸಹಿಯನ್ನು ನಮೂದಿಸುತ್ತಾರೆ. |
| 4 | ಅಂಕಗಳ ಬದಲಿಗೆ ಶ್ರೇಣಿ ನೀಡುವ ಮೂಲಕ ಪ್ರಗತಿಯನ್ನು ವ್ಯಕ್ತಪಡಿಸುವುದು. | ನಿರಂತರವಾಗಿ ಮೌಲ್ಯಮಾಪನ ನಡೆಯುತ್ತಿರುವುದರಿಂದ ಅಂಕ ಕೊಡುವ ಪ್ರಮೇಯವೇ ಇಲ್ಲಿ ಉಂಟಾಗುವುದಿಲ್ಲ. |
| 5 | ಪರೀಕ್ಷೆಯ ಭಯ ಇಲ್ಲದಿರುವುದು. | ಮೌಲ್ಯಮಾಪನವು ಅನೇಕ ಆಟ, ಚರ್ಚೆ, ಯೋಜನೆ ಮುಂತಾದ ಚಟುವಟಿಕೆಗಳನ್ನು ಹೊಂದಿದ್ದು ಪರೀಕ್ಷೆಯ ಒತ್ತಡ ಕಡಿಮೆ ಮಾಡಲಾಗಿದೆ. |
| 6 | ಸಂತಸದಾಯಕ ಮತ್ತು ಶಿಶು ಸ್ನೇಹಿ ವಿಧಾನಗಳನ್ನು ಅನುಸರಿಸಿ ಮಕ್ಕಳ ಕಲಿಕೆಯನ್ನು ಅರ್ಥಮಾಡಿಕೊಳ್ಳುವುದು. | ಚಟುವಟಿಕೆಗಳು ಮನರಂಜನದಾಯಕವಾಗಿದ್ದು, ಸ್ನೇಹಮಯ ವಾತಾವರಣದಲ್ಲಿ ಮಕ್ಕಳ ಕಲಿಕೆಯನ್ನು ಮಾಪನ ಮಾಡಲಾಗುತ್ತದೆ. (ಉದಾ: ಆಶ ಆಟ, ಡೈಸ್‌ಆಟ, ಗಣಕಯಂತ್ರ, ಯೋಜನೆ) |
| 7 | ಮಕ್ಕಳ ಪ್ರಗತಿಯ ಬಗ್ಗೆ ಪೋಷಕರು ಮತ್ತು ಸಮುದಾಯದ ಸದಸ್ಯರಲ್ಲಿ ಆತ್ಮವಿಶ್ವಾಸ ಮೂಡಿಸುವಂತೆ ಹಿಮ್ಮಾಹಿತಿ ನೀಡುವುದು. | ಪ್ರಗತಿನೋಟವನ್ನು ಎಲ್ಲರಿಗೂ ಕಾಣುವಂತೆ ತರಗತಿಯಲ್ಲಿ ಪ್ರದರ್ಶಿಸಲಾಗಿದ್ದು, ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ಪೋಷಕರು ಮತ್ತು ಸಮುದಾಯದೊಂದಿಗೆ ಪ್ರತಿ ಮಗುವಿನ ಪ್ರಗತಿಯನ್ನು ಹಂಚಿಕೊಳ್ಳಲು ಮುಕ್ತ ಅವಕಾಶ. |

## ವಿಷಯವಾರು ಅಳವಡಿಸಿಕೊಂಡಿರುವ ವಿವಿಧ ಚಟುವಟಿಕೆಗಳ ಕ್ರೋಢೀಕೃತ ವಿವರ

### ವಿಷಯ: ಪರಿಸರ ಅಧ್ಯಯನ

| ಕ್ರ.ಸಂ | ಚಟುವಟಿಕೆ ಹೆಸರು | ಲೋಗೋ | ಹಂತ | ಗುಂಪು | ತರಗತಿ | | |
|---|---|---|---|---|---|---|---|
| | | | | | 1 | 2 | 3 |
| 1 | ಹಾಡು | ದುಂಬಿ | ಪೂ.ಸಿ.ಹ/ಕ.ಪೂ.ಹ | ಸಾಮೂಹಿಕ/1 | 9 | 7 | 03 |
| 2 | ಕ್ರಾಫ್ಟ್ | ಪೆನ್ಸಿಲ್ | ಪೂ.ಸಿ.ಹ | ಸಾ | 1 | 2 | 2 |
| 3 | ಚಟುವಟಿಕೆ /ಆಟ | ವಿಮಾನ ಚಿಟ್ಟೆ | ಪೂ.ಸಿ.ಹ | ಸಾ | 4 | 6 | 1 |
| 4 | ಸರಳ ಪ್ರಯೋಗ | ಜೇಡ | ಪೂ.ಸಿ.ಹ | ಸಾ | 5 | 6 | 2 |
| 5 | ಪಪೆಟ್ ಶೋ | ಹತ್ತಿಗೊಂಬೆ | ಪೂ.ಸಿ.ಹ | ಸಾ | 1 | 1 | – |
| 6 | ಹವಾಮಾನ ನಕ್ಷೆ | ಸೂರ್ಯ & ಮೋಡ | ಪೂ.ಸಿ.ಹ | ಸಾ | 1 | 1 | 1 |
| 7 | ಅಣಕುನುಡಿ | ಜೋಕರ್ | ಪೂ.ಸಿ.ಹ | ಸಾ | 3 | – | – |
| 8 | ಮೂಕಾಭಿನಯ | ಜಾದೂಗಾರ | ಪೂ.ಸಿ.ಹ | ಸಾ | 6 | 2 | – |
| 9 | ಸವಾಲ್–ಜವಾಬ್ | ಶತಪದಿ | ಕ,ಪೂ,ಹ | 1 | 2 | 1 | 1 |
| 10 | ಚರ್ಚೆ | ಚಿಟ್ಟೆ | ಕ.ಹ | 2 | 12 | 15 | 25 |
| 11 | ಅಭ್ಯಾಸ ಪುಸ್ತಕ | ಜೋಡಿ ಗುಲಾಬಿ | ಕ.ಪೂ.ಹ, ಕ.ಹ. ಅ.ಹ, ಬ.ಹ, ಮೌ.ಹ. | 1–5 | 62 | 57 | 82 |
| 12 | ಮಾಡಿನೋಡು | ಮಿಡತೆ | ಪೂ.ಸಿ.ಹ/ ಬ.ಹ | ಸಾ/4 | – | 3 | – |
| 13 | ದಾರದಿಂದ ಹೊಂದಿಸು | ಬಸವನಹುಳು | ಬ.ಹ | 4 | – | 7 | – |
| 14 | ಆಶುಲೇಖನ | ಡಬ್ಬದೊಳಗೆ ಕೈ | ಬ.ಹ | 4 | – | – | 1 |
| 15 | ನೆನಪಿನ ಆಟ | ಸೂರ್ಯಕಾಂತಿ | ಮೌ.ಹ | 5 | 2 | – | 2 |
| 16 | ಯೋಜನೆ | ಇರುವೆ ಸಾಲು | ಮೌ.ಹ | 5 | 2 | 2 | 3 |
| 17 | ನನ್ನ ಸಾಧನೆ | ಜೇನುಹುಳು | ಮೌ.ಹ | 5 | – | 5 | 04 |
| ಒಟ್ಟು | | | | | **110** | **115** | **127** |

### ಮೈಲಿಗಲ್ಲು ಮೆಟ್ಟಿಲು ಹಾಗೂ ಚಟುವಟಿಕೆಗಳ ವಿವರ:

| ಕ್ರ.ಸಂ | ತರಗತಿ | ಮೈಲಿಗಲ್ಲು | ಮೆಟ್ಟಿಲು | ಚಟುವಟಿಕೆಗಳು | ಒಟ್ಟು ಚಟುವಟಿಕೆಗಳು |
|---|---|---|---|---|---|
| 1 | 1ನೇ ತರಗತಿ | 12 | 110 | 13 | **17** |
| 2 | 2ನೇ ತರಗತಿ | 15 | 115 | 14 | |
| 3 | 3ನೇ ತರಗತಿ | 13 | 127 | 12 | |

### ವಿಷಯ: ಭಾಷೆ

| ಕ್ರ.ಸಂ | ಚಟುವಟಿಕೆಗಳ ಹೆಸರು | ಲೋಗೋ/ಚಿತ್ರ ಸಂಕೇತ | ಹಂತ | ಗುಂಪು | ತರಗತಿ | | |
|---|---|---|---|---|---|---|---|
| | | | | | **1** | **2** | **3** |
| 1 | ಹಾಡು | ಹುಡುಗ–ಹುಡುಗಿ | ಪೂ.ಸಿ.ಚ/ಕ.ಪೂ.ಚ | ಸಾ | 11 | 10 | 2 |
| 2 | ಕಥೆ | ಬಾಯಿ | ಪೂ.ಸಿ.ಚ | ಸಾ | 6 | 3 | 1 |
| 3 | ಸರಳ ಸಂಭಾಷಣೆ | ಇಲಿಗಳ ಮ.ಘಂಟೆ | ಪೂ.ಸಿ.ಚ | ಸಾ | 1 | 2 | – |
| 4 | ಆಟ | ಡಬ್ಬದ ಮೇಲೆ ಮಂಗ | ಪೂ.ಸಿ.ಚ | ಸಾ | 5 | 3 | 1 |
| 5 | ಚಿತ್ರವನ್ನು ಹೆಸರಿಸು | ನಾಯಿ | ಕ.ಪೂ.ಚ | ಸಾ | 17 | 16 | – |
| 6 | ಆಡಿಕಲಿ | ಪುಟ್ಟ ಮಗು | ಕ.ಪೂ.ಚ | ಸಾ | – | – | 5 |
| 7 | ಚಿತ್ರರೈಲು, ಅಕ್ಷರರೈಲು | ರೈಲು ಎಂಜಿನ್ | ಕ.ಪೂ.ಚ | 1 | 2 | – | – |
| 8 | ಕ್ರಾಫ್ಟ್ | ಡಬ್ಬಿಯಲ್ಲಿ ಬ್ರಷ್ | ಕ.ಪೂ.ಚ | ಸಾ | 1 | 3 | 4 |
| 9 | ಸೀತಾಫಲ | ಸೀತಾಫಲ | ಕ.ಪೂ.ಚ | 1 | 1 | – | – |
| 10 | ತಾರಾನಾಥ | ತಾರಾನಾಥ | ಕ.ಪೂ.ಚ | 1 | 1 | – | – |
| 11 | ಗುಣಿತಾಕ್ಷಿ | ಗುಣಿತಾಕ್ಷಿ | ಕ.ಪೂ.ಚ | 1 | 1 | – | – |
| 12 | ಆಕಾರ ಗು.ಅಕ್ಷರ ಪಟ್ಟಿ | ಕರು | ಕ.ಪೂ.ಚ | 1 | 7 | – | – |
| 13 | ಅ.ಬರವಣಿಗೆ/ಒ.ಬರವಣಿಗೆ/ ಭಾಷಾಭ್ಯಾಸ | ಲೇ.ಹಿ.ಬ.ಕೈ | ಕಲಿಕಾಂಶ ಚಟುವಟಿಕೆ | 2 | 43 | 16 | 11 |
| 14 | ಸ್ವರ ಚಿಹ್ನೆ ಪರಿಚಯ | ಮೀನು | ಕಲಿಕಾಂಶ ಚಟುವಟಿಕೆ | 2 | 10 | 5 | – |
| 15 | ಸನ್ನಿವೇಶ ರಚನೆ, ಸ್ಪಷ್ಟ ಓದು | ನರಿ | ಕಲಿಕಾಂಶ ಚಟುವಟಿಕೆ | 2 | 17 | 8 | 11 |
| 16 | ಜಾರು ಪಟ್ಟಿ | ಜೋ.ಆ.ಮಗು | ಕಲಿಕಾಂಶ ಚಟುವಟಿಕೆ | 2 | 7 | – | – |
| 17 | ಪ್ರಶ್ನೋತ್ತರ | ಅಳಿಲು | ಕಲಿಕಾಂಶ ಚಟುವಟಿಕೆ | 2 | – | – | 11 |

| | | | | | | | |
|---|---|---|---|---|---|---|---|
| 18 | ವರ್ಣಮಾಲೆ | ಕ.ಹ.ಮೇ.ಬ.ಬಾಲಕ | ಕಲಿಕಾಂಶ ಚಟುವಟಿಕೆ | 2 | 1 | – | – |
| 19 | ಸಾಧನ & ಚಿತ್ರಪದ | ಹಸು | ಅಭ್ಯಾಸ ಚಟುವಟಿಕೆ | 3 | 17 | 18 | – |
| 20 | ಚಿತ್ರ ಸಹಿತ ವಾಕ್ಯ | ಜಿಂಕೆ | ಅಭ್ಯಾಸ ಚಟುವಟಿಕೆ | 3 | 17 | 18 | – |
| 21 | ಚಿತ್ರಗಳಿಗೆ ಪದ ಹೊಂದಿಸು | ಕುರಿ | ಬಳಕೆ ಚಟುವಟಿಕೆ | 4 | 9 | – | – |
| 22 | ಆಶಆಟ/ಪದಶಬ್ಧ ಆಟ | ಆಮೆ | ಬಳಕೆ ಚಟುವಟಿಕೆ | 4 | 4 | 7 | – |
| 23 | ಪದಬಂಧ | ಒಂಟೆ | ಬಳಕೆ ಚಟುವಟಿಕೆ | 4 | – | 5 | – |
| 24 | ಪದಗಳಆಟ/ಭಾಷಾ ಆಟ | ಜಿರಾಫೆ | ಬಳಕೆ ಚಟುವಟಿಕೆ | 4 | 5 | – | 2 |
| 25 | ಗೆಲುವಿನ ಆಟ | ಕುದುರೆ | ಬಳಕೆ ಚಟುವಟಿಕೆ | 4 | – | 2 | – |
| 26 | ಓದಿ–ಉತ್ತರಿಸು | ಏಡಿ | ಬಳಕೆ ಚಟುವಟಿಕೆ | 4 | – | 13 | 2 |
| 27 | ವಾಚಕಗಳು | ಪು. ಹಿ. ಓ. ಗೊಂಬೆ | ಮೌ.ಮಾ.ಚಟುವಟಿಕೆ | 5 | 40 | 35 | 30 |
| 28 | ನೆನಪಿನ ಆಟ | ಹಾವು | ಮೌ.ಮಾ.ಚಟುವಟಿಕೆ | 5 | 3 | – | 3 |
| 29 | ನನ್ನ ಸಾಧನೆ | ಸಿಂಹ | ಮೌ.ಮಾ.ಚಟುವಟಿಕೆ | 5 | 4 | 3 | 9 |
| 30 | ಸಮಗ್ರ ಮೌಲ್ಯ ಮಾಪನ | ಝೀಬ್ರಾ | ಮೌ.ಮಾ.ಚಟುವಟಿಕೆ | 5 | – | 1 | 2 |
| 31 | ಅಭ್ಯಾಸ ಪುಸ್ತಕ | ಜೋಡಿ ಪೆನ್ಸಿಲ್ | ಅಭ್ಯಾಸ ಚಟುವಟಿಕೆ | 1,2,3,4 | 65 | 57 | 71 |

**1, 2, 3 ನೇ ತರಗತಿಗಳ ಕನ್ನಡದ ಒಟ್ಟು ಮೈಲಿಗಲ್ಲುಗಳು, ಮೆಟ್ಟಿಲುಗಳು ಹಾಗೂ ಚಟುವಟಿಕೆಗಳು**

| ತರಗತಿ | ಮೈಲಿಗಲ್ಲುಗಳು | ಮೆಟ್ಟಿಲುಗಳು | ಚಟುವಟಿಕೆಗಳು | ಒಟ್ಟು ಚಟುವಟಿಕೆಗಳು |
|---|---|---|---|---|
| I | 17 | 295 | 25 | 31 |
| II | 18 | 225 | 19 | |
| III | 11 | 165 | 15 | |

**ವಿಷಯ: ಗಣಿತ**

| ಕ್ರ.ಸ | ಚಟುವಟಿಕೆ ಹೆಸರು | ಲೋಗೋ | ಹಂತ | ಗುಂಪು | ತರಗತಿ | | |
|---|---|---|---|---|---|---|---|
| | | | | | I | II | III |
| 1 | ಪೂರ್ವಭಾವಿ ಚಟುವಟಿಕೆಗಳು (ಕಾರ್ಡು) | ಮೊ.ಹೊ.ಕೋ.ಮರಿ | ಪೂ.ಭಾ.ಚ | ಸಾ | 10 | 01 | – |
| 2 | ಸೇತುಬಂಧ (ಪೂ.ಭಾ.ಚ) (ಅ.ಪು) | ಪೆಂಗ್ವಿನ್ | ಪೂ.ಭಾ.ಚ | ಸಾ | 14 | 04 | 03 |
| 03 | ಹಾಡು | ಕೋಗಿಲೆ | ಪೂ.ಸಿ.ಚ | ಸಾ | 06 | 05 | – |
| 04 | ಆಡಿ ಕಲಿಯೋಣ | ಚೆಂಡು | ಕ.ಪೂ.ಚ | ಸಾ | 19 | 16 | 19 |
| 05 | ಕ್ರಾಫ್ಟ್ | ಪ್ಲೇಟಿನಲ್ಲಿ ಬ್ರಶ್ | ಕ.ಪೂ.ಚ | ಸಾ | 01 | 02 | – |
| 06 | ಸಂಕಲನ | ಕ.ಕ.ಹಾ.ಪ | ಕ.ಚ. | 1 | 04 | 04 | 04 |
| 07 | ವ್ಯವಕಲನ | ಬಾತುಕೋಳಿ | ಕ.ಚ. | 1 | 04 | 04 | 04 |
| 08 | ಹೆಚ್ಚು–ಕಡಿಮೆ–ಸಮ | ಕೋಳಿಮತ್ತು ಮರಿಗಳು | ಕ.ಚ. | 1 | 02 | 02 | – |
| 09 | ಹಿಂದೆ–ಮುಂದೆ–ಮಧ್ಯೆ | ಗಂಡಭೇರುಂಡ | ಕ.ಚ. | 1 | 02 | 02 | 02 |
| 10 | ಏರಿಕೆ–ಇಳಿಕೆ | ಜಾರುಬಂಡಿ | ಕ.ಚ | 1 | 02 | 02 | – |
| 11 | ಅಂಕಿಗಳ ಕಲ್ಪನೆ–ಎಣಿಕೆ ಬರವಣಿಗೆ | ಹಂಸ | ಕ.ಚ | 1 | 16 | 02 | – |
| 12 | ಮಿಶ್ರಕ್ರಿಯೆ | (+,–,×,÷) | ಕ.ಚ | 1 | 01 | 04 | 02 |
| 13 | ಸ್ಥಾನಬೆಲೆ | ಅಬಾಕಸ್ | ಕ.ಚ | 1 | 01 | 01 | 05 |
| 14 | ಕ್ರಮವಾಚಕ | ಏಣಿ | ಕ.ಚ | 1 | – | 01 | – |
| 15 | ಕನಿಷ್ಠ–ಗರಿಷ್ಠ | ನವಿಲು | ಕ.ಚ | 1 | – | 02 | 02 |
| 16 | ಸರಿ–ಬೆಸ | ಮರಕುಟಿಗ | ಕ.ಚ | 1 | – | 02 | 01 |
| 17 | ಗುಣಾಕಾರ | ಜೋಡಿಕೊಕ್ಕರೆ | ಕ.ಚ | 1 | – | 03 | 02 |
| 18 | ಆಕೃತಿಗಳು/ ರೇಖಾಕೃತಿ/ಘನಾಕೃತಿ | ಕೈವಾರ | ಕ.ಚ | 1 | 01 | 02 | 03 |
| 19 | ಉದ್ದದ ಅಳತೆ | ಸ್ಕೇಲ್ | ಕ.ಚ | 1 | 01 | 01 | 02 |
| 20 | ಕಾಲದ ಗಣನೆ | ಗಡಿಯಾರ | ಕ.ಚ | 1 | 01 | 01 | 02 |
| 21 | ಹಣ | ನಾಣ್ಯ | ಕ.ಚ | 1 | 01 | 01 | 02 |
| 22 | ತೂಕ | ತೂಕದ ಬಟ್ಟು | ಕ.ಚ | 1 | – | 01 | 02 |
| 23 | ದ್ರವದ ಅಳತೆ | ಲೀಟರ್ | ಕ.ಚ | 1 | – | 01 | 02 |
| 24 | ಭಿನ್ನರಾಶಿ | ಪಾರಿವಾಳ | ಕ.ಚ | 1 | – | – | 01 |
| 25 | ದತ್ತಾಂಶಗಳು | ಬಾವಲಿ | ಕ.ಚ | 1 | 01 | 01 | 01 |
| 26 | ಭಾಗಾಕಾರ | ಹುಂಜ | ಕ.ಚ | 1 | – | 01 | 01 |
| 27 | ಸುತ್ತಳತೆ ಮತ್ತು ಕ್ಷೇತ್ರಫಲ | ಜ್ಯಾಮಿತಿ ಪೆಟ್ಟಿಗೆ | ಕ.ಚ | 1 | – | – | 01 |
| 28 | ಸಮಮಿತಿ ವಿನ್ಯಾಸಗಳು | ಕ್ಯಾಲ್ಕ್ಯುಲೇಟರ್ | ಕ.ಚ | 1 | – | – | 01 |
| 29 | ಅಭ್ಯಾಸ ಪುಸ್ತಕ | ಜೋಡಿಗಿಳಿ | ಅ.ಚ | 2,3 | 81 | 117 | 130 |

| | | | | | | | |
|---|---|---|---|---|---|---|---|
| 30 | ಆಮೆ ಫಜಲ್ | ಆಮೆ | ಬ.ಚ | 4 | 01 | – | – |
| 31 | ಉತ್ತರ ಹೇಳುವೆ | ಬಾಯಿ | ಬ.ಚ | 4 | 12 | 22 | 13 |
| 32 | ಆಟ ಆಡೋಣ | ಡೈಸ್ | ಬ.ಚ | 4 | 15 | 19 | 17 |
| 33 | ಗಣಕಯಂತ್ರ | ಗಣಕಯಂತ್ರ | ಬ.ಚ | 4 | – | 01 | – |
| 34 | ಸಂಖ್ಯಾ ವಿಸ್ಮಯ | ಗೀಜಗನ ಗೂಡು | ಬ.ಚ | 4 | – | – | 05 |
| 35 | ನೆನಪಿನ ಆಟ | ಗರುಡ | ಮೌ.ಚ | 5 | 01 | 01 | 02 |
| 36 | ಲೆಕ್ಕ ಬಿಡಿಸುವೆ | ಕ್ಲಿಫ್ & ಪ್ಯಾಡ್ | ಮೌ.ಚ | 5 | 21 | 22 | 19 |
| 37 | ನನ್ನ ಸಾಧನೆ | ತಕ್ಕಡಿ | ಮೌ.ಚ | 5 | 02 | 02 | 02 |
| | | ಒಟ್ಟು | | | **220** | **250** | **250** |

**1, 2, 3 ನೇ ತರಗತಿಗಳ ಗಣಿತದ ಒಟ್ಟು ಮೈಲಿಗಲ್ಲುಗಳು, ಮೆಟ್ಟಿಲುಗಳು ಹಾಗೂ ಚಟುವಟಿಕೆಗಳು**

| ತರಗತಿ | ಮೈಲಿಗಲ್ಲುಗಳು | ಮೆಟ್ಟಿಲುಗಳು | ಚಟುವಟಿಕೆಗಳು | ಒಟ್ಟು ಚಟುವಟಿಕೆಗಳು |
|---|---|---|---|---|
| I | **20** | **220** | **25** | **37** |
| II | **18** | **250** | **32** | |
| III | **19** | **250** | **28** | |

************************************************

# ಅಧ್ಯಾಯ 4
# ಶಾಲೆ

ಮಗುವಿನ ಔಪಚಾರಿಕ ಕಲಿಕೆಯ ಒಂದು ಸ್ಥಳ ಶಾಲೆಯಾಗಿದೆ. ಶಾಲೆಯ ಪರಿಕಲ್ಪನೆಯು ಕಾಲಕಾಲಕ್ಕೆ ಬದಲಾವಣೆಗೊಳಗಾಗುತ್ತಿದ್ದು ಪ್ರಸ್ತುತ ವಿದ್ಯಾರ್ಥಿ ಮತ್ತು ಕಲಿಕಾ ಕೇಂದ್ರಿತ ಸ್ಥಳವಾಗಿ ಶಾಲೆಯನ್ನು ಅರ್ಥೈಸಿಕೊಳ್ಳಲಾಗುತ್ತಿದೆ. ಶಾಲೆಯು ಮಕ್ಕಳಿಗೆ ಆಕರ್ಷಣೀಯವಾಗಿದ್ದು, ಇಲ್ಲಿನ ಭೌತ ಪರಿಸರ ಮತ್ತು ಕಲಿವಿನ ಅವಕಾಶಗಳು ಮಕ್ಕಳ ಮಾನಸಿಕ, ದೈಹಿಕ, ಸಾಮಾಜಿಕ, ಸಂವೇಗಾತ್ಮಕ ಕಲಿವಿಗೆ ಪೂರಕವಾದ ಸನ್ನಿವೇಶವವನ್ನು ಒದಗಿಸಬೇಕು. ಆರ್.ಟಿ.ಇ. 09ರ ಅನ್ವಯ ಶಾಲೆ ಎಂದರೆ, ಪ್ರಾಥಮಿಕ ಶಿಕ್ಷಣ ನೀಡುವ, ಯಾವುದೇ ಮಾನ್ಯತೆ ಪಡೆದ ಶಾಲೆಯಾಗಿದ್ದು, ಇದರಲ್ಲಿ–

i. ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲಾದ ಅದರ ಮಾಲೀಕತ್ವದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಶಾಲೆ;
ii. ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವ ಶಾಲೆಯು ತನ್ನ ಇಡೀ ಅಥವಾ ಭಾಗಶಃ ಖರ್ಚು– ವೆಚ್ಚಗಳನ್ನು ಭರಿಸಲು ಹಣಕಾಸು ನೆರವು ಅಥವಾ ಅನುದಾನಗಳನ್ನು ಪಡೆಯುವದೋ ಆ ಅನುದಾನಿತ ಶಾಲೆ; ಮತ್ತು
iii. ನಿರ್ದಿಷ್ಟ ಪ್ರವರ್ಗಕ್ಕೆ ಸೇರಿದ ಶಾಲೆ.

**ಚಟುವಟಿಕೆ:**

1. ಕಲಿಕಾ ಪ್ರಕ್ರಿಯೆಯನ್ನು ಆಧಾರವಾಗಿರಿಸಿಕೊಂಡು ಒಂದು ಮಾದರಿ ಶಾಲೆಯಲ್ಲಿರಬೇಕಾದ ಅಂಶಗಳನ್ನು ಪಟ್ಟಿಮಾಡಿ.
2. ಶಾಲಾ ಕಾಣ್ಕೆಯ ಚಟುವಟಿಕೆ.

ಶಾಲೆ ಎಂಬ ಪರಿಕಲ್ಪನೆ ಸೃಜಿಸ್ಪಡುವುದು ಕಟ್ಟಡಟದಿಂದಲ್ಲ. ವಿದ್ಯಾರ್ಥಿಗಳ ದಾಖಲಾತಿಯಿಂದ.

**ದಾಖಲಾತಿ**

**ಕರ್ನಾಟಕದಲ್ಲಿ ಶಾಲಾ ದಾಖಲಾತಿಯು ಗಣಕೀಕರಣಗೊಂಡಿರುತ್ತದೆ. ವಿದ್ಯಾರ್ಥಿಯು ಆ ವರ್ಷದ ಮಾರ್ಚ್ 31ಕ್ಕೆ 5 ವರ್ಷ 5 ತಿಂಗಳ ವಯೋಮಿತಿ ಪಡೆಯುತ್ತಿದ್ದಂತೆಯೇ ಒಂದನೇ ತರಗತಿ ದಾಖಲಾತಿಗೆ ಅರ್ಹರಾಗುತ್ತಾರೆ.**

ಮಗುವಿನ ಆಧಾರ್ ಕಾರ್ಡ್, ಜನ್ಮದಿನಾಂಕ ದೃಡೀಕರಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು ದಾಖಲಾತಿ ಪಡೆಯಲು ಅವಶ್ಯಕವಾಗಿರುತ್ತವೆ. ಶಾಲಾ ಮುಖ್ಯ ಶಿಕ್ಷಕರು ಇವುಗಳನ್ನು ಪಡೆದು ಎಸ್.ಎ.ಟಿ.ಎಸ್. ತಂತ್ರಾಂಶದಲಲ್ಲಿ ಮಗುವಿನ ವಿವರಗಳನ್ನು ನಮೂದಿಸುವುದು. ಈ ರೀತಿ ದಾಖಲಿಸಿದ ನಂತರ ವಿದ್ಯಾರ್ಥಿಗೆ 12 ಅಂಕೆಗಳ ಹೆಜ್ಜೆ ಗುರುತಿನ ಸಂಖ್ಯೆ ಲಭ್ಯವಾಗುತ್ತದೆ. ಈ ಸಂಖ್ಯೆಯು ಶಾಶ್ವತವಾಗಿದ್ದು ವಿದ್ಯಾರ್ಥಿಯು 12ನೇ ತರಗತಿ ವ್ಯಾಸಂಗದವರೆಗೆ ಚಾಲ್ತಿಯಲ್ಲಿರುತ್ತದೆ.

**ಹಾಜರಾತಿ**

ಪ್ರತಿ ವಿದ್ಯಾರ್ಥಿಯುನಿರಂತರವಾಗಿ ಶಾಲೆಗೆ ಹಾಜರಾಗುವುದು ಅಗತ್ಯ. ಪೂರ್ವಾನುಮತಿ ಪಡೆಯದೇ 7 ದಿನಗಳಿಗಿಂತ ಹೆಚ್ಚಾಗಿ ಗೈರುಹಾಜರಾದಲ್ಲಿ ಅಂತಹ ವಿದ್ಯಾರ್ಥಿಯನ್ನು ಶಾಲೆ ಬಿಟ್ಟ ಮಗು ಎಂದೇ ತೀಮಾನಿಸಲಾಗುತ್ತದೆ. ಹೀಗೆ ಶಾಲೆ ಬಿಟ್ಟಲ್ಲಿ ಅಂತಹ ಮಗುವನ್ನು

ಕಡ್ಡಾಯವಾಗಿ ಶಾಲಾ ವ್ಯಾಪ್ತಿಗೆ ತರವುದು ಆಯಾ ಶಿಕ್ಷಕರು, ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ. ಪೋಷಕರು, ಹಾಜರಾತಿ ಅಧಿಕಾರಿ(ಇ.ಸಿ.ಒ) ಮತ್ತು ಮೇಲಾಧಿಕಾರಿಗಳ ಪ್ರಥಮ ಕರ್ತವ್ಯವಾಗಿರುತ್ತದೆ.

**ಶಾಲಾ ಕೆಲಸದ ದಿನಗಳು ಮತ್ತು ರಜಾ ದಿನಗಳು**

- ಸಾಮಾನ್ಯವಾಗಿ ಒಂದು ಶೈಕ್ಷಣಿಕ ಸಾಲಿನಲ್ಲಿ ಕನಿಷ್ಠ 220 ಶಾಲಾ ಕೆಲಸದ ದಿನಗಳು.
- ಎಸ್.ಡಿ.ಎಂ.ಸಿ. ಯಿಂದ ತೀರ್ಮಾನಿಸಿದ ಅಗತ್ಯಕ್ಕನುಗುಣವಾದ 04 ಸ್ಥಳೀಯ ರಜೆಗಳು.
- ಇಲಾಖಾ ನಿರ್ದೇಶನದಂತೆ ಮಧ್ಯಂತರ ರಜೆ ಮತ್ತು ಬೇಸಿಗೆ ರಜಾದಿನಗಳು.

**ಶಾಲಾ ಕಾರ್ಯಕ್ರಮಗಳು**

- ಶಾಲಾ ಪ್ರಾರಂಭೋತ್ಸವ.
- ಪ್ರೋತ್ಸಾಹಕಗಳ ವಿತರಣೆ.
- ಸಾಮಾನ್ಯ ಹಾಗೂ ವಿಶೇಷ ದಾಖಲಾತಿ ಅಂದೋಲನ.
- ಸೇತುಬಂಧ.
- ರಾಷ್ಟ್ರೀಯ ಹಬ್ಬಗಳು
- ಸಹಪಠ್ಯ ಚಟುವಟಿಕೆಗಳು
- ಶಾಲಾ ಸಂಸತ್, ವಿವಿಧ ಕ್ಲಬ್‌ಗಳ ರಚನೆ.
- 10 ಅಂಶಗಳ ಕಾರ್ಯಕ್ರಮ.

**ಶಾಲಾ ದಾಖಲಾತಿಗಳು**

**ಶಾಲೆಯಲ್ಲಿ ನಿರ್ವಹಿಸಬೇಕಾದ ಮುಖ್ಯ ವಹಿಗಳು**

- ಕ್ಷಕರ ಹಾಜರಾತಿ ವಹಿ.
- ವಿದ್ಯಾರ್ಥಿಗಳ ತರಗತಿವಾರು ಹಾಜರಾತಿ ವಹಿ.
- ವಿದ್ಯಾರ್ಥಿಗಳ ಕ್ರೋಢೀಕೃತ ಹಾಜರಾತಿ ವಹಿ.
- ಶಿಕ್ಷಕರ ವೈಯಕ್ತಿಕ ಅಂಕವಹಿ
- ಕ್ರೋಢೀಕೃತ ಅಂಕ ವಹಿ
- ಮಗುವಿನ ಕೃತಿ ಸಂಪುಟ (ಪೋರ್ಟ್ ಪೋಲಿಯೋ)
- ಶಾಲಾ ಶೈಕ್ಷಣಿಕ ಯೋಜನಾ ವಹಿ(ಎಸ್.ಎ.ಪಿ.)
- ಶಾಲಾಭಿವೃದ್ಧಿ ದಾಖಲೆ (ಎಸ್.ಡಿ.ಪಿ)
- ಪಾಠ ವೀಕ್ಷಣಾ ವಹಿ.
- ಶಾಲೆ ಬಿಟ್ಟ ಮತ್ತು ಶಾಲೆಗೆ ದಾಖಲಾದ ಮಕ್ಕಳ ವಹಿ.
- ಶಾಲಾ ವಾರ್ಷಿಕ ಕ್ರಿಯಾ ಯೋಜನೆ
- ವಾರ್ಷಿಕ ಕಾರ್ಯ ಹಂಚಿಕೆ ಮತ್ತು ಘಟಕ ಯೋಜನೆ
- ದಾಖಲಾತಿ ವಹಿ.
- ಟಿ.ಸಿ. ವಿತರಣಾ ವಹಿ.
- ದಾಖಲಾತಿ ಅರ್ಜಿ ವಹಿ
- ಶಾಲಾ ಸಾಮನ್ಯ ದಾಸ್ತಾನು ವಹಿ.
- ಗ್ರಂಥಾಲಯ ಪುಸ್ತಕಗಳ ವಹಿ.
- ಕ್ರೀಡಾ ಸಾಮಗ್ರಿಗಳ ದಾಸ್ತಾನು ವಹಿ.
- ಸ್ಥಿರ ಆಸ್ತಿಗಳ ವಹಿ.

- ನಗದು ಪುಸ್ತಕ ಮತ್ತು ಸಂಬಂಧಿಸಿದ ಲೆಡ್ಜರ್‌ಗಳು
- S.P, R.R., A.V.E., MEDICAL ವಹಿಗಳು.
- ಶುಲ್ಕ ವಸೂಲಾತಿ ವಹಿ
- ಬ್ಯಾಂಕ್ ಪಾಸ್ ಪುಸ್ತಕಗಳು.
- ರಶೀದಿಗಳ ವಹಿ
- ಎಸ್.ಡಿ.ಎಂ.ಸಿ. ಸಭಾ ಆಹ್ವಾನ ಕಡತ
- ಎಸ್.ಡಿ.ಎಂ.ಸಿ. ಸಭಾ ನಡವಳಿ ವಹಿ.
- ಶಿಕ್ಷಕರ ಸಭಾ ನಡವಳಿ
- 'ಇಂದ' ಮತ್ತು 'ಗೆ' ವಹಿ.
- ಪ್ರೋತ್ಸಾಹದಾಯಕ ಯೋಜನೆಗಳ ದಾಸ್ತಾನು ಹಾಗೂ ವಿತರಣಾ ವಹಿಗಳು(ಅಕ್ಷರ ದಾಸೋಹ, ಕ್ಷೀರಭಾಗ್ಯ, ಸಮವಸ್ತ್ರ, ಸೈಕಲ್, ಪಠ್ಯಪುಸ್ತಕ ಇತ್ಯಾದಿ).
- ವಿದ್ಯಾರ್ಥಿ ವೇತನ ವಿತರಣೆ ದಾಖಲೆ
- ಸಂದರ್ಶಕರ ವಹಿ(ಇಲಾಖೆ ಹಾಗೂ ಇಲಾಖೇತರ).
- ಚಲನ–ವಲನ ವಹಿ.
- ಪ್ರಯೋಗಗಳ ಮಾಹಿತಿ ದಾಖಲೆ.
- ಸಾಂದರ್ಭಿಕ ಹಾಗೂ ಗಳಿಕೆ ರಜೆ ವಹಿ.
- ಅನುಪಾಲನಾ ವಹಿ
- ಶಿಕ್ಷಕರ ಮಾಹಿತಿ ಪುಸ್ತಕ

ಈ ಮೇಲಿನ ವಹಿಗಳಲ್ಲದೇ ಸಂದರ್ಭಕ್ಕೆ ಅನುಗುಣವಾಗಿ ಇತರೆ ಅಗತ್ಯವಾದ ವಹಿಗಳನ್ನು ನಿರ್ವಹಿಸುವುದು.

ಚಟುವಟಿಕೆ–1 ಶಾಲಾಹಂತದಲ್ಲಿ ನಿರ್ವಹಿಸಬೇಕಾದ ದಾಖಲೆಗಳುನ್ನು ಪಟ್ಟಿ ಮಾಡಿರಿ

ಚಟುವಟಿಕೆ–2 ದಾಖಲಾತಿ ವಹಿಯ ಮಹತ್ವವನ್ನು ಗುಂಪಿನಲ್ಲಿ ಚರ್ಚಿಸಿ, ಮಂಡಿಸಿ.

# ಅಧ್ಯಾಯ–5

## ಶಾಲಾ ಶೈಕ್ಷಣಿಕ ಚಟುವಟಿಕೆಗಳು

ಶಾಲೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಾಲಾ ಶೈಕ್ಷಣಿಕ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯು ಶೈಕ್ಷಣಿಕ ಉದ್ದೇಶವನ್ನು ಹೊಂದಿರುತ್ತದೆ. ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸುವಾಗ ವಿದ್ಯಾರ್ಥಿ, ಶಿಕ್ಷಕರು, ಮುಖ್ಯೋಪಾಧ್ಯಾಯರು, ಪೋಷಕರು, ಸಮುದಾಯ ಮುಂತಾದ ಎಲ್ಲಾ ಭಾಗೀದಾರರನ್ನು ಸಕ್ರಿಯವಾಗಿ ತೊಡಗಿಸಿಕೊಂಡಾಗ ಮಾತ್ರ ಅರ್ಥಪೂರ್ಣ ಹಾಗೂ ಅನುಷ್ಠಾನಯೋಗ್ಯ ಚಟುವಟಿಕೆಗಳನ್ನು ರೂಪಿಸಲು ಸಾಧ್ಯ. ಸಾಮಾನ್ಯವಾಗಿ ಒಂದು ಶೈಕ್ಷಣಿಕ ವರ್ಷ ಯೋಜನೆಯನ್ನು ಸಿದ್ಧಪಡಿಸುವುದರಿಂದ ಪ್ರಾರಂಭವಾಗುತ್ತದೆ.

### 5.1 ಶಾಲಾ ಪಂಚಾಂಗ

ಶಾಲಾ ಶೈಕ್ಷಣಿಕ ಯೋಜನೆಗಳನ್ನು ಕ್ರಮಬದ್ಧವಾಗಿ ಆಯೋಜಿಸಲು ಯೋಜನೆ ಅವಶ್ಯಕ. ಇಡೀ ವರ್ಷಕ್ಕೆ ಅನ್ವಯವಾಗುವಂತೆ ವಾಸ್ತವಿಕ ಹಾಗೂ ಅನುಷ್ಠಾನ ಯೋಗ್ಯ ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಶಾಲೆಯಲ್ಲಿ ಇಡೀ ವರ್ಷದಲ್ಲಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳನ್ನು ಯೋಜಿಸಿ ನಿಗದಿತ ಕಾಲದಲ್ಲಿ ಅವುಗಳನ್ನು ಹಮ್ಮಿಕೊಳ್ಳಲು ಅನುವಾಗುವಂತೆ ರಚಿಸುವ ನೀಲಿ ನಕ್ಷೆಯೇ "ಶಾಲಾ ಪಂಚಾಂಗ". ಇದು ಶೈಕ್ಷಣಿಕ ವರ್ಷದಲ್ಲಿ ಶಾಲೆಯಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳ ಪಕ್ಷಿನೋಟ. ಶಾಲಾ ಶೈಕ್ಷಣಿಕ ಪರಿಸರ ಹಾಗೂ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಗಮನದಲ್ಲಿರಿಸಿಕೊಂಡು ಶಾಲಾ ಪಂಚಾಂಗ ರಚಿತವಾಗಬೇಕು.

**ಶಾಲಾ ಪಂಚಾಂಗ ಏಕೆ?**

- ಒಂದು ಶೈಕ್ಷಣಿಕ ವರ್ಷದಲ್ಲಿ ಕೈಗೊಳ್ಳಬೇಕಾದ ಎಲ್ಲಾ ಕಾರ್ಯಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು;
- ಶಾಲಾ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿಯಮಿತ ಕಾಲಮಿತಿಯೊಳಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು;

- ಶಾಲೆಯ ಎಲ್ಲಾ ಕಾರ್ಯಕ್ರಮಗಳ ಮಾರ್ಗಸೂಚಿಯಾಗಿ ನಿರ್ದೇಶನವನ್ನು ಪಡೆದುಕೊಳ್ಳಲು.

**ಶಾಲಾ ಪಂಚಾಂಗ ಪ್ರಾಮುಖ್ಯತೆ**

ಒಂದು ಶಾಲೆಯ ಶೈಕ್ಷಣಿಕ ವರ್ಷದ ಎಲ್ಲಾ ಚಟುವಟಿಕೆಗಳನ್ನು ಪೂರ್ವಭಾವಿಯಾಗಿ ನಿರ್ಧರಿಸಿ, ಕಾಲಕಾಲಕ್ಕೆ ಅವುಗಳನ್ನು ಅನುಷ್ಠಾನಗೊಳಿಸಲು ಶಾಲಾ ಪಂಚಾಂಗವು ಮಾರ್ಗದರ್ಶನವನ್ನು ನೀಡುತ್ತದೆ. ಪ್ರತಿ ಚಟುವಟಿಕೆಯನ್ನು ವ್ಯವಸ್ಥಿತವಾಗಿ ನಿಗಧಿತವಾಗಿ ಕೈಗೊಳ್ಳಲು ಇದು ವೇಳಾಪಟ್ಟಿಯನ್ನು ಒದಗಿಸುತ್ತದೆ. ಇದರಿಂದ ಯಾವುದೇ ಶಾಲಾ ಕಾರ್ಯಕ್ರಮಗಳು ಬಿಟ್ಟುಹೋಗದಂತೆ ಕ್ರಮವಹಿಸಬಹುದು. ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ಕಾಲಕಾಲಕ್ಕೆ ಪೂರ್ಣಗೊಳಿಸಲು ಬುನಾದಿಯನ್ನು ಒದಗಿಸುತ್ತದೆ.

**ಶಾಲಾ ಪಂಚಾಂಗ ಒಳಗೊಂಡಿರಬೇಕಾದ ಅಂಶಗಳು**

- ಶೈಕ್ಷಣಿಕ ವರ್ಷದ ಆರಂಭದ ದಿನ, ಪೂರ್ಣಗೊಳ್ಳುವ ದಿನ, ಒಟ್ಟು ಶಾಲೆಯು ಕಾರ್ಯನಿರ್ವಹಿಸುವ ದಿನಗಳು ಮತ್ತು ಮಧ್ಯಂತರ ರಜಾ ದಿನಗಳು, ಸ್ಥಳೀಯ ರಜಾ ದಿನಗಳು.
- ಶಾಲಾ ದಾಖಲಾತಿ, ವಿಶೇಷ ದಾಖಲಾತಿ ಆಂದೋಲನ, ಸಾಮಾನ್ಯ ದಾಖಲಾಗಿ ಆಂದೋಲನ.
- ಶಾಲೆಯಲ್ಲಿ ಹಮ್ಮಿಕೊಳ್ಳುವ ವಿವಿಧ ದಿನಾಚರಣೆಗಳು, ಕಾರ್ಯಕ್ರಮಗಳು, ಸ್ಪರ್ಧೆಗಳು, ರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು ಅವುಗಳ ಆಚರಣಾ ದಿನಾಂಕಗಳು ಇತ್ಯಾದಿ.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಕೈಗೊಳ್ಳಬೇಕಾದ ತಿಂಗಳು ಮತ್ತು ಅದಕ್ಕೆ ಪೂರಕವಾದ ಚಟುವಟಿಕೆಗಳು.
- ಶಾಲಾಧಾರಿತ ಕಾರ್ಯಕ್ರಮಗಳು, ಸಮುದಾಯಾಧಾರಿತ ಕಾರ್ಯಕ್ರಮಗಳು ಮತ್ತು ಆಡಳಿತಾತ್ಮಕ ಕಾರ್ಯಕ್ರಮಗಳ ವಿವರ.
- ಶಾಲೆಯಲ್ಲಿ ಕೈಗೊಳ್ಳುವ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ವಿವರಗಳು.

**ಶಾಲಾ ಪಂಚಾಂಗ ತಯಾರಿಸುವಾಗ ಗಮನದಲ್ಲಿರಿಸಬೇಕಾದ ಅಂಶಗಳು**

- ಶೈಕ್ಷಣಿಕ ವರ್ಷ ಆರಂಭವಾಗುವ ಮೊದಲೇ ಶಾಲಾ ಪಂಚಾಂಗವನ್ನು ರೂಪಿಸಿಕೊಳ್ಳಬೇಕು.
- ಶಾಲೆಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಸಿದ್ಧಪಡಿಸಿಕೊಂಡಿರಬೇಕು.
- ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಲು ಸೂಕ್ತವಾಗಿ ಭಾಗೀದಾರರನ್ನು ಗುರ್ತಿಸಿಕೊಳ್ಳಬೇಕು.

**ಶಾಲಾ ಪಂಚಾಂಗದ ಉಪಯುಕ್ತತೆ**

- ಪೂರ್ವಭಾವಿಯಾಗಿ ನಿರ್ಧರಿಸಿದ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಉಪಯುಕ್ತವಾಗಿದೆ.
- ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ನಿಗಧಿತವಾಗಿ ಮುಂದುವರೆಸಿಕೊಂಡು ಹೋಗಲು ಸಹಕಾರಿಯಾಗಿದೆ.
- ಶಾಲಾ ನಿರ್ವಹಣೆಯಲ್ಲಿ ಗೊಂದಲ ಮತ್ತು ಒತ್ತಡಗಳಿರುವುದಿಲ್ಲ.
- ಶೈಕ್ಷಣಿಕ ವರ್ಷವನ್ನು ಅರ್ಥಪೂರ್ಣವಾಗಿ ಪೂರ್ಣಗೊಳಿಸಲು ಮಾರ್ಗದರ್ಶನ ನೀಡುತ್ತದೆ.

ಶಾಲಾ ಪಂಚಾಂಗವು ಶಾಲಾ ಆರಂಭದ ದಿನವೇ ಲಭ್ಯವಿರಬೇಕು. ಇದನ್ನು ಜೂನ್ ತಿಂಗಳಿನಲ್ಲಿ ನಡೆಯುವ ಮಿಂಚಿನ ಸಂಚಾರದಲ್ಲಿ ಶಾಲೆಗೆ ಭೇಟಿ ನೀಡುವ ಅಧಿಕಾರಿಗಳು ವೀಕ್ಷಿಸುತ್ತಾರೆ.

**ಶಾಲಾ ಪಂಚಾಂಗದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಮುಂದಿನ ಸಾಹಿತ್ಯ ಓದಿರಿ:**

* ಸೃಜನ 2005 * ಶಾಲಾ ಶೈಕ್ಷಣಿಕ ಕೈಪಿಡಿ [ಮಾರ್ಗದರ್ಶಿ] 2007* ಪ್ರೇರಣ – 2005

**5.2 ವೇಳಾಪಟ್ಟಿ**

ಶಾಲೆಯ ಶೈಕ್ಷಣಿಕ ವೇಳಾಪಟ್ಟಿಯು ವಿವಿಧ ತರಗತಿಗಳಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುತ್ತದೆ. ವೇಳಾಪಟ್ಟಿಯನ್ನು ತರಗತಿವಾರು ತಯಾರಿಸಿ, ನಂತರ ಶಾಲಾ ವೇಳಾಪಟ್ಟಿಯನ್ನು ತಯಾರಿಸುತ್ತೇವೆ. ಶಾಲಾ ವೇಳಾಪಟ್ಟಿಯನ್ನು ತಯಾರಿಸಿದ ನಂತರ ವಿಷಯಾವಾರು ಶಿಕ್ಷಕರು ತಮ್ಮ ತಮ್ಮ ವಿಷಯಗಳಿಗೆ ಸಂಬಂಧಿಸಿದ ವೇಳಾಪಟ್ಟಿಯನ್ನು ತಯಾರಿಸಿಕೊಳ್ಳಬೇಕಾಗುತ್ತದೆ.

ತರಗತಿವಾರು ಮತ್ತು ಶಾಲೆಯ ಕ್ರೋಢೀಕೃತ ವೇಳಾಪಟ್ಟಿಯು ಶೈಕ್ಷಣಿಕ ವರ್ಷದ ಆರಂಭದ ದಿನವೇ ಲಭ್ಯವಿದ್ದು ಮುಖ್ಯಶಿಕ್ಷಕರ ಕೊಠಡಿಯಲ್ಲಿ ಪ್ರದರ್ಶಿಸಿರಬೇಕು.

**ವೇಳಾಪಟ್ಟಿಯನ್ನು ತಯಾರಿಸುವಲ್ಲಿ ಮುಖ್ಯಶಿಕ್ಷಕರು ಗಮನಿಸಬೇಕಾದ ಅಂಶಗಳು**

- ಶೈಕ್ಷಣಿಕ ವರ್ಷದ ಕೊನೆಯ ದಿನಕ್ಕೆ ಮುಂಚಿತವಾಗಿ ಎಲ್ಲಾ ಶಿಕ್ಷಕರ ಸಭೆ ನಡೆಸಿ, ಕಲಿಸುವ ವಿಷಯಗಳನ್ನು ಅಂತಿಮಗೊಳಿಸುವುದು.
- ಪ್ರತಿ ಶಿಕ್ಷಕರ ಕಾರ್ಯಭಾರವನ್ನು ನಿಗದಿಪಡಿಸುವುದು, ಯಾವುದೇ ಶಿಕ್ಷಕರಿಗೆ ಹೆಚ್ಚಿನ ಹೊರೆಯಾಗದಂತೆ ಕ್ರಮವಹಿಸುವುದು.

- ಪ್ರತಿ ವಿಷಯದ ಕಲಿವಿಗೆ ಇಲಾಖೆಯು ನಿಗಧಿಪಡಿಸಿರುವಂತೆ ಅವಧಿಗಳನ್ನು ಗುರ್ತಿಸಿಕೊಳ್ಳುವುದು.
- ಪಠ್ಯ ಹಾಗೂ ಸಹಪಠ್ಯ ವಿಷಯಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ನಿರ್ವಹಿಸಬೇಕಾದ ಕಾರ್ಯಗಳನ್ನು ಅಂತಿಮಗೊಳಿಸುವುದು.
- ವಾರದ ದಿನಗಳು ಮತ್ತು ಶನಿವಾರ ಇಲಾಖೆಯ ನಿಯಮಾನುಸಾರ ಶಾಲಾ ಸಮಯವನ್ನು ನಿರ್ಧರಿಸುವುದು.
- ವೇಳಾಪಟ್ಟಿಯಲ್ಲಿ ಏಕತಾನತೆ ಉಂಟಾಗದಂತೆ ಗಮನಹರಿಸುವುದು.

ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ 320 ನಿಮಿಷ ಮತ್ತು ಶನಿವಾರ 200 ನಿಮಿಷ ಒಟ್ಟು ಕಲಿಕಾ ಅವಕಾಶದ ಸಮಯವಿರುತ್ತದೆ.

**ಯೋಚಿಸಿ:** ವಾರದಲ್ಲಿ ಒಟ್ಟು 1800 ನಿಮಿಷ "ಕಲಿಕಾ ಅವಕಾಶದ ಸಮಯ" ಲಭ್ಯವಿರುತ್ತದೆ. ರಾ.ಪ.ಚೌ. 2005 ರ ಅನ್ವಯ ಕಲಿಕಾ ಸಮಯವೆಂದರೆ "ಸ್ಪಷ್ಟ ಮತ್ತು ಅಸ್ಪಷ್ಟತೆಯ ನಡುವಿನ ಅಂತರದಲ್ಲಿ ಮಗು ಚಿಂತಿಸುವ ಸಮಯವಾಗಿರುತ್ತದೆ." ಕಲಿಕಾ ಅವಕಾಶದ ಸಮಯ ಮತ್ತು ಕಲಿಕಾ ಸಮಯವನ್ನು ಅರ್ಥಮಾಡಿಕೊಂಡು ಕಲಿಕಾ ಸಮಯ ವಾಸ್ತವಿಕವಾಗಿ ಎಷ್ಟಿರಬಹುದು ಎಂಬುದನ್ನು ಚರ್ಚಿಸಿ, ಕಲಿಕಾ ಸಮಯದ ಹೆಚ್ಚಳಕ್ಕೆ ಕ್ರಮಗಳನ್ನು ಪಟ್ಟಿ ಮಾಡಿ.

**ಶಾಲೆಯಲ್ಲಿ ತಯಾರಿಸಿಕೊಳ್ಳಬೇಕಾದ ವಿವಿಧ ರೀತಿಯ ವೇಳಾಪಟ್ಟಿಗಳು**

1. ಸಾಮಾನ್ಯ ವೇಳಾಪಟ್ಟಿ. (ಈ ವೇಳಾಪಟ್ಟಿಯು ರೇಡಿಯೋ ಪಾಠಗಳು/ಎಜುಸ್ಯಾಟ್/ಪೂರಕ ಬೋಧನೆ/ಬಹುವರ್ಗ ಬೋಧನೆಯ ಅಂಶಗಳನ್ನು ಒಳಗೊಂಡಿರುತ್ತದೆ.)
2. ತರಗತಿವಾರು ವೇಳಾಪಟ್ಟಿ.
3. ಶಿಕ್ಷಕರ ವೇಳಾಪಟ್ಟಿ.
4. ವಿಶೇಷ ತರಗತಿಗಳ ವೇಳಾಪಟ್ಟಿ.

**ವಿಷಯವಾರು ಅವಧಿಗಳ ಹಂಚಿಕೆ ವೇಳಾಪಟ್ಟಿ**

**ಒಂದರಿಂದ ಎಂಟನೇ ತರಗತಿಯವರೆಗೆ ಪ್ರತಿ ತರಗತಿಗೆ 40 ನಿಮಿಷಗಳ 45 ಅವಧಿಗಳಿರುತ್ತವೆ.**

| ಕ್ರ.ಸ | ತರಗತಿಗಳು → ವಿಷಯಗಳು ↓ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|---|
| 1 | ಪ್ರಥಮ ಭಾಷೆ | 13 | 13 | 13 | 13 | 13 | 7 | 7 | 7 |
| 2 | ಪರಿಚಯ ಭಾಷೆ/ ದ್ವಿತೀಯ ಭಾಷೆ | 5 | 5 | 5 | 5 | 5 | 5 | 5 | 5 |
| 3 | ತೃತೀಯ ಭಾಷೆ | – | – | – | – | – | 4 | 4 | 4 |
| 4 | ಪರಿಸರ ಅಧ್ಯಯನ | 8 | 8 | 8 | 8 | 8 | – | – | – |
| 5 | ಗಣಿತ | 8 | 8 | 8 | 8 | 8 | 6 | 6 | 6 |
| 6 | ವಿಜ್ಞಾನ | – | – | – | – | – | 6 | 6 | 6 |
| 7 | ಸಮಾಜ ವಿಜ್ಞಾನ | – | – | – | – | – | 6 | 6 | 6 |
| 8 | ಮೌಲ್ಯಗಳು / ಜೀವನ ಕೌಶಲ | 1 | 1 | 1 | 1 | 1 | 1 | 1 | 1 |
| 9 | ದೈಹಿಕ ಶಿಕ್ಷಣ/ಜೀವನ ವಿಜ್ಞಾನ | 5 | 5 | 5 | 5 | 5 | 5 | 5 | 5 |
| 10 | ಲಲಿತಕಲೆ/ಸಾ.ಉ.ಉ.ಕಾ | 5 | 5 | 5 | 5 | 5 | 5 | 5 | 5 |
| | **ಒಟ್ಟು** | **45** | **45** | **45** | **45** | **45** | **45** | **45** | **45** |

**ಆಧಾರ:** ಸೌರಭ–2011

ಶಾಲಾ ವೇಳಾಪಟ್ಟಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಮುಂದಿನ ಸಾಹಿತ್ಯವನ್ನು ಓದಿರಿ:

**ಪರಾಮರ್ಶನ ಸಾಹಿತ್ಯ**


1. ಸೌರಭ 2011
2. ಸೃಜನ 2005


**ಚಟುವಟಿಕೆ:** ವಿವಿಧ ಗುಂಪುಗಳಲ್ಲಿ ತರಗತಿವಾರು ವೇಳಾಪಟ್ಟಿ, ಶಾಲಾ ವೇಳಾಪಟ್ಟಿ ಹಾಗೂ ಶಿಕ್ಷಕವಾರು ವೇಳಾಪಟ್ಟಿಗಳನ್ನು ತಯಾರಿಸಿ.

## 5.3 ತರಗತಿ ನಿರ್ವಹಣೆ

ತರಗತಿ ನಿರ್ವಹಣೆಯು ವಿಷಯ ಅಥವಾ ಮಾಹಿತಿಯನ್ನು ಒಂದು ಮೂಲದಿಂದ ಮತ್ತೊಂದಕ್ಕೆ (ಪುಸ್ತಕದಿಂದ ವಿದ್ಯಾರ್ಥಿಗಳಿಗೆ) ವರ್ಗಾಯಿಸುವ ಕ್ರಿಯೆಯಲ್ಲ; ಇದು ಕಲಿಕೆಯನ್ನು ಅನುಕೂಲಿಸುವ ಹಾಗೂ ಮಕ್ಕಳು ಸಕ್ರಿಯವಾಗಿ ಕಲಿಕೆಯಲ್ಲಿ ಭಾಗವಹಿಸುವ ಪ್ರಕ್ರಿಯೆ. ಮಕ್ಕಳು ಶಾಲೆಗೆ ಬರುವ ಮುನ್ನ ಶ್ರೀಮಂತ ಅನುಭವಗಳನ್ನು ಅಮೂರ್ತವಾಗಿ ಪಡೆದುಕೊಂಡಿರುತ್ತಾರೆ. ಈ ಅಮೂರ್ತ ಅನುಭವಗಳನ್ನು ಮೂರ್ತ ರೂಪದಲ್ಲಿ ಅಭಿವ್ಯಕ್ತಿಸಲು ಶಿಕ್ಷಕರು ಅನುಕೂಲಿಸುತ್ತಾರೆ. ಅರ್ಥಾತ್ ವಿದ್ಯಾರ್ಥಿಗಳು ಸಾಕಷ್ಟು ಅನುಭವಗಳೊಂದಿಗೆ ಶಾಲೆಗೆ ಬರುತ್ತಾರೆ. ಈ ಅನುಭವಗಳನ್ನು ಆಧರಿಸಿ ಜ್ಞಾನವನ್ನು ತಾವೆ ಸಂರಚಿಸಿಕೊಳ್ಳಲು ಶಿಕ್ಷಕರು ಸಹಕರಿಸುತ್ತಾರೆ. (ಮೂರ್ತ ಮತ್ತು ಅಮೂರ್ತ ಕಲಿವಿಗೆಸಂಬಂಧಿಸಿದಂತೆ ಜೀನ್ ಪಿಯಾಜೆ ಹಾಗೂ ಬ್ರೂನರ್ ಅವರ ಪರಿಕಲ್ಪನೆಗಳ ಬೆಳವಣಿಗೆಗೆ ಸಂಬಂಧಿಸಿದ ಸಾಹಿತ್ಯವನ್ನು ಓದಿರಿ)

ತರಗತಿ ನಿರ್ವಹಣೆಯು ವಿವಿಧ ಸ್ವರೂಪಗಳನ್ನು ಹೊಂದಿದೆ. 1ನೇ ರಿಂದ 3ನೇ ತರಗತಿಯ ವಿದ್ಯಾರ್ಥಿಗಳಿಗೆ ನಲಿ–ಕಲಿ ವಿಧಾನ ಒಳಗೊಂಡಿದ್ದರೆ 4ರಿಂದ ಮುಂದಿನ ತರಗತಿಗಳಿಗೆ ಚಟುವಟಿಕೆ/ಜ್ಞಾನಾಧಾರಿತ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

**ಪರಿಣಾಮಕಾರಿ ತರಗತಿ ನಿರ್ವಹಣೆಯ ಮೂಲ ಅಂಶಗಳು**

**ಕಲಿಕಾ ಪರಿಸರ**

- ತರಗತಿಯಲ್ಲಿ ಸೂಕ್ತ ಗಾಳಿ, ಬೆಳಕು, ವೃತ್ತಾಕಾರ ಅಥವಾ ಅರೆವೃತ್ತಾಕಾರದ ಆಸನ ವ್ಯವಸ್ಥೆ ಇರಬೇಕು.
- ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ, ಚಿತ್ರ, ಮಾದರಿಗಳು, ಪರಿಕರಗಳು ಇರುವಂತೆ ನೋಡಿಕೊಳ್ಳಬೇಕು.
- ತರಗತಿಯ ಕೊಠಡಿಯು ಸ್ವಚ್ಛ, ಸುಂದರ ಮತ್ತು ಅಚ್ಚುಕಟ್ಟಾಗಿರಬೇಕು.
- ಸಹಭಾಗಿತ್ವದಲ್ಲಿ ಕಲಿಯಲು ಪ್ರತಿ ಮಗುವೂ ಅಭಿವ್ಯಕ್ತಿಸಿ, ಅಭಿಪ್ರಾಯಗಳನ್ನು ಗೌರವಿಸಿ ಸ್ವಕಲಿಕೆಗೆ ಕಾರಣವಾಗಬೇಕು.
- ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಗಳನ್ನು ಅರ್ಥಮಾಡಿಕೊಂಡು ಅವರಲ್ಲಿನ ಅನನ್ಯತೆಯನ್ನು ಗೌರವಿಸಬೇಕು.

**ಶಿಕ್ಷಕರ ಪೂರ್ವ ಸಿದ್ಧತೆ**

- ಪ್ರತಿ ಶಿಕ್ಷಕರು ತಮ್ಮ ವಿಷಯದ ಗುರಿ ಮತ್ತು ಉದ್ದೇಶಗಳ ತಿಳಿವಳಿಕೆ ಹೊಂದಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಸ್ಪಂದಿಸುವಂತೆ ಮಾನಸಿಕವಾಗಿ ಸಿದ್ಧರಾಗಿರಬೇಕು.
- ತಾವು ಕಲಿಸುವ ವಿಷಯಗಳಲ್ಲಿ ವಾರ್ಷಿಕ ಯೋಜನೆ ಮತ್ತು ಘಟಕ ಯೋಜನೆಗಳನ್ನು ಸಿದ್ಧಪಡಿಸಿಕೊಂಡಿರಬೇಕು.
- ಪ್ರತಿ ಕಲಿಕಾಂಶವನ್ನು ಪರಿಣಾಮಕಾರಿಯಾಗಿ ಸಂವಹನ ಮಾಡಲು ಅಗತ್ಯವಾದ 5ಇ ಚಟುವಟಿಕೆಗಳನ್ನು ರೂಪಿಸಿಕೊಂಡಿರಬೇಕು.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ರೂಪಿಸಿಕೊಂಡಿರಬೇಕು.
- ಪಠ್ಯಾಂಶಗಳ ಪರಿಣಾಮಕಾರಿ ನಿರ್ವಹಣೆಗೆ ಪೂರಕವಾದ ಕಲಿಕೋಪಕರಣಗಳನ್ನು ಹೊಂದಿಸಿಕೊಂಡಿರಬೇಕು.
- ವಿವಿಧ ಕಲಿಕಾಂಶಗಳಿಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ನೀಡಬೇಕಾದ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಂಡಿರಬೇಕು.

**ಶಿಕ್ಷಕರ ಸಂವಹನ ಕೌಶಲಗಳು**


- ಶಿಕ್ಷಕರು ತಮ್ಮ ಆಂಗಿಕ ಭಾಷೆ, ದೇಹ ಭಾಷೆ, ಕಣ್ಣಿನ ಚಲನೆಯ ಬಗ್ಗೆ ಗಮನಹರಿಸಬೇಕು.
- ಮಕ್ಕಳೊಂದಿಗೆ ತರಗತಿಯಲ್ಲಿ ಉತ್ತಮ ಬಾಂಧವ್ಯವನ್ನು ಏರ್ಪಡಿಸಿಕೊಳ್ಳಬೇಕು.
- ಮಕ್ಕಳ ಸಂವಹನ ಕ್ರಮಗಳನ್ನು ಅರ್ಥಮಾಡಿಕೊಳ್ಳಬೇಕು.
- ಭಾಷೆ ಮತ್ತು ಭಾಷೆಯ ಉಪಕ್ರಮಗಳ ಬಗ್ಗೆ ಜಾಗೃತರಾಗಿರಬೇಕು.

## 5.4 ರಚನಾವಾದಿ ತರಗತಿ ಪ್ರಕ್ರಿಯೆಗಳು

ಶಿಕ್ಷಕರಿಗೆ ನೀಡುವ ಪರಿಕಲ್ಪನಾತ್ಮಕ ಚರ್ಚೆಯ (ತಿಮ್ಯಾಟಿಕ್) ತರಬೇತಿಗಳಲ್ಲಿ ಪ್ರಮುಖವಾಗಿ ಚರ್ಚಿತವಾಗುವ ವಿಷಯ ರಚನವಾದಿ ತರಗತಿಗಳು.

**"**ಮಕ್ಕಳು ತಮ್ಮ ಜ್ಞಾನವನ್ನು ತಾವೇ ಕಟ್ಟಿಕೊಳ್ಳುತ್ತಾರೆ**"**. ಈ ಕಲಿಕೆ ಸಂಕೀರ್ಣವಾಗಿದ್ದು ಮಗು ಮೊದಲ ಎರಡು ವರ್ಷದಲ್ಲಿ ಅಂಗಾಂಗ ಚಟುವಟಿಕೆಗೆ ಪ್ರಾಧಾನ್ಯತೆ ನೀಡುತ್ತದೆ (Enactive Stage). ನಂತರ 3 ವರ್ಷದ ಹೊತ್ತಿಗೆ ಪ್ರತಿಮಾರೂಪದ ಪ್ರಕ್ರಿಯೆ (Iconic Representation) ಆರಂಭವಾಗುವುದು. ಇಲ್ಲಿ ಮಕ್ಕಳು ದೃಶ್ಯ, ಕಾವ್ಯ, ಮತ್ತು ಇತರ ಇಂದ್ರಿಯಾನುಭವಗಳನ್ನು ಮೂರ್ತೀಕರಿಸುತ್ತಾರೆ. ಮುಂದೆ 7 ವರ್ಷಗಳ ಹೊತ್ತಿಗೆ ಮಗುವು ಮೂರ್ತಾಂಶಗಳಿಂದ ಅಮೂರ್ತದ ಕಡೆಗೆ ಸಾಗುವುದು (Abstraction). ಈ ಕಲಿಕೆಯಲ್ಲಿ ಮಗುವಿಗೆ ಯಾವುದೇ ಸಂಕೀರ್ಣ ಮಾಹಿತಿಯನ್ನು ಯಾವುದೇ ಹಂತದಲ್ಲಿ ಕಲಿಸಬಹುದು. ಮಕ್ಕಳು ತಮ್ಮ ಕಲಿಕೆಯನ್ನು ತಮ್ಮದೇ ಕೋಡ್‌ಗಳಲ್ಲಿ ಪರಿವರ್ತಿಸಿಕೊಂಡು ತಮ್ಮ ಜ್ಞಾನವನ್ನು ತಾವೇ ಕಟ್ಟಿಕೊಳ್ಳುತ್ತಾರೆ.

ಕಲಿಕೆಯು ಈಗಾಗಲೇ ಇರುವ ಜ್ಞಾನದ ಬಳಕೆಯಿಂದ ಆಗುತ್ತದೆ. ಇರುವ ಜ್ಞಾನದೊಂದಿಗೆ ಹೊಸ ಅಂಶಗಳ ಸಮ್ಮಿಳತವು ಹೊಸ ಕಲಿಕೆಗೆ ಕಾರಣವಾಗುತ್ತದೆ. ಇವರ ಚಿಂತನೆಯನ್ನು ಆಧರಿಸಿ ಪರಿಕಲ್ಪನಾ ನಕ್ಷೆ ಇಲ್ಲಿ ಸಂರಚಿಸಲಾಗಿದೆ (ಜೋಸೆಫ್.ಡಿ.ನೋವಾಕ್ & ಆಲ್ಬರ್ಟೋ.ಜಿ.ಕ್ಯಾನಸ್– ಹೌ ಪೀಪಲ್ ಲರ್ನ್ 2012).




ಕಲಿಕೆ ಎಂದರೆ ಅದು ಅರ್ಥಪೂರ್ಣ ಅನುಭವಗಳು, ಮತ್ತು ಯೋಜಿತ ಪ್ರಯತ್ನಗಳಿಂದಾಗುವ ಜ್ಞಾನ ಪುನಾರಚನೆಯಾಗಿದೆ. ಒಂದು ವೇಳೆ ಕಲಿಕೆ ಜ್ಞಾನ ಪುನಾರಚನೆ ಅಥವ ಬೌದ್ಧಿಕ ಸಂರಚನೆಯಾಗದಿದ್ದರೆ ಅದು ಕಂಠಪಾಠದಿಂದಾಗಿ ಸ್ಮರಣೆಗೆ ಸೀಮಿತವಾಗುತ್ತದೆ. ಈ ರೀತಿಯ ಸ್ಮರಣೆಯು ಯಾವುದೇ ಬೌದ್ಧಿಕ ಸಂರಚನೆಯಾಗುವುದಿಲ್ಲವೆಂಬುದನ್ನು ಮೇಲ್ಕಂಡ ಚಿತ್ರದ ಮೂಲಕ ಔಸಾಬೆಲ್‌ರವರ ಸಿಧ್ಧಾಂತವನ್ನು ತೋರಿಸಬಹುದು. (ಡೇವಿಡ್ ಔಸಬೆಲ್‌ರವರು 1963:1968:2000).

ಪಿಯಾಜೆ ಹುಟ್ಟುತ್ತಲೇ ಬರುವ ಸ್ಕೀಮಾದ ಜೈವಿಕ ಬದಲಾವಣೆ ಮತ್ತು ಬೆಳವಣಿಗೆಯನ್ನೇ ಪ್ರಧಾನವಾಗಿರಿಸಿಕೊಂಡಿದ್ದಾರೆ. ಆದರೆ ಸಂಸ್ಕೃತಿಗಳಲ್ಲಿ ವ್ಯಕ್ತಿಯೊಬ್ಬರ ಕಲಿಕೆಯು ರೂಪ ಪಡೆಯುವುದು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂತರ್ ಸಂಬಂಧಗಳಿಂದ, ಮುಖ್ಯವಾಗಿ ಇವರ ಆಚರಣೆ, ಸಂಸ್ಕೃತಿ ಮತ್ತು ಭಾಷೆಯಿಂದ ಎಂಬುದನ್ನು ಕಂಡುಕೊಂಡಿದೆ. ಇದನ್ನು ಕಡೆಗಣಿಸಿ ಜ್ಞಾನ ಇಂಡಿಪೆಂಡೆಂಟ್/ ಸ್ವತಂತ್ರವಾಗಿ ಪುನಾರಚನೆಯಾಗುವುದಿಲ್ಲ ಅಥವ ನಿಸರ್ಗದೊಂದಿಗೆ ಒಡನಾಟದಿಂದ ಮಾತ್ರ ಕಲಿಕೆಯಾಗುವುದಿಲ್ಲ.

**ಸಾಮಾಜಿಕ ರಚನಾವಾದ:**ಮಗುವಿನ ಕಲಿಕೆಯ ಕುರಿತಾಗಿ ಪಿಯಾಜೆ ಜೈವಿಕ ನಿಲುವಿನಿಂದ ವಾದಿಸಿದರೆ ರಶ್ಯನ್ ವಿಜ್ಞಾನಿ ವೈಗೋಟ್ಸ್ಕಿಯವರು ಕಲಿಕೆಯ ಸಾಮಾಜಿಕ ಅಂಶಕ್ಕೆ ಒತ್ತು ಕೊಟ್ಟರು. ಮಗುವಿನ ಬೆಳವಣಿಗೆಯ ದೃಷ್ಟಿಯಿಂದ ಬೌದ್ಧಿಕ, ತಾರ್ಕಿಕ ಅಂಶ ಎಷ್ಟು ಪ್ರಧಾನವೋ ಹಾಗೆಯೇ ಸಾಮಾಜಿಕ ಸಂವಹನವೂ ಅತೀ ಮುಖ್ಯವೆಂದು ವೈಗೋಟ್ಸ್ಕಿಯವರು ಪ್ರತಿಪಾದಿಸಿದರು.

ಕಲಿಕೆಗೆ ಮಗು ತನ್ನ ಸಮಾಜದಲ್ಲಿರುವ ವಿವಿದ ಸಾಧನಗಳನ್ನು (ಭಾಷೆ, ಸನ್ನೆ, ಸಂಕೇತ. ಸ್ಪರ್ಷ, ಧ್ವನಿ ಇತ್ಯಾದಿ) ಬಳಸಿಕೊಂಡು ಸಾಮಾಜಿಕ ಜ್ಞಾನವನ್ನು ರಚನೆ ಮತ್ತು ಪುನಾರಚನೆ ಮಾಡಿಕೊಳ್ಳುತ್ತದೆ. ಈ ಸಾಧನಗಳಲ್ಲಿ ಪ್ರಮುಖ ಕಲಿಕಾ ಸಾಧನ ಭಾಷೆ. ಭಾಷೆಯನ್ನುಪಯೋಗಿಸಿ ಮಗು ಜ್ಞಾನ ಪುನಾರಚನೆ ಮಾಡಿಕೊಳ್ಳುತ್ತದೆ. ಹೀಗೆ ಮಕ್ಕಳು ಸ್ವತಃ ಕಲಿತಿರುತ್ತಾರೆ. ಆದರೆ ಈ ಕಲಿಕೆಯಲ್ಲಿ ಕೆಲವು ಅಂತರ ಅಥವ ತಪ್ಪುಗಳಿರಬಹುದು. ಇಂತಹಾ ಅಂತರಗಳಲ್ಲಿ ಚಿಂತನೆಗೆ ಹೆಚ್ಚು ತಿಳಿದ ಇತರರು ಸಾರುವೆ ಸಹಾಯ ಮಾಡಿದಲ್ಲಿ (Scaffolding) ಮಕ್ಕಳ ಜ್ಞಾನ ಪುನಾರಚನೆಯಾಗುತ್ತದೆ. ಇದು ವೈಗೋಟ್ಸ್ಕಿಯವರವಾದದ ಸಾರಾಂಶವೆನ್ನಬಹುದು. ವೈಗೋಟ್ಸ್ಕಿಯವರ ಥಿಯರಿಯು ಸಾಮಾಜಿಕವಾಗಿ ಜ್ಞಾನ ಕಲಿಕಾ ಅಂಶಕ್ಕೆ ಪ್ರಾಧಾನ್ಯತೆ ನೀಡುತ್ತದೆ.

ಈಗಾಗಲೇ ರಚನಾವಾದಿ ತರಗತಿಯ ಬಗ್ಗೆ ಸಾಕಷ್ಟು ಮಾತಾಡಿದ್ದೇವೆ. ಪರಿಕಲ್ಪನೆಗಳನ್ನೂ ಚರ್ಚಿಸಿದ್ದೇವೆ. ಆದರೆ ತರಗತಿ ಹೇಗೆ ನಡೆಯುತ್ತದೆ ಎಂಬುದನ್ನು ಸಾಂಪ್ರದಾಯಿಕ ತರಗತಿ ಮತ್ತು ರಚನಾವಾದಿ ತರಗತಿ ಎಂದು ವ್ಯತ್ಯಾಸಮಾಡಿ ಉದಾಹರಣಾತ್ಮಕವಾಗಿ ಕೆಲವು ಅಂಶಗಳನ್ನು ಇಲ್ಲಿ ನೀಡಿದೆ:

ಇಂಗ್ಲಿಷ್ ಭಾಷೆ ಹಾಗೂ ಸಮಾಜ ವಿಜ್ಞಾನಕ್ಕೆಗೆ ಸಂಬಂಧಿಸಿದಂತೆ ಹೇಳಲಾದ ಕೋಷ್ಠಕವನ್ನು ಒಮ್ಮೆ ಓದಿ ಕೊಳ್ಳೋಣ. ನಮ್ಮ ಪ್ರಸ್ತುತ ತರಗತಿಗಳೂ ಸಂಪ್ರದಾಯಕವಾಗಿದ್ದರೆ ಅಲ್ಲಿ ಮುಖ್ಯವಾಗಿ ನಡೆಯುವ ಕೆಲವು ಮಿತಿಗಳನ್ನು ನಮ್ಮನಮ್ಮಲ್ಲಿ ಚರ್ಚಿಸಿಕೊಳ್ಳುವ.

**ಸಾಂಪ್ರದಾಯಿಕ ಇಂಗ್ಲಿಷ್ ತರಗತಿ ಪ್ರಕ್ರಿಯೆ**

- ಶಿಕ್ಷಕರು ಹಸನ್ಮುಖರಾಗಿ ತರಗತಿಗೆ ಪ್ರವೇಶಿಸುತ್ತಾರೆ.
- ಎಲ್ಲ ವಿದ್ಯಾರ್ಥಿಗಳೂ ಗುಡ್ ಮಾರ್ನಿಂಗ್ ಟೀಚರ್ ಎಂದು ಹೇಳಿ ಕುಳಿತುಕೊಳ್ಳುತ್ತಾರೆ.
- ಶಿಕ್ಷಕರು ಹಾಜರಿ ಕರೆಯುತ್ತಾರೆ. ಪಾಠಪುಸ್ತಕ ತೆರೆಯಿರಿ ಎನ್ನುತ್ತಾ 'ನಿನ್ನೆ ಎಲ್ಲಿಗೆ ನಿಲ್ಲಿಸಿದ್ದೆವು?' ಎಂದು ಕೇಳುತ್ತಾರೆ.
- ಬಳಿಕ ಹಿಂದಿನ ದಿನದ ಪಾಠದ ಬಗ್ಗೆ ಪ್ರಶ್ನೆ ಕೇಳುತ್ತಾರೆ.
- ಬಳಿಕ ಈ ದಿನದ ಭಾಗವನ್ನು ಓದುತ್ತಾರೆ, ಪದಗಳನ್ನು ಪರಿಚಯಿಸುತ್ತಾರೆ, ಅರ್ಥ ಹೇಳುತ್ತಾರೆ, ವಿವರಿಸುತ್ತಾರೆ.
- ಮಕ್ಕಳಿಗೆ ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಾರೆ.
- ಮಕ್ಕಳಿಂದ ಗಟ್ಟಿಯಾಗಿ ಓದಿಸುತ್ತಾರೆ.

- ಕೆಲವು ಮನೆಗೆಲಸ ನೀಡುತ್ತಾರೆ.
- ಬೆಲ್ ಆದಂತೆ ಮರುದಿನ ಮಾಡಬೇಕಾದ ಕೆಲಸಗಳ ಬಗ್ಗೆ ಮತ್ತೊಮ್ಮೆ ನೆನಪಿಸಿ ಹೊರ ನಡೆಯುತ್ತಾರೆ.

**1. ಸಾಂಪ್ರದಾಯಿಕ ಸಮಾಜ ವಿಜ್ಞಾನ ತರಗತಿ ಪ್ರಕ್ರಿಯೆ**

ವಿಷಯ: **ನಾಗರೀಕತೆಗಳು**

- ಮಕ್ಕಳು ಎದ್ದುನಿಂತು ಕುಳಿತು ಕೊಳ್ಳುತ್ತಾರೆ.
- ಶಿಕ್ಷಕರು ಪುಟ್ಟ ಆಟವಾಡಿಸಿ/ಗಮನ ಸೆಳೆಯುವ ಚಟುವಟಿಕೆ ಮಾಡಿಸುತ್ತಾರೆ.
- ನಂತರ ಮಕ್ಕಳನ್ನು ನಾವು ಪ್ರಸ್ತುತ ಯಾವೆಲ್ಲಾ ಸೌಕರ್ಯ ಹೊಂದಿದ್ದೇವೆ? – ಎಂದು ಪ್ರಶ್ನಿಸುತ್ತಾರೆ  ಮಕ್ಕಳು ಉತ್ತರಿಸುತ್ತಾರೆ.
- ಹಿಂದೆ ಹೇಗಿದ್ದೆವು? – ಎಂದು ಪ್ರಶ್ನೆಯನ್ನು ಮುಂದುವರೆಸುತ್ತಾರೆ.
- ಹಾಗೆಯೇ ಹಿಂದಿನ ನಾಗರೀಕತೆಗಳ ಕಡೆ ಗಮನ ಸೆಳೆಯುತ್ತಾರೆ. ಉತ್ತರದ ಪ್ರಕ್ರಿಯೆಯಲ್ಲಿ ನಾಗರೀಕತೆಗಳನ್ನು ಪರಿಚಯಿಸುತ್ತಾರೆ. ನಾಗರೀಕತೆಗಳ ವಿವಿಧ ಚಿತ್ರಗಳನ್ನು ತೋರಿಸಿ, ಮಕ್ಕಳು ಅವಲೋಕಿಸುವಂತೆ ಮಾಡುತ್ತಾರೆ. ಪುಟ್ಟ ವಿವರಣೆ ನೀಡುತ್ತಾರೆ. ಮಕ್ಕಳು ಆಲೋಚಿಸಲು ಪ್ರಶ್ನೆಗಳನ್ನು ನೀಡುತ್ತಾರೆ.
- ಹೊಂದಿಸಿ ಬರೆಯುವ ಚಾರ್ಟ್ ಹಾಕಿ ಯಾವ ನಾಗರೀಕತೆ ಎಲ್ಲಿ ಉದಯಿಸಿತು ಎಂದು ಪ್ರಶ್ನಿಸಿ ಮಕ್ಕಳಿಂದ ಉತ್ತರ ಪಡೆಯುತ್ತಾರೆ.
- ಮನೆಗೆಲಸ ನೀಡುತ್ತಾರೆ.

ಮೇಲಿನ ತರಗತಿಯಲ್ಲಿ ಕಾಣಿಸುವ ಲಕ್ಷಣಗಳಲ್ಲಿ ಕೆಲವನ್ನು ಮುಂದೆ ನೀಡಿದೆ. ನೀವೂ ಇಲ್ಲಿನ ತರಗತಿಯಲ್ಲಿ ಇರುವ ಗುಣಾವಗುಣಗಳನ್ನು ಆಲೋಚಿಸಿರಿ: ಈ ತರಗತಿಗಳಲ್ಲಿ ಹೆಚ್ಚಾಗಿ ಕಾಣುವುದು ಏಕ ಮುಖ ಸಂವಹನ ಅಥವಾ ಶಿಕ್ಷಕರೇ ಹೆಚ್ಚಾಗಿ ಮಾತಾಡುವುದು, ಪಠ್ಯಪುಸ್ತಕ ಆಧಾರಿತ ತರಗತಿ ಆಚರಣೆಗಳು, ಯಾಂತ್ರಿಕ ಕಲಿಕೆ, ಉಪನ್ಯಾಸ ವಿಧಾನ, ಮತ್ತು ಸಾಂಪ್ರದಾಯಿಕ ರೀತಿಯ ಮೌಲ್ಯಮಾಪನಗಳನ್ನು ಕಾಣಬಹುದು.

ಈ ಮೇಲಿನ ತರಗತಿಯನ್ನು ಅವಲೋಕಿಸಿದ ನಂತರ ಇದೇ ತರಗತಿಯಲ್ಲಿ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವುದರ ಮೂಲಕ ರಚನಾವಾದಿ ತತ್ವದ ತರಗತಿಯನ್ನು ಅನುಷ್ಠಾನಗೊಳಿಸಬಹುದು. ಈ ಬದಲಾವಣೆಗಳನ್ನು ಮಾಡಿಕೊಳ್ಳುವಾಗ ಶಾಲೆ ಮತ್ತು ತರಗತಿಗಳಲ್ಲಿ ಮಾಡಿಕೊಳ್ಳಬಹುದಾದ, ಅಥವಾ ತಾವು ಸೃಜಿಸುವ ವಿವಿಧ ಸ್ವರೂಪಗಳನ್ನು ಬ್ರೈನ್ ಸ್ಟಾರ್ಮಿಂಗ್ ಮಾಡಿ ಪಟ್ಟಿ ಮಾಡಿಕೊಳ್ಳಬಹುದು. ಇಲ್ಲಿ ತರಗತಿಪರಿಸರದ ಕೆಲವು ಭೌತಿಕ, ಮಾನವೀಯ ಸಂಬಂಧ ಹಾಗೂ ಶೈಕ್ಷಣಿಕ ಪರಿಸರದ ಅಂಶಗಳನ್ನು ಚರ್ಚಿಸಿದೆ.

### ರಚನಾವಾದ ತರಗತಿಗಾಗಿ ನಾವು ಸೃಜಿಸುವ ಭೌತಿಕ ಪರಿಸರ

1. ವಿಭಿನ್ನವಾದ ಚಟುವಟಿಕೆಗಳಲ್ಲಿ ಸುಲಭವಾಗಿ ತೊಡಗಿಕೊಳ್ಳಲು ಅನುಕೂಲವಾಗುವಂತೆ ಇರುವ ವ್ಯವಸ್ಥೆಯನ್ನು ಜೋಡಿಸಿಕೊಳ್ಳುವುದು – ಉದಾ: ಗುಂಪು ಕಾರ್ಯ, ಚರ್ಚೆ ಜೊತೆ ಕಾರ್ಯ, ಪ್ರಯೋಗ ಇತ್ಯಾದಿ
2. ಮಗು ಏನನ್ನು ಹುಡುಕಲು, ಅನ್ವೇಷಿಸಲು ಅಪೇಕ್ಷೆ ಪಡುತ್ತದೆಯೋ ಅವುಗಳು ಸಿಗುವಂತೆ ಇರುವುದು ಬಹಳ ಅಗತ್ಯ. ಉದಾ: ಗ್ರಂಥಾಲಯ ಇದೆ ಎನ್ನುವುದಕ್ಕಿಂತ ಗ್ರಂಥಾಲಯ ಬಳಕೆಗೆ ನಾವು ಎಷ್ಟು ಅವಕಾಶ ಕಲ್ಪಿಸಿದ್ದೇವೆ? ಮಕ್ಕಳ ಕಲಿಕೆಗೆ ಅಗತ್ಯವಿರುವ ಎಷ್ಟು ಪುಸ್ತಕಗಳನ್ನು ಮಕ್ಕಳ ಕೈಗೆ ಸಿಗುವಂತೆ ಜೋಡಿಸಿಕೊಂಡಿದ್ದೇವೆ ಎನ್ನುವುದು ಮುಖ್ಯವಾಗುತ್ತದೆ. ಗಣಿತ ಕಲಿವಿನಲ್ಲಿ ಶಾಲಾ ಕೈತೋಟ, ತರಗತಿ ಕೋಣೆಯೇ ಕಲಿಕೋಪಕರಣವಾಗಬಲ್ಲದು.

### ರಚನಾವಾದ ತರಗತಿಗಾಗಿ ನಾವು ಸೃಜಿಸುವ ಮಾನವೀಯ ಸಂಬಂಧಗಳ ಪರಿಸರ

1. ಶಿಕ್ಷಕರು ಮತ್ತು ಮಕ್ಕಳು ಇಬ್ಬರೂ ಕಲಿಕಾದಾರರೇ ಆಗಿರುತ್ತಾರೆ. ಇಬ್ಬರೂ ಸಮಾನರು ಎನ್ನುವ ಭಾವ. ಶಿಕ್ಷಕರು ಇಲ್ಲಿ ಅನುಕೂಲಿಸುವವರಾಗಿರುತ್ತಾರೆ.
2. ಕಲಿಕಾ ಸನ್ನಿವೇಶ ರೂಪಿಸಬೇಕಾದ ಶಿಕ್ಷಕ ಕಲಿಕೆಯನ್ನು ಮಗುವಿನ ಪರಿಸರಕ್ಕೆ ಸಂಬಂಧೀಕರಿಸಬೇಕಾದರೆ ಮಗುವಿನ ಎಲ್ಲಾ ಹಿನ್ನೆಲೆಗಳನ್ನು ಅರ್ಥೈಸಿಕೊಂಡಿರುವುದು ಮುಖ್ಯ.
3. ಶಿಕ್ಷಕರು ಮಕ್ಕಳನ್ನು ಮಕ್ಕಳು ಶಿಕ್ಷಕರನ್ನು ಪರಸ್ಪರ ಅರ್ಥೈಸಿಕೊಂಡಿರುವುದು.
4. ಪರಸ್ಪರ ಇಬ್ಬರೂ ಗೌರವಿಸುತ್ತಾರೆ.
5. ಮಗು ಖಾಲಿ ಹಾಳೆ ಅಲ್ಲ, ಮಗುವಿನಲ್ಲಿ ವಿಷಯದ/ಪರಿಕಲ್ಪನೆಯ ಕುರಿತಂತೆ ಕಚ್ಚಾ ಮಾಹಿತಿ, ಜ್ಞಾನ ಹಾಗೂ ಅನುಭವ ಇದೆ ಎನ್ನುವುದನ್ನು ಅರ್ಥೈಸಿಕೊಂಡು ವ್ಯವಹರಿಸ್ಮತ್ತಾರೆ.

### ರಚನಾವಾದ ತರಗತಿಗಾಗಿ ನಾವು ಸೃಜಿಸುವ ಶೈಕ್ಷಣಿಕ ಪರಿಸರ

1. ಮಗು ತನ್ನಿಂತಾನೆ, ತನಗರಿವಿಲ್ಲದೆ ಕಲಿಕೆಯಲ್ಲಿ ತೊಡಗಿಕೊಳ್ಳವ ಮಾನಸಿಕ ಪರಿಸರ
2. ಏನಾದರೊಂದು ಕಲಿಕಾ ಕಾರ್ಯದಲ್ಲಿ ಮಕ್ಕಳು ತೊಡಗಿರುತ್ತಾರೆ
3. ಮಗುವಿನ ಆಲೋಚನೆ, ಅಭಿವ್ಯಕ್ತಿ, ಭಾವನೆಗಳಿಗೆ ಆದ್ಯತೆ

4. ಮಗುವಿನ ಬದುಕಿಗೆ ಸಂಬಂಧೀಕರಿಸಿಕೊಳ್ಳುವ ಕಲಿಕೆ
5. ಅಧ್ಯಯನ ಶೀಲರಾಗಿರುವ ಶಿಕ್ಷಕರು
6. ಶಾಲೆಯಲ್ಲಿ ನಡೆಯುವ ಪ್ರತಿ ಪ್ರಕ್ರಿಯೆಯಲ್ಲಿಯೂ ಕಲಿಕೆಗೆ ಅವಕಾಶ

ಕಲಿಕಾ ಪರಿಸರ ರೂಪಿಸುವ ಚಟುವಟಿಕೆಗಳನ್ನು ಅರ್ಥೈಸಿಕೊಳ್ಳಲು 'ತಾರೆ ಜಮೀನ್‌ಪರ್ ಚಲನ ಚಿತ್ರ', ತೊತೊಚಾನ್ ಕಿರುಕಾದಂಬರಿಗಳನ್ನು ಒಮ್ಮೆ ಅವಲೋಕಿಸುವುದು.

**ಈ ಕೆಳಗಿನ ಇಂಗ್ಲೀಷ್ ತರಗತಿ ಪ್ರಕ್ರಿಯೆಯನ್ನೊಮ್ಮೆ ಅವಲೋಕಿಸೋಣ:**

### 3. ರಚನಾವಾದಿ ತತ್ವವನ್ನಾಧರಿಸಿದ ತರಗತಿ ಪರಿಸರ – ಇಂಗ್ಲೀಷ್ ಭಾಷಾ ತರಗತಿ ಪ್ರಕ್ರಿಯೆ

| ಇಂಗ್ಲಿಷ್ ಭಾಷಾ ತರಗತಿಯ ಸ್ವರೂಪ | ನಿರೀಕ್ಷಿಯ ತರಗತಿ – ಹೀಗಿರಬಹುದು. ಇದಕ್ಕೆ ಯಾವ ರೀತಿಯ ಚಟುವಟಿಕೆಗಳನ್ನು ಮಾಡಬಹುದು? ಸಲಹೆ ನೀಡಿರಿ. |
|---|---|
| ದ್ವಿಮುಖಿ ಸಂವಹನ – ಸಂವಹನಕ್ಕೆ ಇಂಗ್ಲಿಷ್ ಭಾಷೆಯ ಬಳಕೆ<br>ಇದುವರೆಗಿನ ಕಲಿಕೆಗೆ ಹೊಸ ಕಲಿಕೆ ಸಂಬಂಧೀಕರಿಸಲು ಅನುಕೂಲಿಸುವುದು<br>ಪದಗಳನ್ನು ಸಾಂದರ್ಭೀಕರಿಸುವುದು<br>ಓದುವ ಮೊದಲು ಓದಿನ ಪೂರ್ವ ಕೇಳುವ ಸರಳ ಪ್ರಶ್ನೆಗಳು<br>ಮಕ್ಕಳಿಂದ ಮೌನ ಓದು<br>ಚರ್ಚೆ – ಇಂಗ್ಲಿಷ್‌ನಲ್ಲಿ – ಚಿಕ್ಕ ಚಿಕ್ಕ ಪ್ರಶ್ನೆಗಳು – ಇಂಗ್ಲಿಷ್‌ನಲ್ಲಿ ಉತ್ತರಿಸಲು ಪ್ರೋತ್ಸಾಹ<br>ಇತರ ಮಾಹಿತಿ ಮೂಲಗಳ ಬಳಕೆ<br>ಚಟುವಟಿಕೆಗಳು – ಕಲಿಕೆಗಾಗಿ ಮತ್ತು ಮೌಲ್ಯಮಾಪನಕ್ಕಾಗಿ<br>ತರಗತಿ ಅನಂತರ ನಡೆಸಬೇಕಾದ ಹೆಚ್ಚುವರಿ ಚಟುವಟಿಕೆಗಳು – ಆಕರಗಳ ಪರಾಮರ್ಶೆ, ಚರ್ಚೆ, ಟಿಪ್ಪಣಿ ಮಾಡುವುದು ಇತ್ಯಾದಿ | ಶಿಕ್ಷಕರು ತರಗತಿ ಪ್ರವೇಶಿಸಿ, ಗುಡ್ ಮಾರ್ನಿಂಗ್ ಹೇಳುತ್ತಾರೆ.<br>ಮಕ್ಕಳ ಜೊತೆ ಪುಟ್ಟ ವಾಕ್ಯಗಳ ಮಾತುಕತೆ ನಡೆಸುತ್ತಾರೆ. ಮಕ್ಕಳ ಅಭಿಪ್ರಾಯ/ಚರ್ಚೆ/ಮಾತಿನಿಂದ ತರಗತಿ ಮುಂದುವರಿಯುತ್ತದೆ. ಇದುವರೆಗೆ ಕಲಿತ ಪದಗಳ ಜೊತೆ ಹೊಸ ಪದಗಳ ಸೇರ್ಪಡೆ. ಹೊಸ ಪದಗಳನ್ನು ತರಗತಿಯಲ್ಲಿ ಸಾಂದರ್ಭೀಕರಿಸಲು ಅನುಕೂಲವಾಗುವಂತೆ (ಚಿತ್ರ, ಚಾರ್ಟ್, ಕಥೆ ಹೀಗೆ) ಇಟ್ಟು ಮಕ್ಕಳಿಗೆ ಅವುಗಳನ್ನು ತಾವೇ ತೆಗೆದುಕೊಂಡು ಚರ್ಚಿಸಲು ಚಟುವಟಿಕೆ ರೂಪಿಸುತ್ತಾರೆ. ಎರಡು ಅಥವಾ ಮೂರು ಬಾರಿ ಪಾಠ ತಾವು ಓದುತ್ತಾರೆ. ಮಕ್ಕಳಿಗೆ ಕೆಲವು ಪ್ರಶ್ನೆಗಳನ್ನು ನೀಡಿ ಅಥವಾ ಕೇಳಿ ಅವಕ್ಕೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಕಂಡುಕೊಳ್ಳಲು ಹೇಳಿ ತಾವು ಪ್ರತಿ ಗುಂಪಿಗೆ ಸಹಾಯ ಮಾಡಲು ತೆರಳುತ್ತಾರೆ. ಇಲ್ಲಿ ಮೌನ ಓದು ಅಥವಾ ಗುಂಪಿನ ಓದು ಮಕ್ಕಳು ನಡೆಸುತ್ತಾರೆ. ತಾವು ಅಗತ್ಯವಿದ್ದಾಗ ಮಗುವಿಗೆ ಸಹಾಯ ಮಾಡುವುದು. ಉದಾ : ಇಂಗ್ಲೀಷ್‌ನಲ್ಲಿ ನನ್ನ ಹೆಸರು ____ ಇದೇ ರೀತಿ ನೀನು ಹೇಳು.......... ಹೀಗೆ ಬೆಂಬಲ (ಸ್ಕ್ಯಾಫೋಲ್ಡಿಂಗ್) ಒದಗಿಸುತ್ತಾರೆ. ಉದ್ದೇಶಗಳುನುಸಾರ ಕಲಿಕೆಯು ಶಾಲಾ ಅವಧಿಯ ನಂತರವೂ ಸಾಗುವಂತೆ ಹೆಚ್ಚುವರಿ ತೊಡಗಿಸಿಕೊಳ್ಳುವ ಕಾರ್ಯಕ್ಕೆ ನಿತ್ಯ ಜೀವನದೊಂದಿಗೆ (ಉದಾ: ಅಡುಗೆ ಮನೆಯೂ ಸೇರಿದಂತೆ) ಕಲಿಕೆ ಮುಂದುವರೆಯುವ ಕೆಲಸ ನೀಡುವುದು ಅಥವಾ ಪುಸ್ತಕ/ಪತ್ರಿಕೆಗಳ ವಿಷಯ ಗಮನಿಸಿ ತಮ್ಮ ಅಭಿಪ್ರಾಯ/ ವಿಮರ್ಶೆ ಕೆಲಸ ನೀಡುವುದು. |

**ಈ ತರಗತಿಯಲ್ಲಿ ಕೆಲವು ಮಾಡಬಹುದಾದ ಚಟುವಟಿಕೆಗಳನ್ನು ನೀಡಿದೆ:**

- ಇಂಗ್ಲಿಷ್‌ಪ್ರಾಸಗೀತೆ, ಕಥೆ ಅಥವಾ ಘಟನೆಗಳನ್ನು ಆಲಿಸುವುದು
- ಕಥೆ ಹೇಳುವುದು, ಸಂಭಾಷಣೆ ಮಾಡುವುದು
- ಸಹಜವಾಗಿ ಅನುಭವಗಳನ್ನು ಹಂಚಿಕೆ ಮಾಡಿಕೊಳ್ಳುವುದು
- ಸನ್ನಿವೇಶಗಳಿಗೆ ಕಥೆ ಹೆಣೆಯುವುದು, ಪಾಠ ಓದಿ ಗುಂಪಿನಲ್ಲಿ ಚರ್ಚಿಸುವುದು
- ಸಹವರ್ತಿಗಳ ಜೊತೆ ಕೆಲಸ ಮಾಡುತ್ತಾ ಕಲಿಕೆ, ಪಾತ್ರಾಭಿನಯ ಮಾಡುವುದು
- ವಾರ್ತಾ ಪತ್ರಿಕೆಗಳಲ್ಲಿ ಅಥವಾ ಗ್ರಂಥಾಲಯ ಪುಸ್ತಕಗಳಲ್ಲಿ ಪದಗಳನ್ನು ಹುಡುಕುವುದು, ಶಬ್ದ ಕೋಶದಲ್ಲಿ ಪದಗಳಿಗೆ ಅರ್ಥ ಹುಡುಕುವುದು
- ಯೋಜನೆಗಳಲ್ಲಿ ತೊಡಗಿಕೊಳ್ಳುವುದು
- ಶಾಲಾ ಕಾರ್ಯಗಳಲ್ಲಿ ತೊಡಗುವಾಗ ಇಂಗ್ಲೀಷ್ ಭಾಷೆಯ ಬಳಕೆ
- ಶಾಲೆಯ ನಿತ್ಯದ ಒಡನಾಟದಲ್ಲಿ ಇಂಗ್ಲೀಷ್ ಭಾಷೆಯ ಬಳಕೆ ಇತ್ಯಾದಿ.

**ರಚನಾವಾದಿ ತತ್ವವನ್ನಾಧರಿಸಿದ ಪ್ರಥಮ ಭಾಷಾ ತರಗತಿ ಪ್ರಕ್ರಿಯೆ**

| ಪ್ರಥಮ ಭಾಷಾ ತರಗತಿ ಸ್ವರೂಪ | ನಿರೀಕ್ಷಿಯ ರಚನಾವಾದಿ ತರಗತಿ |
|---|---|

| | |
|---|---|
| ○ ಸಹಜ ಸಂವಹನಕ್ಕೆ ಭಾಷೆಯ ಬಳಕೆ<br>○ ಇದುವರೆಗಿನ ಕಲಿಕೆಗೆ ಹೊಸ ಕಲಿಕೆ ಸಂಬಂಧೀಕರಿಸಲು ಅನುಕೂಲಿಸುವುದು<br>○ ಪದಗಳನ್ನು ಸಾಂದರ್ಭೀಕರಿಸುವುದು<br>○ ಓದುವ ಮೊದಲು ಓದಿನ ಪೂರ್ವ ಕೇಳುವ ಸರಳ ಪ್ರಶ್ನೆಗಳು<br>○ ಮಕ್ಕಳಿಂದ ಮೌನ ಓದು<br>○ ಚರ್ಚೆ – ಪ್ರಥಮ ಭಾಷೆಯಲ್ಲಿ ಚಿಕ್ಕ ಚಿಕ್ಕ ಪ್ರಶ್ನೆಗಳು – ಉತ್ತರಿಸಲು/ಚರ್ಚಿಸಲು ಪ್ರೋತ್ಸಾಹ<br>○ ಇತರ ಮಾಹಿತಿ ಮೂಲಗಳ ಬಳಕೆ<br>○ ಚಟುವಟಿಕೆಗಳು – ಕಲಿಕೆಗಾಗಿ ಮತ್ತು ಮೌಲ್ಯಮಾಪನಕ್ಕಾಗಿ<br>○ ತರಗತಿ ಅನಂತರ ನಡೆಸಬೇಕಾದ ಹೆಚ್ಚುವರಿ ಚಟುವಟಿಕೆಗಳು – ಆಕರಗಳ ಪರಾಮರ್ಶೆ, ಚರ್ಚೆ, ಟಿಪ್ಪಣಿ ಮಾಡುವುದು ಇತ್ಯಾದಿ | ಮಕ್ಕಳಿಗೆ ವಂದಿಸುತ್ತಾರೆ. ತರಗತಿಯಲ್ಲಿ ಕಲಿಸುವ ಅಗತ್ಯತೆಯ ವಸ್ತು, ವಿಷಯ, ಚಿತ್ರ ಇಡಲ್ಪಟ್ಟಿರುತ್ತವೆ ಅಥವಾ ಮಕ್ಕಳು ತರಗತಿಯಿಂದ ಅಗತ್ಯವಿದ್ದಲ್ಲಿ ಹೊರ ಪರಿಸರಕ್ಕೆ ಬರುತ್ತಾರೆ. ಮಕ್ಕಳ ಜೊತೆ ಅಂದಿನ ಸಂದರ್ಭಕ್ಕೆ ತಕ್ಕಂತೆ ಸಹಜವಾದ ಮಾತುಗಳನ್ನು ಆಡುತ್ತಾ ಚರ್ಚೆ ಆರಂಭಿಸುತ್ತಾರೆ. ಮಕ್ಕಳ ಅಭಿಪ್ರಾಯದ ಮೇಲೆ ತರಗತಿ ಮುಂದುವರಿಯುತ್ತದೆ. ಯಾವ ಉದ್ದೇಶಾನುಸಾರ ಮಕ್ಕಳು ಕಲಿಯಬೇಕೆಂದು ಅಪೇಕ್ಷಿಸುತ್ತಾರೋ ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ರೂಪಿಸಿರುತ್ತಾರೆ ಅಥವಾ ಅಂತಹಾಸಂದರ್ಭ ಹುಟ್ಟಿಕೊಳ್ಳುತ್ತದೆ. ಮಕ್ಕಳು ಚಟುವಟಿಕೆಯಲ್ಲಿ ಅಥವಾ ಓದಿನಲ್ಲಿ ತೊಡಗಿಕೊಳ್ಳುತ್ತಾರೆ. ಶಿಕ್ಷಕರು ಎರಡು/ಮೂರು ಬಾರಿ ತಾವು ಓದುತ್ತಾರೆ. (ಪ್ರಥಮ ಭಾಷೆಯಲ್ಲಿ ಈ ಮಕ್ಕಳು ಮತ್ತು ಶಿಕ್ಷಕರು ಓದುವ ಕ್ರಮ ಹಿಂದು ಮುಂದಾಗಬಹುದು. ಮಕ್ಕಳು ತಾವೇ ಸ್ವತಃ ಅರ್ಥ ರೂಪಿಸುವ ಅಂಶ ಇಲ್ಲಿ ಮುಖ್ಯ) ನಂತರ ಶಿಕ್ಷಕರು ಮಗುವಿಗೆ ಬೇಕಾದ ಬೆಂಬಲ ಹಾಗೂ ಹಿಮ್ಮಾಹಿತಿಯನ್ನು ನೀಡುತ್ತಾರೆ. |

ರಚನಾವಾದ ತರಗತಿಗಳಲ್ಲಿ ಮಗುವಿಗೆ ಸ್ವಾತಂತ್ರ್ಯವಿದೆ, ಅಭಿವ್ಯಕ್ತಿಗೆ ಅವಕಾಶವಿದೆ. ಮಗುವಿನ ಅಭಿಪ್ರಾಯಗಳಿಗೆ ಮನ್ನಣೆ ಇದೆ. ತನ್ನ ಜೀವನಾನುಭವಗಳನ್ನು ಸಂಬಂಧೀಕರಿಸಿಕೊಳ್ಳುತ್ತಾ ಆಲಿಸುವ, ಮಾತನಾಡುವ, ಓದುವ ಹಾಗೂ ಬರೆಯುವ ಕ್ಷೇತ್ರಗಳನ್ನು ತನ್ನದಾಗಿಸಿಕೊಳ್ಳುತ್ತದೆ. ಮಗು ಪ್ರಶ್ನಿಸುತ್ತದೆ. **ಕಲಿಕೆ ತೀರಾ ವೈಯಕ್ತಿಕವಾಗುತ್ತಾ ಹೋಗುತ್ತದೆ ಅರ್ಥಾತ್ ಪ್ರತಿ ಮಗುವೂ ವಿಭಿನ್ನವಾಗಿ ಕಲಿಯುತ್ತಿರುತ್ತದೆ. ಕಲಿಕೆ ವೈಯಕ್ತಿಕವಾಗುತ್ತಿದ್ದಂತೆಯೇ ಕಲಿಕೆ ಸಹಜವಾಗುತ್ತಿರುತ್ತದೆ**. ಸಹಜ ಕಲಿಕೆಯು ಯಾವಾಗಲೂ ಸುಲಭವಾಗ ತೊಡಗುತ್ತದೆ.

## ರಚನಾವಾದಿ ತತ್ವಾಧರಿಸಿದ ತರಗತಿ ಪರಿಸರ– ಗಣಿತ ತರಗತಿ ಪ್ರಕ್ರಿಯೆ

| ರಚನಾವಾದಿ ತರಗತಿಯ ಸ್ವರೂಪ | ರಚನಾವಾದಿ ತರಗತಿ ಪ್ರಕ್ರಿಯೆ |
|---|---|
| ದ್ವಿಮುಖಿ ಸಂವಹನ<br>○ ಪರಿಕಲ್ಪನೆಗೆ ಸಂಬಂಧಿಸಿದಂತೆ ಪೂರ್ವಜ್ಞಾನವನ್ನು ಅರ್ಥಮಾಡಿಕೊಳ್ಳುವುದು. ಇದುವರೆಗಿನ ಕಲಿಕೆಗೆ ಹೊಸ ಕಲಿಕೆ ಸಂಬಂಧೀಕರಿಸಲು ಹಾಗೂ ಅನುಭವಾತ್ಮಕವಾಗಿ ಪರಿಕಲ್ಪನೆಯನ್ನು ಕಟ್ಟಿಕೊಳ್ಳಲು ಅನುಕೂಲಿಸುವುದು.<br>○ (ಮಗುವಿನ ಚಿಂತನೆಯನ್ನು ಗಣಿತೀಕರಿಸುವ ಪೂರ್ವಕಲ್ಪನೆಗಳನ್ನು/ಊಹೆಗಳನ್ನು ತಾರ್ಕಿಕ ತೀರ್ಮಾನಗಳತ್ತ ಒಯ್ಯುವ ಹಾಗೂ ಚಿಂತನೆಗಳಲ್ಲಿ ಸ್ಪಷ್ಟತೆಯನ್ನು ಮೂಡಿಸುವ, ಸಮಸ್ಯಾ ಪರಿಹಾರಕ್ಕೆ ದಾರಿತೋರುವ, ಅಮೂರ್ತವಾದುದನ್ನು ನಿರ್ವಹಿಸುವ ಸಾಮರ್ಥ್ಯಗಳನ್ನು ಬೆಳೆಸಬಲ್ಲಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು. ಪರಿಕಲ್ಪನೆಗಳನ್ನು ನಿತ್ಯಜೀವನಕ್ಕೆ ಸಂಬಂಧೀಕರಿಸುತ್ತಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು)<br>○ ಚಟುವಟಿಕೆಗಳು – ಕಲಿಕೆಗಾಗಿ ಮತ್ತು ಮೌಲ್ಯಮಾಪನಕ್ಕಾಗಿ<br>○ ತರಗತಿ ಅನಂತರ ನಡೆಸಬೇಕಾದ ಹೆಚ್ಚುವರಿ ಚಟುವಟಿಕೆಗಳು – ಯೋಜನೆಗಳು, ನಿತ್ಯ ಬದುಕಿನಲ್ಲಿ ಬರುವ ಗಣಿತದ ವಿಚಾರಗಳನ್ನು ಒಳಗೊಂಡ ಗೃಹಪಾಠಗಳು ಇತ್ಯಾದಿ | ಶಿಕ್ಷಕರು ವಂದಿಸುತ್ತಾರೆ. ಮಕ್ಕಳ ಜೊತೆ ಚರ್ಚೆ/ಸಹಜ ಮಾತುಗಳನ್ನು ಆಡುತ್ತಾ ತರಗತಿ ಆರಂಭಿಸುತ್ತಾರೆ. ಮಕ್ಕಳ ಅಭಿಪ್ರಾಯದ ಮೇಲೆ ತರಗತಿ ಮುಂದುವರಿಯುತ್ತದೆ. ಕಲಿಕಾ ಉದ್ದೇಶಾನುಸಾರ ಅದಕ್ಕೆ ಪೂರಕವಾದ ಚಟುವಟಿಕೆ ರೂಪಿಸಲ್ಪಟ್ಟಿರುತ್ತದೆ. ಮಕ್ಕಳು ಅಂತಹಾ ಚಟುವಟಿಕೆಯಲ್ಲಿ ತೊಡಗುತ್ತಾರೆ. ಶಿಕ್ಷಕರು ಮಗುವಿಗೆ ಬೇಕಾದ ಬೆಂಬಲ ಹಾಗೂ ಹಿಮ್ಮಾಹಿತಿಯನ್ನು ನೀಡುತ್ತಾರೆ. |

| |
|---|
| **ಗಣಿತದ ವಿವಿಧ ಪರಿಕಲ್ಪನೆಗಳಿಗೆ ಮಾಡಬಹುದಾದ ಚಟುವಟಿಕೆಗಳು:**<br>**ಅವಲೋಕನ**<br>○ ಗಡಿಯಾರದ ಹಾಗೂ ಕ್ಯಾಲೆಂಡರ್ ಅವಲೋಕನದ ಮೂಲಕ ಕಾಲದ ಕಲ್ಪನೆ, ಅಂಗಡಿ ಬಿಲ್‌ಗಳ ಅವಲೋಕನ<br>○ ಮಕ್ಕಳು ತಮ್ಮ ತಮ್ಮ ಸ್ನೇಹಿತರ ಮೂಗಿನ ಅಳತೆ ಮಾಡುವುದು, ಚಿತ್ರ ಬರೆದು, ಕೋನಗಳ ಚರ್ಚೆ ಮಾಡುವುದು<br>○ ಗುಣಲಕ್ಷಣಗಳನ್ನು ವಿಕ್ಷಣೆ ಮಾಡಿ ಚರ್ಚಿಸಿ ಪಟ್ಟಿ ಮಾಡಿಕೊಳ್ಳುವುದು –ವಿವಿಧ ಆಕೃತಿಗಳು<br>○ ಪ್ರಾಯೋಗಿಕ ಅನುಭವ–ತರಗತಿ ಕೋಣೆಯ ಉದ್ದಳತೆ–ಸುತ್ತಳತೆ ಕಂಡುಹಿಡಿಯುವುದು, ಇದೇ ರೀತಿ ತೂಕ–ಗಾತ್ರ– ಕ್ಷೇತ್ರಫಲ<br>○ ಸಂದರ್ಶನ– ಬ್ಯಾಂಕ್, ಪೋಸ್ಟ್ ಆಫೀಸು<br>○ ಮಾದರಿ ತಯಾರಿ–ಸಮತಲ ಆಕೃತಿಗಳು, ಘನಗಳು<br>○ ಗುಂಪು ಕಾರ್ಯ– ತಾವೇ ಲೆಕ್ಕಗಳನ್ನು ಕೊಟ್ಟುಕೊಂಡು ಪರಿಹಾರ ಕಂಡುಕೊಳ್ಳುವುದು<br>○ ಸಮೀಕ್ಷೆಗಳನ್ನು ನಡೆಸುವುದು– ದತ್ತಾಂಶಗಳಿಂದ ಆಲೇಖಗಳ ರಚನೆ<br>○ ರಚನೆಗಳನ್ನು ಮಾಡುವುದು–ತ್ರಿಭುಜ, ಆಯತ, ವರ್ಗ<br>○ ಕಲಿಕಾ ಸಾಧನಗಳ ತಯಾರಿ– ಕ್ಯಾಲೆಂಡರ್ ತಯಾರಿ, ಬಿಲ್ ತಯಾರಿ<br>○ ಯೋಜನೆ–ಮನೆಯಲ್ಲಿ ತಿಂಗಳ ಖರ್ಚುವೆಚ್ಚದ ಲೆಕ್ಕಾಚಾರ, ಮರುಕಟ್ಟೆಯ ದರಗಳ ಏರಿಳಿತಗಳ ಲೆಕ್ಕಾಚಾರ, ಅಕ್ಷರ ದಾಸೋಹದ ಮಾಸಿಕ ಲೆಕ್ಕಾಚಾರ, ಊರ ಸಮೀಕ್ಷೆ ಇತ್ಯಾದಿ. |

**ರಚನಾವಾದಿ ತತ್ವಾಧರಿಸಿದ ತರಗತಿ ವಿಜ್ಞಾನ**

| **ರಚನಾವಾದಿ ತರಗತಿಯ ಸ್ವರೂಪ** | **ರಚನಾವಾದಿ ತರಗತಿ ಪ್ರಕ್ರಿಯೆ** |
|---|---|
| ದ್ವಿಮುಖಿ ಸಂವಹನ<br>○ ಪರಿಕಲ್ಪನೆಗೆ ಸಂಬಂಧಿಸಿದಂತೆ ಪೂರ್ವಜ್ಞಾನವನ್ನು ಅರ್ಥಮಾಡಿಕೊಳ್ಳುವುದು.<br>○ ಅನುಭವಾತ್ಮಕವಾಗಿ ಪರಿಕಲ್ಪನೆಯನ್ನು ಕಟ್ಟಿಕೊಳ್ಳಲು ಅನುಕೂಲಿಸುವುದು–(ವೈಜ್ಞಾನಿಕ ಜ್ಞಾನವನ್ನು ಸೃಜಿಸುವ ಪ್ರಕ್ರಿಯೆ ಮತ್ತು ವಿಧಾನಗಳನ್ನು ಗಳಿಸುವಂತೆ ತೊಡಗಿಸಿಕೊಳ್ಳುವ, ಮಗುವಿನ ಸಹಜ ಕುತೂಹಲ ಮತ್ತು ಸೃಜನಶೀಲತೆಯನ್ನು ಪೋಷಿಸುವ, ತನ್ನ ಸುತ್ತಲಿನ ಪ್ರಪಂಚವನ್ನು ಸಂತಸದಾಯಕವಾಗಿ ಅನ್ವೇಷಿಸುವ ಕಾರ್ಯದಲ್ಲಿ ತೊಡಗುವ, ಪ್ರಪಂಚದೊಂದಿಗೆ ತನ್ನ ಸಾಮರಸ್ಯವನ್ನು ಬೆಸೆಯುವ, ಸ್ವಾಭಾವಿಕ ಪರಿಸರ ಮತ್ತು ಮಾನವ ನಿರ್ಮಿತ ಪರಿಸರ ಹಾಗೂ ಜನರ ಕುರಿತ ಮಗುವಿನ ಕುತೂಹಲವನ್ನು ಪೋಷಿಸುವ,<br>ಪರಿಶೋಧನೆಯಲ್ಲಿ ತೊಡಗುವ ಮತ್ತು ವೀಕ್ಷಣೆ, ವರ್ಗೀಕರಣ, ತೀರ್ಮಾನ ತೆಗೆದುಕೊಳ್ಳುವ, ಆರೋಗ್ಯದ ಕಾಳಜಿಗಳನ್ನು ಬೆಳೆಸುವಂತಿರಬೇಕು)<br>ಚಟುವಟಿಕೆಗಳು:–ಕಲಿಕೆಗಾಗಿ ಮತ್ತು ಮೌಲ್ಯಮಾಪನಕ್ಕಾಗಿ<br>○ ತರಗತಿ ಅನಂತರ ನಡೆಸಬೇಕಾದ ಹೆಚ್ಚುವರಿ ಚಟುವಟಿಕೆಗಳು. ಯೋಜನೆಗಳು, ನಿತ್ಯ ಬದುಕಿನಲ್ಲಿ ಬರುವ ವಿಜ್ಞಾನದ ಪರಿಕಲ್ಪನೆಗಳನ್ನು ಒಳಗೊಂಡ ಗೃಹಪಾಠಗಳು ಇತ್ಯಾದಿ | ಶಿಕ್ಷಕರು ವಂದಿಸುತ್ತಾರೆ. ಮಕ್ಕಳ ಜೊತೆ ಸಹಜವಾದ ಮಾತುಗಳನ್ನು ಆಡುತ್ತಾ ತರಗತಿ ಆರಂಭಿಸುತ್ತಾರೆ. ಮಕ್ಕಳ ಅಭಿಪ್ರಾಯದ ಮೇಲೆ ತರಗತಿ ಮುಂದುವರಿಯುತ್ತದೆ. ಕಲಿಕಾ ಉದ್ದೇಶಾನುಸಾರ ಚಟುವಟಿಕೆ ರೂಪಿಸಲ್ಪಟ್ಟಿರುತ್ತವೆ. ಮಕ್ಕಳು ಚಟುವಟಿಕೆಯಲ್ಲಿ ತೊಡಗುತ್ತಾರೆ. ಶಿಕ್ಷಕರು ಮಗುವಿಗೆ ಬೇಕಾದ ಬೆಂಬಲ ಹಾಗೂ ಹಿಮ್ಮಾಹಿತಿಯನ್ನು ನೀಡುತ್ತಾರೆ.<br>ಇಲ್ಲಿ 5 'ಇ'ಗಳ ಪಾತ್ರ ಪ್ರಧಾನವೆನಿಸುತ್ತದೆ. |
| **ಮಾಡಬಹುದಾದ ಚಟುವಟಿಕೆಗಳು:**<br>ಚಟುವಟಿಕೆ ಮತ್ತು ಸಮೀಕ್ಷೆ– ಪರಿಸರ ಮತ್ತು ಆರೋಗ್ಯ ಸಂಬಂಧಿ ವಿಚಾರಗಳು, ಶಾಲೆ ಮತ್ತು ಸಮುದಾಯದೊಂದಿಗೆ ಗುಂಪು | |

| |
|---|
| ಚಟುವಟಿಕೆ, ಸಹಪಾಠಿ ಮತ್ತು ಶಿಕ್ಷಕರೊಂದಿಗೆ ಚರ್ಚೆ, ದತ್ತಾಂಶಗಳನ್ನು ಸಂಘಟಿಸಿ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸುವ ಮೂಲಕ ವಿಜ್ಞಾನದ ಪರಿಕಲ್ಪನೆಗಳ ಅರ್ಥೈಸುವಿಕೆ, ಪ್ರಯೋಗಗಳನ್ನು ಮಾಡುವುದು–ಆಯಸ್ಕಾಂತದ ಗುಣಲಕ್ಷಣಗಳು, ಸ್ಥಾಯಿ ವಿದ್ಯುತ್<br>ವೀಕ್ಷಣೆ, ವರ್ಗೀಕರಣ ಮತ್ತು ಪಟ್ಟಿ ಮಾಡುವುದು–ಸಸ್ಯದ ಭಾಗಗಳು, ವಿವಿಧ ಬೇರುಗಳು, ಹೂವಿನ ಭಾಗಗಳು.<br>ಯೋಜನೆ– ನೀರಿನ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆ, ಒಂದು ತಿಂಗಳು ಸೇವಿಸುವ ಆಹಾರದಲ್ಲಿರುವ ಪೌಷ್ಠಿಕಾಂಶಗಳು |

## ರಚನಾವಾದಿ ತತ್ವವನ್ನಾಧರಿಸಿದ ತರಗತಿ ಪರಿಸರ – ಸಮಾಜ ವಿಜ್ಞಾನ

| ರಚನಾವಾದಿ ತರಗತಿಯ ಸ್ವರೂಪ | ರಚನಾವಾದಿ ತರಗತಿ ಪ್ರಕ್ರಿಯೆ |
|---|---|
| ದ್ವಿಮುಖಿ ಸಂವಹನ<br>ಪರಿಕಲ್ಪನೆಗೆ ಸಂಬಂಧಿಸಿದಂತೆ ಪೂರ್ವಜ್ಞಾನವನ್ನು ಅರ್ಥಮಾಡಿಕೊಳ್ಳುವುದು.<br>ಅನುಭವಾತ್ಮಕವಾಗಿ ಪರಿಕಲ್ಪನೆಯನ್ನು ಕಟ್ಟಿಕೊಳ್ಳಲು ಅನುಕೂಲಿಸುವುದು– (ಪ್ರಾಕೃತಿಕ ವೈವಿಧ್ಯತೆ ಮತ್ತು ಸಾಮಾಜಿಕ–ಸಾಂಸ್ಕೃತಿಕ ವೈವಿಧ್ಯತೆಗಳ ನಡುವಿನ ಸಾದೃಶಗಳನ್ನು ಅರ್ಥೈಸುವ, ಸರ್ಕಾರದ ರಚನೆ ಮತ್ತು ಕಾರ್ಯನಿರ್ವಹಣೆ ಮತ್ತು ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ತಿಳಿಯುವ, ಸಮಾಜ ಸ್ಥಳೀಯದಿಂದ ಜಾಗತಿಕದೆಡೆಗೆ ಸಾಗಿದ ಬೆಳವಣಿಗೆ ಕುರಿತ ದೃಷ್ಠಿಕೋನವನ್ನು ಬೆಳಸುವ, ಬಹುತ್ವ ಮತ್ತು ಬದಲಾವಣೆಯ ಪರಿಕಲ್ಪನೆಗಳಿಗೆ ಒತ್ತು ನೀಡುವಂತೆ ಭಾರತೀಯ ಇತಿಹಾಸವನ್ನು ಅರ್ಥೈಸುವ,. ಬಡತನ, ಅನಕ್ಷರತೆ, ಮಗು ಮತ್ತು ಜೀತ, ವರ್ಗ, ಜಾತಿ, ಲಿಂಗ ಮತ್ತು ಪರಿಸರಕ್ಕೆ ಸಂಬಂಧಿಸಿದ ಸಮಕಾಲೀನ ವಿವಾದಾಂಶಗಳನ್ನು ಬಹುದೃಷ್ಠಿಕೋನಗಳಿಂದ ನೋಡಲು ಸಹಾಯ ಮಾಡಬಲ್ಲರು)<br>ಕಲಿಕಾ ಪ್ರಕ್ರಿಯೆಗಳಲ್ಲಿ ಮಕ್ಕಳಿಗೆ ನಿರಂತರವಾಗಿ ಮಾರ್ಗದರ್ಶನ ನೀಡುತ್ತಾ ಹಿಮ್ಮಾಹಿತಿಯನ್ನು ನೀಡುವರು. | ಶಿಕ್ಷಕರು ಮಕ್ಕಳಿಗೆ ವಂದಿಸುತ್ತಾರೆ.<br>ಮಕ್ಕಳ ಜೊತೆ ಸಹಜವಾದ ಮಾತುಗಳನ್ನು ಆಡುತ್ತಾ ಚರ್ಚಿಸುತ್ತಾರೆ. ಉದಾ.. ನಾಗರೀಕತೆಯ ಉತ್ಖನನ ತರಗತಿಯು ಈ ರೀತಿ ನಡೆಯಬಹುದು. ಮೊದಲೇ ಒಂದಷ್ಟು ವಸ್ತು, ಮಡಿಕೆ ಚೂರು, ದಾನ್ಯಗಳನ್ನ ಮಣ್ಣಿನಲ್ಲಿ ಹುದುಗಿಸಿಡಬೇಕು. ಮಕ್ಕಳನ್ನು ಹೊರಗೆ ಕರೆತಂದು ಅವುಗಳನ್ನು ಹುಡುಕುತ್ತಾ ಮಣ್ಣಿನಲ್ಲಿ ತೋಡುತ್ತಾ ಉತ್ಖನನ, ನಾಗರೀಕತೆಯ ವಿಷಯ ಚರ್ಚಿಸಬಹುದು. ಮಕ್ಕಳ ಅಭಿಪ್ರಾಯದ ಮೇಲೆ ತರಗತಿ ಮುಂದುವರಿಯುತ್ತದೆ. ಉದ್ದೇಶಾಧಾರಿತ ಚರ್ಚೆಗಳಾಗುತ್ತವೆ. ಮಕ್ಕಳು ಚಟುವಟಿಕೆಯಲ್ಲಿ ತೊಡಗುತ್ತಾರೆ. ಶಿಕ್ಷಕರು ಮಗುವಿಗೆ ಬೇಕಾದ ಬೆಂಬಲ ಹಾಗೂ ಹಿಮ್ಮಾಹಿತಿಯನ್ನು ನೀಡುತ್ತಾರೆ. |
| **ಮಾಡಬಹುದಾದ ಚಟುವಟಿಕೆಗಳು:**<br>ಕ್ಷೇತ್ರ ಭೇಟಿ–ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಿಗೆ ಭೇಟಿ, ಸ್ಥಳೀಯ ಐತಿಹಾಸಿಕ ಸ್ಥಳಗಳಿಗೆ ಭೇಟಿ, ಸಂದರ್ಶನ–ಸ್ಥಳೀಯ ಜನಪ್ರತಿನಿಧಿಗಳು, ಎಸ್‌ಡಿಎಂಸಿ ಸದಸ್ಯರು, ಸಮೀಕ್ಷೆ–ಜನರ ಸಂಸ್ಕೃತಿ, ಭಾಷೆ, ಆಚಾರ–ವಿಚಾರಗಳು, ಉದ್ಯೋಗಗಳು,<br>ಶಾಲೆ ಮತ್ತು ಸಮುದಾಯದೊಂದಿಗೆ ಗುಂಪು ಚಟುವಟಿಕೆ, ಸಹಪಾಠಿ ಮತ್ತು ಶಿಕ್ಷಕರೊಂದಿಗೆ ಚರ್ಚೆ,<br>ಗ್ರಂಥಾಲಯ ಪರಾಮರ್ಶನ ಹಾಗೂ ಟಿಪ್ಪಣೆ– ರಾಜ ಪರಂಪರೆ,<br>ನಿಯೋಜಿತ ಕಾರ್ಯಗಳು, ಮ್ಯಾಪ್ ಕಾರ್ಯಗಳು,<br>ಚರ್ಚಾ ಗೋಷ್ಠಿ– ಮೀಸಲು ಪದ್ಧತಿ, ರಾಜ ಪ್ರಭುತ್ವ ಮತ್ತು ಪ್ರಜಾ ಪ್ರಭುತ್ವ,<br>ಯೋಜನೆ– ಜನಜೀವನ, ಪದ್ಧತಿಗಳು, ಸಾಮಾಜಿಕ ಆಚರಣೆಗಳು, ಹವಾಮಾನ ಮತ್ತು ವಾಯುಗುಣ, ಅಂತರ್ಜಾಲ ಬಳಕೆ–ಎಲ್ಲಾ ವಿಚಾರಗಳು | |

## ರಚನಾವಾದಿ ತತ್ವ ಆಧರಿಸಿದ ಪಾಠ ಟಿಪ್ಪಣಿಗಳು

**ಪಾಠ ಟಿಪ್ಪಣಿಯನ್ನು ತಯಾರಿಸುವಾಗ ಮುಂದಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು:**

- ಕಲಿಕೆಯು ಮುಖ್ಯ ಪರಿಕಲ್ಪನೆಗಳಲ್ಲಿ ಕೇಂದ್ರೀಕೃತವಾಗಿರಬೇಕು ಹಾಗೂ ಬೋಧಕರು ಮಕ್ಕಳ ಪರಿಕಲ್ಪನೆಗಳ ಅರ್ಥೈಸಿಕೊಳ್ಳುವಿಕೆಯನ್ನು ನಿರಂತರವಾಗಿ ಮೌಲ್ಯಾಂಕನ ಮಾಡುತ್ತಿರಬೇಕು.
- ಮಕ್ಕಳ ದೃಷ್ಟಿಕೋನಗಳನ್ನು ಪಡೆದುಕೊಳ್ಳಬೇಕು ಹಾಗೂ ಗೌರವಿಸಬೇಕು.
- ಶಿಕ್ಷಕರು ಯೋಜಿಸಲಾದ ಅಂಶಗಳಿಗೇ ನಿಷ್ಠುರವಾಗಿ ಅಂಟಿಕೊಳ್ಳುವುದರ ಬದಲಾಗಿ ತರಗತಿಯ ಜ್ಞಾನಾತ್ಮಕ ಬೆಳವಣಿಗೆಗೆ ಹೊಂದಿಕೊಳ್ಳುವಂತೆ ಕಲಿಕಾ ಬೋಧನಾ ಆಚರಣೆಗಳನ್ನು ಬದಲಾಯಿಸಿಕೊಳ್ಳಬೇಕು.
- ವಿದ್ಯಾರ್ಥಿಗಳು ಕಲಿಕೆಯನ್ನು ವರ್ಗಾಯಿಸಲು ಸಮರ್ಥರಾಗಬೇಕು –ಕಲಿಕೆಯನ್ನು ಹೊಸ ಸಂದರ್ಭಗಳಿಗೆ ಅನ್ವಯಿಸಿಕೊಳ್ಳುವುದು – ಹಾಗೂ ಸೂಕ್ತವೆನಿಸಿದಾಗ ಅವರ ದೃಷ್ಟಿಕೋನಗಳನ್ನು ಬದಲಾಯಿಸಿಕೊಳ್ಳುವ ಮುಕ್ತತೆ ಇರಬೇಕು.
- ಹಿಮ್ಮಾಹಿತಿ ತೀರ್ಪು ನೀಡದ ರೀತಿಯಲ್ಲಿರಬೇಕು. ಮೌಲ್ಯಾಂಕನವು ಆಯಾ ಸಂದರ್ಭದಲ್ಲಿಯೇ ನಡೆಯಬೇಕು (ಬ್ರೂಕ್ಸ್ ಹಾಗೂ ಬ್ರೂಕ್ 1993. The Case for Constructivist Classroom)

<u>**ರಚನಾವಾದ ಎಂದೊಡನೇ ವರ್ತನಾವಾದವೆಲ್ಲವೂ ತಪ್ಪು ರಚನಾವಾದವೆಲ್ಲವೂ ಸರಿ ಎಂದಾಗುವುದಿಲ್ಲ.**</u> ಹಲವು ಸಲ ಪ್ರಾಥಮಿಕ ಭಾಗವಾಗಿ ಕಲಿಕೆಯನ್ನು ವರ್ತನೆಗಳಲ್ಲಿ ಕಾಣಬೇಕಾಗುತ್ತದೆ. ನಂತರ ವರ್ತನೆಗಳ ಎಲ್ಲೆ ಮೀರಿ ಮಗು ಇರುವ ಜ್ಞಾನವನ್ನು ಸಂಬಂಧೀಕರಿಸಿಕೊಂಡು ತಾನು ಜ್ಞಾನ ಕಟ್ಟಿಕೊಂಡದ್ದು/ಕೊಳ್ಳುವುದನ್ನು ನಾವು ಊಹಿಸಬೇಕಾಗುತ್ತದೆ. ಆದರೆ ವರ್ತನಾವಾದ ನಂಬಿದಂತೆ ಕಲಿಕೆ ಏಕರೇಖಾತ್ಮಕವಾಗಿ, ಸರಳ ರೇಖೆಯಂತೆ ಸಾಗುವುದಿಲ್ಲ (Linear Order) ಎಂಬುದು ಅರಿತಿರಬೇಕಾದ ಸತ್ಯ. ಕಲಿಕೆ ಪ್ರತಿ ಮಗುವಿಗೂ ವಿಶಿಷ್ಟ ಮತ್ತು ವ್ಯಕ್ತಿಗತ. ಆದ್ದರಿಂದ ರಚನಾವಾದಿ ತರಗತಿ ಪ್ರಕ್ರಿಯೆಯು ಹೀಗೇ ಸಾಗುತ್ತದೆ ಎಂದು ಹೇಳುವ ಮಾಡೆಲ್ ನೀಡಲು ಸಾಧ್ಯವಾಗುವುದಿಲ್ಲ. ಅಲ್ಲದೇ ಈ ಲೇಖನದಲ್ಲಿ ನೀಡಿದ ಸಿದ್ಧ ಮಾದರಿಯ ಘಟಕ ಯೋಜನೆಯನ್ನು 'ಮಾದರಿ' ಎಂದು ಪರಿಗಣಿಸದೆ ಅದನ್ನು ಒಂದು ಉದಾಹರಣೆಯಾಗಿ ಅರ್ಥೈಸಿಕೊಳ್ಳಬಹುದು. ಹಾಲಿ ಇರುವ 5E ಎಂಬ ಸಂಕೀರ್ಣ ಹಾಗೂ ಪ್ರಕ್ರಿಯೆ ಪ್ರಧಾನವಾದ ಘಟಕ ಯೋಜನೆಯನ್ನು ಮಾದರಿ ಎಂದು ಯಾವಾಗಲೂ ಸ್ವೀಕರಿಸಲಾಗುವುದಿಲ್ಲ.

ತರಗತಿ ಪ್ರಕ್ರಿಯೆಗೆ ಮುನ್ನ, ಪೂರ್ವ ಸಿದ್ಧತೆಯಾಗಿ ಶಿಕ್ಷಕರು ಇಡೀ ಘಟಕವನ್ನು ಒಮ್ಮೆ ಓದಿಕೊಂಡು ಅದರ ಆಂತರಿಕ ತಿರುಳನ್ನು ಮನನ ಮಾಡಿಕೊಳ್ಳಬೇಕಾದ್ದು ಅಗತ್ಯ. ತದನಂತರ ಆ ವಯೋಮಿತಿಯ ಮಕ್ಕಳು ಯಾವೆಲ್ಲಾ ಚರ್ಚೆಗಳನ್ನು (ಇತರೇ ವಿಷಯಗಳೂ ಸೇರಿದಂತೆ ವಿಷಯ ವ್ಯಾಪ್ತಿ ಮೀರಿ ನಡೆಸುವ ಚರ್ಚೆ) ಮಾಡಬಹುದು ಎಂಬುದನ್ನೂ ಊಹಿಸಲು ಪ್ರಯತ್ನಿಸಬೇಕು. (ಪಠ್ಯವಸ್ತುವನ್ನು ಮೀರಿ ಕಲಿಕೆ ಶ್ರೀಮಂತಗೊಳ್ಳುವ ರಾ ಪ ಚೌ 2005ರ ಮೂರನೇ ಮಾರ್ಗದರ್ಶೀ ತತ್ವ) ಇವುಗಳನ್ನೆಲ್ಲಾ ಆಧರಿಸಿ ಪರಿಕಲ್ಪನಾ ನಕ್ಷೆ (Concept Map) ತಯಾರಿಸಿಕೊಳ್ಳಬೇಕು.

## 1. '5E' ಪಾಠ ಯೋಜನೆ

ರಚನವಾದಿ ತರಗತಿಗಳನ್ನು ಯೋಜಿಸಲು ಹಾಗೂ ನಿರ್ವಹಿಸಲು ಹಲವು ವಿಧಾನಗಳಿವೆ. ಅಂತಹ ಒಂದು ವಿಧಾನ 5–E ಮಾದರಿ. ಇದರಲ್ಲಿ ಇಂಗ್ಲಿಷಿನ **'E'** ಅಕ್ಷರದಿಂದ ಆರಂಭವಾಗುವ ಐದು **ಕ್ರಿಯಾ** ಪದಗಳ (ನಾಮಪದಗಳಲ್ಲ) ಅಂಶಗಳಿವೆ: (Engage, Explore, Explain, Elaborate and Evaluate)ತೊಡಗಿಸಿಕೊಳ್ಳುವುದು, ಪರಿಶೋಧಿಸುವುದು, ವಿವರಿಸುವುದು, ವಿಸ್ತರಿಸುವುದು ಹಾಗೂ ಮೌಲ್ಯಮಾಪನ ಮಾಡುವುದು. ಕಲಿಕೆ ಅನುಕೂಲಿಸಬೇಕಾಗಿರುವ ಎಲ್ಲಾ ವಿಷಯಗಳಲ್ಲಿ ಈ 5–E ಗಳನ್ನು ಬಳಸಬಹುದಾಗಿದೆ.

- **ತೊಡಗಿಸಿಕೊಳ್ಳುವುದು**: ಶಿಕ್ಷಕರು ಯಾವುದೇ ಹೊಸ ವಿಷಯ/ಉಪವಿಷಯವನ್ನು ಮೊದಲಿಗೆ ಕಲಿಕಾದಾರರಿಗೆ ಪರಿಚಯಿಸಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ತಾವು ಈಗಾಗಲೇ ತಿಳಿದಿರುವ ವಿಷಯಗಳಿಗೆ ಪ್ರಸಕ್ತ ಕಲಿಕೆಯನ್ನು ಸಂಬಂಧೀಕರಿಸಿಕೊಳ್ಳಲು ಸಾಧ್ಯವಾಗಬೇಕು. ಇದರಿಂದ ವಿದ್ಯಾರ್ಥಿಗಳು ಪರಿಕಲ್ಪನೆ, ಪ್ರಕ್ರಿಯೆ ಹಾಗು ಕಲಿಯಬೇಕಾದ ಕೌಶಲಗಳಲ್ಲಿ ಮಾನಸಿಕವಾಗಿ ತೊಡಗಿಕೊಳ್ಳಲು ಸಾಧ್ಯವಾಗುತ್ತದೆ.
- **ಪರಿಶೋಧಿಸುವುದು**: ಇಲ್ಲಿ ಕಲಿಕಾದಾರರಿಗೆ ಅವರ ಪರಿಸರವನ್ನು ಪರಿಶೋಧಿಸಲು, ಕಲಿಕೆಯ ವಿಷಯಕ್ಕೆ ಪ್ರಸ್ತುತವೆಂದು ಅವರು ಯೋಚಿಸುವ, ಮಾಹಿತಿಯನ್ನು ಸಂಗ್ರಹಿಸಿ ಸಂಘಟಿಸಿಕೊಳ್ಳಲು ಅವಕಾಶ ಸಿಗಬೇಕು. ಈ ಪ್ರಕ್ರಿಯೆ ಅವರ ಪರಿಸರವನ್ನು ಕ್ರಿಯಾಶೀಲರಾಗಿ ಪರಿಶೋಧಿಸಲು, ಸ್ವತ: ಚಟುವಟಿಕೆಗಳಲ್ಲಿ ತೊಡಗಿಕೊಂಡು ಕಲಿಯಬೇಕಾದ ವಿಷಯಗಳ ಬಗ್ಗೆ ತಮ್ಮದೇ ವಿಚಾರಗಳನ್ನು ಹೊಂದಲು ಕಲಿಕಾದಾರರನ್ನು ಸಮರ್ಥರನ್ನಾಗಿಸಬೇಕು.
- **ವಿವರಿಸುವುದು:** ಕಲಿಕಾದಾರರ ಅರ್ಥೈಸಿಕೊಳ್ಳುವಿಕೆಯನ್ನು ಹೊರತರಲು ಅಥವಾ ಅವರ ಕೌಶಲಗಳನ್ನು ಪ್ರದರ್ಶಿಸಲು ಅಥವಾ ಅವರು ಪರಿಶೋಧನೆಯ ಮೂಲಕ ಕಲಿತ ವಿಷಯಗಳನ್ನು ಪ್ರಸ್ತುತ ಪಡಿಸಲು ಇರುವ ಅವಕಾಶ. ಇದನ್ನೇ ಶಿಕ್ಷಕರು ಹೊಸ ಪದಗಳನ್ನು ಪರಿಚಯಿಸಲು, ವ್ಯಾಖ್ಯೆಗಳನ್ನು ಪರಿಚಯಿಸಲು, ಪರಿಕಲ್ಪನೆಗಳ, ಪ್ರಕ್ರಿಯೆಗಳ ಹಾಗೂ ಕೌಶಲಗಳ ಕುರಿತಾದ ಹೆಚ್ಚಿನ ವಿವರಣೆ ನೀಡಲು ಬಳಸುತ್ತಾರೆ.
- **ವಿಸ್ತರಿಸುವುದು**: ಹೊಸ ಪರಿಕಲ್ಪನೆ, ಕೌಶಲ ಅಥವಾ ಪ್ರಕ್ರಿಯೆಗಳನ್ನು ಕಲಿತ ಬಳಿಕ ವಿದ್ಯಾರ್ಥಿಗಳು ಅವನ್ನು ವಿಸ್ತರಿಸಿಕೊಳ್ಳಲು, ಅನ್ವಯಿಸಿಕೊಳ್ಳಲು ಹಾಗೂ ಆ ಮೂಲಕ ಅಗತ್ಯ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶವಿರಬೇಕು. ಕಲಿತ ಪರಿಕಲ್ಪನೆಗಳನ್ನು ಇನ್ನೂ ಹೆಚ್ಚು ವಿವರವಾಗಿ ಹಾಗೂ ಆಳವಾಗಿ ಅರ್ಥೈಸಿಕೊಳ್ಳಲು ಮತ್ತು ಕೌಶಲಗಳಲ್ಲಿ ಹೆಚ್ಚು ಪರಿಣಿತಿ ಪಡೆಯಲು ತರಗತಿ ಅವರನ್ನು ಸಮರ್ಥರನ್ನಾಗಿಸಬೇಕು.
- **ಮೌಲ್ಯಮಾಪನ ಮಾಡುವುದು:**ಕಲಿಕಾದಾರರು ತಮ್ಮ ಅರ್ಥೈಸಿಕೊಳ್ಳುವಿಕೆ ಹಾಗೂ ಸಾಮರ್ಥ್ಯಗಳನ್ನು ಪಡೆದುಕೊಳ್ಳುತ್ತಾರೆ. ಅಂತೆಯೇ ಶಿಕ್ಷಕರು ಮಕ್ಕಳ ಅರ್ಥೈಸಿಕೊಳ್ಳುವಿಕೆ ಹಾಗೂ ಕೌಶಲಗಳನ್ನು ಮೌಲ್ಯಮಾಪನ ಮಾಡುತ್ತಾರೆ.

### ರಚನಾವಾದಿ ತರಗತಿ ಪ್ರಕಿಯೆಯ ಘಟಕ ಯೋಜನೆ/ಪಾಠ ಟಿಪ್ಪಣಿ ತಯಾರಿಸುವ ಮುನ್ನ

**ಈ ಟಿಪ್ಪಣಿಯ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಅತೀ ಮುಖ್ಯ ಅಂಶಗಳನ್ನು ಈ ಕೆಳಗೆ ನೀಡಿದೆ.**

- ಘಟಕ ಯೋಜನೆಯನ್ನು ತಯಾರಿಸುವಾಗ ಕೆಲವೊಂದು ಸಾಮಾನ್ಯ ಬೋಧನೆ ಹಾಗೂ ಕಲಿಕೆಯ ಉದ್ದೇಶಗಳ ಚೌಕಟ್ಟನ್ನು ಇರಿಸಿಕೊಳ್ಳಬೇಕು. ಪರಿಕಲ್ಪನೆ, ತತ್ವಗಳು, ನಿಯಮಗಳು ಹಾಗೂ ಕೌಶಲಗಳನ್ನೊಳಗೊಂಡಂತೆ ಆ ಘಟಕಕ್ಕೆ ಪ್ರಸ್ತುತವಾದ ಸಾಮರ್ಥ್ಯಗಳು ಯಾವುವು ಎನ್ನುವುದನ್ನು ತಿಳಿದಿರಬೇಕು. ಸರಿಯಾದ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಮರ್ಥರಾಗುವ ವಿಧಾನಗಳನ್ನು ಪಾಠ ಯೋಜನೆಯಲ್ಲಿ ಅಡಕಗೊಳಿಸಿರಬೇಕು. ಈ ಪಾಠ ಯೋಜನೆಗಳು ಸಹಕಾರದ ಹಾಗೂ ಸಹಭಾಗಿತ್ವದ ಕಲಿಕೆಗೆ ಅನುವು ಮಾಡಿಕೊಡಬೇಕು. ಕಲಿಕೆಯು ದೈನಂದಿನ ಜೀವನಕ್ಕೆ ಹಾಗೂ ಮಗುವಿನ ದಿನನಿತ್ಯದ ವಾಸ್ತವಗಳಿಗೆ ಸಂಬಂಧಿಸಿರುವುದನ್ನು

ಯೋಜನೆಯು ಖಚಿತಪಡಿಸಿಕೊಳ್ಳಬೇಕು. ಹಾಗೂ ತಾವು ಏನೋ ಹೊಸತನ್ನು ಕಲಿತ ಬಗ್ಗೆ ವಿದ್ಯಾರ್ಥಿಗಳು ಖುಷಿಯಿಂದ ಉದ್ದೀಪನಗೊಳ್ಳುವಂತೆ ಪಾಠಗಳನ್ನು ಅನುಕೂಲಿಸಬೇಕು.

- ಕಲಿಕೆ ಎಂಬುದು ಏಕ ರೇಖಾತ್ಮಕವಾಗಿ (Linear Order) ಸರಳ ರೇಖೆಯಂತೆ ಚಲಿಸುವುದಿಲ್ಲ. 5E ಕ್ರಿಯೆಗಳು ಕಲಿಕಾ ಪ್ರಕ್ರಿಯೆಯ ಭಾಗಗಳೇ ಹೊರತು ಹಂತಗಳಲ್ಲ. ಒಂದಾದ ಮೇಲೆ ಒಂದು ಎಂದು ಭಾವಿಸುವುದಕ್ಕಿಂತ ಪ್ರಕ್ರಿಯೆಯಾಗಿ ಗಮನಿಸುವ.
- ಈ ಪಾಠ ಟಿಪ್ಪಣಿಯನ್ನು ಘಟಕ ಯೋಜನೆ ಹೊರತು ಪ್ರತಿ ಪಾಠಕ್ಕೂ ಬರೆಯಲು ಸಾಧ್ಯವಿಲ್ಲ.
- ಶಿಕ್ಷಕರು ತಮಗಿರುವ ಪಾಠವನ್ನು ಸಾಕಷ್ಟು ಭಾರಿ ಓದಿಕೊಂಡು ಅದರ ಕೇಂದ್ರ ತಿರುಳು, ಸಾಮಾನ್ಯ ಗುರಿಯನ್ನು ಅರ್ಥೈಸಿಕೊಂಡು ನಂತರ ಘಟಕ ಟಿಪ್ಪಣಿ/ಯೋಜನೆ ಮಾಡಬೇಕಾಗುತ್ತದೆ.
- ವರ್ಷದ ಪಾಠಗಳು, ಇತರೆ ವಿಷಯದಲ್ಲಿ ಇರುವ ಪಾಠಗಳು ಮತ್ತು ತನ್ನ ವಿಷಯದ ಪಾಠಗಳಿಗೆ ಇರುವ ಸಂಬಂಧ ಗ್ರಹಿಸಿರಬೇಕಾಗುತ್ತದೆ. ಮಕ್ಕಳು ಮಾಡಬಹುದಾದ ಚರ್ಚೆಯನ್ನೂ ಊಹಿಸಿ ಮನದಲ್ಲಿ ಪರಿಕಲ್ಪನಾ ನಕ್ಷೆ ರಚಿಸಿಕೊಂಡಿರುವುದು ಅತ್ಯಂತ ಪರಿಣಾಮಕಾರಿ ಮತ್ತು ಅಪೇಕ್ಷಣೀಯ.

**********************************************************************

# ಅಧ್ಯಾಯ: 6
# ಶಿಕ್ಷಕರು

**"ಮಾನವೀಯ ಮೌಲ್ಯಗಳುಳ್ಳ ಸ್ವಾವಲೋಕನದ ಶಿಕ್ಷಕರು ಭಾರತದ ಅಗತ್ಯ." ರಾ.ಪ.ಚೌ.ಶಿ.ನೀತಿ–2009**

ಒಂದು ಕೊಳಚೆ ಪ್ರದೇಶದ ಅಧ್ಯಯನ ಮಾಡಿದ ಸಮಾಜಶಾಸ್ತ್ರದ ವಿದ್ಯಾರ್ಥಿಗಳು ಇನ್ನೂರು ಮಂದಿ ಎಳೆಯರನ್ನು ಭೇಟಿ ಮಾಡಿ ಮಾಹಿತಿಯನ್ನು ಕಲೆಹಾಕಿದರು. ಅವರ ಮಾಹಿತಿಯ ಪ್ರಕಾರ "ಇಲ್ಲಿಯ ವಾತಾವರಣ ಅಸಹ್ಯವಾಗಿದೆ. ಸುಯೋಗ್ಯ ಪ್ರಜೆಗಳಾಗಿ ಬದುಕಲು ಬೇಕಾಗುವ ಯಾವ ಅಂಶವನ್ನೂ ಕಲಿಯುವಂತಿಲ್ಲ. ಇವರಲ್ಲಿ ಶೇಕಡಾ 90 ಮಂದಿಯಾದರೂ ಮುಂದೆ ಜೈಲು ವಾಸ ಮಾಡುತ್ತಾರೆ." ಎಂಬ ಭವಿಷ್ಯ ನುಡಿದ್ದರು.

ಇಪ್ಪತ್ತೈದು ವರ್ಷದ ನಂತರ ಅದೇ ವಿದ್ಯಾರ್ಥಿಗಳ್ನು ಸಮೀಕ್ಷೆ ಮಾಡಿದಾಗ ಅವರೆಲ್ಲರೂ ಸಭ್ಯ ನಾಗರಿಕರಾಗಿದ್ದರು. ಇದನ್ನು ಕಂಡು ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಆಶ್ಚರ್ಯವಾಯಿತು. ಅವರು ಶಿಕ್ಷಕರನ್ನು ಭೇಟಿ ಮಾಡಿ "ಇವರೆಲ್ಲಾ ಸಭ್ಯ ನಾಗರಿಕರಾಗಲು ಯಾವ ಉಪಾಯ ಹೂಡಿದಿರಿ?" ಎಂದು ಪ್ರಶ್ನಿಸಿದಾಗ "ಅಂಥ ಉಪಾಯ ಯಾವುದೂ ನನಗೆ ತಿಳಿದಿಲ್ಲ. ನಾನು ಶಾಲೆಯಲ್ಲಿ ಇದ್ದಷ್ಟು ಕಾಲ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪ್ರೀತ್ಯಾದರಗಳಿಂದ ನೋಡಿಕೊಂಡಿದ್ದೆ" ಎಂದರು.

## ಶಿಕ್ಷಕಿ ಮಾಡಿದ ಪ್ರೇರಣೆ ಏನು?

ಅವರು ಪ್ರತಿಯೊಬ್ಬ ವಿದ್ಯಾರ್ಥಿಗೆ ಸಾಕಷ್ಟು ಗಮನವಿತ್ತು ಅವರ ಅಭಿರುಚಿ, ಸಂಸ್ಕಾರ, ಸಾಮರ್ಥ್ಯ, ದೌರ್ಬಲ್ಯಗಳನ್ನು ಪರಿಶೀಲಿಸಿ ಅಭ್ಯುದಯಕ್ಕೇನು ಮಾಡಬೇಕೆಂದು ಯೋಚಿಸಿದ್ದರು. ಅವರ ನೋವು–ನಲಿವುಗಳನ್ನು ತಿಳಿದುಕೊಂಡು ಅಭಿವೃದ್ಧಿಯ ಅವಶ್ಯಕತೆಗಳನ್ನು ಪೂರೈಸಲು ಪ್ರಯತ್ನಿಸುತ್ತಿದ್ದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಬಾಲ ಸಹಜವಾಗಿ ಮಾಡುವ ತುಂಟಾಟಗಳಿಗೆ ನೊಂದುಕೊಳ್ಳದೆ ಕ್ಷಮಿಸುತ್ತಿದ್ದರು. ಅವರ ತಪ್ಪಿಗೆ ಅಗತ್ಯವಾದ ಶಿಕ್ಷೆ ನೀಡುತ್ತಿದ್ದರು. ತಪ್ಪು ಮಾಡಿದಾಗ ಶಿಕ್ಷೆ ನೀಡಿದಂತೆ ಮಕ್ಕಳ ಗುಣ ವೈಶಿಷ್ಟ್ಯಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಪ್ರಶಂಸಿಸುತ್ತಿದ್ದರು.

"ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪ್ರೀತ್ಯಾದರಗಳಿಂದ ನೋಡಿದ್ದರು" ಎಂಬ ಸಾಮಾನ್ಯ ವಾಕ್ಯದ ಹಿಂದೆ ಎಷ್ಟೋಂದು ತ್ಯಾಗ ಮತ್ತು ಸೇವಾ ಮನೋಭಾವವಿದೆ ಎಂಬುದು ನಮಗೆ ಸ್ಪಷ್ಟವಾಗಿರಬೇಕು.

## ಆದರ್ಶ ಮಾಸ್ತರರಿಗೊಂದು ಅಕ್ಕರೆಯ ಗುಡಿ

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಅಥರ್ಗಾದಲ್ಲಿ ಒಂದು ದೇಗುಲವಿದೆ. ಇದು ಒಬ್ಬ ಕನ್ನಡ ಶಾಲಾ ಮಾಸ್ತರರ ಗುಡಿ! ಈ ಊರಿನ ಸಕಲರೂ ತಮ್ಮ ದಿನನಿತ್ಯದ ಚಟುವಟಿಕೆ ಆರಂಭಿಸುವುದು ಈ ಶಿಕ್ಷಕ ಮೂರ್ತಿಯ ದರ್ಶನದ ನಂತರವೇ! ಹೆಂಗಳೆಯರೆಲ್ಲ ಕಾಯಿ ಕರ್ಪೂರದೊಂದಿಗೆ ಮಾಸ್ತರರ ಗುಡಿಗೆ ಹೋಗಿ ತಮ್ಮ ಮಕ್ಕಳು ಶಿಕ್ಷಣದ ಬಗ್ಗೆ ಈ ಮಾಸ್ತರಜ್ಜನ ಹತ್ತಿರ ಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ಪ್ರದಕ್ಷಿಣೆ ಹಾಕುತ್ತಾರೆ. ಉರುಳು ಸೇವೆ ಮಾಡುತ್ತಾರೆ.

ಬಿಜಾಪುರದ ಇಂಡಿ ಮಾರ್ಗ ಮಧ್ಯದಲ್ಲಿ ಬರುವ ಅಥರ್ಗಾ ಲಿಂಬೆ ಕೃಷಿಗೆ ರಾಜ್ಯದಲ್ಲಿ ಖ್ಯಾತಿ. ಹಿಂದೆ ಈ ಊರುಕೊಂಪೆಯ ಗೂಡು. ಅನಕ್ಷರತೆಯ ತವರು. ಆದರೆ ಅಲ್ಲಿಗೆ ಶಾಲಾ ಶಿಕ್ಷಕರಾಗಿ ಬಂದ ರೇವಣ್ಣ ಸಿದ್ದಪ್ಪ ಇಂಥ ಊರಿನ ಜಾತಕವನ್ನೇ ಬದಲಿಸಿಬಿಟ್ಟರು.

ರೇವಣ್ಣ ಸಿದ್ದಪ್ಪನವರು ಧಾರವಾಡದ ಶಿಕ್ಷಕ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದು ಶಿಕ್ಷಕರಾಗಿ ಉಕ್ಕಲಿಯಲ್ಲಿ ಸೇವೆ ಸಲ್ಲಿಸಿ ಮುಖ್ಯೋಪಾಧ್ಯಾಯರಾಗಿ ಬಡ್ತಿ ಪಡೆದು 1909ರಲ್ಲಿ ಅಥರ್ಗಾಕ್ಕೆ ಬಂದರು. ನಂತರ 25 ವರ್ಷಗಳ ಸೇವೆ ಇಲ್ಲಿಯೇ ಆಯಿತು. "ಈ ಅಪ್ಪ

ಬರೀ ಮಾಸ್ತರ ಆಗಿದ್ದಿಲ್ರೀ, ಊರಿನ ದೇವರು ಆಗಿದ್ರು, ಜನರನ್ನು ತಿದ್ದಿದ್ರು, ದುಡ್ಯಾಕ ಹಚ್ಚಿದ್ರು, ಕತ್ತಲಾದ ಮನೆಗಳಲ್ಲಿ ದೀಪ ಹಚ್ಚಿದ್ರು" ಎನ್ನುತ್ತಾರೆ ಸ್ಥಳೀಕ 85ರ ವೃದ್ಧ ಧರಿಯಪ್ಪ ಬಾಲಿಯವರು.

ಶಾಲಾ ಅವಧಿಯಲ್ಲಿ ಶಿಕ್ಷಕರಾದರೆ ಶಾಲಾ ಅವಧಿಯ ನಂತರ ಅಪ್ಪಟ ಗ್ರಾಮ ಸುಧಾರಕ, ಯುವಕರಿಗೆ ಉದ್ಯೋಗ ಮಾರ್ಗದರ್ಶನ, ಕೃಷಿಯಲ್ಲಿ ಉತ್ತೇಜನ, ಮೂಢನಂಬಿಕೆ ವಿರುದ್ಧ ತಿಳುವಳಿಕೆ, ಗುಡಿ ಕೈಗಾರಿಕೆ ಜೊತೆಗೆ ಆಗಿನ ಸಮಯದಲ್ಲಿ ಮಹಿಳೆಯರಿಗೆ ಮರೀಚಿಕೆಯಾದ ಶಿಕ್ಷಣವನ್ನು ಸಮೀಪ ತರುವುದು, ಅನಕ್ಷರಸ್ಥರಿಗೆ ರಾತ್ರಿ ಶಾಲೆ ಹೀಗೆ ಅನೇಕ ಚಟುವಟಿಕೆಗಳಿಂದ ಸಮುದಾಯಕ್ಕೂ ಶಿಕ್ಷಕರಾದರು. ಪರಿಣಾಮವಾಗಿ ಪುರುಷರು ತಮ್ಮ ವ್ಯಸನಗಳಿಂದ ದೂರವಾಗಿ ಉದ್ಯೋಗ ಮಾರ್ಗ ಹಿಡಿದರೆ ಹಳ್ಳಿಯ ಗಂಡು, ಹೆಣ್ಣು ಮಕ್ಕಳು ಶಾಲೆಯ ಕಟ್ಟೆ ಏರತೊಡಗಿದರು.

ಇಷ್ಟೆಲ್ಲ ಬದಲಾವಣೆ ಹತ್ತಾರು ವರ್ಷಗಳಲ್ಲಿ ಮಾಡಿ ಗ್ರಾಮವನ್ನು ಆದರ್ಶ ಗ್ರಾಮವನ್ನಾಗಿಸಿದ ರೇವಣ್ಣ ಮಾಸ್ತರ ಜನಾನುರಾಗಿಯಾದರು. ಅಲ್ಲಿಯವರೆಗೆ ಸರಪಂಚರ ಮುಂದೆ 'ಬಸುರು ಕಟ್ಟೆ' ಏರುತ್ತಿದ್ದ ಗ್ರಾಮದ ವ್ಯಾಜ್ಯಗಳೆಲ್ಲ ರಾತ್ರಿ ಶಾಲೆ ಕಟ್ಟೆ ಏರತೊಡಗಿದವು. ಮಾಸ್ತರ ನ್ಯಾಯಾಧೀಶರೂ ಆದರು.

ಉದ್ಯೋಗದಲ್ಲಿರುವಾಗಲೇ ನಿಧನರಾದ ಆ ಆದರ್ಶ ಶಿಕ್ಷಕನ ದೇಹವನ್ನು ಊರ ಮಧ್ಯದಲ್ಲೇ ಮನ್ನಿಸಿ ಅಂದದ ಗುಡಿ ಕಟ್ಟಿದರು. ಆಳೆತ್ತರದ ಮಾಸ್ತರರ ಬೆಳ್ಳಿ ಪ್ರತಿಮೆ ಮಾಡಿಸಿ ನಿತ್ಯ ಎರಡು ಬಾರಿ ಪೂಜೆ, ಅದಕ್ಕೊಬ್ಬ ಅರ್ಚಕನನ್ನೂ ನೇಮಿಸಿದ್ದಾರೆ. ಅಲ್ಲದೇ ಈ ಶಿಕ್ಷಕರಿಗಾಗಿ ಪ್ರತಿ ವರ್ಷ ಶಿವರಾತ್ರಿಯಂದು ಭಾರಿ ಜಾತ್ರೆ ನಡೆಸುತ್ತಾರೆ. ಮಾಸ್ತರರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡಿ ಇಡೀ ರಾತ್ರಿ ಭಜನೆ–ಕೀರ್ತನೆ ನಡೆಯುತ್ತದೆ. "ಮಾಸ್ತರ ಜಾತ್ರಿ ಅಂತೀವ್ರಿ, ಆದ್ರ ಅವ್ರನ ನಾವು ದೇವರಂತ ನಂಬಿವ್ರಿ" ಎನುತ್ತಾರೆ ಶಿಕ್ಷಕ ಮಲ್ಲಪ್ಪ. ಉನ್ನತ ಹುದ್ದೆಗಳಲ್ಲಿರುವ ಅವರ ವಿದ್ಯಾರ್ಥಿಗಳು ಶ್ರೀ ರೇವಣಸಿದ್ದೇಶ್ವರ ಗ್ರಂಥಾಲಯವನ್ನು ತೆರೆದಿದ್ದಾರೆ.

ನಮ್ಮ ವಿದ್ಯಾರ್ಥಿ ಜೀವನದಲ್ಲಿಯೂ ಹಲವಾರು ಶಿಕ್ಷಕರಿಂದ ಪಾಠ ಕೇಳಿದ್ದೇವೆ. ಎಲ್ಲರನ್ನೂ ನಾವು ನೆನಪಿಸಿಕೊಳ್ಳದಿರಲು ಕಾರಣವೇನು? ಆದರೆ ಕೆಲವರನ್ನು ನಮ್ಮ ಜೀವನದಲ್ಲಿ ನಾವು ಪ್ರಭಾವಿತರಾದ ಶಿಕ್ಷಕರ ಗುಣ ನಡೆತೆಗಳೇನು? ಅವರ ಯಾವ ಗುಣ ನಮಗೆ ಇಷ್ಟವಾಗಿದ್ದು? ಬೇರೆ ಶಿಕ್ಷಕರನ್ನು ನಾವು ಏಕೆ ನೆನಪಿಸಿಕೊಳ್ಳುತ್ತಿಲ್ಲ? ನಾವು ಪ್ರಭಾವಿತ ಶಿಕ್ಷಕರಾಗಬೇಕಾದರೆ ಏನೆಲ್ಲ ಗುಣಗಳನ್ನು ಬೆಳೆಸಿಕೊಳ್ಳಬೇಕು? ಎಂಬ ಪ್ರಶ್ನೆಗಳಿಗೆ ಪ್ರತಿ ಶಿಕ್ಷಕರು ಉತ್ತರ ಕಂಡುಕೊಂಡರೆ ಮೇಲ್ಕಂಡ ಶಿಕ್ಷರಂತಾಗಲು ಪ್ರೇರಣೆ ಖಂಡಿತಾ ಸಿಗುತ್ತದೆ.

ಶಿಕ್ಷಕರು ತಮ್ಮ ಕೆಲಸಗಳನ್ನು ಕೇವಲ ಒಂದು ಉದ್ಯೋಗವೆಂದು ಪರಿಗಣಿಸದೆ ಕರ್ತವ್ಯವೆಂದು ಭಾವಿಸಿ ವೃತ್ತಿಪರರಾಗ ಬೇಕಾಗುತ್ತದೆ. ಮಗುವಿನ, ಕುಟುಂಬದ, ಸಮಾಜದ, ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಗುರುತರವಾದುದು.

### ಶಿಕ್ಷಕರ ಗುಣಲಕ್ಷಣಗಳು

ಉತ್ತಮ ಶಿಕ್ಷಕರಿಂದ ಉತ್ತಮ ವಿದ್ಯಾರ್ಥಿಗಳು ಹಾಗೂ ಉತ್ತಮ ವಿದ್ಯಾರ್ಥಿಗಳಿಂದ ಕಂಪನಶೀಲ ಸಮಾಜ (Vibrant Society) ನಿರ್ಮಾಣವಾಗುತ್ತದೆ.

**ಕಲಿಸುವಿಕೆಯಲ್ಲಿ ಬದ್ಧತೆ:** ಕಲಿಸುವಿಕೆ ಒಂದು ಕಲೆ. ಈ ಕಲೆಯಲ್ಲಿ ಶಿಕ್ಷಕರು ತಮ್ಮನ್ನು ಪರಿಪೂರ್ಣವಾಗಿ ತೊಡಗಿಸಿಕೊಳ್ಳುವುದರ ಜೊತೆಗೆ ಮಕ್ಕಳನ್ನು ಕಲಿಕೆಯಲ್ಲಿ ಉತ್ಸಾಹದಿಂದ ಭಾಗವಹಿಸುವಂತೆ ಪ್ರೇರೇಪಿಸುತ್ತಾರೆ.

### ವಿಶಾಲ ಮನೋಭಾವ

ಜಾತಿ, ಮತ, ಧರ್ಮ, ವರ್ಣ, ಶ್ರೀಮಂತ, ಬಡವ, ಲಿಂಗ ಮುಂತಾದವುಗಳ ಆಧಾರದ ಮೇಲೆ ಭೇದ ಭಾವ ಮಾಡದೆ ಮಾನವತೆಯೆಡೆಗೆ ಕರೆದೊಯ್ಯುವ ವಿಶಾಲ ಮನೋಭಾವವಿಟ್ಟು ಕೊಂಡು ಮಕ್ಕಳ ಅಭಿವೃದ್ಧಿಯ ಕಡೆಗೆ ಕಾಳಜಿವಹಿಸಬೇಕು.

### ವೃತ್ತಿಯಲ್ಲಿ ಬದ್ಧತೆ

ಶಿಕ್ಷಕರಿಗೆ ವೃತ್ತಿಯಲ್ಲಿ ನಿಷ್ಠೆ, ಶ್ರದ್ದೆ ಇರಬೇಕು. ಪ್ರಾಮಾಣಿಕವಾಗಿ ಸೇವೆ ಮಾಡುವ ಮನೋಭಾವ ಹೊಂದಿರಬೇಕು.

ಶಿ – ಶಿಸ್ತು
ಕ್ಷ – ಕ್ಷಮಾಗುಣ
ಕ – ಕರುಣೆ

T – Tolerance
E – Enthusiastic
A – Active
C – Creative
H – Honest
E – Efficient
R – Resourceful

### ಕ್ರಿಯಾಶೀಲತೆ

ಹಲವು ಪರಿಕಲ್ಪನೆಗಳಿಗೆ/ವಿಷಯಗಳಿಗೆ ಲಭ್ಯವಿರುವ ಹಲವಾರು ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸೃಜನಶೀಲತೆಯಿಂದ ಅನೇಕ ಚಟುವಟಿಕೆಗಳನ್ನು ರೂಪಿಸಬೇಕು. ಅದರಂತೆ ಶೈಕ್ಷಣಿಕ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿಯೂ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

### ತಾಳ್ಮೆ

ಜೀವನದಲ್ಲಿ ಸರ್ವರಿಗೂ ತಾಳ್ಮೆ ಎನ್ನುವುದು ಬಹು ಮುಖ್ಯ. ಅದರಲ್ಲಿಯೂ ಶಿಕ್ಷಕರಾದವರು ಬಹುವಿಧದ ಸಾಮಾಜಿಕ ಪರಿಸರ, ವೈಯಕ್ತಿಕ ಭಿನ್ನತೆ ಇರುವ ಮಕ್ಕಳೊಂದಿಗೆ ಬೆರೆತು, ಅರ್ಥ ಮಾಡಿಕೊಂಡು ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಶಿಕ್ಷಕರು ವೃತ್ತಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ಧೃತಿಗೆಡದೆ ತಾಳ್ಮೆಯಿಂದ ಪರಿಹರಿಸಿಕೊಳ್ಳುವ ಮತ್ತು ಇತರರೊಡನೆ ತಾಳ್ಮೆಯಿಂದ ವರ್ತಿಸುವ ಗುಣ ಹೊಂದಿರಬೇಕು.

**ಉತ್ತಮ ವ್ಯಕ್ತಿತ್ವ**

ಶಿಕ್ಷಣವು ಮಗುವಿನಲ್ಲಿ ಸರ್ವತೋಮುಖ ಬೆಳವಣಿಗೆಯನ್ನುಂಟು ಮಾಡಬೇಕು ಎಂಬುದು ನಿರೀಕ್ಷೆಯಾಗಿದೆ. ಈ ನಿರೀಕ್ಷೆಗಳನ್ನು ನಾವು ಸಾಕಾರಗೊಳಿಸಬೇಕಾದರೆ ಶಿಕ್ಷಕರಾದವರು ಮಕ್ಕಳಿಗೆ ಮಾದರಿಯಾಗುವ ನಿಟ್ಟಿನಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಅತ್ಯವಶ್ಯಕ.

**ಮಾನವೀಯ ಸಂಬಂಧ**

ಉತ್ತಮ ಸಮಾಜ ನಿರ್ಮಾಣವಾಗಲು ಮಾನವೀಯ ಸಂಬಂಧ ಬಹು ಮುಖ್ಯ. ಒಂದು ತರಗತಿ ಎಂದರೆ ಒಂದು ಭವಿಷ್ಯತ್ತಿನ ಸಮಾಜದವಿದ್ದಂತೆ. ಆ ತರಗತಿಯಲ್ಲಿ ಶಿಕ್ಷಕರು ಉತ್ತಮ ಬಾಂಧವ್ಯ, ವಿಶ್ವಾಸ, ಪ್ರೀತಿ ಹೊಂದಾಣಿಕೆಗಳನ್ನು ಹೊಂದಿರುವುದೇ ಮಾನವೀಯ ಸಂಬಂಧವಾಗಿದೆ.

ಒಟ್ಟಿನಲ್ಲಿ ಶಿಕ್ಷಕರ ಗುಣಲಕ್ಷಣಗಳನ್ನು ಒಂದು ಚೌಕಟ್ಟಿನಲ್ಲಿ ಬಂಧಿಸಲು ಕಷ್ಟಸಾಧ್ಯ. ಬದಲಾವಣೆಗೆ ತಕ್ಕಂತೆ ತಾವೂ ಬದಲಾಗಿ ಶಿಕ್ಷಕ ವೃತ್ತಿ ಘನತೆಯನ್ನು ಕಾಪಾಡಬೇಕಾಗಿದೆ.

**ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿ**

ಒಬ್ಬ ಇಂಜಿನಿಯರ್ ತಪ್ಪು ಮಾಡಿದರೆ ಒಂದು ಯೋಜನೆ ಹಾಳಾಗಬಹುದು, ಒಬ್ಬ ವೈದ್ಯ ತಪ್ಪು ಮಾಡಿದರೆ ಒಬ್ಬ ರೋಗಿಗೆ ತೊಂದರೆಯಾಗಬಹುದು, ಆದರೆ ಒಬ್ಬ ಶಿಕ್ಷಕ ತಪ್ಪು ಮಾಡಿದರೆ ಇಡೀ ಸಮಾಜಕ್ಕೆ ತೊಂದರೆಯಾಗುತ್ತದೆ. ಸುಸಂಸ್ಕೃತ ಸಮಾಜ ನಿರ್ಮಾಣ ಮಾಡುವ ಮಹತ್ವದ ಹೊಣೆ ಹೊತ್ತ ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿಗಳು ಇಂತಿವೆ.

* ಮಾದರಿ ಶಾಲೆಯ ಕಾಣ್ಕೆ ಹೊಂದಿ ಅದರ ಸಾಕಾರಕ್ಕೆ ಯೋಜನೆಯನ್ನು ರೂಪಿಸಿಕೊಳ್ಳಬೇಕು.
* ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ಸಹಕರಿಸಬೇಕು.
* ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.
* ವಿಷಯವಾರು ವಾರ್ಷಿಕ ಯೋಜನೆ, ಪ್ರಗತಿ ಪತ್ರ ಹಾಗೂ ಕ್ರೋಢೀಕೃತ ಂಕವಹಿ ಮುಂತಾದವುಗಳನ್ನು ಕಾಲಕಾಲಕ್ಕೆ ಸಲ್ಲಿಸಿ ಮುಖ್ಯ ಶಿಕ್ಷಕರ ಅನುಮೋದನೆ ಪಡೆಯಬೇಕು.
* ಅನುಕೂಲಿಸುವ ವಿಷಯಗಳ ಪ್ರಭುತ್ವ ಹೊಂದಿರಬೇಕು.
* ಮಕ್ಕಳ ಸಮಸ್ಯೆಯನ್ನು ಅರ್ಥೈಸಿಕೊಂಡು ಪರಿಹಾರಕ್ಕೆ ಸಹಾಯ ಮಾಡಬೇಕು.
* ಮಕ್ಕಳು ತಪ್ಪದೇ ಶಾಲೆಗೆ ಬರುವಂತೆ ಪ್ರೇರೇಪಿಸಬೇಕು.
* ಶೈಕ್ಷಣಿಕ ಸಮಸ್ಯೆಗಳನ್ನು ಇತರರೊಂದಿಗೆ ಮುಕ್ತವಾಗಿ ಚರ್ಚಿಸುವ, ಸ್ವೀಕರಿಸುವ, ಪರಿಹಾರ ಕಂಡುಕೊಳ್ಳುವ ಮನೋಭಾವ ಇರಬೇಕು.
* ಇಲಾಖೆ ಕಾಲಕಾಲಕ್ಕೆ ತರುವ ಯೋಜನೆಗಳನ್ನು ಅರ್ಥೈಸಿಕೊಂಡು ಅನುಷ್ಠಾನಗೊಳಿಸಲು ಪ್ರಯತ್ನಿಸಬೇಕು.
* ಶಿಕ್ಷಕರು ತಮ್ಮ ಶಾಲಾ ಮಕ್ಕಳ ಕೌಟುಂಬಿಕ, ಸಾಮಾಜಿಕ ಹಿನ್ನೆಲೆಗಳ ಸಮಗ್ರ ಚಿತ್ರಣ ಹೊಂದಿರಬೇಕು.
* ಶಾಲೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಸಮುದಾಯಗಳಿಂದ ಸಂಗ್ರಹಿಸುವ ಸಾಮರ್ಥ್ಯವಿರಬೇಕು.

**ಚಟುವಟಿಕೆ:** 1. ನಿಮಗೆ ಕಲಿಸಿದ ಶಿಕ್ಷಕರಲ್ಲಿದ್ದಂತಹ ಗುಣಗಳನ್ನು ಪಟ್ಟಿ ಮಾಡಿ.

**ಚಟುವಟಿಕೆ:** 2. ಪ್ರಸ್ತುತ ಸನ್ನಿವೇಶದಲ್ಲಿ ಶಿಕ್ಷಕರಲ್ಲಿರಬೇಕಾದ ಗುಣಲಕ್ಷಣಗಳನ್ನು ಪಟ್ಟಿ ಮಾಡಿ

## ಕಾಣ್ಕೆ–ದೂರದರ್ಶಿತ್ವ (VISION)

ಅರ್ಥಕೋಶಗಳ ಪ್ರಕಾರ

1. ಕರಾರುವಕ್ಕಾದ ಬೌದ್ಧಿಕ ಚಿತ್ರಣಗಳನ್ನು ರೂಪಿಸುವ/ದೃಷ್ಟಿಸುವ ಸಾಮರ್ಥ್ಯ.
2. ಯಾವುದೇ ಸಂಸ್ಥೆಯಲ್ಲಿ (ಶಾಲೆ, ಸಮಾಜ ಇತ್ಯಾದಿ) ಅನುಸರಿಸುತ್ತಿರುವ ಒಳಸುರಿ, ಪ್ರಕಿಯೆ, ಹೊರಸುರಿ ಇವುಗಳನ್ನು ಒಂದೇ ಚೌಕಟ್ಟಿನಲ್ಲಿ ನೋಡುವ, ಒಟ್ಟು ಚಿತ್ರಣವನ್ನು ರೂಪಿಸುವ/ದೃಷ್ಟಿಸುವ ಸಾಮರ್ಥ್ಯ.
3. ನಮ್ಮ ಸಾಮರ್ಥ್ಯಗಳ ಮತ್ತು ಪ್ರಯತ್ನಗಳ ಒಟ್ಟು ಅಪೇಕ್ಷಿತ ಸಾಧನೆಯ ಹಂತ.

**ಯಾವುದೇ ಶಾಲೆ/ಸಮುದಾಯ ತನ್ನ ಎಲ್ಲಾ ಸಾಮರ್ಥ್ಯಗಳನ್ನು ಯಶಸ್ವಿಯಾದಿ ಅನುಷ್ಠಾನಗೊಳಿಸಿದ ನಂತರ ಹೇಗೆ ಕಾಣಬಲ್ಲದು ಎಂಬುದರ ನಿಚ್ಚಳವಾದ, ನಿಖರವಾದ ವಿವರಣೆ. ನಿರ್ದಿಷ್ಟ ಭವಿಷ್ಯದಲ್ಲಿ ಒಂದು ಸಂಸ್ಥೆಯನ್ನು (ಶಾಲೆಯನ್ನು) ಆ ಸಮುದಾಯವು ಸೃಷ್ಟಿಸ ಬಯಸುವ/ನೋಡಬಯಸುವ ಚಿತ್ರಣ–ಯು.ಬಿ. ಎಕ್ಸಟೆನ್ಯನ್ (2005).**

ಈ ಕಥೆ ಓದಿ.

ಮಧ್ಯ ವಯಸ್ಸಿನ ಮೂವರು ಕುಶಲ ಕರ್ಮಿಗಳು ತಮ್ಮ ತಮ್ಮ ಕೆಲಸದಲ್ಲಿ ತಲ್ಲೀನರಾಗಿದ್ದರು. ಅಲ್ಲಿಗೆ ಬಂದ ಓರ್ವ ದಾರಿಹೋಕ ಅವರನ್ನು ಏನು ಮಾಡುತ್ತಿರುವಿರಿ ಎಂದು ಕೇಳಿದನು... ಮೊದಲನೇ ಕೆಲಸಗಾರ ತನ್ನ ಬೆವರನ್ನು ಒರೆಸುತ್ತಾ ನಾನು ಈ ಮರದ ದಿಮ್ಮಿಯನ್ನು ಒಡೆಯುತ್ತಿದ್ದೀನಿ ಕಾಣುವುದಿಲ್ಲವೇ ಎಚಿದು ಗೊಣಗಿದೆ... ಎರಡನೇ ಕೆಲಸಗಾರ ಅಷ್ಟೇನೂ ಒತ್ತಡವಿಲ್ಲದೆ ನಾನು ಒಚಿದು ದೋಣಿ ನಿರ್ಮಾಣ ಮಾಡುತ್ತಿದ್ದೇನೆ ಎಂದು ನಿಟ್ಟಿಸುರಿಟ್ಟನು... ಮೂರನೇ ಕೆಲಸಗಾರ ನಗುಮೊಗದಿಂದ ನಾನೊಂದು ಸುಂದರ ದೋಣಿಯನ್ನು ನಿರ್ಮಿಸುತ್ತಿದ್ದೀನಿ... ಆ ದೋಣಿ ಹಲವಾರು ವರ್ಷ ಮೀನುಗಾರರಿಗೆ ಮೀನು ಹಿಡಿಯಲು ಸಂಚರಿಸುವವರಿಗೆ ನದಿ ದಾಟಲು ಸಹಕಾರಿಯಾಗುತ್ತದೆ ಎಂದನು...

- ಮೂರನೇ ಕೆಲಸಗಾರ ತನ್ನ ಪರಿಶ್ರಮದ ಪ್ರಭಾವವನ್ನು ನೋಡಬಲ್ಲವನಾಗಿದ್ದ.
- ದೋಣಿ ನಿರ್ಮಿಸುವುದು ಶ್ರಮದಾಯಕ ಹಾಊ ಅನೇಕ ತಿಂಗಳ ಕೆಲಸವಾದರೂ ಆ ಕೆಲಸದ ಮೌಲ್ಯ ಅದರ ಉಪಯೋಗಗಳನ್ನು ಅದನ್ನು ನಿರ್ಮಿಸುವ ಮೊದಲೇ ಚಿತ್ರಿಸಿಕೊಳ್ಳುವುದು 'ಕೆಲಸಗಾರನ ಕಾಣ್ಕೆ' ಎನ್ನಬಹುದು...
- ಈ ಕಥೆಯು 'ಕಾಣ್ಕೆಯು' ಕಾರ್ಯರೂಪಕ್ಕೆ ಬಂದಾಗ ಅದರ ಪ್ರಭಾವವೇನು ಎಂಬುದನ್ನೂ ಸೂಚ್ಯವಾಗಿ ಬಿಂಬಿಸುತ್ತದೆ...

  ಮಾನವತೆಗೆ ಸಹಕಾರಿಯಲ್ಲದ ಕಾಣ್ಕೆ ಕಾಣ್ಕೆಯಾಗಬಹುದೇ?

  ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ<br>
  ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ।<br>
  ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಚಿದ<br>
  ಶಾಸ್ತ್ರಿತನದಿಂದಲ್ಲ– ಮಂಕುತಿಮ್ಮ॥

ಪುಸ್ತಕದಿಂದ ದೊರೆತ ಜ್ಞಾನವು ತಲೆಚುು ಮೇಲಿರುವ ಮಣಿಯಂತೆ ಆದರೆ ಮನಸ್ಸಿನಲ್ಲಿ ಬೆಳೆದ ಅರಿವು ಗಿಡದಲ್ಲಿ ಅರಳಿದ ಹೂವಿನಚಿತೆ. ಗಿಡದಲ್ಲಿ ಹೂ ಅರಳಬೇಕಾದರೆ ಅದು ಗಿಡದ ಸಾರ ಸರ್ವಸ್ವವನ್ನು ಹೀರಿ ಅರಳಿರುತ್ತದೆ. ಹಾಗೆಯೇ ಮನಸ್ಸಿನಲ್ಲಿ ಅರಿವು ಮೂಡಬೇಕಾದರೆ ಜೀವನದ ಅನುಭವ ಆಗಿ ಮನದಲ್ಲಿ ಅರಿವು ಮೂಡಿರುತ್ತದೆ. ವಸ್ತು ಸಾಕ್ಷಾತ್ಕಾರವಾಗುವುದು ಒಳಮುಖದ ಚಿಂತನೆಯಿಂದ ಹೊರತು ಪಾಂಡಿತ್ಯದಿಂದ ಅಲ್ಲ.

**ಸಂವಿಧಾನದ ಪ್ರಸ್ತಾವನೆ**

**We the people of India**

**Soveregin** (ಸಾರ್ವಭೌಮ) **democratic** (ಪ್ರಜಾಸತ್ತಾತ್ಮಕ), **Republic** (ಗಣತಂತ್ರ), **Liberty** (ಸ್ವಾತಂತ್ರ), **Equality** (ಸಮಾನತೆ), **Justice** (ನ್ಯಾಯಯುತ), **Fraternity** (ಭಾತೃತ್ವ), **Socialist** (ಸಾಮಾಜಿಕ), **Secular** (ಜಾತ್ಯಾತೀತ), ಇವುಗಳನ್ನು ನಾವು ಅರ್ಥೈಸಿಕೊಂಡಿರುವ ಆಳ... ಅಳವಡಿಸಿರುವ ವಿಸ್ತಾರ... ನಮ್ಮ ಶೈಕ್ಷಣಿಕ ಗುರಿಗಳನ್ನು ಮರು ವ್ಯಾಖ್ಯಾನ ಮಾಡಲು ಮಾನದಂಡಗಳಾಗಬಲ್ಲವು.

ನಮ್ಮ ಶೈಕ್ಷಣಿಕ ಗುರಿಗಳು ಸಂವಿಧಾನದ ಆಶಯವನ್ನು ಪ್ರತಿಧ್ವನಿಸುತ್ತವೆಯೇ?

ಈ ಸಾಲುಗಳನ್ನು ನಾವು ಹೇಗೆ ಅರ್ಥೈಸಿಕೊಂಡಿದ್ದೇವೆ?

- ಶಿಕ್ಷಕರ ವೃತ್ತಿಪದ ಅಭಿವೃದ್ಧಿಗೆ ಪೂರಕವಾದ ವ್ಯವಸ್ಥೆಗಳನ್ನು ಮತ್ತು ಅವಕಾಶಗಳನ್ನು ನಿರ್ಮಿಸುವುದು.
- ಸಂಶೋಧನೆ, ನಿಗಾವಣೆ ಮತ್ತು ಮೌಲ್ಯಮಾಪನಗಳ ಮೂಲಕ ಜಿಲ್ಲೆಯ ಶೈಕ್ಷಣೀಕ ಅಗತ್ಯಗಳ ಗುರಿ ಮುಟ್ಟುವುದು.
- ಪರಿಣಾಮಕಾರಿ ಯೋಜನೆ, ಮಾಪನ, ನಿರಂತರ ನಿಗಾವಣೆ, ಹಿಮ್ಮಾಹಿತಿಗಳ ಮೂಲಕ ಗುಣಮಟ್ಟ ಸುಧಾರಿಸುವಲ್ಲಿ ಎಲ್ಲಾ ಶಾಲೆಗಳಿಗೆ ಅಗತ್ಯ ಬೆಂಬಲ ವ್ಯವಸ್ಥೆ ನಿರ್ಮಿಸುವುದು.
- ಶಿಕ್ಷಕ–ಶಿಕ್ಷಕರ, ಶಿಕ್ಷಕರ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವೃತ್ತಿಪರತೆಯನ್ನು ಹೆಚ್ಚಿಸಲು ನವೀನ ವಿಧಾನಗಳ/ ತಂತ್ರಜ್ಞಾನಗಳ ಬಳೆ– ಇವುಗಳೆಚಿದರೆ
  - ಶಿಕ್ಷಕ–ಶಿಕ್ಷಣದ ವಿವಿಧ ಮಾದರಿಗಳನ್ನು ಸಮನ್ವಯಗೊಳಿಸುವುದು.
  - ಶಿಕ್ಷಕ–ಶಿಕ್ಷಕರ ವೃತ್ತಿಪರ ಜಾಲಗಳನ್ನು ಸಶಕ್ತಗೊಳಿಸುವುದು.
  - ಶಾಲಾ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.

ನಿಮ್ಮ ಕಾಣ್ಕೆ ಹೀಗಿರಲಿ...

- ✓ ಸಂಕ್ಷಿಪ್ತವಾಗಿರಲಿ ಮತ್ತು ನಿಮ್ಮ ಸಂಸ್ಥೆಗೆ ಒಂದು ನಿರ್ಧಿಷ್ಟ ಉದ್ದೇಶ ನೀಡುವಂತಿರಲಿ.
- ✓ ನಿಮ್ಮನ್ನು ಹಾಗೂ ನಿಮ್ಮ ಎಲ್ಲಾ ಸಹೋದ್ಯೋಗಿಗಳನ್ನು ನಿರಂತರವಾಗಿ ಪ್ರೇರೇಪಿಸುವಷ್ಟು ಸಶಕ್ತವಾಗಿರಲಿ.
- ✓ ನಿಮ್ಮ ಕಾರ್ಯಾಚರಣೆಗೆ ನಿರ್ಧಿಷ್ಟ ಮೈಲುಗಲ್ಲುಗಳನ್ನು ಸ್ಥಾಪಿಸುವಂತಿರಲಿ.
- ✓ ನಿಮ್ಮ ಎಲ್ಲಾ ಕ್ರಿಯೆಗಳನ್ನೂ, ಕಾರ್ಯತಂತ್ರಗಳನ್ನು ಏಕರೂಪವಾಗಿ ಬೆಸೆಯುಂತಿರಬೇಕು.

✓ ನಿಮ್ಮ ಎಲ್ಲಾ ಕಾರ್ಯಗಳು ನೀವು ಬದ್ಧರಾಗಿರುವ, ಸ್ಥಾಪಿಸಬಯಸುವ ಮೌಲ್ಯಗಳನ್ನು ಪ್ರತಿಬಿಂಬಿಸುವಂತಿರಲಿ.. ಪ್ರತಿಧ್ವನಿಸುವಂತಿರಲಿ..

**ಕಾಣ್ಕೆ ಮತ್ತು ಕಾರ್ಯತಂತ್ರ ಹೇಳಿಕೆಗಳಿಂದ ನಿಜಕ್ಕೂ ಪ್ರಯೋಜನವಿದೆಯೇ?**

✓ ಸಂಸ್ಥೆಗೆ, ಸಂಸ್ಥೆಯ ಕಾರ್ಯಕ್ಕೆ ವಿಶೇಷ ಮೆರುಗು, ನಿರ್ದಿಷ್ಟ ಉದ್ದೇಶವನ್ನು ನೀಡಲಬಲ್ಲುದು.

✓ ಸಂಸ್ಥೆಯ ಎಲ್ಲಾ ಭಾಗೀದಾರರನ್ನು ಒಳಗೊಳ್ಳಲು ಅವರಿಗೆ ಸಂಸ್ಥೆಯೊಂದಿಗೆ ಗುರ್ತಿಸಿಕೊಳ್ಳಲು ಸಹಕಾರಿ.

✓ ಕಾಣ್ಕೆ–ಸಂಸ್ಥೆಯ ಹೆಗ್ಗುರುತುಗಳು ಮತ್ತು ಪ್ರತಿಜ್ಞಾ ವಿಧಿಗಳೂ ಸಹ–ಇವು ಸಂಸ್ಥೆಯ ಧ್ಯೇಯವನ್ನು ಮುನ್ನಡೆಸಲು ಸಹಕಾರಿ.

✓ ಸಂಸ್ಥೆಯ ಘೋಷವಾಕ್ಯಗಳು ಎಲ್ಲಾ ಕಂಠಗಳ ಧ್ವನಿಯನ್ನು ಒಗ್ಗೂಡಿಸಬಲ್ಲವು.

✓ ಸಂಸ್ಥೆಯ ಅಸ್ತಿತ್ವಕ್ಕೆ ಸಮರ್ಥನೆ ನೀಡಬಲ್ಲ ಈ ವಾಕ್ಯಗಳು ಸಂಸ್ಥೆಯ ಸಂಸ್ಕೃತಿ, ವಾತಾವರಣವನ್ನು ಸೃಷ್ಟಿಸಲು ಸಹಕಾರಿ.

✓ ಧ್ಯೇಯವನ್ನು ಉದ್ದೇಶಗಳಾಗಿ, ಉದ್ದೇಶಗಳ ಸಾಧನೆಗಾಗಿ ಅಗತ್ಯವಿರುವ ಸಂಪನ್ಮೂಲ, ಅನುದಾರನ, ಸಮಯ, ಶ್ರಮದ ಅಗತ್ಯತೆಯನ್ನು ಮನಗಾಣಿಸಲು ಸಹಕಾರಿ.

**ಕಾಣ್ಕೆಯನ್ನು ಮೌಲ್ಯಗಳು ಮುನ್ನಡೆಸಬಲ್ಲವೆಂದು ಒಪ್ಪುತ್ತೀರಾ?**

| **ಕಾಣ್ಕೆ ಮತ್ತು ಮೌಲ್ಯ** | **ಕನಿಷ್ಟ ಮೌಲ್ಯ** | **ಉನ್ನತ ಮೌಲ್ಯ** |
|---|---|---|
| **ಕನಿಷ್ಟ ದೂರದೃಷ್ಟಿ** | ಹಿಂಬಾಲಕರು | ಸ್ಥಗಿತವಾರ |
| **ಉನ್ನತ ದೂರದೃಷ್ಟಿ** | ಮಹಾಚತುರರು ಅವನತಿಗೆ ಕಾರಣರಾಗುತ್ತಾರೆ | ಬದಲಾವಣೆಗಳನ್ನು ತರುವವರು ಮಹತ್ವವಾದ ವ್ಯತ್ಯಾಸಗಳನ್ನು ತರುತ್ತಾರೆ. |

*****************************************************************

# ಅಧ್ಯಾಯ 7
# ಶಿಕ್ಷಕರಿಗಿರುವ ಸೇವಾ ಸೌಲಭ್ಯಗಳು

ಶಿಕ್ಷಕರು ಸಮರ್ಥವಾಗಿ ಕಾರ್ಯ ನಿರ್ವಹಿಸಲು ಸರ್ಕಾರ ಅನೇಕ ರೀತಿಯ ಸೇವಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಅವು ಮುಂದಿನಂತಿವೆ:

* ಪ್ರತಿ ಒಂದು ವರ್ಷ ಅವಧಿಯ ತೃಪ್ತಿಕರ ಹಾಗೂ ನಿರಂತರ ಸೇವೆ ಪೂರ್ಣಗೊಳಿಸಿದಕ್ಕಾಗಿ, ಕಾಲಿಕ ವೇತನ ಶ್ರೇಣಿಯಲ್ಲಿರುವಂತೆ ವಾರ್ಷಿಕ ಬಡ್ತಿ ಸಹಜವಾಗಿ ಬಿಡುಗಡೆಯಾಗುತ್ತದೆ.
* ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸೇವಾ ಜೇಷ್ಠತೆ ಆಧಾರದ ಮೇಲೆ ಹಾಗೂ ಮೀಸಲಾತಿ ನಿಯಮ ಅನುಸರಿಸಿ ಮುಖ್ಯ ಶಿಕ್ಷಕರ ಹುದ್ದೆಗೆ ಪದೋನ್ನತಿ ನೀಡಲಾಗುತ್ತದೆ.
* ಮುಖ್ಯ ಶಿಕ್ಷಕರ ಸೇವಾ ಜೇಷ್ಠತೆ ಆಧಾರದ ಮೇಲೆ ಹಾಗೂ ಮೀಸಲಾತಿ ನಿಯಮ ಅನುಸರಿಸಿ ಪದೋನ್ನತ್ತಿ ನೀಡಲಾಗುತ್ತದೆ.
* ಪ್ರಾಥಮಿಕ ಶಾಲಾ ಶಿಕ್ಷಕರು ಅವಶ್ಯಕ ಪದವಿ ಹಾಗೂ ಶೈಕ್ಷಣಿಕ ಪದವಿ ಹೊಂದಿದ್ದಲ್ಲಿ ಸೇವಾ ಜೇಷ್ಠತೆ ಮತ್ತು ಮೀಸಲಾತಿ ನಿಯಮ ಆಧರಿಸಿ ಪ್ರೌಢಶಾಲಾ ಶಿಕ್ಷಕರಾಗಿ ಪದೋನ್ನತ್ತಿ ಹೊಂದುವ ಅವಕಾಶ ಹೊಂದಿರುತ್ತಾರೆ.
* ಉನ್ನತ ವ್ಯಾಸಂಗಕ್ಕಾಗಿ ವೇತನ ಸಹಿತ ನಿಯೋಜನೆ ಅವಕಾಶ ಕಲ್ಪಿಸಲಾಗಿದೆ. (ಬಿ.ಎ./ಬಿ.ಎಸ್ಸಿ ಪದವಿ ಪಡೆಯಲು)
* ಕಾಲಮಿತಿ ಬಡ್ತಿ : ಪದೋನ್ನತ್ತಿ ದೊರೆಯದ 10 ವರ್ಷಗಳ ನಿರಂತರ ಹಾಗೂ ತೃಪ್ತಿಕರ ಸೇವೆ ಪೂರ್ಣಗೊಳಿಸಿದ ಶಿಕ್ಷಕರಿಗೆ ಸೇವೆಯಲ್ಲಿ ಒಮ್ಮೆ ಕಾಲಮಿತಿ ಬಡ್ತಿ ನೀಡಿ ವೇತನ ಶ್ರೇಣಿ ನಿಗಧಿ ಪಡಿಸಲಾಗುತ್ತದೆ.
* **ಸ್ವಯಂ ಚಾಲಿತ ಬಡ್ತಿ:** ಪದೋನ್ನತ್ತಿ ಪಡೆಯದೆ 15 ವರ್ಷಗಳ ನಿರಂತರ ಹಾಗೂ ತೃಪ್ತಿಕರ ಸೇವೆ ಪೂರ್ಣಗೊಳಿಸಿದ ಶಿಕ್ಷಕರಿಗೆ ಸ್ವಯಂ ಚಾಲಿತ ಬಡ್ತಿ ನೀಡಿ ವೇತನ ನಿಗಧಿಪಡಿಸಲಾಗುತ್ತದೆ.
* **ಹೆಚ್ಚುವರಿ ವೇತನ ಬಡ್ತಿ :** ಪದೋನ್ನತ್ತಿ ಪಡೆಯದೆ 20 ವರ್ಷಗಳ ನಿರಂತರ ಹಾಗೂ ತೃಪ್ತಿಕರ ಸೇವೆ ಪೂರ್ಣಗೊಳಿಸಿದ ಶಿಕ್ಷಕರಿಗೆ ಹೆಚ್ಚುವರಿ ವೇತನ ಬಡ್ತಿ ನೀಡಿ ವೇತನ ನಿಗಧಿ ಪಡಿಸಲಾಗುತ್ತದೆ.

* **ಸ್ಥಗಿತ ವೇತನ ಬಡ್ತಿ:** ನಿಗಧಿ ಪಡಿಸಿದ ವೇತನ ಶ್ರೇಣಿಯಲ್ಲಿ ಗರಿಷ್ಠ ಮಿತಿ ತಲುಪಿದಾಗ ಶಿಕ್ಷಕರ ಮುಂದಿನ ಸೇವಾವಧಿ ಪರಿಗಣಿಸಿ ಗರಿಷ್ಠ 8 ಸ್ಥಗಿತ ವೇತನ ಬಡ್ತಿಗಳನ್ನು ನೀಡಲಾಗುತ್ತದೆ. ಗರಿಷ್ಠ ವೇತನ ಮಿತಿ ತಲುಪಿದ ನಂತರದ ಒಂದೊಂದು ವರ್ಷಕ್ಕೆ ಒಂದೊಂದರಂತೆ ಈ ಬಡ್ತಿ ನೀಡಲಾಗುವುದು.
* **ಹೆಚ್ಚುವರಿ ಭತ್ಯೆಗಳು ಹಾಗೂ ಸೌಲಭ್ಯಗಳು:** ಸರ್ಕಾರಿ ಆದೇಶ ಸಂಖ್ಯೆ ಎಫ್.ಡಿ./27/ಎಸ್.ಆರ್.ಎಸ್./85 ದಿನಾಂಕ: 1/10/1985ರ ಪ್ರಕಾರ ಎರಡು ಅಥವಾ ಕಡಿಮೆ ಜೀವಂತ ಮಕ್ಕಳಿದ್ದು, ಪತಿ/ಪತ್ನಿ ಸಂತಾನ ಹರಣ ಚಿಕಿತ್ಸೆಗೆ ಒಳಗಾಗಿದ್ದಲ್ಲಿ ಅವರಲ್ಲಿ ಒಬ್ಬರಿಗೆ ಕುಟುಂಬ ಯೋಜನಾ ಪ್ರೋತ್ಸಾಹಕ್ಕಾಗಿ ಒಂದು ಭತ್ಯೆಯು ವಿಶೇಷ ವೇತನ ರೂಪದಲ್ಲಿ ದೊರೆಯುತ್ತದೆ. ಒಂದು ಜೀವಂತ ಸಂತಾನ ಹೊಂದಿದ್ದು ಕುಟುಂಬ ಕಲ್ಯಾಣ ಚಿಕಿತ್ಸೆಗೆ ಒಳಗಾದ ನೌಕರನಿಗೆ ಇದರೊಂದಿಗೆ ವೃತ್ತಿ ತೆರಿಗೆಯಿಂದ ವಿನಾಯ್ತಿ ಇದೆ.
* **ವೈದ್ಯಕೀಯ ಸೌಲಭ್ಯ:** ಶಿಕ್ಷಕರು ಹಾಗೂ ಅವರ ಕುಟುಂಬದ ಸದಸ್ಯರು ಅನಾರೋಗ್ಯ ನಿಮಿತ್ತ ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರದಿಂದ ನಿರ್ದೇಶಿಸಲ್ಪಟ್ಟ ಚಿಕಿತ್ಸೆ ಪಡೆದಲ್ಲಿ ಅವರಿಗೆ ಖರ್ಚು ಮಾಡಿ ವೈದ್ಯಕೀಯ ವೆಚ್ಚವನ್ನು ಇಲಾಖೆ ಭರಿಸುತ್ತದೆ.
* **ಶವ ಸಂಸ್ಕಾರ ಭತ್ಯೆ:** ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ಮೃತಪಟ್ಟರೆ, ಶವಸಂಸ್ಕಾರಕ್ಕಾಗಿ 5000=00 ರೂ.ಗಳನ್ನು ತಕ್ಷಣದಲ್ಲಿ ಸಂಬಂಧಿಸಿದ ಮೇಲಾಧಿಕಾರಿ ಬಿಡುಗಡೆ ಮಾಡಿ ನೌಕರನ ಕುಟುಂಬಕ್ಕೆ ನೀಡುವರು.
* **ಕನ್ನಡಕ ಭತ್ಯೆ:** ಸೇವಾವಧಿಯಲ್ಲಿ ಎರಡು ಬಾರಿ ಕನ್ನಡಕ ಖರೀದಿಸಲು ಕನ್ನಡಕ 300ಭತ್ಯೆ ನೀಡಲಾಗುತ್ತದೆ.
* **ಎಲ್.ಟಿ.ಸಿ:** ಕ.ನಾ.ಸೇನಿ. 555 ಬಿ (1)ರ ಪ್ರಕಾರ ಸೇವಾವಧಿಯಲ್ಲಿ ಒಮ್ಮೆ ಶಿಕ್ಷಕರು ಹಾಗೂ ಅವರ ಕುಟುಂಬದವರು ದೇಶದ ಯಾವುದೇ ಭಾಗದಲ್ಲಿ ಪ್ರವಾಸ ಮಾಡಲು ತಗಲುವ ಪ್ರಯಾಣ ವೆಚ್ಚವನ್ನು ಸರ್ಕಾರದ ಭರಿಸುತ್ತದೆ. (ಪ್ರಯಾಣ ಮಾಡಿದ ಬಗ್ಗೆ ಅಧಿಕೃತ ಪ್ರವಾಸ ಸಂಸ್ಥೆಯ ವತಿಯಿಂದ ಅಧಿಕೃತ ರಸೀದಿಯನ್ನು ಹಾಜರು ಪಡಿಸಬೇಕು)
* **ಪ್ರವಾಸ ಭತ್ಯೆ:** ಸರ್ಕಾರಿ ಕಾರ್ಯಕ್ಕಾಗಿ ವಿವಿಧ ಪ್ರದೇಶಗಳಿಗೆ ಪ್ರಯಾಣ ಮಾಡಿದ ದಿನಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಲಭ್ಯವಿರುತ್ತದೆ.
* **ವರ್ಗಾವಣೆ ಅನುದಾನ:** ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆಗೊಂಡ ಸರ್ಕಾರಿ ನೌಕರರಿಗೆ ವರ್ಗಾವಣೆ ಅನುದಾನ ನೀಡಲಾಗುತ್ತದೆ. ಅವರ ಹಾಗೂ ಅವರ ಕುಟುಂಬದವರಿಗೆ ಪ್ರಯಾಣ ಭತ್ಯೆ, ಸರಕು ಸಾಗಣೆ ಭತ್ಯೆಗೆ ಅವಕಾಶವಿರುತ್ತದೆ.
* ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾವಣೆಗೊಂಡ ನೌಕರರಿಗೆ 10 ದಿನಗಳ ಸೇರಿಕೆ ಕಾಲದ ಸೌಲಭ್ಯ ಇರುತ್ತದೆ. ಸೇರಿಕೆ ಕಾಲ ಬಳಸಿಕೊಳ್ಳದಿದ್ದಲ್ಲಿ ಎಷ್ಟು ಕಾಲ ಬಳಕೆಯಾಗಿಲ್ಲವೋ ಅಷ್ಟು ದಿನಗಳು ಗಳಿಕೆ ರಜೆಗೆ ಜಮೆ ಆಗುತ್ತದೆ.
* ಅಂಗವಿಕಲ ಸರ್ಕಾರಿ ನೌಕರರಿಗೆ ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಯಿಂದ ವಿನಾಯ್ತಿ ಇದೆ.
* **ಹಬ್ಬದ ಮುಂಗಡ:** ಪ್ರತಿ ಆರ್ಥಿಕ ವರ್ಷದಲ್ಲಿ ಒಂದು ಬಾರಿ ಹಬ್ಬದ ಮುಂಗಡ ಪಡೆದು, 10 ಸಮ ಕಂತುಗಳಲ್ಲಿ ಬಡ್ಡಿ ರಹಿತವಾಗಿ ವಾಪಸ್ಸು ಮಾಡಬಹುದು.

## ರಜಾ ನಿಯಮಗಳು (Leave Rules)

ಸರ್ಕಾರಿ ನೌಕರನು ಮುಂದಿನ ನಿಬಂಧನೆಗೆ ಒಳಪಟ್ಟು ರಜಾ ಸೌಲಭ್ಯವನ್ನು ಸಕ್ಷಮ ಪ್ರಾಧಿಕಾರಿಯ ಪೂರ್ವ ಅನುಮತಿಯೊಂದಿಗೆ ಪಡೆಯಬಹುದು. ಸಕ್ಷಮ ಪ್ರಾಧಿಕಾರಿ ಎಂದರೆ ರಜೆ ಮಂಜೂರು ಮಾಡುವ ಪ್ರಾಧಿಕಾರ.

❖ ರಜೆಯು ಸರ್ಕಾರಿ ನೌಕರರ ಹಕ್ಕಲ್ಲ. (ನಿಯಮ 107)

❖ ಸಾರ್ವಜನಿಕ ಸೇವಾ ಅಗತ್ಯತೆಯಲ್ಲಿ ರಜೆ ಮಂಜೂರು ಮಾಡುವ ಪ್ರಾಧಿಕಾರವು ಕೋರಿರುವ ರಜೆಯನ್ನು ತಿರಸ್ಕರಿಸಬಹುದು. ಈಗಾಗಲೇ ಮಂಜೂರಾಗಿದ್ದರೆ ರದ್ದುಪಡಿಸಬಹುದು. ನಿಯಮ (ನಿಯಮ 107)

❖ ಸಮರ್ಥನೀಯ ಕಾರಣಗಳಿಲ್ಲದಿದ್ದಲ್ಲಿ ಅನಧಿಕೃತ ಗೈರುಹಾಜರಿ ಎಂದು ತೀರ್ಮಾನಿಸಬಹುದು ಹಾಗೂ ದುರ್ನಡತೆಗೆ ಇಲಾಖಾ ವಿಚಾರಣೆ ಹೂಡಬಹುದು. (ನಿಯಮ 106ಎ)

❖ ಮುಷ್ಕರದಲ್ಲಿ ಭಾಗವಹಿಸಿದ್ದಲ್ಲಿ ಕಾನೂನು ಬಾಹಿರವೆಂದು ಪರಿಗಣಿಸಿ ಕ್ರಮ ಜರುಗಿಸಬಹುದು. (ನಿಯಮ 106ಬಿ) ಮುಷ್ಕರದಲ್ಲಿ ಭಾಗವಹಿಸಿದ ದಿನಾಂಕದಂದು ನೌಕರನ ಲೆಕ್ಕದಲ್ಲಿರುವ (ಗಳಿಕೆ ರಜೆ ಮತ್ತು ಅರ್ಧ ವೇತನ ರಜೆ) ಎಲ್ಲಾ ರಜೆಯು ಸರ್ಕಾರಕ್ಕೆ ಮುಟ್ಟುಗೋಲಾಗುವುದು ಮತ್ತು ಸೇವಾವಧಿ ಭಂಗವಾಗುವುದು.

❖ 4 ತಿಂಗಳಿಗೂ ಮೀರಿದ ಅನಧಿಕೃತ ಗೈರುಹಾಜರಾದ ನೌಕರನ್ನು ಕೆ.ಸಿ.ಎಸ್ (ಸಿ.ಸಿ.ಎ) ನಿಯಮ 1957ರ ರೀತ್ಯಾ ವಿಚಾರಣೆಗೊಳಿಸಿ ಸೇವೆಯಿಂದ ವಜಾಗೊಳಿಸಬಹುದು. (ನಿಯಮ 108)

❖ ಗಳಿಕೆ ರಜೆಯನ್ನು ಅರ್ಧ ವೇತನ ರಜೆಯೊಂದಿಗೆ ಸಂಯೋಜಿಸಬಹುದು. ಆದರೆ ಆಕಸ್ಮಿಕ/ನಿರ್ಬಂಧಿತ ರಜೆಯನ್ನು ಸಂಯೋಜಿಸಲು ಅವಕಾಶವಿಲ್ಲ. (ನಿಯಮ 109)

**ವಿವಿಧ ಬಗೆಯ ರಜೆಗಳು**

| | | | |
|---|---|---|---|
| 1. ಸಾಂದರ್ಭಿಕ ರಜೆ (ಆಕಸ್ಮಿಕ ರಜೆ) | – | ಅನುಬಂಧ–ಬಿ | |
| 2. ವಿಶೇಷ ಸಾಂದರ್ಭಿಕ ರಜೆ | – | ಅನುಬಂಧ ಬಿ | |
| 3. ಗಳಿಗೆ ರಜೆ | – | ನಿಯಮ 112 – ಬಿಡುವು ರಹಿತ ಇಲಾಖೆನಿಯಮ 113– ಬಿಡುವು ಸಹಿತ ಇಲಾಖೆ | |
| 4. ಅರ್ಧವೇತನ ರಜೆ | – | ನಿಯಮ – 114 | |
| 5. ಪರಿವರ್ತಿತ ರಜೆ | – | ನಿಯಮ – 114 | |
| 6. ಹಕ್ಕಿನಲ್ಲಿ ಇಲ್ಲದ ರಜೆ | – | ನಿಯಮ – 114 | |
| 7. ಅಸಾಧಾರಣ ರಜೆ | – | ನಿಯಮ – 117 | |
| 8. ಪರೀಕ್ಷಾ ರಜೆ | – | ನಿಯಮ – 130 ರಿಂದ 134 ಎ | |
| 9. ಹೆರಿಗೆ ರಜೆ | – | ನಿಯಮ – 135 ಮತ್ತು 135 ಎ | |
| 10. ಪಿತೃತ್ವ ರಜೆ | – | ನಿಯಮ – 135 ಬಿ | |
| 11. ವಿಶೇಷ ದುರ್ಬಲತೆ ರಜೆ | – | ನಿಯಮ – 136, 137 & 138 | |

**ಸಾಂದರ್ಭಿಕ ರಜೆ**

- ಸರ್ಕಾರಿ ನೌಕರರ ಸೇವೆಯ ಮೊದಲ ಒಂದು ವರ್ಷದ ಸೇವಾವಧಿಯಲ್ಲಿ ತಿಂಗಳ ಕರ್ತವ್ಯದ ನಂತರ 1 ದಿನದ ರಜೆ.
- ಆ ನಂತರ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ 15 ದಿನಗಳು ಮುಂಗಡವಾಗಿ ಜಮೆ. ಅವಿರತವಾಗಿ ಗರಿಷ್ಟ 7 ದಿನಗಳು, ಸಾರ್ವತ್ರಿಕ ರಜೆಯೊಂದಿಗೆ ಸಂಯೋಜಿಸಿದಾಗ ಗರಿಷ್ಟ 10 ದಿನಗಳು.
- ಡಿಸೆಂಬರ್ ಅಂತ್ಯದೊಳಗೆ ಉಪಯೋಗಿಸಿಕೊಳ್ಳದಿದ್ದಲ್ಲಿ ವ್ಯಯವಾಗುವುದು.
- ಇತರೆ ರಜೆಯೊಂದಿಗೆ ಸಂಯೋಜಿಸಲು ಅವಕಾಶವಿಲ್ಲ. ಸಾರ್ವತ್ರಿಕ ರಜೆ / ನಿರ್ಬಂಧಿತ ರಜೆಯೊಂದಿಗೆ ಸಂಯೋಜಿಸಬಹುದು.
- ಕಛೇರಿ ಮುಖ್ಯಾಧಿಕಾರಿ ಮಂಜೂರಾತಿ ಪ್ರಾಧಿಕಾರ.

**ನಿರ್ಬಂಧಿತ ರಜೆ:**ಪ್ರತಿ ವರ್ಷಕ್ಕೆ ಎರಡು

**ಗಳಿಕೆ ರಜೆ:**ಬಿಡುವು ಇಲ್ಲದ ನೌಕರರಿಗೆ

- ಸರ್ಕಾರಿ ನೌಕರರು ಕರ್ತವ್ಯದ ಅವಧಿಯಲ್ಲಿ ಗಳಿಸಿದ ರಜೆ ಪ್ರತಿ ಕ್ಯಾಲೆಂಡರ್ ಅರ್ಧ ವರ್ಷದ ಪ್ರಾರಂಭದ ದಿನಾಂಕದಂದು ಪ್ರತಿ ಜನವರಿ 1 ಮತ್ತು ಜುಲೈ 1 ರಂದು ಮುಂಗಡ 15 ದಿನಗಳು ಲೆಕ್ಕಕ್ಕೆ ಜಮೆ.
- ಹೊಸದಾಗಿ ಕೆಲಸಕ್ಕೆ ಯಾವುದೇ ಕ್ಯಾಲೆಂಡರ್ ಅರ್ಧ ವರ್ಷದಲ್ಲಿ ಸೇರಿದಾಗ ಪ್ರತಿ ಪೂರ್ಣಗೊಂಡ ತಿಂಗಳಿಗೆ 2 1\2 ದಿನದಂತೆ ಮುಂದಿನ ಅರ್ಧ ವರ್ಷದ ಆರಂಭದ ದಿನದಿಂದ ಹಿಂದಿನ ದಿನದವರೆಗೆ ಲೆಕ್ಕಾಚಾರ ಮಾಡಬೇಕು. ಮುಂದಿನ ಅರ್ಧ ವರ್ಷದ ಆರಂಭದ ದಿನದಂದು ಮುಂಗಡವಾಗಿ 15 ದಿನ ಲೆಕ್ಕಕ್ಕೆ ಜಮೆಯಾಗುತ್ತದೆ. ಇದೇ ರೀತಿ ಮರಣ / ನಿವೃತ್ತಿಯಾಗುವವರೆಗೂ 2 1\2 ದಿನದಂತೆ ಲೆಕ್ಕಾಚಾರ ಮಾಡಬೇಕು.
- ಕರ್ತವ್ಯವಲ್ಲದ ಅವಧಿಯ ಪ್ರತಿ 10 ದಿನಗಳಿಗೆ ಒಂದು ದಿನದ ರಜೆ, ಮುಂದಿನ ಅರ್ಧವರ್ಷದ ಅವಧಿಯಲ್ಲಿ ಲೆಕ್ಕಕ್ಕೆ ನೀಡುವಾಗ ಮಿತಿಗೊಳಿಸಬೇಕು.
- ಲೆಕ್ಕದಲ್ಲಿ ಹೊಂದಿರಬಹುದಾದ ಗರಿಷ್ಟ ಮಿತಿ 300+15 ದಿನಗಳು, 15 ದಿನಗಳನ್ನು ಕ್ಯಾಲೆಂಡರ್ ಅರ್ಧ ವರ್ಷದ ಒಳಗಾಗಿ ಉಪಯೋಗಿಸದಿದ್ದರೆ ಲ್ಯಾಪ್ಸ್ ಆಗುವುದು.
- ಅಧ್ಯರ್ಪಣೆ ಮತ್ತು ನಗದೀಕರಣ ಸೌಲಭ್ಯ.

**ಬಿಡುವು ಇಲಾಖೆ ನೌಕರರಿಗೆ**

**ಸರ್ಕಾರಿ ನೌಕರನು ಕರ್ತವ್ಯದ ಅವಧಿಯಲ್ಲಿ ಅರ್ಜಿಸಿದ ರಜೆ**

- ಪ್ರತಿ ಅರ್ಧ ವರ್ಷದ ಪ್ರಾರಂಭದಲ್ಲಿ ಮುಂಗಡ 5 ದಿನಗಳು ಲೆಕ್ಕ ಜಮೆ.
- ಅರ್ಧ ವರ್ಷದ ಸೇವೆಯಪ್ರಾರಂಭ ಅಥವಾ ಪೂರ್ಣಗೊಳಿಸಿದ ಸಂದರ್ಭದಲ್ಲಿ ಪ್ರತಿ ತಿಂಗಳ ಕರ್ತವ್ಯದ ಅವಧಿಗೆ 5/6 ಅನುಪಾತದಲ್ಲಿ ಮುಂದಿನ ಅರ್ಧ ವರ್ಷದ ಅವಧಿಯಲ್ಲಿ ಲೆಕ್ಕಕ್ಕೆ ನೀಡುವಾಗ ಮಿತಿಗೊಳಿಸುವುದು.
- ಲೆಕ್ಕದಲ್ಲಿ ಹೊಂದಿರಬಹುದಾದ ಗರಿಷ್ಟ ಮಿತಿ 300+5 ದಿನಗಳು

- ಅಧ್ಯರ್ಪಣೆ ಮತ್ತು ನಗಧೀಕರಣದ ಸೌಲಭ್ಯ ಲಭ್ಯವಿದೆ.

**ಉದಾ:** ಒಬ್ಬ ಸರ್ಕಾರಿ ನೌಕರರು ದಿನಾಂಕ: 05–03–2007 ರಂದು ಸೇವೆಗೆ ಸೇರಿದ್ದಾರೆ. ದಿನಾಂಕ: 01–04–2007 ರಿಂದ 30–06–2007ರ ವರೆಗೆ 3 ತಿಂಗಳು ಪೂರ್ಣಗೊಂಡ ಸೇವೆಗೆ ಗಳಿಕೆ ರಜೆ 3*5/6= 2 ದಿನಗಳು ಲೆಕ್ಕಕ್ಕೆ ನೀಡಿ, ದಿನಾಂಕ: 01–07–2007 ರಂದು 5 ದಿನಗಳು ಮುಂಗಡ ನೀಡಿಕೆ, ಒಟ್ಟು 5 + 3 = 8 ದಿನಗಳು ಗಳಿಕೆ ರಜೆಯನ್ನು ಹೊಂದಿರುವರು.

**ಉದಾ:** ಒಬ್ಬ ಸರ್ಕಾರಿ ನೌಕರರು ದಿನಾಂಕ : 31–10–2007 ರಂದು ವಯೋಮಿತಿ ನಿವೃತ್ತಿ ಹೊಂದಿದ್ದಲ್ಲಿ, 01–07–2007 ರಿಂದ 31–10–2007 ರವರೆಗೆ 4 ತಿಂಗಳಿಗೆ 4 * 5/6 = 3.3 ಒಟ್ಟು 3 ದಿನಗಳು ರಜೆ ಜಮೆ ಮಾಡಬೇಕು.

## ನಿಯಮ 118: ಗಳಿಕೆ ರಜೆ ನಗಧೀಕರಣ ಸೌಲಭ್ಯ

ಸರ್ಕಾರಿ ನೌಕರರು ಪ್ರತಿ ಒಂದು ಕ್ಯಾಲೆಂಡರ್ ವರ್ಷಗಳ ಬ್ಲಾಕ್ ಅವಧಿಯಲ್ಲಿ ಒಮ್ಮೆ ಗರಿಷ್ಠ 15 ದಿನಗಳ ಗಳಿಕೆ ರಜೆಯನ್ನು ಅದ್ಯರ್ಪಿಸಲು ಅಭಿಮತ ನೀಡಿ ರಜೆ ನಗಧೀಕರಣ ಸೌಲಭ್ಯವನ್ನು ಪಡೆಯಬಹುದು.

ಪರಿವೀಕ್ಷಣಾ ಅವಧಿಯಲ್ಲೂ ಸರ್ಕಾರಿ ನೌಕರರು ತಮ್ಮ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜೆ ನಗಧೀಕರಣ ಸೌಲಭ್ಯವನ್ನು ಪಡೆಯಬಹುದಾಗಿದೆ. ಆದರೆ ಅವರ ಲೆಕ್ಕದಲ್ಲಿ ಒಟ್ಟು 30 ದಿನ ಅಥವಾ ಹೆಚ್ಚು ಗಳಿಕೆ ರಜೆ ಇರಬೇಕು.

## ನಿವೃತ್ತಿ ಪೂರ್ವ ಗಳಿಕೆ ರಜೆ ನಗದೀಕರಣ: 118 ಎ(1)

ನಿವೃತ್ತಿ ವಯಸ್ಸು ತಲುಪಿದ ನಂತರ ನಿವೃತ್ತಿ ಹೊಂದುವ ಸರ್ಕಾರಿ ನೌಕರರಿಗೆ ರಜೆ ಮಂಜೂರು ಮಾಡುವ ಅಧಿಕಾರಿಯೇ ತಾನೇ ತಾನಾಗಿ (ನೌಕರನಿಂದ ಅರ್ಜಿ ಬೇಕಾಗಿಲ್ಲ) ನಿವೃತ್ತಿ ದಿನಾಂಕದಲ್ಲಿ ನೌಕರರ ಲೆಕ್ಕದಲ್ಲಿ ಹೊಂದಿರುವ ಗಳಿಕೆ ರಜೆಯ ಗರಿಷ್ಠ ಮಿತಿ 300 ದಿನಗಳಿಗೆ ಒಳಪಟ್ಟು ರಜೆ ಸಂಬಳವನ್ನು ಮಂಜೂರು ಮಾಡಬೇಕು. ನಿಯಮ 118 ಎ (1). ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯು ಈ ರಜೆ ಸಂಬಳದಲ್ಲಿ ಸೇರ್ಪಡೆಯಾಗುವುದಿಲ್ಲ.

ನಿವೃತ್ತ ನೌಕರರ ವಿರುದ್ಧ ದುರ್ನಡತೆ ಅಥವಾ ಆರೋಪಗಳ ಸಂಬಂಧ ವಿಚಾರಣೆಗಾಗಿ ನಿಲಂಬನೆಯಲ್ಲಿದ್ದು, ಅಥವಾ ಶಿಸ್ತಿನ ವಿಚಾರಣೆಯು ಇತ್ಯರ್ಥವಾಗದೇ ಬಾಕಿ ಉಳಿದಿದ್ದು, ನಿವೃತ್ತ ನೌಕರರಿಂದ ಪ್ರಕರಣ ಇತ್ಯರ್ಥವಾದ ನಂತರ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಠ ಪರಿಹಾರಾರ್ಥವಾಗಿ ಹಣದ ವಸೂಲಾತಿಯು ಅಗತ್ಯವಿರುವುದೆಂದು ತಿಳಿದು ಬಂದರೆ ನೌಕರರಿಗೆ ಪಾವತಿಸಬಹುದಾದ ರಜೆಯ ಸಂಬಳದ ಪೂರ್ಣ ಮೊಬಲಗು ಅಥವಾ ಭಾಗಾಂಶವನ್ನು ತಡೆಹಿಡಿದು ಪ್ರಕರಣದ ಇತ್ಯರ್ಥವಾದ ನಂತರ ನೌಕರರಿಂದ ವಸೂಲಿ ಮಾಡಬೇಕಾದ ಮೊಬಲಗನ್ನು ಹೊಂದಾಣಿಕೆ ಮಾಡಿ ಉಳಿದ ಮೊಬಲಗನ್ನು ಪಾವತಿ ಮಾಡಬೇಕು. [ನಿಯಮ 118 ಎ (2)]–

## ಅರ್ಧ ವೇತನ ರಜೆ

- ಪ್ರತಿ ಕಾಲೆಂಡರ್ ಅರ್ಧವರ್ಷದ ಪ್ರಾರಂಭದಲ್ಲಿ 10 ದಿನಗಳ ರಜೆ ಲೆಕ್ಕಕ್ಕೆ ಜಮೆ.
- ಅರ್ಧ ವರ್ಷದ ಮಧ್ಯದ ಅವಧಿಯಲ್ಲಿ ಸೇವೆಯ ಪ್ರಾರಂಭ/ಅಂತ್ಯಗೊಂಡರೆ ಪ್ರತಿ ಕ್ಯಾಲೆಂಡರ್ ತಿಂಗಳ ಪೂರ್ಣ ಸೇವೆಗೆ 5/3 ದರದ ಪ್ರಕಾರ ರಜೆ.
- ಕರ್ತವ್ಯವಲ್ಲದ ಪ್ರತಿ 18 ದಿನಗಳ ಅವಧಿಗೆ ಒಂದು ದಿನದ ರಜೆಯನ್ನು ಮುಂದಿನ ಅರ್ಧ ವರ್ಷದ ಅವಧಿಯಲ್ಲಿ ಲೆಕ್ಕಕ್ಕೆ ನೀಡುವಾಗ ಕಟಾವಣೆ ಮಾಡುವುದು.
- ಅರ್ಧವೇತನ ರಜೆಯನ್ನು ಒಂದು ಕ್ಯಾಲೆಂಡರ್ ವರ್ಷದಲ್ಲಿ ಎರಡು ಕಂತುಗಳಲ್ಲಿ ಪ್ರತಿ ಜನವರಿ ಹಾಗೂ ಜುಲೈ ಒಂದರಂದು ಮುಂಗಡವಾಗಿ 10 ದಿನಗಳ ರಜೆಯನ್ನು ಜಮೆ ಮಾಡತಕ್ಕದ್ದು.

**ಉದಾ:** ದಿನಾಂಕ: 10–03–2008ರಂದು ಸೇವೆಗೆ ಸೇರಿದ ನೌಕರನಿಗೆ ದಿನಾಂಕ: 10–03–2008ರವರೆಗೆ ಪೂರ್ಣಗೊಂಡ 3 ತಿಂಗಳ ಸೇವೆಗೆ 3*5/3=5 ದಿನಗಳು ಲೆಕ್ಕಕ್ಕೆ ನೀಡಿಕೆ.

**ಉದಾ:** ದಿನಾಂಕ: 30–09–2008 ರಂದು ನಿವೃತ್ತಿ ಹೊಂದುವ ನೌಕರನಿಗೆ ದಿನಾಂಕ: 01–07–2008ರಿಂದ 30–09–2008ರವರೆಗಿನ ಅವಧಿಗೆ 3 ತಿಂಗಳಿಗೆ 3*5/3=ದಿನಗಳು ಲೆಕ್ಕಕ್ಕೆ ನೀಡಿಕೆ.

## ಪರಿವರ್ತಿತ ರಜೆ:

- ನೌಕರನ ಲೆಕ್ಕದಲ್ಲಿರುವ ಅರ್ಧವೇತನ ರಜೆಯನ್ನು ಪೂರ್ಣವೇತನ ಭತ್ಯೆಗೆ ಪರಿವರ್ತನೆ.
- ಪರಿವರ್ತಿಸಿದ ರಜೆಯ 2ರಷ್ಟನ್ನು ನೌಕರನ ಅರ್ಧವೇತನ ರಜೆಯ ಲೆಕ್ಕದಿಂದ ಕಳೆಯುವುದು.
- ರಜೆಯ ಅವಧಿಯಲ್ಲಿ ನೌಕರನು ಮರಣ ಅಥವಾ ಅನಾರೋಗ್ಯ ಕಾರಣ ನಿವೃತ್ತಿ ಹೊಂದಿದಲ್ಲಿ ವೇತನ ಕಟಾಯಿಸುವುದರಿಂದ ವಿನಾಯಿತಿ.

**ಉದಾ:** 30–06–2017ರ ಅಂತ್ಯಕ್ಕೆ 228 ಅರ್ಧ ವೇತನ ರಜೆ ಲೆಕ್ಕದಲ್ಲಿದೆ ದಿನಾಂಕ : 01/03/2007ರಿಂದ 20/03/2007ರ ವರೆಗೆ 20 ದಿನಗಳು ಪರಿವರ್ತಿತ ರಜೆ ಉಪಯೋಗಿಸಿಕೊಂಡರೆ 20*2=40 ದಿನಗಳು ಅರ್ಧ ವೇತನ ರಜೆಯಿಂದ ಕಳೆಯುವುದು. ಉಳಿಕೆ 228–40=188 ದಿನಗಳು

**ಗಳಿಸದ ರಜೆ**

- ಹಕ್ಕಿನಲ್ಲಿ ಯಾವುದೇ ರಜೆ ಹೊಂದಿಲ್ಲದಿದ್ದರೆ ಸೇವಾ ಅವಧಿಯಲ್ಲಿ ಮುಂದೆ ಗಳಿಸುವ ಅರ್ಧವೇತನ ರಜೆಗೆ ಖರ್ಚುಹಾಕುವ ಷರತ್ತಿನ ಮೇಲೆ ಮಂಜೂರಾತಿ.
- ರಜೆಯ ನಂತರ ಸೇವೆಗೆ ಹಿಂದಿರುಗುವ ಸಾಧ್ಯತೆ ಇರಬೇಕು.
- ಮಂಜೂರು ಮಾಡಿದ ರಜೆ, ಸೇವೆಯಲ್ಲಿ ಗಳಿಸುವ ಭರವಸೆ ಇರಬೇಕು.
- ರಜೆಯ ಅವಧಿಯಲ್ಲಿ ಅರ್ಧವೇತನ ಮತ್ತು ಭತ್ಯೆ ಮಾತ್ರ ಪಾವತಿ.
- ಗರಿಷ್ಠ ಸೇವಾ ಅವಧಿಯಲ್ಲಿ 360 ದಿನಗಳು, ಏಕಕಾಲದಲ್ಲಿ ಗರಿಷ್ಟ 90 ದಿನಗಳು.
- ವೈದ್ಯಕೀಯ 180, ಖಾಸಗಿ ಕಾರಣ 180.
- ಒಂದು ವರ್ಷಕ್ಕೆ ಕಡಿಮೆ ಇಲ್ಲದೇ ನಿರಂತರ ಸೇವೆ ಪೂರ್ಣಗೊಳಿಸಿರಬೇಕು.

**ಅಸಾಧಾರಣ ರಜೆ**

- ➢ ವಿಶೇಷ ಸಂದರ್ಭದಲ್ಲಿ ನೌಕರರ ಹಕ್ಕಿನಲ್ಲಿ ಯಾವುದೇ ರಜೆ ಇಲ್ಲದಿದ್ದಾಗ ಅಥವಾ ನೌಕರರ ಕೋರಿಕೆಯ ಮೇರೆಗೆ ಈ ರಜೆಯನ್ನು ನೀಡಬಹುದು.
- ➢ ವೇತನ ಮತ್ತು ಭತ್ಯೆ ಲಭ್ಯವಿರುವುದಿಲ್ಲ.
- ➢ ಮನೆ ಬಾಡಿಗೆ ಪಾವತಿಗೆ ನಿಯಮ 171ರ ಅನ್ವಯ ಅವಕಾಶ.
- ➢ ಕೋರಿಕೆ ಮೇರೆಗೆ ಗರಿಷ್ಟ 6 ತಿಂಗಳು ದೀರ್ಘ ಕಾಲದ ಕಾಯಿಲೆ ಕಾರಣ ಗರಿಷ್ಠ 180 ದಿನಗಳಿಂದ ಒಂದುವರೆ ವರ್ಷದವರೆಗೆ ಸೇವಾ ಅವಧಿಯಲ್ಲಿ ಗರಿಷ್ಠ 2 ವರ್ಷ.

**ಪರೀಕ್ಷಾ ರಜೆ**

- ಹುದ್ದೆಗೆ ನಿಗಧಿತ ಇಲಾಖಾ ಪರೀಕ್ಷಾ ಹಾಜರಾತಿಗೆ ಪರೀಕ್ಷಾ ರಜೆ ನೀಡಬಹುದು.
- 2 ಪ್ರಯತ್ನಗಳಿಗೆ ಮಾತ್ರ ಅವಕಾಶ ಲಭ್ಯ.
- ಪರೀಕ್ಷೆಗೆ ಹಾಜರಾದ ಬಗ್ಗೆ ಪ್ರಮಾಣ ಪತ್ರ ಒದಗಿಸಬೇಕು.
- ಸೇವಾ ವಹಿಯಲ್ಲಿ ರಜೆ ಮಂಜೂರಾತಿ ವಿವರ ದಾಖಲಿಸಬೇಕು.

**ಹೆರಿಗೆ ರಜೆ**

- ➢ 2 ಅಥವಾ ಹೆಚ್ಚು ಜೀವಂತ ಮಕ್ಕಳಿದ್ದರೆ ಈ ಸೌಲಭ್ಯ ದೊರೆಯುವುದಿಲ್ಲ.
- ➢ ಗರಿಷ್ಠ 180 ದಿನಗಳು.
- ➢ ಬಟವಾಡೆ ಅಧಿಕಾರಿ ಮಂಜೂರಾತಿ ಪ್ರಾಧಿಕಾರಿ.
- ➢ 180 ದಿನಗಳ ಅವಿರತವಾಗಿ ಉಪಯೋಗ.
- ➢ ಇತರೆ ಹಕ್ಕಿನ ರಜೆಯೊಂದಿಗೆ ವೈದ್ಯಕೀಯ ಕಾರಣದ ಮೇಲೆ ಸಂಯೋಜಿಸಿ ಬಳಕೆ.
- ➢ ಗರ್ಭಪಾತದ ಸಂದರ್ಭದಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಆಧರಿಸಿ ಗರಿಷ್ಠ 6 ವಾರಗಳ ರಜೆ.

**ಪಿತೃತ್ವ ರಜೆ**

- ❖ ಸರ್ಕಾರಿ ನೌಕರರ ಪತ್ನಿಯ ಹೆರಿಗೆ ಸಂದರ್ಭದಲ್ಲಿ ನೆರವು ನೀಡಲು ಗರಿಷ್ಠ 15 ದಿನಗಳ ಪಿತೃತ್ವ ರಜೆ ಲಭ್ಯ.
- ❖ 2 ಅಥವಾ ಹೆಚ್ಚು ಜೀವಂತ ಮಕ್ಕಳಿದ್ದರೆ ಈ ಸೌಲಭ್ಯ ದೊರೆಯುವುದಿಲ್ಲ.

**ವಿಶೇಷ ದುರ್ಬಲತೆ ರಜೆ**

- ➢ ನೌಕರನಿಗೆ ಕರ್ತವ್ಯದ ಅವಧಿಯಲ್ಲಿ ಉಂಟಾದ ದೈಹಿಕ ವಿಕಲತೆ ಅಥವಾ ಮಾನಸಿಕ ಅಸ್ವಸ್ಥತೆಗಾಗಿ ಘಟನಾ ವರದಿ ಹಾಗೂ ವೈದ್ಯಕೀಯ ಮಂಡಳಿ ನೀಡುವ ಪ್ರಮಾಣ ಪತ್ರ ಆಧರಸಿ ನೀಡಲಾಗುವುದು.
- ➢ ಗರಿಷ್ಠ 24 ತಿಂಗಳ ಅವಧಿ.
- ➢ ಮೊದಲ 4 ತಿಂಗಳ ರಜೆ ಅವಧಿಯಲ್ಲಿ ಪೂರ್ಣವೇತನ ಮತ್ತು ಭತ್ಯೆ ಪಾವತಿ.
- ➢ 4 ತಿಂಗಳ ನಂತರದ ಅವಧಿಗೆ ಅರ್ಧವೇತನ ರಜೆ ಅವಧಿಯಲ್ಲಿ ದೊರೆಯುವ ವೇತನ ಮತ್ತು ಭತ್ಯೆ ಲಭ್ಯ.
- ➢ ಮಂಜೂರಾತಿ ಪ್ರಾಧಿಕಾರ – ಸರ್ಕಾರ

**ಕಾರ್ಯವಿಧಾನ**

- ❖ ರಜೆ ಮಂಜೂರಾತಿ ಕೋರಿ ನಮೂನೆ–1ರಲ್ಲಿ ಪೂರ್ವಭಾವಿಯಾಗಿ ಅರ್ಜಿ ಸಲ್ಲಿಸಬೇಕು.
- ❖ ಗೆಜೆಟೆಡ್ ಅಧಿಕಾರಿಗಳು ಕನಿಷ್ಠ 1 ತಿಂಗಳು ಮುಂಚಿತವಾಗಿ ದ್ವಿಪ್ರತಿಯಲ್ಲಿ ಅರ್ಜಿ ನೀಡಿಕೆ.
- ❖ ವೈದ್ಯಕೀಯ ಕಾರಣದ ಮೇಲೆ ರಜೆ ಕೋರಿದಲ್ಲಿ ಸಕ್ಷಮ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಸಲ್ಲಿಕೆ.

**ಸಕ್ಷಮ ವೈದ್ಯಾಧಿಕಾರಿ: ನಿಯಮ 187**

- ➢ ನೌಕರನಿಗೆ ಚಿಕಿತ್ಸೆ ನೀಡಿದ ವೈದ್ಯಕೀಯ ಚಿಕಿತ್ಸಕ ವೈಧ್ಯ ಹಕೀಮ್–ಗರಿಷ್ಠ–10 ದಿನಗಳು
- ➢ ವೈದ್ಯಕೀಯ ಕೌನ್ಸಿಲ್‌ನಲ್ಲಿ ನೊಂದಾಯಿತ ವೈದ್ಯಕೀಯ ಸಲಹೆಗಾರರು ಗರಿಷ್ಠ–2 ತಿಂಗಳು
- ➢ ಅಂಗೀಕೃತ ಪದವಿ ಹೊಂದಿದ ನೊಂದಾಯಿತ ವೈದ್ಯಕೀಯ ಅಧಿಕಾರಿ ಗರಿಷ್ಟ–6 ತಿಂಗಳು
- ➢ ಮಂಜೂರಾತಿ ಪ್ರಾಧಿಕಾರಿ ಅಗತ್ಯವೆಂದು ಪರಿಗಣಿಸಿದಲ್ಲಿ 6 ತಿಂಗಳ ಅವಧಿ ಮಿರಿದ ರಜೆ ಮಂಜೂರಾತಿ ಕೋರಿ ವ್ಯದ್ಯಕೀಯ ಪ್ರಮಾಣ ಪತ್ರ ಹಾಜರು ಪಡಿಸಿದ್ದಲ್ಲಿ ಜಿಲ್ಲಾ ವೈದ್ಯಾಧಿಕಾರಿಯಿಂದ ಮೇಲು ಸಹಿ ಪಡೆಯಲು ಸೂಚಿಸಬಹುದು.
- ➢ ಪತ್ರಾಂಕಿತರಲ್ಲದ ಸಿಬ್ಬಂದಿಗೆ ಮಂಜೂರಾತಿ ಪ್ರಾಧಿಕಾರಿ ನೌಕರ ಸೇವಾ ದಾಖಲೆ ಪರಿಶೀಲಿಸಿ ರಜೆ ಲಭ್ಯತೆ ಆಧಾರದ ಮೇಲೆ ಮಂಜೂರಾತಿ ನೀಡಿ ಆದೇಶ. (ನಿಯಮ 195)
- ➢ ತುರ್ತು ಸಂದರ್ಭವೆನಿಸಿದ್ದಲ್ಲಿ ಮಹಾಲೇಖಪಾಲಕರಿಂದ ರಜೆ ಲಭ್ಯತೆ ದೃಡೀಕರಣ ನಿರೀಕ್ಷಿಸಿ ಮಂಜೂರಾತಿ ಪ್ರಾಧಿಕಾರಿ ಅಧಿಕಾರಿಗೆ ರಜೆ ಉಪಯೋಗಿಸಿಕೊಳ್ಳಲು ಅನುಮತಿಸಬಹುದು. (ನಿಯಮ–190)
- ➢ ಮಹಾಲೇಖಪಾಲಕರಿಂದ ರಜೆ ಲಭ್ಯತೆ ದೃಢೀಕರಣ ಸ್ವೀಕೃತಿ ನಂತರ ಸಕ್ಷಮ ಪ್ರಾಧಿಕಾರಿಯಿಂದ ಮಂಜೂರಾತಿ. (ನಿಯಮ – 192)
- ➢ ಪರೀವೀಕ್ಷಣ ಅವಧಿಯ ನೌಕರರು ತಾತ್ಕಾಲಿಕ ರಜೆ ಅರ್ಹರು (ನಿಯಮ– 145)
- ➢ ಅರೆಕಾಲಿಕ ಸರ್ಕಾರಿ ನೌಕರರು ಸಾಂದರ್ಭಿಕ ರಜೆ ಹೊರತು ಪಡಿಸಿ ಇತರೆ ರಜೆಗೆ ಅರ್ಹರಲ್ಲ. (ನಿಯಮ – 147)
- ➢ ದುರ್ನಡತೆಗಾಗಿ ಶಿಸ್ತು ಪ್ರಾಧಿಕಾರಿಯಿಂದ ಕಠಿಣ ದಂಡನೆ ಒಳಪಡಿಸಲು ನಿರ್ಧರಿಸಿರುವ ನೌಕರರು ರಜೆ ಮಂಜೂರಾತಿಗೆ ಅರ್ಹರಲ್ಲ. (ನಿಯಮ – 144)
- ➢ ಷರತ್ತಿಗೆ ಒಳಪಟ್ಟು ರಜೆಯನ್ನು ಸಾರ್ವಜನಿಕ ರಜಾ ದಿನಗಳೊಂದಿಗೆ ಸಂಯೋಜಿಸಲು ಅನುಮತಿಸಬಹುದು.
- ➢ ವೈದ್ಯಕೀಯ ಕಾರಣದ ಮೇಲೆ ರಜಾ ಮಂಜೂರಾತಿ ಪಡೆದ ನೌಕರರು ಕರ್ತವ್ಯಕ್ಕೆ ಹಾಜರಾಗಲು ವೈದ್ಯಕೀಯವಾಗಿ ಸೇವೆ ಮುಂದುವರಿಸಲು ಅರ್ಹರೆಂದು ವೈದ್ಯಾಧಿಕಾರಿಯಿಂದ ಪ್ರಮಾಣ ಪತ್ರ ಹಾಜರಿ ಪಡಿಸುವುದು ಅಗತ್ಯ. (ನಿಯಮ– 160)
- ➢ ರಜೆ ಮಂಜೂರಾತಿ ಪಡೆದು ರಜಾ ಅವಧಿಯಲ್ಲಿರುವ ನೌಕರರನ್ನು ಸಾರ್ವಜನಿಕ ಹಿತಾಶಕ್ತಿಯಿಂದ ಕರ್ತವ್ಯಕ್ಕೆ ಹಾಜರಾಗುವಂತೆ ಕರೆಪತ್ರ ನೀಡಬಹುದು. (ನಿಯಮ – 161)
- ➢ ಸಾಂದರ್ಭಿಕ ರಜೆ ಹೊರತುಪಡಿಸಿ ನೌಕರರ ಹಕ್ಕಿನಲ್ಲಿರುವ ಯಾವುದೇ ರಜೆ ಸಂಯೋಜಿಸಿ ಮಂಜೂರಾತಿಗೆ ಅರ್ಹರು. (ನಿಯಮ – 165)
- ➢ ಮಂಜೂರಾದ ಸಾಂಧರ್ಬಿಕ ರಜೆಯನ್ನು ಉಪಯೋಗಿಸಿ ಕರ್ತವ್ಯಕ್ಕೆ ಹಾಜರಾದ ನಂತರ ಅದನ್ನು ಇತರೆ ರಜೆಗೆ ಪರಿವರ್ತಿಸುವಂತಿಲ್ಲ. ಆದರೆ ಸಾಂದರ್ಭಿಕ ರಜೆಯಲ್ಲಿರುವ ನೌಕರನು ಕರ್ತವ್ಯಕ್ಕೆ ಹಾಜರಾಗುವ ಮುಂಚೆ (ರಜೆಯಲ್ಲಿರುವಾಗಲೇ) ಇತರೆ ರಜೆಗೆ ಕೋರಿಕೊಂಡರೇ ಈಗಾಗಲೇ ಮಂಜೂರಾಗಿರುವ ಸಾಂದರ್ಭಿಕ ರಜೆಯನ್ನು ವಾಪಸ್ಸು ಪಡೆದು ಇತರೆ ರಜೆಯನ್ನು ಸಾಂದರ್ಭಿಕ ಮಂಜೂರು ಮಾಡಿದ ದಿನಾಂಕದಿದಂಲೇ ಮಂಜೂರು ಮಾಡಬಹುದು. (ನಿಯಮ – 165)

**ರಜೆ ವೇತನ**

- ❖ ರಜೆ ಅವಧಿಯಲ್ಲಿ ಆಯಾ ಮಾಹೆಯ ಅಂತ್ಯದಲ್ಲಿ ರಜೆ ವೇತನ ಪಾವತಿ (ನಿಯಮ – 197)
- ❖ ಪತ್ರಾಂಕಿತ ಅಧಿಕಾರಿಗಳು ರಜಾ ವೇತನವನ್ನು ರಜೆ ಪೂರ್ವಾವಧಿಯಲ್ಲಿ ವೇತನ ಪಡೆಯುತ್ತಿದ್ದ ಖಜಾನೆಯಲ್ಲಿ ಪಡೆಯಲು ಅರ್ಹರು.
- ❖ 20 ದಿನಗಳು ರಜೆ ಮೀರಿದ ಅವಧಿಗೆ ಮಹಾಲೇಖಪಾಲಕರಿಂದ ರಜೆ ವೇತನ ದೃಢೀಕರಣ ಪತ್ರ ಪಡೆದು ಹಾಜರು ಪಡಿಸಬೇಕು. (ನಿಯಮ – 199)

**ರಜಾ ಮಂಜೂರಾತಿ – ವಿವೇಚನಾತ್ಮಕ ಅಧಿಕಾರ (ನಿಯಮ – 143)**

ಹೆಚ್ಚಿನ ಸಿಬ್ಬಂದಿ ರಜಾ ಕೋರಿಕೆ ಸಲ್ಲಿಸಿದ್ದು ಸಾರ್ವಜನಿಕ ಹಿತಾಸಕ್ತಿಯಿಂದ ಎಲ್ಲಾ ನೌಕರರ ಮನವಿ ಪರಿಸ್ಕರಿಸಲಾಗದಿದ್ದಲ್ಲಿ ವಿವೇಚನಾತ್ಮಕ ನಿರ್ಧಾರ ಕೈಗೊಳ್ಳುವಾಗ ಪರಿಗಣಿಸುವ ಅಂಶಗಳು.

- ○ ಯಾವ ನೌಕರರಿಗೆ ರಜೆ ಉಪಯೋಗಿಸಿಕೊಳ್ಳಲು ಅವಕಾಶ ನೀಡಿಕೆ.

- ಅರ್ಜಿದಾರರಿಗೆ ಲಭ್ಯವಿರುವ ರಜೆ ಪ್ರಮಾಣ.
- ಅರ್ಜಿದಾರರು ಪೂರ್ಣಗೊಳಿಸಿರುವ ಸೇವಾ ಅವಧಿ.
- ಹಿಂದೆ ರಜಾ ಅವಧಿಯಲ್ಲಿ ಕರ್ತವ್ಯಕ್ಕೆ ಕರೆ ನೀಡಿ ರಜೆ ಮೊಟಕುಗೊಳಿಸಲ್ಪಟ್ಟ ನೌಕರರು.
- ಹಿಂದೆ ಸಾರ್ವಜನಿಕ ಹಿತಾಸಕ್ತಿಯಿಂದ ರಜೆ ತಿರಸ್ಕರಿಸುವ ಸಂದರ್ಭ.

## ನಿವೃತ್ತಿ ವೇತನ ಸೌಲಭ್ಯ:

ಪ್ರಸ್ತುತ 60 ವರ್ಷಗಳ ಪೂರ್ಣಗೊಳಿಸಿದ ಶಿಕ್ಷಕರು ವಯೋನಿವೃತ್ತಿ ಹೊಂದವರು. ವಯೋನಿವೃತ್ತಿ ಹೊಂದಿದ ಮಾರನೇ ದಿನದಿಂದಲೇ ನಿವೃತ್ತಿ ವೇತನಕ್ಕೆ ಅರ್ಹರಾಗುತ್ತಾರೆ. ಆದರೆ, 2005 ಏಪ್ರಿಲ್ 1ರ ನಂತೆ ನೇಮಕಾತಿ ಹೊಂದಿದ ಸರ್ಕಾರಿ ನೌಕಕರಿಗೆ ನಿವೃತ್ತಿ ವೇತನ ಕೊಡುವುದನ್ನು ನಿಲ್ಲಿಸಿ, ಅವರ ಪ್ರತಿ ತಿಂಗಳ ಸಂಬಳದಲ್ಲಿ 10% ಖಜಾನೆಯಲ್ಲಿ ಜಮಾ ಮಾಡಿಕೊಂಡು, ಪ್ರತಿ ತಿಂಗಳು ಸರ್ಕಾರ 10% ಸೇರಿಸುತ್ತದೆ.

## ನೂತನ ನಿವೃತ್ತಿ ಯೋಜನೆಯ ಪ್ರಮುಖ ಅಂಶಗಳು

ದಿನಾಂಕ 31/03/2006ರ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ(ವಿಶೇಷ) 04 ಪಿಇಟಿ 2005 ಮೇರೆಗೆ ದಿನಾಂಕ 01/04/2006ರಂದು ಅಥವಾ ತದನಂತರ ಸರ್ಕಾರಿ ಸೇವೆಗೆ ಸೇರುವ ಎಲ್ಲಾ ಹೊಸ ನೌಕರರಿಗೆ ಪ್ರಸ್ತುತವಿರುವ ಪ್ರಯೋಜನಾತ್ಮಕ ನಿವೃತ್ತಿ ಸೌಲಭ್ಯಕ್ಕೆ ಬದಲಾಗಿ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ನಿವೃತ್ತಿವೇತನ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೆ ತಂದಿದೆ. ಈ ಯೋಜನೆಯ ಲೆಕ್ಕ ನಿರ್ವಹಣಾ ವಿಧಾನವನ್ನು ದಿನಾಂಕ 16/06/2007ರ ಸರ್ಕಾರಿ ಆದೇಶದಲ್ಲಿ ಸಂಖ್ಯೆ ಆಇ79 ಟಿ.ಎ.ಆರ್.2006 ನಮೂನೆಗಳ ಸಹಿತವಾಗಿ ಮುಂದೆ ವಿವರಿಸಲಾಗಿದೆ.




1. ಸರ್ಕಾರಿ ಸೇವೆಗೆ ಸೇರಿದ ಕೂಡಲೇ ನೌಕರರು ತನ್ನ ಹೆಸರು ಪದನಾಮ, ವೇತನಶ್ರೇಣಿ, ಜನ್ಮದಿನಾಂಕ, ನಾಮನಿರ್ದೇಶನವನ್ನು ನಿಗಧಿತ ನಮೂನೆಯಲ್ಲಿ ಒದಗಿಸಬೇಕು.
2. ಸರ್ಕಾರಿ ನೌಕರರ ಮೂಲವೇತನದ ಮತ್ತು ಅದರ ಮೇಲೆ ದೊರೆಯುವ ತುಟ್ಟಿಭತ್ಯೆಯು ಸೇರಿದಂತೆ ಶೇಕಡ 10ರಷ್ಟು ಕಟಾವಣೆ ಮಾಡಿ 'ನಿವೃತ್ತಿ ವೇತನ ನಿಧಿ'ಗೆ ಸಂದಾಯವನ್ನು ಹಣತೆಗೆಯುವ, ವೇತನ ಬಟವಾಡೆ ಮಾಡುವ ಖಜಾನಾಧಿಕಾರಿಗಳು ಮಾಡಬೇಕು.
3. ಒಂದನೆ ಹಂತವಾಗಿ ಸರ್ಕಾರವು ನೀಡುವ ಸರಿಸಮಾನವಾದ ಕೊಡುಗೆಯನ್ನು ಸಹ 01/04/2006ರಿಂದ ಜಾರಿಯಾಗುವಂತೆ ಪರಿಷ್ಕೃತ ಮೂಲವೇತನ ಮತ್ತು ತುಟ್ಟಿ ಭತ್ಯೆಯ ಮೇಲೆ ಸಂದಾಯಮಾಡಬೇಕು ಮತ್ತು ಸರ್ಕಾರಿ ನೌಕರರಿಂದ ಕೊಡುಗೆ ಬಾಕಿಯನ್ನು ಕಟಾವಣೆ ಮಾಡುವ ವಿಧಾನವು ಸರ್ಕಾರಿ ಸಂದಾಯ ಮಾಡುವ ಸರಿಸಮಾನವಾದ ಕೊಡುಗೆಯ ಬಾಕಿಗೂ ಸಮಾನವಾಗಿ ಅನ್ವಯಿಸಬೇಕು.
4. ಸರ್ಕಾರದಿಂದ ಸರಿಸಮಾನವಾದ ಕೊಡುಗೆ ಸಂದಾಯವು ಸಹ ಸರ್ಕಾರವು ತುಟ್ಟಿ ಭತ್ಯೆಯನ್ನು ಪರಿಷ್ಕರಣೆಯನ್ನು ಮಂಜೂರು ಮಾಡಿದಾಗಲೆಲ್ಲಾ ಪರಿಷ್ಕೃತ ತುಟ್ಟಿಭತ್ಯೆ ಮತ್ತು ಅದು ಜಾರಿಗೆ ಬರುವ ದಿನಾಂಕದಿಂದ ಅನ್ವಯಿಸತಕ್ಕದ್ದು.
5. ಜಿಲ್ಲಾ ಖಜಾನೆಗಳು ಹಣತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿವಾರು ಮತ್ತು ನೌಕರಿವಾರು ಕ್ರೋಢೀಕರಿಸಿ ಒಟ್ಟು ಕಟಾವಣೆಗಳನ್ನು ತಾಳೆ ನೋಡಿ ಆಯಾ ತಿಂಗಳ ಅಂಕಿಅಂಶವನ್ನು ಕೇಂದ್ರಿಯ ದಾಖಲೆ ನಿರ್ವಹಣಾ ಏಜೆನ್ಸಿಗೆ ವರ್ಗಾಯಿಸಬೇಕು.
6. ಕೇಂದ್ರಿಯ ದಾಖಲೆ ನಿರ್ವಹಣಾ ಏಜೆನ್ಸಿಯು ಒಂದು ಅಸದೃಶವಾದ 14 ಅಂಕಿಗಳ ಖಾಯಂ ವಿಶ್ರಾಂತಿ ವೇತನ ಸಂಖ್ಯೆಯನ್ನು (PPAN) ನೀಡಬೇಕು.
7. ನೂತನ ವಿಶ್ರಾಂತಿ ವೇತನ ಯೋಜನೆಯಡಿಯಲ್ಲಿ ಸರ್ಕಾರಿ ನೌಕರರನ್ನು ಒಂದು ಕಛೇರಿಯಿಂದ ಇನ್ನೊಂದೆಡೆಗೆ ವರ್ಗಾಯಿಸಿದಾಗ ಹಣ ತೆಗೆಯುವ ಅಧಿಕಾರಿಯು ಸರ್ಕಾರಿ ನೌಕರನ ವಂತಿಗೆಯನ್ನು ಯಾವ ತಿಂಗಳಿನವರೆಗೆ ಕಟಾಯಿಸಲಾಗಿದೆ ಎಂಬುದನ್ನು ನೌಕರರ ಅಂತಿಮ ವೇತನ ಪ್ರಮಾಣ ಪತ್ರದಲ್ಲಿ (PPAN) ಸಹಿತವಾಗಿ ಸ್ಪಷ್ಟವಾಗಿ ನಮೂದಿಸಬೇಕು.
8. ಈ ನೂತನ ನಿವೃತ್ತಿ ವೇತನ ಯೋಜನೆಯನ್ನು ನಿವೃತ್ತಿ ವೇತನ ನಿಧಿನಿಯಂತ್ರಕ ಮತ್ತು ಅಭಿವೃದ್ಧಿ ಏಜೆನ್ಸಿಯು ನೀಡಿದ ಸ್ವರೂಪಕ್ಕನುಸಾರ ಅನುಷ್ಠಾನಗೊಳಿಸಲಾಗುತ್ತದೆ.

9. ಈ ಯೋಜನೆ ಅನುಷ್ಠಾನಕ್ಕೆ ಖಜಾನೆಗಳ ನಿರ್ದೇಶಕರು ರಾಜ್ಯ ನೋಡಲ್ ಅಧಿಕಾರಿಯಾಗಿರುತ್ತಾರೆ. (ಸ.ಆ.ಸಂಖ್ಯೆ FD(SPL) 28 PEN 2009 ದಿನಾಂಕ 19/01/2010.
10. ಈ ಯೋಜನೆಗೆ ರಾಷ್ಟ್ರೀಯ ಭದ್ರತಾ ಡಿಪಾಸಿಟರಿ ಸಂಸ್ಥೆಯ ಕೇಂದ್ರ ದಾಖಲೆ ನಿರ್ವಹಣೆ ಏಜೆನ್ಸಿ (CRA) ಯಾಗಿ ನಿಯೋಜಿತವಾಗಿದ್ದು ಪ್ರತಿಯೊಬ್ಬ ನೌಕರನ ವಂತಿಕೆ ಹೂಡಿಕೆ ಶಿಲ್ಕು ಹಾಗೂ ವರ್ಷಾಸನವು ಸೇರಿದಂತೆ ಯೋಜನೆಯ ಸಂಪೂರ್ಣ ದಾಖಲೆಗಳನ್ನು ನಿರ್ವಹಿಸತಕ್ಕದ್ದು.
11. ಈ ಏಜೆನ್ಸಿಯು ಚಂದಾದಾರನ ದತ್ತಾಂಶವನ್ನು ಸೃಷ್ಟಿಸಿ ಏಕಮಾತ್ರ ಖಾಯಂ ವಿಶ್ರಾಂತಿ ವೇತನ ಖಾತೆಯನ್ನು (PPAN) ತೆಗೆಯಬೇಕು.
12. ಸ.ಆ.ಸಂ.FD(SPL) 28 PEN 2009 ದಿನಾಂಕ 29/03/2010ರ ಮೇರೆಗೆ ಈ ನೂತನ ನಿವೃತ್ತಿ ವೇತನ ಯೋಜನೆಯ ನಿರ್ವಹಣೆ ಬಗ್ಗೆ ಮಾರ್ಗದರ್ಶಿ ಸೂಚನೆ ನೀಡಿದ್ದು, ಅದರಂತೆ ಖಜಾನೆ ನಿರ್ದೇಶಕರು ಕೇಂದ್ರ ದಾಖಲೆ ನಿರ್ವಹಣೆ ಏಜೆನ್ಸಿಯೊಡನೆ ನೋಂದಣಿ ಮಾಡಿಸಬೇಕು.
13. ಈ ಏಜೆನ್ಸಿಗೆ ವೇತನ ಬಟವಾಡೆ ಅಧಿಕಾರಿಯು ಒಮ್ಮೆ ಮಾತ್ರ ನೋಂದಾಯಿಸಿಕೊಳ್ಳಬಹುದಾಗಿದ್ದು ಅದಕ್ಕೆ ನೂತನ ನಿವೃತ್ತಿ ವೇತನ ಯೋಜನೆಯ ನೋಂದಣಿ ಸಂಖ್ಯೆ ಹಾಗೂ ಖಾಯಂ ನಿವೃತ್ತಿ ವೇತನ ಖಾತೆ ಸಂಖ್ಯೆಯನ್ನು ಏಜೆನ್ಸಿ ನೀಡಬೇಕು. ಖಜಾನೆಗೆ/ನೂತನ ನಿವೃತ್ತಿ ಯೋಜನೆ ಕೋಶಕ್ಕೆ ಎನ್.ಪಿ.ಎಸ್. ಸಲ್ಲಿಸುವಾಗ ಈ ಸಂಖ್ಯೆಗಳನ್ನು ನಮೂದಿಸಬೇಕು.
14. ಪ್ರಸ್ತುತ ವಂತಿಕೆಗಳು 2010ರ ಮಾರ್ಚಿ ತಿಂಗಳಿನಿಂದ ಆರಂಭವಾಗಿದ್ದು ಎಪ್ರಿಲ್ 2010ರಿಂದ ಸಂದಾಯ ಮಾಡಬೇಕು. ಆದರೆ ನೋಂದಣಿ ಮಾರ್ಚಿ ನಲ್ಲಿ ಸಾಧ್ಯವಾಗದೇ ವಿಳಂಬವಾದರೆ, ಏಜೆನ್ಸಿಯಲ್ಲಿ ನೋಂದಣಿಯಾದ ತಿಂಗಳಿನಿಂದ ಆರಂಭಿಸಬೇಕು.
15. ಈ ಯೋಜನೆಯಡಿ 1.4.2006ರ ನಂತರ ಸರ್ಕಾರಿ ನೌಕರರಿಗೆ ನಿಯೋಜಿನಾದ ಹಾಗೂ ಪ್ರಸ್ತುತ ವಂತಿಗೆ 2010ರ ಎಪ್ರಿಲ್‌ವರೆಗಿನ ಹಿಂಬಾಕಿ ವಂತಿಗೆಯನ್ನು ನೌಕರರು ಒಂದೇ ಇಡಿಗಂಟಿನಲ್ಲಿ ಅಥವಾ ಹಿಂಬಾಕಿ ತಿಂಗಳುಗಳ ಸಮಾನ ಸಂಖ್ಯೆಯಲ್ಲಿ ಮಾಸಿಕವಾರು ಸಂದಾಯ ಮಾಡಬಹುದು.
16. ಎಲ್ಲಾ ನೌಕರರ ಸರ್ಕಾರದ ಹಿಂಬಾಕಿ ವಂತಿಗೆಯನ್ನು ಶೇಕಡಾ 8ರ ಚಕ್ರಬಡ್ಡಿಯೊಂದಿಗೆ ಒಂದೇ ಇಡಿಗಂಟಿನಲ್ಲಿ ಸರ್ಕಾರವು ಸಂದಾಯ ಮಾಡಬೇಕು.
17. ಈ ಯೋಜನೆಯಂತೆ ಖಜಾನಾಧಿಕಾರಿಗಳು ನೋಡಲ್ ಅಧಿಕಾರಿಯಾಗಿದ್ದು, ಏಜೆನ್ಸಿ ಮತ್ತು ವೇತನ ಬಟವಾಡೆ ಅಧಿಕಾರಿಗಳ ನಡುವ ಮಧ್ಯಂತರಿಯಾಗಿ ಕೆಲಸ ಮಾಡಬೇಕು.
18. ಖಜಾನಾಧಿಕಾರಿಯು ಬಾಕಿ ವಂತಿಗೆ ನ್ಯಾಸ ಬ್ಯಾಂಕ್ ಸಂದಾಯ ದಾಖಲೆ 8324 ಲೆಕ್ಕ ಶೀರ್ಷಿಕೆಗೆ ದೈನಿಕ/ಸಾಪ್ತಾಹಿಕ/ಮಾಸಿಕ ವರ್ಗಾವಣೆಯ ತಖ್ತೆ: ಹಾಗೂ ಶಿಲ್ಕು ಇತ್ಯಾದಿ ನಿರ್ವಹಿಸಬೇಕು.
19. ವೇತನ ಬಟವಾಡೆ ಅಧಿಕಾರಿಯು ಈ ಯೋಜನೆಯಲ್ಲಿ ಪ್ರಾಥಮಿಕ ಪಾತ್ರವಹಿಸಲಿದ್ದು ಮೂಲವೇತನ ಅದಕ್ಕೆ ಸಂಬಂಧಿಸಿದ ತುಟ್ಟಿಭತ್ಯೆಯ ಶೇಕಡ 10ರಷ್ಟನ್ನು ಹಾಗೂ ಹಿಂಬಾಕಿ ವಂತಿಗೆಯನ್ನು ನೌಕರನು ಆಯ್ಕೆ ಮಾಡಿಕೊಂಡಂತೆ ಕಟಾಯಿಸಬೇಕು ಹಾಗೂ ಖಜಾನೆಗೆ ಮುಂದಿನ ಶೆಡ್ಯೂಲ್ ಹಾಗೂ ಬಿಲ್ಲುಗಳನ್ನು ಸಲ್ಲಿಸಬೇಕು.
20. ಸರ್ಕಾರಿ ನೌಕರ/ಚಂದಾದಾರರು ನಮೂನೆ ಎಸ್–1 ಭರ್ತಿಗೊಳಿಸಿ ಏಜೆನ್ಸಿಯೊಡನೆ ನೋಂದಾಯಿಸಿ PRANಸಂಖ್ಯೆಯನ್ನು ಪಡೆದು, ಹಿಂಬಾಕಿ ವಂತಿಗೆಯನ್ನು ಸಂದಾಯಮಾಡಲು ತನ್ನ ಆಯ್ಕೆಯನ್ನು ಸಂಬಂಧಿತ ವೇತನ ಬಟವಾಡೆ ಅಧಿಕಾರಿಗೆ ತಿಳಿಸಬೇಕು ಹಾಗೂ (CRA) ವೆಬ್ ಸೈಟ್‌ನಲ್ಲಿ ತನ್ನ ವೇತನ ಖಾತೆಯನ್ನು ಪರಿಶೀಲಿಸುತ್ತಿರಬೇಕು.
21. ಈ ಯೋಜನೆಯನ್ವಯ ಸೇವೆಯಲ್ಲಿರುವಾಗಲೇ ಸರ್ಕಾರಿ ನೌಕರರು ಮೃತನಾದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಪರಿಹಾರ ಧನ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ ಆಇ3.ಸೇ.ನಿ.ಸೇ.
ದಿನಾಂಕ 12/10/2010ರ ಮೇರೆಗೆ ಸೂಚನೆಗಳನ್ನು ನೀಡಲಾಗಿದೆ.ಈ ಆದೇಶದ ಮೇರೆಗೆ ಕಡಿಮೆ ಅವಧಿಯಲ್ಲಿ ಸೇವೆಸಲ್ಲಿಸದ್ದರೆ ಅವನ ವೇತನದ (ಉಪಲಬ್ಧಿಯ) 04 ಪಟ್ಟು, 05 ವರ್ಷಕ್ಕಿಂತ ಕಡಿಮೆ ಸೇವೆಸಲ್ಲಿಸಿದ್ದರೆ 12 ಪಟ್ಟು, 05 ವರ್ಷಕ್ಕಿಂತ ಹೆಚ್ಚು ಆದರೆ 20 ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿದ್ದರೆ 24 ಪಟ್ಟಷ್ಟು.20 ವರ್ಷಕ್ಕಿಂತಲೂ ಮೇಲ್ಪಟ್ಟು ಸೇವೆ ಸಲ್ಲಿಸಿದ್ದರೆ ಗರಿಷ್ಟ 30ರಷ್ಟು ಪರಿಹಾರ ಧನವನ್ನು ನೀಡಲು ಸರ್ಕಾರವು ಸೂಚಿಸಿರುತ್ತದೆ.(2018 ಪರಿಷ್ಕರಣೆಗೊಳಿಸಲಾಗಿದೆ).
22. ಈ ಪರಿಹಾರ ಧನವನ್ನು ಗ್ರೂಪ್ ಬಿ, ಸಿ, ಡಿ ಯವರಿಗೆ ಇಲಾಖಾ ಮುಖ್ಯಸ್ಥರು ಹಾಗೂ ಗ್ರೂಪ್ ಎ ಅಧಿಕಾರಿಗಳಿಗೆ ಸರ್ಕಾರವು ಮಂಜೂರು ಮಾಡುವ ಅಧಿಕಾರವನ್ನು ಸರ್ಕಾರಿ ಆದೇಶ ಸಂಖ್ಯೆ ಆಇ3.ಸೇ.ನಿ.ಸೇ.2010 ದಿನಾಂಕ 15/04/2011ರ ಮೇರೆಗೆ ನೀಡಲಾಗಿದೆ.
23. ಸರ್ಕಾರವು ತನ್ನ ಆದೇಶ ಸಂಖ್ಯೆ ಆಇ(ವಿಶೇಷ)1ಪಿಎನ್.2010 ದಿನಾಂಕ 10/01/2012ರ ಮೇರೆಗೆ ನೂತನ ಪಿಂಚಣಿ ವ್ಯವಸ್ಥೆಗೆ ಒಳಪಡುವ ಸರ್ಕಾರಿ ನೌಕರರು ಯಾವ ರೀತಿಯಾಗಿ PRAN ಸಂಖ್ಯೆಯನ್ನು ಪಡೆಯುವುದಕ್ಕೆ ನೋಂದಾಯಿಸುವ ಕಾರ್ಯವಿಧಾನವನ್ನು ನೀಡಿದೆ.
24. ಈ ನೂತನ ನಿವೃತ್ತಿ ವೇತನ ಯೋಜನೆಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಹಾಗೂ ಅದರ ಅಧೀನದಲ್ಲಿ ಬರುವ ವಸತಿ ಶಾಲೆಗಳ ಖಾಯಂ ಸಿಬ್ಬಂಧಿಗಳಿಗೆ ದಿನಾಂಕ 01/04/2006ರಿಂದಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಿದೆ.

ದಿನಾಂಕ 10/01/2018ರ ಪಿ.ಎಫ್.ಆರ್.ಡಿ.ಎ./2018/40/ಎಕ್ಸಿಟ್ ಪತ್ರದಂತೆ ಕನಿಷ್ಠ 3 ವರ್ಷಗಳ ಸೇವಾವಧಿ ಪೂರೈಸಿರುವ ನೌಕರರು ಕೆಳಗಿನ ಸಂದರ್ಭಗಳಲ್ಲಿ ತಮ್ಮ ಎನ್.ಪಿ.ಎಸ್. ಸೇವಾವಧಿಯಲ್ಲಿ ಗರಿಷ್ಠ 3 ಬಾರಿ ತಮ್ಮ ವಂತಿಗೆಯ 25% ಹಣವನ್ನು ಭಾಗಶಃ ಹಿಂಪಡೆಯಬಹುದು:

1. ನೌಕರರ ಮಕ್ಕಳ ಉನ್ನತ ವ್ಯಾಸಂಗ
2. ನೌಕರರ ಮಕ್ಕಳ ವಿವಾಹ
3. ನೌಕರರ ಹೆಸರಿನಲ್ಲಿ/ಪತಿ/ಪತ್ನಿ ಹೆಸರಿನಲ್ಲಿ ಹೊಸ ಮನೆ ಖರೀದಿಸಲು/ಕಟ್ಟಲು
4. ತೀವ್ರತರ ಖಾಯಿಲೆಗಳಿಗೆ ಚಿಕಿತ್ಸೆ ಪಡೆಯಲು.

ಎನ್.ಪಿ.ಎಸ್. ಸಂಬಂಧಿಸಿದಂತೆ NSDLe-gov ನಿಂದ NPS ಮೊಬೈಲ್ ಆಪ್ ಇದ್ದು ಉಪಯೋಗ ಪಡೆಯಬಹುದು.

**ಲಿಂಕ್‌ಗೆ ಕ್ಲಿಕ್ಕಿಸಿ https://npscra-nsdl.co.in**

ಎನ್.ಪಿ.ಎಸ್. ನೌಕರರು ನಿಗದಿತ ನಮೂನೆ ಬಳಸಿತಮ್ಮ ಎನ್.ಪಿ.ಎಸ್. ಖಾತೆಗೆ ಆಧಾರ್ ಲಿಂಕ್ ಮಾಡುವುದು.

## ನಿವೃತ್ತಿ ಉಪದಾನ

ಈ ಕೋಷ್ಟಕದ ಪ್ರಕಾರ ನಿವೃತ್ತಿ ಉಪದಾನವನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಕೊನೆಯ ತಿಂಗಳ ವೇತನ x ಅರ್ಹತಾದಾಯಕ ಸೇವೆ (ಅರ್ಧ ವರ್ಷಗಳಲ್ಲಿ

4

**ನಿವೃತ್ತಿ ವೇತನ ಪರಿವರ್ತನಾ ಮೌಲ್ಯ:** ಶಿಕ್ಷಕರು ನಿವೃತ್ತಿಯಾಗುವಾಗ ಅಪೇಕ್ಷಿಸಿದ್ದಲ್ಲಿ ನಿವೃತ್ತಿ ವೇತನದ 1/3 ಭಾಗಕ್ಕೆ ಮೀರದಂತೆ ಪರಿವರ್ತನಾ ಮೌಲ್ಯ ಲೆಕ್ಕಾಚಾರ ಮಾಡಿ ಬಿಡುಗಡೆಮಾಡಲಾಗುವುದು.

**ಕುಟುಂಬ ಪಿಂಚಣಿ:**ಶಿಕ್ಷಕರು ಸೇವೆಯಲ್ಲಿದ್ದಾಗ ಅಥವಾ ನಿವೃತ್ತಿಯಾಗಿರುವಾಗ ಮೃತಪಟ್ಟಲ್ಲಿ ಕುಟುಂಬಕ್ಕೆ ಪಿಂಚಣಿ ನೀಡಲಾಗುತ್ತದೆ.

**ಸೇವಾ ಪುಸ್ತಕ:**ಸೇವಾ ಪುಸ್ತಕದಲ್ಲಿ ಶಿಕ್ಷಕರು ಸೇವೆಗೆ ಸೇರಿದ ದಿನಾಂಕದಿಂದ ನಿವೃತ್ತಿಯಾಗುವವರೆಗೂ ಅವರ ಎಲ್ಲಾ ವೈಯಕ್ತಿಕ ಹಾಗೂ ಸೇವಾ ವಿವರಗಳು, ವೇತನ ವಿವರಗಳು, ರಜೆ ವಿವರಗಳು ಕಾಲಕಾಲಕ್ಕೆ ನಮೂದಿಸಲ್ಪಡುತ್ತವೆ.

## ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣನಿಧಿಯಡಿಯಲ್ಲಿ(TBF/SWF) ಶಿಕ್ಷಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳು

1. **ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ವೈದ್ಯಕೀಯ ಚಿಕಿತ್ಸೆಗೆ ಧನ ಸಹಾಯ:**ಶಿಕ್ಷಕರಿಗೆ/ನಿವೃತ ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ಖಾಯಿಲೆಯ ತೀವ್ರತೆಯನ್ನು ಆಧರಿಸಿ ಗರಿಷ್ಠ ರೂ. 50,000/- ಗಳ ಮಿತಿಗೊಳಪಟ್ಟು ವೈದ್ಯಕೀಯ ಧನ ಸಹಾಯವನ್ನು ನೀಡಲಾಗುತ್ತಿದೆ. ಎ, ಬಿ, ಸಿ ಎಂದು ಖಾಯಿಲೆಗಳನ್ನು ವರ್ಗೀಕರಿಸಲಾಗಿದ್ದು, ಪ್ರತಿ ಶಿಕ್ಷಕರಿಗೆ ಪ್ರತಿ ವರ್ಷಕ್ಕೆ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಮಂಜೂರು ಮಾಡಲಾಗುತ್ತದೆ. ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಹಾಗೂ ಪಾಲಿಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆದ ಶಿಕ್ಷಕರು ಈ ಧನಸಹಾಯಕ್ಕೆ ಅರ್ಹರಿರುತ್ತಾರೆ. ನಿಗದಿತ ಅರ್ಜಿ ಜೊತೆ ಮೂಲ ಬಿಲ್ಲುಗಳು, ಮೂಲ ಬಿಡುಗಡೆ ಸಾರಾಂಶ (ಡಿಸ್‌ಚಾರ್ಜ ಸಮ್ಮರಿ) ಹಾಗೂ ವೈದ್ಯರ ದೃಢೀಕರಣ ಮತ್ತು ಅಜೀವ ಸದಸ್ಯತ್ವದ ಗುರ್ತಿನ ಚೀಟಿ ಪ್ರತಿ ಇರಬೇಕು.

2. **ಸೇವೆಯಲ್ಲಿರುವಾಗ ಹಾಗೂ ನಿವೃತ್ತಿಯ ನಂತರ ಮೃತಹೊಂದಿದ ಶಿಕ್ಷಕರ ಕುಟುಂಬಗಳಿಗೆ ಕುಟುಂಬ ನಿರ್ವಹಣೆಗಾಗಿ ಧನ ಸಹಾಯ:** ಶಿಕ್ಷಕರು ಸೇವೆಯಲ್ಲಿರುವಾಗಲೇ ಮೃತಪಟ್ಟಿದ್ದು ಅವರ ಕುಟುಂಬಕ್ಕೆ ರೂ.10,000/- ಗಳನ್ನು ಕುಟುಂಬ ನಿರ್ವಹಣೆಗಾಗಿ ಧನ ಸಹಾಯ ನೀಡಲಾಗುವುದು.ನಿವೃತ್ತಿಯ ನಂತರ ಮೃತಪಟ್ಟ ಶಿಕ್ಷಕರ ಕುಟುಂಬದವರಿಗೂ ಸಹ ರೂ.5,000/- ಗಳ ಧನಸಹಾಯವನ್ನು ನೀಡಲಾಗುವುದು.ನಿವೃತ್ತ ಶಿಕ್ಷಕರು ಮರಣ ಹೊಂದಿದ 180 ದಿನಗಳೊಳಗೆ ಅವರ ಅವಲಂಬಿತರು ನಿವೃತ್ತ ಶಿಕ್ಷಕರ ಮರಣ ಪ್ರಮಾಣ ಪತ್ರ ಹಾಗೂ ವಾರಸುದಾರರ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.
3. **ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ:**ಶಿಕ್ಷಕರಿಗೆ ಹಾಗೂ ನಿವೃತ್ತ ಶಿಕ್ಷಕರಿಗೆ ಪಿ.ಯು.ಸಿ ಯಿಂದ ಪದವಿ ತರಗತಿಗಳಲ್ಲಿ (ಡಿಪ್ಲೊಮಾ ಸೇರಿದಂತೆ) ವ್ಯಾಸಂಗ ಮಾಡುತ್ತಿರುವ ಅವರ ಮಕ್ಕಳ ವ್ಯಾಸಂಗಕ್ಕಾಗಿ ಕೋರ್ಸುಗಳನ್ನು ಆಧರಿಸಿ ಪ್ರತಿವರ್ಷ ಕನಿಷ್ಠ ರೂ. 1000/- ರಿಂದ ಗರಿಷ್ಠ ರೂ. 3000/-ಗಳ ಧನಸಹಾಯವನ್ನು ನೀಡಲಾಗುತ್ತಿದೆ. ಶಿಕ್ಷಕರ ಒಂದು ವಿದ್ಯಾರ್ಥಿ ಮಗುವಿಗೆ ಈ ಧನಸಹಾಯ ಸೀಮಿತವಾಗಿರುತ್ತದೆ. ತಂದೆ ಮತ್ತು ತಾಯಿ ಇಬ್ಬರೂ ಶಿಕ್ಷಕರಾಗಿದ್ದ ಸಂದರ್ಭದಲ್ಲಿ ಒಂದು ವಿದ್ಯಾರ್ಥಿಗೆ ಈ ಧನಸಹಾಯ ಸೀಮಿತವಾಗಿರುತ್ತದೆ.

4. **ಶಿಕ್ಷಕರ/ನಿವೃತ್ತ ಶಿಕ್ಷಕರ ಮಕ್ಕಳಿಗೆ ಪ್ರತಿಭಾ ವಿದ್ಯಾರ್ಥಿ ವೇತನ:** ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಜಿಲ್ಲೆಗೆ ಅಂಕ ಗಳಿಸಿದಂತಹ ಮತ್ತು ಅಂತಿಮ ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಸಿ.ಎ, ಬಿಬಿಎಂ, ಬಿ.ಹೆಚ್.ಎಂ ಮುಂತಾದ ಪದವಿಗೆ ಸಂಬಂಧಿಸಿದ ತತ್ಸಮಾನ ಕೋರ್ಸ್‌ಗಳು ಮತ್ತು 6ನೇ ಸೆಮಿಸ್ಟರ್ ಬಿ.ಇ. ಎರಡನೇ ಫೇಸ್ ಎಂ.ಬಿ.ಬಿ.ಎಸ್ ಹಾಗೂ ಪ್ರಥಮ ವರ್ಷದ ಎಂ.ಎ, ಎಂ.ಎಸ್ಸಿ, ಎಂ.ಕಾಂ, ಎಂ.ಎಡ್, ಎಲ್.ಎಲ್.ಬಿ ಪರೀಕ್ಷೆಗಳಲ್ಲಿ ವಿಶ್ವವಿದ್ಯಾನಿಲಯದ ಹಂತದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ (ಶಿಕ್ಷಕರ ಮಕ್ಕಳಿಗೆ) ಪ್ರತಿಭಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.

5. **ಗುರುಭವನಗಳ ಹಾಗೂ ಅತಿಥಿ ಗೃಹಗಳ ನಿರ್ಮಾಣಕ್ಕೆ ಅನುದಾನ:** ಶಿಕ್ಷಕರ ಸಭೆ ಸಮಾರಂಭ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ತಾಲ್ಲೂಕು/ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸುವ ಗುರುಭವನಕ್ಕೆ ಸಭಾಂಗಣದ ವಿಸ್ತೀರ್ಣವನ್ನಾಧರಿಸಿ ಗರಿಷ್ಠ 25 ಲಕ್ಷ ರೂ. ಗಳ ಅನುದಾನವನ್ನು ಹಾಗೂ ಅತಿಥಿಗೃಹಗಳ ನಿರ್ಮಾಣಕ್ಕೆ (ತಲಾ ಕೊಠಡಿಗೆ ರೂ. 1,10,000/– ರಂತೆ) ಗರಿಷ್ಠ 11 ಲಕ್ಷ ರೂ.ಗಳ ಅನುದಾನವನ್ನು ನೀಡಲಾಗುತ್ತದೆ. ಕಟ್ಟಡ ನಿರ್ಮಾಣಕ್ಕೆ ಅಗತ್ಯ ಬೀಳಬಹುದಾದ ಅನುದಾನವನ್ನು ಆಯಾ ಗುರುಭವನ ಸಮಿತಿಯ ಹಾಗೂ ಶಿಕ್ಷಕರ ಸಂಘದ ವತಿಯಿಂದ ಕ್ರೋಢೀಕರಿಸಬೇಕಾಗುತ್ತದೆ.

## ಶಿಕ್ಷಕರಿಗೆ ಪ್ರಶಸ್ತಿ

**ಅ. ಜಿಲ್ಲಾ ಮಟ್ಟದ ಪ್ರಶಸ್ತಿ:** ಶ್ಲಾಘನೀಯ ಸೇವೆ ಸಲ್ಲಿಸಿದ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರನ್ನು ಗುರುತಿಸಿ ಜಿಲ್ಲಾ ಮಟ್ಟದ ಪ್ರಶಸ್ತಿ (ರೂ. 3,000/– ಗಳ ನಗದು ಬಹುಮಾನ) ಪ್ರಾಥಮಿಕ 204, ಪ್ರೌಢ 162 ಒಟ್ಟು 366 ಶಿಕ್ಷಕರಿಗೆ ಪ್ರತಿ ವರ್ಷ ಪ್ರಶಸ್ತಿಗಳನ್ನು ನೀಡಲಾಗುತ್ತದೆ.ಜಿಲ್ಲಾ ಹಂತದ ಸಮಿತಿಗಳಿಂದ ಆಯ್ಕೆಯಾಗುವ ಈ ಶಿಕ್ಷಕರ ಪಟ್ಟಿಗೆ ಯಾವುದೇ ಶಿಕ್ಷಕರು ನೇರವಾಗಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

**ಆ. ವಿಶೇಷ ಪ್ರಶಸ್ತಿ:**ರಾಜ್ಯಮಟ್ಟದಲ್ಲಿ ವೈಜ್ಞಾನಿಕ ಹಾಗೂ ವಿನೂತನ ಕಾರ್ಯಗಳನ್ನು ಮಾಡಿದ ಎಂಟು ಶಿಕ್ಷಕರಿಗೆ ರೂ. 12000/– ರೂಗಳ ನಗದು ಬಹುಮಾನ ಹೊಂದಿದೆ.ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಪ್ರತಿ ವರ್ಷ ವೃತ್ತ ಪತ್ರಿಕೆಗಳಲ್ಲಿ ಪ್ರಕಟಗೊಳಿಸುವ ಮೂಲಕ ಅರ್ಹ ಶಿಕ್ಷಕರಿಂದ ಈ ಪ್ರಕ್ರಿಯೆಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.

**ಇ. ರಾಜೀವಗಾಂಧಿ ಸ್ಮಾರಕ ಪ್ರಶಸ್ತಿ:**ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಉತ್ತಮ ಸೇವೆ ಸಲ್ಲಿಸಿದ ಇಬ್ಬರು ಪ್ರತಿಭಾನ್ವಿತ ವಿಜ್ಞಾನ ವಿಷಯದ ಶಿಕ್ಷಕರಿಗೆ ರಾಜ್ಯಮಟ್ಟದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಪ್ರತಿ ವರ್ಷ ವೃತ್ತ ಪತ್ರಿಕೆಗಳಲ್ಲಿ ಪ್ರಕಟಗೊಳಿಸುವ ಮೂಲಕ ಅರ್ಹ ಶಿಕ್ಷಕರಿಂದ ಈ ಪ್ರಕ್ರಿಯೆಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.ರೂ. 12000/– ರೂಗಳ ನಗದು ಬಹುಮಾನ ಹೊಂದಿದೆ.

6. **ತಾಲ್ಲೂಕು ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆಗೆ ಶಿಕ್ಷಕರಿಗೆ ಪ್ರಶಸ್ತಿ ಧನ:** ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ತಾಲ್ಲೂಕು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆ ಮಾಡಲಾಗುತ್ತದೆ. ರಾಜ್ಯ ಮಟ್ಟದಲ್ಲಿ ಮೊದಲ ಮೂರು ಪ್ರಶಸ್ತಿ ಪಡೆದ ಶಿಕ್ಷಕರಿಗೆ ತಲಾ ರೂ. 5000/–, ರೂ, 3,000/– ಹಾಗೂ ರೂ. 2,000/– ಗಳನ್ನು ನಗದು ರೂಪದಲ್ಲಿ ನೀಡಲಾಗುತ್ತದೆ.ಕಲಿಕಾ ವಸ್ತುಗಳ ತಯಾರಿಕೆ ಸ್ಪರ್ಧೆಯಲ್ಲಿ ಭಾಗವಹಿಸಿದ ಶಿಕ್ಷಕರಿಗೆ ತಯಾರಿ ಕಾರ್ಯಕ್ಕಾಗಿ ರೂ. 500/– ರ ಮೊತ್ತವನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ.

7. **ಶಿಕ್ಷಕರಿಗೆ ಸುರಕ್ಷಾ ಪರಿಹಾರ ಯೋಜನೆ:**ಆಕಸ್ಮಿಕವಾಗಿ ಶಿಕ್ಷಕರಿಗೆ ಅಪಘಾತ /ಅನಾಹುತಗಳಾದಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ವತಿಯಿಂದ 2001–02 ನೇ ಸಾಲಿನಿಂದ **"ಶಿಕ್ಷಕರ ಸುರಕ್ಷಾ ಪರಿಹಾರ ಯೋಜನೆ"** ಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ಸೌಲಭ್ಯಗಳು (ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆ/ಕಾಲೇಜುಗಳಲ್ಲಿ) ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಅನ್ವಯವಾಗಿತ್ತದೆ."ಶಿಕ್ಷಕರ ಸುರಕ್ಷಾ ಪರಿಹಾರ ಯೋಜನೆ**"** ಯ ಪರಿಹಾರ ಮೊತ್ತ ರೂ.ರೂ. 50,000/– ಗಳ ವರೆಗೆ ಇರುತ್ತದೆ.

8. **ಶಿಕ್ಷಕರ ದಿನಾಚರಣೆ" ಸಮಾರಂಭ ಆಯೋಜನೆಗೆ ಧನಸಹಾಯ** :ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ **"**ಶಿಕ್ಷಕರ ದಿನಾಚರಣೆ**"** ಸಮಾರಂಭ ಆಯೋಜನೆಗಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗೆ ಹಾಗೂ ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗಳಿಗೆ ಧನಸಹಾಯ ನೀಡಲಾಗುತ್ತದೆ.

9. **ಲ್ಯಾಪ್‌ಟಾಪ್ ಖರೀದಿಗಾಗಿ ಬಡ್ಡಿರಹಿತ ಸಾಲ:**ಲ್ಯಾಪ್‌ಟಾಪ್ ಖರೀದಿಗೆ ಪ್ರತಿ ತಾಲ್ಲೂಕಿನ 10 ಶಿಕ್ಷಕರುಗಳಿಗೆ ತಲಾ ರೂ. 30,000/– ಗಳ ಬಡ್ಡಿರಹಿತ ಸಾಲ ನೀಡಿ, ಮುಂದಿನ 10 ತಿಂಗಳಲ್ಲಿ ತಿಂಗಳಿಗೆ ರೂ.3,000/– ದಂತೆ ಸಂಬಳದಲ್ಲಿ ಕಟಾಯಿಸಿ ಬಡ್ಡಿರಹಿತವಾಗಿ ಹಿಂಪಡೆಯಲಾಗುವುದು.ಟ್ಯಾಬ್ ಖರೀದಿಗೆ ರೂ.10000/– ಮುಂಗಡ ನೀಡಲಾಗುವುದು.

## ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ನವದೆಹಲಿಯಿಂದ ಶಿಕ್ಷಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳು

1. **ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ವೈದ್ಯಕೀಯ ಚಿಕಿತ್ಸೆಗೆ ಧನ ಸಹಾಯ:**ಶಿಕ್ಷಕರಿಗೆ / ನಿವೃತ ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ತೀವ್ರವಾದ ಮಾರಕ ರೋಗಗಳಿಗೆ ತಲಾ ರೂ. 20,000/– ಗಳ ವೈದ್ಯಕೀಯ ಧನಸಹಾಯವನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ.

2. **ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ:**ಶಿಕ್ಷಕರಿಗೆ ಹಾಗೂ ನಿವೃತ್ತ ಶಿಕ್ಷಕರಿಗೆ ವೃತ್ತಿ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ರೂ. 15,000/– ಗಳ ಧನಸಹಾಯವನ್ನು ನೀಡಲಾಗುತ್ತದೆ.ಶಿಕ್ಷಕರ ಒಂದು ವಿದ್ಯಾರ್ಥಿ ಮಗುವಿಗೆ ಈ ಧನಸಹಾಯ ಸೀಮಿತವಾಗಿರುತ್ತದೆ.ಅರ್ಜಿ ಸಲ್ಲಿಸುವಾಗ ಮೂಲ ಫೀ ರಸೀದಿಯನ್ನು ಲಗತ್ತಿಸಿರಬೇಕು.

3. **ಗುರುಭವನಗಳ ನಿರ್ಮಾಣಕ್ಕೆ ನವದೆಹಲಿಯಿಂದ ಅನುದಾನ** :ಐತಿಹಾಸಿಕ ಜಿಲ್ಲಾ ಕೇಂದ್ರಗಳಲ್ಲಿ ಗುರುಭವನ ನಿರ್ಮಾಣಕ್ಕೆ ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ರಾ.ಶಿ.ಕ.ಪ್ರ, ನವದೆಹಲಿಯ ವತಿಯಿಂದ ರೂ. 20 ಲಕ್ಷಗಳವರೆಗೆ ಅನುದಾನ ಬಿಡುಗಡೆ ಮಾಡಲಾಗುವುದು.

**ಅಜೀವ ಸದಸ್ಯತ್ವದ ವಿಶೇಷ ಯೋಜನೆ:**ಶಿಕ್ಷಕರಿಗೆ ಉತ್ತಮ ಸೌಲಭ್ಯಗಳನ್ನು ನೀಡುವ ದೃಷ್ಟಿಯಿಂದಲೂ ಮತ್ತು ನಿಧಿಗಳ ಆರ್ಥಿಕ ಸ್ಥಿತಿ ಉತ್ತಮ ಪಡಿಸುವ ಆಲೋಚನೆಯಿಂದಲೂ ಒಂದೇ ಬಾರಿಗೆ 1500/– ರೂ. ಪಾವತಿಸಿ ಅಜೀವ ಸದಸ್ಯತ್ವ ಪಡೆಯುವ ಯೋಜನೆ ಜಾರಿಗೆ ತರಲಾಗಿದೆ.ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗೆ ಚಲನ್/ಡಿ.ಡಿ. ಮೂಲಕ ಜಮಾ ಮಾಡಿ ನಿಗಧಿತ ಅಜೀವ ಸದಸ್ಯತ್ವದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ, 2 ಫೋಟೋ ಲಗತ್ತಿಸಿ ಅರ್ಜಿಯನ್ನು ಬೆಂಗಳೂರಿನ ನಿಧಿಗಳ ಕಛೇರಿಗೆ ಕಳುಹಿಸುವುದು.ನಿಧಿಗಳ ಕಛೇರಿಯಿಂದಲೇ ಶಿಕ್ಷಕರ ಶಾಲಾ/ಕಾಲೇಜಿನ ವಿಳಾಸಕ್ಕೆ ಅಜೀವ ಸದಸ್ಯತ್ವ ಕಾರ್ಡುಗಳನ್ನು ವಿತರಿಸಲಾಗುವುದು.

## ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು –1957

* ಸಂವಿಧಾನದ 309, 310 ಮತ್ತು 311 ರಡಿ ಸರ್ಕಾರಿ ನೌಕರರಿಗೆ ವಿಶೇಷವಾದ ಸೇವಾ ಸೌಲಭ್ಯಗಳು ಹಾಗೂ ಸೇವಾ ಭದ್ರತೆ ಇರುತ್ತದೆ.ಸೇವೆಯಲ್ಲಿ ನಿರಂತರವಾಗಿ ಮುಂದುವರೆಯಲು ಸಹ ಅವಕಾಶವಿರುತ್ತದೆ.
  ವಿನಾಕಾರಣ ಸೇವೆಯಿಂದ ತೆಗೆದುಹಾಕಲು ಅವಕಾಶವಿಲ್ಲ.
* ಅನೇಕ ಸರ್ಕಾರಿ ನೌಕರರು ಸರ್ಕಾರ ತಮಗೆ ವಹಿಸಿದ ಕೆಲಸ–ಕಾರ್ಯಗಳನ್ನು ನಿರ್ವಹಿಸುವಲ್ಲಿ ಅನೇಕ ರೀತಿಯ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಇವನ್ನು ಹತ್ತಿಕ್ಕುವ ಹಾಗೂ ನಿಯಂತ್ರಣಕ್ಕಾಗಿಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು –1957ನ್ನು ಜಾರಿಗೆ ತರಲಾಗಿದೆ.

## ಈ ನಿಯಮಗಳ ಸಂಕ್ಷಿಪ್ತ ವಿವರಣೆ ಈ ಮುಂದಿನಂತಿರುತ್ತದೆ:

* ಸರ್ಕಾರಿ ಸೇವೆಗಳನ್ನು ಗ್ರೂಪ್ ಎ.ಬಿ.ಸಿ.ಡಿ. ಎಂದು ವರ್ಗೀಕರಿಸಲಾಗಿದೆ.
* ಈ ರೀತಿ ವರ್ಗೀಕರಿಸಿದ ಸೇವೆಗಳಡಿ ಬರುವ ಸರ್ಕಾರಿ ನೌಕರರು ವಿವಿಧ ಸೇವಾ ನಿಯಮಗಳು, ಸರ್ಕಾರದ ನಿಯಂತ್ರಣಕ್ಕೆ ಒಳಪಡುತ್ತಾರೆ.
* ಯಾವುದೇ ವಿಧವಾದ ದಂಡನೆ ಅಥವಾ ತೊಂದರೆಗೆ ಒಳಗಾದಾಗ ಸರ್ಕಾರಿ ನೌಕರರು ಸಕ್ಷಮ ಮೇಲ್ಮನವಿ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಲು ಅವಕಾಶವಿರುತ್ತದೆ.
* ಸೇವಾ ನಿಯಮಗಳ ನಿಬಂಧನೆಗಳಿಗೆ – ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುವಾಗ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಹಲವು ಕಾರಣಗಳಿಂದ ಕೆಲವು ತಪ್ಪುಗಳನ್ನು ಮಾಡಿ, ಸರ್ಕಾರಕ್ಕೆ/ಸಾರ್ವಜನಿಕರಿಗೆ/ನೌಕರರಿಗೆ ವಿವಿಧ ನಷ್ಟಕ್ಕೆ ಕಾರಣರಾಗಬಹುದು.

## 1. ಕೆ.ಪಿ.ಎಸ್.(ಸಿ.ಸಿ.ಎ)–1957ರ ಪ್ರಕಾರ ದುರ್ನಡತೆಗಳು ಯಾವುವು?

* ಅಸಹಜ ಆಸ್ತಿಗಳನ್ನು ಹೊಂದಿರುವುದು.
* ಲಂಚ/ಅಕ್ರಮ ಸಂಭಾವನೆ ಪಡೆಯುವುದು
* ಅಧಿಕಾರ/ಹಣದ ದುರುಪಯೋಗ
* ಸರ್ಕಾರದ ಆಸ್ತಿಯ ನಾಶ ಅಥವಾ ನಷ್ಟಕ್ಕೆ ಕಾರಣರಾಗುವುದು.
* ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕುವುದು.
* ಸರ್ಕಾರದ ಕೆಲಸದ ಬಗ್ಗೆ ನಿಷ್ಠೆ ಇಲ್ಲದಿರುವುದು
* ಸರ್ಕಾರಿ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಾಗುವುದು.
* ವರ್ಗಾವಣೆಯಾದ ನಂತರ ನಿಯಮಾನುಸಾರ ಸೇರುವಿಕೆಯ ಕಾಲ ಮೀರಿದ ನಂತರವೂ ಹಾಜರಾಗದಿರುವುದು.
* ಅನುಮತಿಸಿದ ರಜಾ ಅವಧಿಯ ನಂತರ ಅನಧಿಕೃತವಾಗಿ ಗೈರುಹಾಜರಾಗುವುದು
* ಕಛೇರಿ ಕೆಲಸಕ್ಕೆ ತಡವಾಗಿ ಹಾಜರಾಗುವುದನ್ನು ರೂಢಿಮಾಡಿಕೊಳ್ಳುವುದು.

* ಸರ್ಕಾರಿ/ಮೇಲಾಧಿಕಾರಿಗಳ ಲಿಖಿತ ಆದೇಶಗಳ ನಿರ್ಲಕ್ಷತೆ ಮತ್ತು ಅವಿಶ್ವಾಸ ವ್ಯಕ್ತಪಡಿಸುವುದು.
* ಕರ್ತವ್ಯದಲ್ಲಿ ನಿರ್ಲಕ್ಷತೆ, ತೀರ್ಮಾನ ತೆಗೆದುಕೊಳ್ಳುವುದರಲ್ಲಿ ನಿರ್ಲಕ್ಷತೆ ಇದರಿಂದ ಸರ್ಕಾರ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುವುದು.
* ನ್ಯಾಯಾಲಯಗಳಿಗೆ ಮತ್ತು ಮೇಲಾಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡುವುದು ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸುವುದು
* ಸರ್ಕಾರದ ದಾಖಲೆಗಳನ್ನು ತಿದ್ದುವುದು ಮತ್ತು ಟ್ಯಾಂಪರ್ ಮಾಡುವುದು.
* ಕುಟುಂಬ ಸದಸ್ಯರನ್ನು ನಿರ್ಲಕ್ಷಿಸುವುದು
* ಒಬ್ಬರಿಗಿಂತ ಹೆಚ್ಚು ಗಂಡ/ಹೆಂಡತಿ ಹೊಂದುವುದು.
* ಸಂವಿಧಾನದ ನಿರ್ದೇಶನ/ನಿಯಮಗಳನ್ನು ಉಲ್ಲಂಘಿಸುವುದು.
* ಕಾನೂನು ಮತ್ತು ಶಾಸನಬದ್ಧ ನಿಯಮಗಳನ್ನು ಉಲ್ಲಂಘಿಸುವುದು.
* ಕಾನೂನು ನಿಯಮಗಳನ್ನು ತಿರುಚುವುದು (Mis-Application of Rules and Laws)
* ಸರ್ಕಾರಿ ನೌಕರನಿಗೆ ತರವಲ್ಲದ ವರ್ತನೆ.

## 2. ಪೂರ್ವಭಾವಿ ವಿಚಾರಣೆ:

* ಸಾಮಾನ್ಯವಾಗಿ: ಅಧಿಕಾರಿ/ನೌಕರರ ಮೇಲೆ ದೂರುಗಳು ಬಂದಾಗ ಅವರಿಗಿಂತ ಮೇಲಾಧಿಕಾರಿಯೊಬ್ಬರನ್ನು ಪೂರ್ವಭಾವಿ ವಿಚಾರಣೆ ನಡೆಸಿ ವರದಿ ನೀಡಲು ಶಿಸ್ತು ಪ್ರಾಧಿಕಾರಿಗಳು ಕೋರಬಹುದು. ಪೂರ್ವಬಾವಿ ವಿಚಾರಣೆಯಲ್ಲಿ ಆರೋಪಗಳು ಮೇಲ್ನೋಟಕ್ಕೆ ಸತ್ಯವೆಂದು ಕಂಡುಬರದಿದ್ದಲ್ಲಿ ಮುಂದಿನ ಇಲಾಖಾ ವಿಚಾರಣೆಯನ್ನು ಕೈಬಿಡಬಹುದು.

## 3. ಪೂರ್ವಭಾವಿ ವಿಚಾರಣೆಯ ನಂತರ ಕ್ರಮ

* ಪೂರ್ವಭಾವಿ ವಿಚಾರಣೆಯ ನಂತರ ಮೇಲ್ನೋಟಕ್ಕೆ ವಿಚಾರಣೆಯನ್ನು ಮುಂದುವರೆಸಬಹುದೆಂದು ನಿರ್ದೇಶಿತ ಪ್ರಾಧಿಕಾರ ಅಭಿಪ್ರಾಯಪಟ್ಟಲ್ಲಿ ಸಕ್ಷಮ ಪ್ರಾಧಿಕಾರವು ಆರೋಪಗಳ ಸ್ವರೂಪವನ್ನಾಧರಿಸಿ ನಿಯಮ 11 ಅಥವಾ ನಿಯಮ 12ರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಅದೇಶಿಸುತ್ತದೆ. ಈ ವಿಚಾರಣೆಗೆ ಅನುಬಂಧ 1 ರಿಂದ 4ರವರೆಗೆ ಆರೋಪ ಪಟ್ಟಿಯನ್ನು ತಯಾರಿಸಿ, ಆಪಾದಿತರೆನಿಸಿದ ಸರ್ಕಾರಿ ನೌಕರರಿಗೆ ಸಲ್ಲಿಸಲಾಗುತ್ತದೆ. ಅವರ ರಕ್ಷಣಾ ಹೇಳಿಕೆಯನ್ನು ಪಡೆದು, ಸದರಿ ಹೇಳಿಕೆಯಲ್ಲಿ ಆರೋಪಗಳು ರುಜುವಾತಾಗುವುದಿಲ್ಲವೆಂದು ಖಾತರಿಯಾದಲ್ಲಿ ಸಕ್ಷಮ ಪ್ರಾಧಿಕಾರವು ಈ ಹಂತದಲ್ಲಿಯೇ ವಿಚಾರಣೆಯನ್ನು ಕೈಬಿಡಬಹುದು ಅಥವಾ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಆದೇಶಿಸಬಹುದು.

**ನಿಯಮ–11:**ಯಾವುದೇ ಕಠಿಣ ದಂಡನೆ ವಿಧಿಸಲು ಈ ನಿಯಮದಡಿ ಅವಕಾಶವಿರುತ್ತದೆ.ಆರೋಪಣಾ ಪಟ್ಟಿ ಜಾರಿಮಾಡುವುದು ಮತ್ತು ವಿಚಾರಣೆಯನ್ನು ಈ ನಿಯಮದ ಉಪ ನಿಯಮಗಳನುಸಾರ ಕೈಗೊಳ್ಳಬೇಕಾಗುತ್ತದೆ.

**ನಿಯಮ–12:**ಸ್ಪಷ್ಟತೆ ಹಾಗೂ ನಿಖರತೆಯಿಂದ ಕೂಡಿದ ಲಘು ದಂಡನೆಗೆ ಸೂಕ್ತವೆನಿಸಿದ ಪ್ರಕರಣದ ಬಗ್ಗೆ ಈ ನಿಯಮದಡಿ ಆರೋಪಣಾ ಪಟ್ಟಿ ಜಾರಿ ಮಾಡಬೇಕಾಗುತ್ತದೆ ಇಲ್ಲಿ ವಿಚಾರಣೆ ಇರುವುದಿಲ್ಲ.

**ನಿಯಮ–13:** ಒಬ್ಬರಿಗಿಂತ ಹೆಚ್ಚು ನೌಕರರು ಆರೋಪದಲ್ಲಿ ಸಿಲುಕಿದ್ದಲ್ಲಿ ಜಂಟಿ ವಿಚಾರಣೆಯನ್ನು ಈ ನಿಯಮದಡಿ ಜರುಗಿಸಬೇಕಾಗುತ್ತದೆ.ಇತರೆ ಎಲ್ಲಾ ವಿಧಿವಿಧಾನಗಳು ನಿಯಮ 11 ರಂತೆ ಇರುತ್ತದೆ.

## 4. ಆರೋಪಿತ ನೌಕರ/ಅಧಿಕಾರಿಯ ರಕ್ಷಣಾ ಹೇಳಿಕೆ:

- ಸೂಕ್ತ ಸಮರ್ಥನೆಯೊಂದಿಗೆ – ಆರೋಪ/ಆರೋಪಗಳನ್ನು ಪೂರ್ಣವಾಗಿ ತಿರಸ್ಕರಿಸಬಹುದು.
- ಭಾಗಶಃ ತಿರಸ್ಕರಿಸಿ/ಭಾಗಶಃ ಒಪ್ಪಿ ಕ್ಷಮಾಪಣೆ ಕೋರಬಹುದು
- ಪೂರ್ಣವಾಗಿ ಒಪ್ಪಿ ನಷ್ಟವನ್ನು ಸರಿದೂಗಿಸಿ ಮನ್ನಿಸಲು ಕೋರಬಹುದು
- ಆರೋಪಣೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬಹುದು.
- ಇತರೆ ನೀವೇದನೆಗಳು

## 5. ಇಲಾಖಾ ವಿಚಾರಣೆ: ಆರೋಪದ ಸ್ವರೂಪ ಆಧಾರಿಸಿ ಒಪ್ಪಿಕೊಂಡಲ್ಲಿ ಸೂಕ್ತ ದಂಡನೆಯನ್ನು ವಿಧಿಸಬಹುದು.

- ಆರೋಪಗಳನ್ನು ಒಪ್ಪಿಕೊಳ್ಳದಿದ್ದಲ್ಲಿ ಸಿ.ಸಿ.ಎ. ನಿಯಮ 11 ರಂತೆ ವಿಚಾರಣಾ ಪ್ರಾಧಿಕಾರ ರಚಿಸಿ ವಿಚಾರಣೆಗೆ ಒಳಪಡಿಸುವುದು.

## 6. ವಿಚಾರಣಾ ಪ್ರಾಧಿಕಾರ

**ವಿಚಾರಣಾಧಿಕಾರಿಗಳು**

ಶಿಸ್ತು ಪ್ರಾಧಿಕಾರ, ನಿವೃತ್ತ ನ್ಯಾಯಾಧೀಶರು ಅಥವ ಆರೋಪಿ ನೌಕರರ ಮೇಲಾಧಿಕಾರಿ, ಇವರು ನ್ಯಾಯಾಧೀಶರಿದ್ದಂತೆ. (ಅರೆನ್ಯಾಯಿಕ ಪ್ರಾಧಿಕಾರ) ಅಂದರೆ ವಿಚಾರಣೆ ಸಂಧರ್ಭದಲ್ಲಿ ಮಂಡನಾಧಿಕಾರಿಯ ವಾದ, ಆರೋಪಿತ ನೌಕರ ಹೇಳಿಕೆ, ಸಾಕ್ಷಿಗಳ ಹೇಳಿಕೆ ಹಾಗೂ ಆರೋಪಕ್ಕೆ ಸಂಬಂಧಿಸಿದೆ ಎಂದು ಹೇಳಿರುವ ದಾಖಲೆಗಳನ್ನು ಪರಿಶೀಲಿಸಿ ಆರೋಪ ಸಾಭಿತಾಗಿದೆ/ಸಾಬೀತಾಗಿಲ್ಲ ಎಂದು ಹೇಳುವಷ್ಟೆ ಅಧಿಕಾರ.ಆದರೆ ದಂಡನೆ ವಿಧಿಸುವ ಅಧಿಕಾರ ಇರುವುದಿಲ್ಲ.

**ಮಂಡನಾಧಿಕಾರಿ**

ಶಿಸ್ತು ಪ್ರಾಧಿಕಾರದಿಂದ ನೇಮಿಸಲ್ಪಡುವ ಅಧಿಕಾರಿ ಸರ್ಕಾರಿ ವಕೀಲರಿದ್ದಂತೆ ಶಿಸ್ತು ಪ್ರಾಧಿಕಾರಿಗಳ ಪರವಾಗಿ ಆರೋಪವನ್ನು ದಾಖಲೆಗಳೊಂದಿಗೆ ವಿಚಾರಣಾಧಿಕಾರಿಗಳಿಗೆ ಮಂಡಿಸಿ ಸಾಕ್ಷಿಗಳನ್ನು ಕರೆಸಿ ಸಾಬೀತುಪಡಿಸುವುದು.

**ರಕ್ಷಣಾ ಸಹಾಯಕರು**

ಆರೋಪಿತ ನೌಕರರು ಅಪೇಕ್ಷೆ ಪಟ್ಟಲ್ಲಿ ಶಿಸ್ತು ಪ್ರಾಧಿಕಾರ/ವಿಚಾರಣಾಧಿಕಾರಿಗಳ ಅನುಮತಿ ಪಡೆದು ಸರ್ಕಾರಿ ನೌಕರರು/ನಿವೃತ್ತ ನೌಕರರನ್ನು ರಕ್ಷಣಾ ಸಹಾಯಕಕರನ್ನಾಗಿ ನೇಮಿಸಿ ಕೊಳ್ಳಬಹುದು. ಇಲಾಖಾ ವಿಚಾರಣೆಯಲ್ಲಿ ವಕೀಲರನ್ನು ರಕ್ಷಣಾ ಸಹಾಯಕರನ್ನಾಗಿ ನೇಮಿಸಿಕೊಳ್ಳಲು ಅವಕಾಶವಿರುವುದಿಲ್ಲ.

## 7. ವಿಚಾರಣಾಧಿಕಾರಿಗಳ ವರದಿ

**ವಿಚಾರಣಾ ವರದಿಯು ಮುಂದಿನ ದಾಖಲೆಗಳನ್ನು ಒಳಗೊಂಡಿಬೇಕು:**

- ವಿಚಾರಣಾಧಿಕಾರಿಗಳ ದಿನಚರಿ
- ಸಾಕ್ಷಿಗಳ–ಆರೋಪಿ ನೌಕರರು ಹಾಗೂ ಮಂಡನಾಧಿಕಾರಿಯನ್ನು ವಿಚಾರಣೆಗೆ ಹಾಜರಾಗಲು ವಿವಿಧ ದಿನಾಂಕಗಳಂದು ನೀಡಿದ ಸೂಚನಾ ಪತ್ರಗಳು
- ಆರೋಪಿತರ ವಾದ–ವಿವಾದ
- ಮಂಡನಾಧಿಕಾರಿಗಳ ಲಿಖಿತವಾದ
- ಆರೋಪಿತ ನೌಕರರ/ರಕ್ಷಣಾ ಸಹಾಯಕರ ಲಿಖಿತ ಹೇಳಿಕೆ
- ಆರೋಪಕ್ಕೆ ಸಂಬಂಧಪಟ್ಟ ದಾಸ್ತಾವೇಜುಗಳು
- ವಿಚಾರಣಾ ವರದಿಯನ್ನು ನಿಷ್ಪಕ್ಷಪಾತವಾಗಿ ತತ್ಸಂಬಂಧಿತ ಸಾಕ್ಷಾಧಾರಗಳನ್ನು ಸಾಬೀತವಾಗಿವೆ/ಸಾಬೀತಾಗಿಲ್ಲ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಿ, ನಿಗಧಿತ ಅವಧಿಯೊಳಗೆ ಶಿಸ್ತು ಪ್ರಾಧಿಕಾರಿಗಳಿಗೆ ಸಲ್ಲಿಸಬೇಕು.
- ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಿಗಳಿಗೆ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿ ನಂತರ ಶಿಸ್ತು ಪ್ರಾಧಿಕಾರಿಗಳು ಪರಿಶೀಲಿಸಿ ಆರೋಪದ ಸ್ವರೂಪ ದಾಖಲೆಗಳು ಸಾಕ್ಷ ಹೇಳಿಕೆ ವಿಚಾರಣಾಧಿಕಾರಿಗಳ ಅಭಿಪ್ರಾಯಗಳನ್ನು ವಿಶ್ಲೇಷಣೆ ಮಾಡಿದ ನಂತರ
- ಸಾಬೀತಾಗಿಲ್ಲವೆಂಬುದು ಧೃಢಪಟ್ಟಲ್ಲಿ ಆರೋಪಿತ ನೌಕರರನ್ನು ಆರೋಪಮುಕ್ತರನ್ನಾಗಿ ಮಾಡಿ ಆದೇಶಿಸಬಹುದು
- ಭಾಗಶಃ/ಪೂರ್ಣ ಸಾಬೀತಾಗಿದ್ದಲ್ಲಿ ವಿಚಾರಣಾ ವರದಿಯ ಪ್ರತಿಯನ್ನು ಆರೋಪಿತ ನೌಕರರಿಗೆ ಜಾರಿಮಾಡಿ ಅಂತಿಮ ರಕ್ಷಣಾ ಹೇಳಿಕೆ ಪಡೆಯಬೇಕು.

## 8. ಕೆ.ಸಿ.ಎಸ್.(ಸಿ.ಸಿ.ಎ) 1957ರ ನಿಯಮ 8 ರಡಿ ದಂಡನೆಗಳು ಲಘು ದಂಡನೆಗಳು

1. ಗ್ರೂಪ್ 'ಡಿ' ನೌಕರರಿಗೆ ವಾಗ್ದಂಡನೆ (ಛೀಮಾರಿ)
2. ವಾರ್ಷಿಕ ವೇತನ ತಡೆಹಿಡಿಯುವುದು (ಸಂಚಿತ ಸಹಿತ/ಸಂಚಿತ ರಹಿತ)

3(ಅ). ಬಡ್ತಿಯನ್ನು ತಡೆಹಿಡಿಯುವುದು.

3. ನೌಕರರ ದುರ್ನಡತೆಯಿಂದ ಸರ್ಕಾರಕ್ಕೆ ಆದ ನಷ್ಟವನ್ನು ಪೂರ್ಣವಾಗಿ ಅಥವಾ ಭಾಗಶಃ ವಸೂಲಿ ಮಾಡುವುದು.

4(ಅ).ನೌಕರರು ಹಾಲಿ ಹೊಂದಿರುವ ವೇತನ ಶ್ರೇಣಿಯಲ್ಲಿ ಆತ ಪಡೆಯುತ್ತಿರುವ ಮೂಲ ವೇತನವನ್ನು ಕೆಳಗಿನ ಹಂತಕ್ಕೆ ಇಳಿಸುವುದು.

**ಕಠಿಣ ದಂಡನೆಗಳು**

4. ನೌಕರನ ಪ್ರಸಕ್ತ ವೇತನವನ್ನು ಅವನಿಗಿರುವ ಹುದ್ದೆಯಿಂದ ಕೆಳಗೇ ಇರುವ ಹುದ್ದೆಯ ವೇತನ ಶ್ರೇಣಿಗೆ ಇಳಿಸುವುದು.
6. ಕಡ್ಡಾಯ ನಿವೃತ್ತಿ (ಇದು ಕಳಂಕಿತ ನಿವೃತ್ತಿ, ಆದರೆ ಕೆ.ಸಿ.ಎಸ್.ಸಿ 285 ಕ.ನಿ ಅಲ್ಲ)
7. ಸೇವೆಯಿಂದ ತೆಗೆದುಹಾಕುವುದು (ಮತ್ತೊಂದು ಕಡೆ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿ ಆಯ್ಕೆಯಾಗಬಹುದು, ಯಾವುದೇ ನಿವೃತ್ತಿ ಸೌಲಭ್ಯ ದೊರೆಯುವುದಿಲ್ಲ.
8. ಸೇವೆಯಿಂದ ವಜಾ ಮಾಡುವುದು (ಮುಂದೆ ಯಾವುದೇ ಹುದ್ದೆಗೆ ಹಾಗೂ ಯಾವುದೇ ನಿವೃತ್ತಿ ಸೌಲಭ್ಯಗಳಿಗೆ ಅನರ್ಹರಾಗುತ್ತಾರೆ)

- ಹೀಗೆ ದಂಡನೆಗಳನ್ನು ವಿಧಿಸುವ ಬಗ್ಗೆ ನಿಯಮಗಳಲ್ಲಿ ಅವಕಾಶ ಹಾಗೂ ವಿವರಣೆಗಳು ಇದ್ದು ಶಿಸ್ತು ಪ್ರಾಧಿಕಾರವು ಅಪಾದಿತರ ಮೇಲಿನ ರುಜುವಾತಾದ ಆರೋಪಗಳಿಗೆ ಸರಿಸಮನಾಗಿ ದಂಡನೆಗಳನ್ನು ವಿಧಿಸಬೇಕು.
- ಪೂರ್ವಾಗ್ರಹ ಅಥವ ದಂಡಿಸಲೇಬೇಕೆಂಬ ಪೂರ್ವ ನಿಶ್ಚಯವು ಶಿಸ್ತು ಪ್ರಕರಣಗಳನ್ನು ಅನೂರ್ಜಿತಗೊಳಿಸುತ್ತದೆ.
- ದಂಡನೆಗಳನ್ನು ವಿಧಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರವು ಯೋಚಿಸಿ ಈ ದಂಡನೆಗಳನ್ನು ನಿಜಕ್ಕೂ ವಿಧಿಸಲ್ಪಟ್ಟಲ್ಲಿ ಜಾರಿಯಾಗುತ್ತವೆಯೇ ಎಂಬುದನ್ನು ಅರಿತು ವಿಧಿಸಬೇಕು.
- ಜಾರಿಯಾಗದಂತಹ ದಂಡನೆಗಳನ್ನು ವಿಧಿಸಿ ನಂತರ ಆ ದಂಡನಾ ಆದೇಶಗಳನ್ನು ಅದೇ ಪ್ರಾಧಿಕಾರವು ತಿದ್ದಿ ಹೊರಡಿಸುವುದಕ್ಕಾಗಲೀ/ ಮಾರ್ಪಾಡು ಮಾಡುವುದಕ್ಕಾಗಲೀ ನಿಯಮಗಳಲ್ಲಿ ಅವಕಾಶವಿಲ್ಲ.
- ಒಂದು ಪಕ್ಷ ದಂಡಿಸಿದ ಪ್ರಾಧಿಕಾರದ ಮೇಲಿನ ಅಪೀಲು ಪ್ರಾಧಿಕಾರ ಅಥವ ರಿವ್ಯೂ ಪ್ರಾಧಿಕಾರ ಇಚ್ಚಿಸಿದಲ್ಲಿ, ಆ ಪ್ರಾಧಿಕಾರಿಗಳು ತಪ್ಪಾಗಿ ಹೊರಡಿಸಿದ ದಂಡನೆಗಳನ್ನು ಮಾರ್ಪಡಿಸಬಹುದು.
- ವೇತನ ಬಡ್ತಿಗಳನ್ನು ತಡೆಹಿಡಿಯಲು ತೀರ್ಮಾನಿಸಿದ್ದಲ್ಲಿ ಸ್ಥಗಿತ ವೇತನ ಬಡ್ತಿ ಮತ್ತು ಕಾಲ ಮಿತಿ ಬಡ್ತಿಗಳನ್ನು ತಡೆಹಿಡಿಯಲು ಅವಕಾಶವಿಲ್ಲ ಕೇವಲ ವಾರ್ಷಿಕ ವೇತನ ಬಡ್ತಿಗಳನ್ನು ಮಾತ್ರ ತಡೆ ಹಿಡಿಯಬಹುದು.
- ಸನಿಹದಲ್ಲಿ ಸೇವೆಯಿಂದ ನಿವೃತ್ತವಾಗುವವರಿಗೆ ವಾರ್ಷಿಕ ವೇತನ ಬಡ್ತಿ ತಡೆಹಿಡಿಯುವ ದಂಡನೆ ವಿಧಿಸಿದ್ದಲ್ಲಿ ಆದೇಶ ನಿಷ್ಫಲವಾಗುತ್ತದೆ ಆದ್ದರಿಂದ ದಂಡನೆ ವಿಧಿಸುವಾಗ ಆರೋಪಿತ ನೌಕರರ ಸೇವಾ ವಿವರ ನಿವೃತ್ತಿ ದಿನಾಂಕಗಳನ್ನು ಪರಿಶೀಲಿಸಬೇಕು.
- ಇದೇ ರೀತಿ ಬಡ್ತಿಯನ್ನು ತಡೆಹಿಡಿಯುವ ದಂಡನೆ ವಿಧಿಸುವಾಗ ಮೊದಲು ಈ ದಂಡನೆ ಜಾರಿಯಾಗುತ್ತದೆಯೇ ಎಂಬುದನ್ನು ಪರಿಶೀಲಿಸಬೇಕು. ಬಡ್ತಿಗಳನ್ನು ಶಾಶ್ವತವಾಗಿ ತಡೆಹಿಡಿಯುವಂತಿಲ್ಲ. ಕೆಲವು ವರ್ಷ/ತಿಂಗಳುಗಳ ಅವಧಿಗೆ ಮಾತ್ರ ತಡೆಹಿಡಿಯಬಹುದು.
- ನಷ್ಟವನ್ನು ವಸೂಲಿ ಮಾಡುವ ದಂಡನೆ ವಿಧಿಸುವಾಗ ವಸೂಲಿ ಮಾಡಬೇಕಾದ ಮೊತ್ತ ಬಹಳ ದೊಡ್ಡದಿದ್ದಾಗ ಕಡ್ಡಾಯ ನಿವೃತ್ತಿಗೊಳಿಸಿ ನಿವೃತ್ತಿ ಸೌಲಭ್ಯಗಳಿಂದ ನಷ್ಟದ ಮೊತ್ತವನ್ನು ಕಟಾಯಿಸಿಕೊಳ್ಳಬಹುದು.
- 4ಎ ನಂತೆ ದಂಡನೆ ವಿಧಿಸುವಾಗ ಆರೋಪಿತರ ಈಗಿನ ವೇತನ ಶ್ರೇಣಿಯಲ್ಲಿ ಪ್ರಾರಂಭಿಕ ಹಂತಕ್ಕೂ ಇಳಿಸಬಹುದು. ಆದರೆ ಇಂತಿಷ್ಟೆ ಅವಧಿ ಎಂದು ಅವಧಿ ನಿಗಧಿಸಿ ಆದೇಶಿಸಬೇಕು.
- ಐದನೇ ದಂಡವಾದ ಕೆಳಗಿನ ಹುದ್ದೆಯ ವೇತನ ಶ್ರೇಣಿಗೆ ಇಳಿಸುವ ದಂಡನೆ ವಿಧಿಸುವಾಗ ಯಾವ ವೇತನ ಶ್ರೇಣಿ, ಎಷ್ಟು ಮೂಲ ವೇತನ ಮತ್ತು ಎಷ್ಟು ಕಾಲ ಎಂಬುದನ್ನು ಸ್ಪಷ್ಟಪಡಿಸಬೇಕು. ಈ ದಂಡನಾ ಅವಧಿ ಮುಗಿದ ನಂತರ ಆರೋಪಿತನು ತನ್ನ ಹಿಂದಿನ ಹುದ್ದೆಗೆ ಪುನಃ ಬಡ್ತಿ ಪಡೆಯಬೇಕಾಗಿಲ್ಲ.
- ಆರೋಪಿತನು ದಂಡನೆಯ ಸಂದರ್ಭದಲ್ಲಿ ಹೊಂದಿರುವ ಹುದ್ದೆಗೆ ನೇರ ನೇಮಕಾತಿ ಹೊಂದಿದ್ದಲ್ಲಿ ಅದಕ್ಕಿಂತ ಕೆಳಗಿನ ಹುದ್ದೆಯ ವೇತನ ಶ್ರೇಣಿಗೆ ಇಳಿಸಲು ಅವಕಾಶವಿಲ್ಲ (ಸುಪ್ರಿಮ್ ಕೋರ್ಟ್ ಆದೇಶ)
- 6ನೇ ದಂಡನೆಯಾದ ಕಡ್ಡಾಯ ನಿವೃತ್ತಿಯು ಕೆ.ಸಿ.ಎಸ್.ಆರ್. ನಿಯಮ 285 ರಿಂದ ಭಿನ್ನವಾಗಿದೆ. ಕೆ.ಸಿ.ಎಸ್.ಆರ್ ನಿಯಮ 285 ರ ಕಡ್ಡಾಯ ನಿವೃತ್ತಿ ಒತ್ತಾಯ ಪೂರಕವಾಗಿರುತ್ತದೆ. ಆದರೆ ಸಿ.ಸಿ.ಎ ಪ್ರಕಾರದ ಕಡ್ಡಾಯ ನಿವೃತ್ತಿಯೂ ಕಳಂಕ ರೀತಿಯದಾಗಿರುತ್ತದೆ.
- ಈ ಎರಡು ಪ್ರಕರಣಗಳಲ್ಲಿ ನಿವೃತ್ತಿಯ ದಿನಾಂಕಕ್ಕೆ ಅರ್ಹ ಎಲ್ಲ ನಿವೃತ್ತಿ ಸೌಲಭ್ಯಗಳು ದೊರೆಯುತ್ತವೆ.
- ಸಿ.ಸಿ.ಎ ನಿಯಮದ ಪ್ರಕಾರ ನಷ್ಟದ ಮೊತ್ತ ಕಡಿತಗೊಳಿಸಿ ಆದೇಶಿಸಬಹುದು. ಪಿಂಚಣಿಯನ್ನು ಕಡಿತಗೊಳಿಸಬಹುದು.ಆದರೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ಪಿಂಚಣಿಗಿಂತ ಕಡಿಮೆ ಮಾಡತಕ್ಕದಲ್ಲ.
- ಬಹಳ ಪ್ರಮುಖವಾಗಿ ಶಿಸ್ತು ಪ್ರಾಧಿಕಾರಿಯೂ ದಂಡನೆಯನ್ನು ವಿಧಿಸುವಾಗ ಎಚ್ಚರಿಕೆಯಿಂದ ಆರೋಪವನ್ನು ಪರಿಶೀಲಿಸಿ ರುಜುವಾತಾದ ಆರೋಪಕ್ಕೆ ಸರಿ ಸಮನಾದ ದಂಡನೆಯನ್ನು ವಿಧಿಸಬೇಕು. ಪೂರ್ವಾಗ್ರಹಪೀಡಿತ ಅಥವಾ ದಂಡಿಸಲೇಬೇಕೆಂಬ ಪೂರ್ವ ನಿಶ್ಚಯವು ಶಿಸ್ತು ಪ್ರಕರಣಗಳನ್ನು ಅನೂರ್ಜಿತಗೊಳಿಸುತ್ತದೆ,

**14. ಅಪೀಲು**

- ಕೆ.ಸಿ.ಎಸ್.(ಸಿ.ಸಿ.ಎ) ನಿಯಮ 17–20 ರವರೆಗೆ ಯಾವ ಆದೇಶದ ವಿರುದ್ಧ ಅಫಿಲು ಸಲ್ಲಿಸಬೇಕಾಗಿದೆಯೋ ಆದೇಶಮಾಡಿದ 90 ದಿನದೊಳಗೆ ಸಕ್ಷಮ ಮೇಲ್ಮನವಿ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಲು ಅವಕಾಶವಿದೆ.

**15. ರಿವ್ಯೂ (ಪುನರಾವಲೋಕನ)**

- ಅಪೀಲುಗಳ ಪುನರಾವಲೋಕನ–ಕೆ.ಸಿ.ಎಸ್ (ಸಿ.ಸಿ.ಎ) ನಿಯಮ 26 & 27 ರನ್ವಯ ಗೌರವಾನ್ವಿತ ರಾಜ್ಯಪಾಲರಿಗೆ ಸಲ್ಲಿಸಲು ಅವಕಾಶವಿದೆ.

**16 ಜಿಲ್ಲಾ ಉಪನಿರ್ದೇಶಕರು (ಆಡಳಿತ). ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಪ್ರೌಢಶಾಲಾ ಸಹಶಿಕ್ಷಕರಿಗೆ ಸಂಬಂಧಪಟ್ಟಂತೆ ಪ್ರಸ್ತುತ ಸಿಸಿಎ ನಿಯಮಗಳಡಿ ಇರುವ ಸಕ್ಷಮ ಪ್ರಾಧಿಕಾರ.**

- ಉಪನಿರ್ದೇಶಕರು (ಆಡಳಿತ) ರವರು ಪ್ರೌಢಶಾಲಾ ಸಹಶಿಕ್ಷಕರಿಗೆ ನೇಮಕಾತಿ ಪ್ರಾಧಿಕಾರ ಹಾಗೂ ಶಿಸ್ತು ಪ್ರಾಧಿಕಾರ.
- ಇವರು ಸಿಸಿಎ ನಿಯಮ –8ರ ii ರಿಂದ viii ರವರೆಗಿನ ದಂಡನೆಗಳನ್ನು ವಿಧಿಸುವ ಅಧಿಕಾರ ಹೊಂದಿರುತ್ತಾರೆ.
- ಸರ್ಕಾರದ ಆದೇಶ: ಡಿಪಿಆರ್ 13 ಎಸ್ ಡಿ ಇ 2002 ದಿನಾಂಕ:29/07/2002 ರಲ್ಲಿ ಉಪನಿರ್ದೇಶಕರನ್ನು ಪ್ರೌಢಶಾಲಾ ಸಹ ಶಿಕ್ಷಕರಿಗೆ ನೇಮಕಾತಿ ಪ್ರಾಧಿಕಾರ ಮಾಡಲಾಗಿದೆ.
- ಈ ಆದೇಶ ರಾಜ್ಯ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಪ್ರೌಢಾಲಾ ಸಹಶಿಕ್ಷಕರಿಗೆ ನೇಮಕಾತಿ/ಶಿಸ್ತು ಪ್ರಾಧಿಕಾರಿಯಾಗಿ ಕಠಿಣ ದಂಡನೆಗಳನ್ನು ವಿಧಿಸಲು ಕಾನೂನಿನಲ್ಲಿ ಅಧಿಕಾರವಿರುತ್ತದೆ.
- ಆದರೆ ಈ ಹಿಂದೆ ಜಂಟಿ ನಿರ್ದೇಶಕರಿಂದ ನೇಮಿಸಲ್ಪಟ್ಟ ಶಿಕ್ಷಕರಿಗೆ ಕಠಿಣ ದಂಡನೆಗಳನ್ನು ವಿಧಿಸಲು ಕಾನೂನಿನಲ್ಲಿ ಅವಕಾಶವಿಲ್ಲ.
- ಇಂತಹ ಪ್ರಕರಣಗಳನ್ನು ಜಂಟಿ ನಿರ್ದೇಶಕರಿಗೆ ಕಳುಹಿಸಬೇಕಾಗುತ್ತದೆ.
- ಆದರೆ ಬೇರೆ ಲಘು ದಂಡನೆಗಳನ್ನು ವಿಧಿ ವಿಧಾನ ಪಾಲಿಸಿ ವಿಧಿಸಬಹುದು.
- ನಿಯಮ –32/68 ರಡಿ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುವ ಉಪನಿರ್ದೇಶಕರು ಪ್ರೌಢಶಾಲಾ ಸಹ ಶಿಕ್ಷಕರನ್ನು ಅಮಾನತ್ತುಗೊಳಿಸುವ ಅಥವಾ ಯಾವುದೇ ದಂಡನೆ ವಿಧಿಸುವ ಅಥವಾ ಇಲಾಖಾ ವಿಚಾರಣೆ ಪ್ರಾರಂಭಿಸುವ ಅಧಿಕಾರ ಹೊಂದಿರುವುದಿಲ್ಲ.
- ಇಂತಹ ಅಧಿಕಾರಿಗಳು ಜಂಟಿ ನಿರ್ದೇಶಕರಾಗಿ ಸಲ್ಲಿಸಿ, ಶಿಸ್ತು, ಕ್ರಮ, ದಂಡನೆ ಕೋರಬಹುದು.
- ಈ ರೀತಿ ಪ್ರೌಢಶಾಲಾ ಸಹಶಿಕ್ಷಕರ ಮೇಲೆ ಶಿಸ್ತು ಕ್ರಮ ಹೂಡಲು ಜಿಲ್ಲಾ ಉಪನಿರ್ದೇಶಕರವರಿಗೆ ಅಧಿಕಾರ ನೀಡುವ ಮೊದಲು, ಜಂಟಿ ನಿರ್ದೇಶಕರ ಹಂತದಲ್ಲಿ ಪ್ರಾರಂಭಿಸಿ ಇನ್ನೂ ಬಾಕಿ ಇರುವ ಶಿಸ್ತಿನ ಕ್ರಮಗಳನ್ನು ಅದೇ ಅವರೇ ಮುಂದುವರೆಸಬೇಕಾಗುತ್ತದೆ.
- ನಿಯಮ–32/62 ರಡಿ ಕಾರ್ಯ ನಿರ್ವಹಿಸುವ ಉಪನಿರ್ದೇಶಕರವರು ಕೇವಲ ನೇಮಕಾತಿ ಪ್ರಾದಿಕಾರ ಎಂದ ಮಾತ್ರಕ್ಕೆ ಶಿಸ್ತು ಪ್ರಾಧಿಕಾರಿಯಾಗಿ ಶಾಸನಬದ್ದ ಅಧಿಕಾರವನ್ನು ಚಲಾಯಿಸುವಂತಿಲ್ಲ ಎಂದು ಮತ್ತೊಮ್ಮೆ ಒತ್ತಿ ಹೇಳಿದೆ.
- ಕಠಿಣ ದಂಡನೆ ವಿಧಿಸುವ ಮೊದಲು ಅಪಾದಿತ ನೌಕರನ ಸೇವಾಪುಸ್ತಕ ಪರಿಶೀಲಿಸಿ, ಅವರನ್ನು ಯಾವ ಪ್ರಾಧಿಕಾರ ನೇಮಿಸಿದೆ, ಯಾವಾಗ ನೇಮಿಸಿದೆ ಎಂದು ಖಾತರಿ ಪಡಿಸಿಕೊಳ್ಳತಕ್ಕದ್ದು.

**17. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಪಟ್ಟಂತೆ ಪ್ರಸ್ತುತ ಸಿಸಿಎ ನಿಯಮಗಳಡಿ ಇರುವ ಸಕ್ಷಮ ಪ್ರಾಧಿಕಾರ.**

- ಕ್ಷೇತ್ರ ಶಿಕ್ಷಣಾಧಿಕಾರಿಗಳವರು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನೇಮಕಾತಿ ಪ್ರಾಧಿಕಾರ ಹಾಗೂ ಶಿಸ್ತು ಪ್ರಾಧಿಕಾರ.
- ಇವರು ಸಿಸಿಎ ನಿಯಮ 8ರ ii ರಿಂದ viii ರವರೆಗಿನ ದಂಡನೆಗಳನ್ನು ವಿಧಿಸುವ ಅಧಿಕಾರ ಹೊಂದಿರುತ್ತಾರೆ.
- ಸರ್ಕಾರದ ಆದೇಶ : ಡಿ.ಪಿ.ಎ.ಆರ್ 13 ಎಸ್‌ಡಿಇ 2002 ದಿನಾಂಕ:29/07/2002ರಲ್ಲಿ ಉಪನಿರ್ದೇಶಕರನ್ನು ಪ್ರೌಢಶಾಲಾ ಸಹ ಶಿಕ್ಷಕರಿಗೆ ನೇಮಕಾತಿ ಪ್ರಾಧಿಕಾರ ಮಾಡಲಾಗಿದೆ.
- ಈ ಆದೇಶ ರಾಜ್ಯ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನೇಮಕಾತಿ/ಶಿಸ್ತು ಪ್ರಾಧಿಕಾರಿಯಾಗಿ ಕಠಿಣ ದಂಡನೆಗಳನ್ನು ವಿಧಿಸಲು ಅಧಿಕಾರವಿರುತ್ತದೆ.
- ಆದರೆ ಈ ಹಿಂದೆ ಜಿಲ್ಲಾ ಉಪನಿರ್ದೇಶಕರಿಂದ ನೇಮಿಸಲ್ಪಟ್ಟ ಶಿಕ್ಷಕರಿಗೆ ಕಠಿಣ ದಂಡನೆಗಳನ್ನು ವಿಧಿಸಲು ಕಾನೂನಿನಲ್ಲಿ ಅವಕಾಶವಿಲ್ಲ.
- ಇಂತಹ ಪ್ರಕರಣಗಳನ್ನು ಜಿಲ್ಲಾ ಉಪನಿರ್ದೇಶಕರಿಗೆ ಕಳುಹಿಸಬೇಕಾಗುತ್ತದೆ.
- ಆದರೆ ಬೇರೆ ಲಘು ದಂಡನೆಗಳನ್ನು ವಿಧಿ ವಿಧಾನ ಪಾಲಿಸಿ ವಿಧಿಸಬಹುದು.
- ನಿಯಮ–32/68 ರಡಿ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುವ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಾಥಮಿಕ ಶಾಲಾ ಶಿಕ್ಷಕರನ್ನು ಅಮಾನತ್ತುಗೊಳಿಸುವ ಅಥವಾ ಯಾವುದೋ ದಂಡನೆ ವಿಧಿಸುವ ಅಥವಾ ಇಲಾಖಾ ವಿಚಾರಣೆ ಪ್ರಾರಂಭಿಸುವ ಅಧಿಕಾರ ಹೊಂದಿರುವುದಿಲ್ಲ.
- ಇಂತಹ ಅಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಿ, ದಂಡನೆ ಶಿಸ್ತು ಕ್ರಮ ಕೋರಬಹುದು.
- ಈ ರೀತಿ ಪ್ರಾಥಮಿಕ ಶಾಲಾ ಶಿಕ್ಷಕರ ಮೇಲೆ ಶಿಸ್ತುಕ್ರಮ ಹೂಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಧಿಕಾರ ನೀಡುವ ಮೊದಲು, ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಪ್ರಾರಂಭಿಸಿ ಇನ್ನೂ ಬಾಕಿ ಇರುವ ಶಿಸ್ತಿನ ಕ್ರಮಗಳನ್ನು ಅವರೇ ಮುಂದುವರೆಸಬೇಕಾಗುತ್ತದೆ.
- ನಿಯಮ–32/68ರಡಿ ಕಾರ್ಯ ನಿರ್ವಹಿಸುವ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೇವಲ ನೇಮಕಾತಿ ಪ್ರಾಧಿಕಾರ ಎಂದು ಮಾತ್ರಕ್ಕೆ ಶಿಸ್ತು ಪ್ರಾಧಿಕಾರಿಯಾಗಿ ಶಾಸನ ಬದ್ದ ಅಧಿಕಾರವನ್ನು ಚಲಾಯಿಸುವಂತಿಲ್ಲ ಎಂದು ಮತ್ತೊಮ್ಮೆ ಒತ್ತಿ ಹೇಳಿದೆ.

- ಕಠಿಣ ದಂಡನೆ ವಿಧಿಸುವ ಮೊದಲು ಅಪಾದಿತ ನೌಕರನ ಸೇವಾಪುಸ್ತಕ ಪರಿಶೀಲಿಸಿ, ಅವರನ್ನು ಯಾವ ಪ್ರಾಧಿಕಾರ ನೇಮಿಸಿದೆ, ಯಾವಾಗ ನೇಮಿಸಿದೆ ಎಂದು ಖಾತರಿ ಪಡಿಸಿಕೊಳ್ಳತಕ್ಕದ್ದು.

***********************************************************************

# ಅಧ್ಯಾಯ–8.

# ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SMC)

## ಪ್ರಸ್ತಾವನೆ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಗುಣಮಟ್ಟವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಸಮುದಾಯವನ್ನು ಕಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಮಾಡಲು ಬಹಳ ಹಿಂದಿನಿಂದಲೂ ಪ್ರಯತ್ನಗಳು ನಡೆದಿವೆ. 1964ರ ಕೊಠಾರಿ ಆಯೋಗದಿಂದ ಪ್ರಾರಂಭಿಸಿ 1986ರವರೆಗಿನ ರಾಷ್ಟ್ರೀಯ ಶಿಕ್ಷಣ ನೀತಿಯವರೆಗೆ ಎಲ್ಲಾ ಆಯೋಗಗಳ ವರದಿಯಲ್ಲೂ ಶಾಲಾ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿರಲಿಲ್ಲ. 1994 ರಲ್ಲಿ ಜಿಲ್ಲಾ ಪ್ರಾಥಮಿಕಕ ಶಿಕ್ಷಣ ಯೋಜನೆ ಜಾರಿಗೆ ಬಂದಾಗಿನಿಂದ ಶಾಲಾ ಮಟ್ಟದಲ್ಲಿದ್ದ ಶಾಲಾಭಿವೃದ್ಧಿ ಸಮಿತಿಗಳು ಗ್ರಾಮಶಿಕ್ಷಣ ಸಮಿತಿಗಳಾಗಿ ಮಾರ್ಪಾಡಾದವು. ಈ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯದ ರಚನಾತ್ಮಕ ಹಾಗೂ ಕ್ರಿಯಾತ್ಮಕ ಪಾಲ್ಗೊಳ್ಳುವಿಕೆ ಪ್ರಾರಂಭವಾಯ್ತು. ಪ್ರಥಮವಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿದ್ದ ಜಿಲ್ಲೆಗಳಲ್ಲಿ ಮಾತ್ರ ಗ್ರಾಮ ಶಿಕ್ಷಣ ಸಮಿತಿಗಳು ಅಸ್ತಿತ್ವಕ್ಕೆ ಬಂದವು.ಕ್ರಮೇಣ ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಒಂದು ಪ್ರಮುಖ ಅಂಶವನ್ನಾಗಿ ಪರಿಗಣಿಸಲಾಗಿದೆ.

ಶಾಲಾ ಶಿಕ್ಷಣದ ಗುಣಾತ್ಮಕತೆ ವೃದ್ಧಿಸಬೇಕಾದರೆ ಸಮುದಾಯದ ಭಾಗವಹಿಸುವಿಕೆಯೂ ಕೂಡ ಅಂತ್ಯಂತ ಮಹತ್ವದ ಮತ್ತು ಸವಾಲಿನ ವಿಚಾರವಾಗಿದೆ.ಡಾ.ರಾಜಾರಾಮಣ್ಣನವರ ಸಮಿತಿಯ ಶಿಫಾರಸ್ಸಿನ ಆಧಾರದಲ್ಲಿ 2001ನೇ ಇಸ್ವಿಯಿಂದ ಕರ್ನಾಟಕ ರಾಜ್ಯದ ಶಾಲಾ ಹಂತಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಕಾರ್ಯರೂಪಕ್ಕೆ ತರಲಾಯ್ತು.ಸದರಿ ಸಮಿತಿಯು ಶಾಸನಬದ್ದವಾಗಿ ರಚಿತವಾಗಿದ್ದು ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ನೀಡಿರುವ ಪ್ರಾಮುಖ್ಯತೆಯ ಸಂಕೇತವಾಗಿದೆ.ಎಸ್.ಡಿ.ಎಂ.ಸಿ.ಗಳು ಪ್ರಸ್ತುತ ಎಲ್ಲಾ ಶಾಲೆಗಳಲ್ಲೂ ಅಸ್ತಿತ್ವದಲ್ಲಿದ್ದು ಕಾರ್ಯ ನಿರತವಾಗಿವೆ. ಈ ಸಮಿತಿಗಳು ಹಿಂದೆ ಇದ್ದಂತಹ ಶಾಲಾಭಿವೃದ್ಧಿ ಸಮಿತಿಗಳಿಗಿಂತ ಹೆಚ್ಚು ಅಧಿಕಾರಯುತವಾಗಿದ್ದು ಶಾಲೆಯ ಭೌತಿಕ ಮತ್ತು ಶೈಕ್ಷಣಿಕ ಪ್ರಗತಿಗಳೆರಡರಲ್ಲೂ ತಮ್ಮ ಕೊಡುಗೆಯನ್ನು ನೀಡುತ್ತಿವೆ.

## SDMCನಡೆದು ಬಂದ ದಾರಿ

- 27–02–1988ರಲ್ಲಿ ಸಮುದಾಯವನ್ನು ಶಿಕ್ಷಣ ಸಾರ್ವತ್ರೀಕರಣದಲ್ಲಿ ತೊಡಗಿಸಿಕೊಳ್ಳುವಂತೆ ಸರ್ಕಾರ ಆದೇಶವನ್ನು ಹೊರಡಿಸಿತು.
- ಈ ಮೇಲ್ಕಂಡ ಆದೇಶದನ್ವಯ ಜಿಲ್ಲಾ ಪಂಚಾಯತ್, ಮಂಡಲ ಪಂಚಾಯತ್ ಗಳನ್ನು ಮತ್ತು ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಹಿಂದೆ ಅಸ್ತಿತ್ವದಲ್ಲಿದ್ದ 'ಶಾಲಾಭಿವೃದ್ಧಿ ಸಮಿತಿ'ಗಳನ್ನು 'ಶೈಕ್ಷಣಿಕ ಸಮಿತಿ' ಎಂದು ಪುನರ್ ನಾಮಕರಣ ಮಾಡಲಾಯಿತು. ಈ ಸಮಿತಿಯಲ್ಲಿ ಜನಪ್ರತಿನಿಧಿಗಳು ಮತ್ತು ಊರಿನ ಗಣ್ಯರಿಗೆ ಅವಕಾಶ ಕಲ್ಪಿಸಲಾಗಿತ್ತು.
- 1995ರಲ್ಲಿ ಪ್ರಾಥಮಿಕ ಶಿಕ್ಷಣ ನಿರ್ದೇಶಕರು ರಾಜ್ಯದ ಎಲ್ಲಾ ಶಾಲೆಗಳಲ್ಲಿ 9 ರಿಂದ 11 ಜನರನ್ನೊಳಗೊಂಡ 'ಶಾಲಾಭಿವೃದ್ಧಿ ಸಮಿತಿ' ರಚಿಸುವಂತೆ ಸೂಚನೆ ನೀಡಿ ಮೊದಲ ಬಾರಿಗೆ ಒಬ್ಬ ಪೋಷಕರಿಗೆ ಅವಕಾಶ ಕಲ್ಪಿಸಲಾಗಿತ್ತು.
- 1995ರ ಆಗಸ್ಟ್ ನಲ್ಲಿ ಪ್ರತಿ ಕಂದಾಯ ಗ್ರಾಮದಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿ ರಚಿಸುವಂತೆ ಸರ್ಕಾರ ಆದೇಶಿಸಿತು. ಈ ಸಮಿತಿಯಲ್ಲಿ ಕನಿಷ್ಟ 7 ರಿಂದ ಗರಿಷ್ಟ 15 ಸದಸ್ಯರಿದ್ದು ಪೋಷಕ ಪ್ರತಿನಿಧಿಯೊಬ್ಬರಿಗೆ ಅವಕಾಶ ಕಲ್ಪಿಸಲಾಯಿತು.
- 1999ರಲ್ಲಿ ರಚನೆಯಾದ ಶಿಕ್ಷಣ ಕಾರ್ಯಪಡೆಯ ವರದಿಯ ಶಿಫಾರಸ್ಸಿನಂತೆ ರಾಜ್ಯ ಸರ್ಕಾರವು 2001ರಲ್ಲಿ ರಾಜ್ಯದ ಎಲ್ಲಾ ಕಿರಿಯ, ಹಿರಿಯ ಮತ್ತು ಪ್ರೌಢ ಶಾಲೆಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ ಮತ್ತು ಶಾಲಾಭಿವೃದ್ಧಿ ಸಮಿತಿಗಳ ಬದಲಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಆದೇಶ ನೀಡಿತು.
- ಈ ಆದೇಶದ ಅನ್ವಯ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಂದಿರು ಆ ಶಾಲೆಯ ಪಾಲಕರ ಪರಿಷತ್ತು ರಚಿಸಿ. ಆ ಪಾಲಕರ ಪರಿಷತ್ತು '9' ಜನ ಪಾಲಕ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತದೆ. ಈ 9 ಸದಸ್ಯರಲ್ಲಿ ಒಬ್ಬರು ಅಧ್ಯಕ್ಷರಾಗಿರುತ್ತಾರೆ. ದಿನಾಂಕ 14 ಜೂನ್ 2006ರ ರಾಜ್ಯ ಪತ್ರದಲ್ಲಿ ಪುನರ್ ರೂಪಿತ SDMC ಯನ್ನು ಪಂಚಾಯತ್ ರಾಜ್ ಅಧಿನಿಯಮದಡಿಯಲ್ಲಿ ಕರ್ನಾಟಕ ಸರ್ಕಾರವು SDMC ರಚನೆ ಮಾಡಿದೆ.

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆ, ಜವಾಬ್ದಾರಿ ಮತ್ತು ಕರ್ತವ್ಯಗಳು**

ಶಿಕ್ಷಣ ಹಕ್ಕು ಕಾಯ್ದೆ ಸೆಕ್ಷನ್ 21 ರ ಅನ್ವಯ ಅನುದಾನರಹಿತ ಶಾಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಶಾಲೆಗಳಲ್ಲಿ ಶಾಲಾ ಆಡಳಿತ ಸಮಿತಿಯನ್ನು ರಚಿಸುವ ಅವಕಾಶ ಒದಗಿಸಲಾಗಿದೆ. ಮುಂದುವರೆದು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012 ರ ನಿಯಮ 13ರ ಅನ್ವಯ ಪ್ರತಿಯೊಂದು ಶಾಲೆಯು 3 ವರ್ಷದ ಅವಧಿಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಮ್.ಸಿ)ಯನ್ನು ಹೊಂದಿರತಕ್ಕದ್ದು.

ಅನುದಾನರಹಿತ ಶಾಲೆಗಳನ್ನು ಹೊರತು ಪಡಿಸಿ ಉಳಿದೆಲ್ಲ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು (ಎಸ್.ಡಿ.ಎಂ.ಸಿ) ಈ ನಿಯಮಗಳು ಜಾರಿಯಾದ 6 ತಿಂಗಳ ಒಳಗಾಗಿ ರಚಿಸತಕ್ಕದ್ದು ಹಾಗೂ ಪ್ರತಿ ಮೂರು ವರ್ಷಕ್ಕೊಮ್ಮೆ ಪುನರ್ ರಚಿಸತಕ್ಕದ್ದು.

– ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012 –ನಿಯಮ 13(1)

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಒಟ್ಟು 24 ಸದಸ್ಯರನ್ನು ಹೊಂದಿರಬೇಕು (ಸರ್ಕಾರದ ಆದೇಶ ಸಂಖ್ಯೆ: ಇಡಿ 256 ಪಿಬಿಎಸ್ 2014; ದಿನಾಂಕ: 29.01.2015ರಂತೆ); ಇವರಲ್ಲಿ

- 18 ಸದಸ್ಯರನ್ನು ಮಕ್ಕಳ ಪಾಲಕರು ಅಥವಾ ಪೋಷಕರಿಂದ ಆಯ್ಕೆ ಮಾಡಬೇಕು.
- ಆ ಶಾಲೆಯ ಮುಖ್ಯ ಶಿಕ್ಷಕರು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರಬೇಕು.
- ಶಾಲಾ ವ್ಯಾಪ್ತಿಯ ಆರೋಗ್ಯ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಪದನಿಮಿತ್ತ ಸದಸ್ಯರಾಗಿರುತ್ತಾರೆ.
- ಉಳಿದ 3 ನಾಮನಿರ್ದೇಶಿತ ಸದಸ್ಯರು;
  1. ಸ್ಥಳೀಯ ಪ್ರಾಧಿಕಾರದ ಚುನಾಯಿತ ಸದಸ್ಯರಲ್ಲಿ ಒಬ್ಬರನ್ನು ಸ್ಥಳೀಯ ಪ್ರಾಧಿಕಾರ ನಾಮ ನಿರ್ದೇಶನ ಮಾಡಬೇಕು.
  2. ಶಾಲಾ ಶಿಕ್ಷಕರ ಪೈಕಿ ಒಬ್ಬರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡಬೇಕು.
  3. ಶಾಲೆಯ ಒಬ್ಬ ವಿದ್ಯಾರ್ಥಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡಬೇಕು.
- ಒಟ್ಟು 24 ಸದಸ್ಯರ ಪೈಕಿ 12 ಸದಸ್ಯರು ಮಹಿಳೆಯರಾಗಿರಬೇಕು.
- ದುರ್ಬಲ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸದಸ್ಯರನ್ನು ಆಯಾ ಶಾಲೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಆಯ್ಕೆ ಮಾಡಬೇಕು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಪೋಷಕ ಅಥವಾ ಪಾಲಕರ ಚುನಾಯಿತ ಸದಸ್ಯರಲ್ಲೇ ಚುನಾಯಿತರಾಗಬೇಕು.

## ಕೋರಂ

- ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತೆ ತಂದೆ–ತಾಯಿಯರ ಪರಿಷತ್ತಿನ ಹದಿನೆಂಟು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಒಂಭತ್ತು ಸದಸ್ಯರು ಹಾಜರಿರತಕ್ಕದ್ದು.
- ಪದನಿಮಿತ್ತ ಸದಸ್ಯರಲ್ಲಿ ಒಬ್ಬರು ಮತ್ತು ನಾಮ ನಿರ್ದೇಶಿತ ಸದಸ್ಯರಲ್ಲಿ ಇಬ್ಬರು ಹಾಜರಿರತಕ್ಕದ್ದು, ಅವರ ಪೈಕಿ ವಿದ್ಯಾರ್ಥಿ ಹಾಜರಾತಿ ಕಡ್ಡಾಯ.

ಪ್ರತಿ ಗ್ರಾಮ ಪಂಚಾಯಿತಿ ಮೂರು ಸ್ಥಾಯಿ ಸಮಿತಿಗಳನ್ನು ಒಳಗೊಂಡಿರುತ್ತದೆ.
1. ಉತ್ಪಾದನಾ ಸಮಿತಿ 2. ಸಾಮಾಜಿಕ ನ್ಯಾಯ ಸಮಿತಿ 3. ನಾಗರೀಕ ಸೌಲಭ್ಯ ಸಮಿತಿ.

## ನಾಗರೀಕ ಸೌಲಭ್ಯ ಸಮಿತಿ

ಗ್ರಾಮ ಪಂಚಾಯಿತಿಯಲ್ಲಿರುವ ನಾಗರೀಕ ಸೌಲಭ್ಯ ಸಮಿತಿಯು ಶಿಕ್ಷಣ, ಸಾರ್ವಜನಿಕ ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರೆ ಕಾರ್ಯಗಳನ್ನು ನಿರ್ವಹಿಸಲು ಇರುವ ಸಮಿತಿಯಾಗಿರುತ್ತದೆ.ಶಿಕ್ಷಣಕ್ಕೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡುವುದು ಪಂಚಾಯಿತಿ ಅರ್ಥಾತ್ ನಾಗರೀಕ ಸೌಲಭ್ಯ ಸಮಿತಿ ಯ (CAC) ಜವಾಬ್ದಾರಿಯಾಗಿರುತ್ತದೆ.

SDMC ಯ ಉಪ ವಿಧಿಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣದ ಜವಾಬ್ದಾರಿ ನಾಗರೀಕ ಸೌಕರ್ಯ ಸಮಿತಿಯ ಅಡಿಯಲ್ಲಿರುವುದರಿಂದ SDMC ಗಳನ್ನು ರಚಿಸಿ ಆ ಮೂಲಕ SDMC ಗಳಿಗೆ ಶಾಸನ ಬದ್ಧ ಸ್ಥಾನಮಾನಗಳನ್ನು ಕಲ್ಪಿಸಲಾಗಿದೆ.

SDMC ಗಳು ಗ್ರಾಮ ಪಂಚಾಯಿತಿಯ ನಾಗರೀಕ ಸೌಲಭ್ಯ ಸಮಿತಿಯ ಭಾಗವಾಗಿ ಕೆಲಸ ನಿರ್ವಹಿಸುವುದರಿಂದ ಇವುಗಳ ಮೇಲ್ವಿಚಾರಣೆ, ಗುಣಾತ್ಮಕ ಶಿಕ್ಷಣಕ್ಕೆ ಬೆಂಬಲ ಹಾಗೂ ಸಹಕಾರ ಮತ್ತು ಉತ್ತೇಜನ ನೀಡಬೇಕಾಗುತ್ತದೆ.ಪ್ರತಿ ಶಾಲೆಯ SDMC ರಚನೆಯಾದ ನಂತರ ಈ ಸಮಿತಿಯಿಂದ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕಾಗಿದೆ.ಈ ಸಮಿತಿಯು 3 ತಿಂಗಳಿಗೊಮ್ಮೆ ಸಮನ್ವಯ ಸಮಿತಿಯಲ್ಲಿ ಪಾಲ್ಗೊಂಡು ಶಾಲೆಯ ಅಗತ್ಯತೆ ಗುಣಾತ್ಮಕ ಕಲಿಕೆಯನ್ನು ಖಾತರಿಪಡಿಸಿಕೊಳ್ಳುವುದು.

## ಎಸ್.ಡಿ.ಎಂ.ಸಿ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯವರ ಅಧಿಕಾರ ಹಾಗೂ ಕರ್ತವ್ಯಗಳು

### ಅಧ್ಯಕ್ಷರ ಪ್ರಕಾರ್ಯಗಳು

**ಎ. ಅಧ್ಯಕ್ಷರು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು**

1. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾಗಿ ಸಭೆಗಳ ಅಧ್ಯಕ್ಷತೆ ವಹಿಸುವುದು.
2. ಮುಖ್ಯ ಶಿಕ್ಷಕರಿಗೆ ಸಾಂದರ್ಭಿಕ ರಜೆ ನೀಡುವುದು.
3. ದೂರುಗಳ ಪೆಟ್ಟಿಗೆಯನ್ನು ಆ ಸಮಯದಲ್ಲಿ ಅಲ್ಲಿ ಲಭ್ಯವಿರುವ ಕನಿಷ್ಠ ಒಬ್ಬ ಶಿಕ್ಷಕ ಮತ್ತು ವಿದ್ಯಾರ್ಥಿಯ ಉಪಸ್ಥಿತಿಯಲ್ಲಿ ಕನಿಷ್ಠ ವಾರಕ್ಕೊಮ್ಮೆ ತೆರೆಯುವುದು.

ಬಿ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

### ಉಪಾಧ್ಯಕ್ಷರ ಪ್ರಕಾರ್ಯಗಳು

ಎ. ಅಧ್ಯಕ್ಷರ ಗೈರು ಹಾಜರಿಯಲ್ಲಿ, ಉಪಾಧ್ಯಕ್ಷರು ಎಸ್.ಡಿ.ಎಂ.ಸಿ ಉಪವಿಧಿಗಳ 7ನೇ ಖಂಡದಲ್ಲಿ ನಿರ್ದಿಷ್ಟ ಪಡಿಸಲಾದಂತೆ ಅಧ್ಯಕ್ಷರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಬಿ. ಉಪಾಧ್ಯಕ್ಷರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂತ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

### ಸದಸ್ಯ ಕಾರ್ಯದರ್ಶಿಯ ಪ್ರಕಾರ್ಯಗಳು

**ಎ. ಸದಸ್ಯ ಕಾರ್ಯದರ್ಶಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:**

i) ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಕನಿಷ್ಠ ಒಂದು ತಿಂಗಳ ಮೊದಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅನುಮೋದನೆ ಪಡೆದು ವಾರ್ಷಿಕ ಕ್ರಿಯಾಯೋಜನೆಯಲ್ಲಿ ಸಿದ್ಧಪಡಿಸುವುದು ಮತ್ತು ಅದನ್ನು ಸಿದ್ಧಪಡಿಸಿದ ಒಂದು ವಾರದೊಳಗೆ ಸಿ.ಎ.ಸಿ ಗೆ ಸಲ್ಲಿಸತಕ್ಕದ್ದು.

ii) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಗೆ ಕಾರ್ಯಸೂಚಿ ತಯಾರಿಸುವುದು.
ಸಭೆಗಳ ಕಾರ್ಯಸೂಚಿಯು ಶಾಲೆಯ ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಸಿಕ ಲೆಕ್ಕಪತ್ರಗಳು, ಶಾಲಾ ಅಭಿವೃದ್ಧಿ, ಆಡಳಿತ, ಹಾಜರಾತಿ, ದಾಖಲಾತಿ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಅವರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರತಕ್ಕದ್ದು.

iii) ಎಸ್.ಡಿ.ಎಂ.ಸಿ ಅಧಿನಿಯಮದ ಅಧ್ಯಾಯ iv ರ ಅನುಸಾರ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ಕರೆಯುವುದು ಮತ್ತು ಅದಕ್ಕೆ ಅನುಕೂಲ ಕಲ್ಪಿಸಿಕೊಡುವುದು ಮತ್ತು ಎಲ್ಲಾ ಸಭೆಗಳ ನಡಾವಳಿಗಳನ್ನು ತೆಗೆದುಕೊಳ್ಳುವುದು.

iv) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಹಿತಿಗಾಗಿ ಆತನ / ಆಕೆಯ ಅಧಿಕಾರದ ಅಡಿಯಲ್ಲಿ ಬರುವ ಎಲ್ಲ ವಿಷಯಗಳ ಮಾಹಿತಿಯನ್ನು ತಯಾರಿಸುವುದು.

v) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಲೆಕ್ಕ ಪತ್ರಗಳು ಮತ್ತು ದಾಖಲೆಗಳನ್ನು ಇಟ್ಟುಕೊಳ್ಳುವುದು.

vi) ಆತನ/ಆಕೆಯ ಪ್ರಭಾರದಲ್ಲಿರುವ ಶಾಲೆಗೆ ಸೇರಿರುವ ಎಲ್ಲ ದಸ್ತಾವೇಜುಗಳು ಮತ್ತು ಸ್ವತ್ತಿನ ಸುರಕ್ಷಿತ ಸುಪರ್ದಿಗೆ ಜವಾಬ್ದಾರರಾಗಿರುವುದು.

vii) ಕನಿಷ್ಠಪಕ್ಷ, ಪ್ರತಿ ಮೂರು ತಿಂಗಳುಗಳಿಗೊಮ್ಮೆ ತಂದೆ ತಾಯಿಯರ ಪರಿಷತ್ತು ಮತ್ತು ನಾಗರೀಕ ಸೌಲಭ್ಯ ಸಮಿತಿಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಚಟುವಟಿಕೆಗಳ ವರದಿ ಮತ್ತು ಲೆಕ್ಕಪತ್ರಗಳ ವಿವರ ಪಟ್ಟಿಯನ್ನು ತಯಾರಿಸುವುದು ಹಾಗೂ ಹಾಜರುಪಡಿಸುವುದು.

viii) ಪತ್ರ ವ್ಯವಹಾರ ನಡೆಸುವುದು ಹಾಗೂ ಎಲ್ಲ ನೋಟೀಸುಗಳನ್ನು ಮತ್ತು ಜಾಹೀರಾತುಗಳನ್ನು ಹೊರಡಿಸುವುದು.

ಬಿ. ಸದಸ್ಯ ಕಾರ್ಯದರ್ಶಿಗಳು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

## ಸಿ.ಎ.ಸಿ. ಮತ್ತು ಎಸ್.ಡಿ.ಎಮ್.ಸಿ.ಯ ಅಧಿಕಾರಗಳು ಮತ್ತು ಕರ್ತವ್ಯಗಳು

## (ಎ) ನಾಗರಿಕ ಸೌಲಭ್ಯ ಸಮಿತಿಯ ಕರ್ತವ್ಯಗಳು ಮತ್ತು ಅಧಿಕಾರಗಳು

- ನಾಗರಿಕ ಸೌಲಭ್ಯ ಸಮಿತಿಯು ಪಂಚಾಯಿತಿ ಪ್ರದೇಶದ ವ್ಯಾಪ್ತಿಯೊಳಗೆ ಪ್ರತಿಯೊಂದು ಪ್ರಾಥಮಿಕ ಶಾಲೆಗಾಗಿ ಒಂದು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸುವುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನಾ ಕಾರ್ಯವನ್ನು ಆಯಾ ಶಾಲೆಯ ಮುಖ್ಯ ಶಿಕ್ಷಕರಿಗೆ ಪ್ರತ್ಯಾಯೋಜಿಸುವುದು.
- ನಿಯಮಾನುಸಾರ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ರಚನೆ ಆಗಿದೆಯೇ ಎಂದು ಪರಿಶೀಲನೆ ನಡೆಸುವುದು
- ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಅನುಸೂಚಿ ಒಂದರ XIIIನೇ ಖಂಡದಲ್ಲಿ ನಿರ್ದಿಷ್ಟ ಪಡಿಸಲಾದ ಪ್ರಕಾರ್ಯಗಳ ಮುಂದುವರಿಕೆಯಾಗಿ ಈ ಸಂಬಂಧದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕೈಗೊಂಡ ಕ್ರಮಗಳನ್ನು ಪರಿಶೀಲನೆ ಮಾಡುವುದು
- ವಾರ್ಷಿಕ ಕಾಮಗಾರಿ ಯೋಜನೆಗಳ ಅನುಷ್ಠಾನವನ್ನು ನಿಯಮಿತವಾಗಿ ಪರಿಶೀಲನೆ ಮಾಡುವುದು ಹಾಗೂ ಅಗತ್ಯ ನೆರವು ನೀಡುವುದು.
- ಸಿ.ಎ.ಸಿ.ಯು ಮಾಹಿತಿ ವಿನಿಮಯ ಮತ್ತು ಸಮನ್ವಯತೆಯ ಉದ್ದೇಶಕ್ಕಾಗಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಪಕ್ಷ ಪ್ರತಿ 3 ತಿಂಗಳಿಗೊಮ್ಮೆ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಪದಾಧಿಕಾರಿಗಳ ಜಂಟಿ ಸಭೆಯನ್ನು ನಡೆಸುವುದು.
- ನಾಗರೀಕ ಸೌಲಭ್ಯ ಸಮಿತಿಯು ತನ್ನ ವ್ಯಾಪ್ತಿಯ ಶಾಲೆಯ ಶಿಕ್ಷಣಕ್ಕಾಗಿ ಮತ್ತು ಶಾಲೆಯ ಮೂಲಭೂತ ಸೌಕರ್ಯಗಳಿಗಾಗಿ ತಾನು ಸ್ವೀಕರಿಸಿದ ಎಲ್ಲಾ ನಿಧಿಗಳನ್ನು ಸ್ವೀಕರಿಸಿದ ಒಂದು ವಾರದೊಳಗೆ ಸಂಬಂಧಿಸಿದ ಶಾಲೆಯ ಲೆಕ್ಕಕ್ಕೆ ವರ್ಗಾಯಿಸತಕ್ಕದ್ದು.
- ನಾಗರೀಕ ಸೌಲಭ್ಯ ಸಮಿತಿಯು ಶಾಲೆಗಳ ಅಗತ್ಯಕ್ಕೆ ತಕ್ಕಂತೆ ಪಂಚಾಯತಿ ಪ್ರದೇಶದ ವ್ಯಾಪ್ತಿಯೊಳಗಿನ ಶಾಲೆಗಳ ಲೆಕ್ಕಕ್ಕೆ ಹೆಚ್ಚುವರಿ ನಿಧಿಗಳನ್ನು ವರ್ಗಾಯಿಸಬಹುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯದರ್ಶಿ ತಯಾರಿಸಿದ ಶಾಲಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಪರಿಶೀಲಿಸುವುದು ಹಾಗೂ ಅಗತ್ಯ ಸಲಹೆ, ಸೂಚನೆಗಳೊಂದಿಗೆ ಒಂದುವಾರದೊಳಗಾಗಿ ಅನುಮೋದನೆ ನೀಡುವುದು.
- 6 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವುದರಲ್ಲಿ ಎಸ್.ಡಿ.ಎಂ.ಸಿ.ಗೆ ಸಲಹೆ ಸಹಕಾರ ನೀಡುವುದು.
- ಪ್ರಾಥಮಿಕ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ದಾಖಲಾತಿ ಹಾಗೂ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು.
- ಶಿಕ್ಷಣದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.
- ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ, ಸಮವಸ್ತ್ರ, ಪಠ್ಯಪುಸ್ತಕ ಮುಂತಾದ ಎಲ್ಲಾ ಸರ್ಕಾರಿ ಯೋಜನೆಗಳು ಶಾಲೆಯಲ್ಲಿ ಸಕಾಲದಲ್ಲಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.
- ಸಮೂಹ ಸಂಪನ್ಮೂಲ ವ್ಯಕ್ತಿ ಮತ್ತು ಶೈಕ್ಷಣಿಕ ಸಮನ್ವಯಕಾರರಿಗೆ ಶಾಲಾ ವ್ಯವಸ್ಥೆಯ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆಗಳು ಯಾವುದಾದರು ಇದ್ದರೆ ಅವುಗಳನ್ನು ಸೂಚಿಸುವುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲಾ ಸ್ವತ್ತುಗಳು, ನಿಧಿಗಳು ಮತ್ತು ಹಣಕಾಸಿನ ಮೇಲ್ವಿಚಾರಣೆಯನ್ನು ನಡೆಸುವುದು.
- ಆಟದ ಮೈದಾನ, ಆವರಣ, ಗೋಡೆ, ಕೊಠಡಿಗಳು, ಶೌಚಾಲಯಗಳು, ಕುಡಿಯುವ ನೀರಿನ ಸೌಲಭ್ಯ, ಅಡುಗೆಕೋಣೆ, ಮುಂತಾದ ಮೂಲ ಸೌಕರ್ಯಗಳು ಹಾಗೂ ಶಾಲೆಗೆ ಅವಶ್ಯವಿರುವ ಇತರ ಸೌಕರ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಲ್ಲಿಸಿದ ವರದಿಯನ್ನು ಪರಿಶೀಲಿಸುವುದು.
- ಉಪವಿಧಿಗಳೊಳಗಿನ ಅಧ್ಯಾಯಕ್ಕೆ ಅನುಸಾರವಾಗಿ ವಿದ್ಯಾರ್ಥಿಗಳ, ತಂದೆ ತಾಯಿಯರ, ಶಿಕ್ಷಕರ ಮತ್ತು ಶಾಲೆಯ, ಬೋಧಕೇತರ ಸಿಬ್ಬಂದಿ ವರ್ಗದವರ ಕುಂದು ಕೊರತೆಗಳನ್ನು ಹಾಗೂ ದೂರುಗಳನ್ನು ಬಗೆಹರಿಸುವುದು.
- ನೇರವಾಗಿ ಆಗಲಿ, ಅಥವಾ ದೂರು ಪೆಟ್ಟಿಗೆಯ ಮೂಲಕವಾಗಲಿ ಬಂದ ಲಿಖಿತ ಅಥವಾ ಮೌಖಿಕ ದೂರುಗಳನ್ನು ಪರಿಹರಿಸುವುದು.
- ದೂರುಗಳನ್ನು ಪರಿಹರಿಸಲು ಸಿ.ಎ.ಸಿ.ಯು ದ್ವಿಸದಸ್ಯ ಸಮಿತಿಯನ್ನು ನೇಮಕ ಮಾಡುವುದು.
- ವಿಚಾರಣಾ ಸಮಿತಿಯು ನೀಡಿದ ವರದಿ ಹಾಗೂ ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವುದು
- ಮಕ್ಕಳ ಮೇಲೆ ಯಾವುದೇ ಪ್ರಕಾರದ ದೈಹಿಕ ಅಥವಾ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸುವುದು.
- ಎಸ್.ಡಿ.ಎಂ.ಸಿ. ಅಸ್ತಿತ್ವದಲ್ಲಿರದ ಸಂದರ್ಭಗಳಲ್ಲಿ ಅಥವಾ ರದ್ದುಪಡಿಸಿದ ಸಂದರ್ಭಗಳಲ್ಲಿ ನಿಯಮಾನುಸಾರ ಹೊಸ ಎಸ್.ಡಿ.ಎಂ.ಸಿ.ಯನ್ನು ರಚಿಸುವವರೆಗೆ ಅದರ ಪ್ರಕಾರ್ಯಗಳನ್ನು ಸಿ.ಎ.ಸಿ. ನಿರ್ವಹಿಸುವುದು.

- ಎಸ್.ಡಿ.ಎಂ.ಸಿ.ಯಲ್ಲಿನ ಹಣಕಾಸು ವ್ಯವಹಾರವು ದುರುಪಯೋಗವಾಗಿರುವುದು ಸಾಬೀತಾಗಿದ್ದಲ್ಲಿ ಸಿ.ಎ.ಸಿ.ಯು ಅಧ್ಯಕ್ಷ ಹಾಗೂ ಕಾರ್ಯದರ್ಶಿಯವರಿಗೆ ಖಾತೆ ವ್ಯವಹಾರ ನಿಲ್ಲಿಸುವಂತೆ ನಿರ್ದೇಶನ ನೀಡಬಹುದಾಗಿದೆ. ಸೂಕ್ತ ಕ್ರಮ ಕೈಗೊಂಡ ನಂತರ ಖಾತೆ ವ್ಯವಹಾರ ಮುಂದುವರೆಸಲು ಸೂಚನೆ ನೀಡಬಹುದುದಾಗಿದೆ.

## (ಬಿ) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

ಶಾಲೆಯ ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಕೆಯಲ್ಲಿ ಸದಸ್ಯ–ಕಾರ್ಯದರ್ಶಿಗೆ ಮಾರ್ಗದರ್ಶನ ನೀಡುವುದು ಮತ್ತು ಪ್ರತಿ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಕನಿಷ್ಠ ಒಂದು ತಿಂಗಳು ಮೊದಲು ಅದನ್ನು ಅನುಮೋದಿಸುವುದು.

- ಶಿಕ್ಷಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಕ್ರಮಬದ್ಧ ಹಾಗೂ ಸಕಾಲಿಕ ಹಾಜರಾತಿಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಶೀಲಿಸುವುದು
- ಈ ಉದ್ದೇಶಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು, ಹಾಜರಾತಿ ಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುವಂತೆ ಶಾಲೆಯನ್ನು ಅಗತ್ಯಪಡಿಸಬಹುದು
- ಶಾಲಾ ಅಭುವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಯಾವುದೇ ಸದಸ್ಯರು ಶಾಲೆಯಲ್ಲಿ ನಿರ್ವಹಿಸಿರುವ ಎಲ್ಲಾ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸುವ ಅಧಿಕಾರ ಹೊಮದಿರುತ್ತಾರೆ.
- ಧರ್ಮ, ಜನಾಂಗ, ಲಿಂಗ, ಭಾಷೆ, ಹುಟ್ಟಿದ ಸ್ಥಳ – ಇವು ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ ಗ್ರಾಮದಲ್ಲಿರುವ ಶಾಲೆಗೆ ಹೋಗದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವುದನ್ನು ಖಚಿತಪಡಿಸುವುದು.
- ಇದಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಹೆಣ್ಣುಮಕ್ಕಳು, ಅಂಗವಿಕಲ ಮಕ್ಕಳು, ಬಾಲಕಾರ್ಮಿಕರು ಹಾಗೂ ಅವರ ತಂದೆತಾಯಿಯರಿಗಾಗಿ ದಾಖಲಾತಿ ಆಂದೋಲನ, ಸೇತುಬಂಧ ಕಾರ್ಯಕ್ರಮಗಳು ಮತ್ತು ವಿಶೇಷ ಪ್ರಚಾರಾಂದೋಲನವನ್ನು ನಡೆಸಬಹುದು.
- ಗ್ರಾಮದಲ್ಲಿರುವ ದೈಹಿಕ ವಿಕಲತೆಯ ಅಥವಾ ಮಾನಸಿಕವಾಗಿ ಅಸ್ವಸ್ಥಗೊಂಡ ಮಕ್ಕಳ ವಿರುದ್ಧ ತಾರತಮ್ಯ ನಡೆಯದಿರುವುದನ್ನು ಖಚಿತಪಡಿಸುವುದು ಹಾಗೂ ಅವರು ಶಾಲೆಗೆ ಹಾಜರಾಗಲು ಸಮರ್ಥರಾಗುವಂತೆ ಶ್ರವಣ ಸಾಧನಗಳು, ಬ್ರೈಲ್ ಮುಂತಾದ ವಿಶೇಷ ಸೌಲಭ್ಯಗಳನ್ನು ಒದಗಿಸುವುದು.
- ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು ಶಾಲೆಯಲ್ಲಿರುವ ಎಲ್ಲಾ ಮಕ್ಕಳ ಹಾಜರಾತಿಯ ಬಗ್ಗೆ ಹಾಗೂ ಅವರನ್ನು ಶಾಲೆಯಲ್ಲೇ ಉಳಿಸಿಕೊಳ್ಳುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಈ ಉದ್ದೇಶಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಉಚಿತ ಪಠ್ಯ ಪುಸ್ತಕಗಳು, ಮಧ್ಯಾಹ್ನ ಬಿಸಿ ಊಟ, ಸಮವಸ್ತ್ರ ಮತ್ತು ವಿದ್ಯಾರ್ಥಿ ವೇತನಗಳು ಮುಂತಾದ ಪ್ರೋತ್ಸಾಹಕಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅವುಗಳ ವಿತರಣೆಯ ಮೇಲ್ವಿಚಾರನೆ ಮಾಡತಕ್ಕದ್ದು.
- ಕನಿಷ್ಠಪಕ್ಷ ಮೂರು ತಿಂಗಳುಗಳಿಗೊಮ್ಮೆ ತಂದೆತಾಯಿಯರ ಪರಿಷತ್ತಿನ ಸಭೆಗಳನ್ನು ಕರೆಯುವುದು.
- ಶಾಲೆಗೆ ಮಕ್ಕಳನ್ನು ಕಳಿಸಲು ವಿಫಲರಾಗುವ ತಂದೆತಾಯಿಗಳಿಗಾಗಿ ಸಭೆಗಳನ್ನು ನಿಯತಕಾಲಿಕವಾಗಿ ನಡೆಸುವುದು.
- ಶಾಲೆಯಲ್ಲಿ ಸಂಪೂರ್ಣ ನೈರ್ಮಲ್ಯ, ಸುಸ್ಥಿತಿ ಮತ್ತು ಉತ್ತಮ ನಿರ್ವಹಣೆಯಿರುವಂತೆ ನೋಡಿಕೊಳ್ಳುವುದು.
- ಆಟದ ಮೈದಾನ, ಆವರಣ ಗೋಡೆಗಳು, ಕೊಠಡಿಗಳು, ಶೌಚಾಲಯ, ಪೀಠೋಪಕರಣ, ಕುಡಿಯುವ ನೀರಿನ ಸೌಲಭ್ಯ ಮುಂತಾದ ಮೂಲ ಸೌಕರ್ಯಗಳು ಹಾಗೂ ಶಾಲೆಗೆ ಅವಶ್ಯವಿರುವ ಇತರ ಸೌಕರ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು.
- ಎಲ್ಲ ಪ್ರಕಾರ್ಯಗಳ ಮುಂದುವರಿಕೆಗೆ ಅವಶ್ಯಕವೆನಿಸುವ ಅಥವಾ ಅನುಕೂಲಕರವೆನಿಸುವ ಸ್ಥಿರ ಅಥವ ಚರ ಸ್ವತ್ತು ಅಥವಾ ಯಾವುದೇ ಹಕ್ಕುಗಳು ಅಥವಾ ವಿಶೇಷ ಸೌಲಭ್ಯಗಳನ್ನು ಅರ್ಜಿಸುವುದು, ಖರೀದಿಸುವುದು ಅಥವಾ ಅನ್ಯಥಾ ಸ್ವಂತವಾಗಿ ಹೊಂದುವುದು ಅಥವಾ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಗುತ್ತಿಗೆಗೆ ಅಥವಾ ಬಾಡಿಗೆಗೆ ಪಡೆಯುವುದು.
- ಸ್ವ ಇಚ್ಛೆಯ ಮೇರೆಗೆ ಅಥವಾ ಶಾಲಾನಿಧಿಗಳಿಂದ ವೆಚ್ಚವನ್ನು ಭರಿಸಿ, ನಿಗಧಿಪಡಿಸಿದ ಸಂಭಾವನೆಯನ್ನು ಸಂದಾಯ ಮಾಡುವ ಮೂಲಕ, ಅವಶ್ಯವಿರುವೆಡೆ, ಸಂದರ್ಭಾನುಸಾರ, ಶಿಕ್ಷಕರಾಗಿ ಅಥವಾ ಬೋಧಕರಾಗಿ ಸ್ಥಳೀಯ ವ್ಯಕ್ತಿಗಳ ಸೇವೆಗಳನ್ನು ಪಡೆಯುವುದು. ಪರಂತು, ನಿಯತ ಹುದ್ದೆಯನ್ನು ಈ ರೀತಿಯಲ್ಲಿ ಖಾಯಂ ಆಗಿ ಭರ್ತಿ ಮಾಡಬಾರದು.
- ವರ್ಷದಲ್ಲಿ ಕನಿಷ್ಠ ಪಕ್ಷ ಇನ್ನೂರ ಇಪ್ಪತ್ತು ಬೊಧನಾ ದಿನಗಳನ್ನು ಖಚಿತಪಡಿಸುವುದು.
- ಶಿಕ್ಷಕರ ಸಾಧನೆಯನ್ನು ನಿಯತಕಾಲಿಕವಾಗಿ ಅವಲೋಕಿಸುವುದು ಮತ್ತು ಸರ್ವಶಿಕ್ಷಣ ಅಭಿಯಾನ ಅಥವಾ ಕಾಲಕಾಲಕ್ಕೆ ಅನ್ವಯವಾಗುವಂಥ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಇತರ ಕಾರ್ಯಕ್ರಮದ ಅಡಿಯಲ್ಲಿ ಗೊತ್ತುಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಪಾಲಿಸುವಂತೆ ಮಾಡುವುದು.

- ಶಿಕ್ಷಕರ ಮತ್ತು ಮುಖ್ಯ ಶಿಕ್ಷಕರ ಬೇಡಿಕೆಯನ್ನು ಆಧರಿಸಿ ಶಿಕ್ಷಕರಿಗೆ ಅವಶ್ಯಕತೆಯಾಧಾರಿತ ತರಬೇತಿಗಳನ್ನು ಒದಗಿಸಲು ಅನುಕೂಲ ಕಲ್ಪಿಸುವುದು.
- ವಿದ್ಯಾರ್ಥಿಗಳ ಸಾಧನೆಯನ್ನು ನಿಯತಕಾಲಿಕವಾಗಿ ಅವಲೋಕಿಸುವುದು ಮತ್ತು ಎಸ್.ಸಿ.ಇ.ಆರ್.ಟಿ. ಮತ್ತು ರಾಜ್ಯ ಸರ್ಕಾರವು ಗೊತ್ತುಪಡಿಸಿದ ಮಾನದಂಡಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದು.
- ಶಾಲೆಯಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ನಿಯತವಾಗಿ ಅವಲೋಕಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಮತ್ತು ಮಕ್ಕಳಿಗಾಗಿ ಕ್ರಮಬದ್ಧವಾಗಿ ಆರೋಗ್ಯ ಶಿಬಿರಗಳನ್ನು ನಡೆಸಲು ನೆರವು ನೀಡುವುದು.
- ಶಾಲೆಯ ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಹಣಕಾಸಿನ ಮೇಲ್ವಿಚಾರಣೆ ನಡೆಸುವುದು.
- ಶಾಲಾ ಅಭಿವೃದ್ಧಿಗಾಗಿ ಹಣ ಮತ್ತು ನಿಧಿಗಳನನು ಪಡೆಯಲು ಮನವಿಗಳು ಮತ್ತು ಅರ್ಜಿಗಳನ್ನು ನೀಡುವುದು ಹಾಗೂ ನಗದು ರೂಪದಲ್ಲಿ ಯಾವುದೇ ದಾನಗಳು ಅಥವಾ ದೇಣಿಗೆಗಳು, ಭದ್ರತೆಗಳು ಅಥವಾ ಚರ ಅಥವಾ ಸ್ಥಿರ ರೂಪದಲ್ಲಿ ಯಾವುದೇ ಸ್ವತ್ತನ್ನು ಸ್ವೀಕರಿಸುವುದು, ಸಂಗ್ರಹಿಸುವುದು ಮತ್ತು ಅಂಗೀಕರಿಸುವುದು ಮತ್ತು ಅದರ ಸದರಿ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳ ಈಡೇರಿಕೆಗಾಗಿ ಅದನ್ನು ಖರ್ಚು ಮಾಡುವುದು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯವನ್ನು ಅವಲೋಕಿಸುವುದು ಮತ್ತು ಈ ಬಗ್ಗೆ ಕನಿಷ್ಠ ಪಕ್ಷ ಮೂರು ತಿಂಗಳುಗಳಿಗೊಮ್ಮೆ ತಂದೆತಾಯಿಯರ ಪರಿಷತ್ತು ಮತ್ತು ಸೌಲಭ್ಯ ಸಮಿತಿಗೆ ವರದಿ ಮಾಡುವುದು.
- ಶಾಲಾ ಕಾರ್ಯಚಟುವಟಿಕೆಗಳಲ್ಲಿ ಎಲ್ಲಾ ತಂದೆತಾಯಿಯರೂ ಒಳಗೊಳ್ಳುವಂತೆ ಮಾಡಲು (ಶಾಲೆಗೆ ಹೋಗದ ಮಕ್ಕಳ ತಂದೆತಾಯಿಯರೂ ಸೇರಿದಂತೆ) ಮತ್ತು ಅವರು ತಮ್ಮ ಮಕ್ಕಳನ್ನು ನಿಯತವಾಗಿ ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸಲು ನಿಯತಕಾಲಿಕವಾಗಿ ವಿದ್ಯಾರ್ಥಿಗಳ ತಂದೆತಾಯಿಯರ ದಿನವನ್ನು ಆಚರಿಸುವುದು.
    * ನಾಗರಿಕ ಸೌಲಭ್ಯ ಸಮಿತಿ (ಸಿಎಸಿ), ಸಮೂಹ ಸಂಪನ್ಮೂಲ ವ್ಯಕ್ತಿ ಮತ್ತು ಶೈಕ್ಷಣಿಕ ಸಮನ್ವಯಕಾರರಿಗೆ ಶಾಲಾ ವ್ಯವಸ್ಥೆಯ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆಗಳಾವುವಾದರೂ ಇದ್ದರೆ, ಅವುಗಳನ್ನು ಸೂಚಿಸುವುದು.
    * ವರ್ಷದಲ್ಲಿ ನಾಲ್ಕಕ್ಕಿಂತ ಹೆಚ್ಚಿಲ್ಲದಂತೆ ಸ್ಥಳೀಯ ರಜಾದಿನಗಳನ್ನು ನಿರ್ಣಯಿಸುವುದು.
    * ಮಧ್ಯಾಹ್ನದ ಬಿಸಿಊಟ ಮುಂತಾದ ಎಲ್ಲಾ ಸರ್ಕಾರಿ ಯೋಜನೆಗಳು ಶಾಲೆಯಲ್ಲಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.
    * ಮಕ್ಕಳು, ಮಕ್ಕಳ ಸಹಾಯವಾಣಿಯ ಉಪಯೋಗ ಮತ್ತು ಉದ್ದೇಶವನ್ನು ಅಳವಡಿಸಿಕೊಳ್ಳಬಹುದಾದಂತ ಸಮಯದಲ್ಲಿ ಪ್ರತಿಯೊಂದು ಶಾಲೆಯ, ಮಕ್ಕಳ ಸಹಾಯವಾಣಿ ಸಂಖ್ಯೆ 1098 ಪ್ರದರ್ಶಿಸುವಂತೆ ಮತ್ತು ಪ್ರಚಾರ ಮಾಡುವಂತೆ ನೋಡಿಕೊಳ್ಳುವುದು.
    * ಒತ್ತುವರಿ ಮತ್ತು ಯಾವುದೇ ಅಡಚಣೆಯಾಗದಂತೆ ಶಾಲಾ ಆವರಣವನ್ನು ರಕ್ಷಿಸುವುದು.
    * ಈ ಉಪವಿಧಿಗಳ 5ನೇ ಅಧ್ಯಾಯಕ್ಕನುಸಾರವಾಗಿ, ವಿದ್ಯಾರ್ಥಿಗಳ, ತಂದೆತಾಯಿಯರ, ಶಿಕ್ಷಕರ ಮತ್ತು ಶಾಲೆಯ ಬೋಧಕೇತರ ಸಿಬ್ಬಂದಿ ವರ್ಗದವರ ಕುಂದುಕೊರತೆಗಳನ್ನು ಹಾಗೂ ದೂರುಗಳನ್ನು ಬಗೆಹರಿಸುವುದು.
    * ಪ್ರಾಸಂಗಿಕವಾದಂತಹ ಇತರ ಎಲ್ಲ ಕಾನೂನುಬದ್ಧ ಕಾರ್ಯಗಳು, ಕೃತ್ಯಗಳು ಮತ್ತು ಕೆಲಸಗಳನ್ನು ಮಾಡುವುದು.

**ಶಾಲೆಯಲ್ಲಿ ದೂರುಪೆಟ್ಟಿಗೆ**

ಶಾಲೆಯ ಸಿಬ್ಬಂದಿ ಸದಸ್ಯರ ಸಂಬಂಧವಾಗಿ ನೇರವಾಗಿ ಆಗಲಿ ಅಥವಾ ದೂರು ಪೆಟ್ಟಿಗೆಯ ಮುಖಾಂತರವಾಗಲಿ ನಾಗರೀಕ ಸೌಲಭ್ಯ ಸಮಿತಿಗೆ ಮೌಖಿಕ ಅಥವಾ ಲಿಖಿತ ದೂರುಗಳನ್ನು ಸಲ್ಲಿಸಬಹುದು.

* ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ನೇಮಿಸಿಕೊಂಡಿರುವುದು.
* ಶಾಲೆಯಲ್ಲಿ ಮಕ್ಕಳಿಗೆ ದೈಹಿಕ ಅಥವಾ ಲೈಂಗಿಕ ಕಿರುಕುಳ ನೀಡಿರುವುದು.
* ಮಕ್ಕಳು ಅಥವಾ ಯಾರೇ ಸಿಬ್ಬಂದಿ ಸದಸ್ಯರಿಗೆ ಯಾವುದೇ ವಿಧವಾದ ಅಗೌರವ ಅಥವಾ ತಾರತಮ್ಯ ಎಸಗಿರುವುದು.
* ಶಿಕ್ಷಕರು, ಬೋಧಕೇತರ ಸಿಬ್ಬಂದಿ ಅಥವಾ SDMC ಸದಸ್ಯರ ಉದಾಸೀನತೆ ಕರ್ತವ್ಯಲೋಪ.
* ದುರ್ವರ್ತನೆ, ದುರ್ನಡತೆ, ಅಸಭ್ಯವರ್ತನೆಗಳ ಬಗ್ಗೆ.
* ಶಾಲೆಯ ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗ.
* SDMC ಕಾರ್ಯನಿರ್ವಹಣೆ ಬಗ್ಗೆ.

**ಸದಸ್ಯತ್ವ ಕೊನೆಗೊಳಿಸುವುದು**

* ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರ ಗರಿಷ್ಠ ಅವಧಿ ಮೂರು ವರ್ಷಗಳ ಅಥವಾ ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಅವಧಿಯು ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದೋ ಮೊದಲೋ ಅದು ಆಗಿರುತ್ತದೆ.
* ಸದಸ್ಯರ ಸದಸ್ಯತ್ವವು ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಅವಧಿಯು ಮುಕ್ತಾಯವಾಗುವವರೆಗೆ ಮಾತ್ರ ಇರುವುದು.

**ಈ ಯಾವುದೇ ಘಟನೆಗಳು ಸಂಭವಿಸಿದಲ್ಲಿ ಸದಸ್ಯತ್ವವು ರದ್ದಾಗತಕ್ಕದ್ದು.**

* ಸದಸ್ಯರು ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ
* SDMCವ್ಯಾಪ್ತಿಯಲ್ಲಿ ಬರುವ ಯಾವುದೇ ವ್ಯವಹಾರದ ನಿರ್ವಹಣೆಯಲ್ಲಿ ಭ್ರಷ್ಟಚಾರದಲ್ಲಿ ತೊಡಗಿದ್ದಲ್ಲಿ
* ಯಾವುದೇ ಕಾರಣದ ನಿಮಿತ್ತ ಸದಸ್ಯ ತಂದೆ ತಾಯಿಯ ಮಗುವು ಶಾಲೆಯ ವಿದ್ಯಾರ್ಥಿಯಾಗಿರುವುದು ನಿಂತು ಹೋದಲ್ಲಿ
* ಯಾವುದೇ ನ್ಯಾಯಾಲಯದಿಂದ ಆಪಾದಿತನೆಂದು ತೀರ್ಮಾನವಾಗಿದ್ದಲ್ಲಿ
* ಆತ/ಆಕೆ ಶಾಲೆಯಲ್ಲಿ ಓದುತ್ತಿರುವ ಯಾವುದೇ ಮಗುವಿನ ತಂದೆ ತಾಯಿ ಆಗಿರದಿದ್ದಲ್ಲಿ.

## ಎಸ್.ಡಿ.ಎಂ.ಸಿ. ಸಭೆ ಮತ್ತು ಮಾದರಿ ನಡವಳಿಗಳು

ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪಾತ್ರ ಮಹತ್ವದ್ದಾಗಿದೆ.ಶಾಲೆಯ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಪರಾಮರ್ಶಿಸಿ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ನಿಗದಿತ ಅವಧಿಯಲ್ಲಿ ಸಭೆಗಳನ್ನು ನಡೆಸುತ್ತದೆ.

### 1. ಸಭೆಯ ಉದ್ದೇಶ.

- ನಿಗದಿತ ವಿಷಯ ಪಟ್ಟಿಯ ಪ್ರಕಾರ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದು.
- ನಡೆಯುತ್ತಿರುವ ಕಾರ್ಯಗಳ ಬಗ್ಗೆ ಸಮಿತಿಯ ಸದಸ್ಯರಿಗೆ ಅರಿವು ಮೂಡಿಸುವುದು.
- ಹಿಂದಿನ ಸಭೆಯ ನಿರ್ಣಯಗಳ ಅನುಷ್ಠಾನದ ಬಗ್ಗೆ ಅವಲೋಕನ.
- ಸದಸ್ಯರಿಗೆ ಜವಾಬ್ದಾರಿಗಳ ಹಂಚಿಕೆ.

### 2. ಸಭೆಯ ಸಿದ್ಧತೆ ಹೇಗಿರಬೇಕು?

- ➢ ಸಭೆಯಲ್ಲಿ ಚರ್ಚಿಸಬೇಕಾದ ವಿಚಾರಗಳನ್ನು ಮೊದಲೇ ನಿರ್ಧರಿಸಿ, ವಿಷಯ ಪಟ್ಟಿ ತಯಾರಿಸಬೇಕು.
- ➢ ಸಭೆ ನಡೆಯುವ ಜ್ಞಾಪನದ ಜೊತೆಯಲ್ಲಿಯೇ ವಿಷಯ ಪಟ್ಟಿ ಲಗತ್ತಿಸಿರಬೇಕು.
- ➢ ಸಭೆ ನಡೆಯುವ ಒಂದು ವಾರದ ಮೊದಲೇ ಸದಸ್ಯರಿಗೆ ತಲುಪಿರಬೇಕು.

### 3. ಸಭೆಯ ನಿರ್ವಹಣೆ ಹೇಗೆ?

- ➢ ಕಾರ್ಯದರ್ಶಿಗಳು, ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸುವುದು.
- ➢ ಮೊದಲ ಸಭೆಯಾಗಿದ್ದಲ್ಲಿ ಎಲ್ಲರ ಪರಸ್ಪರ ಪರಿಚಯ ಮಾಡಿಸುವುದು.
- ➢ ಸಭೆಗೆ ಕೋರಂ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ಚುನಾಯಿತ ಸದಸ್ಯರಲ್ಲಿ ಕನಿಷ್ಠ ಐದು ಮಂದಿ ಸಭೆಗೆ ಹಾಜರಿರುವುದನ್ನು ಖಚಿತ ಮಾಡಿಸಿಕೊಳ್ಳಬೇಕು.
- ➢ ಕೋರಂ ಇಲ್ಲದಿದ್ದಲ್ಲಿ ಸದರಿ ದಿನಾಂಕದಿಂದ ನಾಲ್ಕು ದಿನಗಳಿಗೆ ಮೀರದಂತೆ ಮುಂದಿನ ಸಭೆಯ ದಿನಾಂಕ ನಿರ್ಧರಿಸಿ, ಸಭೆ ನಡೆಸುವುದು.
- ➢ ಹಿಂದಿನ ಸಭೆಯ ನಿರ್ಣಯಗಳ ಅನುಪಾಲನೆ ಬಗ್ಗೆ ಪರಾಮರ್ಶಿಸುವುದು.
- ➢ ಚರ್ಚಿಸಿದ ವಿಷಯಗಳು ಮತ್ತು ನಿರ್ಣಯಗಳನ್ನು ನಡವಳಿ ರೂಪದಲ್ಲಿ ದಾಖಲಿಸುವಿಕೆ.
- ➢ ದಾಖಲಿಸಿದ ನಿರ್ಣಯಗಳನ್ನು ಪುನಃ ಓದಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಹಾಜರಿದ್ದ ಸದಸ್ಯರ ಸಹಿ ಪಡೆಸುವುದು.
- ➢ ಕಾರಣಾಂತರಗಳಿಂದ ಸಭೆಗೆ ಸಧ್ಯಕ್ಷರು ಗೈರುಹಾಜರಾದ್ದಲ್ಲಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸುವುದು.
- ➢ ಅಧ್ಯಕ್ಷರು, ಉಪಾಧ್ಯಕ್ಷರು ಗೈರುಹಾಜರಾಗಿದಲ್ಲಿ ಸಭೆಯಲ್ಲಿ ಹಾಜರಿರುವ ಒಬ್ಬ ಚುನಾಯಿತ ಸದಸ್ಯರು ಅಂದಿನ ಸಭಾಧ್ಯಕ್ಷತೆ ವಹಿಸುವುದು.

### 4. ಅಜೆಂಡಾ – ಒಂದು ಉದಾಹರಣೆ

ದಿನಾಂಕ . ರಂದು . ಗಂಟೆಗೆ ಪ್ರಾರಂಭವಾಗಲಿರುವ ಸಭೆಯಲ್ಲಿ ಚರ್ಚಿಸಬೇಕಾದ ವಿಷಯ ಪಟ್ಟಿ ಮುಂದಿನಂತೆ ಇರುತ್ತದೆ.

1. ಶಾಲೆ ಬಿಟ್ಟ ಮಕ್ಕಳು

2. ಮಕ್ಕಳ ಕಲಿಕಾ ಪ್ರಗತಿ/ಫಲಿತಾಂಶ
3. ವಿಶೇಷ ಸಮುದಾಯದತ್ತ ಶಾಲಾ ಕಾರ್ಯಕ್ರಮ
4. ಅನುದಾನದ ಬಳಕೆ
5. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು

**5. ಸಭೆಯ ನಂತರ**

* ಸಭೆಯ ನಿರ್ಣಯಗಳನ್ನು ಕಾರ್ಯಗತ ಮಾಡುವುದು.
* ಅವಶ್ಯಕ ಸಂಪನ್ಮೂಲಗಳ ಕ್ರೋಢೀಕರಣ.
* ಅನುಪಾಲನಾ ಸಮಯದಲ್ಲಿ ಅನಿರೀಕ್ಷಿತ ಅಡಚಣೆಗಳು ಬಂದಲ್ಲಿ ಸದಸ್ಯರೆಲ್ಲರೂ ಸೇರಿ ನಿವಾರಿಸುವುದು.
* ಸಮುದಾಯದ ಸಂಪೂರ್ಣ ಸಹಕಾರ ಪಡೆಯುವುದು.

**6. ನಡವಳಿ – ಒಂದು ಉದಾಹರಣೆ**

ದಿನಾಂಕ 03/08/2018ರಂದು ಸ.ಹಿ.ಪ್ರಾ.ಶಾಲೆ, ––––– ನಲ್ಲಿ ಎಸ್.ಎಂ.ಸಿ. ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಶಾಲಾ ಎಸ್.ಎಂ.ಸಿ. ಸಭೆಯ ನಡವಳಿಗಳು ಮತ್ತು ತೀರ್ಮಾನಗಳು.

| ಕ್ರ.ಸಂ. | ಚರ್ಚಾಂಶಗಳು | ತೀರ್ಮಾನಗಳು |
|---|---|---|
| 01. | ಶಾಲೆ ಬಿಟ್ಟ ಮಕ್ಕಳು | |
| 02. | ಮಕ್ಕಳ ಕಲಿಕಾ ಪ್ರಗತಿ/ಫಲಿತಾಂಶ | |
| 03. | ಸಮುದಾಯದತ್ತ ಶಾಲೆ | |
| 04. | ಅನುದಾನದ ಬಳಕೆ | |

| ಹಾಜರಿದ್ದ ಸದಸ್ಯರ ಹೆಸರು | ಪೂರ್ಣ ಸಹಿ |
|---|---|
| 1. | |
| 2... | |

# ಅಧ್ಯಾಯ–9

## ಮಾಹಿತಿ ಹಕ್ಕು ಅಧಿನಿಯಮ 2005, 15ನೇ ಜೂನ್

**ಗ್ರಂಥಋಣ: ಎ.ಟಿ.ಐ., ಮೈಸೂರು**

**ಹಿನ್ನೆಲೆ**

ನಮ್ಮ ದೇಶದ ಜನಸಂಖ್ಯೆ, ನಿರಕ್ಷರತೆ, ಹಕ್ಕುಗಳ ಬಗ್ಗೆ ಅರಿವಿಲ್ಲದಿರುವುದು, 1990 ರಲ್ಲಿ ರಾಜಸ್ತಾನದಲ್ಲಿ ಮಜದೂರ್ ಕಿಸಾನ್ ಶಕ್ತಿ ಸಂಘಟನೆಯವರು ಚಳುವಳಿ ಮಾಡಿದ ಪರಣಾಮವಾಗಿ ಮಾಹಿತಿ ಹಕ್ಕು ಅಧಿನಿಯಮ ಜಾರಿಗೆ ಬಂದಿತು. 1997 ರಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಮಾಹಿತಿ ಹಕ್ಕು ಮತ್ತು ಆಡಳಿತದಲ್ಲಿ ಪಾರದರ್ಶಕತೆ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದು, ಅದರನ್ವಯ ತಮಿಳುನಾಡು ಮತ್ತು ಗೋವಾದಲ್ಲಿ ಮಾಹಿತಿ ಹಕ್ಕು ಅಧಿನಿಯಮ ಪ್ರಪ್ರಥಮವಾಗಿ ಜಾರಿಗೆ ಬಂದಿದ್ದು, 2000ನೇ ಇಸವಿಯಲ್ಲಿ ಕರ್ನಾಟಕದಲ್ಲಿ ಜಾರಿಗೆ ಬಂದಿತು.

## ಮಾಹಿತಿ ಹಕ್ಕು ಅಧಿನಿಯಮ 2005

ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರದ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಹೆಚ್ಚಿಸುವ ದೃಷ್ಟಿಯಿಂದ ಸರ್ಕಾರಿ ಪ್ರಾಧಿಕಾರಗಳ ನಿಯಂತ್ರಣದಲ್ಲಿರುವ ಮಾಹಿತಿಯನ್ನು ಪಡೆಯಲು ನಾಗರೀಕರಿಗೆ ಮಾಹಿತಿ ಪಡೆಯುವ ಹಕ್ಕಿನ ಕಾರ್ಯರೂಪ ವ್ಯವಸ್ಥೆ ರೂಪಿಸಲು ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳ ರಚನೆಗೆ ಅಥವಾ ಅದಕ್ಕೆ ಅನುಷಂಗಿಕ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಸಂವಿಧಾನವು ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಸ್ಥಾಪಿಸುವುದರಿಂದಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಗೆ ಹಾಗೂ ಭ್ರಷ್ಟಾಚಾರ ನಿಯಂತ್ರಣಕ್ಕೆ ಮತ್ತು ಸರ್ಕಾರಗಳು ಹಾಗೂ ಅವುಗಳ ಅಂಗ ಸಂಸ್ಥೆಗಳು ಜನರಿಗೆ ಜವಾಬ್ದಾರಿಯಾಗಿರುವಂತೆ ಮಾಡಲು ತಿಳುವಳಿಕೆಯುಳ್ಳ ನಾಗರೀಕರು ಮತ್ತು ಮಾಹಿತಿಯ ಪಾರದರ್ಶಕತೆ ಪ್ರಮುಖವಾಗಿರುವುದರಿಂದವಾಸ್ತವಿಕ ಪದ್ಧತಿಯಲ್ಲಿ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಸರ್ಕಾರಗಳ ದಕ್ಷ ಕಾರ್ಯಾಚರಣೆಗಳು, ಪರಿಮಿತ ಆರ್ಥಿಕ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಮತ್ತು ಸೂಕ್ಷ್ಮ ಮಾಹಿತಿಯ ಗೌಪ್ಯತೆಯ ಸಂರಕ್ಷಣೆ ಒಳಗೊಂಡಂತೆ ಇತರ ಸಾರ್ವಜನಿಕ ಹಿತಾಸಕ್ತಿಗಳೊಂದಿಗೆ ಸಂಘರ್ಷಕ್ಕೊಳಗಾಗುವ ಹಿತಾಸಕ್ತಿಗಳ ನಡುವೆ ಸಾಮರಸ್ಯ ಮೂಡಿಸುವುದು ಅವಶ್ಯಕವಾಗಿರುವುದರಿಂದ

ಮಾಹಿತಿಯನ್ನು ಪಡೆಯಲು ಇಚ್ಛಿಸುವ ನಾಗರೀಕರಿಗೆ ಕೆಲವು ಮಾಹಿತಿ ಒದಗಿಸುವುದಕ್ಕೆ ಉಪಬಂಧ ಕಲ್ಪಿಸುವುದು ಈಗ ವಿಹಿತವಾಗಿರುವುದರಿಂದ:

ಭಾರತ ಗಣರಾಜ್ಯದ 56ನೇ ವರ್ಷದಲ್ಲಿ ಸಂಸತ್ತಿನಿಂದ ಅಧಿನಿಯಮಿತವಾಗಿದೆ.

## ಉದ್ದೇಶಗಳು

- ಆಡಳಿತದಲ್ಲಿ ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ತರುವುದು;
- ಜನರ ಕುಂದು ಕೊರತೆಗಳಿಗೆ ಪರಿಹಾರ ನೀಡುವುದರ ಜೊತೆಗೆ ಸಾರ್ವಜನಿಕ ಆಡಳಿತವು ಜನಪರ ಸಮಾಜ ಮುಖಿಯಾಗುವಂತೆ ಮಾಡುವುದು;

**ಮಾಹಿತಿ ಎಂದರೆ:**

ಕಲಂ 2 (ಎಫ್) ಮಾಹಿತಿ ಎಂದರೆ ಯಾವುದೇ ರೀತಿಯ ಯಾವುದೇ ವಿಷಯ ದಾಖಲೆಗಳನ್ನೊಳಗೊಂಡ ದಸ್ತಾವೇಜು, ಜ್ಞಾಪನ ಪತ, ಇ–ಮೇಲ್‌ಗಳು, ಅಭಿಪ್ರಾಯಗಳು, ಸಲಹೆಗಳು ಪತ್ರಿಕಾ ವರದಿ ಬಿಡುಗಡೆ, ಸುತ್ತೋಲೆಗಳು, ಆದೇಶಗಳು, ದಿನಚರಿ ಪುಸ್ತಕ, ಒಪ್ಪಂದಗಳು, ವರದಿಗಳು, ಕಾಗದಗಳು, ಮಾದರಿಗಳು, ವಿನ್ಯಾಸಗಳು.

**ದಾಖಲೆ ಎಂದರೆ: 2 (ಐ):**

ಯಾವುದೇ ದಸ್ತಾವೇಜು, ಹಸ್ತಪ್ರತಿ ಮತ್ತು ಕಡತವನ್ನು  ಯಾವುದೇ ದಸ್ತಾವೇಜಿನ ಮೈಕ್ರೋಫಿಲಂ, ಮೈಕ್ರೋಫಿಷ್ ಮತ್ತು ಪಡಿಯಚ್ಚು ಪ್ರತಿಯನ್ನು ಅಂಥ ಮೈಕ್ರೋಫಿಲ್ಮಿನಲ್ಲಿ/ ಗಾತ್ರವನ್ನು/ ವಿಸ್ತರಿಸಿರಲಿ ಅಥವಾ ವಿಸ್ತರಿಸದಿರಲಿ) ಸೇರಿಕೊಂಡಿರುವ ಪ್ರತಿ ತೆಗೆಯುವುದನ್ನು ಮತ್ತು ಕಂಪ್ಯೂಟರಿನ ಅಥವ ಯಾವುದೇ ಇತರ ಸಾಧನದ ಮೂಲಕ ಸಿದ್ಧಪಡಿಸಲಾದ ಯಾವುದೇ ಇತರ ವಿಷಯಗಳನ್ನು ಒಳಗೊಂಡಿರುತ್ತದೆ.

**ಮಾಹಿತಿ ಹಕ್ಕು– 2 (ಜೆ):**ಕೆಲಸ, ದಸ್ತಾವೇಜುಗಳು, ದಾಖಲೆಗಳ ಪರಿಶೀಲನೆ, ಟಿಪ್ಪಣಿ ತೆಗೆದುಕೊಳ್ಳುವುದು, ಪ್ರತಿ ತೆಗೆದುಕೊಳ್ಳುವುದು ಅಥವಾ ದಾಖಲೆಗಳ ಅಥವಾ ದಸ್ತಾವೇಜುಗಳ ಪ್ರಮಾಣಿತ ಪ್ರತಿಗಳನ್ನು ಪಡೆದುಕೊಳ್ಳುವುದು, ವಸ್ತುವಿನ ಪ್ರಮಾಣಿತ ಮಾದರಿ ತೆಗೆದುಕೊಳ್ಳುವುದು. ಕಂಪ್ಯೂಟರಿನಲ್ಲಿ ಅಥವಾ ಇತರೆ ಯಾವುದೇ ಸಾಧನದಲ್ಲಿ ಸಂಗ್ರಹಿಸಿರುವ ಮಾಹಿತಿಯನ್ನು ಡಿಸ್ಕ್ ಫ್ಲಾಪಿ, ಟೇಪುಗಳು, ವಿಡಿಯೋ ಕ್ಯಾಸೆಟ್‌ಗಳು ಅಥವಾ ಯಾವುದೇ ವಿದ್ಯುನ್ಮಾನ ವಿಧಾನದ ಮೂಲಕ ಅಥವಾ ಪ್ರಿಂಟ್ ಗಳ ಮೂಲಕ ಸಾರ್ವಜನಿಕ ಪ್ರಾಧಿಕಾರದಲ್ಲಿರುವ ಅಥವಾ ಅವರ ಸ್ವಾಮ್ಯದಲ್ಲಿರುವ   ಮಾಹಿತಿಯನ್ನು ಪಡೆದುಕೊಳ್ಳುವುದು.

**ಸಾರ್ವಜನಿಕ ಪ್ರಾಧಿಕಾರಗಳ ಹೊಣೆಗಾರಿಕೆ (ಪ್ರಕರಣ–4):** ಪ್ರತಿಯೊಂದು ಸಾರ್ವಜನಿಕ ಪ್ರಾದಿಕಾರವು ತನ್ನ ಎಲ್ಲಾ ದಾಖಲೆಗಳನ್ನು ಅದರ ನಿರ್ವಹಣೆಯ ಅಗತ್ಯತೆಗಳಿಗನುಗುಣವಾಗಿ ಸುಸಂಗತವಾದ ರೀತಿಯಲ್ಲಿ ನಮೂನೆಯಲ್ಲಿ  ಕ್ರಮಬದ್ಧ ಸೂಚಿಪಟ್ಟಿ ಮತ್ತು ಸೂಚಿಗಳೊಂದಿಗೆನಿರ್ವಹಿಸತಕ್ಕದ್ದು ಹಾಗೂ  ಯುಕ್ತವಾದ ಅವಧಿಯಲ್ಲಿ ಈ ಎಲ್ಲಾ ದಾಖಲೆಗಳನ್ನು ಸೂಕ್ತ ರೀತಿಯಲ್ಲಿ ಗಣಕೀಕರಣ ಮಾಡುವುದು. ಅಗತ್ಯವಿರುವ ಸೌಲಭ್ಯಗಳಿಗನುಗುಣವಾಗಿ ಗಣಕೀಕರಣ ಮಾಡಿ, ಅಂತರ್ಜಾಲ ಏರ್ಪಡಿಸುವುದು.

**ಕಾಯಿದೆ ಬಂದ 120 ದಿನದೊಳಗೆ ಸಾರ್ವಜನಿಕ ಪ್ರಾಧಿಕಾರವು ಈ ಕೆಳಕಂಡವುಗಳನ್ನು ಪ್ರಚುರಪಡಿಸಬೇಕಾಗಿರುತ್ತೆ {4(1) (ಬಿ)}**

- ಅದರ ಸಂಘಟನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು
- ಅಧಿಕಾರಗಳು ಮತ್ತು ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳು ಮತ್ತು ತೀರ್ಮಾನ ಕೈಗೊಳ್ಳುವಲ್ಲಿ ಅವರು ಅನುಸರಿಸುವ ಕಾರ್ಯವಿಧಾನ
- ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯನ್ನೊಳಗೊಂಡು ಆಧಿಕಾರಿಗಳು ಮತ್ತು ನೌಕರರು ತೀರ್ಮಾನ ಕೈಗೊಳ್ಳುವಾಗ ಅನುಸರಿಸಬೇಕಾದ ಕಾರ್ಯವಿಧಾನ
- ತಾವು ಹೊಂದಿರುವ ಅಥವಾ ತಮ್ಮ ಸ್ವಾಮ್ಯದಲ್ಲಿರುವ ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ತಮ್ಮ ನೌಕರರು ಉಪಯೋಗಿಸುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು
- ತಮ್ಮಲ್ಲಿರುವ ಎಲ್ಲಾ ವಿಧದ ದಸ್ತಾವೇಜುಗಳ ಪಟ್ಟಿ
- ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು 2 ಅಥವಾ 3 ವ್ಯಕ್ತಿಗಳನ್ನೊಳಗೊಂಡ ಸಲಹಾ ಸಮಿತಿಗಳ ಪಟ್ಟಿ ಹಾಗೂ ಈ ಮಂಡಳಿ, ಪರಿಷತ್ತು ಸಮಿತಿಗಳ ಸಮಾವೇಶಗಳಿಗೆ ಸಾರ್ವಜನಿಕರಿಗೆ ಅವಕಾಶವಿರುತ್ತದೆಯೇ ಅಥವಾ ಈ ಕಾರ್ಯ ಕಲಾಪಗಳ ವರದಿಯು ಸಾರ್ವಜನಿಕರಿಗೆ ಲಭ್ಯವಿರುತ್ತದೆ
- ಕಛೇರಿಯ ಅಧಿಕಾರಗಳ ಮತ್ತು ನೌಕರರ ವಿವರ ಸೂಚಿಕೆ
- ಅಧಿಕಾರಗಳು ಮತ್ತು ನೌಕರರು ಪಡೆದುಕೊಳ್ಳುವ ಮಾಸಿಕ ವೇತನ ನಿಯಮಗಳನ್ವಯ ನೀಡುವ ಪರಿಹಾರವನ್ನು ಸೇರಿಸಿಕೊಂಡು
- ಪ್ರತಿ ಸಂಸ್ಥೆಯ ಕಾರ್ಯಾಲಯಕ್ಕೆ ನಿಗದಿಪಡಿಸಿರುವ ವಾರ್ಷಿಕ ಅಯವ್ಯಯದ ಪಟ್ಟಿ ಇದರಲ್ಲಿ ಎಲ್ಲಾ ಯೋಜನೆಗಳು, ಪ್ರಸ್ತಾಪಿಸಿದ ಖರ್ಚು ಮತ್ತು ಬಟಾವಡೆಗಳ ವರದಿ
- ಸಹಾಯಧನದ ಕಾರ್ಯಕ್ರಮಗಳಿಗೆ ನಿಗದಿಪಡಿಸಿರುವ ಹಣ, ಫಲಾನುಭವಿಗಳ ವಿವರ ಹಾಗೂ ಸಹಾಯಧನದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಧಾನ

- ವಿನಾಯತಿ ಮತ್ತು ಪರವಾನಗಿ ಪತ್ರ ಪಡೆದಿರುವವರ, ಅಧಿಕಾರ ಪತ್ರ ನೀಡಿರುವ ವಿವರಗಳು
- ಮಾಹಿತಿಯ ವಿವರಗಳು – ಲಭ್ಯವಿರುವ ಅಥವಾ ಹೊಂದಿರುವ ಮಾಹಿತಿಗಳು – ವಿದ್ಯುನ್ಮಾನದ ಮೂಲಕ
- ಮಾಹಿತಿಯನ್ನು ಪಡೆಯುವುದಕ್ಕಾಗಿ ನಾಗರಿಕರಿಗೆ ದೊರೆಯಬಹುದಾದ ಅನುಕೂಲತೆಗಳ ವಿವರಗಳು– ಸಾರ್ವಜನಿಕರಿಗೆ ಲಭ್ಯವಿದ್ದಲ್ಲಿ ಗ್ರಂಥಾಲಯ, ವಾಚನಾಲಯದ ಕೆಲಸದ ವೇಳೆ –ನಮೂದಿಸುವುದು
- ಸಾರ್ವಜನಿಕ ಮಾಹಿತಿ ನೀಡುವ (ಸಂಪರ್ಕ) ಅಧಿಕಾರಗಳ ಹೆಸರುಗಳು, ಹುದ್ದೆ ಮತ್ತು ಇತರ ವಿವರಗಳು
- ನಿಯಮಿಸಬಹುದಾದಂತೆ ಅಂಥ ಇತರ ಮಾಹಿತಿಗಳು ಆದ್ಯತನ ಗೊಳಿಸಿ ಪ್ರತಿ ವರ್ಷ ಪ್ರಕಟಿಸಬೇಕು
- ಯಾವ ಮುಖ್ಯ ತೀರ್ಮಾನಗಳು ಮತ್ತು ಕಾರ್ಯನೀತಿಗಳನ್ನು ಪ್ರಕಟಿಸುವಾಗ ಅವುಗಳಿಂದ ಸಾರ್ವಜನಿಕರಿಗೆ ಬಾಧೆಯುಂಟಾಗುವುದೋ ಅಂಥವುಗಳಿಗೆ ಸಂಬಂಧಿಸಿದ ಎಲ್ಲಾ ಸುಸಂಬದ್ಧ ಸಂಗತಿಗಳನ್ನು ಪ್ರಕಟಿಸತಕ್ಕದ್ದು.
- ತನ್ನ ಆಡಳಿತಾತ್ಮಕ ಅಥವಾ ಅರೆನ್ಯಾಯಿಕ ತೀರ್ಮಾನಗಳಿಂದ ಬಾಧಿತರಾದ ವ್ಯಕ್ತಿಗಳಿಗೆ ಕಾರಣಗಳನ್ನು ಒದಗಿಸುವುದು.

**ಮಾಹಿತಿ ಒದಗಿಸುವ ಕಾರ್ಯವಿಧಾನ:**

- ಮಾಹಿತಿ ಕೋರಿ ಅರ್ಜಿಯನ್ನು ಅರ್ಜಿದಾರ ಸಲ್ಲಿಸುವಾಗ ಶುಲ್ಕ ಪಾವತಿ ಮಾಡಬೇಕಾಗಿರುತ್ತದೆ
- ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳು ಶುಲ್ಕ ಪಾವತಿ ಮಾಡಬೇಕಾಗಿಲ್ಲ
    - ಒಂದು ನೂರು ಪುಟಗಳವರೆಗೆ ಉಚಿತ
- ಮಾಹಿತಿ ಕೋರುವಾಗ ಅದಕ್ಕೆ ಕಾರಣ ಅಥವಾ ಅವರ ವೈಯಕ್ತಿಕ ವಿವರ ತಿಳಿಸಬೇಕಾಗಿಲ್ಲ
- ಮೌಖಿಕವಾಗಿ ತಿಳಿಸದ್ದನ್ನು ಪ್ರಾಧಿಕಾರ ಬರೆದುಕೊಳ್ಳಬೇಕಾಗಿರುತ್ತದೆ
- ಪ್ರಾದೇಶಿಕ ಭಾಷೆಯಲ್ಲಿ ಮಾಹಿತಿ ಒದಗಿಸಬೇಕಾಗಿರುತ್ತದೆ.
- ಸಾರ್ವಜನಿಕ ಮಾಹಿತಿ ಅಧಿಕಾರಿಯು ಮಾಹಿತಿ ಹೊಂದಿಲ್ಲದಿದ್ದರೆ ಆ ಮಾಹಿತಿ ಎಲ್ಲಿ ಲಭ್ಯವಿದೆಯೋ ಆ ಪ್ರಾಧಿಕಾರಕ್ಕೆ ಅರ್ಜಿ ರವಾನಿಸಿ ಅರ್ಜಿದಾರನಿಗೆ ಸೂಚನೆ ನೀಡಬೇಕಾಗಿರುತ್ತದೆ. 5 ದಿನದೊಳಗೆ ಈ ಅರ್ಜಿ ರವಾನಿಸಬೇಕಾಗಿರುತ್ತದೆ.
- ವ್ಯಕ್ತಿಯ ಜೀವ ಅಥವಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತಹ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು 48 ಗಂಟೆಗಳಲ್ಲಿ ಒದಗಿಸಬೇಕಾಗಿರುತ್ತದೆ.
- ಅರ್ಜಿ ಸ್ವೀಕರಿಸಿದ 30 ದಿನದೊಳಗೆ ಮಾಹಿತಿ ಒದಗಿಸಬೇಕು.

**ಮಾಹಿತಿ ನಿರಾಕರಣೆ:**

ಮಾಹಿತಿ ನೀಡಲು ನಿರಾಕರಿಸಿದಲ್ಲಿ ನಿರಾಕರಣೆಗೆ ಕಾರಣಗಳು, ಎಲ್ಲಿಗೆ ಮೇಲ್ಮನವಿ ಸಲ್ಲಿಸಬೇಕು ಮತ್ತು ಎಷ್ಟು ದಿನದೊಳಗೆ ಮೇಲ್ಮನವಿ ಸಲ್ಲಿಸಬೇಕೆಂದು ತಿಳಿಸತಕ್ಕದ್ದು. ಸಕಾರಣ ಆದೇಶ ಮಾಡಬೇಕಾಗಿರುತ್ತದೆ.(speaking order)

**ಮಾಹಿತಿ ಬಹಿರಂಗಪಡಿಸುವುದರಿಂದ ವಿನಾಯತಿ (ಕಲಂ 8 (1):**

- ಎ. ಭಾರತದ
    - ಸಾರ್ವಭೌಮತ್ವ ಹಗೂ ಸಮಗ್ರತೆಗೆ ಧಕ್ಕೆ ತರುವ
    - ಭಾರತದ ಕಾರ್ಯತಾಂತ್ರಿಕೆ, ವೈಜ್ಞಾನಿಕ ಅಥವಾ ಆರ್ಥಿಕ ಹಿತಾಸಕ್ತಿಗೆ ಧಕ್ಕೆ ತರುವ
    - ಅಂತರರಾಷ್ಟ್ರೀಯ ಸಂಬಂಧಗಳ ನಿರ್ವಹಣೆಗೆ ಪ್ರತಿಕೂಲ ಪರಿಣಾಮ ಉಂಟು ಮಾಡುವ ಮಾಹಿತಿ
    - ಬಿ. ಯಾವ ಮಾಹಿತಿಯನ್ನು ಪ್ರಚುರಪಡಿಸಬಾರದೆಂದು ನ್ಯಾಯಾಲಯದ ಅಥವಾ ನ್ಯಾಯಮಂಡಳಿಯ ಪ್ರತಿಬಂಧ (ನಿಷೇಧ) ವಿರುತ್ತದೊ ಅಥವಾ ಅವುಗಳನ್ನು ಬಹಿರಂಗಪಡಿಸುವುದರಿಂದ ನ್ಯಾಯಾಲಯದ ನಿಂದನೆಯಗುತ್ತದೊ,
- ಸಿ. ಯಾವ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಸಂಸತ್ತಿನ ಅಥವಾ ರಾಜ್ಯ ವಿಧಾನಮಂಡಲದ ವಿಶೇಷಾಧಿಕಾರಗಳ ಉಲ್ಲಂಘನೆ ಮಾಡಿದಂತಾಗುವುದೋ ಆ ಮಾಹಿತಿಯನ್ನು ಬಹಿರಂಗಪಡಿಸಲು ಬರುವುದಿಲ್ಲ
    - ಡಿ. ಸಂರಕ್ಷಿತವಾದ ವ್ಯಾಪಾರ, ವಾಣಿಜ್ಯ ರಹಸ್ಯದ ಅಥವಾ ಸ್ಪರ್ಧಾತ್ಮಕ ಸ್ಥಾನಮಾನಕ್ಕೆ ಪ್ರತಿಕೂಲ ಪರಿಣಾಮ ಉಂಟು ಮಾಡುವ ಮಾಹಿತಿ,

ಆದರೆ ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯ ಅಪೇಕ್ಷೆಯಂತೆ ಮಾಹಿತಿಯನ್ನು ಬಹಿರಂಗಪಡಿಸುವುದು ಸಮಂಜಸವೆಂದು ಸಕ್ಷಮ ಪ್ರಾಧಿಕಾರಕ್ಕೆ ಕಂಡು ಬಂದಲ್ಲಿ ಬಹಿರಂಗಪಡಿಸಬಹುದು

- ಇ. ವಿಶ್ವಾಸ ನಿಷ್ಠೆಯ ಸಂಬಂಧಗಳಿಂದ ದೊರಕಿದ ಮಾಹಿತಿಯನ್ನು ಬಹಿರಂಗಪಡಿಸಲು ಬರುವುದಿಲ್ಲ. ಹೆಚ್ಚಿನ ಸಾರ್ವಜನಿಕರು ಮಾಹಿತಿಯನ್ನು ಬಹಿರಂಗಪಡಿಸುವುದನ್ನು ಅಪೇಕ್ಷಿಸಿದ್ದಾರೆಂದು ಸಕ್ಷಮ ಪ್ರಾಧಿಕಾರವು ಮನಗಂಡಲ್ಲಿ ಮಾತ್ರ ಇದನ್ನು ಬಹಿರಂಗಪಡಿಸಬಹುದು

- ಎಫ್. ವಿಶ್ವಾಸದ ಮೇಲೆ ಪಡೆದುಕೊಂಡಿರುವ ಹೊರದೇಶದ ಮಾಹಿತಿ, (ವಿದೇಶಿ ಸರ್ಕಾರದ)
- ಜಿ. ಒಬ್ಬ ವ್ಯಕ್ತಿಯು ನ್ಯಾಯೋಚಿತ ವಿಚಾರಣೆಗೆ ಅಥವಾ ಸುರಕ್ಷೆಗಾಗಿ ಸಹಾಯ ನೀಡಿರುವ ವಿಷಯವನ್ನು ಬಹಿರಂಗಪಡಿಸುವುದರಿಂದ ಆ ವ್ಯಕ್ತಿಯ ಜೀವಕ್ಕೆ ಅಪಾಯವಿದೆಯೆಂದು ಕಂಡುಬಂದಲ್ಲಿ ಅಂತಹ ಮಾಹಿತಿ
- ಹೆಚ್. ಅಪರಾಧಿಗಳ ತನಿಖೆ ಮಾಡುವ ಅಥವಾ ಬಂಧಿಸುವ ಅಥವಾ ಕಾನೂನು ವ್ಯವಹರಣಕ್ಕೆ ಗುರಿಪಡಿಸುವ ಪ್ರಕ್ರಿಯೆಗೆ ಅಡ್ಡಿಯುಂಟು ಮಾಡಬಹುದಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೊಡತಕ್ಕದ್ದಲ್ಲ.
- ಐ. ಮಂತ್ರಿಮಂಡಲದ ಕಾರ್ಯದರ್ಶಿಗಳ ಚರ್ಚಾ ವಿಷಯದ ದಾಖಲೆಗಳು ಒಳಗೊಂಡಂತೆ ಸಚಿವ ಸಂಪುಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟ ಮಾಹಿತಿ

ಆದರೆ ಸಚಿವ ಸಂಪುಟ ತೀರ್ಮಾನದ ಆಧಾರದಿಂದ ಸರ್ಕಾರಿ ಆದೇಶ ಹೊರಡಿಸಿದಲ್ಲಿ ಯಾವ ಕಾರಣ ಅಥವಾ ಸನ್ನಿವೇಶದಲ್ಲಿ ತೀರ್ಮಾನ ಕೈಗೊಳ್ಳಲಾಯಿತೆಂಬ ಬಗ್ಗೆ ಸಾರ್ವಜನಿಕ ಮಾಹಿತಿ ನೀಡಬಹುದಾಗಿರುತ್ತದೆ.ಆದರೂ ಈ ವಿಷಯಗಳು ಮೇಲೆ ನಮೂದಿಸಿರುವ ವಿನಾಯತಿಗಳ ಕಲಂನಲ್ಲಿ ಬಂದಲ್ಲಿ ಅಂತಹ ವಿಷಯಗಳನ್ನು ಬಹಿರಂಗ ಪಡಿಸಲು ಬರುವುದಿಲ್ಲ.

ಜೆ. ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಪಡದ ವೈಯಕ್ತಿಕ ವಿಚಾರದ ಮಾಹಿತಿ

ಸಾರ್ವಜನಿಕ ಹಿತರಕ್ಷಣೆಗೆ ಸಂಬಂಧಪಡದ ಕೇವಲ ವೈಯಕ್ತಿಕೆ ಗೌಪ್ಯತೆ ಅತಿಕ್ರಮಿಸುವ ಮಾಹಿತಿ. ಆದರೆ ಸರ್ಕಾರಿ ನೌಕರನ ಆಸ್ತಿ ಮತ್ತು ಹೊಣೆಗಾರಿಕೆಯ ತಃಖೆಗೆ ಸಂಬಂಧಪಟ್ಟ ಮಾಹಿತಿ ನೀಡಬಹುದಾಗಿರುತ್ತದೆ.

ಮಾಹಿತಿ ಕೋರಿ ಅರ್ಜಿ ಕೊಡುವ ದಿನದಿಂದ 20 ವರ್ಷಗಳ ಮಾಹಿತಿಯನ್ನು ಒದಗಿಸಬೇಕಾಗಿರುತ್ತದೆ.

**ಮಾಹಿತಿ ನಿರಾಕರಣೆ (ಕಲಂ–9):**

ರಾಜ್ಯವನ್ನು ಹೊರತುಪಡಿಸಿ ಯಾವುದೇ ವ್ಯಕ್ತಿ ಹೊಂದಿರುವ ಕೃತಿ ಸ್ವಾಮ್ಯದ ಉಲ್ಲಂಘನೆ ಮಾಡುವ ಮಾಹಿತಿ ಕೇಳಿದಲ್ಲಿ ನಿರಾಕರಿಸಬಹುದು.

- ಮೂರನೇ ವ್ಯಕ್ತಿಗೆ ಸಂಬಂಧಪಟ್ಟ ಮಾಹಿತಿ (ಕಲಂ–11)
  - ಬಹಿರಂಗಪಡಿಸುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಅಧಿಕ ಪ್ರಮಾಣದಲ್ಲಿ ನೆರವಾಗುವ ಸಂದರ್ಭದಲ್ಲಿ ಮಾಹಿತಿ ನೀಡಬಹುದು
  - ಇದಕ್ಕೆ ಮುಂಚಿತವಾಗಿ ಸದರಿ ವ್ಯಕ್ತಿಗೆ ನೋಟೀಸು ನೀಡಬೇಕಾಗಿದ್ದು, ಆತ 10 ದಿನದೊಳಗೆ ಜವಾಬು ನೀಡಬೇಕಾಗಿರುತ್ತದೆ.
- ಸಾರ್ವಜನಿಕ ಮಾಹಿತಿ ಅಧಿಕಾರಿ 40 ದಿನದೊಳಗೆ ಆದೇಶ ಮಾಡಬೇಕಾಗಿರುತ್ತದೆ.

**ಕೆಳಕಂಡ ಸಂದರ್ಭದಲ್ಲಿ ಮಾಹಿತಿ ಆಯೋಗವು ತನಿಖೆ ಮಾಡುವ ಅಧಿಕಾರ ಹೊಂದಿರುತ್ತದೆ.**

- ವ್ಯಕ್ತಿಯು ಮಾಹಿತಿ ಕೋರಿ ಅರ್ಜಿ ಸಲ್ಲಿಸುವಾಗ ತಿರಸ್ಕರಿಸದರೆ
- ನಿಗದಿತ ಅವಧಿಯಲ್ಲಿ ಮಾಹಿತಿ ಒದಗಿಸದಿದ್ದಲ್ಲಿ
- ಅಸಮಂಜಸವಾದ ಅಥವಾ ದುಬಾರಿ ಶುಲ್ಕ ಕೇಳಿದ್ದಾರೆಂದು ವ್ಯಕ್ತಿಗೆ ಕಂಡುಬಂದು, ದೂರು ಕೊಟ್ಟಾಗ
- ಅಪೂರ್ಣವಾದ, ದಾರಿ ತಪ್ಪಿಸುವ ಅಥವಾ ಸುಳ್ಳು ಮಾಹಿತಿಯನ್ನು ನೀಡಿದ್ದಾರೆಂದು ವ್ಯಕ್ತಿಗೆ ಅನ್ನಿಸಿ ದೂರು ನೀಡಿದಾಗ ಹಾಗೂ
- ಮಾಹಿತಿಯು ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ ದೂರು ಬಂದಲ್ಲಿ.

**ದಂಡನೆ (ಕಲಂ –20)**

ಯಾವುದೇ ಸಕಾರಣವಿಲ್ಲದೆ ಅರ್ಜಿ ಪಡೆದುಕೊಳ್ಳಲು ನಿರಾಕರಿಸಿದ್ದಲ್ಲಿ, ಅವಧಿಯೊಳಗೆ ಆದೇಶ ಹೊರಡಿಸದಿದ್ದಲ್ಲಿ, ಸಕಾರಣವಿಲ್ಲದೆ ಕೋರಲಾದ ಮಾಹಿತಿ ನಿರಾಕರಿಸಿದ್ದಲ್ಲಿ, ಅಥವಾ ತಿಳಿದು ಸುಳ್ಳು ಮಾಹಿತಿಯನ್ನು ಅಥವಾ ಅಪೂರ್ಣ ಮಾಹಿತಿಯನ್ನು ಒದಗಿಸದ್ದಲ್ಲಿ ಅಥವಾ ದಾರಿತಪ್ಪಿಸುವ ಮಾಹಿತಿ ಒದಗಿಸದ್ದಲ್ಲಿ, ಅಥವಾ ನೀಡಬೇಕಾದ ಮಾಹಿತಿಯನ್ನು ನಾಶಪಡಿಸಿದ್ದಲ್ಲಿ ಮೇಲ್ಮನವಿ ಪ್ರಾಧಿಕಾರವು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ದಿನವೊಂದಕ್ಕೆ 250/–ರುಪಾಯಿಗಳಂತೆ ಅರ್ಜಿ ಪಡೆದುಕೊಳ್ಳುವವರೆಗೆ ಅಥವಾ ಮಾಹಿತಿ ಒದಗಿಸುವವರೆಗೆ ದಂಡ ವಿಧಿಸಬಹುದು. ಇದನ್ನು 25,000 ರುಪಾಯಿಗಳವರೆಗೆ ದಂಡ ವಿಧಿಸಬಹುದು.ಈ ರೀತಿ ದಂಡ ವಿಧಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗೆ ಅವಕಾಶ ನೀಡಿ, ಕೇಳಿ ನಂತರ ಆದೇಶ ಮಾಡಬೇಕಾಗಿರುತ್ತದೆ.

## ಪ್ರಾಥಮಿಕ ಶಾಲೆಗಳ ಶುಲ್ಕದ ವಿವರ

6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ದೊರಕಿಸುವುದು ಸರ್ಕಾರದ ನಿಲುವಾಗಿದೆ. ಅದರಂತೆ ದೇಶದ ಹಳ್ಳಿ ಹಳ್ಳಿಗಳಲ್ಲೂ ಶಾಲೆಗಳನ್ನು ತೆರೆದು ಉಚಿತ ಶಿಕ್ಷಣ ನೀಡುತ್ತಿದೆ. ಆದಾಗ್ಯೂ ಸರ್ಕಾರಿ ಶಾಲೆಗಳಲ್ಲಿ 5 ರಿಂದ 8ನೇ ತರಗತಿಯ ಮಕ್ಕಳಿಗೆ ಅಲ್ಪ ಪ್ರಮಾಣದ ಶುಲ್ಕ ನಿಗದಿಪಡಿಸಲಾಗಿದೆ. ಈ ರೀತಿ ಶುಲ್ಕ ನಿಗದಿ ಪಡಿಸುವಾಗ ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಿಗೆ ವಿನಾಯಿತಿ ನೀಡಿ ಪ್ರಸ್ತುತ ಕೆಳಕಂಡಂತೆ ಪ್ರತೀ ವರ್ಷ ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹ ಮಾಡಲಾಗುತ್ತದೆ.

- ಶಾಲೆಗೆ ದಾಖಲಾದಾಗ ಮಾತ್ರ ದಾಖಲಾತಿ ಶುಲ್ಕ ಸಂಗ್ರಹಿಸಬೇಕು.
- ಶಾಲಾಭಿವೃದ್ಧಿ ಶುಲ್ಕ, ಬೋಧನೆ ಶುಲ್ಕ, ದಾಖಲಾತಿ ಶುಲ್ಕ ಹಾಗೂ ದಂಡ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಬೇಕು.
- ಕ್ರೀಡಾ ನಿಧಿ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಹಾಗೂ ಶಿಕ್ಷಕರ ಕಲ್ಯಾಣ ನಿಧಿ ಶುಲ್ಕಗಳನ್ನು ಸಂಬಂಧಿಸಿದ ನಿಧಿಗಳಿಗೆ ಕಳುಹಿಸಬೇಕು.
- ಕ್ರೀಡಾ ಶುಲ್ಕ, ವಾಚನಾಲಯ ಶುಲ್ಕ, ಪ್ರಯೋಗ ಶುಲ್ಕ, ದೃಕ್ ಶ್ರವಣ ಶುಲ್ಕ, ವೈದ್ಯಕೀಯ ಶುಲ್ಕ ಮುಂತಾದ ಶುಲ್ಕಗಳು ಸರ್ಕಾರೇತರ ಶುಲ್ಕಗಳು ಈ ಶುಲ್ಕಗಳ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.
- **ಶಾಲೆಯಲ್ಲಿ ಡ್ರಾಯಿಂಗ್ ಶಿಕ್ಷಕರಿದ್ದಲ್ಲಿ ಡ್ರಾಯಿಂಗ್ ಶುಲ್ಕ, ವೃತ್ತಿ ಶಿಕ್ಷಣ ಶಿಕ್ಷಕರಿದ್ದಲ್ಲಿ ವೃತ್ತಿ ಶಿಕ್ಷಣ ಶುಲ್ಕಗಳನ್ನು ಸಂಗ್ರಹಿಸಬೇಕು. ಡ್ರಾಯಿಂಗ್ ಅಥವಾ ವೃತ್ತಿ ಶಿಕ್ಷಣ ಶಿಕ್ಷಕರಿಲ್ಲದಿದ್ದಲ್ಲಿ ಈ ಶುಲ್ಕವನ್ನು ಸಂಗ್ರಹಿಸಬಾರದು.**

## ಶುಲ್ಕ ಸಂಗ್ರಹಣೆ ಹಾಗೂ ಬಳಕೆಯ ಬಗ್ಗೆ ಸೂಚನೆಗಳು

- ಇಡೀ ವರ್ಷದಲ್ಲಿ ವಸೂಲಿ ಮಾಡುವ ಎಲ್ಲಾ ಬಗೆಯ ಶುಲ್ಕದ ವಿವರಗಳನ್ನು ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.
- ಎಸ್.ಡಿ.ಎಂ.ಸಿ ಪ್ರಥಮ ಸಭೆಯಲ್ಲಿಯೂ ಸಹ ಶುಲ್ಕದ ವಿವರಗಳನ್ನು ಸದಸ್ಯರಿಗೆ ತಿಳಿಸಿರಬೇಕು.
- ಸೂಚನಾ ಫಲಕದಲ್ಲಿ ಪ್ರಕಟಿಸಿದ ಶುಲ್ಕಗಳಿಗಿಂತ ಹೆಚ್ಚುವರಿಯಾಗಿ ಯಾವುದೇ ಶುಲ್ಕವನ್ನು ಸಂಗ್ರಹಿಸುವಂತಿಲ್ಲ.
- ಸಂಗ್ರಹಿಸುವ ಶುಲ್ಕಕ್ಕೆ ಅಧಿಕೃತ ರಶೀದಿ ನೀಡಬೇಕು.
- ವಸೂಲಾದ ಶುಲ್ಕವನ್ನು ಸಂಬಂಧಿಸಿದ ಖಾತೆಗೆ ಆ ದಿನವೇ ಜಮಾ ಮಾಡಬೇಕು.
- ಸರ್ಕಾರದ ಶುಲ್ಕಗಳನ್ನು ಸರ್ಕಾರಕ್ಕೆ ಜಮಾ ಮಾಡಬೇಕು. ವಿವಿಧ ನಿಧಿಗಳ ಶುಲ್ಕಗಳನ್ನು ಆಯಾ ನಿಧಿಗಳಿಗೆ ಕಳುಹಿಸಬೇಕು.

ಸರ್ಕಾರೇತರ ಶುಲ್ಕಗಳಿಗೆ ಪ್ರತಿ ಶೀರ್ಷಿಕೆಗೂ ಪ್ರತ್ಯೇಕ ಆಯಾ ವ್ಯಯ ಬಜೆಟ್ ತಯಾರಿಸಿ, ಎಸ್.ಡಿ.ಎಂ.ಸಿ ಅನುಮೋದನೆ ಪಡೆದು ಖರ್ಚು ಮಾಡಬೇಕು.

ಆಯಾ ವರ್ಷದ ಶುಲ್ಕಗಳನ್ನು ಯಾವ ಉದ್ದೇಶಗಳಿಗಾಗಿ ಸಂಗ್ರಹಿಸಲಾಗಿದೆಯೋ ಆ ಉದ್ದೇಶಕ್ಕಾಗಿಯೇ ಖರ್ಚು ಮಾಡುವುದು.ಹಿಂದಿನ ವರ್ಷಗಳ ಶುಲ್ಕವನ್ನು ಬಳಸಬೇಕಾದ ಸಂದರ್ಭ ಬಂದಲ್ಲಿ ಇಲಾಖೆಯ ನಿಯಮಾನುಸಾರ ಮೇಲಧಿಕಾರಿಯಿಂದ ಅನುಮತಿ ಪಡೆದು ಬಳಸುವುದು.ವಿವಿಧ ಶೀರ್ಷಿಕೆಗಳಡಿಯಲ್ಲಿ ಸಂಗ್ರಹಿಸಿ ಶುಲ್ಕದ ಹಣವನ್ನು ಖರ್ಚು ಮಾಡುವ ಉದ್ದೇಶದಿಂದ ಆಯವ್ಯಯ ತಯಾರಿಸುವಾಗ ಈ ಪ್ರಮಾಣದಲ್ಲಿ ಹಂಚಿಕೆ ಮಾಡಿಕೊಳ್ಳಬೇಕು.

<table>
<tr><td>ಕ್ರೀಡಾ ಶುಲ್ಕ<br>1. ಕ್ರಿಡಾ ಸಾಮಗ್ರಿ ಖರೀದಿ – 65%<br>2. ಆಟ, ಪಂದ್ಯಾಟಗಳಿಗೆ – 30%<br>3. ಇತರೆ – 5%</td><td>ವಾಚನಾಲಯ ಶುಲ್ಕ<br>1. ದಿನ/ವಾರ/ಮಾಸ ಪತ್ರಿಕೆ – 50%<br>2. ಗ್ರಂಥಾಲಯ ಪುಸ್ತಕ ಖರೀದಿ – 30%<br>3. ಪೀಠೋಪಕರಣ ರಿಪೇರಿ – 10%<br>4. ಪುಸ್ತಕ ಬೈಂಡಿಂಗ್ – 5%<br>5. ಭೂಪಟ ಖರೀದಿ – 5%</td></tr>
<tr><td>ವೈದ್ಯಕೀಯ ಶುಲ್ಕ<br>1. ಪ್ರಥಮ ಚಿಕಿತ್ಸೆ ವಸ್ತು ಖರೀದಿ – 20%<br>2. ದಾಖಲೆ ವಹಿಗಾಗಿ – 15%<br>3. ವೈದ್ಯರಿಗೆ ಗೌರವ ಧನ – 50%<br>4. ದೈಹಿಕ ಶಿಕ್ಷಣ ಶಿಕ್ಷಕರಿಗೆ ಗೌರವ ಧನ – 10%<br>5. ಸಹಾಯಕರಿಗೆ ಗೌರವ ಧನ – 5%</td><td>ಚಿತ್ರಕಲಾ ಶುಲ್ಕ<br>1. ಡ್ರಾಯಿಂಗ್ ಪೇಪರ್ ಖರೀದಿಸಲು – 60%<br>2. ಆರ್ಟ್ ಪುಸ್ತಕಗಳನ್ನು ಖರೀದಿಸಲು – 10%<br>3. ಚಟುವಟಿಕೆಗಳ ಪ್ರದರ್ಶನಕ್ಕೆ – 5%<br>4. ಸ್ಟೀಲ್ ಪ್ಲೇಟ್‌ಗಳನ್ನು ಕೊಳ್ಳಲು – 15%<br>5. ಡ್ರಾಯಿಂಗ್ ಮಾಡೆಲ್ಸ್ – 15%<br>6. ಮರದ ಫ್ರೇಮ್‌ಗಳು – 5%</td></tr>
</table>

| ಕ್ರ.ಸಂ | ಶುಲ್ಕದ ವಿವರ | 6,7 ನೇ ತರಗತಿ | ಉನ್ನತೀಕರಿಸಿದ ಹಿ.ಪ್ರಾ ಶಾಲೆ–8ನೇ ತರಗತಿಗೆ |
|---|---|---|---|
| 1 | ವಿದ್ಯಾರ್ಥಿ ಕ್ರೀಡಾನಿಧಿ | 05.00 | 15.00 |
| 2 | ಶಿಕ್ಷಕರ ದಿನಾಚರಣೆ, ಬಾವುಟ | 03.00 | 03.00 |

| | | |
|---|---|---|
| **ಒಟ್ಟು** | **08.00** | **18.00** |

**ಶುಲ್ಕ ರಿಯಾಯಿತಿ**

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳಿಗೆ
2. ಎಲ್ಲಾ ಹೆಣ್ಣು ಮಕ್ಕಳಿಗೆ.
3. ಪ್ರವರ್ಗ–1

**ವಿಶೇಷ ಸೂಚನೆ:**

1. ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಇರುವ ಶಾಲೆಗಳಲ್ಲಿ ಪ್ರತೀ ಘಟಕಕ್ಕೆ ತಲಾ 5 ರೂಗಳನ್ನು ಸಂಗ್ರಹಿಸುವುದು.
2. ವಿದ್ಯಾರ್ಥಿ ಕ್ರೀಡಾನಿಧಿ, ಶಿಕ್ಷಕರ ದಿನಾಚರಣೆ, ಬಾವುಟದ ನಿಧಿಗಳಿಗೆ ಶುಲ್ಕ ರಿಯಾಯಿತಿ ಇರುವುದಿಲ್ಲ. ಎಲ್ಲಾ ವಿದ್ಯಾರ್ಥಿಗಳು ನಿಧಿ ಪಾವತಿಸುವುದು ಕಡ್ಡಾಯವಾಗಿದೆ.
3. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 5 ನೇ ತರಗತಿಯಿಂದ 7ನೇ ತರಗತಿವರೆಗೆ ನಡೆಯುತ್ತಿರುವ ಶಾಲೆಗಳಲ್ಲಿ 5 ನೇ ತರಗತಿಯ ವಿದ್ಯಾರ್ಥಿಗಳು ರೂ 5 ವಿದ್ಯಾರ್ಥಿ ಕ್ರೀಡಾನಿಧಿ ಪಾವತಿಸುವುದು ಕಡ್ಡಾಯವಾಗಿದೆ.
4. ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ 8ನೇ ತರಗತಿಯ ವಿದ್ಯಾರ್ಥಿಗಳಿಂದ ರೂ 15 ನ್ನು ಸಂಗ್ರಹಿಸುವುದು.

## ದತ್ತಾಂಶಗಳ ಸಂಗ್ರಹ ಮತ್ತು ದಾಖಲೀಕರಣ
## (ಉತ್ತಮ ಶೈಕ್ಷಣಿಕ ಅಭ್ಯಾಸಕ್ಕೆ ಸಾಕ್ಷಿ..)

ದಾಖಲೆಗಳು ಶಾಲೆ–ಸಮುದಾಯ–ಇಲಾಖೆಗಳ ನಡುವೆ ಬಾಂಧವ್ಯ ವೃದ್ಧಿಸುತ್ತವೆ. ನಂಬಿಕೆಯನ್ನು ಗಟ್ಟಿಗೊಳಿಸುತ್ತವೆ. ಈಗಾಗಲೇ ಆಗಿಹೋಗಿರುವ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಸರಿದಾರಿಯಲ್ಲಿ ಸುವೇಗದಲ್ಲಿ ಮುನ್ನಡೆಯಲು ನೆರವಾಗುತ್ತವೆ.

**ದತ್ತಾಂಶ, ದಾಖಲೆ ಏತಕ್ಕೆ**?ವಿದ್ಯಾರ್ಥಿ ಕಲಿಕೆಯ ಹೊಣೆಗಾರಿಕೆ, ಉತ್ತರದಾಯಿತ್ವ ಹೊಂದಲು.

**ಯಾರಿಗೆಲ್ಲಾ ಬೇಕು**?ಏಕೆ?ಜವಾಬ್ದಾರರೆಲ್ಲರಿಗೂ,ಕಲಿಕೆಯನ್ನು ವಿಸ್ತರಿಸಲು, ಏರುಮುಖ ಪ್ರಗತಿಗಾಗಿ, ಕಲಿಕೆ ಹಾಗೂ ಕಲಿಕೆಗಾಗಿನ ಪ್ರಯತ್ನಗಳನ್ನು ಗೋಚರವಾಗಿಸಲು, ನಿರ್ಧಾರ ಕೈಗೊಳ್ಳಲು, ಸಂಸ್ಥಾ ಯೋಜನೆ ಮತ್ತು ಅನುಷ್ಠಾನಕ್ಕಾಗಿ **ನಾನೇಕೆ ದಾಖಲೀಕರಣ ಮಾಡಲಿ?ಎಂಬುದನ್ನು ಯೋಚಿಸಬೇಕು.**

**ದಾಖಲೀಕರಣದ ಉದ್ದೇಶಗಳನ್ನು ತಿಳಿದುಕೊಳ್ಳುವುದು ಅತ್ಯಗತ್ಯ.**

**ಯಾರಿಂದೆಲ್ಲಾ, ಹೇಗೆ ದತ್ತಾಂಶ ಸಂಗ್ರಹಿಸಬಹುದು? ದತ್ತಾಂಶ ಬಳಕೆ ಹೇಗೆ?ಎಂಬುದನ್ನು ತಿಳಿಯಲೇಬೇಕು.**

**ದಾಖಲೀಕರಣದ ಅಂಶಗಳು:**

ವಿದ್ಯಾರ್ಥಿಗಳನ್ನು ನೈದಾನಿಕ ಪದ್ಧತಿಯಲ್ಲಿ ಮೌಲ್ಯಮಾಪನ ಮಾಡಲು, ಕೊರತೆಗಳಿಗೆ ಪರಿಹಾರ ರೂಪಿಸಲು, ಪ್ರಗತಿ, ಸದ್ಯದ ಸ್ಥಿತಿಯನ್ನು ಭಾಗಿದಾರದಿಂದ ಸಂಗ್ರಹಣೆ ಮತ್ತು ಹಂಚಿಕೊಳ್ಳುವುದು ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಮಹತ್ವದ್ದು.

ದತ್ತಾಂಶ ಸಂಗ್ರಹವು ಸಮಗ್ರವಾಗಿರಬೇಕು ಮತ್ತು ಎಲ್ಲಾ ಆಯಾಮದಿಂದಲೂ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಯೋಜಿತವಾಗಿರಬೇಕು.

- ದತ್ತಾಂಶ ಸಂಗ್ರಹಣೆ, ದಾಖಲೀಕರಣಕ್ಕೆ ಕಾರಣಗಳು
- ದತ್ತಾಂಶ ಸಂಗ್ರಹಣೆ, ದಾಖಲೀಕರಣಕ್ಕೆ ಉತ್ತಮ ಪರೀಕ್ಷಣಗಳು ಸಾಧನಗಳು
- ಹಿಂದಿನ ದತ್ತಾಂಶ, ದಾಖಲೆಗಳು
- ದತ್ತಾಂಶ ಸಂಗ್ರಹಣೆ, ದಾಖಲೀಕರಣದಲ್ಲಿ ಗುರುತಿಸಿದ ಅಂಶಗಳು
- ಶೈಕ್ಷಣಿಕ ಸಾಧನೆಯಲ್ಲಿ ಪ್ರಗತಿ
- ಕೊರತೆಗಳು/ಹಿನ್ನಡೆ
- ಶಾಲಾ ಪರೀಕ್ಷಣಗಳು/ಮೌಲ್ಯಮಾಪನಗಳು ಮತ್ತು ಬ್ಲಾಕ್/ಜಿಲ್ಲಾ/ರಾಜ್ಯ ಹಂತದ ಪರೀಕ್ಷಣಗಳು/ಮೌಲ್ಯಮಾಪನಗಳು/ಕಾರ್ಯಕ್ರಮಗಳ ಅಂಕಿಅಂಶಗಳು, ವಿವರ
- ಭಾಗೀದಾರರಿಂದ ವಿವರಗಳು (ಶಿಕ್ಷಕರು, ಪೋಷಕರು, ಸಹಪಾಠಿಗಳು, ಮನೆಯ ನೆರೆಹೊರೆಯವರು, ಸಮುದಾಯದವರು, ಇತರೆ ಮೂಲಗಳು)
- ಸಾಧನೆಯ (ಧನಾತ್ಮಕ/ಋಣಾತ್ಮಕ/ಸ್ಥಿರ) ಬಗ್ಗೆ ವಿದ್ಯಾರ್ಥಿಯ, ಶಿಕ್ಷಕರ ಹಿಮ್ಮಾಹಿತಿ
- ಫಲಿತಾಂಶದ ಮೇಲೆ ಪ್ರಭಾವಗಳು
- ಮುಂದಿನ ತಂತ್ರಗಳು/ಚಟುವಟಿಕೆಗಳು/ಪರಿಹಾರಗಳು

  ಇವೆಲ್ಲವನ್ನೂ ದಾಖಲೀಕರಣ ಮಾಡುವುದು.

**ದತ್ತಾಂಶ, ದಾಖಲೆಗಳು ಹೊಂದಿರಬೇಕಾದ ಮುಖ್ಯ ಅಂಶಗಳು**

1. ವಿದ್ಯಾರ್ಥಿಯ ಈಗಿನ ಶೈಕ್ಷಣಿಕ ಸಾಧನೆ ಮತ್ತು ಕಾರ್ಯ ನಿರ್ವಹಣಾ ಸಾಮರ್ಥ್ಯದ ಹೇಳಿಕೆಯನ್ನು ಹೊಂದಿರಬೇಕು.
2. ಅಳತೆಗೊಳಪಡಿಸಬಲ್ಲ ವಾರ್ಷಿಕ ಗುರಿಗಳ ಹೇಳಿಕೆಯನ್ನು ಹೊಂದಿರಬೇಕು.
   - ವಿದ್ಯಾರ್ಥಿಯ ಅಗತ್ಯ ಆಧಾರಿತ ಗುರಿಗಳನ್ನು ಗುರ್ತಿಸಿ ಸಾಮಾನ್ಯ ಶಿಕ್ಷಣದೊಂದಿಗೆ ಸಮನ್ವಯಗೊಳಿಸುವಂತಿರಬೇಕು.
   - ವಿದ್ಯಾರ್ಥಿಯ ಅಗತ್ಯ ಆಧಾರಿತ ಶೈಕ್ಷಣಿಕ, ಕಾರ್ಯನಿರ್ವಹಣಾ/ಸಾಮಾಜಿಕ /ಇತರೆ ಅಂಶಗಳನ್ನು ಒಳಗೊಳ್ಳುವಂತಿರಬೇಕು.
3. ಪೂರಕ ಸಲಕರಣೆ ಮತ್ತು ಸೇವೆಗಳನ್ನು ವಿದ್ಯಾರ್ಥಿಗೆ ಒದಗಿಸಿದ ಮಾಹಿತಿ ಹೊಂದಿರಬೇಕು.
4. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮತ್ತು ಕಾರ್ಯನಿರ್ವಹಣಾ ಸಾಮರ್ಥ್ಯಗಳನ್ನು ಮೌಲ್ಯಮಾಪನವನ್ನು ಕರಾರುವಕ್ಕಾಗಿ ಮಾಡಬಲ್ಲ ನಿರ್ಧಿಷ್ಟ ವ್ಯವಸ್ಥೆಗಳನ್ನು ಹೊಂದಿರಬೇಕು.
5. ಮೇಲ್ಕಂಡವುಗಳಿಗೆ ಸಂಬಂಧಿಸಿದಂತೆ ರಾಜ್ಯ, ಜಿಲ್ಲಾ, ತಾಲ್ಲೂಕು ಹಂತದ ಅಂಕಿ ಅಂಶಗಳನ್ನು ಹೊಂದಿದ್ದು ಪರಸ್ಪರ ತುಲನೆಗೆ ಅವಕಾಶವಿರಬೇಕು.
6. ನಿಯಮಿತ ಮೌಲ್ಯಮಾಪನಗಳಲ್ಲಿ, ಚಟುವಟಿಕೆಗಳಲ್ಲಿ ವಿದ್ಯಾರ್ಥಿ ಭಾಗವಹಿಸಬಹುದೇ/ಇಲ್ಲವೇ, ಭಾಗವಹಿಸಬಹುದಾಗಿದ್ದಲ್ಲಿ ಏಕೆ? ಇಲ್ಲವಾದಲ್ಲಿ ಏಕೇ? ಎಂಬುದನ್ನು ವಿವರಿಸುವಂತಿರಬೇಕು.
7. ಕೆಳಕಂಡವುಗಳ ವಿವರಣೆ ಇರಬೇಕು:
   - ರಾಜ್ಯ ಪಠ್ಯಕ್ರಮದಲ್ಲಿ ಆ ವರ್ಷಕ್ಕೆ ನಿಗಧಿಪಡಿಸಿದ ಗುರಿಗಳನ್ನು ಸಾಧಿಸಲು ವಿದ್ಯಾರ್ಥಿ ಹೇಗೆ ಸಾಗುತ್ತಿದ್ದಾನೆ ಎಂಬುದನ್ನು ಕರಾರುವಕ್ಕಾಗಿ ಅಳತೆಮಾಡಬೇಕು.
   - ರಾಷ್ಟ್ರ ಪಠ್ಯಕ್ರಮದ ವಿದ್ಯಾರ್ಥಿಗಳ ಕಲಿಕೆಗಿಂತ ರಾಜ್ಯವಿದ್ಯಾರ್ಥಿಗಳ ಕಲಿಕೆ ಹೇಗೆ ಭಿನ್ನ?
   - ವಿದ್ಯಾರ್ಥಿ ವೈಯಕ್ತಿಕ ಗುರಿಗಳನ್ನು ಸಾಧಿಸುವಲ್ಲಿ ಪ್ರಗತಿಯ ಕಾಲಿಕ (ಮಾಸಿಕ/ತ್ರೈಮಾಸಿಕ/ಅರ್ಧವಾರ್ಷಿಕ) ವರದಿಗಳನ್ನು ನೀಡುವಂತಿರಬೇಕು.
   - ವಿದ್ಯಾರ್ಥಿ ಸಾಧನೆ ಪ್ರಗತಿಯ ಬೆಂಚ್‌ಮಾರ್ಕಗಳನ್ನು/ಅಲ್ಪಾವಧಿ ಉದ್ದೇಶಗಳನ್ನು ನೀಡುವಂತಿರಬೇಕು. ನ್ಯೂನ್ಯತೆಗಳಿದ್ದಲ್ಲಿ ಅವುಗಳ ದತ್ತಾಂಶವೂ ಇರಬೇಕು.
   - ದಿವ್ಯಾಂಗರಿಗೆ ವಿಭಿನ್ನ ರೀತಿಯ ಅಳತೆ ಮಾಪನಗಳು, ಅವರಿಗೆ ನಿರ್ಧಿಷ್ಟ ಸಾಧನ ಗುರಿಗಳು/ಹಂತಗಳನ್ನು ನೀಡುವಂತಿರಬೇಕು.
8. ನೈದಾನಿಕ ಪರಿಹಾರಬೋಧನೆಗಾಗಿ, ಚಿಕಿತ್ಸಕ ಪದ್ಧತಿ ಅಳವಡಿಕೊಳ್ಳಲು ಅಗತ್ಯ ಅಂಶಗಳನ್ನು ನೀಡುವಂತಿರಬೇಕು.
9. ಕಾರ್ಯಕ್ರಮ, ಚಟುವಟಿಕೆ, ವಿದ್ಯಾರ್ಥಿ, ಶಿಕ್ಷಕ, ಸಂಸ್ಥೆಯ ಯಶಸ್ಸಿನ ಅಂಕಿಅಂಶಗಳನ್ನು, ವಿವರಗಳನ್ನು ಹೊಂದಿರಬೇಕು.
10. ಪ್ರತಿ ದಾಖಲೆಯೂ ದಿನಾಂಕ, ಸಮಯ, ದಾಖಲೆಯ ಭಾಗೀರಾರರ ವಿವರ ನಮೂದಿಸುವುದು ಸೂಕ್ತ.

**ಪ್ರಗತಿ ಟಿಪ್ಪಣಿಗಳು/ವಿವರಗಳು ಇಟ್ಟಿರುವುದು ಸೂಕ್ತ.**

**ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದಾಖಲೆಗಳ ವರ್ಗಗಳು:**

1. **ಕಡ್ಡಾಯವಾಗಿ ಯಾವಾಗಲೂ ಬೇಕಾದವು:** ನೀತಿ ನಿಯಮಗಳು ಹೇಳಿದಂತವು. ಶಾಲಾ ದಾಖಲಾತಿ, ಗ್ರೇಡ್ಸ್, ಉತ್ತೀರ್ಣ, ಇತರೆ ವಿವರಗಳು
2. **ಕಡ್ಡಾಯವಾಗಿ ತಾತ್ಕಾಲಿಕವಾಗಿ ಬೇಕಾದವು:** ಆರೋಗ್ಯದ ವಿವರಗಳು, ವಿಶೇಷ ಶಿಕ್ಷಣದ ವಿವರಗಳು, ಭಾಷಾ ತರಬೇತಿ ವಿವರಗಳು, ಪೋಷಕರ ಮಿತಿಗಳು, ಪೋಷಕರ–ವಿದ್ಯಾರ್ಥಿಗಳಿಗಿರುವ ಸವಾಲುಗಳು, ದತ್ತಾಂಶ ಸಂಗ್ರಹ/ದಾಖಲೀಕರಣಕ್ಕಾಗಿ ಪೋಷಕರ–ವಿದ್ಯಾರ್ಥಿಗಳಿಂದ ಇರುವ ಸವಾಲುಗಳು, ಶಾಲಾ ಕಾರ್ಯಕ್ರಮ/ಚಟುವಟಿಕೆಗಳು ವಿದ್ಯಾರ್ಥಿ ಭಾಗವಹಿಸುವಿಕೆ ವಿವರಗಳು
3. **ಇತರೆ:** ವರ್ತನಾ ವರದಿಗಳು, ಶಿಕ್ಷಕರ ದರ್ಜಾ ಮಾಪನಗಳು, ಸುಧಾರಣೆಗೆ ಸಂಬಂಧಿಸಿದ ಅಂಶಗಳು, ಹಾಜರಾತಿ ಸಂಬಂಧಿಸಿದ ವಿವರಗಳು. ಇತರೆ ಸಂಸ್ಥೆಗಳು/ಏಜೆನ್ಸಿಗಳು ಶಾಲೆ/ಶಿಕ್ಷಕರ/ವಿದ್ಯಾರ್ಥಿಗಳ ಬಗ್ಗೆ ನೀಡಿದ ವರದಿಗಳು, ಅಂಕಿಅಂಶಗಳು.

**ಪಾಠಟಿಪ್ಪಣಿಯನ್ನು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ದಾಖಲೆಗಳೆಂದು ಪರಿಗಣಿಸುವುದು.**

**ಶಾಲೆಯಲ್ಲಿ ನಿರ್ವಹಿಸಬೇಕಾದ ಮುಖ್ಯ ವಹಿಗಳು**

- ಶಿಕ್ಷಕರ ಮತ್ತು ವಿದ್ಯಾರ್ಥಿಗಳ ತರಗತಿವಾರು ವಹಿ.
- ದಾಖಲಾತಿ ವಹಿ.
- ಶಾಲಾ ದಾಸ್ತಾನು ವಹಿ.
- 'ಇಂದ' ಮತ್ತು 'ಗೆ' ವಹಿ.
- ವಿದ್ಯಾರ್ಥಿಗಳಕ್ರೋಢೀಕೃತ ಹಾಜರಾತಿ ವಹಿ.
- ಎಸ್.ಡಿ.ಎಂ.ಸಿ. ಜ್ಞಾಪನಾ ಮತ್ತು ನಡಾವಳಿ ವಹಿ.

- ಪ್ರೋತ್ಸಾಹದಾಯಕ ಯೋಜನೆಗಳ ದಾಸ್ತಾನು ಹಾಗೂ ವಿತರಣಾ ವಹಿ.
- ಸಂದರ್ಶಕರ ವಹಿ(ಇಲಾಖೆ ಹಾಗೂ ಇಲಾಖೇತರ).
- ಚಲನ–ವಲನ ವಹಿ.
- ನಗದು ಪುಸ್ತಕ.
- ಟಿ,ಸಿ. ವಿತರಣಾ ವಹಿ.
- ಗ್ರಂಥಾಲಯ ಪುಸ್ತಕಗಳ ನಿರ್ವಹಣಾ ವಹಿ.
- SP,R.R., A.V.E.,MEDICALವಹಿಗಳು.
- ಕ್ರೀಡಾ ಸಾಮಗ್ರಿಗಳ ದಾಸ್ತಾನು ಮತ್ತು ವಿತರಣಾ ವಹಿ.
- ಪ್ರಯೋಗಗಳ ಮಾಹಿತಿ ವಹಿ.
- ಪಾಠ ವೀಕ್ಷಣಾ ವಹಿ.
- ಬಟವಾಡೆ ವಹಿ.
- ಸಾಂದರ್ಭಿಕ ಹಾಗೂ ಗಳಿಕೆ ರಜೆ ವಹಿ.
- ರೇಡಿಯೋ ಪಾಠಗಳ ವಹಿ.
- ಶಾಲೆ ಬಿಟ್ಟ ಮತ್ತು ಮಕ್ಕಳ ಶಾಲೆಗೆ ದಾಖಲಾದ ಮಕ್ಕಳು ವಹಿ.
- ಸ್ಥಿರ ಆಸ್ತಿಗಳ ವಹಿ.

ಈ ಮೇಲಿನ ವಹಿಗಳಲ್ಲದೇ ಸಂದರ್ಭಕ್ಕೆ ಅಗತ್ಯವಾದ ವಹಿಗಳನ್ನು ನಿರ್ವಹಿಸುವುದು.

ದಾಖಲಾತಿ ವಹಿಯ ಮಹತ್ವ: ಮಗುವಿನ ವಿವರಗಳು, ಸಾಮಾನ್ಯ ಮಾಹಿತಿ ಇದರಲ್ಲಿದ್ದು ಮುಂದೆ ಮಗು ಬೆಳೆದಂತೆ ಸಮಾಜದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುವಾಗ ಅನೇಕ ಬಾರಿ ಈ ವಹಿಯ ಅಗತ್ಯತೆ ಇದೆ.ಶಾಲೆಯ ಮೂಲಭೂತ ದಾಖಲೆ. ತಿದ್ದುಪಡಿಯ ವಿಧಾನಗಳನ್ನು ತಿಳಿದುಕೊಳ್ಳುವುದು ಅತ್ಯಗತ್ಯ.ಯಾವತ್ತಿಗೂ ನಾಶ ಮಾಡಬಾರದ ದಾಖಲೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ದಾಖಲಾತಿ ವಹಿಯನ್ನು ಚಿರಾಯುಗೊಳಿಸುವುದು.

## ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿ

ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿಗಳು ಇಂತಿವೆ:

* ನಮ್ಮ ಶಾಲೆ ಉತ್ತಮ ಶಾಲೆಯಾಗಬೇಕು ಎನ್ನುವ ಗುರಿಯೊಂದಿಗೆ ಅಗತ್ಯ ಯೋಜನೆಗಳನ್ನು ರೂಪಿಸಿಕೊಳ್ಳಬೇಕು.
* ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ಸಹಕರಿಸಬೇಕು.
* ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸುವಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು.
* ವರ್ಗವಾರು ವಾರ್ಷಿಕ ಯೋಜನೆ, ಪ್ರಗತಿ ಪತ್ರ ಹಾಗೂ ಕ್ರೋಢೀಕೃತ ವಹಿ ಮುಂತಾದವುಗಳನ್ನು ಕಾಲಕಾಲಕ್ಕೆ ಸಲ್ಲಿಸಿ ಮುಖ್ಯ ಶಿಕ್ಷಕರ ಅನುಮೋದನೆ ಪಡೆಯಬೇಕು.
* ಅನುಕೂಲಿಸುವ ವಿಷಯಗಳ ಪ್ರಭುತ್ವ ಹೊಂದಿರಬೇಕು.
* ಮಕ್ಕಳ ಸಮಸ್ಯೆಯನ್ನು ಗುರುತಿಸಿ ಸೂಕ್ತ ಪರಿಹಾರ ನೀಡಬೇಕು.
* ಮಕ್ಕಳು ತಪ್ಪದೇ ಶಾಲೆಗೆ ಬರುವಂತೆ ಪ್ರೇರೇಪಿಸಬೇಕು.
* ಶೈಕ್ಷಣಿಕ ಸಮಸ್ಯೆಗಳನ್ನು ಇತರರೊಂದಿಗೆ ಮುಕ್ತವಾಗಿ ಚರ್ಚಿಸಿ ಪರಿಹಾರ ಕೈಗೊಳ್ಳುವ ಮನೋಭಾವವಿರಬೇಕು.
* ಇಲಾಖೆ ಕಾಲಕಾಲಕ್ಕೆ ತರುವ ಯೋಜನೆಗಳನ್ನು ಅರ್ಥೈಸಿಕೊಂಡು ಅನುಷ್ಠಾನಗೊಳಿಸಲು ಪ್ರಯತ್ನಿಸಬೇಕು.
* ಶಿಕ್ಷಕ ತಾನು ಕರ್ತವ್ಯ ನಿರ್ವಹಿಸುವ ಊರಿನ ಕುಟುಂಬಗಳ ಸಮಗ್ರ ಚಿತ್ರಣ ಹೊಂದಿರಬೇಕು.
* ಶಾಲೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಸಮುದಾಯಗಳಿಂದ ಸಂಗ್ರಹಿಸುವ ಸಾಮರ್ಥ್ಯವಿರಬೇಕು.

# ಅಧ್ಯಾಯ–10

# ಮೌಲ್ಯಮಾಪನ

## ಮೌಲ್ಯಮಾಪನದ ಅರ್ಥ

ಮಗುವಿನ ಕಲಿಕೆಯನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಂಡು ಮನುಷ್ಯರನ್ನಾಗಿ ನೋಡುವುದು ಮುಖ್ಯ. ಪ್ರತಿ ಮಗುವಿನ ಕಲಿಕಾ ವೇಗವು ಅದರ ಬೌದ್ಧಿಕ, ಸಾಮಾಜಿಕ ಹಿನ್ನೆಲೆಯನ್ನು ಆಧರಿಸಿರುವುದರಿಂದ ಪ್ರತಿ ಮಗುವೂ ಭಿನ್ನ ಚೈತನ್ಯವನ್ನು ಹೊಂದಿರುತ್ತದೆ. ಪ್ರತಿ ಮಗುವೂ ವಿಶಿಷ್ಟವಾಗಿ ಕಲಿಯುತ್ತದೆ. ಸುಗಮಕಾರರಾಗಿ ನಾವು ಹಾಕಿದ ಪ್ರಶ್ನೆಗೆ ನಮ್ಮ ಮನಸ್ಸಿನಲ್ಲಿರುವಂತೆಯೇ ಉತ್ತರ ಕೊಡಬೇಕೆಂದು ಪ್ರತಿ ಮಗುವಿನಿಂದ ಬಯಸಿದರೆ, ನಾವು ಅಷ್ಟರ ಮಟ್ಟಿಗೆ ಪ್ರಜಾಸತ್ತಾತ್ಮಕವಾಗಿಲ್ಲವೆಂದಾಗುತ್ತದೆ. ಇಲ್ಲಿ ನಿಖರವಾದ ಉತ್ತರವಿದೆಯೆಂದಾಕ್ಷಣ ಅದೇ ಉತ್ತರ ಮಕ್ಕಳು ಏಕೆ ಬರೆಯಲಿಲ್ಲ ಎಂಬ ಚಿಂತನಾ ಸ್ವಾವಲೋಕನ ಸುಗಮಕಾರರಾದ ನಮ್ಮಲ್ಲಿ ಏಳಬೇಕು. ಆದ್ದರಿಂದ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಅಗತ್ಯವಾಗುತ್ತದೆ. ಇದು ಮಕ್ಕಳಿಗೆ, ಶಿಕ್ಷಕರಿಗೆ ಹಾಗೂ ಪೋಷಕರಿಗೆ ಸ್ವಾವಲೋಕನ ಸಾಧನವಾಗಿ ಸಹಾಯ ಮಾಡುತ್ತದೆ. ಈ ಸಾಧನವು ಕಾರ್ಯನಿರತರನ್ನು ಹೆಚ್ಚು ವೃತ್ತಿಪರರನ್ನಾಗಿ ಮಾಡುತ್ತದೆ. ಮಕ್ಕಳು ತಮ್ಮ ಜ್ಞಾನವನ್ನು ಪುನರ್‌ರಚಿಸಿಕೊಳ್ಳುವ ಪ್ರಕ್ರಿಯೆಯೇ ವ್ಯಕ್ತಿಗತ. ಇಂಥ ಕಲಿಕೆಗೆ ಅನುಕೂಲಿಸುವ ಶಿಕ್ಷಕರಾದ ನಾವು ನಮ್ಮ ಸ್ವಾವಲೋಕನ ಅಭ್ಯಾಸಗಳಿಂದ ವೃತ್ತಿಪರರಾಗಬೇಕಿದೆ.

ಮೌಲ್ಯಮಾಪನವು ಶಿಕ್ಷಣದ ಅವಿಭಾಜ್ಯ ಅಂಗ. ಭಯದ ವಾತಾವರಣವನ್ನು ಸೃಷ್ಟಿಸಿ ಮಗುವನ್ನು ಕಲಿಯುವಂತೆ ಮಾಡುವುದು ಮೌಲ್ಯಮಾಪನದ ಉದ್ದೇಶವಲ್ಲ. ಮಕ್ಕಳಿಗೆ 'ನಿಧಾನ ಕಲಿಯುವವರು' 'ಪ್ರತಿಭಾವಂತರು' 'ಸಮಸ್ಯಾತ್ಮಕ ಮಕ್ಕಳು' ಮುಂತಾದ ಹಣೆಪಟ್ಟಿ ಕಟ್ಟುವುದೂ ಮೌಲ್ಯಮಾಪನದ ಕೆಲಸವಲ್ಲ. ಹೀಗೆ ಮಾಡುವುದರಿಂದ ಕಲಿಕೆಯ ಸಂಪೂರ್ಣ ಜವಾಬ್ದಾರಿಯನ್ನು ಮಕ್ಕಳ ಮೇಲೆ ಹೊರಿಸಿದಂತಾಗುತ್ತದೆ ಮಾತ್ರವಲ್ಲ, ಈ ಕೆಲಸವನ್ನು ತಪ್ಪು ಫಲಿತಾಂಶದ ಆಧಾರದ ಮೇಲೆ ಮಾಡಿದಂತಾಗುತ್ತದೆ. ಶಿಕ್ಷಣವು ಮಗುವಿಗೆ ಬದುಕಲು ಕಲಿಸಬೇಕು. ನಾಗರಿಕ ಜವಾಬ್ದಾರಿಗಳನ್ನು ಅರ್ಥಪೂರ್ಣವಾಗಿ ನಿಭಾಯಿಸುವ ಮತ್ತು ವ್ಯಕ್ತಿಯ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಶಿಕ್ಷಣ ಇಂದಿನ ಅವಶ್ಯಕತೆ. ನಮ್ಮ ರಾಷ್ಟ್ರೀಯ ಗುರಿಗಳ ಈಡೇರಿಕೆಗೆ ಶಿಕ್ಷಣವೇ ಸಾಧನ. ಇಂತಹ ಶಿಕ್ಷಣವನ್ನು ನೀಡುವಲ್ಲಿ ನಾವೆಷ್ಟು ಸಫಲರಾಗಿದ್ದೇವೆ ಎಂಬ ಕುರಿತು ವಿಶ್ವಾಸಾರ್ಹ ಹಿಮ್ಮಾಹಿತಿಯನ್ನು ನೀಡುವಲ್ಲಿ ಮೌಲ್ಯಮಾಪನವು ನೆರವಾಗುತ್ತದೆ. ಮಗುವಿಗೂ ಸಹ ತನ್ನ ಗುರಿ–ಸಾಧನೆಗಳನ್ನು ಮತ್ತು ತನ್ನ ಮಿತಿಗಳನ್ನು ಗುರುತಿಸಲು, ಮುಂದಿನ ಕಲಿಕೆಯನ್ನು ಯೋಜಿಸಲು ಸಹಕರಿಸುತ್ತದೆ.

ಮೌಲ್ಯಮಾಪನವು ಮಗುವಿನ ಅನನ್ಯತೆಯನ್ನು ಗಣನೆಗೆ ತೆಗೆದುಕೊಳ್ಳುವುದು ಆವಶ್ಯಕ. ಈ ಎಲ್ಲ ಕಾರಣಗಳಿಂದಾಗಿ, ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ವಿಧಾನಗಳನ್ನು ಶಿಕ್ಷಣ ಇಲಾಖೆ ಅಳವಡಿಸಿಕೊಂಡಿದೆ. ಭಾಷೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನಗಳ ಜೊತೆಗೆ ದೈಹಿಕ ಶಿಕ್ಷಣ, ಕಲಾಶಿಕ್ಷಣ, ಕಾರ್ಯ ಶಿಕ್ಷಣ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು ಪಠ್ಯ ವಿಷಯಗಳನ್ನಾಗಿ ಸೇರಿಸಲಾಗಿದೆ. ಪ್ರತಿ ಮಗುವಿನ ಕಲಿಕಾ ಸಾಧನೆಯನ್ನು ಮೌಲ್ಯಮಾಪನದ ಎರಡು ಆಯಾಮಗಳಾದ ಸಂಕಲನಾತ್ಮಕ ಮತ್ತು ರೂಪಣಾತ್ಮಕ ವಿಧಾನಗಳ ಮೂಲಕ ಅಳೆಯಲಾಗುತ್ತದೆ. ಮಗು ಕಲಿಯುವುದನ್ನು ರೂಪಣಾತ್ಮಕ ಮೌಲ್ಯಮಾಪನ ಅಳತೆ ಮಾಡಿದರೆ ಅದೇ ಮಗುವು ಈಗಾಗಲೇ ಕಲಿತಿದ್ದನ್ನು ಸಂಕಲನಾತ್ಮಕ ಮೌಲ್ಯಮಾಪನ ಅಳತೆ ಮಾಡುತ್ತದೆ. ಶೈಕ್ಷಣಿಕ ವರ್ಷದ ಮಧ್ಯಭಾಗದ ಕೊನೆಗೆ ಹಾಗೂ ಆಯಾ ವರ್ಷದ ಅಂತ್ಯದಲ್ಲಿ ನಡೆಯುವ ಲಿಖಿತ ಪರೀಕ್ಷೆಗಳೇ ಸಂಕಲನಾತ್ಮಕ ಮೌಲ್ಯಮಾಪನದ ಪ್ರಮುಖ ಸಾಧನ. ಪಠ್ಯವಿಷಯವೊಂದರ ಕಲಿಕೆಗೆ ಸಂಬಂಧಿಸಿದ ಸಾಧನೆಗಳನ್ನು ಮಗುವಿನ ಸಹಜ ವರ್ತನೆಗಳಲ್ಲಿ ವಿವಿಧ ಸಾಧನ ಮತ್ತು ತಂತ್ರಗಳ ಸಹಾಯದಿಂದ ಹುಡುಕುವುದೇ ರೂಪಣಾತ್ಮಕ ಮೌಲ್ಯಮಾಪನ. ರೂಪಣಾತ್ಮಕ ಮೌಲ್ಯಮಾಪನವು ಕಾರ್ಯರೂಪದಲ್ಲಿ ತೀರಾ ಹೊಸದಾದ ಪರಿಕಲ್ಪನೆ. ಇದಕ್ಕೆ ಅಗತ್ಯವಾದ ಸಾಧನಗಳು, ತಂತ್ರಗಳು ಮತ್ತು ಅಳತೆಗೋಲುಗಳನ್ನು ಪ್ರತಿ ಮಗುವಿನ ವಿಶಿಷ್ಟತೆಗಳನ್ನು ಲಕ್ಷಿಸಿಕೊಂಡೇ ರೂಪಿಸಬೇಕಾದ ಅನಿವಾರ್ಯತೆ ಇರುವುದರಿಂದ ಸುಗಮಕಾರರಿಗೆ ಹೆಚ್ಚಿನ ವೃತ್ತಿಪರ ಬೆಂಬಲ ಅಗತ್ಯವಾಗಿದೆ.

## ಕಲಿಕೆಯನ್ನು ಮೌಲ್ಯಮಾಪನ ಮಾಡುವ ಉದ್ದೇಶಗಳು

ಸ್ವಾಭಾವಿಕವಾಗಿ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಕಲಿಕಾರ್ಥಿ ಮತ್ತು ಸುಗಮಕಾರ ಕಲಿಕಾ ಪ್ರಕ್ರಿಯೆಯಲ್ಲಿ ಅಗತ್ಯ ಬದಲಾವಣೆಗಳನ್ನು ತಂದುಕೊಂಡು ನಿರೀಕ್ಷಿತ ಫಲಗಳನ್ನು ಮುಟ್ಟುವಲ್ಲಿ ಮೌಲ್ಯಮಾಪನ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಕಲಿಕಾರ್ಥಿ ಮತ್ತು ಸುಗಮಕಾರರು ಸಮಭಾಗಿಗಳು. ಕಲಿಕೆಯ ಪ್ರಗತಿಯನ್ನು ಕಾಲಕಾಲಕ್ಕೆ ಒರೆಹಚ್ಚುವ ಮೌಲ್ಯಮಾಪನ ಪ್ರಕ್ರಿಯೆಯು ಅನೇಕ ಉದ್ದೇಶಗಳನ್ನು ಹೊಂದಿದೆ.


1. ಕಲಿಕಾರ್ಥಿಗಳ ಕಲಿಕೆಗೆ ಅಗತ್ಯವಾದ ಬೆಂಬಲ ನೀಡುವುದು.
2. ಕಲಿಕೆಯ ಪರಿಣಾಮ ತಿಳಿಯುವುದು.
3. ಕಲಿಕಾ ಕೊರತೆ ಮತ್ತು ದೋಷಗಳನ್ನು ಪತ್ತೆ ಹಚ್ಚಿ ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವರು.
4. ಕಲಿಕೆಯ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದನ್ನು ನಿರ್ದರಿಸುವುದು.
5. ಕಲಿಕೆಯ ಪ್ರಮಾಣ ಹಾಗೂ ಕಲಿಕೆಯ ಗುಣಮಟ್ಟ ಎರಡನ್ನು ಓರೆಹಚ್ಚುವುದು.
6. ಕಲಿಕಾರ್ಥಿಗಳ ಮಟ್ಟವನ್ನು ಗುರುತಿಸಿ ಬಡ್ತಿ ಮತ್ತು ಪ್ರಮಾಣ ಪತ್ರವನ್ನು ನೀಡುವುದು.
7. ಶೈಕ್ಷಣಿಕ ರಂಗದ ಪ್ರಗತಿಯನ್ನು ಸಮಾಜಕ್ಕೆ ತಿಳಿಸಿ ಅಂಗೀಕಾರ ಪಡೆಯುವುದು.

## ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (ಸಿ.ಸಿ.ಇ.)

ವಿದ್ಯಾರ್ಥಿಯ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿನ ಸಾಧನೆ ಶಾಲಾ ಸನ್ನಿವೇಶದ ವಿವಿಧ ಕರ್ತವ್ಯ, ಜವಾಬ್ದಾರಿಗಳನ್ನು ಒಳಗೊಂಡ ತನ್ನ ಪಾತ್ರಗಳ ನಿರ್ವಹಣೆ, ಪಾಲ್ಗೊಳ್ಳುವಿಕೆಯ ರೀತಿ ಮತ್ತು ಪ್ರಗತಿಯನ್ನು ವಿವಿಧ ತಂತ್ರಗಳಮೂಲಕಸಮಗ್ರವಾಗಿ ದಾಖಲಿಸಿಕೊಂಡು ನಂತರ ವಿಶ್ಲೇಷಿಸಿ, ಪಡೆದ ಒಳನೋಟಗಳಿಂದ ಮಗುವಿನ ಸರ್ವಾಂಗೀಣ ಅಭಿವೃದ್ಧಿಯನ್ನು ಅನುಕೂಲಿಸುವ ಪ್ರಕ್ರಿಯೆಗೆ ನಿರಂತರ–ವ್ಯಾಪಕ ಮೌಲ್ಯಮಾಪನ (ಸಿ.ಸಿ.ಇ) ಎನ್ನಬಹುದು. ಮುಖ್ಯವಾಗಿ ಇಲ್ಲಿ ಮೌಲ್ಯಮಾಪನವು ಕಲಿಕೆಯನ್ನು ಅನುಕೂಲಿಸುವ ಸಾಧನವೆಂದೇ ಪರಿಗಣಿಸಿದೆ.

**ರೂಪಣಾತ್ಮಕ ಮೌಲ್ಯಮಾಪನ**

- ಇದು ಕಲಿಕಾರ್ಥಿಯನ್ನು ರೂಪಿಸುವ ಬಹುಮುಖ್ಯ ಮೌಲ್ಯಾಂಕನವಾಗಿದೆ.
- ಇದು ಕಲಿಕೆಗಾಗಿ ಮಾಡುವ ಮೌಲ್ಯಾಂಕನ ಅಂದರೆ ಮಗುವನ್ನು ಕಲಿಕಾ ಪ್ರಕ್ರಿಯೆಯೊಳಗೆ ಅರ್ಥೈಸಿಕೊಂಡು ಮಗುವಿಗೆ ಕಲಿಯಲು ಬೆಂಬಲ ನೀಡುವುದಾಗಿದೆ.
- ಶೈಕ್ಷಣಿಕ ವರ್ಷಪೂರ್ತಿ ತರಗತಿ ಪ್ರಕ್ರಿಯೆಯ ಜೊತೆಜೊತೆಗೆ ಸಾಗುತ್ತಾ ಶಾಲೆಯಲ್ಲಿ ಕಲಿಕೆಗೆ ಪೂರಕವಾಗಿ ಶಿಕ್ಷಕರಾಗಿ ನಾವೆಲ್ಲರೂ ಯಾವ ಯಾವ ಚಟುವಟಿಕೆಗಳನ್ನು ಕೈಗೊಳ್ಳುತ್ತೇವೆಯೋ ಅವುಗಳೆಲ್ಲದರ ಮೂಲಕ ಮಗುವನ್ನು ನಿರ್ದಿಷ್ಟವಾಗಿ ಅರ್ಥೈಸಿಕೊಳ್ಳುವುದು.




**ಸಂಕಲನಾತ್ಮಕ ಮೌಲ್ಯಮಾಪನ.**

ಇದು ಶೈಕ್ಷಣಿಕ ವರ್ಷದ ಅಂತ್ಯ ಅಥವಾ ಸೆಮಿಸ್ಟರ್ ಅವಧಿಯ ಕೊನೆಯಲ್ಲಿ ನಿರ್ವಹಣೆಯಾಗುತ್ತದೆ. ಇಲ್ಲಿ ಕಲಿಕಾರ್ಥಿಯ ಒಟ್ಟಾರೆ ಕಲಿಕೆಯ ಮೌಲ್ಯಮಾಪನವಾಗುತ್ತದೆ. ಅಂದರೆ ಮಗು ಎಷ್ಟು ಕಲಿತಿದೆ ಎಂಬುದನ್ನು ತಿಳಿಯುವುದು. ಆದರೆ ಗಮನಿಸಬೇಕಾದ ಮುಖ್ಯಾಂಶವೆಂದರೆ ಸಂಕಲನಾತ್ಮಕ ಮೌಲ್ಯಮಾಪನವು ಕೇವಲ ಲಿಖಿತ ಪರೀಕ್ಷೆಗೆ ಸೀಮಿತಗೊಳ್ಳದೆ ಸಾಮರ್ಥ್ಯ ಆಧಾರಿತವಾಗಿ ಚಟುವಟಿಕೆ, ಪ್ರಯೋಗ, ಚರ್ಚೆ, ಭಾಷಣ, ಸೃಜನಶೀಲತೆಗಳನ್ನು ಹೊರಗೆಡಹುವ ವಿಭಿನ್ನ ಆಯಾಮಗಳಲ್ಲಿ ನಡೆಯಬೇಕು. ಈ ಸಂದರ್ಭದಲ್ಲಿ ಮೌಖಿಕ ಪರೀಕ್ಷೆ, ಅಭಿಕ್ಷಮತೆ, ಪ್ರಮಾಣಬದ್ಧ ಪರೀಕ್ಷೆ ಮತ್ತು ತೆರೆದ ಪುಸ್ತಕ ಪರೀಕ್ಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

## CSAS , NASಹಿನ್ನೆಲೆ

ಶಿಕ್ಷಣ ಕ್ಷೇತ್ರವು ನಿರಂತರವಾಗಿ ಬದಲಾವಣೆಗೊಳಗಾಗುತ್ತಿದ್ದು ಅದಕ್ಕೆ ಪೂರಕವಾಗಿ ಶಿಕ್ಷಕರನ್ನು ಅಣಿಗೊಳಿಸುವ, ವಿದ್ಯಾರ್ಥಿಗಳನ್ನು ರೂಪಿಸುವ ಗುರುತರ ಜವಾಬ್ದಾರಿಯನ್ನು ನಾವೆಲ್ಲರೂ ವಹಿಸಿಕೊಳ್ಳಬೇಕಾಗಿದೆ. ಇದಕ್ಕೆ ಪೂರಕವಾಗಿ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಕಲಿವನ್ನು ಉತ್ತಮಪಡಿಸಲು ಹಾಗೂ ಕಲಿವಿನ ಅನುಭವಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಕಲಿಕಾ ತಂತ್ರಗಳನ್ನು ರೂಪಿಸಬೇಕಾಗಿದೆ. ಇದಕ್ಕಾಗಿ ಶಿಕ್ಷಕರು ವೃತ್ತಿಪರ ಕೌಶಲಗಳನ್ನು ಬೆಳೆಸಿಕೊಳ್ಳಬೇಕಾಗಿದೆ. ವಿಷಯದ ಕಲಿಕೆಗನುಗುಣವಾಗಿ ಸೂಕ್ತ ಕಲಿಕಾ ಫಲಗಳನ್ನು ರೂಪಿಸುವ ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ತರಗತಿಗಳಲ್ಲಿ ಅನುಷ್ಠಾನಗೊಳಿಸಿ ಮಗುವಿನ ಕಲಿಕೆಯನ್ನು ದೃಢಪಡಿಕೊಳ್ಳುವುದು ಪ್ರತಿ ಶಿಕ್ಷಕರ ಆದ್ಯ ಕರ್ತವ್ಯವಾಗಿದೆ.

**ಸಾಧನಾ ಸಮೀಕ್ಷೆಗಳು**

2017–18ನೇ ಸಾಲಿನಲ್ಲಿ ರಾಜ್ಯಮಟ್ಟದಲ್ಲಿ ರಾಜ್ಯದ ಸರ್ಕಾರಿ ಹಾಗೂ ಎಲ್ಲಾ ಅನುದಾನಿತ ಶಾಲೆಗಳ 4 ರಿಂದ 9ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಗಣತಿ ಆಧಾರಿತ ಸಾಧನಾ ಸಮೀಕ್ಷೆಯನ್ನು (CSAS)ಯನ್ನು ನಮ್ಮ ರಾಜ್ಯದ ಆಯ್ದ ಶಾಲೆಗಳಲ್ಲಿ 3, 5

ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆಕೈಗೊಳ್ಳಲಾಗಿತ್ತು. ಅಲ್ಲದೆ ರಾಷ್ಟ್ರಮಟ್ಟದಲ್ಲಿ, ರಾಷ್ಟ್ರೀಯ ಸಾಧನಾ ಸಮೀಕ್ಷೆ (National achievement Survey,NAS) ಪರೀಕ್ಷೆಗಳ ಫಲಿತಾಂಶವನ್ನು ಈಗಾಗಲೇ ಪ್ರಕಟಪಡಿಸಲಾಗಿದ್ದು ಪ್ರಾಥಮಿಕ ಹಂತದಿಂದ ಪ್ರೌಢ ಹಂತಕ್ಕೆ ಮುಂದುವರೆದಂತೆ ಕಲಿಕಾ ಸಾಮರ್ಥ್ಯ ಕಡಿಮೆಯಾಗಿರುವುದನ್ನು ಗಮನಿಸಲಾಗಿದೆ. ರಾಷ್ಟ್ರೀಯ ಸಾಧನಾ ಪರೀಕ್ಷೆಯಲ್ಲಿ ಕರ್ನಾಟಕದ ಸಾಧನೆ ಉತ್ತಮವಾಗಿದ್ದರೂ, ಪ್ರಾಥಮಿಕ ಹಂತದಿಂದ ಪ್ರೌಢಹಂತಕ್ಕೆ ಮುಂದುವರೆದಂತೆ ಕಲಿಕೆಯಲ್ಲಿ ಇಳಿಕೆಯಾಗಿರುವುದನ್ನು ಗಮನಿಸಲಾಗಿದೆ. ಅಲ್ಲದೆ ಭಾಷಾ ಕಲಿಕೆಯು ಎಲ್ಲಾ ವಿಷಯಗಳ ಕಲಿಕೆಗೆ ಬುನಾದಿ ಎಂಬ ಅರಿವು ನಮ್ಮೆಲ್ಲರಿಗೂ ಇದೆ, ಆದರೂ ಭಾಷಾ ಕಲಿಕೆ ಪ್ರತಿಶತ 100ರಷ್ಟು ಅಥವಾ ಅದರ ಸಮೀಪದಲ್ಲಿಯೂ ಇಲ್ಲದಿರುವುದು ಕಳವಳಕಾರಿಯಾಗಿದೆ. ಇದಕ್ಕೆ ಕಾರಣಗಳನ್ನು ಕಂಡುಹಿಡಿದು, ಪ್ರಾಥಮಿಕ ಶಾಲಾ ಶಿಕ್ಷಕರ ಹಂತದಿಂದ ರಾಜ್ಯ ಹಂತದವರೆಗೆ ಎಲ್ಲರೂ ಕ್ರಮವಹಿಸಿ ಮುಂದಿನ ದಿನಗಳಲ್ಲಿ ಕಲಿಕಾ ಮಟ್ಟವನ್ನು ಉತ್ತಮಪಡಿಸಬೇಕಾದ ಮಹತ್ತರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ.

**ಪರಿಹಾರ ಬೋಧನೆ**

ಸಂವಿಧಾನಪರಿಚ್ಛೇದ21ಎಹಾಗೂಆರ್.ಟಿ.ಇ.ಕಾಯ್ದೆ2009ರಅನ್ವಯ6ರಿಂದ14ವರ್ಷದಎಲ್ಲಾಮಕ್ಕಳನ್ನುಶಾಲೆಗೆದಾಖಲುಮಾಡಿ1ರಿಂದ8ನೇತರಗತಿವರೆಗಿನಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ, ಕಡ್ಡಾಯವಾಗಿ ಹಾಗೂ ಸಾರ್ವತಿಕವಾಗಿ ಒದಗಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಾಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಇಲಾಖೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಅಗತ್ಯವಿರುವ ಮೂಲಭೂತ ಸೌಲಭ್ಯಗಳು ಹಾಗೂ ಉಚಿತವಾಗಿ ಹಲವಾರು ಉತ್ತೇಜಕಗಳನ್ನು ಒದಗಿಸಿಕೊಟ್ಟು ಗುಣಮಟ್ಟದ ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರಾಮಾಣಿಕ ಮತ್ತು ವ್ಯಾಪಕ ಕ್ರಮಗಳನ್ನು ಕೈಗೊಂಡಿದೆ.

ಆದಾಗ್ಯೂಸರ್ಕಾರಿಶಾಲೆಗಳಲ್ಲಿಶಿಕ್ಷಣದಗುಣಮಟ್ಟಬಲವರ್ಧನೆಯುಒಂದುದೊಡ್ಡಸವಾಲಾಗಿದೆ.ಶಿಕ್ಷಣಕ್ಷೇತ್ರದಲ್ಲಿಕಾರ್ಯನಿರ್ವಹಿಸುತ್ತಿರುವ ಪ್ರಥಮಸಂಸ್ಥೆಮೂಲಕ ಕೈಗೊಳ್ಳಲಾದ ಶೈಕ್ಷಣಿಕ ಸ್ಥಿತಿಗತಿಗಳ ವಾರ್ಷಿಕ ವರದಿ ಪ್ರಕಾರ (ಪರಿಹಾರ ಬೋಧನೆ) ರಾಜ್ಯದ ಗ್ರಾಮೀಣ ಪ್ರದೇಶಗಳ 5ನೇ ತರಗತಿಯ ಶೇ.53 ರಷ್ಟು ವಿದ್ಯಾರ್ಥಿಗಳು 2ನೇ ತರಗತಿಯಕನ್ನಡಪಠ್ಯವನ್ನುಓದಲು,ಶೇ.66ರಷ್ಟುವಿದ್ಯಾರ್ಥಿಗಳುಎರಡುಅಂಕಿಗಳವ್ಯವಕಲನಮಾಡಲುಮತ್ತುಶೇ.80ರಷ್ಟುವಿದ್ಯಾರ್ಥಿಗಳು3ಅಂಕಿಗಳಸಂಖ್ಯೆಯನ್ನುಒಂದು ಅಂಕಿಯಸಂಖ್ಯೆಯಿಂದಭಾಗಿಸಲುಅಸಮರ್ಥರಾಗಿರುತ್ತಾರೆ.ಗ್ರಾಮೀಣಕ್ಷೇತ್ರದಲ್ಲಿಪ್ರಾಥಮಿಕಶಿಕ್ಷಣವುಬಹುಪಾಲುಸರ್ಕಾರಿಶಾಲೆಗಳಮೂಲಕಒದಗಿಸಲಾಗುತ್ತಿರುವುದರಿಂದ,ವರದಿಯನ್ವಯ ಕಂಡುಕೊಳ್ಳಲಾದ ಸಂಶೋಧನಾ ಅಂಶಗಳು ಶಾಲಾ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವ ಅಗತ್ಯತೆ ಇರುವುದನ್ನು ಸೂಚಿಸುತ್ತದೆ.ಎಸ್.ಎಸ್.ಎಲ್.ಸಿಪರೀಕ್ಷೆಯಸಾಧನಾಮಟ್ಟವನ್ನುಅವಲೋಕಿಸಿದಾಗ,ಖಾಸಗಿಶಾಲೆಗಳಸಾಧನೆಯುಶೇ.60ರಷ್ಟುಆಗಿದ್ದು,ಸರ್ಕಾರಿಶಾಲೆಗಳಮಕ್ಕಳುಶೇ.45ರಷ್ಟನ್ನುಮಾತ್ರ ಗಳಿಸಿರುತ್ತಾರೆ. ಶೇಕಡಾವಾರು ತೇರ್ಗಡೆಯೂ ಸಹ ಗಣನೀಯವಾದ ಅಂತರವನ್ನು ಹೊಂದಿದ್ದು,ಶೇ.66 ರಷ್ಟು ಸರ್ಕಾರಿ ಶಾಲೆಗಳಲ್ಲಿ ಹಾಗೂ ಶೇ.78 ರಷ್ಟು ಖಾಸಗಿಶಾಲೆಗಳ ಫಲಿತಾಂಶ ಆಗಿರುತ್ತದೆ. ಸದರಿ ಅಂಕಿ–ಅಂಶಗಳು ಸಹ ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಉತ್ತಮಪಡಿಸುವ ಅಗತ್ಯತೆ ಬಿಂಬಿಸುತ್ತದೆ.ಈ ಅಂಶಗಳನ್ನು ಗಮನದಲ್ಲಿರಿಸಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ ರಾಜ್ಯದ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಅರಿತು ಶೈಕ್ಷಣಿಕ ಯೋಜನೆಗಳನ್ನುರೂಪಿಸಲುಇಲಾಖೆಯುಪ್ರಸ್ತುತಸಾಲಿನಲ್ಲಿ4ರಿಂದ9ನೇತರಗತಿವಿದ್ಯಾರ್ಥಿಗಳಿಗೆಕಲಿಕಾಸಾಧನಾಸಮೀಕ್ಷೆಯನ್ನುಕೈಗೊಂಡಿದೆ.ಸಮೀಕ್ಷೆಯಫಲಿತಾಂಶವನ್ನು ವಿದ್ಯಾರ್ಥಿವಾರು, ವಿಷಯವಾರು, ಸಾಮರ್ಥ್ಯವಾರು ವಿಶ್ಲೇಷಿಸಲಾಗಿದ್ದು, ರಾಜ್ಯದ ಸರಾಸರಿ ಫಲಿತಾಂಶ ಕೆಳಕಂಡಂತಿದೆ:

**ರಾಜ್ಯ ಹಂತದ ವಿಷಯವಾರು ಫಲಿತಾಂಶ**

| ಕ್ರ.ಸಂ | ವಿಷಯ | ಕಲಿಕಾ ಸಾಧನೆ |
|---|---|---|
| 1 | ಪ್ರಥಮ ಭಾಷೆ | 65 |
| 2 | ದ್ವಿತೀಯ ಭಾಷೆ | 60 |
| 3 | ತೃತೀಯ ಭಾಷೆ | 62 |
| 4 | ಗಣಿತ | 64 |
| 5 | ವಿಜ್ಞಾನ | 60 |
| 6 | ಸಮಾಜ ವಿಜ್ಞಾನ | 62 |
| | ಒಟ್ಟು | 63 |

ಕೆ.ಎಸ್.ಕ್ಯೂ.ಎ.ಎ.ಸಿ. ವತಿಯಿಂದ ನಡೆಸಲಾದ ಕಲಿಕಾ ಗುಣಮಟ್ಟ ಸಮೀಕ್ಷೆ ಪರೀಕ್ಷೆಯ ರಾಜ್ಯದ ಸರಾಸರಿ ಫಲಿತಾಂಶವು ಶೇ.63ರಷ್ಟು ಆಗಿದ್ದರೂ ಸಹ 10.47 ಲಕ್ಷವಿದ್ಯಾರ್ಥಿಗಳ ಪಟ್ಟಿಯನ್ನು ಜಿಲ್ಲೆ/ಬ್ಲಾಕ್ ಮತ್ತು ಶಾಲಾ ಹಂತಕ್ಕೆ ಈಗಾಗಲೇ ಕಳುಹಿಸಿರುವ ಉದ್ದೇಶದಿಂದ ಶಾಲಾ ಹಂತದಲ್ಲಿ ಪರಿಹಾರ ಬೋಧನಾ ಕಾರ್ಯಕ್ರಮವನ್ನು

ಅನುಷ್ಠಾನಗೊಳಿಸಬೇಕಾಗಿದ್ದು, ಇದಕ್ಕಾಗಿ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ: No continuity

**ಪರಿಹಾರ ಬೋಧನೆ ಉದ್ದೇಶಗಳು**

1. ಕಲಿಕೆಯಲ್ಲಿ ಹಿಂದುಳಿದ ಯಾವುದೇ ವಿದ್ಯಾರ್ಥಿಯ ಸಮಸ್ಯೆಗಳಿಗೆ ಪೂರಕ ಹಿಮ್ಮಾಹಿತಿ ಮತ್ತು ಮರುಬೋಧನೆ ಮೂಲಕ ಪರಿಹಾರವನ್ನು ಸಕಾಲಕ್ಕೆ ಒದಗಿಸುವುದು.
2. ವರ್ಗಕೋಣೆಯಲ್ಲಿ ಕಂಡು ಬರುವ ಕಲಿಕಾ ಅಂತರಗಳನ್ನು ಪರಿಹರಿಸಲು ಕಾರ್ಯತಂತ್ರಗಳನ್ನು ರೂಪಿಸುವುದು.
3. ಪತ್ರಿಯೊಬ್ಬ ವಿದ್ಯಾರ್ಥಿಯ ಕಲಿಕಾ ಸಮಯವನ್ನು ಯೋಜಿತ ಕಲಿಕೋಪಕರಣಗಳ ಸಹಿತ ಅರ್ಥಪೂರ್ಣವಾಗಿ ಉತ್ತೇಜಿಸುವುದು.
4. ಶಾಲಾ ಸಮಯ ಮಕ್ಕಳು ನಿರಂತರವಾಗಿ ಕಲಿಕೆಯಲ್ಲಿ ತೊಡಗುವಂತೆ ಯೋಜಿತ ಗೃಹಕಾರ್ಯಗಳ ಮೂಲಕ ಕಲಿಕಾ ಅವಕಾಶದ ಸಮಯವನ್ನು ವಿಸ್ತರಿಸುವುದು.
5. ಬುನಾದಿ ಸಾಮರ್ಥ್ಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಸದೃಢಗೊಳಿಸಿ ಅಪೇಕ್ಷಿತ ಸಾಧನೆಯ ಕಡೆಗೆ ಕರೆದೊಯ್ಯವುದು.
6. ವಿಷಯವಾರುತರಗತಿವಾರುಪ್ರತಿಯೊಬ್ಬವಿದ್ಯಾರ್ಥಿಯುನಿಗಧಿಗೊಳಿಸಿದಪಠ್ಯಾಂಶಗಳನ್ನುನಿಗಧಿಗೊಳಿಸಿದಕಾಲಾವಕಾಶದಲ್ಲಿಪೂರ್ಣಗೊಳಿಸಲುಕಲಿಕಾಪರಿಸರವನ್ನು ನಿರ್ಮಿಸುವುದು.
7. ಏಕರೂಪತೆ ಹೊಂದಿದ ಕಲಿಕಾ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಪೂರಕ ವಾತಾವರಣ ನಿರ್ಮಿಸುವುದು.
8. ಅಭ್ಯಾಸ ಪುಸ್ತಕಗಳ ಮೂಲಕ ಪರಿಕಲ್ಪನೆಗಳನ್ನು ಸ್ಪಷ್ಟತೆ ಮೂಡಿಸುವುದು.
9. ಪೂರಕ ಚಟುವಟಿಕೆಗಳ ಮೂಲಕ ಕಲಿಕಾ ಸಾಮರ್ಥ್ಯ ಉತ್ತಮಪಡಿಸುವುದು.

**ಪರಿಹಾರ ಬೋಧನೆ ನಿರ್ವಹಣೆ**

1. ಪರಿಹಾರ ಬೋಧನೆಗೆ ಗುರುತಿಸಲಾಗಿರುವ ವಿದ್ಯಾರ್ಥಿಗಳ ತರಗತಿವಾರು ಪಟ್ಟಿ ಸಿದ್ಧಪಡಿಸುವುದು.
2. ಪರಿಹಾರ ಬೋಧನೆಗೆ ಒಳಪಡುವ ವಿದ್ಯಾರ್ಥಿಗಳನ್ನು ತರಗತಿವಾರು/ವಿಷಯವಾರು ವಿಂಗಡಿಸುವುದು.
3. ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧನೆಯನ್ನು ಅನುಕೂಲಿಸಲು ವಿದ್ಯಾರ್ಥಿಗಳನ್ನು ಗುಂಪುಗಳಲ್ಲಿ ಕ್ರಮವಹಿಸುವುದು.
4. ಸರಳ ಸಾಮರ್ಥ್ಯಗಳಿಂದ ಕ್ಲಿಷ್ಟ ಸಾಮರ್ಥ್ಯಗಳ ಕಲಿಕೆಗೆ ಬೋಧನೆಯು ಸಾಗುವಂತೆ ಶಿಕ್ಷಕರು ಗುಂಪು ಕಲಿಕೆಗೆ ಕ್ರಮವಹಿಸುವುದು.
5. ವಿಷಯವಾರುಶಿಕ್ಷಕರುಪರಿಹಾರಬೋಧನೆಗೆಸಾಮರ್ಥ್ಯಗಳನ್ನುಗುರುತಿಸಿಅದರಬೋಧನೆಗೆಸೂಕ್ತಬೋಧನಾಪದ್ಧತಿಯನ್ನುಯೋಜಿಸಿಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವುದು.
6. ಆಯಾ ತರಗತಿಗೆ ಆಯಾ ವಿಷಯ ಬೋಧಿಸುವ ಶಿಕ್ಷಕರೇ ಪರಿಹಾರ ಬೋಧನೆಯನ್ನು ಕೈಗೊಳ್ಳುವುದು.
7. ತರಗತಿ ವೇಳಾಪಟ್ಟಿಯಲ್ಲಿ ಪರಿಹಾರ ಬೋಧನೆಗೆ ಅವಧಿ ದೊರಕುವಂತೆ ವೇಳಾಪಟ್ಟಿ ರಚಿಸುವುದು.
8. ವಯೋನಿರ್ದಿಷ್ಟಹಾಗೂತರಗತಿನಿರ್ದಿಷ್ಟಸಾಮರ್ಥ್ಯಗಳನ್ನುಗಳಿಸಿರುವವಿದ್ಯಾರ್ಥಿ/ಹಿರೇಮಣಿಗಳಸಹಕಾರವನ್ನು ಪರಿಹಾರ ಬೋಧನೆಗೆ ಬಳಸಿಕೊಳ್ಳುವುದು. ಇದರಿಂದ ನಾಯಕತ್ವ ಗುಣ ಮತ್ತು ಆತ್ಮ ವಿಶ್ವಾಸವನ್ನು ಪ್ರತಿಯೊಬ್ಬ ವಿದ್ಯಾರ್ಥಿ ಬೆಳೆಸಿಕೊಳ್ಳಲು ಸಾಧ್ಯವಾಗುವುದು.
9. ಕಲಿಕಾಗುಣಮಟ್ಟದಬಲವರ್ಧನೆಗಾಗಿ4ರಿಂದ9ನೇತರಗತಿಯಎಲ್ಲಾವಿದ್ಯಾರ್ಥಿಗಳಿಗೆಪೂರಕಬೋಧನೆಯನ್ನುಅನುಕೂಲಿಸಲುಅಭ್ಯಾಸಪುಸ್ತಕಗಳನ್ನುಕನ್ನಡ, ಇಂಗ್ಲಿಷ್ ಮತ್ತು ಗಣಿತ ವಿಷಯಗಳಿಗೆ ನೀಡಲಾಗುತ್ತಿದೆ. ಪರಿಕಲ್ಪನೆಗಳಲ್ಲಿ ಸ್ಪಷ್ಟತೆಯನ್ನು ಮೂಡಿಸಿ ಕಲಿಕೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಅಭ್ಯಾಸಪುಸ್ತಕಗಳನ್ನು ನೀಡುತ್ತಿದ್ದು, ಇದರಲ್ಲಿನ ಚಟುವಟಿಕೆಗಳನ್ನು ಎಲ್ಲಾ ವಿದ್ಯಾರ್ಥಿಗಳು ಪೂರ್ಣಗೊಳಿಸುವಂತೆ ಶಿಕ್ಷಕರು ಕ್ರಮವಹಿಸುವುದು.

**ಪರಿಹಾರ ಪೂರಕ ಬೋಧನೆಗೆ ಪರಿಕರಗಳು**

1. ಶಾಲಾ ಹಂತದಲ್ಲಿ ಲಭ್ಯವಿರುವ ಕಲಿಕೋಪಕರಣಗಳು.
2. ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮದಡಿಯಲ್ಲಿ ಹೈದ್ರಾರಬಾದ್ ಕರ್ನಾಟಕ ಪ್ರಾಂತ್ಯದ 6 ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯದ 12 ಜಿಲ್ಲೆಗಳಿಗೆವಿತರಿಸಲಾಗಿರುವ ಗಣಿತ ಕಿಟ್‌ಗಳು.
3. ಇಲಾಖೆಯಿಂದ ಒದಗಿಸಿರುವ ಜಿಯೋ–ಕಿಟ್, ಓದುವೆ ನಾನು ಕಾರ್ಡುಗಳು.
4. ಕ್ಲಿಷ್ಟ ಸಾಮರ್ಥ್ಯವನ್ನು ಶಿಕ್ಷಕರು ಮಾದರಿಗಳ ಮೂಲಕ ಸರಳೀಕರಿಸಿ ಬೋಧನೆಗೆ ಅನುಕೂಲಿಸಲು ಕ್ರಮವಹಿಸುವುದು.
5. ಇಲಾಖೆಯಿಂದ ಸರಬರಾಜಾದ ಅಭ್ಯಾಸ ಪುಸ್ತಕಗಳು.
6. CALCಹಾಗೂ TALP ಯೋಜನೆಯಡಿಯಲ್ಲಿ ನೀಡಲಾಗಿರುವ ವಿದ್ಯಾರ್ಥಿಗಳ ಇ–ಕಂಟೆಂಟ್‌ಸಾಮಗ್ರಿಗಳು.

**ಭಾಷೆ (ಕನ್ನಡ/ಆಂಗ್ಲ)**

ಕಿರಿಯ ಪ್ರಾಥಮಿಕ ಹಂತದಲ್ಲಿ ಭಾಷೆ ಮತ್ತು ಗಣಿತ ವಿಷಯಗಳು ಪರಿಹಾರ ಬೋಧನೆಯಲ್ಲಿ ಪ್ರಮುಖವಾಗುತ್ತವೆ. ಭಾಷೆಯು ಒಂದುಭಾಷೆಯ
ಭಾಷಾಭ್ಯಾಸಮತ್ತುಕೌಶಲಗಳಮೇಲಿನಹಿಡಿತವನ್ನುನಿರೀಕ್ಷಿಸುವುದರಿಂದಈಹಂತದಲ್ಲಿಆಲಿಸುವುದು,ಮಾತನಾಡುವುದು,ಓದುವುದುಮತ್ತುಬರೆಯುವುದರಬಗ್ಗೆ ಚಟುವಟಿಕೆಗಳನ್ನು ಹೆಚ್ಚು ಹೆಚ್ಚು ರೂಪಿಸಬೇಕಾಗುತ್ತದೆ. ಭಾಷೆಯನ್ನು ಕಲಿಸಬೇಕೇ ಹೊರತು, ಬೋಧಿಸಲು ಸಾಧ್ಯವಿಲ್ಲ. ಭಾಷಾ

ಕೌಶಲಗಳ ಸಾಮರ್ಥ್ಯದಲ್ಲಿಪ್ರತಿಯೊಬ್ಬವಿದ್ಯಾರ್ಥಿಯೂ ಹಿಡಿತ ಸಾಧಿಸಬೇಕಿರುವುದರಿಂದ ಶಿಕ್ಷಣ ಮತ್ತು ಮೌಲ್ಯಮಾಪನ ಪ್ರಕ್ರಿಯೆ ಈ ಹಂತದಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ.

ಉದಾಹರಣೆಗೆ,ಅಕ್ಷರ/ಗುಣಿತಾಕ್ಷರ/ಒತ್ತಕ್ಷರಗಳ ನಿಖರ ಬರವಣಿಗೆ, ಪದ ಮತ್ತು ಸರಳ ವಾಕ್ಯಗಳ ಬರವಣಿಗೆ, ಸರಿಯಾದ ಅಂತರ ಅನುಸರಿಸುವ ಬರವಣಿಗೆ, ಲೇಖನ ಚಿಹ್ನೆ ಅಳವಡಿಸುವಬರವಣಿಗೆ,ಯಥಾವತ್ತಾಗಿನಕಲುಮಾಡುವುದು,ಉಕ್ತಲೇಖನ,ಸ್ಪಷ್ಟಉಚ್ಚಾರಣೆ,ಗ್ರಹಿಸಿಓದುವುದು,ಗ್ರಹಿಸಿದ್ದನ್ನುತಮ್ಮಮಾತುಗಳಲ್ಲಿವಿವರಿಸುವುದು,ಕೈಬರಹಗಳನ್ನು ಓದುವುದು,ಸರಳಮುದ್ರಿತಸಾಮಗ್ರಿಗಳನ್ನುಓದುವುದು,ತಪ್ಪಿಲ್ಲದೆಸ್ಫುಟವಾಗಿಬರೆಯುವುದು,ಚಿತ್ರಸನ್ನಿವೇಶಕ್ಕೆಪೂರಕವಾಗಿಸರಳವಾಕ್ಯಬರೆಯುವುದು,ಸರಳವ್ಯಾಕರಣಾಂಶಗಳನ್ನುಗ್ರಹಿಸಿಬಳಸುವುದುಮತ್ತುಬರೆಯುವುದುಭಾಷೆಯಆರಂಭಿಕಹಂತದಲ್ಲಿಮುಖ್ಯವಾಗುತ್ತದೆ.ಮೇಲಿನಬುನಾದಿಸಾಮರ್ಥ್ಯಗಳ ುವಿದ್ಯಾರ್ಥಿಗಳಲ್ಲಿ ಗಳಿಕೆಯಾಗಿದ್ದಲ್ಲಿಪರಿಹಾರಬೋಧನೆಗಾಗಿಮತ್ತಷ್ಟುಶ್ರೇಣೀಕೃತಕಲಿಕಾಂಶಗಳನ್ನುಪಟ್ಟಿಮಾಡಿಕೊಳ್ಳಬೇಕು.ಉದಾ:ಪದ್ಯ-ಗದ್ಯಕಲಿಕಾಂಶಗಳು,ಉನ್ನತಮಟ್ಟದವ್ಯಾಕರಣಾಂಶಗಳು ಅಂದರೆ ಸಂಧಿ, ಸಮಾಸ, ಲಘು ಗುರು ಗುರುತಿಸುವಿಕೆ, ಕಿರುಪ್ರಬಂಧ ರಚನೆ, ವಿವರಣಾತ್ಮಕ ವಾಕ್ಯಗಳ ಓದು ಮತ್ತು ಬರಹ, ಸ್ವಂತ ಅಭಿವ್ಯಕ್ತಿ,ಸಂಭಾಷಣೆ,ಓದುವಪಿರುಗತಿಗಳು,ಸನ್ನಿವೇಶಕ್ಕೆವಾಕ್ಯರಚಿಸುವುದು.ಇತ್ಯಾದಿಕ್ರಿಯಾತ್ಮಕಕೆಲಸಗಳಿಗೆಆದ್ಯತೆಕಲ್ಪಿಸುವುದು.ಅನೇಕವರದಿಗಳಲ್ಲಿಲೇಖನಚಿಹ್ನೆಗಳನ್ನು ಅಳವಡಿಸಿ ಬರೆಯುವ ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿ ಕ್ಷೀಣಿಸಿರುವುದನ್ನು ಗಮನಿಸಬೇಕು.

**ಗಣಿತ**

ದೈನಂದಿನಜೀವನದಲ್ಲಿಎದುರಾಗುವವ್ಯವಹಾರಿಕಸಂದರ್ಭಗಳುಗಣಿತದಮೂಲಕ್ರಿಯೆಗಳನ್ನುಒಳಗೊಂಡಿರುತ್ತವೆ.ಗಣಿತದಸರಳಸಮಸ್ಯೆಗಳನ್ನುಬಿಡಿಸಲು ತರಗತಿ ಕೋಣೆಯಲ್ಲಿ ವಿದ್ಯಾರ್ಥಿಗಳು ಕೆಲವು ಕೊರತೆಗಳನ್ನು ಎದುರಿಸುತ್ತಿದ್ದಾರೆ. ಮೂಲ ಕ್ರಿಯೆಗಳಲ್ಲಿನ (ಕೂಡುವುದು, ಕಳೆಯುವುದು, ಗುಣಿಸುವುದುಮತ್ತು ಭಾಗಿಸುವುದು) ಬುನಾದಿ ಸಾಮರ್ಥ್ಯದ ಅಡಿಪಾಯದ ಮೇಲೆ ಹಿರಿಯ ಪ್ರಾಥಮಿಕ ತರಗತಿಯ ಗಣಿತ ಪರಿಕಲ್ಪನೆಗಳು ಶ್ರೇಣೀಕೃತವಾಗಿ ಅಡ್ಡಸಾಲಿನಲ್ಲಿ ಜೋಡಿಸಲ್ಪಟ್ಟಿರುವುದರಿಂದ ಪ್ರಾಥಮಿಕ ಹಂತದಲ್ಲಿ ಮೂಲಕ್ರಿಯೆಯ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿ, ಕಲಿಕೋಪರಣಗಳ ಸಹಿತ, ನಿತ್ಯಜೀವನದ ಉದಾಹರಣೆಸಹಿತ, ಹೆಚ್ಚು ಸಂಯಮದಿಂದ ಅದನ್ನು ಅರ್ಥೈಸಬೇಕಾಗುತ್ತದೆ. ಪರಿಕಲ್ಪನೆಯು ಮೂರ್ತತೆಯಿಂದ ಅಮೂರ್ತದೆಡೆಗೆ ಸಾಗುವ ಹಂತವೇ ಪ್ರಾಥಮಿಕ ಹಂತ. ಬಹಳಷ್ಟು ವಿದ್ಯಾರ್ಥಿಗಳು ಮೂಲಪರಿಕಲ್ಪನೆಗಳನ್ನು ಗ್ರಹಿಸಿಕೊಳ್ಳುವುದರಲ್ಲಿ ಹಿಂದುಳಿದಿರುವುದನ್ನು ಗಮನಿಸಬಹುದಾಗಿದೆ (ಕೆಎಸ್‌ಕ್ಯೂಎಎಸಿ ಫಲಿತಾಂಶ ವರದಿಗಳು).

ಉದಾಹರಣೆಗೆ, ಕ್ರಮಾನುಗತ ಎಣಿಕೆ ಮತ್ತು ಬರವಣಿಗೆ, ಒಂದಂಕಿ/ಎರಡಂಕಿ/ಮೂರಂಕಿ/ನಾಲ್ಕಂಕಿಗಳ ಸಂಕಲನ ಮತ್ತು ವ್ಯವಕಲನ, ದಶಕಸಹಿತ ಮತ್ತು ರಹಿತಸಂಕಲನಮತ್ತುವ್ಯವಕಲನ,ಸ್ಥಾನಬೆಲೆಪರಿಕಲ್ಪನೆ,ಗುಣಾಕಾರ,ಭಾಗಕಾರ,ಹಣದಲೆಕ್ಕಾಚಾರ,ಕಾಲದಪರಿಗಣನೆ,ಸರಳರೇಖಾಕೃತಿಗಳರಚನೆ,ನಿತ್ಯಜೀವನದಹೇಳಿಕೆ ರೂಪದಗಣಿತಸಮಸ್ಯೆಗಳು,ಮೌಖಿಕಅಭ್ಯಾಸಗಳುಪರಿಹಾರಬೋಧನೆಗೆಒಳಪಡುವಪ್ರಮುಖಅಂಶಗಳಾಗಿವೆ.ಮೇಲಿನಬುನಾದಿಸಾಮರ್ಥ್ಯಗಳುವಿದ್ಯಾರ್ಥಿಗಳಲ್ಲಿ ಗಳಿಕೆಯಾಗಿದ್ದಲ್ಲಿ ಪರಿಹಾರ ಬೋಧನೆಗಾಗಿ ಮತ್ತಷ್ಟು ಶ್ರೇಣಿಕೃತ ಕಲಿಕಾಂಶಗಳನ್ನ ಪಟ್ಟಿ ಮಾಡಿಕೊಳ್ಳಬೇಕು. ಉದಾ: ಭಿನ್ನರಾಶಿ, ಸಂಕಲನ, ವ್ಯವಕಲನ, ಬೀಜೋಕ್ತಿಗಳು, ಗಣಗಳು, ಕೋನಗಳ ರಚನೆ, ವಿಸ್ತೀರ್ಣ, ಪ್ರಮೇಯಗಳ ಸಾಧಿಸುವಿಕೆ, ಆಲೇಖಗಳು, ದತ್ತಾಂಶಗಳ ಸಮಸ್ಯೆಗಳುಇತ್ಯಾದಿ.ಗಣಿತದ ಮೂಲ ಕ್ರಿಯೆಗಳ ಕಲಿಕೆಗೆ ಪೂರಕವಾದ ಹೆಚ್ಚಿನ ಅಭ್ಯಾಸಗಳನ್ನು ನೀಡುವುದು.ದೈನಂದಿನ ಚಟುವಟಿಕೆಗಳಲ್ಲಿ ಗಣಿತ ಕ್ರಿಯೆಗಳ ಉಪಸ್ಥಿತಿ ಹಾಗೂ ಅವುಗಳ ಬಳಕೆಯ ಬಗ್ಗೆ ಅರಿವು ಮೂಡಿಸುವುದು.ಒಂದಕ್ಕಿಂತಹೆಚ್ಚುಮೂಲಕ್ರಿಯೆಗಳನ್ನೊಳಗೊಂಡಸಮಸ್ಯೆಬಿಡಿಸುವಲ್ಲಿಹೆಚ್ಚಿನವಿದ್ಯಾರ್ಥಿಗಳುಅಸಮರ್ಥರಾಗಿದ್ದು,ಈರೀತಿಯಸಮಸ್ಯೆಗಳಪರಿಹಾರಕೌಶಲ್ಯಗಳನ್ನು ಉತ್ತಮಪಡಿಸಲು ಹೆಚ್ಚಿನ ಅಭ್ಯಾಸಗಳನ್ನು ನೀಡುವುದು.ರೇಖಾಗಣಿತದಪ್ರಮುಖಪರಿಕಲ್ಪನೆಗಳಾದಆಕೃತಿಗಳು,ಕೋನ,ಸುತ್ತಳತೆ,ವಿಸ್ತೀರ್ಣ,ಎರಡುಮತ್ತುಮೂರುಆಯಾಮದಆಕೃತಿಗಳನ್ನುಗುರುತಿಸುವಕೌಶಲಬೆಳೆಸುವ ಚಟುವಟಿಕೆಗಳನ್ನು ಅಳವಡಿಸುವುದು.ಸುತ್ತಳತೆ, ವಿಸ್ತೀರ್ಣ, ಕೋನದ ಅಳತೆ ಇವುಗಳನ್ನು ಕಂಡು ಹಿಡಿಯುವ ಸಮಸ್ಯೆ ಪರಿಹಾರ ಕೌಶಲ್ಯವನ್ನು ಬೆಳಸುವಚಟುವಟಿಕೆಗಳು.ವಿವರಣಾತ್ಮಕ ಸಮಸ್ಯೆಗಳನ್ನು ಓದಿ, ಗ್ರಹಿಸಿ, ಅನ್ವಯ ಕೌಶಲ್ಯದ ಮೂಲಕ ಸಮಸ್ಯೆ ಪರಿಹರಿಸುವ ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿ ಅತೀ ಕಡಿಮೆ ಇರುವುದನ್ನುಗಮನಿಸಿದೆ. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ವಿವರಣಾತ್ಮಕ ಸಮಸ್ಯೆಗಳನ್ನು ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲು ಪೂರಕ ಚಟುವಟಿಕೆಗಳನ್ನುನೀಡುವುದು.

**ವಿಜ್ಞಾನ**

ವಿಜ್ಞಾನದ ಪಠ್ಯವಸ್ತುವನ್ನು ಪರಿಸರದ ಸನ್ನಿವೇಶಕ್ಕೆ ಹೋಲಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಕಲ್ಪನೆಗಳ ಸ್ಪಷ್ಟತೆಗೆಅನುಕೂಲಿಸುವುದು.ಪಠ್ಯವಸ್ತುವಿನ ಅಂಶಗಳನ್ನು ಪರಿಸರದಲ್ಲಿ ಗುರುತಿಸುವ ಕೌಶಲ್ಯ ಬೆಳಸುವಂತಹ ಚಟುವಟಿಕೆಗಳನ್ನು ಬೋಧನಾ ವಿಧಾನದಲ್ಲಿಅಳವಡಿಸಿಕೊಳ್ಳುವುದು.ಸರಳ ಪ್ರಯೋಗಗಳನ್ನು ತರಗತಿಯಲ್ಲಿ ಪ್ರಾತ್ಯಕ್ಷಿಕೆ ಮೂಲಕ ಮಕ್ಕಳಿಗೆ ತೋರಿಸುವುದು ಹಾಗೂ ವಿದ್ಯಾರ್ಥಿಗಳು ಸ್ವಯಂ ಪ್ರಯೋಗ ಹಾಗೂ ಮಾದರಿಗಳನ್ನುಸೃಜನಾತ್ಮಕವಾಗಿ ಸಿದ್ಧಪಡಿಸುವ ಕೌಶಲ್ಯ ಬೆಳೆಸುವುದು.ರಚನಾ ತತ್ವವನ್ನು ಆಧರಿಸಿ ಬೋಧನಾ ಕ್ರಮವನ್ನು ಅನುಸರಿಸುವುದು,ವಿಮರ್ಶಾತ್ಮಾಕ ಚಿಂತನೆ ಬೆಳೆಸುವ ಚಟುವಟಿಕೆಗಳನ್ನುನೀಡುವುದು.ರಾಷ್ಟ್ರೀಯ ಆವಿಷ್ಕಾರ ಅಭಿಯಾನ ಕಾರ್ಯಕ್ರಮದಡಿ ಸೂಚಿಸಿರುವ ಚಟುವಟಿಕೆಗಳನ್ನು ನೀಡುವುದು.

## ಸಮಾಜ ವಿಜ್ಞಾನ

ಸಮಾಜ–ವಿಜ್ಞಾನದಲ್ಲಿಭೂಗೋಳಶಾಸ್ತ್ರಕ್ಕೆಸಂಬಂಧಿಸಿದಪರಿಕಲ್ಪನೆಗಳಸಾಧನೆಅತೀಕಡಿಮೆಇದ್ದುಇದನ್ನುಉತ್ತಮಪಡಿಸುವಕಲಿಕಾಚಟುವಟಿಕೆಗಳನ್ನುಹಮ್ಮಿಕೊಳ್ಳುವುದು.ನಕ್ಷೆ ಓದುವುದು, ಬಳಸುವುದು ಮತ್ತು ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವ ಹವ್ಯಾಸ ಬೆಳಸುವುದು.ಚರಿತ್ರೆಯ ಘಟನೆಗಳನ್ನು ವಿಮರ್ಶಿಸಿ ಸಮಕಾಲೀನ ಸಮಾಜದ ಸಾಮಾಜಿಕ ಆಗು ಹೋಗುಗಳಿಗೆ ಅನ್ವಯಿಸುವ ಕೌಶಲಬೆಳೆಸುವುದು.ಕಾಲರೇಖೆ(Time Line) ರಚಿಸಿ, ವಿಶ್ಲೇಷಿಸಿ ಅನ್ವಯಿಸುವ ಕೌಶಲ್ಯಬೆಳೆಸುವುದು.ಪೌರನೀತಿಯ ಮೂಲಕ ವಿದ್ಯಾರ್ಥಿಗಳಲ್ಲಿ ಪೌರನಾಗಿ ಕರ್ತವ್ಯ ಮತ್ತು ಹಕ್ಕುಗಳನ್ನು ನಿರ್ವಹಿಸುವ ಹೊಣೆಗಾರಿಕೆಯನ್ನುಬೆಳೆಸುವುದು.

## ಪರಿಹಾರ/ಪೂರಕ ಬೋಧನೆಯ ಅವಧಿಗಳಲ್ಲಿ ದಾಖಲೆಗಳ ನಿರ್ವಹಣೆ

1) ಪರಿಹಾರ/ಪೂರಕ ಬೋಧನೆಗೆ ಒಳಪಡುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ Long Note book ನಲ್ಲಿ ವಿವರವನ್ನು ದಾಖಲಿಸುವುದು. (ವಿದ್ಯಾರ್ಥಿವಾರು,ವಿಷಯವಾರು)
2) ಅಭ್ಯಾಸ ಪುಸ್ತಕಗಳನ್ನು ಪರಿಶೀಲಿಸಿ, ತಪ್ಪುಗಳನ್ನು ತಿದ್ದಿ, ಹಿಮ್ಮಾಹಿತಿ ನೀಡಿ, ಸಹಿಯೊಂದಿಗೆ ಧೃಢೀಕರಿಸುವುದು.
3) ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಕಾಲ ಕಾಲಕ್ಕೆ ಗಮನಿಸಿ ಪ್ರಗತಿಯನ್ನು ದಾಖಲಿಸುವುದು.

## ಕೆ.ಎಸ್.ಕ್ಯು.ಎ.ಎ.ಸಿ. (KSQAAC) ನಡೆದು ಬಂದ ದಾರಿ

ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಪ್ರಾಥಮಿಕ ಹಾಗೂ ಪ್ರೌಢ ಹಂತಕ್ಕೆ ಸಂಬಂಧಿಸಿದಂತೆ – ಅರ್ಹ ವಯಸ್ಸಿನ ಅಂದರೆ 14 ವರ್ಷದೊಳಗಿನ ಎಲ್ಲಾ ಮಕ್ಕಳನ್ನು ಶೈಕ್ಷಣಿಕ ವ್ಯವಸ್ಥೆಗೆ ಸೇರ್ಪಡೆ ಮಾಡುವುದು.

- ಸೇರ್ಪಡೆಯಾದ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡಲು ಸರ್ಕಾರವು ಬದ್ಧತೆಯಿಂದ ಇರುವುದು.

ಈ ಎರಡು ಮುಖ್ಯ ಆಯಾಮಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಗುರುತಿಸಬಹುದಾಗಿದೆ.

ಕರ್ನಾಟಕ ರಾಜ್ಯವು ಎಜು–ವಿಷನ್ ದಾಖಲೆಯನ್ನು 2003 ರಲ್ಲಿ ಬಿಡುಗಡೆ ಮಾಡುವಾಗ ರಾಜ್ಯಮಟ್ಟದಲ್ಲಿ ಶೈಕ್ಷಣಿಕ ಗುಣಮಟ್ಟದ ಮೌಲ್ಯಾಂಕನ ಸಂಸ್ಥೆಯೊಂದನ್ನು ಪ್ರಾರಂಭಿಸಬೇಕು ಎಂಬ ಪ್ರಸ್ತಾವನೆಯನ್ನು ಮಾಡಿತು.ಇದಕ್ಕೆ ಸಂಬಂಧಿಸಿದಂತೆ ವಿಶ್ವಬ್ಯಾಂಕ್ ನ ವತಿಯಿಂದ ಶ್ರೀಮತಿ ಸಾಲಿಬಾ ಅವರ ನೇತ್ರತ್ವದಲ್ಲಿ ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಾಂಕನ (ಕೆ.ಎಸ್.ಕ್ಯೂ.ಎ.ಓ) ಸಂಸ್ಥೆಯ ರೂಪುರೇಷೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರಂತೆ 2005 ರ ಆಯವ್ಯಯದಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸುವ ಹಾಗೂ 2005–06 ರಲ್ಲಿ ಕಾರ್ಯ ಪ್ರಾರಂಭಿಸುವ ನಿರ್ಧಾರಗಳನ್ನು ಸರ್ಕಾರ ಕೈಗೊಂಡಿತು.**2005–06ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡಿ.160 ಯೋಯೋಕ 2005 ಬೆಂಗಳೂರು, ದಿನಾಂಕ:01–04–2005** ರಂತೆ ಸರ್ಕಾರವು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆಯನ್ನು (KSQAO) ಸ್ಥಾಪಿಸಿತು. ಈ ಸಂಸ್ಥೆ 2005–06ನೇ ಸಾಲಿನಿಂದ 2008–09 ನೇ ಸಾಲಿನವರೆಗೆ ಪ್ರತಿ ವರ್ಷವೂ ವಿವಿಧ ತರಗತಿಗಳ ಎಲ್ಲಾ ವಿದ್ಯಾರ್ಥಿಗಳಿಗೆ ಲಿಖಿತ ಹಾಗೂ ಮೌಖಿಕ ಮೌಲ್ಯಾಂಕನ ಮಾಡುವುದರ ಮೂಲಕ ಕಲಿಕಾ ಗುಣಮಟ್ಟವನ್ನು ನಿರ್ಧರಿಸುತ್ತಿತ್ತು. ಸಂಸ್ಥೆಯು ತರಗತಿ ಶಿಕ್ಷಕರು ಹಾಗೂ ವಿಷಯ ಪರಿಣಿತರ ಸಹಾಯದಿಂದ ಪ್ರಶ್ನೆಪತ್ರಿಕೆ, ಉತ್ತರ ಕೀ, ಕ್ಯಾಸೆಟ್, ಓ.ಎಂ.ಆರ್. ಮೊದಲಾದ ಪರೀಕ್ಷಾ ಸಾಮಗ್ರಿಗಳನ್ನು ಸಿದ್ಧಪಡಿಸಿ ಮೌಲ್ಯಾಂಕನ ಕೈಗೊಳ್ಳುತ್ತಿತ್ತು.ಶಿಕ್ಷಕರನ್ನು ಮೌಲ್ಯಾಂಕನಕಾರರಾಗಿ ಕ್ಲಸ್ಟರ್ ಬದಲಾಯಿಸಿ ನೇಮಿಸಲಾಗುತಿತ್ತು. ಓ.ಎಂ.ಆರ್. ತುಂಬುವಿಕೆ ಹಾಗೂ ವಿದ್ಯಾರ್ಥಿಗಳ ಉತ್ತರಪತ್ರಿಕೆಯ ಮೌಲ್ಯಮಾಪನ ಕ್ಷೇತ್ರಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಬ್ಲಾಕ್ ಹಂತದಲ್ಲಿ ನಡೆಯುತ್ತಿತ್ತು. ಭರ್ತಿ ಮಾಡಿದ ಓ.ಎಂ.ಆರ್.ಗಳನ್ನು ಡಯಟ್ ಮೂಲಕ ಕೇಂದ್ರ ಕಛೇರಿ ತಲುಪಿದ ನಂತರ ಸ್ಕ್ಯಾನಿಂಗ್, ಡಾಟಾ ಕ್ಲೀನಿಂಗ್ ಹಾಗೂ ರಿಪೋರ್ಟ್ ಜನರೇಷನ್ ಕಾರ್ಯ, ಕೇಂದ್ರ ಕಛೇರಿಯಲ್ಲಿ ಟೆಂಡರ್ ಮೂಲಕ ಆಯ್ಕೆಗೊಂಡ ಕಂಪೆನಿಗಳ ಮೂಲಕ ನಡೆಯುತ್ತಿತ್ತು. ಕೇಂದ್ರಕಛೇರಿಯಲ್ಲಿ ಟೆಂಪ್ಲೇಟ್‌ಗಳ ಮೂಲಕ ಅಂಕಿ ಅಂಶ ಸಂಗ್ರಹಿಸಲಾಗುತ್ತಿದ್ದು, ಶಾಲೆ, ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಹಂತಗಳ ವಿಶ್ಲೇಷಣಾತ್ಮಕ ವರದಿಯನ್ನು ರಚಿಸಿ ಎಲ್ಲಾ ಹಂತಕ್ಕೂ ನೀಡಲಾಗುತ್ತದೆ. ಕೆ.ಎಸ್.ಕ್ಯು.ಎ.ಓ.ನ ಈ ಕಾರ್ಯದಿಂದ ಶಿಕ್ಷಣ ವ್ಯವಸ್ಥೆಯಲ್ಲಿ, ಕಲಿಕಾ ಪ್ರಕ್ರಿಯೆಯಲ್ಲಿ, ಪಠ್ಯವಸ್ತುವಿನಲ್ಲಿ ಇರುವ ಸಬಲತೆ (ಒಳ್ಳೆಯ ಅಂಶಗಳು) ಹಾಗೂ ದುರ್ಬಲತೆಗಳ ಬಗ್ಗೆ ಅರಿವುಂಟಾಯಿತು. ಅಲ್ಲದೇ ಪರಿಹಾರ ಬೋಧನೆ, SAP, CAP ನಂತಹ ಕಾರ್ಯಕ್ರಮಗಳು ಜಾರಿಯಲ್ಲಿ ಬಂದವು.

## ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು (ಕೆ.ಎಸ್.ಕ್ಯು.ಎ.ಎ.ಸಿ.) –ಮರುನಾಮಕರಣ:

ಕಲಿಕಾ ಸಾಧನೆಯೊಂದರಿಂದಲೇ ಶಾಲೆಯ ಸಮಗ್ರ ಸಾಧನೆಯನ್ನು ನಿರ್ಧರಿಸಲು ಸಾಧ್ಯವಿಲ್ಲ. ಅದೊಂದನ್ನೇ ಮಾನದಂಡವಾಗಿ ಒಪ್ಪಿಕೊಳ್ಳಲು ಆಗದು. ಕಲಿಕೆಯ ಸಾಧನೆಯು ಶಾಲಾ ಸನ್ನಿವೇಶದಲ್ಲಿನ ವಿವಿಧ ಅಂಶಗಳಿಂದ ಪ್ರಭಾವಿಸಲ್ಪಟ್ಟದ್ದು ಮತ್ತು ಬದಲಾವಣೆ ಹೊಂದುತ್ತಲೇ ಇರುತ್ತದೆ. ಶಾಲೆಯೊಂದು ಸಮುದಾಯ ಕೇಂದ್ರಿತ ಪ್ರಜಾಸತ್ತಾತ್ಮಕ ವ್ಯವಸ್ಥೆಯಾಗಿದ್ದು, ಕಲಿಕೆಯ ಸಾಧನೆಯಲ್ಲಿ ವಿವಿಧ ಭಾಗೀದಾರರ ಒಲವು ಮತ್ತು ಸಹಭಾಗಿತ್ವ ಅಗತ್ಯವಾಗಿದೆ. ಶಾಲೆಯೊಂದು ಸಂಸ್ಥೆಯಾಗಿರುವುದರಿಂದ ಅಲ್ಲಿನ ಆಡಳಿತಾತ್ಮಕ, ಶೈಕ್ಷಣಿಕ, ನಾಯಕತ್ವ ಹಾಗೂ ಸಮುದಾಯ ಆಧಾರಿತ ಆಯಾಮಗಳು ಪ್ರಗತಿಯ ಹೆಜ್ಜೆಯಲ್ಲಿ ಮುಖ್ಯವೆನಿಸಿಕೊಳ್ಳುತ್ತದೆ. ಸಂಪನ್ಮೂಲಗಳ ಕ್ರೋಢಿಕರಣ ಮತ್ತು ಅದರ ಸದ್ಬಳಕೆ ಕಲಿಕೆಯ ಸಾಧನೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿರುತ್ತದೆ. ಈ ದೃಷ್ಟಿಕೋನದಿಂದ ವಿಚಾರಿಸಿದಾಗ ಇಡೀ ಶಾಲೆಯನ್ನು ಒಂದು Integrated ಘಟಕ ಎಂದು ಪರಿಗಣಿಸಿ ಬೇರೆ ಬೇರೆ ಆಯಾಮಗಳಿಂದ ಶಾಲೆಯನ್ನು ಮೌಲ್ಯಾಂಕನಕ್ಕೊಳಪಡಿಸಿ ಶಾಲೆಯ ಗುಣಮಟ್ಟವನ್ನು ಅಳೆಯಬೇಕು ಎಂಬ ವಿಚಾರಧಾರೆಯ ಫಲಶೃತಿಯೇ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ

ಸಂಸ್ಥೆ(KSQAO) ಯು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತಾಗಿ **(ಕೆ.ಎಸ್.ಕ್ಯು.ಎ.ಎ.ಸಿ.)** ಪುನರ್ ರೂಪುಗೊಳ್ಳಲು ಕಾರಣವಾಯಿತು.ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು (KSQAAC), NAAC (National Assessment and Accreditation Council) ನ ಕಾರ್ಯಚಟುವಟಿಕೆಗಳ ಮಾದರಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ಅನುಗುಣವಾಗಿ ತನ್ನ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡಿದೆ.

### ಕೆ.ಎಸ್.ಕ್ಯು.ಎ.ಎ.ಸಿ.ಯ ದೂರದರ್ಶಿತ್ವ(ಕಾಣ್ಕೆ)(Vision)

**"**ಕರ್ನಾಟಕ ರಾಜ್ಯ ಶಾಲಾ ಶಿಕ್ಷಣದ ಸಮಗ್ರ ಗುಣಮಟ್ಟವನ್ನು ಕಾಯ್ದುಕೊಳ್ಳಲು ಭಾಗೀದಾರರನ್ನು ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತಾ, ನಿರ್ಧಾರಿತ ಅಂಶಗಳ ಬುನಾದಿಯ ಮೇಲೆ ಮೌಲ್ಯೀಕರಿಸಿ, ರಾಷ್ಟ್ರೀಯ ಪಠ್ಯಕ್ರಮದ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಗುಣಮಟ್ಟವನ್ನು ಪ್ರಮಾಣೀಕರಿಸುವುದು.**"**

"To make Karnataka State School Education a defining element of quality education involving all stakeholders actively and assessing, accreditating the quality of schools on the lines of National Curriculum Frame work."

### ಕೆ.ಎಸ್.ಕ್ಯು.ಎ.ಎ.ಸಿ. ಸಂಸ್ಥೆಯ ಧ್ಯೇಯ (Mission)

- ಗುಣಮಟ್ಟದ ಕಲಿಕೆಯ ಪ್ರಕ್ರಿಯೆಯಿಂದ ಶೈಕ್ಷಣಿಕ ವಾತಾವರಣ (ಪರಿಸರವನ್ನು) ಸೃಷ್ಟಿಸುವುದು.
- ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ ನೀಡುವುದು.
- ಶಿಕ್ಷಕರಲ್ಲಿ ವೃತ್ತಿ ಸಾಮರ್ಥ್ಯ ವೃದ್ಧಿಸಿ, ಉತ್ತಮ ಕಲಿಕಾ ಪರಿಸರ ನಿರ್ಮಾಣ ಮಾಡುವುದು.
- ಎಲ್ಲಾ ಭಾಗೀದಾರರಲ್ಲಿ ಶಾಲೆಯ ಗುಣಮಟ್ಟದ ಮೌಲ್ಯಮಾಪನ ಉತ್ತರದಾಯಿತ್ವ ಶ್ರೇಷ್ಟತೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವಂತೆ ಮಾಡುವುದು.

### ಕೆ.ಎಸ್.ಕ್ಯು.ಎ.ಎ.ಸಿ.ಯ ಉದ್ದೇಶಗಳು

- ಶಾಲೆ ಒಂದು ಘಟಕ ಎಂದು ಪರಿಗಣಿಸಿ ಬೇರೆ ಬೇರೆ ಆಯಾಮಗಳಲ್ಲಿ ರಾಜ್ಯಾದ್ಯಂತ ಇರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಮೌಲ್ಯಾಂಕನಕ್ಕೆ ಒಳಪಡಿಸಿ ಅಂಗೀಕರಿಸುವುದು.
- ಶಾಲೆ ಮತ್ತು ಶಾಲಾ ಪ್ರಕ್ರಿಯೆಯ ಗುಣಮಟ್ಟವನ್ನು ಹೆಚ್ಚಿಸುವಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಉತ್ತೇಜಿಸುವುದು.
- ಶಾಲಾ ಗುಣಮಟ್ಟ ಹೆಚ್ಚಿಸಲು ಯೋಜಿಸುವಾಗ ಹಾಗೂ ಕಾರ್ಯರೂಪಕ್ಕೆ ತರುವಲ್ಲಿ ಎಲ್ಲಾ ಭಾಗೀದಾರರ ಭಾಗವಹಿಸುವಿಕೆಯನ್ನು ದೃಢೀಕರಿಸುವುದು. (ಭಾಗವಹಿಸುವಂತೆ ಮಾಡುವುದು.)
- ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಮೌಲ್ಯಂಕನಕ್ಕೊಳಪಡಿಸುವುದು ಹಾಗೂ ಮುಂದಿನ ಪ್ರಗತಿಗಾಗಿ ಮಾರ್ಗದರ್ಶನ ನೀಡುವುದು.
- ಶಾಲೆಯಲ್ಲಿ ಲಭ್ಯವಿರುವ ಶೈಕ್ಷಣಿಕ ಹಾಗೂ ಎಲ್ಲಾ ಭೌತಿಕ ಸೌಲಭ್ಯಗಳ ಸಂಪೂರ್ಣ ಬಳಕೆಯ ಪ್ರಮಾಣವನ್ನು ಮೌಲೀಕರಿಸುವುದು.
- ಸ್ವ-ಮೌಲ್ಯಮಾಪನ ಹಾಗು ಸಮಗ್ರ ಮೌಲ್ಯಾಂಕನದ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ (ಸಂಗತಿಗಳಲ್ಲೂ) ಅಗತ್ಯ ಬದಲಾವಣೆ, ಸಂಶೋಧನೆ ಪುನರ್ ಸ್ಥಾಪನೆಯಾಗುವಂತೆ ಉತ್ತೇಜಿಸುವುದು ಹಾಗೂ ಬಲವರ್ಧಿಸುವುದು.

### ಬಾಹ್ಯ ಮೌಲ್ಯಾಂಕನಕಾರರಿಂದ ಸಮಗ್ರ ಮೌಲ್ಯಾಂಕನ

ಪ್ರತಿ ಶಾಲೆಯಲ್ಲೂ ಪ್ರೌಢಶಾಲೆಯ ಮುಖ್ಯಶಿಕ್ಷಕರ ನೇತೃತ್ವದಲ್ಲಿ ಮೂರು ಬಾಹ್ಯ ಮೌಲ್ಯಾಂಕನಕಾರರು 3 ದಿನ ಶಾಲೆಯ ಸಮಸ್ತ ಕಾರ್ಯಚಟುವಟಿಕೆಗಳನ್ನು ವೀಕ್ಷಿಸುವುದರೊಂದಿಗೆ, ಶಿಕ್ಷಕರ ಪಾಠ ವೀಕ್ಷಣೆಯನ್ನು ಮಾಡಿ ಸೂಚಕಗಳಿಗೆ ಅಂಕಗಳನ್ನು ನೀಡುವರು. ಅಲ್ಲದೆ ಆಯ್ದ ತರಗತಿಗಳ ವಿದ್ಯಾರ್ಥಿಗಳನ್ನು ಮೌಲ್ಯಾಂಕನಕ್ಕೊಳಪಡಿಸುವರು. ಶಿಕ್ಷಕರ, ವಿದ್ಯಾರ್ಥಿಗಳ, ಎಸ್.ಡಿ.ಎಮ್.ಸಿ ಅಧ್ಯಕ್ಷರ ಹಾಗೂ ಸದಸ್ಯರ, ಪಾಲಕರ ಪ್ರಶ್ನಾವಳಿಗಳನ್ನು ಭರ್ತಿಮಾಡಿಸಿಕೊಳ್ಳುವುದರ ಜೊತೆಯಲ್ಲಿ ಎಸ್.ಡಿ.ಎಮ್.ಸಿ ಅಧ್ಯಕ್ಷರ ಹಾಗೂ ಸದಸ್ಯರ, ಪಾಲಕರ ಸಭೆಯನ್ನು ಕರೆದು ಶಾಲೆಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುವರು. ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಿ ವಿವಿಧ ಕಲೆಗಳಲ್ಲಿ ವಿದ್ಯಾರ್ಥಿಗಳ ಗುಣಮಟ್ಟವನ್ನು ಅವಲೋಕಿಸುವರು.


### OMR ತಂತ್ರಜ್ಞಾನ


ಮೌಲ್ಯಾಂಕನಕ್ಕೆ ಓ.ಎಂ.ಆರ್. ತಂತ್ರಜ್ಞಾನವನ್ನು ಬಳಸಿಕೊಂಡಿದ್ದು, ಬಹುಆಯ್ಕೆ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಓ.ಎಂ.ಆರ್.ಗಳಲ್ಲಿ ಶೇಡ್ ಮಾಡಿದರೆ, ವಿವರಣಾತ್ಮಕ ಪ್ರಶ್ನೆಗಳಿಗೆ ಪ್ರಶ್ನೋತ್ತರ ಪತ್ರಿಕೆಯಲ್ಲಿ ಉತ್ತರಿಸುತ್ತಾರೆ. ವಿವರಣಾತ್ಮಕ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ನೀಡಿದ ಉತ್ತರಗಳನ್ನು ನಿರ್ದಾರಿತ ಅಂಶಗಳ ಆಧಾರದ ಮೇಲೆ ಮೌಲ್ಯಾಂಕನ ಮಾಡಿದ ಮೌಲ್ಯಾಂಕನಕಾರರು ಓ.ಎಂ.ಆರ್.ಗಳಲ್ಲಿ **C, W, N** ಎಂದು ಗುರುತಿಸುತ್ತಾರೆ. **(C=correct answer, W=wrong answer, N=Not attempted)**

**ಶಾಲೆಗಳ ಆಯ್ಕೆ**

1) ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿ ವಿಜೇತ ಶಿಕ್ಷಕರನ್ನು ಹೊಂದಿರುವ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು.
2) ಶಾಲೆಗೆ ದೇಣಿಗೆ ನೀಡಿರುವ ದಾನಿಗಳು, ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳು ಹಾಗೂ ಇನ್ನಿತರೆ ವಸ್ತುಗಳನ್ನು ದಾನವಾಗಿ ನೀಡಿರುವ ದಾನಿಗಳನ್ನು ಹೊರತುಪಡಿಸಿ, ಶೈಕ್ಷಣಿಕ ಅಭಿವೃದ್ಧಿಗಾಗಿ ಇಲಾಖೆಯ ಅನುಮತಿ ಪಡೆದು ಇಲ್ಲವೇ ಇಲಾಖೆಯ ನೆರವು ಪಡೆದು ನಿರಂತರವಾಗಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ N.G.O ನೆರವನ್ನು ಹೊಂದಿರುವ ಶಾಲೆಗಳು.
3) ಕಲಿಕೆಗೆ ಪೂರಕವಾಗಿರುವ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಶಾಲೆಗಳು, ICT Phase-2 ಅನುಷ್ಠಾನಗೊಂಡಿರುವ ಶಾಲೆಗಳು.
4) ಕಳೆದ ಮೂರು ವರ್ಷಗಳಲ್ಲಿ ಕನಿಷ್ಠ ಒಂದು ವರ್ಷವಾದರೂ SSLC ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಹೊಂದಿರುವ ಶಾಲೆಗಳು.
5) 2012–13 ರ ಪೈಲೆಟ್ ಅಧ್ಯಯನ 2013–14 ಹಾಗೂ 2014–15 ನೇ ಸಾಲುಗಳಲ್ಲಿ ಮೌಲ್ಯಾಂಕನಕ್ಕೆ ಒಳಪಟ್ಟಿರುವ ಶಾಲೆಗಳನ್ನು ಹೊರತುಪಡಿಸಿ ಉಳಿದ ಶಾಲೆಗಳನ್ನು ಆಯ್ಕೆ ಮಾಡಲಾಯಿತು.

**KSQAACಯ ಕಾರ್ಯಕ್ರಮದ ಅನುಷ್ಠಾನದಲ್ಲಿ ಭಾಗವಹಿಸಿರುವವರು**






## 1. ಭೌತಿಕ ಪರಿಸರ–20%

ಶಾಲೆಯು ಔಪಚಾರಿಕ ಶಿಕ್ಷಣಕ್ಕೆ ಕೇಂದ್ರವಾಗಿದೆ. ಕಾರಣ ವಿದ್ಯಾರ್ಥಿಗಳನ್ನು ಆಕರ್ಷಿಸುವ, ಮನಪರಿವರ್ತಿಸುವ, ಕಲಿಕೆಯನ್ನು ಹುಟ್ಟು ಹಾಕುವ, ಜ್ಞಾನ ಕಟ್ಟಿಕೊಳ್ಳಲು ಸಹಕರಿಸುವ ಪರಿಸರ ಶಾಲೆಯಲ್ಲಿರಬೇಕಾದದ್ದು ಅತ್ಯವಶ್ಯಕ. ಶಾಲೆಯು ವಿದ್ಯಾರ್ಥಿಗಳಿಗೆ ಸಂತೋಷದಾಯಕ ಕಲಿಕೆಯನ್ನು ಒದಗಿಸಬೇಕು ಹಾಗೂ ವಿದ್ಯಾರ್ಥಿಗಳ ಸಂಪೂರ್ಣ ಶ್ರೇಯೋಭಿವೃದ್ಧಿಗೆ ಸಹಕರಿಸಬೇಕು. ಶಾಲೆಯ ಭೌತಿಕ ಪರಿಸರವು ಪರಿಣಾಮಕಾರಿಯಾದ ಕಲಿಕೆಯಾಗುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದರ ಕೊಡುಗೆ ಅಪಾರ. ಶಾಲೆಯ ಆಂತರಿಕ ಹಾಗೂ ಬಾಹ್ಯ ಗುಣಮಟ್ಟವು ಶಾಲೆಯ ಭೌತಿಕ ಪರಿಸರವನ್ನು ಅವಲಂಬಿಸಿರುತ್ತದೆ. ಕಲಿಕಾ ಸ್ನೇಹಿ ಪರಿಸರ, ಬೋಧನಾ ಕಲಿಕಾ ಸಾಮಗ್ರಿಗಳು, ಅತ್ಯುತ್ತಮ ಪಾಠೋಪಕರಣ ಹಾಗೂ ಪೀಠೋಪಕರಣಗಳನ್ನು ಹೊಂದಿರುವಂತಹ ಸುಸಜ್ಜಿತ ತರಗತಿ ಕೋಣೆ, ಶಾಲೆಯ ಹೊರ ಆವರಣ, ಆಟದ ಮೈದಾನ, ಗ್ರಂಥಾಲಯ, ಪ್ರಯೋಗಾಲಯ ಮೊದಲಾದವುಗಳು ಗುಣಮಟ್ಟದ ಕಲಿಕೆಗೆ ಕಾರಣೀಭೂತವಾಗಿವೆ. ಕೆಲವು ಪ್ರತ್ಯಕ್ಷವಾಗಿ ಇನ್ನೂ ಕೆಲವು ಪರೋಕ್ಷವಾಗಿ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ. ಪಠ್ಯವಸ್ತು ಮಾತ್ರ ಕಲಿಕೆಗೆ ಉತ್ತಮ ಕೊಡುಗೆ ನೀಡುತ್ತದೆ ಎಂದು ಭಾವಿಸಿದರೆ ಅದು ತಪ್ಪು ಕಲ್ಪನೆಯಾಗಿದೆ. ವಿದ್ಯಾರ್ಥಿಗಳ ಕಲಿಕೆಯಲ್ಲಿ ಸ್ಥಿರತೆ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಭೌತಿಕ ಸೌಲಭ್ಯಗಳು ಒದಗಿಸುತ್ತವೆ. ಈ ಎಲ್ಲಾ ಕಾರಣದಿಂದ ಪರಿಷತ್ತು ತನ್ನ ಮೌಲ್ಯಾಂಕನದಲ್ಲಿ ಭೌತಿಕ ಪರಿಸರ ಹಾಗೂ ಸೌಲಭ್ಯಗಳು ಎಂಬ ಕ್ಷೇತ್ರವನ್ನು ಅಳವಡಿಸಿಕೊಂಡಿದೆ ಹಾಗೂ 20% weightages ನೀಡಿದೆ.

## 2. ಕಲಿಕಾ ಪರಿಸರ–60%

ಗುಣಾತ್ಮಕ ಕಲಿಕೆ ಪರಿಣಾಮಕಾರಿಯಾದ ತರಗತಿ ಪರಿಸರವನ್ನು ನಿರೀಕ್ಷಿಸುತ್ತದೆ. ವಿದ್ಯಾರ್ಥಿಗಳ ಕಲಿಕಾ ಸಾಧನೆಯು ಶಾಲೆಯ ಒಟ್ಟಾರೆ ಗುಣಮಟ್ಟದ ಮೇಲೆ ಪ್ರತಿಬಿಂಬಿಸುತ್ತದೆ. ಕಲಿಕಾ ಪರಿಸರವು ಈ ಕೆಳಗಿನ ಕಾರಣಗಳಿಂದಾಗಿ ಮಹತ್ವದ್ದು ಎಂದು ನಿರ್ಧರಿಸಲ್ಪಟ್ಟಿದೆ.

- ಒಳ್ಳೆಯ ಕಲಿಕಾ ಪರಿಸರವು ವಿದ್ಯಾರ್ಥಿಗಳ ಕಲಿಕೆಯಲ್ಲಿ ಮನಸ್ಸನ್ನು ಕೇಂದ್ರೀಕರಿಸುವ ಶಕ್ತಿಯನ್ನು ಮತ್ತು ವಿದ್ಯಾರ್ಥಿಗಳ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- ಕಲಿಕಾ ಪರಿಸರವು ವಿದ್ಯಾರ್ಥಿಯ ಶೈಕ್ಷಣಿಕ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು.
- ಕಲಿಕಾ ಪರಿಸರದಲ್ಲಿ ಕಲಿಕಾ ಪ್ರಕ್ರಿಯೆ ಹಾಗೂ ಮೌಲ್ಯಾಂಕನ ಪ್ರಕ್ರಿಯೆಯೂ ಸಹ ಮಹತ್ವದ್ದಾಗಿದೆ.
- ಕಲಿಕಾ ಪರಿಸರವು ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿರುತ್ತದೆ.

ಕಲಿಕಾ ಪರಿಸರವನ್ನು ಮಹತ್ವದ ಮೂರು ಘಟಕಗಳಾಗಿ ವರ್ಗೀಕರಿಸಲಾಗಿದ್ದು ಅವು ಈ ಕೆಳಗಿನಂತಿದೆ.
1) ಬೋಧನಾ ಪ್ರಕ್ರಿಯೆ, 2) ಕಲಿಕಾ ಪ್ರಕ್ರಿಯೆ, 3) ಮೌಲ್ಯಮಾಪನ ಪ್ರಕ್ರಿಯೆ.

### a) ಬೋಧನಾ ಪ್ರಕ್ರಿಯೆ–20%

ಬೋಧನಾ ಪ್ರಕ್ರಿಯೆಯು ತರಗತಿ ಕೋಣೆಯಲ್ಲಿ ವಿಷಯವನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸುವ ಶಿಕ್ಷಕರ ಸಾಮರ್ಥ್ಯದ ಮೇಲೆ ನಿಂತಿದೆ. ಇದು ಶಿಕ್ಷಕರ ಸಾಮಾನ್ಯ ಜ್ಞಾನ, ವಿಷಯ ಜ್ಞಾನ, ಸಂವಹನ ಕೌಶಲ್ಯ, ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಿಕೆ, ಅಣುಬೋಧನಾ ಕೌಶಲ, ಪ್ರಯೋಗ ಮಾಡುವ ತಂತ್ರ, ತರಗತಿಯಲ್ಲಿ ವಿದ್ಯಾರ್ಥಿಗಳ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳುವ ನೈಪುಣ್ಯತೆ ಈ ಮೊದಲಾದವುಗಳು ಬೋಧನೆಯಲ್ಲಿ ಅತಿ ಅವಶ್ಯಕ. ಆದ್ದರಿಂದ ಪರಿಷತ್ತು ನಡೆಸುವ ಮೌಲ್ಯಾಂಕನದಲ್ಲಿ ಬೋಧನಾ ಪ್ರಕ್ರಿಯೆಯನ್ನು ಎರಡನೇ ಕ್ಷೇತ್ರ ಕಲಿಕಾ ಪರಿಸರದಲ್ಲಿ ಮೊದಲನೇ ಸೂಚಕವಾಗಿ ಅಳವಡಿಸಿದ್ದು ಶೇಕಡಾ 20 weightage ನೀಡಲಾಗಿದೆ.

### b) ಕಲಿಕಾ ಪ್ರಕ್ರಿಯೆ–20%

ಪರಿಣಾಮಕಾರಿಯಾದ ಕಲಿಕಾ ಪ್ರಕ್ರಿಯೆಯು ತರಗತಿಯಲ್ಲಿ ವಿದ್ಯಾರ್ಥಿಗಳು ಬೋಧನಾ–ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೇಲೆ ಅವಲಂಬಿಸಿದೆ. ಎಲ್ಲಾ ವಿದ್ಯಾರ್ಥಿಗಳು ಚಟುವಟಿಕೆಯಿಂದ ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು ಅತಿಅವಶ್ಯಕ. ಪ್ರಯೋಗ ಮಾಡಲು ಅವಕಾಶ ನೀಡುವುದು, ಕಲಿಕೋಪಕರಣಗಳನ್ನು ಸ್ಪರ್ಶಿಸಲು ಅವಕಾಶ ನೀಡುವುದು, ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಹಾಗೂ ಅವುಗಳ ಬಗ್ಗೆ ಹೇಳಲು ಅವಕಾಶ ನೀಡುವುದು, ಕ್ಷೇತ್ರ ಅಧ್ಯಯನ, ಶೈಕ್ಷಣಿಕ ಯೋಜನೆ ತಯಾರಿಕೆ ಈ ಮೊದಲಾದವುಗಳಿಂದ ಪರಿಣಾಮಕಾರಿ ಕಲಿಕಾ ಪ್ರಕ್ರಿಯೆ ಉಂಟಾಗುತ್ತದೆ. ಒಳ್ಳೆಯ ಕಲಿಕಾ ಪರಿಸರ ಉಂಟುಮಾಡುವಲ್ಲಿ ಕಲಿಕಾ ಪ್ರಕ್ರಿಯೆ ಮಹತ್ವದ ಪಾತ್ರ ವಹಿಸುತ್ತದೆ. ಆದ್ದರಿಂದ ಮೌಲ್ಯಾಂಕನದಲ್ಲಿ ಶೇ.20 weightages ನೀಡುವ ಮೂಲಕ ಕಲಿಕಾ ಪರಿಸರದಲ್ಲಿ ಎರಡನೇ ಸೂಚಕವಾಗಿ ಅಳವಡಿಸಲಾಗಿದೆ.

### c) ಮೌಲ್ಯಮಾಪನ ಪ್ರಕ್ರಿಯೆ–20%

ವಿದ್ಯಾರ್ಥಿಗಳು ಪಠ್ಯ ಹಾಗೂ ಸಹ ಪಠ್ಯ ಚಟುವಟಿಕೆಗಳಲ್ಲಿ ಪಡೆದುಕೊಂಡ ಜ್ಞಾನದ ವಸ್ತುಸ್ಥಿತಿಯನ್ನು ಮೌಲ್ಯಮಾಪನ ಮಾಡುವುದರಿಂದ ಬೋಧನಾ ಪ್ರಕ್ರಿಯೆ ಮತ್ತು ಕಲಿಕಾ ಪ್ರಕ್ರಿಯೆಯ ಪರಿಣಾಮವನ್ನು ಅಳೆದಂತಾಗುತ್ತದೆ. ಮೌಲ್ಯಾಂಕನದ ವಸ್ತುವು ಮೌಲ್ಯಮಾಪನದ ಸಾಮಗ್ರಿಗಳು ಹಾಗೂ ತಂತ್ರಗಳನ್ನು ಅವಲಂಬಿಸಿರುತ್ತದೆ. ಮೌಖಿಕ ಹಾಗೂ ಲಿಖಿತ ಪರೀಕ್ಷೆಗಳು ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಯನ್ನು ಅಳೆಯಲು ಉತ್ತಮ ಸಾಧನವಾಗಿದೆ. ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನವು ವಿದ್ಯಾರ್ಥಿಗಳ ಕಲಿಕಾ ಸ್ಥಿತಿಯನ್ನು ಸೂಚಿಸುತ್ತವೆ. ಗುಣಾತ್ಮಕ ಶಿಕ್ಷಣ ಒದಗಿಸುವಲ್ಲಿ ಹಾಗೂ ಪರಿಣಾಮಕಾರಿ ಯಾದ ಗುಣಮಟ್ಟದ ಕಲಿಕೆ ನೀಡುವಲ್ಲಿ ಮೌಲ್ಯಮಾಪನ ಮಹತ್ವವಾದದ್ದು. ಆದ್ದರಿಂದ ಪರಿಷತ್ತು ನಡೆಸುವ ಮೌಲ್ಯಾಂಕನದಲ್ಲಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಸೇರಿಸಲಾಗಿದ್ದು ಶೇಕಡಾ 20 weightage ನೀಡಲಾಗಿದೆ.

### 3. ನಾಯಕತ್ವ– 10%

ಶಾಲೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ನಾಯಕತ್ವ ಮಹತ್ವದ ಪಾತ್ರ ವಹಿಸುತ್ತದೆ. ಒಳ್ಳೆಯ ನಾಯಕನು ಶಾಲೆಯ ಶ್ರೇಯೋಭಿವೃದ್ಧಿಗೆ ದಾರಿದೀಪವಾಗಿರುತ್ತಾನೆ. 3 ಆಯಾಮಗಳಿಂದ ಶಾಲಾ ನಾಯಕತ್ವವನ್ನು ನೋಡಬಹುದಾಗಿದೆ. 1) ಶೈಕ್ಷಣಿಕ ನಾಯಕತ್ವ 2) ಆಡಳಿತಾತ್ಮಕ ನಾಯಕತ್ವ 3) ಸಮುದಾಯದ ನಾಯಕತ್ವ. ನಾಯಕನು ಪ್ರಜಾಸತ್ತಾತ್ಮಕ ಗುಣವನ್ನು ಬೆಳೆಸಿಕೊಂಡಿದ್ದಲ್ಲಿ ಶಾಲೆಯು ಗುರಿಯನ್ನು ತಲುಪುವಂತೆ ಮಾಡುವನು. ಶಾಲೆಯ ಶ್ರೇಯೋಭಿವೃದ್ಧಿಗಾಗಿ ಶಾಲೆಯ ಮುಖ್ಯಶಿಕ್ಷಕರು ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ತನ್ನ ತಂಡದೊಂದಿಗೆ ಶಾಲೆಯ ದೂರದರ್ಶಿತ್ವ, ಧ್ಯೇಯ, ಉದ್ದೇಶಗಳನ್ನು ಈಡೇರಿಸಲು ಶ್ರಮಿಸುವಲ್ಲಿ ಮುಂಚೂಣಿಯಲ್ಲಿರಬೇಕಾಗುತ್ತದೆ. ನಾಯಕತ್ವದ ಗುಣಗಳು ಈ ಕೆಳಗಿನ ಕಾರಣಗಳಿಂದಾಗಿ ಮಹತ್ವವನ್ನು ಪಡೆದಿವೆ.

- ಶಾಲೆಯ ಮುಖ್ಯಶಿಕ್ಷಕರು ಶಾಲೆಯಲ್ಲಿ ನಡೆಯುವ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಿಗೆ ನಾಯಕರಾಗಿರುತ್ತಾರೆ.
- ಪ್ರತಿಯೊಬ್ಬ ಶಿಕ್ಷಕರ ಭಾಗವಹಿಸುವಿಕೆಯು ಪರಿಣಾಮಕಾರಿ ನಾಯಕತ್ವದ ಮಹತ್ವವಾಗಿದೆ.
- ಶಾಲೆಯ ಶ್ರೇಯೋಭಿವೃದ್ಧಿಯು ಉತ್ತಮ ನಾಯಕತ್ವದ ಪರಿಣಾಮವಾಗಿರುತ್ತದೆ.
- ಶಾಲೆಯ ವಿವಿಧ ಜವಾಬ್ದಾರಿಗಳನ್ನು ಹಂಚುವುದು ಸಹ ಉತ್ತಮ ನಾಯಕತ್ವದ ಲಕ್ಷಣಗಳಲ್ಲಿ ಮಹತ್ವದ್ದಾಗಿದೆ.
- ಸಮುದಾಯ ಹಾಗೂ ಭಾಗೀದಾರರು ಶಾಲೆಯ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು ಸಹ ಉತ್ತಮ ನಾಯಕತ್ವದ ಗುಣಗಳಲ್ಲಿ ಒಂದಾಗಿದೆ.
- ಶಿಕ್ಷಕರು, ಪಾಲಕರು, ಸಮುದಾಯ, ಇಲಾಖೆ, ಸ್ಥಳೀಯ ಸಂಸ್ಥೆಗಳು ಈ ಎಲ್ಲವುಗಳೊಂದಿಗೆ ಸೌಹಾರ್ದತೆಯಿಂದ ಇರುವುದು ಉತ್ತಮ ನಾಯಕತ್ವದ ಲಕ್ಷಣವಾಗಿದೆ. ಶಾಲೆಯ ಅಭಿವೃದ್ಧಿಯಲ್ಲಿ ನಾಯಕತ್ವಕ್ಕೆ ಮಹತ್ವ ಇರುವುದರಿಂದ 3ನೇ ಕ್ಷೇತ್ರವಾಗಿ ಸಮಗ್ರ ಮೌಲ್ಯಾಂಕನದಲ್ಲಿ ಬಳಸಿಕೊಳ್ಳಲಾಗಿದ್ದು 10% weightage ನೀಡಲಾಗಿದೆ.

### 4. ಸಮುದಾಯದ ಭಾಗವಹಿಸುವಿಕೆ–5%

ಶಾಲೆಯು ಸಮುದಾಯದ ಆಸ್ತಿಯಾಗಿದೆ. ಸಮುದಾಯದ ಬೆಳವಣಿಗೆಗೆ ಶಾಲೆಯು ಮುಖ್ಯ ಹಾಗೂ ಮಹತ್ವದ ಘಟಕವಾಗಿದೆ. ಶಾಲೆಯ ಶ್ರೇಯೋಭಿವೃದ್ಧಿಯಲ್ಲಿ ಸಮುದಾಯದ ಭಾಗವಹಿಸುವಿಕೆ ಅತಿ ಅವಶ್ಯಕ ಹಾಗೂ ಮಹತ್ವವಾದದ್ದು.ಸಮುದಾಯದ ಭಾಗವಹಿಸುವಿಕೆ ಈ ಕೆಳಗಿನ ಕಾರಣಗಳಿಂದ ಮಹತ್ವದ್ದೆಂದು ಊಹಿಸಲಾಗಿದೆ. ಶಾಲೆಯ ಬೆಳವಣಿಗೆಗೆ ಭಾಗೀದಾರರ ಸಹಾಯ ಅತ್ಯವಶ್ಯಕ.

- ಸ್ಥಳೀಯ ಸಂಸ್ಥೆಗಳ ಭಾಗವಹಿಸುವಿಕೆಯಿಂದ ಶಾಲೆಯ ಸರ್ವತೋಮುಖ ಅಭಿವೃದ್ಧಿ ಸಾಧ್ಯ.
- ಸಮುದಾಯದ ತೊಡಗಿಸಿಕೊಳ್ಳುವಿಕೆಯಿಂದ ಶಾಲೆಗೆ ಬೇಕಾದ ಸಂಪನ್ಮೂಲಗಳ ಸಂಗ್ರಹ ಹಾಗೂ ಸದ್ಬಳಕೆ ಸಾಧ್ಯ.
- ಶಾಲೆಯು ಸಮುದಾಯದ ಒಂದು ಭಾಗ ಹಾಗೂ ಶಾಲೆಯ ಅಭಿವೃದ್ಧಿ ಸಮುದಾಯ ಭಾಗವಹಿಸುವಿಕೆಯನ್ನು ಅವಲಂಬಿಸಿದೆ. ಈ ಎಲ್ಲಾ ಕಾರಣಗಳಿಂದ ಪರಿಷತ್ತು 4 ನೇ ಕ್ಷೇತ್ರವಾಗಿ ಸಮುದಾಯದ ಭಾಗವಹಿಸುವಿಕೆಯನ್ನು ಅಳವಡಿಸಿಕೊಂಡಿದೆ ಹಾಗೂ ಶೇ.5 weightage ನೀಡಿದೆ.

### 5. ನಾವೀನ್ಯಯುತ ಚಟುವಟಿಕೆ–5%

ಶಿಕ್ಷಣ ನಿಂತ ನೀರಲ್ಲ. ಚಲನಾತ್ಮಕವಾದದ್ದು. ಇದು ಕಾಲದಿಂದ ಕಾಲಕ್ಕೆ, ವಿಜ್ಞಾನ ಹಾಗೂ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಬೆಳವಣಿಗೆ ಆದಂತೆ ಬದಲಾಗುತ್ತದೆ. ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಉಪಯೋಗವನ್ನು ಮಾಡಿಕೊಳ್ಳುತ್ತಿದ್ದಂತೆ ತರಗತಿ ಕೋಣೆಯ ಚಟುವಟಿಕೆಗಳಲ್ಲಿ ಉನ್ನತೀಕರಣವಾಯಿತು. ಇದು ವಿದ್ಯಾರ್ಥಿಗಳಿಗೆ ನೇರ ಮತ್ತು ಯೋಗ್ಯ, ಉಪಯುಕ್ತವಾದ ಅನುಭವಗಳನ್ನು ನೀಡಿತು.ಶಾಲೆಗಳಲ್ಲಿ ನಾವೀನ್ಯಯುತ ಚಟುವಟಿಕೆ ಈ ಕೆಳಗಿನ ಕಾರಣಗಳಿಂದಾಗಿ ಮಹತ್ವದ್ದಾಗಿದೆ.

- ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಹೊಸ ಹೊಸ ತಂತ್ರಜ್ಞಾನ ಬಳಸುವ ಕೌಶಲ ಬೆಳೆಯುತ್ತದೆ.
- ತಂತ್ರಜ್ಞಾನದ ಬಳಕೆ ಕಲಿಕಾ ಪ್ರಕ್ರಿಯೆಯಲ್ಲಿ ನಿರ್ದಿಷ್ಟತೆಯನ್ನು ಒದಗಿಸುತ್ತದೆ.
- ತಂತ್ರಜ್ಞಾನದ ಬಳಕೆ ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿ ಮಾಡುತ್ತದೆ.

ಈ ಎಲ್ಲಾ ಕಾರಣಗಳಿಂದ ಶಾಲೆಯ ಶ್ರೇಯೋಭಿವೃದ್ಧಿಯಲ್ಲಿ ನಾವೀನ್ಯಯುತ ಚಟುವಟಿಕೆಗಳ ಅವಶ್ಯಕತೆ ಇದೆ. ಪರಿಷತ್ತು ತನ್ನ ಮೌಲ್ಯಾಂಕನದಲ್ಲಿ ನಾವೀನ್ಯಯುತ ಚಟುವಟಿಕೆ ಕ್ಷೇತ್ರವನ್ನು ಅಳವಡಿಸಿಕೊಂಡಿದ್ದು ಶೇ. 5 weightage ನೀಡಿದೆ.

## ವೈಯುಕ್ತಿಕ ಅಭಿವೃದ್ಧಿ

### ಧನಾತ್ಮಕ ಚಿಂತನೆ

ಒಬ್ಬ ನಿರುದ್ಯೋಗಿ ಯುವಕ ವ್ಯಾಪಾರ ಮಾಡಬೇಕೆಂದು ಅಂಗಡಿಯೊಂದನ್ನು ತೆರೆಯುತ್ತಾನೆ. ತಾನು ಕೂಡಿಟ್ಟ ಹಣವನ್ನು ವ್ಯಾಪಾರದಲ್ಲಿ ಬಂಡವಾಳವಾಗಿ ತೊಡಗಿಸುತ್ತಾನೆ. ವ್ಯಾಪಾರ ಕೆಲ ವರ್ಷಗಳು ಚೆನ್ನಾಗಿ ನಡೆಯುತ್ತದೆ. ಮುಂದೊಂದು ದಿನ ವ್ಯಾಪಾರದಲ್ಲಿ ತೀವ್ರ ನಷ್ಟವಾಗುತ್ತದೆ.

ಮುಂದೆ ಏನಾಗಿರಬಹುದು ಎಂಬುದನ್ನು ಆಲೋಚಿಸಿ.

ಈ ವ್ಯಾಪಾರಿಯ ಸ್ಥಾನದಲ್ಲಿ ನೀವಿದ್ದರೆ ಏನು ಮಾಡುತ್ತಿದ್ದಿರಿ ಎಂಬುದನ್ನು ಆಲೋಚಿಸಿ ಬರೆಯಿರಿ.

**ಚಟುವಟಿಕೆ 3**

- ನಿಮ್ಮ ಜೀವನದಲ್ಲಿ ಪರಿಹರಿಸಲು ಸಾಧ್ಯವೇ ಇಲ್ಲ ಎಂದು ಕೈಬಿಟ್ಟ ಸಮಸ್ಯೆಗಳನ್ನು ಬರೆಯಿರಿ.
- ಹಾಗೆ ಕೈಬಿಡಲು ಕಾರಣಗಳೇನು?
- ನಿರಾಶಾದಾಯಕ ಸನ್ನಿವೇಶಗಳಿಂದ ನೀವು ಹೊರಬಂದ ಒಂದೆರಡು ಸನ್ನಿವೇಶಗಳನ್ನು ಬರೆಯಿರಿ.
- ಹೀಗೆ ಹೊರಬರಲು ಕಾರಣವಾದ ಅಂಶಗಳಾವುವು?

**ಒಳನೋಟ**

1)ಸಮಸ್ಯೆಗಳಲ್ಲಿಯೇ ಪರಿಹಾರೋಪಾಯಗಳು ಇರಬಹುದು.

2) ನಂಬಿಕೆಯುಕ್ತ ಸೌಹಾರ್ದಯುತ ವಾತಾವರಣದಲ್ಲಿ ಸಮಸ್ಯೆಗಳನ್ನು ಬೇಗ ಪರಿಹರಿಸಿಕೊಳ್ಳಬಹುದು.

3) ಹೊಸ ವಿಚಾರಗಳು ಮತ್ತು ವಿಭಿನ್ನ ದೃಷ್ಟಿಕೋನಗಳಿಂದ ನಡೆಯುವ ಚರ್ಚೆಗಳು ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಲು ಸಹಾಯಮಾಡುತ್ತವೆ.

ಅದಕ್ಕಾಗಿ ನಮ್ಮ ಭಾವನೆಗಳನ್ನೇನು ಅದುಮಿಡಬೇಕಾಗಿಲ್ಲ. ಆಲೋಚನೆಯನ್ನು ಸಹಜವಾಗಿ ಓಡಲು ಬಿಡಬೇಕು. ಈ ಆಲೋಚನೆಯ ಚೌಕಟ್ಟಿನಲ್ಲಿ ಭಾವನೆಗಳು ಮನದಾಳದಿಂದ ಮೇಲೇಳಲು ಪ್ರಯತ್ನಿಸುತ್ತಿರುತ್ತವೆ ಎನ್ನುವುದನ್ನು ನಾವು ಆಳವಾಗಿ ಗಮನಿಸಬೇಕು. ಒಂದು ರೀತಿಯಲ್ಲಿ 'ಧ್ಯಾನ'ವನ್ನು ಮಾಡುವಂತೆ ಇದನ್ನೇ ಮತ್ತೆ ಮತ್ತೆ ಅಭ್ಯಾಸ ಮಾಡಿದರೆ ಅನೇಕ ಸಮಸ್ಯೆಗಳಿಗೆ ಪರಿಹಾರಗಳು ನಮಗೇ ಹೊಳೆಯುತ್ತವೆ. ಆಗ ನಮ್ಮನ್ನು ನಾವೇ ಕೆಳಕ್ಕೆ ಎಳೆದುಕೊಳ್ಳುತ್ತಿದ್ದ ಇದುವರೆಗಿನ ಸ್ವ ದೋಷಾರೋಪ, ಬೇಸರ, ಅಹಂನಂತಹ ಅಂಶಗಳು ನಮ್ಮಿಂದ ದೂರವಾಗಿ ನಮ್ಮ ಮನಸ್ಸು ಪ್ರಫುಲ್ಲವಾಗುತ್ತದೆ. ಇಡೀ ದೇಹದಲ್ಲಿ ಚೈತನ್ಯ ಹೊಕ್ಕಂತಾಗಿ ಆಲೋಚನೆಗಳು ಹೊಸದಾಗಿ ಹುಟ್ಟಿಕೊಳ್ಳುತ್ತವೆ. ಇದನ್ನೇ ನಾವು ಸಕಾರಾತ್ಮಕ ಆಲೋಚನೆ ಅಥವಾ ಚಿಂತನೆ ಎಂದು ಕರೆಯುವುದು. ಇದೊಂದು ಮಾನಸಿಕ ಪ್ರಕ್ರಿಯೆ. ಕಣ್ಣಿಂದ ನೋಡಬೇಕೆಂದರೆ ಕಾಣುವುದಿಲ್ಲ. ಇದನ್ನು ಅನುಭವಿಸಿಯೇ ತಿಳಿಯಬೇಕು.

**ಅರ್ಥ**

ಸಕಾರಾತ್ಮಕ ಆಲೋಚನೆಯು ತನಗೆ ಎದುರಾಗುವ ಘಟನೆ, ಸಂದರ್ಭ, ಸನ್ನಿವೇಶಗಳ ನೆಲೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ ಅರ್ಥಗಳನ್ನು ಸೃಷ್ಟಿಸಿಕೊಳ್ಳುವಂತೆ ಮಾಡುತ್ತದೆ. ಒಟ್ಟಿನಲ್ಲಿ ವ್ಯಕ್ತಿಗೌರವ, ಸ್ವಾತಂತ್ರ್ಯ ಸಮಷ್ಟಿಪ್ರಜ್ಞೆ, ಪ್ರೀತಿ, ವಿಶ್ವಾಸ, ಅಭಿಮಾನ ಮೂಡಿಸುವ ಎಲ್ಲಾ ಆಲೋಚನೆಗಳನ್ನು ಸಕಾರಾತ್ಮಕ ಆಲೋಚನೆಗಳೆಂದು ಕರೆಯಬಹುದು. ಅಂದರೆ ನಿರಾಶಾದಾಯಕ ಸನ್ನಿವೇಶದಲ್ಲೂ ಸಮಸ್ಯೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡು ಸಮಾಜಕ್ಕೆ ಒಳ್ಳೆಯದಾಗುವಂತೆ ಚಿಂತಿಸುವುದಾಗಿದೆ.
ಕೆಲ ತಾತ್ವಿಕ ಮತ್ತು ನೈಜ ಅನುಭವಗಳಿಂದ ಸಕಾರಾತ್ಮಕ ಅಲೋಚನೆಗಳನ್ನು ಕೆಳಗಿನಂತೆ ಅರ್ಥೈಸಿಕೊಳ್ಳಬಹುದು.

- ಯಾವುದೇ ವಿಚಾರಗಳಿಗೆ ಪೂರ್ವಗ್ರಹಗಳಿಲ್ಲದೆ ಸ್ಪಂದಿಸುತ್ತದೆ.
- ಎಲ್ಲದರಲ್ಲೂ ಮೊದಲು ಒಳ್ಳೆಯ ಅಂಶಗಳನ್ನು ಕಾಣಲೆತ್ನಿಸುತ್ತದೆ
- ಇರುವುದನ್ನು ಇರುವಂತೆಯೇ ಸ್ವೀಕರಿಸುತ್ತದೆ
- ಪ್ರತಿಯೊಂದನ್ನು ಮುಕ್ತ ಮನಸ್ಸಿನಿಂದ ನೋಡಬಯಸುತ್ತದೆ.
- ದುಃಖ ಮತ್ತು ಸಂತೋಷವನ್ನು ಸಮಾಧಾನದಿಂದಲೇ ಸ್ವೀಕರಿಸುತ್ತದೆ.
- ವ್ಯಕ್ತಿಯಲ್ಲಿರುವ ಅಹಂ ಆತನ ಸಂತೋಷವನ್ನು ತಿಂದು ಹಾಕುತ್ತದೆ ಎಂಬ ಎಚ್ಚರ ಇದಕ್ಕಿರುತ್ತದೆ
- ಪ್ರತಿಯೊಂದನ್ನು ಬಹುಮುಖಿ ನೆಲೆಯಲ್ಲಿ ನೋಡಿ ವಿಶ್ಲೇಷಿಸುತ್ತದೆ.
- ಇದು ಸ್ವತಂತ್ರವಾಗಿ ವ್ಯಕ್ತಿಯ ಉತ್ಸಾಹ ಬಿಂಬಿಸುವ ಕ್ಷಣದಲ್ಲಿ ಮೈದಳೆಯುತ್ತದೆ.
- ಕ್ಷಮೆ ಮತ್ತು ಕರುಣೆ ಎಂಬ ತನ್ನೆರಡು ಕಣ್ಣುಗಳಿಂದಲೇ ತನ್ನ ಸುತ್ತಲನ್ನು ನೋಡುತ್ತಿರುತ್ತದೆ.
- ನ್ಯಾಯವಾದ ದಾರಿಯಲ್ಲಿ ಸಂತೋಷವಿದ್ದೇ ಇರುತ್ತದೆ ಎಂಬ ತೀರ್ಮಾನ ಇದಕ್ಕಿರುತ್ತದೆ.
- ಪ್ರತಿ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಲು ಹವಣಿಸುತ್ತದೆ
- ಘಟನೆಯ ಬಗ್ಗೆ ಸಮಸ್ಥಿತಿಯಿಂದ ಆಲೋಚಿಸಿ ಪರಿಹಾರಗಳನ್ನು ಕಂಡುಕೊಳ್ಳಲೆತ್ನಿಸುತ್ತದೆ.
- ಕಲ್ಪನೆ ಮತ್ತು ಸೃಜನಶೀಲತೆಯನ್ನು ಕಾಣಲೆತ್ನಿಸುತ್ತದೆ.
- ಪ್ರಧಾನವಾಗಿ ಸಮಷ್ಠಿ ಹಿತವನ್ನೇ ಕಾಣಲೆತ್ನಿಸುತ್ತದೆ.

**ಸಕಾರಾತ್ಮಕ ಚಿಂತನೆಯ ಅಗತ್ಯ**

ದೈನಂದಿನ ಬದುಕಿನಲ್ಲಿ ವ್ಯಕ್ತಿಗೆ ಸಾಕಷ್ಟು ಸಮಸ್ಯೆಗಳು ಎದುರಾಗುತ್ತವೆ. ಅದೇ ಸಮಸ್ಯೆಗಳನ್ನೇ ದೂರುತ್ತಾ ಸಾಗಿದರೆ, ಆ ಸಮಸ್ಯೆಗಳು ಎಂದೂ ಪರಿಹಾರವಾಗಲಾರವು. ಬದಲಾಗಿ ಅವುಗಳಿಗೆ ಪರಿಹಾರೋಪಾಯಗಳನ್ನು ಹುಡುಕುವ ಜಾಣ್ಮೆಯನ್ನು ಕಂಡುಕೊಂಡರೆ ಯಶ ಕಾಣಬಹುದು. ಏಕೆಂದರೆ ನಮ್ಮ ಮುಂದೆ ಸಾಲುಸಾಲು ಉದಾಹರಣೆಯಾಗಿ ನಿಲ್ಲುವ ಅನೇಕ ವ್ಯಕ್ತಿಗಳು ಯಶಸ್ವಿ ವ್ಯಕ್ತಿಗಳಾಗಿರುವುದನ್ನು ಗುರ್ತಿಸುತ್ತೇವೆ. ಯಶಸ್ವಿ ವ್ಯಕ್ತಿಗಳಿಗೆ ಯಾವುದೇ ಸಮಸ್ಯೆಗಳಿರಲಿಲ್ಲವೆಂದು ತಿಳಿಯುವುದಲ್ಲ. ಆ ಸಮಸ್ಯೆಯನ್ನು ದಿಟ್ಟತನದಿಂದ ಎದುರಿಸಿ, ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ, ಪರಿಹಾರ ಕಂಡುಕೊಂಡರು ಎಂಬುದು ವೇದ್ಯ ಸಂಗತಿ. ವ್ಯಕ್ತಿಯು ಸಂತೋಷ, ಆರೋಗ್ಯ ಮತ್ತು ಚಿತ್ತಶಾಂತಿಯಿಂದ ಇರಬೇಕೆಂದರೆ, ಇತರರ ಬಗ್ಗೆ ಸಕಾರಾತ್ಮವಾಗಿ ಆಲೋಚಿಸಬೇಕು. ಆಗ ಅವನಿಗೆ ಸಂತೋಷ ಸಿಕ್ಕುತ್ತದೆ. ಇತರರಿಗೆ ಸಹಾಯ ಮಾಡಿದಾಗ ಆರೋಗ್ಯ ವೃದ್ಧಿಸುವುದು. ಸಮಾಜಸೇವೆ ಮಾಡಿದಾಗ ಚಿತ್ತಕ್ಕೆ ಶಾಂತಿ ಲಭಿಸುವುದು.

**ಸಕಾರಾತ್ಮಕ ಚಿಂತನೆಯನ್ನು ಬೆಳೆಸಿಕೊಳ್ಳಲು ಇರುವ ಅವಕಾಶಗಳು:**

1. ಕೌಟುಂಬಿಕ ನೆಲೆ – ಕುಟುಂಬ, ಆರೋಗ್ಯ ಮತ್ತು ಸ್ವಚ್ಛತೆ
2. ಸಾಮುದಾಯಿಕ ನೆಲೆ – ಶಾಲೆ, ನೆರೆಹೊರೆ, ಸಹಚರರು, ಸಮೂಹ ಮಾಧ್ಯಮಗಳು
3. ಸಾಂಸ್ಕೃತಿಕ ನೆಲೆ ಮತ್ತು ಧಾರ್ಮಿಕ ನೆಲೆ – ಹಬ್ಬ, ಜಾತ್ರೆ, ಉತ್ಸವ, ಯೋಗ, ಪ್ರಾಣಾಯಾಮ, ಧ್ಯಾನ, ಸರ್ವಧರ್ಮ ಪ್ರಾರ್ಥನೆ
4. ಆರ್ಥಿಕ ನೆಲೆ – ವೃತ್ತಿ/ಉದ್ಯೋಗ
5. ಕಲಾತ್ಮಕ ನೆಲೆ – ಸಾಹಿತ್ಯ, ಶಿಲ್ಪಕಲೆ, ಚಿತ್ರಕಲೆ, ಸಂಗೀತ
6. ಪರಿಸರ – ನಿಸರ್ಗ ಪ್ರೇಮ, ಪಕ್ಷಿವೀಕ್ಷಣೆ
7. ಇತರೆ – ಪ್ರವಾಸ, ದಿನಚರಿ, ಕ್ಷಮೆ, ಹಾಸ್ಯಪ್ರಜ್ಞೆ, ವೈಜ್ಞಾನಿಕ ಮನೋಭಾವ, ವಿಶ್ವಪ್ರಜ್ಞೆ ................ ಇತ್ಯಾದಿ.

ಹೀಗೆ ಸಕಾರಾತ್ಮಕವಾದ ಆಲೋಚನೆಯನ್ನು ವ್ಯಷ್ಟಿ ಮತ್ತು ಸಮಷ್ಟಿ ನೆಲೆಯಲ್ಲಿ ವಿಕಾಸಗೊಳಿಸಿಕೊಳ್ಳಲು ಹತ್ತಾರು ಅವಕಾಶಗಳಿವೆ. ಇವೆಲ್ಲವು ಆಂತರಿಕವಾಗಿ ಸಹಸಂಬಂಧವನ್ನು ಹೊಂದಿವೆ. ಸಕಾರಾತ್ಮಕ ಚಿಂತಕನೊಬ್ಬ ಈ ಅವಕಾಶಗಳನ್ನು ತನ್ನ ಬದುಕಿನಲ್ಲಿ ಸಹಜವಾಗಿ ರೂಢಿಸಿಕೊಂಡಾಗ ಸರ್ವಸಮಾನತೆಯ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ.

ಶಾಲೆಯು ಸಮುದಾಯದ ಅವಿಭಾಜ್ಯ ಅಂಗ. ಶಾಲೆಯ ಪ್ರಗತಿಯು ಸಮುದಾಯದ ಸಕ್ರಿಯ ಭಾಗವಹಿಸುವಿಕೆಯನ್ನು ಅವಲಂಬಿಸಿದೆ. ಶಾಲೆಯಲ್ಲಿ ಚಟುವಟಿಕೆಗಳು ಸೂಸುತ್ರವಾಗಿ ಜರುಗಿ ಮಕ್ಕಳ ಕಲಿಕೆಯು ಫಲಪ್ರದವಾಗುವಲ್ಲಿ ಸಮುದಾಯದ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಇಲ್ಲಿನ ಯಾವುದೇ ಶೈಕ್ಷಣಿಕ ಯೋಜನೆಗಳು ಸಫಲತೆ ಹೊಂದಲು ಸಮುದಾಯದ ಸಹಕಾರ ಅತೀ ಮುಖ್ಯವಾಗಿರುತ್ತದೆ. ಶಾಲೆಗಳು ಅನೇಕ

ಸಮಸ್ಯೆಗಳನ್ನು ಎದುರಿಸುತ್ತಿವೆ. ಪ್ರಮುಖವಾಗಿ ದಾಖಲಾತಿ ಮತ್ತು ಹಾಜರಾತಿಯ ಕೊರತೆ, ಮೂಲಭೂತ ಸೌಕರ್ಯಗಳು ಕೊರತೆ, ಶಿಕ್ಷಕರ ಕೊರತೆ ಇತ್ಯಾದಿ ಸಮಸ್ಯೆಗಳೊಂದಿಗೆ ಕಾರ್ಯನಿರ್ವಹಿಸಬೇಕಾದದ್ದು ಶಿಕ್ಷಕರ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಇಂತಹ ಸಂದರ್ಭದಲ್ಲಿ ಸಮಸ್ಯೆಗಳನ್ನು ಮೆಟ್ಟಿನಿಂತು ಸಮುದಾಯ ಸಹಭಾಗಿತ್ವದಲ್ಲಿ ಈ ಕೊರತೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಅನುಕೂಲಕಾರರು ಧನಾತ್ಮಕವಾಗಿ ಚಿಂತಿಸಬೇಕಾಗಿರುವುದು ಅತ್ಯಂತ ಆಪೇಕ್ಷಣೀಯ.

## ಮಕ್ಕಳನ್ನು ಸಕಾರಾತ್ಮಕ ಚಿಂತನೆಗೆ ಒಡ್ಡುವಲ್ಲಿ ಶಾಲಾ ಸನ್ನಿವೇಶದಲ್ಲಿರುವ ಅವಕಾಶಗಳು

ಶಾಲಾ ಪರಿಸರದಲ್ಲಿ ಸಕಾರಾತ್ಮಕ ವಾತಾವರಣವನ್ನು ರೂಪಿಸುವಲ್ಲಿ ಸುಗಮಕಾರರ ಪಾತ್ರ ಅತ್ಯಂತ ಮಹತ್ತ್ವವಾದುದು. ಇವರ ಕಾರ್ಯಚಟುವಟಿಕೆಗಳು ಮಕ್ಕಳಲ್ಲಿ ಹುದುಗಿರುವ ಉತ್ತಮ ಆಲೋಚನೆಗಳನ್ನು ಹೊರತಂದು ಅವುಗಳನ್ನು ಪೋಷಿಸಿ ಅವರ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿಯಾಗುವಂತಿರಬೇಕು. ಇಂತಹ ಆಲೋಚನೆಗಳನ್ನು ಅನ್ವಯ ಮಾಡಿಕೊಳ್ಳಲು ಶಾಲಾ ಸನ್ನಿವೇಶವು ಅವಕಾಶ ಮಾಡಿಕೊಡಬೇಕು. ಮಗುವಿನ ಕಲಿಕೆಯ ಪ್ರತೀ ಹಂತದಲ್ಲಿಯು ಸಕಾರಾತ್ಮಕ ಧೋರಣೆಯನ್ನು ತಳೆಯುವಂತೆ ಸುಗಮಕಾರರು ಪ್ರೋತ್ಸಾಹಿಸಬೇಕು. ಈ ದಿಸೆಯಲ್ಲಿ ಮಕ್ಕಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡುತ್ತಾ, ಅವರ ಮನೋಧೋರಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಸೂಕ್ತ ಒತ್ತಾಸೆಯೊಂದಿಗೆ, ಕಲಿಕೆಗೆ ಪಕ್ವವಾದ ವಾತಾವರಣ ಸೃಜಿಸಬೇಕು. ಸುಗಮಕಾರರು ಸಮಗ್ರ ಶಾಲಾ ಪ್ರಕ್ರಿಯೆಯಲ್ಲಿನ ಅವಕಾಶಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು, ಮಕ್ಕಳು ಸ್ವತಃ ಆಲೋಚಿಸಿ ತೀರ್ಮಾನಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸಬೇಕು. ಇಂತಹ ಅವಕಾಶಗಳಲ್ಲಿ ತರಗತಿ ಪ್ರಕ್ರಿಯೆಯು ಪ್ರಮುಖವಾಗಿದೆ. ಮಕ್ಕಳ ಕಲಿಕೆಯೊಂದಿಗೆ ಅವರ ಚಿಂತನೆಯನ್ನು ಪೋಷಿಸುವ ಕ್ರಮ ಉಚಿತವಾದದ್ದು.

ಎನ್.ಸಿ.ಎಫ್.ನ ಆಶಯದಂತೆ ರಾಜ್ಯದಲ್ಲಿ ಪರಿಷ್ಕೃತ ಪಠ್ಯಕ್ರಮ/ಪಠ್ಯವಸ್ತುಗಳನ್ನು ಒಳಗೊಂಡ ಪಠ್ಯಪುಸ್ತಕಗಳು ಅನುಷ್ಠಾನಗೊಂಡಿವೆ. ಪರಿಷ್ಕರಣೆಯ ಸಂದರ್ಭದಲ್ಲಿ ಮೂಡಿಬಂದಿರುವ ಹೊಸ ಪರಿಕಲ್ಪನೆಗಳು, ಕಲಿಕಾ ಸನ್ನಿವೇಶದಲ್ಲಿ ಮಕ್ಕಳು ತೊಡಗಿಸಿಕೊಳ್ಳಬೇಕಾದ ಚಟುವಟಿಕೆಯ ಮೌಲ್ಯಮಾಪನದೊಂದಿಗೆ, ಮಗುವು ಆದರ್ಶಮುಖಿಯಾಗಿ ಅರಳಲು ಬೇಕಾದ ತರಗತಿ ನಿಲುವುಗಳನ್ನು ಈಗ ಕಂಡುಕೊಳ್ಳಲಾಗಿದೆ. ಇಲಾಖೆಯು ಪರಿಷ್ಕೃತ ಪಠ್ಯಕ್ಕೆ ಪೂರಕವಾದ ಸಾಮರ್ಥ್ಯವನ್ನು ಶಿಕ್ಷಕರು ಹೊಂದುವಂತೆ ಮಾಡಲು ನಿರಂತರ ತರಬೇತಿ ನೀಡುತ್ತಿರುವುದು ಕೂಡ ಮಹತ್ತ್ವದ ಅಂಶವಾಗಿದೆ. ಈ ಎಲ್ಲಾ ಕಾರ್ಯಚಟುವಟಿಕೆಗಳ ಬಹುಮುಖ್ಯ ಆಶಯ – ಮಕ್ಕಳು ಶಾಲೆಯಲ್ಲಿ ಸಕಾರಾತ್ಮಕ ಆಲೋಚನೆಯೊಂದಿಗೆ 'ಒಪ್ಪಿತ ವ್ಯಕ್ತಿತ್ವ'ವನ್ನು ಬೆಳೆಸಿಕೊಳ್ಳುವುದಾಗಿದೆ. ಪ್ರಸ್ತುತ ಪಠ್ಯಪುಸ್ತಕಗಳು ಮತ್ತು ತರಬೇತಿಗಳು ವರ್ತಮಾನದಲ್ಲಿ ಗುಣಾತ್ಮಕ ಕಲಿಕೆಯನ್ನು ಅನುಭವಾತ್ಮಕವಾಗಿ ರೂಪಿಸುವ ರಚನಾವಾದವನ್ನೇ ಆಧರಿಸಿವೆ. ಈ ನೆಲೆಯಲ್ಲಿ ಮಗುವೇ ಜ್ಞಾನವನ್ನು ಕಟ್ಟಿಕೊಳ್ಳುವಂತೆ ತರಗತಿ ನಿರ್ವಹಣೆ ಮಾಡಲಾಗುತ್ತಿದೆ. ಸಂರಚನಾವಾದವು ಪ್ರಸ್ತುತಪಡಿಸುವಂತೆ ಸಹಜ ಕಲಿಕೆ, ಅನುಭವ ಮತ್ತು ಆಲೋಚನೆಯನ್ನು ಹೆಚ್ಚಾಗಿ ಒಪ್ಪಿಕೊಂಡಿದೆ. ಏಕೆಂದರೆ ಮಕ್ಕಳ ಕಲಿಕೆಯು ಪಠ್ಯಪುಸ್ತಕ, ಶಿಕ್ಷಕರು ಹಾಗೂ ತರಗತಿ ಕೋಣೆಗಳನ್ನು ಮೀರಿ ಬೆಳೆಯಬೇಕಿದ್ದು, ಈ ಸ್ವರೂಪದಲ್ಲಿಯೇ ಅನುಕೂಲಕಾರರು ಮತ್ತು ಭಾಗೀದಾರರು ಕಲಿಕೆಯಲ್ಲಿ ಪಾಲ್ಗೊಳ್ಳಬೇಕಿದೆ. ಆದ್ದರಿಂದ ಇಲ್ಲಿನ ಮಾದರಿಗಳು, ಆಲೋಚನೆಗಳು ಮೌಲ್ಯಮಾಪನ ಪ್ರಕ್ರಿಯೆಗಳು ಸಕಾರಾತ್ಮಕ ಪರಿಧಿಯಲ್ಲಿಯೇ ರೂಪುಗೊಳ್ಳುವಂತೆ ಮಾರ್ಗದರ್ಶನವನ್ನು ನೀಡಲಾಗುತ್ತಿದೆ. ಈ ಪ್ರಕ್ರಿಯೆ ಶಾಲೆಯ ಎಲ್ಲಾ ಹಂತಗಳಲ್ಲಿ ಆವರಿಸಿದೆ.

ಸುಗಮಕಾರರು ಮಕ್ಕಳೊಂದಿಗೆ ಪ್ರಜ್ಞಾಪೂರ್ವಕ ಭಾಷೆಯನ್ನು ಬಳಸಿ ನಡೆದುಕೊಳ್ಳಬೇಕು. ಅವರು ಬಳಸುವ ಭಾಷೆಯು ಸ್ಪಷ್ಟವಾಗಿರಬೇಕು. ಶಾಲೆಯಲ್ಲಿ ಯಾವುದೇ ವ್ಯಕ್ತಿ, ವಿಷಯ ಮತ್ತು ಸಿದ್ಧಾಂತಗಳನ್ನು ಕುರಿತಂತೆ ದ್ವೇಷಿಸದೇ ವಸ್ತುಸ್ಥಿತಿಯನ್ನಾಧಾರಿಸಿದ ಸಂವಹನ ನಡೆಸಬೇಕು. ನಡೆನುಡಿಗಳಲ್ಲಿ ಸುಗಮಕಾರರು ಮಕ್ಕಳಿಗೆ ಯಾವಾಗಲೂ ಮಾದರಿಯಾಗಿರಬೇಕು. ಯಾವುದೇ ಸನ್ನಿವೇಶದಲ್ಲೂ ನಕಾರಾತ್ಮಕ ಪ್ರಭಾವ ಬೀರುವ ಪದಗಳನ್ನು ಬಳಸಿ ಮಾತನಾಡಬಾರದು. (ದಡ್ಡ, ಮೂರ್ಖ, ಅಯೋಗ್ಯ, ಕಪಿ, ಗೂಬೆ, ಕತ್ತೆ, .... ಇತ್ಯಾದಿ) ಸಮಾಜ, ಜಾತಿ, ಧರ್ಮ, ಲಿಂಗ, ಮತ್ತು ಸಾಮರ್ಥ್ಯಗಳನ್ನು ಆಧರಿಸಿ ಯಾವುದೇ ರೀತಿಯ ತಾರತಮ್ಯ ಮಾಡಬಾರದು. ಜವಾಬ್ದಾರಿ ಹಂಚಿಕೆಯಲ್ಲಿ ತಾರತಮ್ಯ ಮಾಡದೇ ಎಲ್ಲರಿಗೂ ಅವಕಾಶಗಳನ್ನು ನೀಡಬೇಕು. ಮಕ್ಕಳು ಮಾಡುವ ತಪ್ಪುಗಳನ್ನು ಎಲ್ಲರ ಎದುರಿಗೆ ಪದೇಪದೇ ಪುನರುಚ್ಚರಿಸಬಾರದು. ಹಿಂಜರಿಕೆ ಸ್ವಭಾವ, ಜಗಳಗಂಟಿತನ, ಅತಿ ಉತ್ಸಾಹ ಇತ್ಯಾದಿ ವೈಯಕ್ತಿಕ ಭಿನ್ನತೆಗಳಿಗೆ ಅನುಗುಣವಾಗಿ ಅವರಿಗೆ ಸಲಹೆ ಮತ್ತು ಚಿಕಿತ್ಸಕ ರೂಪದ ಮಾರ್ಗದರ್ಶನ ನೀಡಬೇಕು.

ಪೋಷಕರ ಎದುರಿಗೆ ಮಕ್ಕಳನ್ನು ಕುರಿತು ಮಾತನಾಡುವಾಗ ಪ್ರೋತ್ಸಹದಾಯಕವಾದ ವಾಸ್ತವಾಂಶಗಳನ್ನಾಧಾರಿಸಿದ ಮಾತುಗಳನ್ನು ಆಡಬೇಕು. ಮಕ್ಕಳೆದುರಿಗೆ ಪೋಷಕರನ್ನು ಕುರಿತು ಅವಹೇಳನಕಾರಿಯಾಗಿ ಮಾತನಾಡಬಾರದು. ಮಕ್ಕಳಲ್ಲಿರುವ ಒಳ್ಳೆಯ ಅಂಶಗಳನ್ನು ಗುರ್ತಿಸಿ ಅವರ ಸಣ್ಣಪುಟ್ಟ ಯಶಸ್ಸನ್ನು ಹಿತಮಿತವಾಗಿ ಪ್ರೋತ್ಸಾಹಿಸಬೇಕು. ಸೋಲುಗಳನ್ನು ಸಹಜವಾಗಿ ಸ್ವೀಕರಿಸುವಂತಹ ಸಾಂದರ್ಭಿಕ ಹಿಮ್ಮಾಹಿತಿಯನ್ನು ನೀಡಬೇಕು. ಒಟ್ಟಾರೆ ಶಾಲಾ ಸನ್ನಿವೇಶದಲ್ಲಿ ಮಕ್ಕಳು ಸಕಾರಾತ್ಮಕ ಮನೋಭಾವವನ್ನು ಹೊಂದಲು ಪೂರಕವಾದ ಚರ್ಚೆ, ಮಾತುಕತೆ ಇತ್ಯಾದಿ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸದಾ ಲವಲವಿಕೆಯಿಂದ ಕಲಿಯುತ್ತಿರುವಂತೆ ನೋಡಿಕೊಳ್ಳಬೇಕು. ಇದರಿಂದ ವಿದ್ಯಾರ್ಥಿಯು ಶಾಲೆ ಮತ್ತು ಸಮುದಾಯದ ರೀತಿ ನೀತಿಗಳ ಕುರಿತು ವ್ಯತ್ಯಾಸವನ್ನು ಗುರಿತಿಸುತ್ತಾನೆ. ಹಾಗೂ ಶಾಲೆಯ ಸನ್ನಿವೇಶ ಮಗುವಿಗೆ ಆಪ್ತವೆನ್ನಿಸುತ್ತದೆ.

## ಸಮಯ ನಿರ್ವಹಣೆ

ಸಮಯ ಎಂಬುದು ಒಂದು ಅಳತೆಗೋಲು. ಸಮಯವು ವಿಶ್ವದಲ್ಲಿ ನಿರಂತರವಾಗಿ ಆಗುತ್ತಿರುವ ಬದಲಾವಣೆಗಳು ಯಾವಾಗ ನಡೆದವು ಎಂಬುದನ್ನು ತೋರಿಸಿಕೊಡುವ ಮತ್ತು ಮಾನವನ ನಿರಂತರ ಜೀವನದಲ್ಲಿರುವ ವಿವಿಧ ಘಟನೆಗಳ ಸೂಚಕ. ಹೀಗಾಗಿ ಸಮಯ ಎಂದು ನಾವು ಹೇಳುವಾಗ ಅದು ಯಾವುದೋ ಒಂದು ಆಗಿಹೋದ, ಆಗುತ್ತಿರುವ ಅಥವಾ ಆಗಲಿರುವ ಘಟನೆಯನ್ನು ಕುರಿತು ಹೇಳುವುದಾಗಿದೆ.

ಶೈಕ್ಷಣಿಕ ದೃಷ್ಟಿಕೋನದಿಂದ ಅವಲೋಕಿಸಿದಾಗ ಜ್ಞಾನಾರ್ಜನೆ ಜೀವನದ ಅವಿಭಾಜ್ಯ ಅಂಗ. ಜ್ಞಾನಾರ್ಜನೆ ಮತ್ತು ಅದರ ಬಳಕೆಯೇ ಶಿಕ್ಷಣ. ಹುಟ್ಟಿನಿಂದ ಸಾವಿನವರೆಗೆ ನಿರಂತರವಾಗಿ ಪಡೆಯುವಂಥದ್ದು ಶಿಕ್ಷಣ. ಸಮಯ ಸದಾ ಚಲನಶೀಲವಾಗಿದ್ದು ಇದರ ಜೊತೆ ಸಾಗುವುದೇ ಜೀವನಕ್ರಮವಾಗಬೇಕು. ಸಮಯದ ಸದುಪಯೋಗಕ್ಕೆ ದೈಹಿಕ ಶ್ರಮ ಬೌದ್ಧಿಕ ಶಕ್ತಿ ಎರಡೂ ಆವಶ್ಯಕ. ಮಗುವಿನಲ್ಲಿ ಈ ಎರಡೂ ಅಂಶಗಳು ಸ್ವಾಭಾವಿಕವಾಗಿರುತ್ತವೆ. ಸಮಯ ವ್ಯರ್ಥವಾಗದಂತೆ ಶಾಲಾ ಚಟುವಟಿಕೆಗಳನ್ನು ಯೋಜಿಸಿಕೊಳ್ಳುವುದು ಆವಶ್ಯಕ.

ಸಮಯದ ನಿರ್ವಹಣೆ ಹಾಗೂ ಅದರ ಸದುಪಯೋಗ ಅತೀ ಮುಖ್ಯವಾದ ಅಂಶವಾಗಿದೆ. ಈ ಕೌಶಲದ ಅರಿವಿದ್ದವರು ಖಂಡಿತ ಒತ್ತಡಕ್ಕೆ ಒಳಗಾಗುವುದಿಲ್ಲ. ಹಾಗಾಗಿ ಸಮಯವನ್ನು ಅತ್ಯಗತ್ಯ ಸಂಪನ್ಮೂಲ ಎಂದು ಅರ್ಥಮಾಡಿಕೊಳ್ಳುವುದು ಹಾಗೂ ಅದರ ಬಳಕೆಯಲ್ಲಿ ಪ್ರಾವೀಣ್ಯ ಹೊಂದುವುದು ಅತೀ ಅಗತ್ಯ. ಸಮಯ ನಿರ್ವಹಣೆಯಿಂದ ವ್ಯಕ್ತಿಯ ಬದುಕಿನಲ್ಲಿ ಪರಿಣಾಮಕತೆ ಹೆಚ್ಚುತ್ತದೆ. ಯಾವ ಕೆಲಸಗಳನ್ನು ಎಷ್ಟು ಸಮಯದಲ್ಲಿ ಹೇಗೆ ಪೂರ್ಣಗೊಳಿಸಬೇಕೆಂಬ ಸ್ಪಷ್ಟ ಚಿತ್ರಣ ದೊರೆಯುತ್ತದೆ.

ಸಮಯ ನಿರ್ವಹಣೆ ಮಾಡಲು ನಾವೇನು ಮಾಡಬೇಕು?

– ನಾವು ಮಾಡುವ ಕೆಲಸಗಳಲ್ಲಿ ಸಾಧ್ಯವಾದಷ್ಟು ಉಪಯೋಗವಿಲ್ಲದ ವಿಚಾರಗಳಲ್ಲಿ ವ್ಯರ್ಥವಾಗಿ ಕಾಲಹರಣ ಮಾಡುವ ಕೆಲಸಗಳು ಕಡಿಮೆಮಾಡಬೇಕು.

– ಹೆಚ್ಚು ಹೊಸ ಜವಾಬ್ದಾರಿ ಹಾಗೂ ಕೆಲಸಗಳಿಗೆ ಕಡಿವಾಣ ಹಾಕುವುದು.
– ಕೆಲಸದ ನಿರ್ವಹಣೆಯ ಹಾದಿಯನ್ನು ಸರಿಯಾಗಿ ಗಮನಿಸುವುದು.
– ಮಾಡುವ ಕೆಲಸದಲ್ಲಿ ಏಕಾಗ್ರತೆ ಕಾಯ್ದುಕೊಳ್ಳುವುದು.
–ನಮ್ಮ ಕೆಲಸದಲ್ಲಿ ಇತರರ ಅನಗತ್ಯ ಹಸ್ತಕ್ಷೇಪವನ್ನು ತಡೆಯುವುದು.
– ಇರುವ ಎಲ್ಲಾ ಕೆಲಸಗಳಲ್ಲಿ ಯಾವುದು ಅತೀ ಮುಖ್ಯ ಎಂಬುದನ್ನು ಆದ್ಯತೀಕರಿಸಿಕೊಳ್ಳುವುದು.
– ಯಾವುದೇ ಕೆಲಸವನ್ನು ಮುಂದೂಡುವ ಪ್ರವೃತ್ತಿಯನ್ನು ತಡೆಯುವುದು.
– ಸಮಯ ನಿರ್ವಹಣೆಯಲ್ಲಿ ದಿನದ ಎಲ್ಲ ಸಮಯವನ್ನು ಕೆಲಸಗಳಿಗಾಗಿಯೇ ವಿನಿಯೋಗಿಸಬಾರದು. ವ್ಯಕ್ತಿ ತನ್ನ ವಿಶ್ರಾಂತಿಗಾಗಿ ಅಗತ್ಯ ಸಮಯವನ್ನು ವಿನಿಯೋಗಿಸಬೇಕು. ಕುಟುಂಬದ ಸದಸ್ಯರೊಂದಿಗೆ ಇರಲು ಅಗತ್ಯ ಸಮಯವನ್ನು ಮೀಸಲಿಡಬೇಕು.
– ಸಮಯವನ್ನು ವಿವೇಚನೆಯಿಂದ ಯಾರು ಸದುಪಯೋಗಪಡಿಸಿಕೊಳ್ಳುತ್ತಾರೋ ಅವರು ಸಾಧನೆಯ ಶಿಖರವನ್ನೇರುತ್ತಾರೆ. ಸಮಾಜಕ್ಕೆ ಅಮೂಲ್ಯವಾದ ಕೊಡುಗೆಗಳನ್ನು ನೀಡುತ್ತಾರೆ.
– ಸಮಯ ನಿರ್ವಹಣೆಯಲ್ಲಿ ನಮಗಿರುವ ಅಡೆತಡೆಗಳನ್ನು ಪಟ್ಟಿ ಮಾಡುವುದು.
– ಅಡೆತಡೆಗಳಿಂದ ಹೊರಬರುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು.
– ನಿರ್ದಿಷ್ಟ ಗುರಿ ಇಟ್ಟುಕೊಳ್ಳುವುದು.
– ಸಮಯದ ಅಸಮರ್ಪಕ ನಿರ್ವಹಣೆಯಿಂದಾಗುವ ನಷ್ಟವು ಕೇವಲ ವ್ಯಕ್ತಿಗಷ್ಟೇ ಅನ್ವಯಿಸದೇ ಸಮುದಾಯಕ್ಕೂ  ಅನ್ವಯಿಸುತ್ತದೆ.

## ಒತ್ತಡ ನಿರ್ವಹಣೆ

ಒತ್ತಡ ಎನ್ನುವ ಪದವು 1930 ರಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಲೇಖನದಲ್ಲಿ, ಹ್ಯಾನ್ಸ್ ಸೆಲೀ ಎಂಬಆಸ್ಟ್ರೀಯಾದ ಎಂಡೋಕ್ರೈನಾಲಜಿಸ್ಟ ಮಾನವನ ಸ್ಥಿತಿಗೆ ಸಂಬಂಧಿಸಿದಂತೆ ಮೊತ್ತಮೊದಲ ಬಾರಿಗೆ ಉಲ್ಲೇಕಿಸಿದ.ಆದ್ದರಿಂದ ಅವರನ್ನು 'ಫಾದರ್ ಆಫ್ ಸ್ಟ್ರೆಸ್" ಎಂದು ಕರೆದಿದ್ದಾರೆ.

ಈ ಪದವು ಭೌತಶಾಸ್ತ್ರಕ್ಕೆ ಸಂಬಂಧಿಸಿದ ಪದವಾಗಿದೆ. ಲೋಹಗಳ ಉತ್ಕೃಷ್ಟತೆಯ ಅಳತೆಗೋಲಾಗಿ ಒತ್ತಡ ಅಥವಾ ಸ್ಟ್ರೆಸ್ ಪದವನ್ನು ಬಳಸಲಾಗುತ್ತಿತ್ತು. ಹ್ಯಾನ್ ಸೆಲೀ ಆಸ್ಟ್ರೀಯದವನಾಗಿದ್ದು, ಇಂಗ್ಲೀಷ್ ಭಾಷೆ ಬರದೇ ಇದ್ದಿದ್ದರಿಂದಅವರು ಸ್ಟ್ರೆಸ್ ಪದವನ್ನು ವೈದ್ಯಕೀಯ ಕ್ಷೇತ್ರದಲ್ಲೂ ಬಳಸಿದರು.

ಒತ್ತಡ ಎನ್ನುವ ಪದಕ್ಕೆ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ಈ ರೀತಿ ನಿರ್ವಚಿಸಲಾಗಿದೆ. "ದೈಹಿಕ ಅಥವಾ ಮಾನಸಿಕಶಕ್ತಿಯನ್ನು ಮಿತಿ ಮೀರಿ ಒತ್ತಾಯಿಸುವ ಒಂದು ಸನ್ನಿವೇಶ" ಸರಳೀಕರಿಸಿ ಹೇಳಬಹುದಾದರೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಗ್ರಹಿಸಿದ ಪ್ರತಿಕ್ರಿಯೆ ಅಥವಾ ಅಪಾಯದ ಸೂಚನೆಗಳಿಗೆ ನೀಡುವ ಪ್ರತಿಕ್ರಿಯೆಯನ್ನು ಒತ್ತಡವೆನ್ನುವರು. ಅಂದರೆ ಕೆಲವು ಸನ್ನಿವೇಶಗಳಲ್ಲಿ ಉಂಟಾಗುವ ಕ್ರಿಯೆ ಮತ್ತು ಭಾವೋದ್ರೇಕಗಳು ವ್ಯಕ್ತಿಯ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಹಾಳುಮಾಡುವ ಪ್ರತಿಕ್ರಿಯೆಗಳಾಗಿರುತ್ತವೆ. ಒತ್ತಡವನ್ನು ಉಂಟುಮಾಡುವ ಪ್ರಚೋದಕಗಳಿಗೆ ಒತ್ತಡ ಕಾರಕ ಅಥವಾ ಒತ್ತಡಕಗಳೆನ್ನುವರು.

ಸಾಮಾನ್ಯ ಮಾನವರಾಗಿ ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲಿ, ಸರಿಯಾದ ಉದ್ದೇಶಕ್ಕಾಗಿ ನಾವುಕಾರ್ಯ ನಿರ್ವಹಿಸದೆ ಇದ್ದರೆ ನಿರಾತಂಕವಾದ ಬದುಕು ಸಾಧ್ಯವಾಗುವುದಿಲ್ಲ ಎಂಬುದು ಸರ್ವವೇದ್ಯ. ಬದುಕುಎಂಬುದು ಜೀವನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದರಿಂದ ಆಗುವಂತಹುದು. ಬದುಕಿನ ಅರ್ಥದ ಬಗ್ಗೆ ಸರಿಯಾದ ತಿಳಿವಳಿಕೆ ಹಾಗೂ ಮನೋಭಾವ ಇಲ್ಲದಿದ್ದರೆ ಹತಾಶೆ, ನಿರಾಸೆ ಆಗುವುದು ಸಹಜ. ಯಾವುದೇಸ್ಪಂದನೆಗೆ, ಪ್ರಚೋದನೆಗೆ ಪ್ರತಿಸ್ಪಂದನೆ ಮತ್ತು ಪ್ರತಿಕ್ರಿಯೆಗಳು ಮಾನವನ ಮತ್ತು ಎಲ್ಲ ಜೀವಿಗಳ ಸಹಜ ಕ್ರಿಯೆ. ಈ ದಿಸೆಯಲ್ಲಿ ಮಾನವನ ಸಹಜ ಸ್ವಭಾವ, ಜ್ಞಾನ, ವಿವೇಕ ಮತ್ತು ಭಾವನೆಗಳ ಪಾತ್ರ ಮತ್ತು ಅವುಗಳಿಂದ ಪ್ರಕಟವಾಗುವ ಪ್ರತಿಸ್ಪಂದನೆಗಳಲ್ಲಿನ ವೈರುಧ್ಯಗಳು ವೈಯುಕ್ತಿಕ ನೆಲೆಗಟ್ಟಿನಲ್ಲಿ ಭಿನ್ನವಾಗಿರುವುದು ಸಾಮಾನ್ಯ. ಈ ಭಿನ್ನತೆಗಳುಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತವೆಯಲ್ಲವೆ? ಬದುಕು ಕಟ್ಟಿಕೊಳ್ಳುವುದು ನಮ್ಮ ಕಾರ್ಯಕ್ಷೇತ್ರಗಳಲ್ಲಿ ನಾವು ನಿರ್ವಹಿಸುವ ಪಾತ್ರಗಳಿಂದಲ್ಲವೇ? ಎಲ್ಲ ಕ್ಷೇತ್ರದಲ್ಲೂ ವೃತ್ತಿಪರರಿಗೆ ಕಾಡುವ ಸಮಸ್ಯೆಗಳಿಂದ ಶಿಕ್ಷಕರೇನೂ ಹೊರತಾಗಿಲ್ಲ. ಹಾಗಾದರೆ ಇವರಿಗೆ ಕಾಡುವ ಸಮಸ್ಯೆಗಳು ಯಾವುವು?

- ವಸ್ತು, ವ್ಯಕ್ತಿ, ಸನ್ನಿವೇಶಗಳನ್ನು ಸರಿಯಾಗಿ ಗ್ರಹಿಸುವ, ದೃಷ್ಟಿಸುವ, ಅವಲೋಕಿಸುವ, ಅರ್ಥಮಾಡಿಕೊಳ್ಳುವಲ್ಲಿ ವಿಫಲತೆ.
- ಬದುಕಿನಲ್ಲಿ ಎದುರಾಗುವ ಸಂಕಷ್ಟಗಳನ್ನು ನಿಭಾಯಿಸುವ ಕೊರತೆ
- ನೈತಿಕ ಸ್ಥೈರ್ಯದ ಕೊರತೆ
- ಮಾನಸಿಕ ತುಮುಲಗಳನ್ನು ತಡೆದುಕೊಳ್ಳುವ ಮನೋಧೋರಣೆಯ ಕೊರತೆ
- ಭಾವುಕ ಏರಿಳಿತಗಳನ್ನು ನಿಗ್ರಹಿಸುವ ಸಾಮರ್ಥ್ಯದ ಕೊರತೆ
- ಸಂದೇಹ ಮತ್ತು ಅನರ್ಹತೆಯ ಒಳಭಾವ
- ಬದಲಾವಣೆಗಳಿಗೆ ಹೊಂದಿಕೊಳ್ಳುವ ಮನೋಭಾವದ ಕೊರತೆ
- ದೈಹಿಕ ಸಂಕಷ್ಟಗಳು, ನಾನೇ ಸರಿ ಎನ್ನುವ ಅಹಂನಿಂದ.

ಮೇಲಿನ ಸಮಸ್ಯೆಗಳನ್ನು ಎದುರಿಸಿ ಬದಲಾವಣೆಗಳಿಗೆ ಹೊಂದಿಕೊಳ್ಳಲು, ಬದುಕಲು, ಹೋರಾಡಲು, ವಿಜಯಿಗಳಾಗಲು, ಗುರಿಮುಟ್ಟಲು ಶಿಕ್ಷಕರಲ್ಲಿರುವ ಬುದ್ಧಿಮತ್ತೆ, ಶಕ್ತಿ ಸಾಮರ್ಥ್ಯಗಳೇ ಬಂಡವಾಳ. ಈ ಬಂಡವಾಳಗಳು ನಮ್ಮಲ್ಲಿವೆ ಎಂಬ ಅರಿವು ಶಿಕ್ಷಕರಾದ ನಮಗಿದೆಯೇ? ಈ ಅರಿವನ್ನುಂಟುಮಾಡಿ ನಮ್ಮ ಮನೋಬಲಗಳನ್ನುಹೆಚ್ಚಿಸುವ ಕಾರ್ಯ ಮಾಡಿದರೆ ಸಮಸ್ಯೆಗಳಿಂದ ಶಿಕ್ಷಕರು ಹೊರಬರಲು ಸಾಧ್ಯವೆ? ಅವರಲ್ಲಿ ಉತ್ತಮ ಮಟ್ಟದ ಆಲೋಚನೆ, ಚಿಂತನೆ, ಒಳ್ಳೆಯ ಹವ್ಯಾಸಗಳು, ಧನಾತ್ಮಕ ಗ್ರಹಿಸುವಿಕೆ, ಜ್ಞಾನ ವಿಜ್ಞಾನ, ಕೌಶಲಗಳ ವೃದ್ಧಿ, ಭಾವೋದ್ವೇಗಗಳ ನಿಗ್ರಹ, ಸಮಚಿತ್ತತೆ ಕಾಪಾಡಿಕೊಳ್ಳುವುದು, ಕಷ್ಟ–ನಷ್ಟ, ಸೋಲು–ಗೆಲವು,ಆಸೆ–ನಿರಾಸೆಗಳನ್ನು ಮೆಟ್ಟಿ ನಿಂತು ವಾಸ್ತವಿಕತೆಯ ನೆಲೆಗಟ್ಟಿನಲ್ಲಿ ಸಂಪನ್ಮೂಲಗಳ ಸದ್ಬಳಕೆ ಮಾಡಿಕೊಳ್ಳುವ ಮನೋಭಾವಗಳನ್ನು ಬೆಳೆಸಿಕೊಳ್ಳಲುಶಿಕ್ಷಕರ ಪ್ರಯತ್ನ ಹೇಗಿರಬೇಕು? ನಿಂತ ನೀರಾಗದೆ ಸದಾ ಚಲನಶೀಲವಾಗಿರುವ ಉತ್ಸಾಹ ಉಲ್ಲಾಸಗಳನ್ನುಹೆಚ್ಚಿಸಿಕೊಳ್ಳುವ ಮನಸ್ಸು, ನಿರಾಶಾವಾದವನ್ನು ಹಿಂದಿಕ್ಕಿ ಆಶಾವಾದ ಭರವಸೆಗಳೊಂದಿಗೆ ಮುನ್ನಡೆಯುವ ಹುಮ್ಮಸ್ಸು ಮನೋಬಲದ ಪ್ರತೀಕವೆಂದು ಶಿಕ್ಷಕರಿಗೆ ಮನವರಿಕೆಯಾದರೆ ಅವರು ಬದಲಾವಣೆಗಳಿಗೆ ಹೊಂದಿಕೊಳ್ಳುವಲ್ಲಿನ ಸಮಸ್ಯೆ ಮತ್ತು ಸಂಕಷ್ಟಗಳಿಂದ ಹೊರಬಂದು ತಮ್ಮ ಶಕ್ತಿ ಸಾಮರ್ಥ್ಯಗಳ ಸದ್ಬಳಕೆ ಮಾಡಿಕೊಳ್ಳುವುದರಲ್ಲಿ ಯಾವುದೇಸಂದೇಹವಿಲ್ಲ.

ಎಲ್ಲ ರೀತಿಯ ಒತ್ತಡಗಳು ಅಪಾಯಕಾರಿಗಳೇ ಅಗಿರುವುದಿಲ್ಲ. ಹ್ಯಾನ್ ಸೆಲೀ ಹೇಳುವಂತೆ ಕೆಲವೊಮ್ಮೆ ಒತ್ತಡಗಳು ನಮ್ಮಲ್ಲಿ ಸಾಧನೆ ಮಾಡಲು ಪ್ರೇರೇಪಿಸುತ್ತವೆ ಎಂಬುದು ಸತ್ಯವಲ್ಲವೆ? ಉದಾಹರಣೆಗೆ ಕೆಲವೊಮ್ಮೆ ಪರೀಕ್ಷಾ ವೇಳಾಪಟ್ಟಿ ಪ್ರಕಟವಾದ ಕೂಡಲೆ ವಿದ್ಯಾರ್ಥಿಗಳ ಶಕ್ತಿ ಜಾಗೃತಗೊಂಡುಕಾರ್ಯೋನ್ಮುಖರಾಗುವುದು. ತಮ್ಮ ಪೂರ್ಣ ಶಕ್ತಿಯನ್ನು ಜಾಗೃತಗೊಳಿಸಿ ಸಂಪೂರ್ಣ ಪ್ರಯತ್ನಶೀಲರಾಗಿ ಯಶಸ್ಸನ್ನುಕಂಡಿರುವುದು ಪರೀಕ್ಷೆ ಎಂಬ ಒತ್ತಡ. ಆದರೂ ಅದು ಒಳ್ಳೆಯದನ್ನೇ ಮಾಡುತ್ತದೆ. ಇವುಗಳನ್ನು 'ಯು ಸ್ಟ್ರೆಸ್' ಅಂದರೆ 'ಒಳ್ಳೆಯ ಒತ್ತಡಗಳು'ಎಂದು ಕರೆಯಲಾಗಿದೆ. ಇಂತಹ ಒತ್ತಡಗಳನ್ನು ವ್ಯಕ್ತಿಯ ಶಕ್ತಿಯನ್ನು ಜಾಗೃತಗೊಳಿಸಲು ಬಳಸಬಹುದಾಗಿದೆ ಎಂದು ಅಧ್ಯಯನಗಳಿಂದ ತೋರಿಸಲಾಗಿದೆ.ಕೆಲವೊಮ್ಮೆ ಬದುಕಿನಲ್ಲಿನ ಸೋಲುಗಳು, ಇನ್ನೊಬ್ಬರ ಸಾಧನೆ, ಬೆಳವಣಿಗೆ, ಅಲ್ಪ ಪ್ರಮಾಣದ ಆಸೆಗಳು,ಕಾರ್ಯ ನಿರ್ವಹಿಸಲು ಹಾಕಿಕೊಂಡಿರುವ ಸಮಯದ ಚೌಕಟ್ಟು ಒಳ್ಳೆಯ ಒತ್ತಡಗಳಾಗಿ, ಧನಾತ್ಮಕ ಮನೋಧೋರಣೆಗೆ ಪ್ರೇರಕವಾಗಿ, ಸಾಧನೆಗೆ ದಾರಿಮಾಡಿಕೊಟ್ಟಿರುವ ಅನೇಕ ಉದಾಹರಣೆಗಳು ನಮ್ಮ ಮುಂದಿವೆ.

ಒತ್ತಡವನ್ನು ನೀಡುವ ಅಂಶಗಳನ್ನು ಗುರುತಿಸುವುದು ಅತೀಮುಖ್ಯ. ಆಗ ಮಾತ್ರ ಒತ್ತಡದಿಂದ ಹೊರಬರುವಮಾರ್ಗಗಳನ್ನು ಹುಡುಕಲು ಸಾಧ್ಯವಾಗುತ್ತದೆ. ನಮ್ಮ ಬದುಕಿನ ಪ್ರತೀ ಹಂತದಲ್ಲೂ ಎದುರಾಗುವ ಒತ್ತಡಗಳನ್ನುನಿರ್ವಹಿಸಲು, ಒತ್ತಡ ಬರದಂತೆ ತಡೆಯಲು ಹಾಗೂ ಆ ಮೂಲಕ ನಮ್ಮ ವೃತ್ತಿಬದುಕಿನಲ್ಲಿ ಯಶಕಾಣಲು ಸಾಧ್ಯವಾಗುತ್ತದೆ.

- **ಸ್ವ ಅರಿವು:** ಪ್ರತಿಯೊಬ್ಬ ವ್ಯಕ್ತಿ ತನ್ನನ್ನು ತಾನು ಅರ್ಥ ಮಾಡಿಕೊಂಡರೆ, ಒತ್ತಡ ಉಂಟಾಗದಂತೆ ತಡೆಯುವುದುಸುಲಭ. ನಮ್ಮ ಸಾಮರ್ಥ್ಯಗಳು, ನಂಬಿಕೆಗಳು, ದೃಷ್ಟಿಕೋನ, ದೌರ್ಬಲ್ಯಗಳ ಅರಿವು ನಮಗೆ ಸ್ಪಷ್ಟವಾಗಿರಬೇಕು. ಜೊತೆಗೆ ನಮ್ಮ ಸಾಮರ್ಥ್ಯ ಎಷ್ಟಿದೆಯೋ ಅಷ್ಟು ಮಾತ್ರ ಕೆಲಸ ವಹಿಸಿಕೊಳ್ಳುವುದು.

- **ಸನ್ನಿವೇಶಗಳ ಗ್ರಹಿಕೆ:** ನಮ್ಮ ವೃತ್ತಿ ಕ್ಷೇತ್ರದಲ್ಲಿನ ವಾಸ್ತವದ ಅರಿವು ಇರಬೇಕು. ವಾಸ್ತವದ ನೆಲೆಗಟ್ಟಿನಲ್ಲಿ ರೂಪಿಸುವ ಕಾರ್ಯತಂತ್ರಗಳು ಪ್ರಕ್ರಿಯೆಯೆಡೆಗೆ ನಮ್ಮನ್ನು ಪ್ರೇರೇಪಿಸುವ ಜೊತೆಗೆ ಸನ್ನಿವೇಶಗಳನ್ನು ನಿಭಾಯಿಸುವ ಹಾಗೂಶಾಲೆಯ ಕೆಲಸಗಳನ್ನು ಆದ್ಯತೀಕರಿಸಿಕೊಳ್ಳವ ಚಾಕಚಕ್ಯತೆಯನ್ನು ಕಲಿಸುತ್ತದೆ. ಯಾವುದು ನಮ್ಮ ಇಚ್ಛೆ ಹಾಗೂನಿಯಂತ್ರಣದಲ್ಲಿರುತ್ತವೆಯೋ ಆ ಅಂಶಗಳ ಬಗೆಗೆ ಮಾತ್ರ ನಮ್ಮ ಗಮನಕೇಂದ್ರೀಕರಿಸುವುದು. ನಾವು ನಿಸ್ವಾರ್ಥವಾಗಿ ಕೆಲಸಮಾಡಿದಾಗ ಒತ್ತಡ ರಹಿತ ಬದುಕು ಮಾಡಲು ಸಾಧ್ಯವಾಗುತ್ತದೆ.

- **ಹೊಂದಿಕೊಳ್ಳುವಿಕೆ:** ಹೊಂದಾಣಿಕೆಯೇ ಬದುಕು. ಎಲ್ಲವೂ ಒಮ್ಮೆಗೇ ಬದಲಾಗಬೇಕೆಂಬ ನಿರೀಕ್ಷೆ ಸಾಧುವಲ್ಲ. ನಿರೀಕ್ಷಿತ ಹಾಗೂ ಅನಿರೀಕ್ಷಿತ ಸನ್ನಿವೇಶಗಳ ಬೇಡಿಕೆಗಳಿಂದ ಎದುರಾಗುವ ತೊಂದರೆಗಳಿಗೆ ಅಗತ್ಯ ಕಾರ್ಯತಂತ್ರಗಳನ್ನು ರೂಪಿಸಬೇಕಾದಾಗ ವ್ಯವಸ್ಥೆ ಹಾಗೂ ವ್ಯವಸ್ಥೆಯೊಳಗಿನ ಭಾಗೀದಾರರೆಲ್ಲರೊಡನೆ ಸಮನ್ವಯ ಅತ್ಯಗತ್ಯ. ಹಾಗಾಗಿ ಹೊಂದಾಣಿಕೆ ಮಾಡಿಕೊಂಡು ಇರುವುದರಲ್ಲಿ ಗರಿಷ್ಟ ಮಟ್ಟದ ಪ್ರಗತಿಗೆ ಪ್ರಯತ್ನಿಸುವ ಮನೋಭಾವ ಇರಬೇಕು.

- **ಸಮಯ ನಿರ್ವಹಣೆ:** ಸಮಯದ ನಿರ್ವಹಣೆ ಹಾಗೂ ಅದರ ಸದುಪಯೋಗ ಸಹ ಅತೀ ಮುಖ್ಯವಾದಅಂಶವಾಗಿದೆ. ಈ ಕೌಶಲದ ಅರಿವಿದ್ದವರು ಖಂಡಿತ ಒತ್ತಡಕ್ಕೆ ಒಳಗಾಗುವುದಿಲ್ಲ. ಹಾಗಾಗಿ ಸಮಯವನ್ನು ಅತ್ಯಗತ್ಯ ಸಂಪನ್ಮೂಲ ಎಂದು ಅರ್ಥಮಾಡಿಕೊಳ್ಳುವುದು ಹಾಗೂ ಅದರ ಬಳಕೆಯಲ್ಲಿ ಪ್ರಾವೀಣ್ಯಹೊಂದುವುದು ಅತೀ ಅಗತ್ಯ.

- **ಸಂಬಂಧಗಳ ನಿರ್ವಹಣೆ:** ಇತರರ ಭಾವನೆಗಳಿಗೆ ಸ್ಪಂದಿಸುವುದು ಹಾಗೂ ಇತರ ಭಾಗೀದಾರರು ಎದುರಿಸಿದಸಮಸ್ಯೆಗಳನ್ನು ಅವರ ಸ್ಥಾನದಲ್ಲಿ ನಿಂತು ಆಲೋಚಿಸುವುದು, ಜೊತೆಗೆ ಭಾವನಾತ್ಮಕವಾಗಿ ಅವರನ್ನು ಅರ್ಥಮಾಡಿಕೊಳ್ಳುವುದರಿಂದ ನಮ್ಮ ಸಂಬಂಧಗಳು

ವೃದ್ಧಿಸುತ್ತವೆ. ಇದರಿಂದ ನಮ್ಮ ಕಾರ್ಯಕ್ಷೇತ್ರದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಇರುವ ಮಾನಸಿಕ ಅಂತರ ಕಡಿಮೆಯಾಗುವುದರ ಜೊತೆಗೆ ಪರಸ್ಪರ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

- **ಸಂವೇಗಗಳ ಮೇಲಿನ ಹಿಡಿತ:** ಯಾವುದೇ ಕೆಲಸದ ಬಗೆಗಿನ ನಮ್ಮ ಪ್ರತಿಕ್ರಿಯೆಗಳು ತೀಕ್ಷ್ಣವಾಗಿರುವ ಬದಲು ರಚನಾತ್ಮಕವಾಗಿರಬೇಕು. ನೇರ ಮತ್ತು ಪರೋಕ್ಷ ಸಂವಹನದಲ್ಲಿ ಇತರರೊಂದಿಗೆ ವ್ಯಕ್ತಪಡಿಸುವ ನಮ್ಮ ಭಾವನೆಗಳು ಹಾಗೂ ವರ್ತನೆಗಳು ಸರಿಯಾಗಿ ವ್ಯಕ್ತವಾಗದಿದ್ದಾಗ ಒತ್ತಡದ ಅನುಭವವಾಗುತ್ತದೆ. ಜೊತೆಗೆ ನಮ್ಮ ಅನಿಸಿಕೆಗಳನ್ನುವ್ಯಕ್ತಪಡಿಸದೇ ಮನಸಿನಲ್ಲೇ ಇಟ್ಟುಕೊಳ್ಳುವುದು ಸಹ ಒತ್ತಡಕ್ಕೆ ಕಾರಣವಾಗುತ್ತದೆ.

- **ಧನಾತ್ಮಕ ಆಲೋಚನೆ:** ವ್ಯಕ್ತಿಯು ಯಾವಾಗಲೂ ಸಮಾಧಾನ ಸ್ಥಿತಿಯಲ್ಲಿ ಇರುವುದೇ ಇಲ್ಲ. ಆಗ ಇರುವ ಅವಕಾಶಗಳೂ ಸಹ ಗೋಚರವಾಗುವುದಿಲ್ಲ. ಇರುವುದರಲ್ಲಿ ತೃಪ್ತಿಹೊಂದಿ ಕನಿಷ್ಟ ಈ ಸೌಲಭ್ಯಗಳಾದರೂ ಇದೆಯಲ್ಲ, ಅದನ್ನೇ ಗರಿಷ್ಟಮಟ್ಟದಲ್ಲಿ ಬಳಸಿಕೊಂಡು ಯಶಸ್ಸು ಕಾಣುವ ಮನಸ್ಥಿತಿ ರೂಢಿಸಿಕೊಂಡಾಗ ಒತ್ತಡ ಕಡಿಮೆಯಾಗುತ್ತದೆ.ಯಾವ ಶಿಕ್ಷಕರು ತಮ್ಮ ಒತ್ತಡಗಳನ್ನು ಧನಾತ್ಮಕವಾಗಿ ಪರಿಭಾವಿಸಿಕೊಂಡು, ನಿರ್ವಹಣೆ ಮಾಡಿಕೊಂಡಾಗ ಅವರ ವೃತ್ತಿ ಬದುಕಿನಲ್ಲಿ ಹೇಗೋ ವೈಯಕ್ತಿಕ ಜೀವನದಲ್ಲೂ ಸುಖ ಸಂತೋಷವಾದ ಆರೋಗ್ಯಕರ ಜೀವನ ನಡೆಸಲು ಸಾಧ್ಯವಾಗುತ್ತದೆ. ನಮ್ಮ ಪ್ರತೀ ಕೆಲಸವನ್ನು ಪ್ರೀತಿಸುವುದು ಹಾಗೂ ಫಲಿತಾಂಶದ ಬಗೆಗೇ ಹೆಚ್ಚು ಗಮನಹರಿಸದೆ ಪ್ರಕ್ರಿಯೆಯ ಬಗೆಗೆ ನಮ್ಮ ಆಸಕ್ತಿಯನ್ನು ಕೇಂದ್ರೀಕರಿಸುವುದು

- **ಸಮಸ್ಯೆಗಳನ್ನು ಅವಕಾಶಗಳಾಗಿ ಪರಿವರ್ತಿಸುವುದು:** ಯಾವುದೇ ಸಮಸ್ಯೆ ಬಂದಾಗ ತಕ್ಷಣ ಪ್ರತಿಕ್ರಿಯಿಸುತ್ತೇವೆ. ಇದರಿಂದ ಸಹಜವಾಗಿ ಒತ್ತಡವುಂಟಾಗುತ್ತದೆ. ಆದರೆ ಸಮಸ್ಯೆಗಳನ್ನು ಅವಕಾಶಗಳಾಗಿ ನೋಡುವ ದೃಷ್ಟಿಕೋನ ಒತ್ತಡರಹಿತ ಬದುಕಿಗೆ ಮೊದಲ ಹೆಜ್ಜೆ ಎನ್ನಬಹುದು. ಅದುಹೇಗೆ ಸಾಧ್ಯ?

–ಆತ್ಮವಿಶ್ವಾಸ ಬೆಳೆಸಿಕೊಳ್ಳುವುರ ಮೂಲಕ
–ಮಾಡಬೇಕಾದ ಕೆಲಸಗಳ ಆದ್ಯತೆ ಪಟ್ಟಿ ಮಾಯಾರಿಸುವುದರಿಂದ
–ಮಾಡಲು ಹೊರಟಿರುವ ಕೆಲಸಕ್ಕೆ ಅಗತ್ಯವಿರುವ ಜ್ಞಾನ ಗಳಿಸುವ ಮೂಲಕ
–ಪ್ರತೀ ಕಾರ್ಯಕ್ಕೂ ಅಗತ್ಯವಿರುವ ಕೌಶಲಗಳನ್ನು ಕಲಿಯುವ ಮೂಲಕ
–ನನ್ನ ಸಾಮರ್ಥ್ಯದ ಎಲ್ಲಾ ಅಂಶಗಳನ್ನು ಒಗ್ಗೂಡಿಸುವ ಮೂಲಕ
–ಸಮಸ್ಯೆ ಆಚೆ ನಿಂತು ಯೋಚಿಸುವ ಮೂಲಕ

## ನಾಯಕತ್ವ ಹಾಗು ತಂಡ ನಿರ್ವಹಣೆ

### ತಂಡದಲ್ಲಿ ಕಾರ್ಯ ನಿರ್ವಹಣೆಯ ಅನುಕೂಲಗಳು:

ಜೊತೆಗೂಡಿ ಮತ್ತು ಒಬ್ಬರಿಂದರೊಬ್ಬರು ಕಲಿಯಲು ಅವಕಾಶಗಳನ್ನು ಕಲ್ಪಿಸುತ್ತದೆ. ಪರಿಣತಿ ಮತ್ತು ವಿಚಾರ/ಚಿಂತನೆಗಳ ಹಂಚಿಕೆ, ವೈಯಕ್ತಿಕ ಮತ್ತು ವೃತ್ತಿಪರ ಬೆಳವಣಿಗೆ, ಶಕ್ತಿ ಮತ್ತು ಆನಂದಮಯ ವಾತಾವರಣದ ಸೃಷ್ಠಿ, ಸಂಘಟಿತ ಗುರಿಗಳ ನಿರ್ಮಾಣ ಮತ್ತು ಉತ್ತಮ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಗುಣಮಟ್ಟದ ಉನ್ನತೀಕರಣ, ತೊಡಗಿಸಿಕೊಳ್ಳುವಿಕೆ ಮತ್ತು ಬದ್ಧತೆ. ವೈಚಾರಿಕ ನೆಲೆಯಲ್ಲಿ ತೀರ್ಮಾನಿಸುವುದು, ಸ್ಪಷ್ಟ ಮತ್ತು ಸವಾಲೆನಿಸುವ ಗುರಿಗಳನ್ನು ತಂಡವು ಒಪ್ಪಿಕೊಳ್ಳುತ್ತದೆ.
ಒಂದು ಗುಂಪಿನಲ್ಲಿ ವಿಭಿನ್ನ ದೃಷ್ಟಿಕೋನ ಜನರಿದ್ದು, ತಂಡದ ಶಕ್ತಿಯನ್ನು ವೃದ್ಧಿಸಲು ಸಮ್ಮತವಾಗುವ ರೀತಿಯಲ್ಲಿ ಕೊಡುಗೆಗಳನ್ನು ನೀಡುವ ಮೂಲಕ ಸಮಷ್ಠಿಯು ಸಾಧ್ಯವಾಗುತ್ತದೆ. ಅಂದರೆ ವೈಯಕ್ತಿಕವಾಗಿ ಸಾಧಿಸುವುದಕ್ಕಿಂತಲೂ ಹೆಚ್ಚಿನ ಸಾಧನೆ ತಂಡದಲಿ ಸಾಧ್ಯವಾಗುತ್ತದೆ.
ತಂಡವು ತನ್ನ ನಿರಂತರ ಪ್ರಕ್ರಿಯೆಗಳನ್ನು ಪರಾಮರ್ಶಿಸುವ ಮೂಲಕ ಯಶಸ್ಸು ಮತ್ತು ವೈಪಲ್ಯಗಳ ಮೂಲಕ, ಅನುಭವಗಳಿಂದ ಕಲಿಯುತ್ತದೆ. ತನ್ಮೂಲಕ ತಂಡವು ತನ್ನ ಕಾರ್ಯ ನಿರ್ವಹಣ ಸಾಮರ್ಥ್ಯವನ್ನು ನಿರಂತರವಾಗಿ ಉತ್ತಮಪಡಿಸಿಕೊಳ್ಳುತ್ತದೆ.

**ವೈಯಕ್ತಿಕವಾಗಿ ಅಸಾಮಾನ್ಯನಾಗಿರುವುದು ಮತ್ತು ಸಾಮರ್ಥ್ಯ ಹೊಂದಿರುವುದು ಉತ್ತಮವೇ. ಆದರೆ ತಂಡದಲ್ಲಿ ಕೆಲಸ ಮಾಡುವ ಮತ್ತು ತಂಡದ ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಳ್ಳುವ ಸ್ವಾಭಾವವಿಲ್ಲದಿದ್ದರೆ, ನಿಮ್ಮ ಸಾಫಲ್ಯ ಕಡಿಮೆಯಾಗುತ್ತದೆ. ತಂಡ ಕಾರ್ಯವು ಸಾಂಧರ್ಭಿಕ ನಾಯಕತ್ವದಲ್ಲಿ ಮುಖ್ಯವಾಗುತ್ತದೆ. ಯೋಗ್ಯತೆವುಳ್ಳವರನ್ನು ಸೇರಿಸಿ ಮುಂದುವರಿಯುವುದು ಉತ್ತಮ.**

## ತಂತ್ರಜ್ಞಾನ ಆಧಾರಿತ ಕಲಿಕೆ

### ತರಗತಿ ಕಲಿಕಾ ಪ್ರಕ್ರಿಯೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯ ಅವಕಾಶಗಳು:

ತರಗತಿ ಕಲಿಕಾ ಪ್ರಕ್ರಿಯೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯ ಅವಕಾಶಗಳುಅರ್ಥಮಾಡಿಕೊಳ್ಳವುದು ಶಿಕ್ಷಕನ ಜವಾಬ್ದಾರಿಯಾಗಿದೆ. ಏಕೆಂದರೆ ಮಕ್ಕಳ ಜ್ಞಾನವನ್ನು ಹೆಚ್ಚು ಮಾಡುವ ಕಾರ್ಯದಲ್ಲಿರುವ ಇದನ್ನು ಸಮಗ್ರವಾಗಿ ಅರ್ಥಮಾಡಿಕೊಂಡಾಗ ಮಾತ್ರ ಮಕ್ಕಳ ಕಲಿಕೆಯನ್ನು ಸರಿಯಾಗಿ ಅನುಕೂಲಿಸಬಲ್ಲವನಾಗುತ್ತಾನೆ. ಜೊತೆಗೆ ಶಿಕ್ಷಕರು ಶಾಲಾ ಹಂತದ ಔಪಚಾರಿಕ ಶಿಕ್ಷಣದ ಹಂತದಲ್ಲಿ ಏನೆಲ್ಲ ಅವಕಾಶಗಳಿವೆ ಮತ್ತು ಅವುಗಳನ್ನು ತರಗತಿ ಪ್ರಕ್ರಿಯೆಗಳಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಶಿಕ್ಷಕರು ಆವಿಷ್ಕರಿಸುತ್ತಾರೆ.

ಔಪಚಾರಿಕ ಶಿಕ್ಷಣವನ್ನು ಆಧಾರವಾಗಿಟ್ಟುಕೊಂಡು ಯೋಚಿಸಿದಾಗ, ಶಾಲಾ ಹಂತದಲ್ಲಿ ಮಕ್ಕಳಿಗೆ ಯಾವ ರೀತಿಯ ಅವಕಾಶಗಳನ್ನು ಶಿಕ್ಷಕ ಒದಗಿಸಬೇಕು? ಎಂಬುದು ಮನವರಿಕೆಯಾಗುತ್ತದೆ. ಅದರಲ್ಲೂ ಮಕ್ಕಳ ಕಲ್ಪನೆಗಳಿಗೆ, ಆಲೋಚನೆಗಳಿಗೆ, ವಿಶ್ಲೇಷಣೆಗೆ, ಸ್ವನಿರ್ಧಾರ ಕೈಗೊಳ್ಳುವ

ಪ್ರಕ್ರಿಯೆಗಳಿಗೆ, ಪ್ರಶ್ನೆಗಳಿಗೆ ಎಷ್ಟು ಅವಕಾಶಗಳನ್ನು ತಮ್ಮ ತರಗತಿಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಒದಗಿಸುತ್ತವೆ ಎಂಬುದನ್ನು ವಿಮರ್ಶಿಸಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಸಮ್ಮಿಳಿತಗೊಳಿಸುವಿಕೆಯನ್ನು ಮಗುವಿನ ಕಲಿಕೆಯ ಅತ್ಯಂತ ಮಹತ್ತರ ಭಾಗವಾಗಿ ನೋಡಬೇಕಾದ ಅನಿವಾರ್ಯತೆಯನ್ನು ಇಲ್ಲಿ ಶಿಕ್ಷಕರು ಅರ್ಥಮಾಡಿಕೊಳ್ಳಬಹುದಾಗಿದೆ.

## ಉದ್ದೇಶಗಳು

- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಅಗತ್ಯವನ್ನು ಸಮಗ್ರ ದೃಷ್ಟಿಯಿಂದ ಅರ್ಥೈಸಿಕೊಳ್ಳುವುದು.
- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯ ಅವಕಾಶಗಳು ಅರ್ಥಮಾಡಿಕೊಳ್ಳವುದು.
- ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯನ್ನು ಗ್ರಹಿಸುವುದು.

## ಶೈಕ್ಷಣಿಕ ತಂತ್ರಜ್ಞಾನದಿಂದ ಶಿಕ್ಷಕನಿಗೆ ಆಗುವ ಲಾಭಗಳು

ಶೈಕ್ಷಣಿಕ ತಂತ್ರಜ್ಞಾನದ ಸಹಾಯದಿಂದ ಶಿಕ್ಷಕನು ವಿಷಯ ಸಂಪನ್ಮೂಲನಾಗಲು ಸಾಧ್ಯ. ವಿಷಯವನ್ನು ಪರಿಣಾಮಕಾರಿಯಾಗಿ ಸಂಘಟಿಸಿ, ವ್ಯವಸ್ಥಿತ ರೀತಿಯಲ್ಲಿ ಕ್ರಮಬದ್ಧವಾಗಿ ಬೋಧಿಸಬಹುದು. ಶೈಕ್ಷಣಿಕ ತಂತ್ರಜ್ಞಾನದಿಂದ ಶಿಕ್ಷಕನಿಗೆ ಆಗುವ ಲಾಭಗಳನ್ನು ಕೆಳಗಿನಂತ ವಿವರಿಸಬಹುದಾಗಿದೆ.

1. ತಂತ್ರಜ್ಞಾನದ ಜ್ಞಾನವನ್ನು ಪಡೆದುಕೊಳ್ಳುವುದರಿಂದ ಬೋಧನೆಯ (ಕಲಿಕಾ ಪ್ರಕ್ರಿಯೆಯ)ಶ್ರಮ ಕಡಿಮೆಯಾಗುತ್ತದೆ.
2. ವಿಷಯ ಅತ್ಯಂತ ಸರಳ ರೀತಿಯಲ್ಲಿ ಪರಿಣಾಮಕಾರಿಯಾಗಿ ಸಂಘಟಿಸಬಹುದಾಗಿದೆ.
3. ತನ್ನ ಬೋಧನೆಯನ್ನು ಪರಿಣಾಮಕಾರಿಗೊಳಿಸಿ, ವಿದ್ಯಾರ್ಥಿಗಳಲ್ಲಿ ಕಲಿಕೆಯ ಮೇಲೆ ಆಸಕ್ತಿ ಉಂಟುಮಾಡಲು ಸಾಧ್ಯವಾಗುತ್ತದೆ.
4. ವಿದ್ಯಾರ್ಥಿಗಳನ್ನು ಬೋಧನಾ– ಕಲಿಕಾ ಪ್ರಕ್ರಿಯೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ತೊಡಗಿಕೊಳ್ಳಲು ನೆರವು ನೀಡುತ್ತದೆ.
5. ಉತ್ತಮವಾದ, ಪರಿಣಾಮಕಾರಿಯಾದ ಕಲಿಕೆಯ ಅನುಭವಗಳನ್ನು ಒದಗಿಸಬಹುದು.
6. ಶಿಕ್ಷಕನು ನಿರೀಕ್ಷಿತ ಕಲಿವಿನ ಫಲಗಳಿಗನುಗುಣವಾಗಿ ಬೋಧನಾ–ಕಲಿಕಾ ಚಟುವಟಿಕೆಗಳನ್ನು ರೂಪಿಸಲು ನೆರವು ನೀಡುತ್ತದೆ.
7. ಗುರಿ ಮತ್ತು ಉದ್ದೇಶಗಳನ್ನು ಪರಿಣಾಮಕಾರಿಯಾಗಿ ತಲುಪಲು ನೆರವು ನೀಡುತ್ತದೆ.
8. ಬೋಧನಾ ವಿಷಯವನ್ನು ಯಶಸ್ವಿಯಾಗಿ ವಿಶ್ಲೇಷಿಸಲು ಸಹಕಾರಿಯಾಗಿದೆ.
9. ತರಗತಿ ಸನ್ನಿವೇಶವನ್ನು ತನ್ನ ಅವಶ್ಯಕತೆಗೆ ತಕ್ಕಂತೆ ಶಿಕ್ಷಕನು ನಿರ್ಮಿಸಿಕೊಳ್ಳಬಹುದು.
10. ವಿದ್ಯುತ್‌ಚಾಲಿತ ಬೋಧನಾ ಸಾಮಗ್ರಿಗಳನ್ನು ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿಕೊಳ್ಳಲು ಮಾರ್ಗದರ್ಶನ ನೀಡುತ್ತದೆ.

## ಶೈಕ್ಷಣಿಕ ತಂತ್ರಜ್ಞಾನದ ಉಪಯೋಗಗಳು

ಶೈಕ್ಷಣಿಕ ತಂತ್ರಜ್ಞಾನವು ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿಪಡಿಸುತ್ತದೆ. ಇಂದಿನ ಶಿಕ್ಷಣ ಪದ್ಧತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುತ್ತದೆ. ಬೋಧನಾ–ಕಲಿಕಾ ಸ್ವರೂಪವನ್ನು ಬದಲಾಯಿಸಿ, ಶಿಕ್ಷಣ ಪ್ರಕ್ರಿಯೆಯನ್ನು ಆಕರ್ಷಣಿಯಗೊಳಿಸುತ್ತದೆ. ಹಾಗೂ ಶೈಕ್ಷಣಿಕ ತಂತ್ರಜ್ಞಾನದ ಉಪಯೋಗಗಳನ್ನು ಕೆಳಗಿನಂತೆ ವಿವರಿಸಬಹುದು.

1. ಶೈಕ್ಷಣಿಕ ತಂತ್ರಜ್ಞಾನವು ಶಿಕ್ಷಣದ ಗುರಿಗಳನ್ನು ಸಂಘಟಿಸಲು ನೆರವು ನೀಡುತ್ತದೆ.
2. ವಿದ್ಯಾರ್ಥಿಗಳ ಸಮಸ್ಯೆಗಳನ್ನು ವಿಶ್ಲೇಷಿಸಲು ಸಹಾಯಕವಾಗುತ್ತದೆ.
3. ಕಲಿಕೆಗೆ ಬೇಕಾದ ಪ್ರೇರಣಾ ತಂತ್ರಗಳನ್ನು ನಿರೂಪಿಸಲು ಮಾರ್ಗದರ್ಶನ ನೀಡುತ್ತದೆ.
4. ಶಿಕ್ಷಕರು ವಿಷಯವನ್ನು ಕ್ರಮಬದ್ಧ ರೀತಿಯಲ್ಲಿ ಸಂಘಟಿಸಲು ಪ್ರಮುಖ ಪಾತ್ರವಹಿಸುತ್ತದೆ.
5. ಶೈಕ್ಷಣಿಕ ತಂತ್ರಜ್ಞಾನದ ಜ್ಞಾನದಿಂದ ಶಿಕ್ಷಕನು ತನ್ನ ಬೋಧನೆಯ ಗುಣಮಟ್ಟವನ್ನು ಸುಧಾರಿಸಬಹುದು.
6. ಶೈಕ್ಷಣಿಕ ತಂತ್ರಜ್ಞಾನದ ನೆರವಿನಿಂದ ಪಠ್ಯಕ್ರಮ ವಿಕಾಸಗೊಳಿಸಬಹುದು.
7. ಬೋಧನೆಯಲ್ಲಿ ಯಾಂತ್ರಿಕತೆಯನ್ನು ಹೋಗಲಾಡಿಸಿ ನೈಜತೆಯನ್ನು ಉಳಿಸಿಕೊಂದು ಹೋಗಬಹುದು.
8. ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಕೆರಳಿಸಲು ಸಾಧ್ಯವಾಗುತ್ತದೆ.
9. ಶೈಕ್ಷಣಿಕ ತಂತ್ರಜ್ಞಾನದ ನೆರವಿನಿಂದ ವಿದ್ಯಾರ್ಥಿಗಳನ್ನು ಕಲಿಕೆಯ ಚಟುವಟಿಕೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಭಾಗವಹಿಸುವರು.
10. ವಿದ್ಯಾರ್ಥಿ–ಶಿಕ್ಷಕರ ಬಾಂದವ್ಯ ನಿಕಟವಾಗುವುದು.
11. ವಿದ್ಯಾರ್ಥಿಗಳ ವರ್ತನೆಗಳಿಗನುಗುಣವಾಗಿ ಕಲಿಕಾ ಚಟುವಟಿಕೆಗಳನ್ನು ರೂಪಿಸಬಹುದು.
12. ವಿದ್ಯಾರ್ಥಿಗಳಿಗೆ ನೇರ ಹಾಗೂ ಪ್ರತ್ಯಕ್ಷವಾದ ಕಲಿಕೆಯ ಅನುಭವಗಳನ್ನು ಒದಗಿಸಬಹುದು.
13. ಬೋಧನೆಯ ಸ್ವರೂಪವನ್ನು ವಿದ್ಯಾರ್ಥಿಗಳ ಅಭಿರುಚಿಗಳನ್ನು ವಿಶ್ಲೇಷಿಸಬಹುದು.

### ಶಿಕ್ಷಕರಿಗೆ ತಂತ್ರಜ್ಞಾನ ಬಳಕೆಯಲ್ಲಿ ಎದುರಾಗುವ ಅಡೆತಡೆಗಳು

1. ಇದು ಬಹಳ ವೆಚ್ಚದಾಯಕವಾದುದು. ಇದಕ್ಕೆ ಬಹಳಷ್ಟು ವಿದ್ಯುನ್ಮಾನ ಯಂತ್ರಗಳ ಅವಶ್ಯಕತೆ ಇದೆ.
2. ಇದರ ಬಳಕೆಯ ಬಗ್ಗೆ ಸರಿಯಾದ ಅರಿವು ಶಿಕ್ಷಕರಲ್ಲಿ ಮತ್ತು ಮಕ್ಕಳಲ್ಲಿ ಇಲ್ಲದೆ ಇರುವುದು.
3. ಅಗತ್ಯ ಸಾಫ್ಟ್‌ವೇರ್‌ಗಳು ಬಹಳ ವೆಚ್ಚದಾಯಕ ಹಾಗೂ ಅಲಭ್ಯತೆಯ ಸಮಸ್ಯೆ ಇರುವುದು.

4. ಇವುಗಳನ್ನು ನಿರ್ವಹಿಸಲು ನಮ್ಮ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಕೊಠಡಿ, ಅವುಗಳಿಗೆ ರಕ್ಷಣೆ ಹಾಗೂ ಮೂಲ ಸೌಕರ್ಯಗಳ ಕೊರತೆ (ವಿದ್ಯುತ್, ಗಾಳಿ ಬೆಳಕು ನಿಯಂತ್ರಿಸಲು ವ್ಯವಸ್ಥೆ ) ಕೊರತೆ ಇರುವುದು.
5. ಇವು ಶಿಕ್ಷಕನಿಗೆ ಪರ್ಯಾಯವಾಗಿ ನಿರ್ವಹಿಸುವ ಅಪಾಯವಿರುವುದು.
6. ವಿದ್ಯಾರ್ಥಿಗಳಲ್ಲಿ ಉಂಟಾಗಬಹುದಾದ ಸಮಸ್ಯೆಗಳಿಗೆ ಇವು ಉತ್ತರಿಸುವ ಸಾಮರ್ಥ್ಯ ಇಲ್ಲದಿರುವುದು.
7. ಇವುಗಳ ಬಗ್ಗೆ ಶಿಕ್ಷಕರಿಗಿರುವ ನಿರಾಸಕ್ತಿ.
8. ಇವು ಮಕ್ಕಳಲ್ಲಿ ಆಸಕ್ತಿ ಉಂಟುಮಾಡುವ ಭರದಲ್ಲಿ ಮೂಲ ಕಲಿಕೆಗೆ ಕುತ್ತು ತರುವ ಸಂಭವವಿರುವುದು. ಉದಾ: ಕ್ಯಾಲ್ಕ್ಯುಲೇಟರ್ ಮಕ್ಕಳ ಗಣಿತದ ಮೂಲಕ್ರಿಯೆಯ ಕಲಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಂಭವವಿರುವುದು.

ಇಂತಹ ಅಡೆತಡೆಗಳ ನಡುವೆಯೂ ಐ.ಸಿ.ಟಿ.ಯನ್ನು ಬಳಸಿ ತಮ್ಮ ವೃತ್ತಿಪರ ಅಭಿವೃದ್ಧಿಯನ್ನು ಕಂಡುಕೊಂಡು ತರಗತಿಯಲ್ಲಿ ಮಕ್ಕಳಿಗೂ ಅದರ ಫಲವನ್ನು ನೀಡಿದ, ಎಲೆಮರಿ ಕಾಯಿಯಾಗಿ ಯಾರ ಫಲಾಪೇಕ್ಷೆಯನ್ನು ಬಯಸದೆ ನಿಮ್ಮಂತ ಅದೆಷ್ಟೋ ಶಿಕ್ಷಕರು ತಮ್ಮ ಕರ್ತವ್ಯಪಾಲನೆ ಮಾಡುತ್ತಿದ್ದಾರೆ. ಖಾಸಗಿ ಶಾಲೆಗಿಂತ ಉತ್ತಮ ಪರಿಸರ ನಿರ್ಮಾಣ ಮಾಡಿದ್ದಾರೆ, ಮಕ್ಕಳಿಗೆ ICT ಮೂಲಕ ವಿನೂತನ ಬೋಧನೆ ಜೊತೆಗೆ ಹಾಜರಾತಿ ಹೆಚ್ಚಿಸುವುದರ ಮೂಲಕ ಸರ್ಕಾರಿ ಶಾಲೆ ಉಳಿಸುವ ಪ್ರಯತ್ನ ಮಾಡಿದ್ದಾರೆ.

ಯಾವುದೇ ಕೆಲಸವನ್ನು ಮಾಡಲು ಮನುಷ್ಯನಿಗೆ ಮೂಲಶಕ್ತಿ ಪ್ರೇರಣೆ. ಪ್ರೇರಣೆಯಲ್ಲಿ ಎರಡು ಬಗೆ. ಸಂಬಳಕ್ಕಾಗಿ, ಹೆಸರಿಗಾಗಿ, ಪ್ರಶಸ್ತಿಗಾಗಿ ಕೆಲಸ ಮಾಡಲು ಪ್ರೇರೇಪಿಸುವುದು ಬಾಹ್ಯ ಪ್ರೇರಣೆ ಎನಿಸಿದರೆ, ಇದಕ್ಕೆ ವ್ಯತಿರಿಕ್ತವಾಗಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಮಾಡುವ ಕೆಲಸವನ್ನು ಆಂತರಿಕ ತೃಪ್ತಿಗಾಗಿ ಮಾಡುವುದು ಆಂತರಿಕ ಪ್ರೇರಣೆ ಎನಿಸುತ್ತದೆ. ಬಾಹ್ಯಪ್ರೇರಣೆಗಾಗಿ ಕೆಲಸ ಮಾಡುವ ವ್ಯಕ್ತಿಗಳು ತಮಗೆ ಮಾಡುವ ಕೆಲಸದಲ್ಲಿ ಆಸಕ್ತಿ ಇಲ್ಲದಿದ್ದರೂ ಅನಿವಾರ್ಯತೆಯಿಂದ ಯಾಂತ್ರಿಕವಾಗಿ ತೊಡಗಿರುತ್ತಾರೆ. ಆದರೆ ತಾವು ಮಾಡುವ ಕೆಲಸದಲ್ಲಿ ತನ್ಮಯರಾಗಿ, ಅದರಲ್ಲಿ ಸಾರ್ಥಕತೆ ಪಡೆಯಲು ಪ್ರತಿ ಕ್ಷಣ ಹಂಬಲಿಸುವ ವ್ಯಕ್ತಿಗಳು ಬಹಳ ವಿರಳ. ಈ ಬಗೆಯ ವ್ಯಕ್ತಿಗಳಿಗೆ, ತಾವು ಮಾಡಲು ಹೊರಟಿರುವ ಕೆಲಸದ ಗುರಿಯ ಬಗೆಗೆ ಸ್ಪಷ್ಟತೆ ಇರುತ್ತದೆ. ಆ ಗುರಿಯನ್ನು ತಲುಪಲು ಇರುವ ಅಡೆತಡೆಗಳು, ಸವಾಲುಗಳ ಸ್ಪಷ್ಟ ಅರಿವಿನ ಜೊತೆಗೆ, ಅವುಗಳನ್ನು ಎದುರಿಸುವ ಕೌಶಲಗಳ ಸಮನ್ವಯತೆ ಇರುತ್ತದೆ. ಜೊತೆಗೆ ಅವರು ಮಾಡುವ ಕೆಲಸದಲ್ಲಿ ಸದಾ ಉತ್ಸುಕರಾಗಿದ್ದು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುತ್ತಾರೆ.

ರಾಜ್ಯದ ಶಾಲೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ತಂತ್ರಜ್ಞಾನ ಆಧಾರಿತ ಹಲವು ಸ್ವತಂತ್ರ ಯೋಜನೆಗಳ ಬದಲಾಗಿ ಎಲ್ಲಾ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನೊಳಗೊಂಡ ಸಮಗ್ರವಾದ ತಂತ್ರಜ್ಞಾನ ಆಧಾರಿತ ಕಲಿಕಾ ಯೋಜನೆ ಅನುಷ್ಠಾನಗೊಳಿಸಲು ಉದ್ದೇಶಿಸಿ ಇಲಾಖೆಯು ಡಿ.ಎಸ್.ಇ.ಆರ್.ಟಿ ಮೂಲಕ ತಂತ್ರಜ್ಞಾನ ಆಧಾರಿತ ಕಲಿಕಾ ಯೋಜನೆಯನ್ನು (Technology Assisted Learning Programme) 2016–17ನೇ ಸಾಲಿನಿಂದ ಜಾರಿಗೆ ತಂದಿದೆ. ಈ ಮೊದಲು ಐ.ಸಿ.ಟಿ ಯೋಜನೆಯಾಗಿ ಅನುಷ್ಠಾನಗೊಳ್ಳುತ್ತಿದ್ದ ಕಾರ್ಯಕ್ರಮವನ್ನು IT@Schools in Karnataka ಎಂಬ ಕಾರ್ಯಕ್ರಮವಾಗಿ ಅನುಷ್ಠಾನಗೊಳ್ಳುತ್ತಿದ್ದು, ಎಡುಸ್ಯಾಟ್, ಸಿ.ಎ.ಎಲ್, ಟೆಲಿಶಿಕ್ಷಣ ಮತ್ತು ರೇಡಿಯೋ ಕಾರ್ಯಕ್ರಮಗಳನ್ನು ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮದಡಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

## ಐಟಿ@ಸ್ಕೂಲ್ಸ್ ಇನ್ ಕರ್ನಾಟಕ

ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಶಿಕ್ಷಕರು ತಂತ್ರಜ್ಞಾನವನ್ನು ತಮ್ಮ ತರಗತಿ ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಬಳಸಿಕೊಳ್ಳಲು ಮತ್ತು ವಿದ್ಯಾರ್ಥಿಗಳಿಗೆ ಗಣಕ ಶಿಕ್ಷಣವನ್ನು ನೀಡಲು ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಮಾಡುವುದು ಈ ಯೋಜನೆಯ ಮೂಲ ಉದ್ದೇಶಗಳಲ್ಲಿ ಒಂದಾಗಿದೆ. 2016–17ನೇ ಸಾಲಿನಲ್ಲಿ 1000 ಪ್ರೌಢ ಶಾಲೆಗಳು ಮತ್ತು 2017–18ನೇ ಸಾಲಿನಲ್ಲಿ 750 ಪ್ರೌಢ ಶಾಲೆಗಳನ್ನು ಆಯ್ಕೆ ಮಾಡಿ ಈ ಶಾಲೆಗಳ ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳನ್ನು ಬೋಧಿಸುವ ಶಿಕ್ಷಕರಿಗೆ 10 ದಿನಗಳ ಸನಿವಾಸ ಇಂಡಕ್ಷನ್–1 ಐ.ಸಿ.ಟಿ ಶಿಕ್ಷಕರ ತರಬೇತಿಯನ್ನು ಸುಮಾರು 8000 ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರಿಗೆ ನೀಡಲಾಗಿದೆ. 2018–19ನೇ ಸಾಲಿನಲ್ಲಿ ಇನ್ನೂ 750 ಸರ್ಕಾರಿ ಪ್ರೌಢ ಶಾಲೆಗಳನ್ನು ಆಯ್ಕೆ ಮಾಡಿ ಈ ಶಾಲೆಯ ಶಿಕ್ಷಕರಿಗೆ ಸದರಿ ತರಬೇತಿಯನ್ನು ನೀಡಲಾಗುವುದು. ತರಬೇತಿಯನ್ನು ಪಡೆದ ಎಲ್ಲಾ ಶಾಲೆಗಳಿಗೆ ಒಂದು ಲ್ಯಾಪ್ ಟಾಪ್ ಮತ್ತು ಒಂದು ಪ್ರೊಜೆಕ್ಟರ್ ಸರಬರಾಜು ಮಾಡಲಾಗುತ್ತಿದೆ.

2018–19ನೇ ಸಾಲಿನಲ್ಲಿ ಹಿಂದಿನ 2 ವರ್ಷಗಳಲ್ಲಿ ಆಯ್ಕೆಯಾದ 1750 ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗುವುದು ಮತ್ತು ವಿದ್ಯಾರ್ಥಿಗಳು ಗಣಕ ಶಿಕ್ಷಣವನ್ನು ಕಲಿಯಲು ಅಗತ್ಯ ಅಭ್ಯಾಸ ಪುಸ್ತಕಗಳು ಮತ್ತು ಕೈಪಿಡಿಗಳನ್ನು ಒದಗಿಸಲಾಗುವುದು. ಗಣಕ ಶಿಕ್ಷಣವನ್ನು ಒಂದು ವಿಷಯವನ್ನಾಗಿ ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ಎಲ್ಲಾ ಸೌಲಭ್ಯವನ್ನು ನೀಡಲು ಈ ಯೋಜನೆಯಲ್ಲಿ ಉದ್ದೇಶಿಸಲಾಗಿದೆ. ಡಿಜಿಟಲ್ ಕಂಟೆಂಟ್‌ಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದ್ದು, ಎಲ್ಲಾ ಶಿಕ್ಷಕರು ತಮ್ಮ ತರಗತಿ ಬೋಧನೆಯಲ್ಲಿ ಇ–ಕಂಟೆಂಟ್‌ಗಳನ್ನು ಸಮರ್ಪಕವಾಗಿ ಬಳಸಲು ಅನುಕೂಲ ಮಾಡಿಕೊಡಲಾಗುತ್ತಿದೆ.

## ಎಡುಸ್ಯಾಟ್ ಕಾರ್ಯಕ್ರಮ

ಸರ್ಕಾರವು ಇಸ್ರೋ ನೆರವಿನಿಂದ ರಾಜ್ಯದ 5 ಜಿಲ್ಲೆಗಳಲ್ಲಿನ (ಬೆಂಗಳೂರು ಗ್ರಾಮಾಂತರ, ರಾಮನಗರ, ಚಾಮರಾಜನಗರ, ಯಾದಗಿರಿ, ಕಲ್ಬುರ್ಗಿ) 2546 ಶಾಲೆಗಳಲ್ಲಿ ಉಪಗ್ರಹ ಆಧಾರಿತ ದೂರದರ್ಶನದ ಮೂಲಕ ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಎಜುಸ್ಯಾಟ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ಕಾರ್ಯಕ್ರಮದ ಉದ್ದೇಶ: 3 ರಿಂದ 8ನೇ ತರಗತಿವರೆಗೆ ಭಾಷೆ ಹಾಗೂ ಇತರೆ ವಿಷಯಗಳಲ್ಲಿ ವೀಡಿಯೋ ಚಿತ್ರಗಳನ್ನು ತಯಾರಿಸಿ ಪ್ರಸಾರ ಮಾಡುವುದು ಬಹುವರ್ಗ ಬೋಧನೆಗೆ ಅನುಕೂಲವಾಗುವಂತೆವೀಡಿಯೋ ಪಾಠಗಳನ್ನು ರಚಿಸುವುದು. ಪರಿಣಾಮಕಾರಿಯಾದ ಹೊಸ ಮಾಧ್ಯಮದ ಮೂಲಕ ಬೋಧನೆಯನ್ನು ಅಳವಡಿಸಿಕೊಳ್ಳುವುದು. ಅಂತರ್ ಕ್ರಿಯಾತ್ಮಕತೆಯನ್ನು ತರುವುದು. ವಿಷಯ ಪುನಶ್ಚೇತನ ತರಬೇತಿ ನೀಡುವುದು.

ಡಿ.ಎಸ್.ಇ.ಆರ್.ಟಿ ಯಲ್ಲಿ ಅಳವಡಿಸಿರುವ ಹಬ್ ಮೂಲಕ 05 ವಿಷಯಗಳಿಗೆ(ಕನ್ನಡ, ಇಂಗ್ಲಿಷ್, ಗಣಿತ, ಸಮಾಜ ವಿಜ್ಞಾನ, ವಿಜ್ಞಾನ)4–8ನೇ ತರಗತಿಯವರೆಗೂ ದೃಶ್ಯಮಾಧ್ಯಮದ ಮೂಲಕ ಪ್ರಸಾರ ಮಾಡಲಾಗುತ್ತಿದೆ. 2017–18ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪಾಠಪ್ರಸಾರದ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಶಾಲೆಗಳಿಗೆ ತಲುಪಿಸಲಾಗುವುದು. ಪ್ರಸಾರವಾದ ಪಾಠಗಳ ಹಿಮ್ಮಾಹಿತಿಯನ್ನು ಎ.ಎಂ.ಎಸ್.(Automated Monitoring System) ತಂತ್ರಜ್ಞಾನದ ಮೂಲಕ ಪಡೆದುಕೊಳ್ಳಲಾಗುವುದು.

ಶಿಕ್ಷಣ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನ, ಅನುಪಾಲನೆ ಹಾಗೂ ಮೌಲ್ಯಮಾಪನ ಮಾಡಬೇಕಾದ ಅಗತ್ಯತೆಯಿದ್ದು ಬಹುತೇಕ ನಿರಂತರವಾಗಿ ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ ಪರಸ್ಪರ ಸಂಪರ್ಕ ಮಾಡುವ ಸಾಧ್ಯತೆಯಿದ್ದು, ಶಿಕ್ಷಣ ಇಲಾಖೆಗೆ ಪ್ರತ್ಯೇಕವಾಗಿ ವೀಡಿಯೋ ಕಾನ್ಫರೆನ್ಸ್ ಸೌಲಭ್ಯದ ಅವಶ್ಯಕತೆ ಕಂಡುಬಂದಿದೆ. ಡಿ.ಎಸ್.ಇ.ಆರ್.ಟಿ. ವತಿಯಿಂದ 41 ಕೇಂದ್ರಗಳನ್ನು ಗುರುತಿಸಿದ್ದು, ಸಿ.ಇ.ಜಿರವರಿಗೆ ವೀಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಒದಗಿಸುವ ಬಗ್ಗೆ ಈಗಾಗಲೇ ಪ್ರಸ್ತಾವನೆ ಹಾಗೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

## ರೇಡಿಯೋ ಕಾರ್ಯಕ್ರಮ

2004–05ರಿಂದ ಎಜುಸ್ಯಾಟ್ ಕಾರ್ಯಕ್ರಮದಡಿಯಲ್ಲಿ ಬಾನುಲಿ ಕಾರ್ಯಕ್ರಮ(ರೇಡಿಯೋ) ಅನುಷ್ಠಾನಗೊಂಡಿದೆ. ಅನುದಾನವನ್ನು ಎಜುಸ್ಯಾಟ್ ಕಾರ್ಯಕ್ರಮದಡಿ ಮಂಜೂರು ಮಾಡಲಾಗುತ್ತಿತ್ತು. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ದೂರ ಶಿಕ್ಷಣ ಯೋಜನೆಯ ನೆರವಿನೊಂದಿಗೆ 2000–2001 ಆರಂಭಿಸಲಾಯಿತು. 2003–04ನೇ ಸಾಲಿಗೆ 6ನೇ ತರಗತಿಗೂ ವಿಸ್ತರಿಸಲಾಯಿತು ಹಾಗೂ ಹಿಮ್ಮಾಹಿತಿ ಆಧಾರ 3 ಮತ್ತು 4ನೇಯ ತರಗತಿಯ ಕೆಲವು ಪಾಠಗಳನ್ನು ಪರಿಷ್ಕರಿಸಿ, ಮರುನಿರ್ಮಿಸಿ ಪ್ರಸಾರ ಮಾಡಲಾಯಿತು. 2004–05ನೇ ಸಾಲಿನಲ್ಲಿ ಇ.ಡಿ.ಸಿ. ಸಂಸ್ಥೆಯ ವತಿಯಿಂದ ತಯಾರಿಸಲಾದ 4 ಮತ್ತು 5ನೇ ತರಗತಿ ಮಕ್ಕಳಿಗೆ ಚುಕ್ಕಿ ಚಿನ್ನಾ ಹೀಗೆ ವಿಸ್ತರಿಸಲ್ಪಟ್ಟು 2005–06ನೇ ಸಾಲಿನಿಂದ 1 ಮತ್ತು 2ನೇ ತರಗತಿಗಳಿಗೆ ಚಿನ್ನರ ಚುಕ್ಕಿ (ಮಧ್ಯಾಹ್ನ 2:35 ರಿಂದ 3:04 ರವರೆಗೆ) 3,4 ಮತ್ತು 5ನೇ ತರಗತಿಗಳಿಗೆ ಚುಕ್ಕಿ ಚಿನ್ನ (ಮಧ್ಯಾಹ್ನ 12:30 ರಿಂದ 12:30 ರವರೆಗೆ) ಹಾಗೂ 6, 7 ಮತ್ತು 8ನೇ ತರಗತಿಗಳಿಗೆ ಕೇಳಿ–ಕಲಿ (ಬೆಳಗ್ಗೆ 11:30 ರಿಂದ 12:00 ರವರೆಗೆ)ರೇಡಿಯೋ ಪಾಠಗಳು ಪ್ರಸಾರವಾಗುತ್ತಿದ್ದು, 2018–19ನೇ ಸಾಲಿನಲ್ಲಿನ ಕಾರ್ಯಕ್ರಮದ ರೂಪುರೇಷೆಗಳನ್ನು ತೀರ್ಮಾನಿಸಬೇಕಿದೆ.

## ಟೆಲಿ ಶಿಕ್ಷಣ

ಕರ್ನಾಟಕ ರಾಜ್ಯದ 22 ಜಿಲ್ಲೆಗಳ ಹಿಂದುಳಿದ 36 ಬ್ಲಾಕ್‌ಗಳಲ್ಲಿನ ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಅಭಿವೃದ್ಧಿಯ ಸಲುವಾಗಿ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಸರಿಸಮಾನವಾಗಿ ಸ್ಪರ್ಧಿಸಲು ಅನುವಾಗುವಂತೆ ದೂರಸಂವೇದಿ ತಂತ್ರಜ್ಞಾನವನ್ನು ಬಳಸಿಕೊಂಡು ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಗೊಳಿಸಲು, ಇಂಟರ್‌ನೆಟ್ ಬಳಸಿ ತನ್ಮೂಲಕ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ಮಾಡಿ, ಅವರಿಂದ ಉದ್ಭವವಾಗುವ ಸಂದೇಹಗಳಿಗೆ ಸೂಕ್ತ ಉತ್ತರ ಹಾಗೂ ಮಾರ್ಗದರ್ಶನವನ್ನು ನೀಡುವ ಸಲುವಾಗಿ ಐ.ಐ.ಎಂ.ಬಿ ಸಂಸ್ಥೆಯು ಇನ್ನಿತರ ಸಹಯೋಗ ಸಂಸ್ಥೆಗಳೊಂದಿಗೆ ಗುಬ್ಬಿ ತಾಲ್ಲೂಕಿನ 14 ಗ್ರಾಮ ಪಂಚಾಯಿತಿಗಳ ಸರ್ಕಾರಿ ಶಾಲೆಗಳಲ್ಲಿನ ಸುಮಾರು 3112 ವಿದ್ಯಾರ್ಥಿಗಳಿಗೆ Satellite and Multimedia Education (SAME)ಮೂಲಕ ನಡೆಸಿದ ಪೈಲಟ್ ಕಾರ್ಯಕ್ರಮದ ಯಶಸ್ಸಿನಿಂದಾಗಿ ಪ್ರಾಯೋಜಿಕವಾಗಿ ಕರ್ನಾಟಕ ರಾಜ್ಯದ 36 ಬ್ಲಾಕ್‌ಗಳ 1000 ಶಾಲೆಗಳ 1,82,000 ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅನುಷ್ಠಾನಗೊಳಿಸಿದ ಕಾರ್ಯಕ್ರಮವೇ ಟೆಲಿಶಿಕ್ಷಣ ಯೋಜನೆ. 2018–19ನೇ ಸಾಲಿನಲ್ಲಿ ಕಾರ್ಯಕ್ರಮದ ರೂಪುರೇಷೆಗಳನ್ನು ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

## ಕ್ರಿಯಾ ಸಂಶೋಧನೆ

ಶಿಕ್ಷಣದ ಪ್ರಮುಖ ಉದ್ದೇಶ ಮಗುವಿನ ಸರ್ವಾಂಗೀಣ ಬೆಳವಣಿಗೆ ಮತ್ತು ಉತ್ತಮ ರಾಷ್ಟ್ರ ನಿರ್ಮಾಣ. ಈ ಕಾರ್ಯದಲ್ಲಿ ನಿರತವಾಗಿರುವ ಶಿಕ್ಷಣ ಕ್ಷೇತ್ರ ಬಹಳ ವಿಶಾಲ ಹಾಗೂ ಸಂಕೀರ್ಣವಾದುದು. ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತವೆ. ದಿನನಿತ್ಯ ಎದುರಾಗುವ ಸಮಸ್ಯೆಗಳನ್ನು ನಿರ್ಲಕ್ಷಿಸಿದರೆ ಅಥವಾ ಬಗೆಹರಿಸದಿದ್ದರೆ, ಗುರಿ ತಲುಪುವಲ್ಲಿ ಸಮಸ್ಯೆಗಳು ಅಡ್ಡಿಯಾಗುತ್ತವೆ. ಸಮಸ್ಯೆಗಳನ್ನು ಬಗೆಹರಿಸಲು ಕಂಡುಕೊಂಡ ವಿಧಾನ ಸಂಶೋಧನಾ ವಿಧಾನ. ಸಂಶೋಧನೆಗಳಲ್ಲಿ ಹಲವು ವಿಧ. ಅವುಗಳಲ್ಲಿ ಒಂದು "ಕ್ರಿಯಾ ಸಂಶೋಧನೆ".

ಒಬ್ಬ ವ್ಯಕ್ತಿ ತಾನು ನಿರ್ವಹಿಸುವ ಕೆಲಸದಲ್ಲಿ ಅಡ್ಡಿ ಆತಂಕಗಳನ್ನು ಎದುರಿಸುತ್ತಾನೆ. ಇವುಗಳು ತನ್ನ ಉದ್ದೇಶ ಸಾಧನೆಗಾಗಿರುವ ಸಮಸ್ಯೆಗಳು ಎಂದೆನಿಸುತ್ತವೆ. ಇಂತಹ ಸಮಸ್ಯೆಗಳ ಪರಿಹಾರಕ್ಕಾಗಿ ಉದ್ದೇಶ ಪೂರ್ವಕವಾಗಿ ಕೈಗೊಳ್ಳುವ ಒಂದು ಕ್ರಿಯೆ. ಈ ಕ್ರಿಯೆ ಸಂಶೋಧನಾ ಲಕ್ಷಣಗಳನ್ನು ಒಳಗೊಂಡಿರುತ್ತದೆ.ಶಾಲೆಯಲ್ಲಿ ತನ್ನ ಕರ್ತವ್ಯ ನಿರ್ವಹಿಸುವಾಗ ಎದುರಾಗುವ ಅನೇಕ ಸಮಸ್ಯೆಗಳನ್ನು ಶಿಕ್ಷಕ ತಾನೇ ಸ್ವತಃ ಬಗೆಹರಿಸಬಹುದು ಎಂಬ ಆತ್ಮವಿಶ್ವಾಸ ಶಿಕ್ಷಕರಲ್ಲಿ ತುಂಬಲು 'ಸ್ಟೀಫನ್ ಕೋರಿ' ಎಂಬ ಶಿಕ್ಷಣ ತಜ್ಞ, ಕ್ರಿಯಾ ಸಂಶೋಧನೆ ಎಂಬ ಮಾರ್ಗ ಸೂಚಿಸಿದ್ದಾರೆ. "ಮನಸ್ಸಿದ್ದರೆ ಮಾರ್ಗ" ಎಂಬ ತತ್ವವೇ ಕ್ರಿಯಾ ಸಂಶೋಧನೆಯ ಜೀವಾಳ.ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು, ಮೇಲ್ವಿಚಾರಕರು, ಆಡಳಿತಗಾರರು ಮುಂತಾದ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು ಒಂದು ಸೀಮಿತ ಚೌಕಟ್ಟಿನಲ್ಲಿ ಸಮಸ್ಯೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ಕಂಡುಕೊಳ್ಳುವುದಕ್ಕೆ ಕ್ರಿಯಾತ್ಮಕ ಸಂಶೋಧನೆ ಎನ್ನುತ್ತೇವೆ.

## ಕ್ರಿಯಾ ಸಂಶೋಧನೆಯ ವ್ಯಾಪ್ತಿ

ಕ್ರಿಯಾ ಸಂಶೋಧನೆಯ ವ್ಯಾಪ್ತಿಯು ವಿಶಾಲವಾದುದಾಗಿದೆ?. ಶಿಕ್ಷಕರು ದಿನ ನಿತ್ಯ ಕರ್ತವ್ಯವನ್ನು ನಿರ್ವಹಿಸುವಾಗ ಎದುರಾಗುವ ಯಾವುದೇ ರೀತಿಯ ಸಮಸ್ಯೆಗಳನ್ನು ಕ್ರಿಯಾ ಸಂಶೋಧನೆಯ ವ್ಯಾಪ್ತಿಯಲ್ಲಿ ಸೇರಿಸಬಹುದಾಗಿದೆ.

ಉದಾಹರಣೆಗೆ: * ವಿದ್ಯಾರ್ಥಿಗಳ ಕಲಿಕೆ

* ಶಿಕ್ಷಕರ ಬೋಧನೆ
* ಸಹಪಠ್ಯ ಚಟುವಟಿಕೆಗಳು
* ಪರೀಕ್ಷೆ ಮತ್ತು ಮೌಲ್ಯಮಾಪನ
* ಶಾಲಾ ಸಂಘಟನೆ
* ಶಾಲಾ ಆಡಳಿತ
* ವಿದ್ಯಾರ್ಥಿಗಳ ಆಸಕ್ತಿಗಳು ಮತ್ತು ಮನೋಭಾವ
* ವಿದ್ಯಾರ್ಥಿಗಳ ವರ್ತನೆ, ಇತ್ಯಾದಿಗಳು

## ಕ್ರಿಯಾ ಸಂಶೋಧನೆಯ ಉದ್ದೇಶಗಳು

- ಶೈಕ್ಷಣಿಕ ಕ್ಷೇತ್ರದಲ್ಲಿ ಅಪೇಕ್ಷಿತ ಬದಲಾವಣೆ ತರಲು ಸಹಾಯಕ.
- ಉತ್ತಮ ಕಲಿಕಾ ಸನ್ನಿವೇಶವನ್ನು ಸೃಷ್ಟಿಸುವುದು.
- ಶೈಕ್ಷಣಿಕ ಕಾರ್ಯಕರ್ತರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದು.
- ಶಿಕ್ಷಕರ ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಬದಲಾವಣೆ ತರುವುದು.
- ಶೈಕ್ಷಣಿಕ ಆಡಳಿತ, ತರಗತಿ ನಿರ್ವಹಣೆ, ಮೌಲ್ಯಮಾಪನ ಮುಂತಾದವುಗಳಲ್ಲಿ ಸುಧಾರಣೆಯನ್ನುಂಟು ಮಾಡುವುದು
- ಸಮಸ್ಯೆಯನ್ನು ಎದುರಿಸುತ್ತಿರುವವರೇ ಸರಳ ಹಾಗೂ ಸುಲಭವಾಗಿ ಪರಿಹಾರ ಕಂಡುಕೊಳ್ಳಬಹುದು.

## ಕ್ರಿಯಾ ಸಂಶೋಧನೆಯ ಹಂತಗಳು

ಕ್ರಿಯಾ ಸಂಶೋಧನೆಯ ಉದ್ದೇಶ ತರಗತಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರ ಕಂಡುಕೊಳ್ಳುವುದಾಗಿದೆ. ಕ್ರಿಯಾ ಸಂಶೋಧನೆಯಲ್ಲಿಯೂ ಕೂಡ ವೈಜ್ಞಾನಿಕ ಹಂತಗಳನ್ನು ಕ್ರಮಬದ್ಧವಾಗಿ ಅನುಸರಿಸಬೇಕಾಗುತ್ತದೆ.

**ಅವುಗಳೆಂದರೆ** * ಸಮಸ್ಯೆಯನ್ನು ಗುರುತಿಸುವುದು.

* ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು.
* ಸಮಸ್ಯೆಗಳಿಗೆ ಕಾರಣಗಳನ್ನು ಪಟ್ಟಿ ಮಾಡುವುದು.
* ಪ್ರಾಕಲ್ಪನೆಗಳನ್ನು ರೂಪಿಸುವುದು.
* ಕ್ರಿಯಾ ಯೋಜನೆಯ ಅನುಷ್ಠಾನ
* ದತ್ತಾಂಶಗಳ ವಿಶ್ಲೇಷಣೆ.
* ತೀರ್ಮಾನ ಮತ್ತು ಅರ್ಥೈಸುವಿಕೆ.
* ಅನುಸರಣೆ / ಪರಿಹಾರ.

ಈ ಹಂತಗಳನ್ನು ಆಧರಿಸಿ ಶಿಕ್ಷಕ ತನ್ನ ಕಾರ್ಯದಲ್ಲಿ ಎದುರಾದ ತೊಡಕುಗಳನ್ನು ಸಮರ್ಥವಾಗಿ ಪರಿಹರಿಸಿಕೊಳ್ಳಬಹುದು. ತಾವು ಕಂಡುಕೊಂಡ ಪರಿಹಾರವನ್ನು ದಾಖಲಿಸಿದ್ದೇ ಆದಲ್ಲಿ ಇತರರಿಗೆ ಮಾರ್ಗದರ್ಶನವಾಗಬಲ್ಲದು. ಆದುದರಿಂದ ಕ್ರಿಯಾ ಸಂಶೋಧನಾ ವರದಿಯನ್ನು ತಯಾರಿಸುವುದು ಅವಶ್ಯ.

## ವರದಿ ತಯಾರಿಕೆ

**I.ಪೀಠಿಕಾ ಭಾಗ**

* ಮುಖಪುಟ
* ಮುನ್ನುಡಿ
* ಪರಿವಿಡಿ

**II.ವರದಿಯ ಮುಖ್ಯಭಾಗ**

* ಸಮಸ್ಯೆಯ ನಿರೂಪಣೆ
* ಅಧ್ಯಯನದ ಉದ್ದೇಶಗಳು
* ಕ್ರಿಯಾ ಪ್ರಾಕಲ್ಪನೆ
* ಅಧ್ಯಯನದ ವಿನ್ಯಾಸ
* ಸಂಶೋಧನಾ ಸಾಧನಗಳು / ದತ್ತಾಂಶಗಳ ಆಧಾರಗಳು
* ಮಾಹಿತಿ ಸಂಗ್ರಹಣೆಯ ತಂತ್ರಗಳು
* ದತ್ತಾಂಶಗಳ ವರ್ಗೀಕರಣ ಮತ್ತು ವಿಶ್ಲೇಷಣೆ
* ನಕಾಶೆಗಳ ವ್ಯಾಖ್ಯಾನ
* ಉಪಸಂಹಾರ
* ಫಲಿತಾಂಶಗಳ ತೀರ್ಮಾನ
* ಮುಖ್ಯ ಪರಿಹಾರಗಳು

**IIIಉಲ್ಲೇಖ ಭಾಗ**

**IVಗ್ರಂಥ ಋಣ**

ಕ್ರಿಯಾ ಸಂಶೋಧನೆ ನಿರಂತರ ಪ್ರಕ್ರಿಯೆ. ಏಕೆಂದರೆ ಪರಿವರ್ತನೆ ಮತ್ತು ವಿಕಾಸಗಳಿಗೆ ಅಂತ್ಯವೇ ಇಲ್ಲ. ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲರೂ ತಮ್ಮ ತಮ್ಮ ಕ್ಷೇತ್ರದ ಸಮಸ್ಯಾ ನಿವಾರಣೆಗಾಗಿ ಕ್ರಿಯಾ ಸಂಶೋಧನೆಗಳನ್ನು ಕೈಗೊಳ್ಳಬೇಕಾಗಿದೆ.

## ಗುರುಚೇತನ (Teacher Professional Development-TPD)

**ಹಿನ್ನೆಲೆ**

ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಪ್ರಯತ್ನಗಳನ್ನು ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಬದಲಾವಣೆಗಳನ್ನು ತರಬೇಕಿದೆ. ಶಿಕ್ಷಕರ ಅಭಿವೃದ್ಧಿಯನ್ನು ಅಲ್ಪಕಾಲೀನ ವಾರ್ಷಿಕ ಯೋಜನೆಗಳಿಂದ ಸಾಕಾರಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಕರ ವೃತ್ತಿಪರ ಅಭಿವೃದ್ಧಿಯನ್ನು ದೀರ್ಘಾವಧಿಯಲ್ಲಿ ಯೋಜಿಸಿ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಪಠ್ಯಕ್ರಮವನ್ನು ರಚಿಸಿದೆ.

**ಉದ್ದೇಶಗಳು**

- ಶಿಕ್ಷಕರನ್ನು ಚಿಂತನಶೀಲ ಅಭ್ಯಾಸಿಗರನ್ನಾಗಿ (Reflective Practitioner) ಮಾಡುವುದು.
- ಶಿಕ್ಷಕರು ಸ್ವ ಪ್ರೇರಣೆಯಿಂದ ವೃತ್ತಿಪರ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸುವುದು.
- ಶಾಲಾ ಶಿಕ್ಷಣದ ಸಂದರ್ಭದಲ್ಲಿ ಮಕ್ಕಳ ಸ್ವಕಲಿಕೆಯ ಅವಕಾಶಗಳನ್ನು ಅರ್ಥೈಸಲು ಮತ್ತು ಅನುಕೂಲಿಸಲು ಸ್ವಾಯತ್ತ ಶಿಕ್ಷಕರನ್ನು ರೂಪಿಸುವುದು.

ಇದಕ್ಕಾಗಿ ಮುಂದಿನ 3 ರಿಂದ 5 ವರ್ಷಗಳಲ್ಲಿ ವಿವಿಧ ವಿಷಯಗಳಲ್ಲಿ 200 ರಿಂದ 250 ಮಾಡ್ಯೂಲ್‌ಗಳನ್ನು ರಚಿಸಲು ಯೋಜಿಸಿದೆ. ಇವುಗಳು 1 ರಿಂದ 5 ದಿನಗಳ ಅವಧಿಯನ್ನು ಹೊಂದಿರುತ್ತವೆ. ಶಿಕ್ಷಕರ ಅಭಿವೃದ್ಧಿಯನ್ನು ಬೋಧನಾ ವಿಷಯಕ್ಕೆ ಸೀಮಿತಗೊಳಿಸದೆ ಶೈಕ್ಷಣಿಕ ದೃಷ್ಟಿಕೋನ, ವಿಷಯದ ವಿಸ್ತಾರ, ವಿವಿಧ ವಿಷಯಗಳ ಸಮ್ಮಿಳಿತ, ಕಲಿಕೆಯನ್ನು ಅನುಕೂಲಿಸುವಿಕೆಯ ಅಂಶಗಳನ್ನು ಹೊಂದಿದೆ. ಇಂತಹ ಪ್ರಯತ್ನ ವಿಶೇಷವಾಗಿರುವಂತೆ ಪ್ರಯತ್ನಿಸಲಾಗುತ್ತಿದೆ. ಶಿಕ್ಷಕರು ತಮಗೆ ಅಗತ್ಯವೆನಿಸಿದ ಯಾವುದೇ ವಿಷಯದಲ್ಲಿ ಮಾಡ್ಯೂಲ್‌ಗಳನ್ನು ಆಯ್ಕೆ ಮಾಡಿಕೊಂಡು ವೃತ್ತಿಪರವಾಗಿ ಬೆಳೆಯಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಮೇಲಿನ ಅಂಶಗಳೂ ಒಳಗೊಂಡಂತೆ 2017–18 ನೇ ಸಾಲಿನಲ್ಲಿ 1 ರಿಂದ 8 ನೇ ತರಗತಿಗಳಲ್ಲಿ ಅನುಕೂಲಿಸುವ ಶಿಕ್ಷಕರಿಗೆ ಗುರುಚೇತನ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಶೈಕ್ಷಣಿಕದೃಷ್ಟಿಕೋನ, ನಲಿ ಕಲಿ, ಕನ್ನಡ, ಹಿಂದಿ, ವಿಜ್ಞಾನ, ಸಮಾಜ ವಿಜ್ಞಾನ, ಗಣಿತ ವಿಷಯಗಳನ್ನು ಒಳಗೊಂಡಂತೆ ಒಟ್ಟು 28 ತರಬೇತಿ ಮಾಡ್ಯೂಲ್‌ಗಳನ್ನು ಸಿದ್ಧಪಡಿಸಲಾಗಿದೆ.ಎಲ್ಲಾ 28 ಮಾಡ್ಯೂಲ್‌ಗಳನ್ನು ಪ್ರತಿ ಜಿಲ್ಲೆಯಿಂದ ಪ್ರತಿ ಮಾಡ್ಯೂಲ್‌ಗೆ ಒಬ್ಬರಂತೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಕರೆಸಿ ಪರೀಕ್ಷಾರ್ಥ ತರಬೇತಿ (ಟ್ರೈಔಟ್) ಮಾಡಲಾಗಿದೆ. ಇದರಲ್ಲಿ ದೊರೆತ ಸಲಹೆ ಮತ್ತು ಹಿಮ್ಮಾಹಿತಿಯನ್ನು ಆಧರಿಸಿ ಮಾಡ್ಯೂಲ್ ಅಂತಿಮಗೊಳಿಸಲಾಗಿದೆ.

- ಉತ್ತಮ ಎಂ.ಆರ್.ಪಿ ಗಳ ಆಯ್ಕೆಗಾಗಿ ಲಿಖಿತ ಮತ್ತು ಸಂವಾದ ಪ್ರಕ್ರಿಯೆಯನ್ನು ನಡೆಸಲಾಗಿದೆ.

- ಜುಲೈ ನಿಂದ ಸೆಪ್ಟೆಂಬರ್–2017 ರ ಅವಧಿಯಲ್ಲಿ 3,520 ಎಂ.ಆರ್.ಪಿಗಳನ್ನು ತರಬೇತುಗೊಳಿಸಲಾಗಿದೆ. ಈ ತರಬೇತಿಯು 10 ದಿನಗಳ ಅವಧಿಯನ್ನು ಹೊಂದಿರುತ್ತದೆ.
- 1 ರಿಂದ 8 ನೇ ತರಗತಿ ಬೋಧಿಸುವ 1,00,000 ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಜಿಲ್ಲಾ ಹಾಗೂ ಬ್ಲಾಕ್ ಹಂತದಲ್ಲಿ ಅವರ ಆಯ್ಕೆ ಅನುಸಾರ ನವೆಂಬರ್–2017 ಮಾಹೆಯಿಂದ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದ್ದು ಫೆಬ್ರವರಿ–2018 ರವರೆಗೆ 70,834 ಶಿಕ್ಷಕರುಗಳಿಗೆ ತರಬೇತಿಯನ್ನು ನೀಡಲಾಗಿದೆ.
- ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಪ್ರಚಾರಾಂದೋಲನಕ್ಕಾಗಿ ಬ್ರೌಚರ್, ಕಿರುವೀಡಿಯೋ ಗಳನ್ನು ಸಿದ್ಧಪಡಿಸಲಾಗಿದೆ. ಬ್ರೌಚರ್‌ಗಳನ್ನು ಶಾಲೆಗೆ ಒಂದರಂತೆ ನೀಡಲಾಗಿದೆ. ಶಿಕ್ಷಕರ ಆಯ್ಕೆ, ಮಾಡ್ಯೂಲ್‌ಗಳ ಆಯ್ಕೆ, ಮಾಹಿತಿ ವಿನಿಮಯ ಇತ್ಯಾದಿ ಉದ್ದೇಶಗಳಿಗೆ ಪೂರಕವಾಗಿ TTMS ವೆಬ್‌ಸೈಟ್ ತೆರೆಯಲಾಗಿದೆ.
- **2018–19 ನೇ ಸಾಲಿಗೆ** 70,000 ಶಿಕ್ಷಕರಿಗೆ ಗುರುಚೇತನ ತರಬೇತಿ ನೀಡಲು ಉದ್ದೇಶಿಸಲಾಗಿದ್ದು ಈ ಸಂಬಂಧ 07 ವಿಷಯಗಳಿಗೆ ಒಟ್ಟು 14 ಮಾಡ್ಯೂಲ್‌ಗಳನ್ನು ಸಿದ್ಧಪಡಿಸಲಾಗುತ್ತಿದೆ. 2018–19ನೇ ಸಾಲಿಗೆ ರೂ.1615.53 ಲಕ್ಷಗಳಿಗೆ ಅಂದಾಜು ಆಯವ್ಯಯವನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. 2017–18ನೇ ಸಾಲಿನಲ್ಲಿ ರಚಿಸಲಾದ 28 ಮಾಡ್ಯೂಲ್‌ಗಳನ್ನು ಪರಿಷ್ಕರಿಸುವುದು ಮತ್ತು ಮರಾಠಿ ಮತ್ತು ಉರ್ದು ಭಾಷೆಗೆ ಭಾಷಾಂತರಿಸಿ ತರಬೇತಿ ನೀಡಲು ಯೋಜಿಸಲಾಗಿದೆ.

## ಸವಾಲುಗಳು ಮತ್ತು ಸಾಧ್ಯತೆಗಳು

ಹಲವು ಕನಸುಗಳೊಡನೆ ಇಲಾಖೆ ಪ್ರವೇಶಿಸಿದ್ದೇವೆ. ಶಾಲೆಗೆ ತೆರಳಿದಾಗ ಈ ಕನಸುಗಳು ಹೆಚ್ಚಾಗಿ ಉಳಿಯದೇ ವಾಸ್ತವಿಕತೆ ನಮ್ಮ ಕನಸುಗಳನ್ನು ಚೂರು ಮಾಡುವ ಸಂಭವ ಹೆಚ್ಚು. ಕಲಿಸಲು ತೆರಳುವ ನಮಗೆ, ವಾಸ್ತವಿಕತೆಗಳು ಪ್ರತಿಗಾಮಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲೆಯೇ ಇದೆ. ನಮ್ಮೊಳಗಿನ ಕರ್ತತ್ವ ಶಕ್ತಿ ಜಾಗೃತಗೊಳ್ಳಬೇಕಿದೆ. ಯಾವ ಸಾಧ್ಯತೆಯೂ ಸವಾಲಿನಿಂದ ಹೊರತಲ್ಲ. ಆದರೆ ಸವಾಲನ್ನು ಸಾಧ್ಯತೆಯಾಗಿ ಪರಿವರ್ತಿಸುವ ಕಾರ್ಯ ಜಾಂಬವಂತನಿಂದ ಪ್ರೇರಿತವಾಗಿ ಹನುಮಂತನಿಂದ ಕೈಗೂಡಿತು. ರಾಮಾಯಣದಲ್ಲಿ ಜಾಂಬವಂತನು ಹನುಮಂತನ ಶಕ್ತಿಯನ್ನು ಜ್ಞಾಪಿಸಿದ. ಅದರಿಂದ ಹನುಮಂತ ಲಂಕೆಗೆ ಹಾರಲು ಸಾಧ್ಯವಾಯಿತು. ಆದರೆ ಇಲಾಖೆಗೆ ಹೊಸದಾಗಿ ಬಂದ ನಮಗೆ ನಾವೇ ಜಾಂಬವಂತರು ಮತ್ತು ಹನುಮಂತರು. ನಮ್ಮ ಶಕ್ತಿಯು ವಾಸ್ತವದ ಸಮಸ್ಯೆಗಳಲ್ಲಿ ಕೈಲಾಗದವರೆಂದು ಕೂರಿಸದೇ, ಧನಾತ್ಮಕ ಉತ್ಸಾಹದಿಂದ ನಾವೇ ನಮ್ಮ ಶಕ್ತಿಯನ್ನು ಜ್ಞಾಪಿಸಿಕೊಳ್ಳಬೇಕು. ನಾವೇ ಸೀಮೋಲ್ಲಂಘನ ಮಾಡಬೇಕು.

ಯಾವ ಸಾಧ್ಯತೆಯೂ ಸವಾಲಿನಿಂದ ಹೊರತಲ್ಲ. ಸಾಧ್ಯತೆಗೆ ಸವಾಲಿನದ್ದೇ ದಾರಿ. ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ, ಅದನ್ನು ಸಾಧತೆಗೆ ಪರಿವರ್ತಿಸಿಕೊಳ್ಳಲು ಅದಕ್ಕೆ ತಕ್ಕ ಯೋಜನೆ ನಾವು ಹಾಕಿಕೊಳ್ಳಬೇಕು. ಆ ಕ್ರಿಯಾ ಯೋಜನೆ ನಮಗೆ ಸಾಕಷ್ಟು ಪರಿಹಾರ ನೀಡಬಹುದು. ಸಮಸ್ಯೆಗಳು ಹಲವು ಇದ್ದರೆ ಸವಾಲುಗಳೂ ಹಲವಾರಿವೆ ಎಂದರ್ಥ. ಆಗ ಸವಾಲುಗಳನ್ನು ಆದ್ಯತೀಕರಿಸಿಕೊಂಡು ಒಂದೊಂದಾಗಿ ಪರಿಹರಿಸುತ್ತಾ ನಮ್ಮ ಸಾಧನೆಯಕಡೆಗೆ ಸಾಗಬೇಕು.

ನಮ್ಮ ಮುಂದೆ ಹಲವು ಸಮಸ್ಯೆಗಳಿವೆ. ಆ ಸಮಸ್ಯೆಗಳನ್ನು ಸವಾಲಾಗಿ ಪರಿವರ್ತಿಸುವ ಪ್ರಯತ್ನ ನಾವು ಮಾಡುವ. ಈ ಕೆಳಗೆ ಉದಾಹರಣೆಯಾಗಿ ಅವುಗಳನ್ನು ವರ್ಗೀಕರಿಸಲಾಗಿದೆ. (ಇವೇ ಸವಾಲುಗಳೂ ಅಂತಿಮವಲ್ಲ. ತಮ್ಮ ಶಾಲಾ ಸನ್ನಿವೇಷಕ್ಕೆ ತಕ್ಕಂತೆ ಅವು ಬದಲಾಗಬಹುದು. ವರ್ಗೀಕರಣದ ಸ್ವರೂಪವೂ ಬದಲಾಗಬಹುದು) ಇಲ್ಲಿ ಉದಾಹರಣಾತ್ಮಕವಾಗಿ ಖಾಸಗೀ, ವೈಯಕ್ತಿಕ, ಶೈಕ್ಷಣಿಕ, ಆಡಳಿತಾತ್ಮಕ ಎಂಬ ನಾಲ್ಕು ಆಯಾಮಗಳಲ್ಲಷ್ಟೇ ಸವಾಲುಗಳನ್ನು ವರ್ಗೀಕರಿಸಲಾಗಿದೆ. ಇವುಗಳನ್ನು ನೀವು ನಿಮಗೆ ವೈಯಕ್ತೀಕರಿಸಿಕೊಳ್ಳಿ. ನಂತರ ಆದ್ಯತೀಕರಿಸಿ, ಅವುಗಳಿಗೆ ಪರಹಾರ ಕಾರ್ಯತಂತ್ರ ಸಾಧ್ಯತೆಗಳನ್ನು ಗುಂಪಿನಲ್ಲಿ ಚರ್ಚಿಸಿ. ಹೇಗೆ ಸಾಧ್ಯವಾಗಿಸಿಕೊಳ್ಳಬಹುದು ಎಂಬುದನ್ನು ದಾಖಲಿಸಿ. ಇದಕ್ಕೆ ರೂಪಿಸಿಕೊಂಡ ಕಾರ್ಯತಂತ್ರಗಳನ್ನು ಹಂಚಿಕೊಳ್ಳಿ.

## ಸವಾಲುಗಳು ಮತ್ತು ಸಾಧ್ಯತೆಗಳು

| ಕ್ರ.ಸಂ | ಸವಾಲುಗಳು | ಸಾಧ್ಯತೆಗಳು | ಕಾರ್ಯತಂತ್ರಗಳು |
|---|---|---|---|
| 1 | **ಖಾಸಗೀ ಆಯಾಮ**<br>• ನನ್ನ ಶಾಲೆ ಅತೀ ದೂರ<br>• ನಮ್ಮ ಮನೆಯಲ್ಲಿ ಸಮಸ್ಯೆಗಳಿವೆ<br>• ನನಗೆ ಪುಟ್ಟ ಮಗುವಿದೆ<br>• ಶಾಲಾ ವಾತಾವರಣ ನನಗೆ ಒಗ್ಗಿತ್ತಿಲ್ಲ<br>• ಮೇಲಾಧಿಕಾರಿಗಳು ಬಂದಾಗ ಭಯವಾಗುತ್ತದೆ. | | |
| 2 | **ವೈಯಕ್ತಿಕ ಆಯಾಮ**<br>• PTR/<br>• ವಿಷಯವಾರು ಶಿಕ್ಷಕರಿಲ್ಲ | | |

| | | | |
|---|---|---|---|
| | • ಆಂಗ್ಲಭಾಷಾ ಶಿಕ್ಷಕರಿಲ್ಲ | | |
| 01 | ಆಡಳಿತಾತ್ಮಕ<br>• ಕೊಠಡಿ ಕೊರತೆ<br>• ಪೀಠೋಪಕರಣ ಕೊರತೆ<br>• ಮೈದಾನದ ಕೊರತೆ<br>• ಸುರಕ್ಷಣಾ ಕ್ರಮಗಳಲ್ಲಿದಿರುವುದು<br>ಉದಾ: ಶಾಲೆ ಪಕ್ಕವೇ ಹೆದ್ದಾರಿ ಇರುವುದು<br>• ಪೋಷಕರ ಸಹಬಾಗಿತ್ವದ ಕೊರತೆ<br>• SDMCಪುನಾರಚನೆ ಆಗಿಲ್ಲದಿರುವುದು<br>• GP/TP/ZPಗಳು ಶಾಲೆಯ ಬಗ್ಗೆ ಕಾಳಜಿ ವಹಿಸದಿರುವುದು | | |
| 02 | ಶೈಕ್ಷಣಿಕ<br>• ಮಕ್ಕಳ ಗೈರುಹಾಜರಿ<br>• ಗೃಹಕಾರ್ಯ ನಿರ್ವಹಿಸದಿರುವುದು<br>• ಕಲಿಕೆಗೆ ನಿರಾಸಕ್ತಿ<br>• TLMಕೊರತೆ<br>• ಪರಿಹಾರ ಬೋಧನೆಯ ಕೊರತೆ<br>• ಮಾಧ್ಯಮದ ಅಡೆತಡೆ<br>• ಸೌಲಭ್ಯಗಳ ಕೊರತೆ | | |

ಈ ಸವಾಲುಗಳನ್ನಾಧರಿಸಿ ಕಾರ್ಯತಂತ್ರಗಳನ್ನು ಹೇಗೂ ರೂಪಿಸಿಕೊಂಡಿರುತ್ತೇವೆ. ಕಾರ್ಯತಂತ್ರಗಳ ಅನುಷ್ಠಾನಕ್ಕೆ ಈ ಕೆಳಗಿನಂತೆ ಕ್ರಿಯಾ ಯೋಜನೆ ರೂಪಿಸುವ.

## ಕ್ರಿಯಾ ಯೋಜನೆ ನಮೂನೆ

ಸ್ನೇಹಿತರೇ ಇಲಾಖೆಯನ್ನು ಇನ್ನೂ ಮೂರು ದಶಕ ನಡೆಸಿಕೊಂಡು ಹೋಗುವ ಆಶಾಕಿರಣ ನೀವಾಗಿದ್ದೀರಿ. ನಿಮ್ಮ ಮುಂದೆ ಇರುವ ಸವಾಲುಗಳು ಹಲವು. ಆದರೆ ನೀವು ಸಮಸ್ಯೆಯ ಭಾಗವಾಗದೇ ಪರಿಹಾರ ಭಾಗವಾಗಿರುತ್ತೀರಿ ಎಂಬ ಬಲವಾದ ನಂಬಿಕೆ ನಮ್ಮದು. ಈಗಾಗಲೇ ಚರ್ಚಿಸಿದಂತೆ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿದಾಗ ನಮಗೆ ಪರಿಹಾರಗಳು ಹೊಳೆಯುತ್ತವೆ. ಪರಿಹಾರಗಳನ್ನು ಅನುಷ್ಠಾನಗೊಳಿಸಲು ತೊಡಗಿದಾಗ ಕಾರ್ಯತಂತ್ರಗಳು ಗೋಚರಿಸುತ್ತವೆ. ಈ ಕಾರ್ಯ ತಂತ್ರಗಳನ್ನೊಳಗೊಂಡ ಕ್ರಿಯಾ ಯೋಜನೆ ನಾವು ರೂಪಿಸಬೇಕಿದೆ. ನಾವೆಲ್ಲಾ ನಮ್ಮನ್ನು ತೊಡಗಿಸಿಕೊಂಡು ನಾವೀನ್ಯಯುತವಾಗಿ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಸುವ ವಿವರ ಈ ಕೆಳಗೆ ತಮ್ಮೊಂದಿಗೆ ಚರ್ಚಿಸಿದೆ.

ನಮ್ಮ ತರಬೇತಿ ಕ್ರಿಯೆಗೆ ತಮ್ಮ ಪ್ರತಿಕ್ರಿಯೆ ಬಯಸುತ್ತೇವೆ. ಈ ಪ್ರತಿಕ್ರಿಯೆಯು ಎರಡು ಸ್ವರೂಪಗಳನ್ನು ಹೊಂದಿರುತ್ತದೆ.

- ಅಲ್ಪಕಾಲಾವಧಿಯ ಪ್ರಕಲ್ಪ (ಪ್ರಾಜೆಕ್ಟ್)
- ವಾರ್ಷಿಕ ಕ್ರಿಯಾ ಯೋಜನೆ

ಇವುಗಳನ್ನು ಒಂದೊಂದಾಗಿ ತಿಳಿದುಕೊಂಡು ಅನುಷ್ಠಾನಗೊಳಿಸುವ.

**1. ಕಡಿಮೆ ಅವಧಿಯ ಅಲ್ಪಕಾಲಾವಧಿಯ ಪ್ರಕಲ್ಪ:** ಶಿಬಿರಾರ್ಥಿಗಳಾದ ತಾವು ತರಬೇತಿಯನ್ನು ಹೊಂದಿ ಶಾಲೆಗೆ ತೆರಳಿದ ಮೇಲೆ, ಮೇಲಿನ ಸವಾಲುಗಳಲ್ಲಿ ಆದ್ಯತೀಕರಣ ಮಾಡಿ, ಅದಕ್ಕೆ ಕಾರ್ಯ ತಂತ್ರ ರೂಪಿಸಿಕೊಳ್ಳುವುದು. ಈ ಕಾರ್ಯತಂತ್ರವನ್ನು ಅಲ್ಪ ಕಾಲಾವಧಿಯಲ್ಲಿ ಅರ್ಥಾತ್ ಎರಡು ತಿಂಗಳಲ್ಲಿ ಅನುಷ್ಠಾನ ಮಾಡುವುದು. ಸದರಿ ಪ್ರಗತಿ ವರದಿಯನ್ನು ಆಯಾ ಡಯಟ್‌ಗಳಿಗೆ ಆನ್‌ಲೈನ್ ಅಲ್ಲಿ ಸಲ್ಲಿಸಿರಿ. ಡಯಟ್‌ನ ತರಬೇತಿ ನೋಡಲ್ ಅಧಿಕಾರಿಯವರು, ಪ್ರಾಚಾರ್ಯರು ಸದರಿ ಪ್ರಕಲ್ಪಗಳ ಮಂಡನೆಗೆ (ಪ್ರೆಸೆಂಟೇಶನ್‌ಗಾಗಿ) ಮೂರು ತಿಂಗಳೊಳಗಾಗಿ ವೇದಿಕೆ ಸಿದ್ದಪಡಿಸಿಕೊಳ್ಳುತ್ತಾರೆ. (ಸದರಿ ವೇದಿಕೆಯಲ್ಲಿ ತರಬೇತಿ ಪಡೆದ ಶಿಬಿರಾರ್ಥಿಗಳು ವಿಷಯ ಮಂಡನೆ ಮಾಡಬೇಕಾಗುತ್ತದೆ. ಡಯಟ್ ಸಂಸ್ಥೆಯು ಎಲ್ಲಾ ಶಿಬಿರಾರ್ಥಿಗಳ ಪ್ರಾಜೆಕ್ಟ್‌ಗಳನ್ನು ಕ್ರೋಢೀಕರಿಸಿ ನಾವೀನ್ಯ ಆಚರಣೆಗಳನ್ನು ಹಾರ್ಡ್ ಮತ್ತು ಸಾಫ್ಟ್ ರೂಪದಲ್ಲಿ ರಾಜ್ಯ ಕಛೇರಿಗೆ (ಡಿ.ಎಸ್.ಇ.ಆರ್.ಟಿ) ಹಂಚಿಕೊಳ್ಳುವುದು)

**2. ವಾರ್ಷಿಕ ಕ್ರಿಯಾ ಯೋಜನೆ:** ಶಿಬಿರಾರ್ಥಿಗಳಾದ ತರಬೇತಿ ಪಡೆದ ನಂತರ ತಮಗಿರುವ ಸವಾಲುಗಳನ್ನು ಆದ್ಯತೀಕರಣ ಮಾಡಿ, ಅದಕ್ಕೆ ವಾರ್ಷಿಕವಾಗಿ ಕಾರ್ಯತಂತ್ರ ರೂಪಿಸಿಕೊಳ್ಳುವುದು. ಈ ಪ್ರತಿಕ್ರಿಯೆಗಳು ನಾವೀನ್ಯಯುತವಾಗಿದ್ದು, ಧನಾತ್ಮಕವಾಗಿದ್ದರೆ ಮೂಲ ಕ್ರಿಯೆಗೆ

ಮತ್ತಷ್ಟು ಪ್ರೇರಣೆ, ಮತ್ತಷ್ಟು ಪುಷ್ಠಿ ಸಿಗುತ್ತದೆ. ಆದ್ದರಿಂದ ಕ್ರಿಯೆಗೆ ಪ್ರತಿಕ್ರಿಯೆ ಧನಾತ್ಮಕವಾಗಿಯೇ ಹೊರಹೊಮ್ಮಬೇಕಾದರೆ ಅದಕ್ಕೊಂದು ಯೋಜಿತ ರೂಪ ಬೇಕು. ನಿರ್ದಿಷ್ಟತೆ, ಕಾಲಮಿತಿ, ಗುರಿ–ಉದ್ದೇಶಗಳನ್ನೊಳಗೊಂಡ ಯೋಜನೆ ಅದಾಗಿರಬೇಕು. ಅಂತಹುದ್ದೇ ಕ್ರಿಯಾಯೋಜನೆ ಮಾಡುವ ಸದಾವಕಾಶವನ್ನು ನಾವೀಗ ನಿಮಗೆ ನೀಡುತ್ತಿದ್ದೇವೆ. ಇಲ್ಲಿ ನೀವು ತರಬೇತಿಯ ಇಷ್ಟೂ ದಿನಗಳಲ್ಲಿ ಕಟ್ಟಿಕೊಂಡ ಅನುಭವಗಳ ಆಧಾರದ ಮೇಲೆ, ಕಂಡ ಕನಸುಗಳ ತಳಹದಿಯ ಮೇಲೆ ನಿಮ್ಮದೇ ಆದ ಒಂದು ಕ್ರಿಯಾಯೋಜನೆ ರೂಪಿಸಬೇಕಾಗಿದೆ. ಇದಕ್ಕಾಗಿಯೇ ಮುಂದಿನ ಪುಟಗಳು ಮೀಸಲಿವೆ. ಇಲ್ಲಿ ಒಂದು ಚೌಕಟ್ಟು ನೀಡಿದ್ದೇವೆ. ಈ ಚೌಕಟ್ಟೇ ಅಂತಿಮವಲ್ಲ. ಇದರ ಪರಿಧಿ ವಿಸ್ತರಿಸಿ, ಈ ಚೌಕಟ್ಟನ್ನು ಶ್ರೀಮಂತಗೊಳಿಸುವ ಸರದಿ ನಿಮ್ಮದು.
ಶಿಕ್ಷಕರ ಹೆಸರು ಮತ್ತು ವಿಳಾಸ(ದೂರವಾಣಿ ಸಂಖ್ಯೆಯೊಂದಿಗೆ):

**ಶಾಲೆಯ ಒಂದು ದಿನ**

| ಕ್ರಸಂ | ಚಟುವಟಿಕೆಗಳು/ಕಾರ್ಯಕ್ರಮಗಳು | ತಿಂಗಳು | ತರಗತಿ | ನಿರ್ವಹಿಸಿದ ಬಗ್ಗೆ ಸಂಕ್ಷಿಪ್ತ ವಿವರಣೆ | ಶಿಕ್ಷಕರ ಸಹಿ | HM/ಭೇಟಿ ನೀಡಿದ ಅಧಿಕಾರಿಗಳ ಸಹಿ |
|---|---|---|---|---|---|---|
| 1 | ಪ್ರಾರ್ಥನೆ – ಪ್ರತಿದಿನ ಕನಿಷ್ಟ ಇಬ್ಬರು ವಿದ್ಯಾರ್ಥಿಗಳು ಆಂಗ್ಲಭಾಷಾ ದಿನಪತ್ರಿಕೆಯ ಮುಖ್ಯಾಂಶಗಳನ್ನು ಓದುವುದು | ಪ್ರತಿದಿನ | 5, 6, 7 | | | |
| 2 | ರಸಪ್ರಶ್ನೆ ಕಾರ್ಯಕ್ರಮ – ಪ್ರತಿ ಶುಕ್ರವಾರ ಅಯಾಯ ವಾರಕ್ಕೆ ಸಂಬಂಧಿಸಿದ ಪಾಠಗಳ ಆಧಾರಿತವಾಗಿ ಎಲ್ಲಾ ವಿಷಯಗಳಲ್ಲಿ ರಸಪ್ರಶ್ನೆ ಕಾರ್ಯಕ್ರಮವನ್ನು ಕೊನೆಯ ಅವಧಿ ನಡೆಸುವುದು | | | | | |
| 3 | ಗೈರುಹಾಜರಿ – ಪ್ರಾರ್ಥನೆ ಸಮಯದ ನಂತರ ಆಯಾಯ ಗ್ರಾಮದ ಮಕ್ಕಳು ಹಿಂದಿನ ದಿನ ಗೈರುಹಾಜರಾದ ಮಕ್ಕಳ ಬಗ್ಗೆ ಸಕಾರಣ ನೀಡುವುದು | | | | | |
| 4 | ಕಲಿಕಾ ಸಾಮಗ್ರಿ ತಯಾರಿಕೆ – ತರಗತಿಯಲ್ಲಿ ಅನುಕೂಲಿಸುವ ಸಂಧರ್ಭದಲ್ಲಿ ಅಗತ್ಯ ಸಾಮಗ್ರಿಗಳನ್ನು ತಯಾರಿಸಿಕೊಂಡು ಶಾಲೆಯಲ್ಲಿ ಸಂರಕ್ಷಿಸಿ ಅಗತ್ಯವಿದ್ದಾಗ ಬಳಕೆ ಮಾಡಿಕೊಳ್ಳುವುದು | | | | | |
| 5 | Bench leader– ಪ್ರತಿ ದಿನದ ಗೃಹಪಾಠ ಪರಿಶೀಲನೆ ಶಿಕ್ಷಕರೊಂದಿಗೆ ವರದಿ ಹಂಚಿಕೆ ಶಿಕ್ಷಕರು ಸಲಹೆ ಸೂಚನೆ ನೀಡುವುದು | | | | | |
| 6 | ಗ್ರಂಥಾಲಯ ಬಳಕೆ – ಪಠ್ಯ ಪೂರಕ ಪುಸ್ತಕಗಳ ಪಟ್ಟಿ ಮಾಡುವುದು ಶಿಕ್ಷಕರು ಓದುವುದು. ಅದರ ಮುಖ್ಯಾಂಶಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಹಂಚಿಕೊಳ್ಳುವುದು | | | | | |

| | | | | | | |
|---|---|---|---|---|---|---|
| 7 | ಸಮುದಾಯದ ಸಹಭಾಗಿತ್ವ – ಹಿರಿಯ ವಿದ್ಯಾರ್ಥಿಗಳ ಪಟ್ಟಿ ತಯಾರಿಸುವುದು ಶನಿವಾರ/ಅವಧಿ ಹಿರಿಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದು | | | | | |
| 8 | ತಂತ್ರಜ್ಞಾನ ಬಳಕೆ – ಸ್ಥಳೀಯ ದಾನಿಗಳು/NGO/ರೋಟರಿ/ಗ್ರಾ.ಪಂ ಅನುದಾನ ಬಳಸಿಕೊಂಡು ಶಾಲೆಯಲ್ಲಿ ಕಂಪ್ಯೂಟರ್/TV/Edusatಸ್ಥಾಪಿಸಿ ಕಲಿಕಾ ಪ್ರಕ್ರಿಯೆಗೆ ಸಂಯೋಜಿಸಿಕೊಳ್ಳುವುದು | | | | | |
| 9 | ಆಂಗ್ಲಭಾಷಾ ಕಲಿಕೆ – ಕನಿಷ್ಟ ವಾರಕ್ಕೆ 2 ದಿನ ಶಾಲೆಯ ದಿನದ ಪೂರ್ಣ ಚಟುಚಟಿಕೆಗಳನ್ನು ಮಕ್ಕಳೊಂದಿಗೆ ಆಂಗ್ಲಭಾಷೆಯಲ್ಲಿ ವ್ಯವಹರಿಸುವುದು | | | | | |
| 10 | ದಾಖಲೆಗಳ ನಿರ್ವಹಣೆ – ಶಾಲೆಯ ಶೈಕ್ಷಣಿಕ ದಾಖಲೆಗಳನ್ನು ಗಣಕೀಕರಣ ಮಾಡಿಕೊಂಡು ಕಾಲಕಾಲಕ್ಕೆ ಇಂದೀಕರಿಸಿಕೊಳ್ಳುವುದು<br>ಉದಾ:– Notes of plan Individual mark reg progress card | | | | | |
| 11 | ನಾನೂ ಕಲಿಸಬಲ್ಲೆ – ಮಂದಗತಿಯ ಕಲಿಕಾ ವಿದ್ಯಾರ್ಥಿಗಳಿಗೆ ದಿನಕ್ಕೆ 1 ಗಂಟೆ ಶಾಲಾ ಅವಧಿನಂತರ ಮೀಸಲಿಟ್ಟು ಪರ್ಯಾಯ ವಿಧಾನಗಳ ಮುಖಾಂತರ ಕಲಿಕೆಗೆ ಅನುಕೂಲಿಸುವುದು | | | | | |
| 12 | ಪೋಷಕರ ಮನೆ ಭೇಟಿ – ವಾರಕ್ಕೆ 1 ಹಳ್ಳಿ ಭೇಟಿ ಮಕ್ಕಳ ಪೋಷಕರೊಂದಿಗೆ ಸಮಾಲೋಚನೆ ನಡೆಸುವುದು. | | | | | |

## ಯಶೋಗಾಥೆಗಳು

**ದಿನ 10 ಕ್ರಿಯಾಯೋಜನೆ (ಕೃಷ್ಣಮೂರ್ತಿ – ವೇದಮೂರ್ತಿ)**

- **ನಾನು ಮತ್ತು ನನ್ನ ಮಾದರಿ ಶಾಲೆ**
- **ಅನುಕೂಲಿಸುವಿಕೆಯಲ್ಲಿ ನಾವೀನ್ಯತೆ**

# ಚಟುವಟಿಕೆಗಳು

## ಚಟುವಟಿಕೆ ಹಾಳೆ– (ಶಾಲಾ ಅಸೆಂಬ್ಲಿ–1)

ಬರೆಹ: ಮೊದಲಬಾರಿ / ಎರಡನೇ ಬಾರಿ ಹೆಸರು:

| ಕ್ರಮ ಸಂಖ್ಯೆ | ಅಂಶ | ವಿವರ |
|---|---|---|
| 01 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯು ಶಾಲಾ ಚಟು ವಟಿಕೆಗಳಿಗೆ ಅಗತ್ಯವೆ? | |
| 02 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯ ಬಗ್ಗೆ ನಿಮ್ಮ ಅಭಿಪ್ರಾಯವೇನು? | |
| 03 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯ ಉದ್ದೇಶಗಳೇನು? | |

| | | |
|---|---|---|
| 04 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯು ಏಕೆ ಮಹತ್ವದ್ದು ಆಗಿದೆ? | |
| 05 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯು ಪ್ರತಿದಿನ ನಡೆಯ ಬೇಕೆ? | |
| 06 | ಇಡಿ ಶಾಲೆಯು ಸಮಗ್ರವಾಗಿ ಇದರಲ್ಲಿ ಪಾಲ್ಗೊಳ್ಳ ಬೇಕೆ? ಏಕೆ? | |
| 07 | ಬೇರೆ ಬೇರೆ ರೀತಿಯ ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯು ಅಭ್ಯಾಸದಲ್ಲಿ ಇದೆಯೇ? ಅದರ ಶೀರ್ಷಿಕೆಗಳನ್ನು ಬರೆಯಿರಿ. | |

| | | |
|---|---|---|
| 08 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯಲ್ಲಿ ನಾವು ಕೈಗೊಳ್ಳ ಬಹುದಾದ ವಿವಿಧ ಚಟುವಟಿಕೆಗಳಾವವು? | |
| 09 | ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯನ್ನು ಸಂಘಟಿಸುವಲ್ಲಿ ಎದುರಾಗ ಬಹುದಾದ ಸವಾಲುಗಳಾವವು? ವಹಿಸಬೇಕಾದ ಎಚ್ಚರಿಕೆಗಳಾವವು? | |
| 10 | ನಾವು ನಮ್ಮ ಶಾಲಾ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯ ಪರಿಣಾಮ ಕಾರತ್ವವನ್ನು ಹೇಗೆ ಅಳೆಯಬಹುದು? | |

| | | |
|---|---|---|
| | | |
| 11 | ನೀವು ನಿಮ್ಮ ಶಾಲೆಯಲ್ಲಿ ಅಸೆಂಬ್ಲಿ (ಪ್ರಾರ್ಥನಾ ಅವಧಿ)ಯನ್ನು ಸಂಗಟಿಸುವಾಗ ಕೈಗೊಳ್ಳುವ ಚಟುವಟಿಕೆಗಳಾವವು? ಏಕೆ? | |
| 12 | ನೀವು ಭಾವಿಸುವಂತೆ ಅಸೆಂಬ್ಲಿಯ ಅತಿ ಮಹತ್ವದ ಘಟ್ಟ ಯಾವುದು? ಏಕೆ | |

| | | |
|---|---|---|
| | | |

# ಚಟುವಟಿಕೆ ಹಾಳೆ– (ಶಾಲಾ ಅಸೆಂಬ್ಲಿ–2)

ಹೆಸರು:

ಈ ಪಟ್ಟಿಯಲ್ಲಿ ನೀಡಿರುವ ಶೀರ್ಷಿಕೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು. ಅದಕ್ಕೆ ಸಂಬಂಧಿಸಿದಂತೆ ವಿನ್ಯಾಸವನ್ನು ಪೂರ್ಣಗೊಳಿಸಿ. ಆಯ್ಕೆ: ಪೂರ್ವ ಪ್ರಾಥಮಿಕ ಅಸೆಂಬ್ಲಿ/ ಪ್ರಾಥಮಿಕ ಅಸೆಂಬ್ಲಿ/ ಸೆಕೆಂಡರಿ ಅಸೆಂಬ್ಲಿ / ಪೂರ್ಣ ಶಾಲಾ ಅಸೆಂಬ್ಲಿ. ನಿಮ್ಮದೇ ವಿನ್ಯಾಸದ ಮುಕ್ತ ಅಸೆಂಬ್ಲಿ. ಶಿಕ್ಷಕರ ಅಸೆಂಬ್ಲಿ/ ವಿದ್ಯಾರ್ಥಿ ಗುಂಪಿನ (ಗ್ರೂಪ್ ಅಸೆಂಬ್ಲಿ).

| ಕ್ರ.ಸಂ | ಅಂಶಗಳು | ವಿವರ |
|---|---|---|
| 01 | ಉದ್ದೇಶಗಳು | |
| 02 | ಅಸೆಂಬ್ಲಿಯ ಸ್ವರೂಪ | |
| 03 | ಅಸೆಂಬ್ಲಿಗೆ ನಿಗದಿಪಡಿಸುವ ಸಮಯ (ನಿಮಿಷಗಳಲ್ಲಿ) | |

| | | |
|---|---|---|
| 04 | ಅಸೆಂಬ್ಲಿಯ ಪ್ರಾರಂಭದಿಂದ ಅಂತ್ಯದ ವರಗಿನ ಚಟುವಟಿಕೆಗಳ ಪಟ್ಟಿ ( ಸಮಯವಾರು ಹಂಚಿಕೆಯೊಂದಿಗೆ) | |
| 05 | ಈ ಅಸೆಂಬ್ಲಿಯನ್ನು ತಾವು ಸಂಘಟಿಸಲು ತೆಗೆದುಕೊಳ್ಳುವ ಎಚ್ಚರಿಕೆಗಳು. | |
| 06 | ನಿಮ್ಮ ಅವಲೋಕನದಂತೆ ನೀವು ವಿನ್ಯಾಸಗೊಳಿಸಿದ ಅಸೆಂಬ್ಲಿಯ ವಿಶೇಷತೆ | |

**ಸಾರ್ವಜನಿಕ ಶಾಲೆಗಳು ಏಕೆ ಮುಖ್ಯ? ಸಾರ್ವಜನಿಕ ಶಾಲಾ ಶಿಕ್ಷಣದ ಪ್ರಮುಖ ಉದ್ದೇಶಗಳಾವುವು? ಸಾರ್ವಜನಿಕ ಶಾಲಾ ಶಿಕ್ಷಣದ ಪ್ರಮುಖ ಉದ್ದೇಶಗಳನ್ನು ಸಾಧಿಸಲಾಗಿದೆಯೇ?**

ಪ್ರತಿಫಲನ ಪ್ರಶ್ನೆಗಳು

| ಪ್ರಶ್ನೆಗಳು | ಉತ್ತರ/ಸಮರ್ಥನೆಗಳು |
|---|---|
| 1. ಸಾರ್ವಜನಿಕ ಶಾಲೆಗಳು ಏಕೆ ಮುಖ್ಯ ಎಂಬುದನ್ನು ಐದು ಪ್ರಮುಖ ಅಂಶಗಳಿಂದ ಸಮರ್ಥಿಸಿ. | |
| 2. ಸಾರ್ವಜನಿಕ ಶಾಲಾ ಶಿಕ್ಷಣ ಪ್ರಮುಖ ಉದ್ದೇಶಗಳು ಯಾವುವು? | |
| 3. ಸಾರ್ವಜನಿಕ ಶಾಲಾ ಶಿಕ್ಷಣದ ಉದ್ದೇಶಗಳನ್ನು ಸಾಧಿಸಲಾಗಿದೆಯೆ? ನಿಮ್ಮ ಉತ್ತರವನ್ನು ಸೂಕ್ತ ಕಾರಣಗಳಿಂದ ಸಮರ್ಥಿಸಿ. | |
| 4. ಸಾರ್ವಜನಿಕ ಶಾಲೆಗಳನ್ನು ಬಲವರ್ಧನೆಗೊಳಿಸುವಲ್ಲಿ ಹೊಸದಾಗಿ ಸೇರ್ಪಡೆಗೊಂಡಿರುವ ನೀವು ಯಾವ ಕ್ರಮಗಳನ್ನು ಕೈಗೊಳ್ಳುವಿರಿ. (ನಿಮ್ಮ ಪಾತ್ರವನ್ನು ಹೇಗೆ ನಿಭಾಯಿಸುವಿರಿ ಎಂಬುದನ್ನು ಪ್ರಸ್ತುತಪಡಿಸಿ) | |

# ಅನುಬಂಧಗಳು

ಶಾಲಾ ಶಿಕ್ಷಣದ ಕಿರು ಇತಿಹಾಸ
ಸಂವಿಧಾನದ ಪ್ರಸ್ತಾವನೆ ಹೀಗೊಂದು ಓದು
ಶಿಕ್ಷಣದ ಧ್ಯೇಯೋದ್ದೇಶಗಳು– 1.7
ಕ್ಲಾಸ್ ರೂಮ್ ಟು ಏಮ್ಸ್ ಆಫ್ ಎಜುಕೇಶನ್– ರೋಹಿತ್ ಧನಕರ್
ಬಿಯಾಂಡ್ ಪಾಸ್ ಆಂಡ್ ಫೇಲ್– ರೋಹಿತ್ತರಗತಿ ಸಾಹಿತ್ಯ: ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಪುಸ್ತಕ
ಬಹುಮಾನ ಮತ್ತು ಶಿಕ್ಷೆ: ಕಮಲಾ ಮುಕುಂದ
ರಚನಾ ತತ್ವ: (ಐದು ಇ)

ಅನುಬಂಧಗಳು